В. Ульянов (Ленин)

NAVAKARNATAKA
EMBASSY CENTRE
11, CRESCENT ROAD
BANGALORE - 560 001
Rs 30.


В. Ульянов (Ленин)

ಎಲ್ಲ ದೇಶಗಳ ಶ್ರಮಜೀವಿಗಳೇ, ಒಂದಾಗಿರಿ!

# ವಿ. ಐ. ಲೆನಿನ್

# ಆಯ್ದ ಕೃತಿಗಳು

## ನಾಲ್ಕು ಸಂಪುಟಗಳಲ್ಲಿ

## ಸಂಪುಟ ಎರಡು

## (1916-1917)

ಪ್ರಗತಿ ಪ್ರಕಾಶನ
ಸೋವಿಯತ್ ಒಕ್ಕೂಟ, ಮಾಸ್ಕೋ

ಅಧಿಕೃತ ವಿತರಕರು
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್
ಬೆಂಗಳೂರು

ಅನುವಾದ: ಕೆ. ಎಲ್. ಗೋಪಾಲಕೃಷ್ಣರಾವ್

В. И. ЛЕНИН
Избранные произведения в 4-х томах
Том 2 (1916-1917)
*на языке каннада*

Lenin, V. I.
Selected Works in 4 volumes
Volume 2 (1916-1917)
*In Kannada*

ವಿ. ಐ. ಲೆನಿನರ ಆಯ್ದ ಕೃತಿಗಳ ನಾಲ್ಕು ಸಂಪುಟಗಳಲ್ಲಿನ ಈ ಎರಡನೆಯ ಸಂಪುಟದ ಪ್ರಸಕ್ತ ಅನುವಾದವನ್ನು ಸೋವಿಯತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಆಶ್ರಯದಲ್ಲಿರುವ ಮಾರ್ಕ್ಸ್‌ವಾದ-ಲೆನಿನ್‌ವಾದ ವಿದ್ಯಾಸಂಸ್ಥೆ ಸಿದ್ಧಗೊಳಿಸಿರುವ ವಿ. ಐ. ಲೆನಿನರ ಸಂಕಲಿತ ಕೃತಿಗಳಿಂದ ಮಾಡಲಾಗಿದೆ.

© ಕನ್ನಡ ಅನುವಾದ ಪ್ರಗತಿ ಪ್ರಕಾಶನ 1988

ಸೋವಿಯತ್ ಒಕ್ಕೂಟದಲ್ಲಿ ಮುದ್ರಿತವಾದುದು

Л $\frac{0101020000-665}{014(01)-88}$ 319—88

ISBN 5-01-000833-5 (т. 2)
ISBN 5-01-000831-9

## ವಿಷಯಸೂಚಿ

ಸಾಮ್ರಾಜ್ಯವಾದ – ಬಂಡವಾಳವಾದದ ಅತ್ಯುನ್ನತ ಘಟ್ಟ

ಮುನ್ನುಡಿ . . . . . . . . . . . . . . . . . 9

ಫ್ರೆಂಚ್ ಹಾಗೂ ಜರ್ಮನ್ ಆವೃತ್ತಿಗಳಿಗೆ ಮುನ್ನುಡಿ . . . . 11

I . . . . . . . . . . . . . . . . . 11
II . . . . . . . . . . . . . . . . . 12
III . . . . . . . . . . . . . . . . . 13
IV . . . . . . . . . . . . . . . . . 15
V . . . . . . . . . . . . . . . . . 16

I. ಉತ್ಪಾದನೆಯ ಕೇಂದ್ರೀಕರಣ ಹಾಗೂ ಏಕಸ್ವಾಮ್ಯ ಸಂಸ್ಥೆಗಳು . . . . . . . . . . . . . . . . 19
II. ಬ್ಯಾಂಕುಗಳು ಮತ್ತು ಅವುಗಳ ಹೊಸ ಪಾತ್ರ . . . . . 38
III. ಹಣಕಾಸು ಬಂಡವಾಳ ಹಾಗೂ ಹಣಕಾಸು ಆಲಿಗಾರ್ಕಿ . . . . 59
IV. ಬಂಡವಾಳದ ರಫ್ತು . . . . . . . . . . . . . 79
V. ಬಂಡವಾಳಶಾಹಿ ಸಮುಚ್ಚಯಗಳ ಮಧ್ಯೆ ಜಗತ್ತಿನ ವಿಭಜನೆ . . . . . . . . . . . . . . . . 87
VI. ಬೃಹತ್ ರಾಷ್ಟ್ರಗಳ ಮಧ್ಯೆ ಜಗತ್ತಿನ ವಿಭಜನೆ . . . . . . 98
VII. ಬಂಡವಾಳವಾದದ ಒಂದು ವಿಶೇಷ ಘಟ್ಟವಾಗಿ ಸಾಮ್ರಾಜ್ಯವಾದ . . . . . . . . . . . . . . . . 113
VIII. ಬಂಡವಾಳವಾದಿ ಪದ್ಧತಿಯ ಪರೋಪಜೀವಿ ಸ್ವಭಾವ ಹಾಗೂ ಅದರ ಕ್ಷಯಿಸುವಿಕೆ . . . . . . . . . . 127
IX. ಸಾಮ್ರಾಜ್ಯವಾದದ ಪರಾಮರ್ಶೆ . . . . . . . . . 140
X. ಇತಿಹಾಸದಲ್ಲಿ ಸಾಮ್ರಾಜ್ಯವಾದದ ಸ್ಥಾನ . . . . . . . 158

1*

ರಾಜ್ಯ ಹಾಗೂ ಕ್ರಾಂತಿ
ಮೊದಲನೆಯ ಆವೃತ್ತಿಗೆ ಮುನ್ನುಡಿ . . . . . . . . . 169
ದ್ವಿತೀಯ ಆವೃತ್ತಿಗೆ ಮುನ್ನುಡಿ . . . . . . . . . . . 171
ಅಧ್ಯಾಯ I. ವರ್ಗ ಸಮಾಜ ಹಾಗೂ ರಾಜ್ಯ . . . . . . 172
1. ರಾಜ್ಯ – ವರ್ಗವೈರುಧ್ಯತೆಗಳ ಅಸಾಂಗತದ ಉತ್ಪನ್ನ . . 172
2. ಸಶಸ್ತ್ರ ಜನರ ವಿಶೇಷ ದಳಗಳು, ಸೆರೆಮನೆಗಳು, ಇತ್ಯಾದಿ . . 176
3. ರಾಜ್ಯ – ಮರ್ದಿತ ವರ್ಗದ ಶೋಷಣೆಗೆ ಒಂದು ಸಾಧನ . 180
4. ರಾಜ್ಯವು "ಕ್ಷಯಿಸಿಹೋಗುವುದು" ಮತ್ತು ಬಲೋದ್ಬಂಧ ಕ್ರಾಂತಿ . . . . . . . . . . . . . . 184
ಅಧ್ಯಾಯ II. ರಾಜ್ಯ ಹಾಗೂ ಕ್ರಾಂತಿ. 1848-1851ರ ಅನುಭವ . . . . . . . . . . . . . . . . . 193
1. ಕ್ರಾಂತಿಯ ಪೂರ್ವಕಾಲ . . . . . . . . . . . 193
2. ಕ್ರಾಂತಿಯ ಅನುಭವದ ಪಾಠಗಳು . . . . . . . . 197
3. 1852ರಲ್ಲಿ ಮಾರ್ಕ್ಸ್‌ರವರು ಈ ಪ್ರಶ್ನೆಯನ್ನು ಮುಂದಿಟ್ಟ ರೀತಿ . . . . . . . . . . . . . . 205
ಅಧ್ಯಾಯ III. ರಾಜ್ಯ ಹಾಗೂ ಕ್ರಾಂತಿ. 1871ರ ಪ್ಯಾರಿಸ್ ಕಮ್ಯೂನ್‌ನ ಅನುಭವ. ಮಾರ್ಕ್ಸ್‌ರವರ ವಿಶ್ಲೇಷಣೆ . . . 208
1. ಕಮ್ಯೂನಾರ್ಡ್‌ರ ಯತ್ನದಲ್ಲಿ ವೀರೋಚಿತವಾಗಿದ್ದುದು ಯಾವುದು ? . . . . . . . . . . . . . . 208
2. ಒಡೆದುಹಾಕಿದ ರಾಜ್ಯಯಂತ್ರದ ಸ್ಥಳದಲ್ಲಿ ಯಾವುದನ್ನು ಸ್ಥಾಪಿಸುವುದು ? . . . . . . . . . . . . . 213
3. ಸಂಸದೀಯವಾದದ ರದ್ದತಿ . . . . . . . . . . 219
4. ರಾಷ್ಟ್ರೀಯ ಐಕ್ಯತೆಯ ಸಂಘಟನೆ . . . . . . . . 226
5. ಪರೋಪಜೀವಿಯಾದ ರಾಜ್ಯವನ್ನು ನಾಶಗೊಳಿಸುವುದು . . 230
ಅಧ್ಯಾಯ IV. ಮುಂದುವರಿಕೆ. ಎಂಗೆಲ್ಸ್‌ರಿಂದ ಮತ್ತಷ್ಟು ವಿವರಣೆಗಳು . . . . . . . . . . . . . . . 233
1. "ವಸತಿ ಪ್ರಶ್ನೆ" . . . . . . . . . . . . . 233
2. ಅರಾಜಕತಾವಾದಿಗಳೊಂದಿಗೆ ವಿವಾದ . . . . . . 236
3. ಬೆಬೆಲ್‌ರಿಗೆ ಬರೆದ ಪತ್ರ . . . . . . . . . . 241

4. ಎರ್‌ಫುರ್ತ್ ಕಾರ್ಯಕ್ರಮದ ಕರಡಿನ ಬಗೆಗೆ ಟೀಕೆ . . 245
5. ಮಾರ್ಕ್ಸ್‌ರವರ 'ಫ್ರಾನ್ಸಿನಲ್ಲಿ ಅಂತರ್ಯುದ್ಧ' ಗ್ರಂಥಕ್ಕೆ 1891ರ ಮುನ್ನುಡಿ . . . . . . . . . . . . . 254
6. ಪ್ರಜಾಪ್ರಭುತ್ವವನ್ನು ಜಯಿಸುವುದರ ಕುರಿತು ಎಂಗೆಲ್ಸ್‌ರ ಅಭಿಪ್ರಾಯ . . . . . . . . . . . . . . 261

ಅಧ್ಯಾಯ V. ರಾಜ್ಯವು ಕ್ಷಯಿಸಿಹೋಗುವುದರ ಆರ್ಥಿಕ ಬುನಾದಿ . . . . . . . . . . . . . . . . 264

1. ಮಾರ್ಕ್ಸ್‌ರವರು ಪ್ರಶ್ನೆಯನ್ನು ನಿರೂಪಿಸಿದ ರೀತಿ . . . 265
2. ಬಂಡವಾಳವಾದದಿಂದ ಕಮ್ಯೂನಿಸಂಗೆ ಪರಿವರ್ತನೆ . . 268
3. ಕಮ್ಯೂನಿಸ್ಟ್ ಸಮಾಜದ ಮೊದಲನೆಯ ಮಜಲು . . 274
4. ಕಮ್ಯೂನಿಸ್ಟ್ ಸಮಾಜದ ಉನ್ನತ ಮಜಲು . . . . . 279

ಅಧ್ಯಾಯ VI. ಸಂದರ್ಭಸಾಧಕವಾದಿಗಳಿಂದ ಮಾರ್ಕ್ಸ್ ವಾದದ ಪ್ರಾಕೃತೀಕರಣ . . . . . . . . . . . . . 288

1. ಅರಾಜಕತಾವಾದಿಗಳೊಂದಿಗೆ ಪ್ಲೆಹಾನೊವ್‌ರ ವಿವಾದ . . . 288
2. ಸಂದರ್ಭಸಾಧಕವಾದಿಗಳೊಂದಿಗೆ ಕೌತ್‌ಸ್ಕಿಯವರ ವಿವಾದ . 290
3. ಪಾನ್ನೆಕೂಕ್‌ರೊಂದಿಗೆ ಕೌತ್‌ಸ್ಕಿಯವರ ವಿವಾದ . . . . 299

ಮೊದಲನೆಯ ಆವೃತ್ತಿಗೆ ಬರೆದ ಉಪಸಂಹಾರ . . . . . . . 310
ಟಿಪ್ಪಣಿಗಳು . . . . . . . . . . . . . . . . . 311
ನಾಮಸೂಚಿ . . . . . . . . . . . . . . . . . 347

# ಸಾಮ್ರಾಜ್ಯವಾದ–
# ಬಂಡವಾಳವಾದದ ಅತ್ಯುನ್ನತ ಘಟ್ಟ[1]

# ಮುನ್ನುಡಿ

ಓದುಗರ ಮುಂದೆ ಇರಿಸುತ್ತಿರುವ ಈ ಕಿರುಹೊತ್ತಗೆಯನ್ನು ನಾನು 1916ರಲ್ಲಿ ಜ್ಯೂರಿಕ್‌ನಲ್ಲಿ ಬರೆದೆ. ಅಲ್ಲಿ ನಾನು ತುಂಬ ಅನಾನುಕೂಲ ಪರಿಸ್ಥಿತಿಗಳಲ್ಲಿ ಕೆಲಸ ಮಾಡಬೇಕಿದ್ದಿತು. ಅಲ್ಲಿ ಸ್ವಲ್ಪಮಟ್ಟಿಗೆ ಫ್ರೆಂಚ್ ಹಾಗೂ ಇಂಗ್ಲಿಷ್ ಸಾಹಿತ್ಯದ ಕೊರತೆ ಇದ್ದುದು ಸಹಜವೇ ಆಗಿದ್ದಿತು. ರಷ್ಯನ್ ಸಾಹಿತ್ಯದ ಕೊರತೆಯಂತೂ ತುಂಬ ಗಂಭೀರವೇ ಆಗಿದ್ದಿತು. ಆದರೂ ನಾನು ಜೆ. ಎ. ಹಾಬ್ಸನ್‌ರು ಸಾಮ್ರಾಜ್ಯ ವಾದದ ಕುರಿತು ಬರೆದಿರುವ ಪ್ರಧಾನ ಇಂಗ್ಲಿಷ್ ಕೃತಿಯನ್ನು, ನನ್ನ ಅಭಿಪ್ರಾಯ ದಲ್ಲಿ ಆ ಕೃತಿ ಎಷ್ಟು ಗಮನಕ್ಕೆ ಅರ್ಹವೆಂದು ಕಂಡುಬಂದಿತೋ ಅಷ್ಟು ಗಮನವಿತ್ತು ಬಳಸಿಕೊಂಡಿದ್ದೇನೆ.

ಈ ಕಿರುಹೊತ್ತಗೆಯನ್ನು ಬರೆಯುವಾಗ ನಾನು ತ್ಸಾರ್‌ಶಾಹಿಯ ಸೆನ್ಸಾರ್ ಅಧಿಕಾರಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಬರೆಯಬೇಕಾಯಿತು. ಆದ್ದರಿಂದ ನಾನು ವಾಸ್ತವಾಂಶಗಳ ಸೈದ್ಧಾಂತಿಕ, ನಿರ್ದಿಷ್ಟವಾಗಿ ಆರ್ಥಿಕ, ವಿಶ್ಲೇಷಣೆಗಷ್ಟೆ ನನ್ನನ್ನು ಸೀಮಿತಗೊಳಿಸಿಕೊಳ್ಳುವ ಬಲವಂತಕ್ಕೊಳಗಾದೆನಷ್ಟೆ ಅಲ್ಲ, ರಾಜಕಾರಣಕ್ಕೆ ಸಂಬಂಧಿ ಸಿದ ಕೆಲವೇ ಅವಶ್ಯ ವೀಕ್ಷಣೆಗಳನ್ನೂ ಅತ್ಯಂತ ಎಚ್ಚರಿಕೆಯಿಂದ, ಕೇವಲ ಸೂಚನೆ ಗಳ ಮೂಲಕವಷ್ಟೆ, ರೂಪಕ ಕಥೆಗಳ ಭಾಷೆಯಲ್ಲಿ – ಈಸೋಪನ ಕಥೆಗಳ ನತದೃಷ್ಟ ಭಾಷೆಯಲ್ಲಿ – ವ್ಯಕ್ತಪಡಿಸಬೇಕಾಯಿತು. ಕ್ರಾಂತಿಕಾರಿಗಳು "ಶಾಸನಬದ್ಧ"ವಾದ ಕೃತಿರಚನೆಯಲ್ಲಿ ತೊಡಗಿದಾಗ ತ್ಸಾರ್‌ಶಾಹಿ ಆಡಳಿತವು ಅವರನ್ನೆಲ್ಲ ಇಂತಹ ಮಾರ್ಗ ವನ್ನೇ ಅನುಸರಿಸುವ ಒತ್ತಾಯಕ್ಕೊಳಗಾಗಿಸಿದ್ದಿತು.

ಸೆನ್ಸಾರ್‌ಷಿಪ್‌ನ ವಿಚಾರವನ್ನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದ ಕಾರಣದಿಂದಾಗಿ ಕಬ್ಬಿಣದ ತಿರುಡಿಯಲ್ಲಿ ಬಿಗಿಯಾಗಿ ಅದುಮಿ ಇಟ್ಟಂತೆ, ವಿರೂಪಗೊಳಿಸಿ, ಸಂಕು ಚಿತಗೊಳಿಸಿ ವ್ಯಕ್ತಪಡಿಸಲಾಗಿದ್ದ ಈ ಕಿರುಹೊತ್ತಗೆಯ ಭಾಗಗಳನ್ನು ಸ್ವಾತಂತ್ರ್ಯದ ಈ ದಿನಗಳಲ್ಲಿ ಪುನಃ ಓದುವುದು ಮನೋವೇಧಕವೇ ಸರಿ. ಸಾಮ್ರಾಜ್ಯವಾದವು ಸಮಾಜವಾದಿ ಕ್ರಾಂತಿಯ ಮುನ್ನಾಕಾಲ; ಸಾಮಾಜಿಕ-ಸ್ವದೇಶ ಮೂಢಾಭಿಮಾ ನವು (ಮಾತುಗಳಲ್ಲಿ ಸಮಾಜವಾದ. ಕೃತಿಗಳಲ್ಲಿ ಸ್ವದೇಶ ಮೂಢಾಭಿಮಾನ) ಸಮಾಜ

ವಾದಕ್ಕೆ ಬಗೆದ ಸಂಪೂರ್ಣ ದ್ರೋಹ, ಬೂರ್ಷ್ವಾಸೀಯ ಕಡೆಗೆ ಸಂಪೂರ್ಣ ತಿರುವು; ಕಾರ್ಮಿಕ ವರ್ಗದಲ್ಲುಂಟಾಗಿರುವ ಈ ಒಡಕು ಸಾಮ್ರಾಜ್ಯವಾದದ ವಸ್ತುನಿಷ್ಠ ಪರಿಸ್ಥಿತಿಗಳೊಂದಿಗೆ ನಿಕಟ ಸಂಬಂಧ ಹೊಂದಿದೆ – ಇವೇ ಮುಂತಾದ ಸತ್ಯ ಸಂಗತಿಗಳಿಗೆ ಸಂಬಂಧಿಸಿ ನಾನು "ದಾಸ್ಯಭಾವ"ದಿಂದ ಮಾತನಾಡಬೇಕಾಗಿ ಬಂದಿದ್ದಿತು. ಈ ವಿಷಯಗಳಲ್ಲಿ ಆಸಕ್ತರಾದ ಓದುಗರು ನಾನು 1914-1917ರಲ್ಲಿ ಹೊರದೇಶಗಳಲ್ಲಿ ಬರೆದ ಲೇಖನಗಳನ್ನು ಓದಬೇಕೆಂದು ಸೂಚಿಸುತ್ತೇನೆ. ಈ ಲೇಖನಗಳ ಹೊಸ ಆವೃತ್ತಿಯೊಂದು ಇಷ್ಟರಲ್ಲೇ ಪ್ರಕಟವಾಗಲಿದೆ. 119-120ನೇ ಪುಟಗಳಲ್ಲಿ*ನ ಒಂದು ಭಾಗದ ಕಡೆಗೆ ವಿಶೇಷ ಗಮನ ನೀಡಬೇಕು. ಬೇರೆ ದೇಶಗಳ ಭಾಗಗಳನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಶ್ನೆಗೆ ಸಂಬಂಧಿಸಿ ಬಂಡವಾಳಗಾರರೂ ಅವರ ಪಕ್ಷಕ್ಕೆ ಸೇರಿಕೊಂಡ (ಮತ್ತು ಕೌತ್ಸ್ಕಿಯವರು ಅಷ್ಟೊಂದು ವಿಸಂಗತಿಯೊಂದಿಗೆ ವಿರೋಧಿಸುವಂತಹ) ಸಾಮಾಜಿಕ-ಸ್ವದೇಶ ಮೂಢಾಭಿಮಾನಿಗಳೂ ಹೇಗೆ ಸುಳ್ಳು ಹೇಳುತ್ತಾರೆಂಬುದನ್ನು, ಸೆನ್ಸಾರ್ ಅಧಿಕಾರಿಗಳಿಗೆ ಒಪ್ಪಿಗೆಯಾಗುವಂತಹ ಮುಸುಕಿನಲ್ಲಿ ಓದುಗರಿಗೆ ತೋರಿಸಿಕೊಡಲೋಸುಗ, ಅವರು ಹೇಗೆ ತಮ್ಮ ಬಂಡವಾಳಗಾರರ ಈ ಪರದೇಶಾಕ್ರಮಣಗಳನ್ನು ನಿರ್ಲಜ್ಜೆಯಿಂದ ಮುಚ್ಚಿಡುತ್ತಾರೆ ಎಂಬುದನ್ನು ತೋರಿಸಿಕೊಡಲೋಸುಗ, ನಾನು ಒಂದು ನಿದರ್ಶನವನ್ನು – ಜಪಾನಿನ ನಿದರ್ಶನವನ್ನು – ನೀಡುವ ಒತ್ತಾಯಕ್ಕೊಳಗಾದೆ! ಗಮನವಿಟ್ಟು ಓದುವ ವಾಚಕನು ಜಪಾನಿನ ಸ್ಥಳದಲ್ಲಿ ರಷ್ಯವನ್ನೂ, ಕೊರಿಯಾದ ಸ್ಥಳದಲ್ಲಿ ಫಿನ್ಲೆಂಡ್, ಪೋಲೆಂಡ್, ಕೂರ್ಲ್ಯಾಂಡ್, ಉಕ್ರೈನ್, ಖೀವ, ಬುಖರಾ, ಎಸ್ತೋನಿಯ ಮತ್ತಿತರ ಶುದ್ಧ ರಷ್ಯನರಲ್ಲದ ಜನತೆ ವಾಸಿಸುವ ಪ್ರದೇಶಗಳನ್ನೂ, ಸುಲಭವಾಗಿ ಇಟ್ಟುಕೊಳ್ಳುತ್ತಾನೆ.

ಈ ಕಿರುಹೊತ್ತಗೆಯು ಓದುಗನಿಗೆ ಮೂಲಭೂತ ಆರ್ಥಿಕ ಪ್ರಶ್ನೆಯನ್ನು, ಅಂದರೆ ಸಾಮ್ರಾಜ್ಯವಾದದ ಆರ್ಥಿಕ ಸಾರ ಏನು ಎಂಬ ಪ್ರಶ್ನೆಯನ್ನು, ಅರ್ಥಮಾಡಿಕೊಳ್ಳಲು ನೆರವಾಗುವುದೆಂದು ನಾನು ನಂಬಿದ್ದೇನೆ. ಏಕೆಂದರೆ, ಈ ಪ್ರಶ್ನೆಯ ಅಧ್ಯಯನ ಮಾಡದೆ ಆಧುನಿಕ ಯುದ್ಧ ಹಾಗೂ ಆಧುನಿಕ ರಾಜಕಾರಣವನ್ನು ಅರ್ಥಮಾಡಿಕೊಳ್ಳುವುದು, ಮೌಲ್ಯ ನಿರ್ಣಯಿಸುವುದು, ಅಸಾಧ್ಯ.

ಗ್ರಂಥಕರ್ತೃ

ಪೆತ್ರೊಗ್ರಾದ್,
ಏಪ್ರಿಲ್ 26, 1917

---

* ಪ್ರಸಕ್ತ ಪುಸ್ತಕದ 158ನೇ ಪುಟ. – ಸಂ.

# ಫ್ರೆಂಚ್ ಹಾಗೂ ಜರ್ಮನ್ ಆವೃತ್ತಿಗಳಿಗೆ ಮುನ್ನುಡಿ[2]

## I

ರಷ್ಯನ್ ಆವೃತ್ತಿಗೆ ಬರೆದ ಮುನ್ನುಡಿಯಲ್ಲಿ ಸೂಚಿಸಲಾದಂತೆ, ಈ ಕಿರುಹೊತ್ತಗೆಯನ್ನು 1916ರಲ್ಲಿ ತ್ಸಾರ್‌ಶಾಹಿಯ ಸೆನ್ಸಾರ್ ಅಧಿಕಾರಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಬರೆಯಲಾಯಿತು. ಈಗ ಅದರ ಇಡೀ ಪಾಠವನ್ನು ಪರಿಷ್ಕರಿಸುವುದು ನನ್ನ ಕೈಲಾಗದು. ಅಲ್ಲದೆ, ಬಹುಶಃ ಅದು ಪ್ರಕೃತವೂ ಅಲ್ಲವೇನೋ. ಏಕೆಂದರೆ ಈ ಹೊತ್ತಗೆಯ ಮುಖ್ಯ ಉದ್ದೇಶ – ಅಲ್ಲಗಳೆಯಲಾಗದಂಥ ಬೂರ್ಷ್ವಾ ಅಂಕಿಅಂಶಗಳ ಕ್ರೋಢೀಕೃತ ಫಲಿತಾಂಶಗಳ ಆಧಾರದ ಮೇಲೆ ಮತ್ತು ಎಲ್ಲ ದೇಶಗಳ ಬೂರ್ಷ್ವಾ ವಿದ್ವಾಂಸರೇ ಒಪ್ಪಿಕೊಂಡಿರುವ ಅಂಶಗಳ ಆಧಾರದ ಮೇಲೆ, ಇಪ್ಪತ್ತನೆಯ ಶತಮಾನದ ಆರಂಭದಲ್ಲಿ, ಪ್ರಥಮ ಜಾಗತಿಕ ಸಾಮ್ರಾಜ್ಯಶಾಹಿ ಯುದ್ಧದ ಮುನ್ನಾ ಕಾಲದಲ್ಲಿ, ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯು ಅದರ ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಇದ್ದುದರ ಒಂದು ಸಮಗ್ರ ಚಿತ್ರಣ ನೀಡುವ ಉದ್ದೇಶ – ಇಂದೂ ಹಿಂದಿದ್ದಂತೆಯೇ ಇದೆ.

ಸಾಮಾಜಿಕ-ಸಾಂತ್ವನವಾದಿಗಳು "ಜಾಗತಿಕ ಪ್ರಜಾಪ್ರಭುತ್ವ"ದ ಬಗೆಗೆ ಹೊಂದಿರುವ ಅಭಿಪ್ರಾಯಗಳೂ ಭರವಸೆಗಳೂ ಎಷ್ಟು ಶುದ್ಧ ಸುಳ್ಳಾದವೆಂಬುದನ್ನು ವಿವರಿಸಲು, ಸಮಕಾಲೀನ ಅಮೆರಿಕ ಅಥವಾ ಫ್ರಾನ್ಸಿನಲ್ಲೇ ಎಂದಿಟ್ಟುಕೊಳ್ಳಿ, ಈಚೆಗೆ ಬಹುಮಟ್ಟಿಗೆ ಕಮ್ಯೂನಿಸ್ಟರೆಲ್ಲರನ್ನೂ ಬಂಧಿಸಿದನಂತರವೂ ಕಮ್ಯೂನಿಸ್ಟರ ವಶದಲ್ಲಿ ಇನ್ನೂ ಉಳಿದಿರುವ ನ್ಯಾಯಬದ್ಧತೆಯ ಅಲ್ಪಸ್ವಲ್ಪ ಅವಕಾಶಗಳನ್ನು ಉಪಯೋಗಿಸಿಕೊಳ್ಳುವುದು ಸಾಧ್ಯ – ಹಾಗೂ ಆವಶ್ಯಕ – ಎಂಬುದನ್ನು ತಿಳಿದುಕೊಳ್ಳಲು ತ್ಸಾರ್‌ಶಾಹಿ ಸೆನ್ಸಾರ್‌ಷಿಪ್‌ನ ದೃಷ್ಟಿಕೋನದಿಂದ ಶಾಸನಬದ್ಧ ಎನ್ನುವಂತೆ ಬರೆದಿರುವ ಈ ಕಿರುಹೊತ್ತಗೆಯು, ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿನ ಅನೇಕ ಕಮ್ಯೂನಿಸ್ಟರಿಗೆ ಸ್ವಲ್ಪಮಟ್ಟಿಗೆ ಉಪಯುಕ್ತ ಆಗುವುದು. ಸೆನ್ಸಾರ್‌ಷಿಪ್ ಅನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದ ಈ ಕಿರುಹೊತ್ತಗೆಗೆ ಏನನ್ನು ಸೇರಿಸಬೇಕೋ ಅದರ ಅತ್ಯವಶ್ಯ ಅಂಶಗಳನ್ನು ಈ ಮುನ್ನುಡಿಯಲ್ಲಿ ತಿಳಿಸಲು ನಾನು ಯತ್ನಿಸುತ್ತೇನೆ.

## II

1914-1918ರ ಯುದ್ಧವು ಉಭಯ ಪಕ್ಷಗಳಿಗೆ ಸಂಬಂಧಿಸಿಯೂ ಸಾಮ್ರಾಜ್ಯಶಾಹಿ (ಅಂದರೆ, ಪರದೇಶಾಕ್ರಮಣದ, ದರೋಡೆಯ, ಸೂರೆಗಾರ) ಯುದ್ಧವಾಗಿದ್ದಿತು, ಅದು ಜಗತ್ತನ್ನು ವಿಭಜಿಸಲು, ವಸಾಹತುಗಳನ್ನೂ ಹಣಕಾಸು ಬಂಡವಾಳದ "ಪ್ರಭಾವ ವಲಯ" ಇತ್ಯಾದಿಗಳನ್ನೂ ಹಂಚಿಕೊಳ್ಳಲು ಮತ್ತು ಪುನರ್ ಹಂಚಿಕೊಳ್ಳಲು ನಡೆಸಿದ ಯುದ್ಧವಾಗಿದ್ದಿತು ಎಂದು ಈ ಕಿರುಹೊತ್ತಗೆಯಲ್ಲಿ ಸಾಧಿಸಲಾಗಿದೆ.

ಯುದ್ಧದ ನಿಜವಾದ ಸಾಮಾಜಿಕ ಸ್ವರೂಪವು, ಅಥವಾ ನಿಜವಾದ ವರ್ಗ ಸ್ವರೂಪವೇ ಎನ್ನಿ, ಏನಾಗಿದ್ದಿತು ಎಂಬುದಕ್ಕೆ ರುಜುವಾತನ್ನು ಸಹಜವಾಗಿಯೇ ಯುದ್ಧದ ರಾಜತಾಂತ್ರಿಕ ಇತಿಹಾಸದಲ್ಲಲ್ಲ, ಆದರೆ ಯುದ್ಧದಲ್ಲಿ ತೊಡಗಿದ್ದ ಎಲ್ಲ ದೇಶಗಳಲ್ಲಿನ ಆಳುವ ವರ್ಗಗಳ ವಸ್ತುನಿಷ್ಠ ಪರಿಸ್ಥಿತಿಯಲ್ಲಿ ಕಂಡುಕೊಳ್ಳಬೇಕು. ಈ ವಸ್ತುನಿಷ್ಠ ಪರಿಸ್ಥಿತಿಯನ್ನು ಚಿತ್ರಿಸಲು ನಿದರ್ಶನಗಳನ್ನಾಗಲೀ ಪ್ರತ್ಯೇಕ ಮಾಹಿತಿಗಳನ್ನಾಗಲೀ ತೆಗೆದುಕೊಳ್ಳಕೂಡದು (ಸಾಮಾಜಿಕ ಜೀವನ ವಿದ್ಯಮಾನಗಳು ಅತ್ಯಂತ ತೊಡಕಾದವುಗಳಾದುದರಿಂದ ಯಾವುದೇ ಪ್ರತಿಪಾದನೆಯನ್ನು ಸಾಧಿಸಲು ಎಷ್ಟೋ ಸಂಖ್ಯೆಯ ನಿದರ್ಶನಗಳನ್ನೂ ಅಥವಾ ಪ್ರತ್ಯೇಕ ಮಾಹಿತಿಗಳನ್ನೂ ಆಯ್ದುಕೊಳ್ಳುವುದು ಯಾವತ್ತೂ ಸಾಧ್ಯವಿರುತ್ತದೆ), ಆದರೆ ಎಲ್ಲ ಯುದ್ಧನಿರತ ದೇಶಗಳಲ್ಲೂ ಇಡೀ ಜಗತ್ತಿನಲ್ಲೂ ಆರ್ಥಿಕ ಜೀವನದ ಬುನಾದಿಗೆ ಸಂಬಂಧಿಸಿದ ಎಲ್ಲ ಮಾಹಿತಿಗಳನ್ನೂ ತೆಗೆದುಕೊಳ್ಳಬೇಕು.

ಈ ರೀತಿಯ ಅಲ್ಲಗಳೆಯಲಾಗದಂತಹ ಕ್ರೋಡೀಕೃತ ಮಾಹಿತಿಗಳನ್ನೇ ನಾನು 1876 ಹಾಗೂ 1914ರಲ್ಲಿ ಜರುಗಿದ ಜಗತ್ತಿನ ವಿಭಜನೆಯನ್ನೂ (ಅಧ್ಯಾಯ VIರಲ್ಲಿ), 1890 ಹಾಗೂ 1913ರಲ್ಲಿ ಜರುಗಿದ ಜಗತ್ತಿನಾದ್ಯಂತ ರೈಲ್ವೇಗಳ ಹಂಚಿಕೆಯನ್ನೂ (ಅಧ್ಯಾಯ VIIರಲ್ಲಿ) ವಿವರಿಸಲು ಉಪಯೋಗಿಸಿಕೊಂಡಿರುವುದು. ರೈಲ್ವೇಗಳು ಮೂಲ ಬಂಡವಾಳಶಾಹಿ ಕೈಗಾರಿಕೆಗಳ – ಕಲ್ಲಿದ್ದಲು, ಕಬ್ಬಿಣ ಹಾಗೂ ಉಕ್ಕಿನ ಕೈಗಾರಿಕೆಗಳ – ಚಟುವಟಿಕೆಯ ಕ್ರೋಡೀಕೃತ ಫಲವಾಗಿರುತ್ತವೆ; ಜಾಗತಿಕ ವ್ಯಾಪಾರದ ಹಾಗೂ ಬೂರ್ಷ್ವಾ-ಪ್ರಜಾಸತ್ತಾತ್ಮಕ ನಾಗರಿಕತೆಯ ಬೆಳವಣಿಗೆಯ ಕ್ರೋಡೀಕೃತ ಫಲ ಮತ್ತು ಅತ್ಯಂತ ಎದ್ದುಕಾಣುವಂಥ ಸೂಚಿಗಳಾಗಿರುತ್ತವೆ. ರೈಲ್ವೇಗಳು ಹೇಗೆ ವಿಸ್ತೃತ ಪ್ರಮಾಣದ ಉತ್ಪಾದನೆಯೊಂದಿಗೆ, ಏಕಸ್ವಾಮ್ಯಗಳು, ಸಿಂಡಿಕೇಟುಗಳು, ಕಾರ್ಟೆಲ್‌ಗಳು, ಟ್ರಸ್ಟ್‌ಗಳು, ಬ್ಯಾಂಕುಗಳು ಹಾಗೂ ಹಣಕಾಸು ಆಲಿಗಾರ್ಕಿ (ಸ್ವಲ್ಪ ಜನಾಧಿಪತ್ಯ) ಇವುಗಳೊಂದಿಗೆ, ಸಂಬಂಧಿಸಲ್ಪಟ್ಟಿವೆ ಎಂಬುದನ್ನು ಗ್ರಂಥದ ಆರಂಭಿಕ ಅಧ್ಯಾಯುಗಳಲ್ಲಿ ತೋರಿಸಲಾಗಿದೆ. ರೈಲ್ವೇಗಳ ಅಸಮ ಹಂಚಿಕೆ, ಅವುಗಳ ವಿಷಮ ಬೆಳವಣಿಗೆ ಜಗದ್ವ್ಯಾಪಿ ಪ್ರಮಾಣದಲ್ಲಿ ಆಧುನಿಕ ಏಕಸ್ವಾಮ್ಯ

ಬಂಡವಾಳವಾದಿ ಪದ್ಧತಿಯ ಚಟುವಟಿಕೆಯ ಕ್ರೋಡೀಕೃತ ಫಲಿತಾಂಶಗಳೆಂದು ಹೇಳಬಹುದು. ಇಂತಹ ಆರ್ಥಿಕ ಪದ್ಧತಿಯಲ್ಲಿ, ಉತ್ಪಾದನಾ ಸಾಧನಗಳ ಮೇಲೆ ಖಾಸಗಿ ಒಡೆತನ ಎನ್ನುವುದು ಇರುವವರೆಗೂ ಸಾಮ್ರಾಜ್ಯಶಾಹಿ ಯುದ್ಧಗಳು ಸಂಪೂರ್ಣವಾಗಿ ಅನಿವಾರ್ಯ ಎಂದು ಈ ಕ್ರೋಡೀಕೃತ ಫಲಿತಾಂಶಗಳು ಸಾಧಿಸಿ ತೋರಿಸುತ್ತವೆ.

ರೈಲ್ವೇಗಳ ನಿರ್ಮಾಣವು ಸರಳವಾದ, ಸಹಜವಾದ, ಪ್ರಜಾಸತ್ತಾತ್ಮಕವಾದ, ಸಾಂಸ್ಕೃತಿಕವಾದ ಹಾಗೂ ನಾಗರಿಕಗೊಳಿಸುವ ಉದ್ಯಮವೆಂದೇ ಕಂಡುಬರುತ್ತದೆ; ಬಂಡವಾಳಶಾಹಿ ಗುಲಾಮಗಿರಿಯನ್ನು ಉಜ್ವಲ ವರ್ಣಗಳಲ್ಲಿ ಚಿತ್ರಿಸಲೆಂದು ಯಾರಿಗೆ ವೇತನ ನೀಡಲಾಗುತ್ತದೋ ಆ ಬೂರ್ಷ್ವಾ ಪ್ರಾಧ್ಯಾಪಕರ ಅಭಿಪ್ರಾಯದಲ್ಲಿ ಮತ್ತು ಪೆಟಿ ಬೂರ್ಷ್ವಾ ಸಂಕುಚಿತಮತಿಗಳ ಅಭಿಪ್ರಾಯದಲ್ಲಿ, ಅದು ಅಂತಹುದೇ. ಆದರೆ ವಾಸ್ತವವಾಗಿ, ಒಟ್ಟಿನಲ್ಲಿ ಉತ್ಪಾದನಾ ಸಾಧನಗಳ ಮೇಲಿನ ಖಾಸಗಿ ಒಡೆತನದೊಂದಿಗೆ ಈ ಉದ್ಯಮಗಳನ್ನು ಸಹಸ್ರಾರು ಭಿನ್ನವಿಭಿನ್ನ ಹಾಸುಹೊಕ್ಕುಗಳಿಂದ ಬಂಧಿಸುವಂಥ ಬಂಡವಾಳಶಾಹಿ ನೂಲುಗಳು ಈ ರೈಲ್ವೇ ನಿರ್ಮಾಣವನ್ನು (ವಸಾಹತುಗಳಲ್ಲೂ ಅರೆವಸಾಹತುಗಳಲ್ಲೂ) ಒಂದು ಸಾವಿರ ಮಿಲಿಯ ಜನರನ್ನೂ, ಅಂದರೆ ಪರಾಧೀನ ದೇಶಗಳಲ್ಲಿ ವಾಸಿಸುತ್ತಿರುವ ಜಗತ್ತಿನ ಜನಸಂಖ್ಯೆಯ ಅರ್ಧಕ್ಕೂ ಹೆಚ್ಚು ಭಾಗದ ಜನರನ್ನೂ, "ನಾಗರಿಕ" ದೇಶಗಳಲ್ಲಿನ ಬಂಡವಾಳದ ಕೂಲಿಗುಲಾಮರನ್ನೂ ಮರ್ದಿಸುವ ಒಂದು ಸಾಧನವನ್ನಾಗಿ ಪರಿವರ್ತಿಸಿವೆ.

ಪುಟ್ಟ ಆಸ್ತಿವಂತನ ಶ್ರಮದ ಮೇಲೆ ಆಧರಿಸಿದ ಖಾಸಗಿ ಒಡೆತನ, ಮುಕ್ತ ಸ್ಪರ್ಧೆ, ಪ್ರಜಾಪ್ರಭುತ್ವ – ಬಂಡವಾಳಗಾರರೂ ಅವರ ಪತ್ರಿಕೆಗಳೂ ಕಾರ್ಮಿಕರನ್ನೂ ರೈತರನ್ನೂ ಮೋಸಗೊಳಿಸಲು ಬಳಸುವ ಈ ಎಲ್ಲ ಆಕರ್ಷಕ ಘೋಷಣೆಗಳು – ದೂರ ಗತಕಾಲಕ್ಕೆ ಸೇರಿದ ವಿಷಯಗಳಾಗಿವೆ. ಬಂಡವಾಳವಾದಿ ಪದ್ಧತಿಯು, ಕೆಲವೇ "ಮುಂದುವರಿದ" ದೇಶಗಳು ಜಗತ್ತಿನ ಜನಸಂಖ್ಯೆಯ ಅತ್ಯಧಿಕ ಭಾಗವನ್ನು ವಸಾಹತು ದಬ್ಬಾಳಿಕೆಗೂ ಹಣಕಾಸಿನ ದೌರ್ಜನ್ಯಕ್ಕೂ ಈಡು ಮಾಡುವ ಜಾಗತಿಕ ವ್ಯವಸ್ಥೆಯಾಗಿ ಬೆಳೆದಿದೆ. ಆಪಾದಮಸ್ತಕ ಶಸ್ತ್ರಸನ್ನದ್ಧರಾದ ಎರಡು ಅಥವಾ ಮೂರು ಅತ್ಯಂತ ಪ್ರಬಲ ಜಾಗತಿಕ ಲೂಟಿಗಾರರು (ಅಮೆರಿಕ, ಗ್ರೇಟ್ ಬ್ರಿಟನ್, ಜಪಾನ್) ಈ "ಕೊಳ್ಳೆ"ಯನ್ನು ತಮ್ಮ ನಡುವೆ ಹಂಚಿಕೊಳ್ಳುತ್ತಿದ್ದಾರೆ ಮತ್ತು ತಮ್ಮ ಕೊಳ್ಳೆಯನ್ನು ಹಂಚಿಕೊಳ್ಳುವುದಕ್ಕಾಗಿ ನಡೆಸುವ ತಮ್ಮ ಯುದ್ಧದಲ್ಲಿ ಇಡೀ ಜಗತ್ತೇ ಪಾಲ್ಗೊಳ್ಳುವಂತೆ ಮಾಡುತ್ತಿದ್ದಾರೆ.

## III

ರಾಜಪ್ರಭುತ್ವದ ಜರ್ಮನಿಯು ವಿಧಿಸಿದ ಬ್ರೆಸ್ಟ್-ಲಿತೋವ್‌ಸ್ಕ್ ಶಾಂತಿ ಒಡಂಬಡಿಕೆ[3]ಯೂ, ತದನಂತರದ ಇನ್ನೂ ಹೆಚ್ಚು ಕ್ರೂರವೂ ಕುತ್ಸಿತವೂ ಆದ, ಅಮೆರಿಕ

ಹಾಗೂ ಫ್ರಾನ್ಸ್ "ಪ್ರಜಾಸತ್ತಾತ್ಮಕ" ಗಣತಂತ್ರಗಳೂ, "ಸ್ವತಂತ್ರ" ಇಂಗ್ಲೆಂಡೂ ವಿಧಿಸಿದ, ವೆರ್ಸೈಲ್ಸ್ ಶಾಂತಿ ಒಡಂಬಡಿಕೆ[4]ಯೂ, ಸಾಮ್ರಾಜ್ಯವಾದದ ಕೂಲಿಬರಹಗಾರರನ್ನು ಹಾಗೂ ಪೆಟಿ ಬೂರ್ಷ್ವಾ ಪ್ರತಿಗಾಮಿಗಳನ್ನು ಬಯಲು ಮಾಡುವ ಮೂಲಕ ಮಾನವಕುಲಕ್ಕೆ ಅತ್ಯಂತ ಉಪಯುಕ್ತ ಸೇವೆ ಸಲ್ಲಿಸಿವೆ. ಇವರು ತಮ್ಮನ್ನು ಸಾಂತ್ವನವಾದಿಗಳೆಂದೂ, ಸಮಾಜವಾದಿಗಳೆಂದೂ ಕರೆದುಕೊಂಡರೂ "ವಿಲ್ಸನ್ ವಾದ"[5]ವನ್ನು ಹಾಡಿಹೊಗಳಿದರು ಮತ್ತು ಸಾಮ್ರಾಜ್ಯವಾದದಡಿಯೂ ಶಾಂತಿ ಸುಧಾರಣೆಗಳು ಸಾಧ್ಯವೆಂದೇ ಸಾಧಿಸ ಯತ್ನಿಸಿದರು.

ಬ್ರಿಟಿಷ್ ಹಣಕಾಸು ಲೂಟಿಗಾರರ ವೃಂದವೋ ಅಥವಾ ಜರ್ಮನ್ ಹಣಕಾಸು ಲೂಟಿಗಾರರ ವೃಂದವೋ, ಯಾವುದು ಅತ್ಯಂತ ಹೆಚ್ಚಿನ ಕೊಳ್ಳೆಯನ್ನು ಪಡೆಯಬೇಕು ಎಂಬುದನ್ನು ನಿರ್ಧರಿಸಲು ನಡೆಸಲಾದಂಥ ಯುದ್ಧದಲ್ಲಿ ಹತ್ತಾರು ಮಿಲಿಯ ಜನರು ಪ್ರಾಣ ತೆತ್ತುದೂ ಅಂಗವಿಕಲರಾದುದೂ ಮತ್ತು ಈ ಎರಡು "ಶಾಂತಿ ಒಡಂಬಡಿಕೆಗಳೂ," ಬೂರ್ಷ್ವಾಸೀಯಿಂದ ತುಳಿಯಲ್ಪಟ್ಟ, ಮರ್ದಿತರಾದ, ಮೋಸಗೊಳಿಸಲ್ಪಟ್ಟ ಹಾಗೂ ವಂಚಿತರಾದ ಮಿಲಿಯಾಂತರ ಹಾಗೂ ಕೋಟ್ಯಾಂತರ ಜನರ ಕಣ್ಣುಗಳನ್ನು ತೆರೆಯುತ್ತಿವೆ. ಹೀಗೆ ಯುದ್ಧ ಉಂಟುಮಾಡಿದ ಸಾರ್ವತ್ರಿಕ ವಿನಾಶದಿಂದ ಜಗದ್ವ್ಯಾಪಿ ಕ್ರಾಂತಿಕಾರಿ ಮುಗ್ಗಟ್ಟೊಂದು ಉದ್ಭವಿಸುತ್ತಿದೆ. ಈ ಮುಗ್ಗಟ್ಟಿನ ಘಟ್ಟಗಳು ಎಷ್ಟೇ ದೀರ್ಘವಾಗಿರಬಹುದಾದರೂ ಎಷ್ಟೇ ಕಷ್ಟಕರವಾಗಿರಬಹುದಾದರೂ, ಅದು ಶ್ರಮಜೀವಿ ಕ್ರಾಂತಿಯಲ್ಲಲ್ಲದೆ, ಆ ಕ್ರಾಂತಿಯ ವಿಜಯದಲ್ಲಲ್ಲದೆ, ಬೇರೆ ರೀತಿಯಲ್ಲಿ ಕೊನೆಗಾಣಲು ಸಾಧ್ಯವಿಲ್ಲ.

ದ್ವಿತೀಯ ಇಂಟರ್‌ನ್ಯಾಷನಲ್[6]ನ ಬಾಸೆಲ್ ಪ್ರಣಾಳಿಕೆ[7]ಯು – ಒಟ್ಟಿನ ಮೇಲೆ ಯುದ್ಧದ ಮೌಲ್ಯ ನಿರ್ಣಯವನ್ನಲ್ಲ (ಯುದ್ಧಗಳಲ್ಲಿ ನಾನಾ ರೀತಿಯವಿರುತ್ತವೆ, ಕ್ರಾಂತಿಕಾರಿ ಯುದ್ಧಗಳೂ ಇರುತ್ತವೆ) ಆದರೆ 1914ರಲ್ಲಿ ಪ್ರಾರಂಭವಾದ ನಿರ್ದಿಷ್ಟ ಯುದ್ಧವೊಂದರ ಮೌಲ್ಯ ನಿರ್ಣಯವನ್ನು 1912ರಲ್ಲಿ ನೀಡಿದ ಆ ಪ್ರಣಾಳಿಕೆಯು – ಈಗ ದ್ವಿತೀಯ ಇಂಟರ್‌ನ್ಯಾಷನಲ್‌ನ ವೀರರ ಶುದ್ಧ ನಾಚಿಕೆಗೆಟ್ಟ ದಿವಾಳಿತನವನ್ನೂ ದ್ರೋಹವನ್ನೂ ಬಯಲು ಮಾಡುವ ಒಂದು ಸ್ಮಾರಕವಾಗಿದೆ.

ಆದ್ದರಿಂದಲೇ ನಾನು ಈ ಪ್ರಣಾಳಿಕೆಯನ್ನು ಈ ಆವೃತ್ತಿಗೆ ಅನುಬಂಧವನ್ನಾಗಿ ನೀಡುತ್ತಿದ್ದೇನೆ.[8] ದ್ವಿತೀಯ ಇಂಟರ್‌ನ್ಯಾಷನಲ್‌ನ ವೀರರು ಬರಲಿರುವ ಯುದ್ಧಕ್ಕೂ ಶ್ರಮಜೀವಿ ವರ್ಗ ಕ್ರಾಂತಿಗೂ ನಡುವೆ ಇರುವ ಸಂಬಂಧದ ಬಗ್ಗೆ ಈ ಪ್ರಣಾಳಿಕೆಯಲ್ಲಿ ನಿಷ್ಕೃಷ್ಟವಾಗಿ ಸುಸ್ಪಷ್ಟವಾಗಿ ಹಾಗೂ ನಿರ್ದಿಷ್ಟವಾಗಿ ಹೇಳಿರುವಂಥ ಭಾಗದಿಂದ, ಕಳ್ಳನು ತಾನು ಕಳ್ಳತನ ಮಾಡಿದ ಜಾಗದಿಂದ ದೂರವಿರುವಂತೆ, ಅಷ್ಟೇ ಶ್ರದ್ಧೆಯಿಂದ ದೂರವಿದ್ದಾರೆಂಬುದನ್ನು ಓದುಗರು ಗಮನಿಸಬೇಕೆಂದು ನಾನು ಪದೇ ಪದೇ ಒತ್ತಿ ಹೇಳುತ್ತೇನೆ.

## IV

ಜಗತ್ತಿನ ಎಲ್ಲ ದೇಶಗಳಲ್ಲೂ ದ್ವಿತೀಯ ಇಂಟರ್‌ನ್ಯಾಷನಲ್‌ನ "ಅತ್ಯಂತ ಪ್ರಮುಖ ಸಿದ್ಧಾಂತಕಾರರೂ" ಹಾಗೂ ನಾಯಕರೂ (ಆಸ್ಟ್ರಿಯಾದಲ್ಲಿ ಒಟ್ಟೋ ಬೌವೆರ್ ಮತ್ತು ಸಂಗಡಿಗರು, ಇಂಗ್ಲೆಂಡಿನಲ್ಲಿ ರಾಮ್‌ಸೇ ಮ್ಯಾಕ್‌ಡೊನಾಲ್ಡ್ ಮತ್ತಿತರರು, ಫ್ರಾನ್ಸಿನಲ್ಲಿ ಆಲ್ಬೇರ್ ಟೊಮಾ, ಇವರೇ ಮುಂತಾದವರು) ಅನೇಕಾನೇಕ ಸಮಾಜವಾದಿಗಳೂ, ಸುಧಾರಣಾವಾದಿಗಳೂ, ಸಾಂತ್ವನವಾದಿಗಳೂ, ಬೂರ್ಷ್ವಾ ಪ್ರಜಾಸತ್ತಾತ್ಮಕವಾದಿಗಳೂ ಹಾಗೂ ಪಾದ್ರಿಗಳೂ ಪ್ರತಿನಿಧಿಸುವಂಥ ಅಂತರರಾಷ್ಟ್ರೀಯ ಸೈದ್ಧಾಂತಿಕ ಪ್ರವೃತ್ತಿಯಾದ "ಕೌತ್‌ಸ್ಕಿವಾದ"ದ ಟೀಕೆಗೂ ಈ ಕಿರುಹೊತ್ತಗೆಯಲ್ಲಿ ವಿಶೇಷ ಗಮನ ನೀಡಲಾಗಿದೆ.

ಈ ಸೈದ್ಧಾಂತಿಕ ಪ್ರವೃತ್ತಿಯು ಒಂದು ಕಡೆ ದ್ವಿತೀಯ ಇಂಟರ್‌ನ್ಯಾಷನಲ್ ಒಡೆದು ನಶಿಸುತ್ತಿರುವುದರ ಉತ್ಪನ್ನವಾದರೆ, ಇನ್ನೊಂದು ಕಡೆ, ತಮ್ಮ ಇಡೀ ಜೀವನ ಪರಿಸ್ಥಿತಿಗಳಿಂದಲೇ ಬೂರ್ಷ್ವಾ ಹಾಗೂ ಪ್ರಜಾಸತ್ತಾತ್ಮಕ ಪೂರ್ವಾಗ್ರಹಗಳಿಗೆ ಸೆರೆಯಾಗಿರುವಂಥ ಪೆಟಿ ಬೂರ್ಷ್ವಾಗಳ ಸಿದ್ಧಾಂತದ ಅನಿವಾರ್ಯ ಫಲವಾಗಿದೆ.

ಕೌತ್‌ಸ್ಕಿ ಮತ್ತು ಅವರಂಥವರು ಹೊಂದಿರುವ ಅಭಿಪ್ರಾಯಗಳು, ಅದೇ ಲೇಖಕ (ಕೌತ್‌ಸ್ಕಿ) ಅನೇಕ ದಶಕಗಳವರೆಗೆ ಪ್ರತಿಪಾದಿಸಿದ, ಅದರಲ್ಲೂ ವಿಶೇಷವಾಗಿ ಸಮಾಜವಾದಿ ಸಂದರ್ಭಸಾಧಕವಾದದ (ಬೆರ್ನ್‌ಷ್ಟೈನ್, ಮಿಲ್ಯೆರಾನ್, ಹೈಂಡ್‌ಮನ್, ಗೊಂಪೆರ್ಸ್, ಮುಂತಾದವರ) ವಿರುದ್ಧ ನಡೆಸಿದ ತಮ್ಮ ಹೋರಾಟದಲ್ಲಿ ಪ್ರತಿಪಾದಿಸಿದ ಮಾರ್ಕ್ಸ್‌ವಾದದ ಅವೇ ಕ್ರಾಂತಿಕಾರಿ ಸೂತ್ರಗಳ ಸಂಪೂರ್ಣ ಪರಿತ್ಯಾಗವಾಗಿವೆ. ಆದ್ದರಿಂದ ಪ್ರಪಂಚದಾದ್ಯಂತ "ಕೌತ್‌ಸ್ಕಿವಾದಿಗಳು" ಈಗ (ದ್ವಿತೀಯ ಅಥವಾ ಪೀತ ಇಂಟರ್‌ನ್ಯಾಷನಲ್[9] ಮೂಲಕ) ಪ್ರಾಯೋಗಿಕ ರಾಜಕಾರಣದಲ್ಲಿ ತೀವ್ರ ಸಂದರ್ಭಸಾಧಕರೊಂದಿಗೂ ಹಾಗೂ (ಸಮಾಜವಾದಿಗಳೂ ಭಾಗವಹಿಸುವಂಥ ಬೂರ್ಷ್ವಾ ಸಂಮಿಶ್ರ ಸರಕಾರಗಳ ಮೂಲಕ) ಬೂರ್ಷ್ವಾ ಸರಕಾರಗಳೊಂದಿಗೂ ಐಕ್ಯಗೊಂಡಿರುವುದು ಕೇವಲ ಆಕಸ್ಮಿಕವೇನಲ್ಲ.

ಒಟ್ಟಿನಲ್ಲಿ ಜಗತ್ತಿನಲ್ಲೆಲ್ಲ ಬೆಳೆಯುತ್ತಿರುವ ಶ್ರಮಜೀವಿ ವರ್ಗದ ಕ್ರಾಂತಿಕಾರಿ ಚಳವಳಿಯೂ ವಿಶೇಷವಾಗಿ ಕಮ್ಯೂನಿಸ್ಟ್ ಚಳವಳಿಯೂ "ಕೌತ್‌ಸ್ಕಿವಾದ"ದ ಸೈದ್ಧಾಂತಿಕ ತಪ್ಪುಗಳನ್ನು ವಿಶ್ಲೇಷಿಸದೆ, ಬಯಲು ಮಾಡದೆ ಇರುವುದು ಸಾಧ್ಯವಿಲ್ಲ. ಅದರಲ್ಲೂ ಸಾಂತ್ವನವಾದವೂ ಒಟ್ಟಿನಲ್ಲಿ "ಪ್ರಜಾಪ್ರಭುತ್ವ"ವೂ ಇನ್ನೂ ಜಗತ್ತಿನಾದ್ಯಂತ ತುಂಬ ವ್ಯಾಪಕವಾಗಿರುವುದರಿಂದ ಇದು ಇನ್ನೂ ಹೆಚ್ಚು ಅವಶ್ಯವಾಗಿದೆ. ಈ ಸಾಂತ್ವನವಾದ ಹಾಗೂ ಒಟ್ಟಿನಲ್ಲಿ "ಪ್ರಜಾಪ್ರಭುತ್ವವಾದ"ಗಳು ಮಾರ್ಕ್ಸ್‌ವಾದದೊಂದಿಗೆ ಎಷ್ಟು ಮಾತ್ರವೂ ಸಂಬಂಧ ಹೊಂದಿರದಿದ್ದರೂ, ಕೌತ್‌ಸ್ಕಿ ಮತ್ತವರ ಸಂಗಡಿಗರು ಮಾಡುತ್ತಿರುವಂತೆ, ಸಾಮ್ರಾಜ್ಯವಾದದ ವೈರುಧ್ಯಗಳ ಪ್ರಗಾಢತೆಯನ್ನೂ ಅದು ಜನ್ಮ ನೀಡುವಂಥ ಕ್ರಾಂತಿಕಾರಿ ಮುಗ್ಗಟ್ಟಿನ ಅನಿವಾರ್ಯತೆಯನ್ನೂ ಮರೆ

ಮಾಡುತ್ತಿವೆ. ಈ ಪ್ರವೃತ್ತಿಗಳ ವಿರುದ್ಧ ಹೋರಾಡುವುದು ಶ್ರಮಜೀವಿ ವರ್ಗ ಪಾರ್ಟಿಯ ಬದ್ಧ ಕರ್ತವ್ಯವಾಗಿದೆ. ಈ ಪಾರ್ಟಿಯು ಬೂರ್ಷ್ವಾಸೀಯಿಂದ ಮೋಸ ಕ್ಕೊಳಗಾದಂಥ ಪುಟ್ಟ ಆಸ್ತಿವಂತರನ್ನೂ ಹೆಚ್ಚು ಕಮ್ಮಿ ಪೆಟಿ ಬೂರ್ಷ್ವಾ ಜೀವನ ಪರಿಸ್ಥಿತಿಗಳಲ್ಲಿ ಜೀವಿಸುತ್ತಿರುವಂಥ ಮಿಲಿಯಾಂತರ ಶ್ರಮಿಕರನ್ನೂ ಬೂರ್ಷ್ವಾಸೀ ಯಿಂದ ತನ್ನ ಕಡೆಗೆ ಒಲಿಸಿಕೊಳ್ಳಬೇಕಾಗಿದೆ.

## V

'ಬಂಡವಾಳವಾದಿ ಪದ್ಧತಿಯ ಪರೋಪಜೀವಿ ಸ್ವಭಾವ ಹಾಗೂ ಅದರ ಕ್ಷಯಿಸುವಿಕೆ' ಎಂಬ ಅಧ್ಯಾಯ VIIIರ ಬಗೆಗೆ ಕೆಲವು ಮಾತುಗಳನ್ನು ಹೇಳ ಬೇಕು. ಈ ಪುಸ್ತಕದ ಪಾಠದಲ್ಲಿ ಆಗಲೇ ತಿಳಿಸಲಾಗಿರುವಂತೆ, ಮಾಜಿ "ಮಾರ್ಕ್ಸ್ ವಾದಿ," ಈಗ ಕೌತ್ಸ್ಕಿಯವರ ಸಹಯೋಧ, ಜರ್ಮನಿಯ ಸ್ವತಂತ್ರ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿ[10]ಯ ಬೂರ್ಷ್ವಾ ಸುಧಾರಣಾವಾದಿ ನೀತಿಯ ಪ್ರಧಾನ ಪ್ರತಿಪಾದಕರಲ್ಲೊಬ್ಬರಾದ ಹಿಲ್ಫೆರ್ಡಿಂಗ್‌ರು ಈ ಪ್ರಶ್ನೆಗೆ ಸಂಬಂಧಿಸಿ, ಮುಚ್ಚು ಮರೆ ಇಲ್ಲದೆ ಸಾಂತ್ವನವಾದಿಯಾದ ಹಾಗೂ ಸುಧಾರಣಾವಾದಿಯಾದ ಆಂಗ್ಲ ದೇಶೀಯ ಹಾಬ್ಸನ್‌ರಿಗೆ ಹೋಲಿಸಿದಂತೆ, ಒಂದು ಹೆಜ್ಜೆ ಹಿಂದಿರಿಸಿದ್ದಾರೆ. ಇಡೀ ಕಾರ್ಮಿಕ ವರ್ಗ ಚಳವಳಿಯಲ್ಲಾಗಿರುವ ಅಂತರರಾಷ್ಟ್ರೀಯ ಬಿರುಕು ಈಗ ಸುಸ್ಪಷ್ಟ ವಾಗಿದೆ (ದ್ವಿತೀಯ ಹಾಗೂ ತೃತೀಯ ಇಂಟರ್‌ನ್ಯಾಷನಲ್[11]ಗಳು). ಈ ಎರಡೂ ಪ್ರವೃತ್ತಿಗಳ ನಡುವೆ ಸಶಸ್ತ್ರ ಹೋರಾಟ ಹಾಗೂ ಅಂತರ್ಯುದ್ಧ ಬಿಗಡಾಯಿಸಿವೆ ಎಂಬ ವಾಸ್ತವಾಂಶವೂ ಸುಸ್ಪಷ್ಟವಾಗಿದೆ: ರಷ್ಯದಲ್ಲಿ ಮೆನ್ಷೆವಿಕರೂ[12] "ಸಮಾಜವಾದಿ-ಕ್ರಾಂತಿಕಾರಿಗಳೂ"[13] ಬೋಲ್ಷೆವಿಕರ ವಿರುದ್ಧ ಕೊಲ್ಚಾಕ್‌ನಿಗೂ ದೆನೀಕಿನ್‌ನಿಗೂ ಬೆಂಬಲ ನೀಡುತ್ತಿದ್ದಾರೆ; ಜರ್ಮನಿಯಲ್ಲಿ ಸ್ಪಾರ್ಟಾಕಿಸ್ಟರ[14] ವಿರುದ್ಧ ಷೈಡೆಮನ್‌ಗಳೂ ನೋಸ್ಕೆ ಮತ್ತು ಸಂಗಡಿಗರೂ ಬೂರ್ಷ್ವಾಸೀಯೊಂದಿಗೆ ಕೂಡಿಕೊಂಡು ಹೋರಾಟ ನಡೆಸುತ್ತಿದ್ದಾರೆ; ಫಿನ್ಲೆಂಡ್, ಪೋಲೆಂಡ್, ಹಂಗೆರಿ ಇತ್ಯಾದಿ ದೇಶಗಳಲ್ಲೂ ಇದೇ ಜರುಗುತ್ತಿದೆ. ಈ ವಿಶ್ವೈತಿಹಾಸಿಕ ಘಟನೆಯ ಆರ್ಥಿಕ ಆಧಾರವೇನು?

ಬಂಡವಾಳವಾದದ ಪರೋಪಜೀವಿ ಸ್ವಭಾವ ಹಾಗೂ ಅದರ ಕ್ಷಯಿಸುವಿಕೆ ಈ ಆರ್ಥಿಕ ಆಧಾರವಾಗಿದೆ. ಇವು ಬಂಡವಾಳವಾದದ ಬೆಳವಣಿಗೆಯ ಅತ್ಯುನ್ನತ ಚಾರಿತ್ರಿಕ ಘಟ್ಟವಾದ ಸಾಮ್ರಾಜ್ಯವಾದದ ವಿಶಿಷ್ಟ ಲಕ್ಷಣಗಳಾಗಿವೆ. ಈ ಕಿರುಹೊತ್ತಗೆ ಯಲ್ಲಿ ಸಾಧಿಸಲಾಗಿರುವಂತೆ, ಬಂಡವಾಳವಾದವು ಈಗ ಕೆಲವೇ (ಭೂಮಂಡಲದ ನಿವಾಸಿಗಳಲ್ಲಿ ಹತ್ತನೇ ಒಂದು ಪಾಲಿಗೂ ಕಮ್ಮಿ; ತುಂಬ "ಧಾರಾಳ"ವಾದ ಹಾಗೂ ಉದಾರವಾದ ಲೆಕ್ಕದ ಪ್ರಕಾರ ಐದನೇ ಒಂದು ಪಾಲಿಗೂ ಕಮ್ಮಿ) ಅತ್ಯಂತ ಸಿರಿವಂತ ವಾದ ಹಾಗೂ ಪ್ರಬಲವಾದ ರಾಜ್ಯಗಳನ್ನು ಪ್ರತ್ಯೇಕಗೊಳಿಸಿ ಇರಿಸಿದೆ. ಈ ರಾಜ್ಯ ಗಳು ಇಡೀ ಜಗತ್ತನ್ನು ಕೇವಲ ಷೇರುಗಳ "ಕೂಪನ್ನುಗಳನ್ನು ಕತ್ತರಿಸುವ" ಮೂಲಕ

ಸೂರೆಗಯ್ಯುತ್ತಿವೆ. ಯುದ್ಧ ಮುನ್ನಿನ ಬೆಲೆಗಳ ಪ್ರಕಾರ ಮತ್ತು ಯುದ್ಧ ಮುನ್ನಿನ ಬೂರ್ಷ್ವಾ ಅಂಕಿಅಂಶಗಳ ಪ್ರಕಾರ ಈ ದೇಶಗಳು ಬಂಡವಾಳವನ್ನು ರಫ್ತು ಮಾಡುವುದರಿಂದಲೇ ಪ್ರತಿವರ್ಷವೂ ಎಂಟರಿಂದ ಹತ್ತು ಬಿಲಿಯನ್ ಫ್ರಾಂಕ್‌ಗಳಷ್ಟು ವರಮಾನ ಪಡೆಯುತ್ತಿದ್ದವು. ಈಗ ಇದು ಇನ್ನೂ ಹೆಚ್ಚಾಗಿದೆಯೆನ್ನಿ.

ಸ್ಪಷ್ಟವಾಗಿಯೇ, ಇಂಥ ಅಪಾರ ಅಧಿಕ ಲಾಭಗಳನ್ನು ಉಪಯೋಗಿಸಿಕೊಂಡು (ಅಪಾರ ಏಕೆಂದರೆ, ಇವನ್ನು ಬಂಡವಾಳಗಾರರು ತಮ್ಮ "ಸ್ವಂತ" ದೇಶದಲ್ಲೇ ಕಾರ್ಮಿಕರಿಂದ ಹಿಂಡಿ ಹೊರತೆಗೆಯುವ ಲಾಭಗಳಿಗೂ ಮಿಗಿಲಾಗಿ, ಅವುಗಳಿಗೂ ಮೇಲೆ, ಪಡೆದುಕೊಳ್ಳುತ್ತಿದ್ದಾರೆ) ಕಾರ್ಮಿಕ ನಾಯಕರನ್ನೂ ಕಾರ್ಮಿಕ ಶ್ರೀಮಂತಶಾಹಿಯ ಮೇಲ್‌ಸ್ತರದ ಜನರನ್ನೂ ಕೊಂಡುಕೊಳ್ಳುವುದು ಸಾಧ್ಯ. "ಮುಂದುವರಿದ" ದೇಶಗಳ ಬಂಡವಾಳಗಾರರು ಮಾಡುತ್ತಿರುವುದು ಸರಿಯಾಗಿ ಇದನ್ನೇ. ಅವರು ಇದನ್ನು ಸಾವಿರಾರು ಬೇರೆಬೇರೆ ರೀತಿಗಳಲ್ಲಿ ಮಾಡುತ್ತಿದ್ದಾರೆ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ, ಬಹಿರಂಗವಾಗಿ ಹಾಗೂ ರಹಸ್ಯವಾಗಿ ಮಾಡುತ್ತಿದ್ದಾರೆ.

ಬೂರ್ಷ್ವಾಸೀಕೃತ ಕಾರ್ಮಿಕರ ಈ ಸ್ತರವು, ಅಥವಾ "ಕಾರ್ಮಿಕ ಶ್ರೀಮಂತರು," ತಮ್ಮ ಜೀವನ ವಿಧಾನದಲ್ಲೂ ಸಂಪಾದನೆಯ ಪ್ರಮಾಣದಲ್ಲೂ ತಮ್ಮ ಇಡೀ ಮನೋಧರ್ಮದಲ್ಲೂ ಸಂಪೂರ್ಣವಾಗಿ ಸಂಕುಚಿತಮತಿಗಳಾಗಿರುವ ಇವರು, ದ್ವಿತೀಯ ಇಂಟರ್‌ನ್ಯಾಷನಲ್‌ನ ಪ್ರಧಾನ ಬೆನ್ನೆಲುಬಾಗಿದ್ದಾರೆ ಮತ್ತು ನಮ್ಮ ದಿನಗಳಲ್ಲಿ ಬೂರ್ಷ್ವಾಸೀಯ ಪ್ರಧಾನ ಸಾಮಾಜಿಕ (ಮಿಲಿಟರಿ ಅಲ್ಲ) ಬೆನ್ನೆಲುಬಾಗಿದ್ದಾರೆ. ಏಕೆಂದರೆ ಇವರೇ ಕಾರ್ಮಿಕ ವರ್ಗ ಚಳವಳಿಯಲ್ಲಿ ಬೂರ್ಷ್ವಾಸೀಯ ನಿಜವಾದ ಏಜೆಂಟರಾಗಿದ್ದಾರೆ, ಬಂಡವಾಳಶಾಹಿ ವರ್ಗದ ಕಾರ್ಮಿಕ ಪ್ರತಿನಿಧಿಗಳಾಗಿದ್ದಾರೆ (labour lieutenants of the capitalists class), ಸುಧಾರಣಾವಾದ ಹಾಗೂ ಸ್ವದೇಶ ಮೂಢಾಭಿಮಾನದ ನಿಜವಾದ ವಾಹಕರಾಗಿದ್ದಾರೆ. ಶ್ರಮಜೀವಿ ವರ್ಗಕ್ಕೂ ಬೂರ್ಷ್ವಾಸೀಗೂ ನಡುವಿನ ಅಂತರ್ಯುದ್ಧದಲ್ಲಿ ಇವರು ಅನಿವಾರ್ಯವಾಗಿಯೇ ಮತ್ತು ಕಮ್ಮಿ ಸಂಖ್ಯೆಯಲ್ಲೇನೂ ಅಲ್ಲದೆ, ಬೂರ್ಷ್ವಾಸೀಯ ಪಕ್ಷ ವಹಿಸುತ್ತಾರೆ – "ಕಮ್ಯೂನಾರ್ಡ್"ರ ವಿರುದ್ಧ "ವೆರ್ಸೈಲ್ಸ್" ಬೆಂಬಲಿಗರಂ[15]ತೆ.

ಈ ಘಟನೆಯ ಆರ್ಥಿಕ ಬೇರುಗಳನ್ನು ಅರ್ಥಮಾಡಿಕೊಳ್ಳದೆ ಹೋದರೆ ಮತ್ತು ಇದರ ರಾಜಕೀಯ ಹಾಗೂ ಸಾಮಾಜಿಕ ಪ್ರಾಮುಖ್ಯವನ್ನು ಗುರುತಿಸದೆ ಹೋದರೆ, ಕಮ್ಯೂನಿಸ್ಟ್ ಚಳವಳಿಯ ಹಾಗೂ ಆಸನ್ನವಾಗಿರುವ ಸಾಮಾಜಿಕ ಕ್ರಾಂತಿಯ ಪ್ರಾಯೋಗಿಕ ಸಮಸ್ಯೆಗಳ ಪರಿಹಾರದತ್ತ ಒಂದು ಹೆಜ್ಜೆಯನ್ನೂ ಇಡಲು ಸಾಧ್ಯವಿಲ್ಲ.

ಸಾಮ್ರಾಜ್ಯವಾದವು ಶ್ರಮಜೀವಿ ವರ್ಗದ ಸಾಮಾಜಿಕ ಕ್ರಾಂತಿಯ ಮುನ್ನಾಕಾಲವಾಗಿದೆ. ಇದು 1917ರಿಂದೀಚೆಗೆ ವಿಶ್ವವ್ಯಾಪಿ ಪ್ರಮಾಣದಲ್ಲಿ ಸಮರ್ಥಿತವಾಗಿದೆ.

ಜುಲೈ 6, 1920

ಎನ್. ಲೆನಿನ್

ಕಳೆದ ಹದಿನೈದು-ಇಪ್ಪತ್ತು ವರ್ಷಗಳಲ್ಲಿ, ಅದರಲ್ಲೂ ಸ್ಪಾನಿಷ್-ಅಮೆರಿಕನ್ ಯುದ್ಧ (1898)[16] ಹಾಗೂ ಆಂಗ್ಲೋ-ಬೋಯರ್ ಯುದ್ಧ(1899-1902)[17] ಗಳಾದಂದಿನಿಂದ ವಿಶೇಷವಾಗಿ, ಎರಡೂ ಗೋಳಾರ್ಧಗಳ ಆರ್ಥಿಕವಷ್ಟೆ ಅಲ್ಲ ರಾಜಕೀಯ ಸಾಹಿತ್ಯವೂ ಕೂಡ ಇಂದಿನ ಯುಗವನ್ನು ವರ್ಣಿಸಲು "ಸಾಮ್ರಾಜ್ಯವಾದ" ಎಂಬ ಪದವನ್ನು ಆಗಾಗ್ಗೆ ಹೆಚ್ಚು ಹೆಚ್ಚಾಗಿ ಉಪಯೋಗಿಸಿದೆ. 1902ರಲ್ಲಿ ಇಂಗ್ಲಿಷ್ ಅರ್ಥಶಾಸ್ತ್ರಜ್ಞ ಜೆ. ಎ. ಹಾಬ್ಸನ್‌ರ 'ಸಾಮ್ರಾಜ್ಯವಾದ' ಎಂಬ ಗ್ರಂಥವೊಂದು ಲಂಡನ್ ಹಾಗೂ ನ್ಯೂಯಾರ್ಕ್‌ಗಳಲ್ಲಿ ಪ್ರಕಟವಾಯಿತು. ಈ ಗ್ರಂಥಕರ್ತೃ – ಇವರ ದೃಷ್ಟಿಕೋನವು ಮಾಜಿ ಮಾರ್ಕ್ಸ್‌ವಾದಿ ಕೆ. ಕೌತ್‌ಸ್ಕಿಯವರ ಈಗಿನ ದೃಷ್ಟಿಕೋನಕ್ಕೆ ಸಾರತಃ ಸರಿಸಮನಾದಂಥ ಬೂರ್ಷ್ವಾ ಸಾಮಾಜಿಕ ಸುಧಾರಣಾವಾದ ಹಾಗೂ ಸಾಂತ್ವಸವಾದದ ದೃಷ್ಟಿಕೋನವಾಗಿದೆ – ಸಾಮ್ರಾಜ್ಯವಾದದ ಪ್ರಧಾನ ವಿಶಿಷ್ಟ ಆರ್ಥಿಕ ಹಾಗೂ ರಾಜಕೀಯ ಲಕ್ಷಣಗಳ ಅತ್ಯುತ್ತಮವಾದ ಹಾಗೂ ಸಮಗ್ರವಾದ ವಿವರಣೆಯನ್ನು ನೀಡುತ್ತಾರೆ. 1910ರಲ್ಲಿ ವಿಯೆನ್ನಾದಲ್ಲಿ ಆಸ್ಟ್ರಿಯಾದ ಮಾರ್ಕ್ಸ್‌ವಾದಿ ರುಡೋಲ್ಫ್ ಹಿಲ್ಫೆರ್ಡಿಂಗ್‌ರವರ 'ಹಣಕಾಸು ಬಂಡವಾಳ' (ರಷ್ಯನ್ ಆವೃತ್ತಿ: ಮಾಸ್ಕೋ, 1912) ಎಂಬ ಕೃತಿಯೊಂದು ಕಾಣಿಸಿಕೊಂಡಿತು. ಈ ಗ್ರಂಥಕರ್ತೃವು ಹಣದ ಸಿದ್ಧಾಂತಕ್ಕೆ ಸಂಬಂಧಿಸಿ ತಪ್ಪು ಮಾಡಿದರೂ, ಮಾರ್ಕ್ಸ್‌ವಾದವನ್ನು ಸಂದರ್ಭ ಸಾಧಕವಾದದೊಂದಿಗೆ ರಾಜಿ ಮಾಡಿಸುವ ಒಂದು ರೀತಿಯ ಮನೋಒಲವನ್ನು ಹೊಂದಿದ್ದರೂ, ಈ ಕೃತಿಯು ಅದರ ಉಪಶೀರ್ಷಿಕೆ ಹೇಳುವಂತೆ, "ಬಂಡವಾಳಶಾಹಿ ಬೆಳವಣಿಗೆಯ ಇತ್ತೀಚಿನ ಮಜಲಿನ" ಅತ್ಯಮೂಲ್ಯ ಸೈದ್ಧಾಂತಿಕ ವಿಶ್ಲೇಷಣೆಯನ್ನು ನೀಡುತ್ತದೆ. ನಿಜಕ್ಕೂ, ಕಳೆದ ಕೆಲವು ವರ್ಷಗಳಲ್ಲಿ, ವಿಶೇಷವಾಗಿ ಅಪಾರ ಸಂಖ್ಯೆಯ ವೃತ್ತಪತ್ರಿಕೆ ಹಾಗೂ ನಿಯತಕಾಲಿಕಗಳ ಲೇಖನಗಳಲ್ಲಿ ಮತ್ತು ನಿರ್ಣಯಗಳಲ್ಲೂ ಸಹ – ಉದಾಹರಣೆಗೆ, 1912ರ ಶರತ್ಕಾಲದಲ್ಲಿ ಜರುಗಿದ ಹೆಮ್ನಿತ್ಸ್[18] ಹಾಗೂ ಬಾಸೆಲ್ ಮಹಾಧಿವೇಶನಗಳ ನಿರ್ಣಯಗಳಲ್ಲಿ – ಸಾಮ್ರಾಜ್ಯವಾದದ ಬಗೆಗೆ ಏನನ್ನು ಹೇಳಲಾಗಿದೆಯೋ ಅದು ಮೇಲೆ ನಮೂದಿಸಿದ ಇಬ್ಬರು ಲೇಖಕರು ವಿವರಿಸಿದ,

ಅಥವಾ ಹೆಚ್ಚು ನಿಷ್ಕೃಷ್ಟವಾಗಿ ಹೇಳುವುದಾದರೆ, ಕ್ರೋಡೀಕರಿಸಿದ ವಿಚಾರಗಳಿಗಿಂತ ಎಷ್ಟು ಮಾತ್ರವೂ ಮುಂದೆ ಹೋಗಿಲ್ಲ....

ಸಾಮ್ರಾಜ್ಯವಾದದ ಪ್ರಧಾನ ಆರ್ಥಿಕ ಲಕ್ಷಣಗಳ ನಡುವೆ ಇರುವ ಸಂಬಂಧ ಹಾಗೂ ಪರಸ್ಪರ ಪ್ರತಿಕ್ರಿಯೆಗಳನ್ನು ಮುಂದೆ ಸಾಧ್ಯವಾದಷ್ಟೂ ಸರಳವಾಗಿ ಹಾಗೂ ಸ್ಥೂಲವಾಗಿ ತಿಳಿಸಲು ನಾವು ಯತ್ನಿಸುವೆವು. ಆದರೆ ಈ ಪ್ರಶ್ನೆಯ ಆರ್ಥಿಕವಲ್ಲದ ಸ್ವರೂಪಗಳನ್ನು ವಿವೇಚಿಸುವುದು ಎಷ್ಟೇ ಉಚಿತವಾದರೂ ನಾವು ಅವನ್ನು ಇಲ್ಲಿ ಪರಿಶೀಲಿಸಲಾರೆವು. ಓದುಗರೆಲ್ಲರಿಗೂ ಅಷ್ಟೇನೂ ಆಸಕ್ತಿಕರವಲ್ಲದಂಥ ಸಾಹಿತ್ಯಿಕ ಉಲ್ಲೇಖಗಳನ್ನೂ ಇತರ ಟಿಪ್ಪಣಿಗಳನ್ನೂ ನಾವು ಈ ಹೊತ್ತಗೆಯ ಕೊನೆಯಲ್ಲಿ ನೀಡುವೆವು.[19]

# I. ಉತ್ಪಾದನೆಯ ಕೇಂದ್ರೀಕರಣ ಹಾಗೂ ಏಕಸ್ವಾಮ್ಯ ಸಂಸ್ಥೆಗಳು

ಕೈಗಾರಿಕೆಯು ಅಪಾರ ಪ್ರಮಾಣದಲ್ಲಿ ಬೆಳೆಯುವುದೂ, ಉತ್ಪಾದನೆಯು ಸತತ ವಾಗಿ ಹೆಚ್ಚು ಹೆಚ್ಚು ದೊಡ್ಡದಾದ ಉದ್ಯಮಗಳಲ್ಲಿ ಕೇಂದ್ರಗೊಳ್ಳುವ ಪ್ರಕ್ರಿಯೆಯು ಅದ್ಭುತ ಶೀಘ್ರ ಗತಿಯಲ್ಲಿ ಜರುಗುವುದೂ, ಬಂಡವಾಳವಾದದ ಅತ್ಯಂತ ವಿಶಿಷ್ಟ ಲಕ್ಷಣಗಳಲ್ಲೊಂದಾಗಿದೆ. ಉತ್ಪಾದನೆಯ ಆಧುನಿಕ ಗಣತಿಗಳು ಈ ಪ್ರಕ್ರಿಯೆಗೆ ಸಂಬಂಧಿಸಿ ಅತ್ಯಂತ ಪೂರ್ಣವಾದ ಹಾಗೂ ಅತ್ಯಂತ ನಿಷ್ಕೃಷ್ಟವಾದ ಮಾಹಿತಿ ಗಳನ್ನು ಒದಗಿಸುತ್ತವೆ.

ಉದಾಹರಣೆಗೆ, ಜರ್ಮನಿಯಲ್ಲಿ ಪ್ರತಿ 1,000 ಕೈಗಾರಿಕೋದ್ಯಮಗಳಲ್ಲಿ ದೊಡ್ಡ ಉದ್ಯಮಗಳು – ಅಂದರೆ, 50ಕ್ಕಿಂತ ಹೆಚ್ಚು ಕಾರ್ಮಿಕರನ್ನು ಕೆಲಸಕ್ಕಿರಿಸಿಕೊಂಡಿರು ವುವು – 1882ರಲ್ಲಿ ಮೂರು; 1895ರಲ್ಲಿ ಆರು, 1907ರಲ್ಲಿ ಒಂಬತ್ತು, ಇದ್ದವು. ಒಟ್ಟು ದೇಶದಲ್ಲಿ ಕೆಲಸದಲ್ಲಿದ್ದ ಪ್ರತಿ ನೂರು ಕಾರ್ಮಿಕರಲ್ಲಿ ಈ ವೃಂದದ ಉದ್ಯಮ ಗಳು ಅನುಕ್ರಮವಾಗಿ 22, 30 ಹಾಗೂ 37 ಕಾರ್ಮಿಕರನ್ನು ನೇಮಿಸಿಕೊಂಡಿದ್ದವು. ಆದರೆ ಉತ್ಪಾದನೆಯ ಕೇಂದ್ರೀಕರಣವು ಕಾರ್ಮಿಕರ ಕೇಂದ್ರೀಕರಣಕ್ಕಿಂತ ಹೆಚ್ಚು ತೀವ್ರವಾಗಿರುತ್ತದೆ, ಏಕೆಂದರೆ ಶ್ರಮವು ದೊಡ್ಡ ಉದ್ಯಮಗಳಲ್ಲಿ ಹೆಚ್ಚು ಉತ್ಪಾದಕ ವಾಗಿರುತ್ತದೆ. ಉಗಿ ಎಂಜಿನ್ನುಗಳಿಗೂ ವಿದ್ಯುತ್ ಮೋಟಾರುಗಳಿಗೂ ಸಂಬಂಧಿ ಸಿದ ಸಂಖ್ಯೆಗಳು ಇದನ್ನು ತೋರಿಸುತ್ತವೆ. ಜರ್ಮನಿಯಲ್ಲಿ ಯಾವುದನ್ನು ವಿಶಾಲಾರ್ಥ ದಲ್ಲಿ ಕೈಗಾರಿಕೆ ಎಂದು ಕರೆಯಲಾಗುತ್ತದೋ ಅದನ್ನು ತೆಗೆದುಕೊಂಡರೆ, ಅಂದರೆ ವಾಣಿಜ್ಯ, ಸಾರಿಗೆ ಇತ್ಯಾದಿಗಳನ್ನೂ ಒಳಗೊಳ್ಳುವಂತೆ ತೆಗೆದುಕೊಂಡರೆ, ನಮಗೆ ಕೆಳಗಿನ ಚಿತ್ರ ಲಭಿಸುತ್ತದೆ: ಒಟ್ಟು 3,265,623 ಉದ್ಯಮಗಳಲ್ಲಿ ವಿಸ್ತೃತ ಪ್ರಮಾ ಣದ ಉದ್ಯಮಗಳ ಸಂಖ್ಯೆ 30,588, ಅಂದರೆ ಶೇ. 0.9. ಒಟ್ಟು 14,400,000

2*

ಕಾರ್ಮಿಕರಲ್ಲಿ ಈ ಉದ್ಯಮಗಳು 5,700,000 ಕಾರ್ಮಿಕರನ್ನು ಕೆಲಸಕ್ಕಿರಿಸಿಕೊಂಡಿವೆ, ಅಂದರೆ ಶೇ. 39.4; ಒಟ್ಟು 8,800,000 ಉಗಿ ಯಂತ್ರಗಳ ಅಶ್ವಶಕ್ತಿಯಲ್ಲಿ ಇವು 6,600,000 ಉಗಿ ಯಂತ್ರಗಳ ಅಶ್ವಶಕ್ತಿಯನ್ನು ಬಳಸಿಕೊಳ್ಳುತ್ತಿವೆ, ಅಂದರೆ ಶೇ. 75.3. ಒಟ್ಟು 1,500,000 ಕಿಲೋವ್ಯಾಟ್ ವಿದ್ಯುಚ್ಛಕ್ತಿಯಲ್ಲಿ ಇವು 1,200,000 ಕಿಲೋವ್ಯಾಟ್ ವಿದ್ಯುಚ್ಛಕ್ತಿಯನ್ನು ಬಳಸಿಕೊಳ್ಳುತ್ತಿವೆ, ಅಂದರೆ ಶೇ. 77.2.

ಒಟ್ಟು ಉದ್ಯಮಗಳಲ್ಲಿ ನೂರನೇ ಒಂದು ಪಾಲಿಗೂ ಕಮ್ಮಿ ಉದ್ಯಮಗಳು ಒಟ್ಟು ಉಗಿ ಹಾಗೂ ವಿದ್ಯುಚ್ಛಕ್ತಿಯ ಮುಕ್ಕಾಲು ಪಾಲಿಗೂ ಹೆಚ್ಚು ಪ್ರಮಾಣವನ್ನು ತಾವೇ ಬಳಸುತ್ತಿವೆ! ಒಟ್ಟು ಉದ್ಯಮಗಳಲ್ಲಿ ಶೇ. 91ರಷ್ಟಾಗುವ ಇಪ್ಪತ್ತೊಂಬತ್ತು ಲಕ್ಷ ಎಪ್ಪತ್ತು ಸಾವಿರ ಪುಟ್ಟ ಉದ್ಯಮಗಳು (ಐದು ಮಂದಿ ಕಾರ್ಮಿಕರವರೆಗೂ ಕೆಲಸಕ್ಕಿರಿಸಿಕೊಂಡಂಥವು) ಒಟ್ಟು ಉಗಿ ಹಾಗೂ ವಿದ್ಯುಚ್ಛಕ್ತಿಯಲ್ಲಿ ಶೇ. 7ರಷ್ಟು ಮಾತ್ರ ಬಳಸುತ್ತಿವೆ! ಹತ್ತಾರು ಸಾವಿರ ದೊಡ್ಡ ಉದ್ಯಮಗಳೇ ಸರ್ವೋತ್ಕೃಷ್ಟ; ಮಿಲಿಯಾಂತರ ಪುಟ್ಟ ಉದ್ಯಮಗಳು ನಿಕೃಷ್ಟ.

1907ರಲ್ಲಿ ಜರ್ಮನಿಯಲ್ಲಿ ಒಂದು ಸಾವಿರ ಮತ್ತು ಅದಕ್ಕೂ ಹೆಚ್ಚು ಕಾರ್ಮಿಕರನ್ನು ಕೆಲಸಕ್ಕಿರಿಸಿಕೊಂಡಿದ್ದ 586 ಯಂತ್ರಸಂಸ್ಥೆಗಳಿದ್ದವು. ಇವು ಕೈಗಾರಿಕೆಯಲ್ಲಿ ಕೆಲಸಕ್ಕಿದ್ದ ಕಾರ್ಮಿಕರ ಒಟ್ಟು ಸಂಖ್ಯೆಯಲ್ಲಿ ಸುಮಾರು ಹತ್ತನೇ ಒಂದು ಪಾಲಿನಷ್ಟು (1,380,000) ಕಾರ್ಮಿಕರನ್ನು ತಾವೇ ನೇಮಿಸಿಕೊಂಡಿದ್ದವು. ಇವು ಒಟ್ಟು ಉಗಿ ಹಾಗೂ ವಿದ್ಯುಚ್ಛಕ್ತಿಯ ಬಹುಮಟ್ಟಿಗೆ ಮೂರನೇ ಒಂದು ಪಾಲನ್ನು (ಶೇ. 32) ತಾವೇ ಉಪಯೋಗಿಸಿದವು.* ನಾವು ಮುಂದೆ ನೋಡಲಿರುವಂತೆ, ಹಣಕಾಸು ಬಂಡವಾಳವೂ ಬ್ಯಾಂಕುಗಳೂ ಈ ಕೆಲವೇ ಅತಿ ದೊಡ್ಡ ಉದ್ಯಮಗಳ ಉಚ್ಚತೆಯನ್ನು ಅಕ್ಷರಶಃ ಇನ್ನಷ್ಟು ಮಿತಿಮೀರಿದುದನ್ನಾಗಿ ಮಾಡುತ್ತವೆ, ಅಂದರೆ, ಮಿಲಿಯಾಂತರ ಪುಟ್ಟ, ಮಧ್ಯಮ ಹಾಗೂ ಕೆಲವು ದೊಡ್ಡ "ಒಡೆಯರೂ" ಸಹ, ವಾಸ್ತವವಾಗಿ ಕೆಲವು ನೂರು ಲಕ್ಷಾಧೀಶ ಧನಾಧಿಪತಿಗಳಿಗೆ ಸಂಪೂರ್ಣವಾಗಿ ಅಧೀನರಾಗಿರುತ್ತಾರೆ.

ಆಧುನಿಕ ಬಂಡವಾಳವಾದದ ಇನ್ನೊಂದು ಮುಂದುವರಿದ ದೇಶ, ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ, ಉತ್ಪಾದನೆಯ ಕೇಂದ್ರೀಕರಣದ ಬೆಳವಣಿಗೆಯು ಇನ್ನೂ ಹೆಚ್ಚು ಪ್ರಬಲವಾಗಿದೆ. ಇಲ್ಲಿ ಅಂಕಿಅಂಶಗಳು ಕೈಗಾರಿಕೆಯನ್ನು ಪದದ ಸಂಕುಚಿತ ಅರ್ಥದಲ್ಲಿ ಗಮನಿಸುತ್ತವೆ ಮತ್ತು ಉದ್ಯಮಗಳನ್ನು ಅವುಗಳ ವಾರ್ಷಿಕ ಹುಟ್ಟು

---

* ಈ ಸಂಖ್ಯೆಗಳನ್ನು *Annalen des deutschen Reichs*, 1911, Zahn ('ಜರ್ಮನ್ ರಾಜ್ಯ ಚರಿತ್ರ ಲೇಖನಗಳು,' 1911, ತ್ಸಾಹ್ನ್. – ಸಂ.)ನಿಂದ ತೆಗೆದುಕೊಳ್ಳಲಾಗಿದೆ.

ವಳಿಯ ಮೌಲ್ಯಕ್ಕನುಗುಣವಾಗಿ ವರ್ಗೀಕರಿಸುತ್ತವೆ. 1904ರಲ್ಲಿ ಒಂದು ಮಿಲಿಯ ಡಾಲರ್ ಮತ್ತು ಅದಕ್ಕೂ ಹೆಚ್ಚಿನ ಹುಟ್ಟುವಳಿಯುಳ್ಳ ಭಾರಿ ಉದ್ಯಮಗಳು 1900 ಇದ್ದವು (ಒಟ್ಟು 216,180ರಲ್ಲಿ, ಅಂದರೆ ಶೇ. 0.9). ಇವು 14 ಲಕ್ಷ ಕಾರ್ಮಿಕರನ್ನು (ಒಟ್ಟು 55 ಲಕ್ಷದಲ್ಲಿ, ಅಂದರೆ ಶೇ. 25.6) ಕೆಲಸಕ್ಕಿರಿಸಿಕೊಂಡಿದ್ದವು. ಅವುಗಳ ಹುಟ್ಟುವಳಿ 5,600 ಮಿಲಿಯ ಡಾಲರ್ (ಒಟ್ಟು ಹುಟ್ಟುವಳಿ 14,800 ಮಿಲಿಯ ಡಾಲರ್‌ಗಳಲ್ಲಿ, ಅಂದರೆ ಶೇ. 38) ಆಗಿದ್ದಿತು. ಐದು ವರ್ಷಗಳನಂತರ, 1909ರಲ್ಲಿ, ಅನುಗುಣವಾದ ಸಂಖ್ಯೆಗಳು ಹೀಗಿದ್ದವು: 3,060 ಉದ್ಯಮಗಳು (ಒಟ್ಟು 268,491ರಲ್ಲಿ, ಅಂದರೆ ಶೇ. 1.1), ಕಾರ್ಮಿಕರು 20 ಲಕ್ಷ (ಒಟ್ಟು 66 ಲಕ್ಷದಲ್ಲಿ, ಅಂದರೆ ಶೇ. 30.5), ಹುಟ್ಟುವಳಿ 9,000 ಮಿಲಿಯ ಡಾಲರ್ (ಒಟ್ಟು 20,700 ಮಿಲಿಯ ಡಾಲರ್‌ಗಳಲ್ಲಿ, ಅಂದರೆ ಶೇ. 43.8). *

ದೇಶದ ಎಲ್ಲ ಉದ್ಯಮಗಳ ಒಟ್ಟು ಉತ್ಪಾದನೆಯಲ್ಲಿ ಬಹುಮಟ್ಟಿಗೆ ಅರ್ಧ ಭಾಗವನ್ನು ಈ ಉದ್ಯಮಗಳ ನೂರನೇ ಒಂದು ಭಾಗವೇ ನೆರವೇರಿಸಿದೆ! ಈ 3,000 ಬೃಹತ್ ಉದ್ಯಮಗಳು ಕೈಗಾರಿಕೆಯ 258 ಶಾಖೆಗಳನ್ನು ಆವರಿಸಿವೆ. ಬೆಳವಣಿಗೆಯ ಒಂದು ನಿಶ್ಚಿತ ಘಟ್ಟದಲ್ಲಿ ಕೇಂದ್ರೀಕರಣವೇ ಏಕಸ್ವಾಮ್ಯಕ್ಕೆ ನೇರವಾಗಿ ದಾರಿ ಮಾಡಿ ಕೊಡುತ್ತದೆಂಬುದನ್ನು, ಇದರಿಂದ ಕಂಡುಕೊಳ್ಳಬಹುದು; ಏಕೆಂದರೆ, ಹತ್ತಾರು ಬೃಹತ್ ಉದ್ಯಮಗಳು ಬಹು ಸುಲಭವಾಗಿ ತಮ್ಮ ಮಧ್ಯೆ ಒಪ್ಪಂದ ಏರ್ಪಡಿಸಿ ಕೊಳ್ಳಬಹುದು; ಆದರೆ ಮತ್ತೊಂದು ಕಡೆ, ಈ ಉದ್ಯಮಗಳ ಬೃಹತ್ ಪ್ರಮಾಣ ಗಳಿಂದಾಗಿಯೇ ಸ್ಪರ್ಧೆಗೆ ಅಡಚಣೆ ಉಂಟಾಗುತ್ತದೆ, ಏಕಸ್ವಾಮ್ಯ ಪ್ರವೃತ್ತಿ ಉದ್ಭ ವಿಸುತ್ತದೆ. ಸ್ಪರ್ಧೆಯು ಏಕಸ್ವಾಮ್ಯವಾಗಿ ಆಗುವ ಪರಿವರ್ತನೆಯು ಆಧುನಿಕ ಬಂಡವಾಳಶಾಹಿ ಆರ್ಥಿಕತೆಯ ಅತ್ಯಂತ ಮುಖ್ಯ ಘಟನೆಯಲ್ಲದಿದ್ದರೂ, ಅತ್ಯಂತ ಮುಖ್ಯ ಘಟನೆಗಳಲ್ಲೊಂದಾಗಿದೆ. ಇದನ್ನು ನಾವು ಹೆಚ್ಚು ವಿವರವಾಗಿ ಪರಿಶೀಲಿಸ ಬೇಕು. ಆದರೆ ಅದಕ್ಕೆ ಮುಂಚೆ ನಾವು ಸಂಭವನೀಯವಾದ ಒಂದು ತಪ್ಪು ತಿಳಿವಳಿಕೆ ಯನ್ನು ಹೋಗಲಾಡಿಸಬೇಕು.

ಅಮೆರಿಕನ್ ಅಂಕಿಅಂಶಗಳು, ಕೈಗಾರಿಕೆಯ 250 ಶಾಖೆಗಳಲ್ಲಿ 3,000 ಬೃಹತ್ ಉದ್ಯಮಗಳು, ಎಂದು ಹೇಳುತ್ತವೆ – ಕೈಗಾರಿಕೆಯ ಒಂದೊಂದೂ ಶಾಖೆಯಲ್ಲಿ ಕೇವಲ ಒಂದು ಡಜನ್ ಬೃಹತ್ ಪ್ರಮಾಣದ ಉದ್ಯಮಗಳಿದ್ದವೇನೋ ಎಂಬಂತೆ.

ಆದರೆ ವಸ್ತುಸ್ಥಿತಿ ಇದಲ್ಲ. ಕೈಗಾರಿಕೆಯ ಪ್ರತಿಯೊಂದು ಶಾಖೆಯಲ್ಲೂ ಬೃಹತ್ ಪ್ರಮಾಣದ ಉದ್ಯಮಗಳಿಲ್ಲ. ಅಷ್ಟೇ ಅಲ್ಲ, ಬಂಡವಾಳವಾದದ ಬೆಳವಣಿಗೆಯ ಅತ್ಯುನ್ನತ ಘಟ್ಟದ ಒಂದು ಅತ್ಯಂತ ಮುಖ್ಯ ಲಕ್ಷಣವೆಂದರೆ, ಉತ್ಪಾದನೆಯ ಸಂಯೋ

---

*Statistical Abstract of the United States*, 1912, p. 202 ('ಸಂಯುಕ್ತ ಸಂಸ್ಥಾನಗಳ ಅಂಕಿಅಂಶ ಗೋಷ್ವಾರೆ,' 1912, ಪು. 202. –ಸಂ.).

ಜನೆ ಎನ್ನುವಂತಹುದು, ಅಂದರೆ, ಕೈಗಾರಿಕೆಯ ವಿವಿಧ ಶಾಖೆಗಳನ್ನು ಒಂದೇ ಉದ್ಯಮ ದಲ್ಲಿ ಸಂಯೋಜಿಸುವುದು. ಈ ವಿವಿಧ ಶಾಖೆಗಳು ಕಚ್ಚಾ ಪದಾರ್ಥಗಳನ್ನು ಪರಿಷ್ಕರಿಸುವುದರಲ್ಲಿ ಅನುಕ್ರಮಿಕ ಘಟ್ಟಗಳಾಗಿರಬಹುದು (ಉದಾಹರಣೆಗೆ, ಕಬ್ಬಿಣದ ಅದುರನ್ನು ಬೀಡು ಕಬ್ಬಿಣವನ್ನಾಗಿ ಕರಗಿಸುವುದು, ಬೀಡು ಕಬ್ಬಿಣವನ್ನು ಉಕ್ಕನ್ನಾಗಿ ಪರಿವರ್ತಿಸುವುದು, ಅನಂತರ, ಬಹುಶಃ ಉಕ್ಕಿನ ಪದಾರ್ಥಗಳನ್ನು ತಯಾರಿಸುವುದು); ಅಥವಾ ಅವು ಪರಸ್ಪರ ಸಹಾಯಕ ಶಾಖೆಗಳಾಗಿರಬಹುದು (ಉದಾಹರಣೆಗೆ, ನಿರುಪಯುಕ್ತ ವಸ್ತುಗಳನ್ನು ಮತ್ತು ಉಪಉತ್ಪನ್ನಗಳನ್ನು ಪರಿಷ್ಕರಿಸುವ ಶಾಖೆಗಳು, ಪ್ಯಾಕಿಂಗ್ ಸಾಮಗ್ರಿಗಳನ್ನು ತಯಾರಿಸುವ ಶಾಖೆಗಳು, ಇತ್ಯಾದಿ).

"ಸಂಯೋಜನೆಯು ವ್ಯಾಪಾರದಲ್ಲಾಗುವ ಏರುಪೇರುಗಳನ್ನು ಸಮಮಟ್ಟಕ್ಕೆ ತರುತ್ತದೆ ಮತ್ತು ಅದರಿಂದಾಗಿ ಸಂಯೋಜಿತ ಉದ್ಯಮಗಳಿಗೆ ಹೆಚ್ಚು ಸ್ಥಿರವಾದ ಲಾಭದ ದರವನ್ನು ಖಚಿತಪಡಿಸಿಕೊಡುತ್ತದೆ" ಎಂದು ಹಿಲ್ಫೆರ್ಡಿಂಗ್ ಬರೆಯುತ್ತಾರೆ. "ಎರಡನೆಯದಾಗಿ, ಸಂಯೋಜನೆಯು ವ್ಯಾಪಾರವನ್ನು ತೊಲಗಿಸುವ ಪರಿಣಾಮವನ್ನು ಹೊಂದಿರುತ್ತದೆ. ಮೂರನೆಯದಾಗಿ, ಅದು ತಾಂತ್ರಿಕ ಸುಧಾರಣೆಗಳನ್ನು ಸಾಧ್ಯಮಾಡಿಕೊಡುವ, ತತ್ಫಲವಾಗಿ "ಶುದ್ಧ" (ಅಂದರೆ, ಸಂಯೋಜಿತವಲ್ಲದ) ಉದ್ಯಮಗಳು ಪಡೆಯುವ ಲಾಭಕ್ಕೂ ಮೀರಿ ಅಧಿಕಾಧಿಕ ಲಾಭ ಪಡೆಯುವುದನ್ನು ಸಾಧ್ಯವಾಡಿಕೊಡುವ, ಪರಿಣಾಮವನ್ನು ಹೊಂದಿರುತ್ತದೆ. ನಾಲ್ಕನೆಯದಾಗಿ, ಇದು "ಶುದ್ಧ" ಉದ್ಯಮಗಳಿಗೆ ಹೋಲಿಸಿದಂತೆ ಸಂಯೋಜಿತ ಉದ್ಯಮಗಳ ಸ್ಥಾನವನ್ನು ದೃಢಗೊಳಿಸುತ್ತದೆ, ಗಹನವಾದ ಕುಸಿತಗಳ ಕಾಲಾವಧಿಗಳಲ್ಲಿ, ಕಚ್ಚಾ ಪದಾರ್ಥಗಳ ಬೆಲೆಗಳಲ್ಲಿನ ಇಳಿತಾಯವು ತಯಾರಿತ ವಸ್ತುಗಳ ಬೆಲೆಗಳ ಇಳಿತಾಯದೊಂದಿಗೆ ಸರಿಹೆಜ್ಜೆ ಹಾಕಿಕೊಂಡು ಹೋಗದಿದ್ದಾಗ, ನಡೆಯುವ ಸ್ಪರ್ಧಾತ್ಮಕ ಹೋರಾಟದಲ್ಲಿ ಅದು ಸಂಯೋಜಿತ ಉದ್ಯಮಗಳನ್ನು ದೃಢಪಡಿಸುತ್ತದೆ."*

ಜರ್ಮನ್ ಕಬ್ಬಿಣದ ಕೈಗಾರಿಕೆಯಲ್ಲಿ "ಸಮ್ಮಿಶ್ರ," ಅಂದರೆ ಸಂಯೋಜಿತ ಉದ್ಯಮಗಳ ಬಗೆಗೆ ವಿಶೇಷವಾಗಿ ಒಂದು ಗ್ರಂಥವನ್ನು ರಚಿಸಿರುವ ಜರ್ಮನ್ ಬೂರ್ಷ್ವಾ ಅರ್ಥಶಾಸ್ತ್ರಜ್ಞ ಹೈಮನ್ ಹೇಳುತ್ತಾರೆ: "ಶುದ್ಧ ಉದ್ಯಮಗಳು ನಾಶಗೊಳ್ಳುತ್ತವೆ; ಕಚ್ಚಾ ಪದಾರ್ಥದ ಉನ್ನತ ಬೆಲೆ ಹಾಗೂ ತಯಾರಿತ ಉತ್ಪನ್ನದ ತಗ್ಗಿದ ಬೆಲೆ, ಇವುಗಳ ಮಧ್ಯೆ ಸಿಕ್ಕಿಕೊಂಡು ಅವು ನಜ್ಜುಗುಜ್ಜಾಗುತ್ತವೆ." ಹೀಗೆ ನಮ್ಮ ಮುಂದೆ ಈ ಕೆಳಗಿನ ಚಿತ್ರ ಮೂಡುತ್ತದೆ:

"ಒಂದು ಕಡೆ, ವರ್ಷಕ್ಕೆ ಮಿಲಿಯಾಂತರ ಟನ್ನುಗಳಷ್ಟು ಉತ್ಪಾದನೆ ಮಾಡುವ, ಕಲ್ಲಿದ್ದಲು ಸಿಂಡಿಕೇಟ್(ವಾಣಿಜ್ಯ ಸಂಘ)ನಲ್ಲಿ ಪ್ರಬಲವಾಗಿ ಸಂಘಟಿತವಾದ ಭಾರಿ

---

*Finance Capital* ('ಹಣಕಾಸು ಬಂಡವಾಳ'), ರಷ್ಯನ್ ಆವೃತ್ತಿ, ಪು. 286-287.

ಕಲ್ಲಿದ್ದಲಿನ ಕಂಪನಿಗಳು ಇರುತ್ತವೆ; ಮತ್ತೊಂದು ಕಡೆ, ಕಲ್ಲಿದ್ದಲಿನ ಗಣಿಗಳೊಂದಿಗೆ ನಿಕಟವಾಗಿ ಒಂದುಗೂಡಿದ, ತಮ್ಮವೇ ಉಕ್ಕಿನ ಸಿಂಡಿಕೇಟನ್ನು ಹೊಂದಿದ ಭಾರಿ ಉಕ್ಕಿನ ಯಂತ್ರಸ್ಥಾವರಗಳು ಇರುತ್ತವೆ. ವರ್ಷಕ್ಕೆ 400,000 ಟನ್ ಉಕ್ಕು ಉತ್ಪಾದಿಸುವ, ಕಬ್ಬಿಣದ ಅದುರು ಹಾಗೂ ಕಲ್ಲಿದ್ದಲನ್ನು ಪ್ರಚಂಡ ಪ್ರಮಾಣದಲ್ಲಿ ತೆಗೆಯುವ ಹಾಗೂ ಸಿದ್ಧಗೊಂಡ ಉಕ್ಕಿನ ವಸ್ತುಗಳನ್ನು ತಯಾರಿಸುವ ಕಾರ್ಖಾನೆಗಳ ಬಳಿ ನಿರ್ಮಿತವಾದ ವಸತಿ ಕೇಂದ್ರಗಳ ದೊಡ್ಡಿಗಳಂಥ ಮನೆಗಳಲ್ಲಿ ವಾಸಿಸುವ 10,000 ಕಾರ್ಮಿಕರನ್ನು ಕೆಲಸಕ್ಕಿರಿಸಿಕೊಂಡಿರುವ, ಕೆಲವು ವೇಳೆ ತಮ್ಮ ಸ್ವಂತ ರೈಲ್ವೇಗಳನ್ನೂ ರೇವುಗಳನ್ನೂ ಹೊಂದಿರುವ, ಈ ಬೃಹತ್ ಉದ್ಯಮಗಳು ಜರ್ಮನ್ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯ ಮಾದರಿ ಪ್ರತಿನಿಧಿಗಳಾಗಿವೆ. ಮತ್ತೆ ಕೇಂದ್ರೀಕರಣ ಇನ್ನಷ್ಟು ಮತ್ತಷ್ಟು ಹೆಚ್ಚುತ್ತಲೇ ಹೋಗುತ್ತಿದೆ. ಬಿಡಿ ಉದ್ಯಮಗಳು ಹೆಚ್ಚು ಹೆಚ್ಚು ದೊಡ್ಡವಾಗುತ್ತಿವೆ. ಒಂದು ಅಥವಾ ಹಲವಾರು ವಿಭಿನ್ನ ಕೈಗಾರಿಕೆಗಳಲ್ಲಿನ ಉದ್ಯಮಗಳು ಸತತವಾಗಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಬೃಹತ್ ಉದ್ಯಮಗಳಾಗಿ ಒಂದುಗೂಡುತ್ತಿವೆ, ಇವಕ್ಕೆ ಅರ್ಧ ಡಜನ್ ದೊಡ್ಡ ಬರ್ಲಿನ್ ಬ್ಯಾಂಕುಗಳು ಬೆಂಬಲ ನೀಡುತ್ತಿವೆ, ನಿರ್ದೇಶನ ನೀಡುತ್ತಿವೆ. ಜರ್ಮನ್ ಗಣಿ ಕೈಗಾರಿಕೆಗೆ ಸಂಬಂಧಿಸಿ ಹೇಳುವುದಾದರೆ, ಕೇಂದ್ರೀಕರಣದ ಕುರಿತು ಕಾರ್ಲ್ ಮಾರ್ಕ್ಸ್‌ರವರ ಬೋಧೆಗಳು ಎಷ್ಟು ಸತ್ಯವಾದವು ಎಂಬುದು ಅದರಿಂದ ಖಚಿತವಾಗಿ ಸಾಧಿತವಾಗಿದೆ; ನಿಜ, ಕೈಗಾರಿಕೆಯು ರಕ್ಷಣಾತ್ಮಕ ಸುಂಕಗಳಿಂದಲೂ ಸರಕು ರವಾನೆ ದರಗಳಿಂದಲೂ ಸಂರಕ್ಷಿಸಲ್ಪಟ್ಟಿರುವ ದೇಶಕ್ಕೆ ಇದು ಅನ್ವಯವಾಗುತ್ತದೆ. ಜರ್ಮನ್ ಗಣಿ ಕೈಗಾರಿಕೆಯು ಸ್ವತ್ತನ್ನು ಕಿತ್ತುಕೊಂಡಿರುವವರಿಂದ ಸ್ವತ್ತನ್ನು ಕಿತ್ತುಕೊಳ್ಳುವುದಕ್ಕೆ (expropriationಗೆ) ಪಕ್ವವಾದುದಾಗಿದೆ." *

ನ್ಯಾಯನಿಷ್ಠರಾದ ಬೂರ್ಷ್ವಾ ಅರ್ಥಶಾಸ್ತ್ರಜ್ಞರೊಬ್ಬರು – ಇಂಥವರು ಅಪರೂಪವೇ – ಮೇಲಿನಂತಹ ತೀರ್ಮಾನಕ್ಕೇ ಬರಬೇಕಾಯಿತು. ಜರ್ಮನಿಯ ಕೈಗಾರಿಕೆಗಳು ಉನ್ನತ ರಕ್ಷಣಾತ್ಮಕ ಸುಂಕಗಳಿಂದ ಸಂರಕ್ಷಿಸಲ್ಪಟ್ಟಿರುವುದರಿಂದಾಗಿ ಅವರು ಜರ್ಮನಿಯನ್ನು ಒಂದು ವಿಶೇಷ ವರ್ಗದಲ್ಲಿರಿಸಿರುವಂತೆ ಕಂಡುಬರುತ್ತದೆ, ಎಂಬುದನ್ನು ಗಮನಿಸಬೇಕು. ಆದರೆ ಅಂತಹ ಪರಿಸ್ಥಿತಿಯು ಕೇಂದ್ರೀಕರಣವನ್ನೂ, ಏಕಸ್ವಾಮ್ಯ ತಯಾರಿಕೆಗಾರರ ಸಮುಚ್ಚಯ, ಕಾರ್ಟೆಲ್, ಸಿಂಡಿಕೇಟ್, ಇತ್ಯಾದಿಗಳ ರಚನೆಯನ್ನೂ ಉತ್ಕರ್ಷಿಸಬಲ್ಲುದಷ್ಟೆ. ಮುಕ್ತ ವ್ಯಾಪಾರವಿರುವ ಇಂಗ್ಲೆಂಡಿನಲ್ಲಿ

---

*Hans Gideon Heymann, *Die gemischten Werke im deutschen Großeisengewerbe*, Stuttgart, 1904, SS. 256, 278-279 (ಹ್ಯಾನ್ಸ್ ಗಿಡೆಯೊನ್ ಹೈಮನ್, 'ಜರ್ಮನ್ ಭಾರಿ ಕಬ್ಬಿಣ ಕೈಗಾರಿಕೆಯಲ್ಲಿ ಸಂಯೋಜಿತ ಯಂತ್ರಸ್ಥಾವರಗಳು,' ಷ್ಟುಟ್‌ಗರ್ಟ್, 1904, ಪು. 256, 278-279. – ಸಂ.).

ಕೂಡ ಕೇಂದ್ರೀಕರಣವು, ಸ್ವಲ್ಪ ತಡವಾಗಿಯಾದರೂ ಮತ್ತು ಬಹುಶಃ ಮತ್ತೊಂದು ರೂಪದಲ್ಲಿಯಾದರೂ, ಏಕಸ್ವಾಮ್ಯಕ್ಕೆ ದಾರಿ ಮಾಡಿಕೊಡುತ್ತದೆಂಬುದನ್ನು ಗಮನಿಸುವುದು ಅತ್ಯಂತ ಮುಖ್ಯವಾದುದು. ಬ್ರಿಟಿಷ್ ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದ ಆಧಾರಾಂಶಗಳ ಮೇಲೆ ಅವಲಂಬಿಸಿದ 'ಏಕಸ್ವಾಮ್ಯ ಸಂಸ್ಥೆಗಳು, ಕಾರ್ಟೆಲ್‌ಗಳು ಹಾಗೂ ಟ್ರಸ್ಟುಗಳು' ಎಂಬ ಶೀರ್ಷಿಕೆಯ ತಮ್ಮ ವಿಶೇಷ ಸಂಶೋಧನ ಕೃತಿಯಲ್ಲಿ ಪ್ರೊ. ಹೆರ್ಮನ್ ಲೆವಿ ಹೀಗೆ ಬರೆಯುತ್ತಾರೆ:

"ಗ್ರೇಟ್ ಬ್ರಿಟನ್ನಿನಲ್ಲಿ ಉದ್ಯಮಗಳ ಪರಿಮಾಣ ಹಾಗೂ ಅವುಗಳ ಉನ್ನತ ತಾಂತ್ರಿಕ ಮಟ್ಟವೇ ಏಕಸ್ವಾಮ್ಯ ಪ್ರವೃತ್ತಿಗೆ ಆಶ್ರಯ ನೀಡಿರುವುದು. ಇದಕ್ಕೆ ಒಂದು ಕಾರಣವೆಂದರೆ, ಒಂದೊಂದು ಉದ್ಯಮಕ್ಕೆ ಸಂಬಂಧಿಸಿಯೂ ಬಂಡವಾಳವನ್ನು ಅಪಾರ ಪ್ರಮಾಣದಲ್ಲಿ ಹಾಕಿರುವುದು. ಇದು ಹೊಸ ಉದ್ಯಮಗಳಿಗಾಗಿ ಹೊಸ ಬಂಡವಾಳಕ್ಕೆ ಕೇಳಿಕೆಗಳನ್ನು ಹೆಚ್ಚು ಮಾಡುತ್ತದೆ, ತನ್ಮೂಲಕ ಹೊಸ ಉದ್ಯಮಗಳನ್ನು ಪ್ರಾರಂಭಿಸುವುದನ್ನು ಹೆಚ್ಚು ಕಷ್ಟಕರವನ್ನಾಗಿ ಮಾಡುತ್ತದೆ. ಅದೂ ಅಲ್ಲದೆ (ಇದು ಹೆಚ್ಚು ಮುಖ್ಯವಾದ ಅಂಶವೆಂದು ನಮಗೆ ಕಂಡುಬರುತ್ತದೆ), ಕೇಂದ್ರೀಕರಣದ ಮೂಲಕ ರೂಪಿತವಾದ ಬೃಹತ್ ಉದ್ಯಮಗಳೊಂದಿಗೆ ಸರಿಹೆಜ್ಜೆ ಹಾಕಿಕೊಂಡು ಹೋಗ ಬಯಸುವ ಪ್ರತಿಯೊಂದು ಹೊಸ ಉದ್ಯಮವೂ ಆವಶ್ಯಕತೆಗೂ ಮೀರಿ ವಸ್ತುಗಳನ್ನು ಎಷ್ಟು ಅಪಾರ ಪ್ರಮಾಣದಲ್ಲಿ ಉತ್ಪಾದಿಸುತ್ತದೆಂದರೆ, ಕೇಳಿಕೆಯಲ್ಲಿ ಅಪಾರ ಹೆಚ್ಚಳವಾಗುವುದರ ಫಲವಾಗಿ ಆ ವಸ್ತುಗಳನ್ನು ಲಾಭಕ್ಕೆ ಮಾರಲು ಸಾಧ್ಯವಾಗುವುದರ ಮೂಲಕವಷ್ಟೆ ಅವು ಆ ವಸ್ತುಗಳನ್ನು ವಿಲೇವಾರಿ ಮಾಡಲು ಸಾಧ್ಯವಾಗುತ್ತದೆ; ಇಲ್ಲದಿದ್ದರೆ ಈ ಆವಶ್ಯಕತೆಗೂ ಮೀರಿದ ವಸ್ತುಗಳ ಪ್ರಮಾಣವು ಬೆಲೆಗಳನ್ನು ಎಷ್ಟು ತಳಮಟ್ಟಕ್ಕೆ ತಳ್ಳುವುದೆಂದರೆ, ಹೊಸ ಉದ್ಯಮ ಹಾಗೂ ಏಕಸ್ವಾಮ್ಯ ಸಮುಚ್ಚಯ ಎರಡಕ್ಕೂ ಲಾಭ ಲಭಿಸದಂತಾಗುತ್ತದೆ." ಕಾರ್ಟೆಲ್‌ಗಳನ್ನು, ಉದ್ಯಮಗಾರರ ಏಕಸ್ವಾಮ್ಯ ಕೂಟಗಳನ್ನು ರೂಪಿಸಲು ಅನುಕೂಲ ಮಾಡಿಕೊಡುವಂಥ ರಕ್ಷಣಾತ್ಮಕ ಸುಂಕ ಪದ್ಧತಿ ಇರುವ ಇತರ ದೇಶಗಳಂತಲ್ಲದೆ ಇಂಗ್ಲೆಂಡಿನಲ್ಲಿ ಸ್ಪರ್ಧಿಸುವ ಪ್ರಧಾನ ಉದ್ಯಮಗಳ ಸಂಖ್ಯೆ "ಹೆಚ್ಚು ಕಮ್ಮಿ ಎರಡು ಡಜನ್‌ಗಳ" ಮಟ್ಟಕ್ಕೆ ಇಳಿದಾಗಲಷ್ಟೆ, ಬಹುಸಂಖ್ಯಾತ ಪ್ರಸಂಗಗಳಲ್ಲಿ ಉದ್ಯಮಗಾರರ ಏಕಸ್ವಾಮ್ಯ ಕೂಟಗಳೂ ಕಾರ್ಟೆಲ್‌ಗಳೂ ಟ್ರಸ್ಟ್‌ಗಳೂ ಉದ್ಭವವಾಗುತ್ತವೆ. "ಇಲ್ಲಿ ಕೈಗಾರಿಕೆಯ ಒಂದು ಇಡೀ ವಲಯದಲ್ಲಿ ದೊಡ್ಡ ಕೈಗಾರಿಕಾ ಏಕಸ್ವಾಮ್ಯಗಳ ರಚನೆಗೆ ಸಂಬಂಧಿಸಿ ಕೇಂದ್ರೀಕರಣ ಚಳವಳಿಯ ಪ್ರಭಾವವು ಸ್ಫಟಿಕದಂತೆ ಸ್ಪಷ್ಟವಾಗಿ ಕಾಣಿಸುತ್ತದೆ." *

---

*Hermann Levy, *Monopole, Kartelle und Trusts*, Jena, 1909, SS. 286, 290, 298 (ಹೆರ್ಮನ್ ಲೆವಿ, 'ಏಕಸ್ವಾಮ್ಯಗಳು, ಕಾರ್ಟೆಲ್‌ಗಳು, ಟ್ರಸ್ಟುಗಳು,' ಯೇನಾ, 1909, ಪು. 286, 290, 298. – ಸಂ.).

ಅರ್ಧಶತಮಾನದ ಹಿಂದೆ ಮಾರ್ಕ್ಸ್‌ರವರು 'ಬಂಡವಾಳ' ಗ್ರಂಥವನ್ನು ರಚಿಸುತ್ತಿದ್ದಾಗ ಮುಕ್ತ ಸ್ಪರ್ಧೆಯು ಅತ್ಯಧಿಕ ಬಹುಸಂಖ್ಯಾತ ಅರ್ಥಶಾಸ್ತ್ರಜ್ಞರಿಗೆ ಒಂದು "ನೈಸರ್ಗಿಕ ನಿಯಮ"ವಾಗಿ ಕಂಡುಬಂದಿತು. ಮಾರ್ಕ್ಸ್‌ರವರು ಬಂಡವಾಳವಾದದ ಸೈದ್ಧಾಂತಿಕ ಹಾಗೂ ಐತಿಹಾಸಿಕ ವಿಶ್ಲೇಷಣೆಯ ಮೂಲಕ, ಮುಕ್ತ ಸ್ಪರ್ಧೆಯು ಉತ್ಪಾದನೆಯ ಕೇಂದ್ರೀಕರಣಕ್ಕೆ ದಾರಿ ಮಾಡಿಕೊಡುತ್ತದೆ, ಅದು ತನ್ನ ಸರದಿಯಲ್ಲಿ ತನ್ನ ಬೆಳವಣಿಗೆಯ ಒಂದು ನಿಶ್ಚಿತ ಘಟ್ಟದಲ್ಲಿ ಏಕಸ್ವಾಮ್ಯಕ್ಕೆ ದಾರಿ ಮಾಡುತ್ತದೆ, ಎಂದು ಸಾಧಿಸುತ್ತ ಬರೆದ ಕೃತಿಗಳನ್ನು ಅಧಿಕೃತ ವಿಜ್ಞಾನವು ಮೌನವೆಂಬ ಒಳಸಂಚಿನ ಮೂಲಕ ಕೊಲ್ಲಲು ಯತ್ನಿಸಿತು. ಇಂದು ಏಕಸ್ವಾಮ್ಯವು ಒಂದು ವಾಸ್ತವಾಂಶವಾಗಿದೆ. ಏಕಸ್ವಾಮ್ಯವು ವಿವಿಧ ರೀತಿಗಳಲ್ಲಿ ತೋರ್ಪಡಿಸಿಕೊಳ್ಳುತ್ತಿರುವುದರ ಬಗೆಗೆ ಅರ್ಥಶಾಸ್ತ್ರಜ್ಞರು ಬೆಟ್ಟದಷ್ಟು ಪುಸ್ತಕಗಳನ್ನು ಬರೆದು, "ಮಾರ್ಕ್ಸ್‌ವಾದವು ಅಲ್ಲಗಳೆಯಲ್ಪಟ್ಟಿದೆ" ಎಂದು ಒಗ್ಗೊರಲಿನಿಂದ ಕೂಗಿ ಹೇಳುತ್ತಲೇ ಹೋಗುತ್ತಿದ್ದಾರೆ. ಆದರೆ ಸತ್ಯಸಂಗತಿಗಳು, ಇಂಗ್ಲಿಷ್ ಗಾದೆಯೊಂದು ಹೇಳುವಂತೆ, ಸೂತ್ರಕ್ಕೆ ಹೊಂದಿಕೊಳ್ಳುವುದಿಲ್ಲ. ನಮಗೆ ಅವು ಇಷ್ಟವಾಗಲಿ ಇಷ್ಟವಾಗದಿರಲಿ, ನಾವವನ್ನು ಲೆಕ್ಕಕ್ಕೆ ತೆಗೆದುಕೊಳ್ಳಲೇ ಬೇಕು. ಬಂಡವಾಳಶಾಹಿ ದೇಶಗಳ ನಡುವಿನ ವ್ಯತ್ಯಾಸಗಳು, ಉದಾಹರಣೆಗೆ, ಸಂರಕ್ಷಣೆ ಅಥವಾ ಮುಕ್ತ ವ್ಯಾಪಾರ ವಿಷಯಗಳಿಗೆ ಸಂಬಂಧಿಸಿದ ವ್ಯತ್ಯಾಸಗಳು, ಏಕಸ್ವಾಮ್ಯಗಳ ರೂಪದಲ್ಲಿ ಅಥವಾ ಅವು ಕಾಣಿಸಿಕೊಳ್ಳುವ ಘಳಿಗೆಯಲ್ಲಿ, ನಿಕೃಷ್ಟವಾದಷ್ಟು ವೈಪರೀತ್ಯಗಳನ್ನಷ್ಟೆ ಉಂಟುಮಾಡುತ್ತವೆ; ಉತ್ಪಾದನೆಯ ಕೇಂದ್ರೀಕರಣದ ಫಲವಾಗಿ ಏಕಸ್ವಾಮ್ಯಗಳು ಉಂಟಾಗುವುದು ಬಂಡವಾಳವಾದದ ಬೆಳವಣಿಗೆಯ ಪ್ರಸ್ತುತ ಘಟ್ಟದ ಒಂದು ಸಾರ್ವತ್ರಿಕ ಹಾಗೂ ಮೂಲಭೂತ ನಿಯಮ ಎಂದೇ ಸತ್ಯಸಂಗತಿಗಳು ತೋರಿಸಿಕೊಡುತ್ತವೆ.

ಯೂರೋಪಿಗೆ ಸಂಬಂಧಿಸಿ, ಹೊಸ ಬಂಡವಾಳವಾದವು ಯಾವಾಗ ಹಳೆಯುದನ್ನು ಆಖೈರಾಗಿ ತಳ್ಳಿಹಾಕಿತು ಎಂಬುದನ್ನು ಸಾಕಷ್ಟು ನಿಷ್ಕೃಷ್ಟತೆಯೊಂದಿಗೆ ಗೊತ್ತುಪಡಿಸಲು ಸಾಧ್ಯ: ಅದು 20ನೆಯ ಶತಮಾನದ ಆರಂಭ. "ಏಕಸ್ವಾಮ್ಯಗಳ ರಚನೆ"ಯ ಇತಿಹಾಸಕ್ಕೆ ಸಂಬಂಧಿಸಿದ ಇತ್ತೀಚೆಗಿನ ಗ್ರಂಥವೊಂದರಲ್ಲಿ ನಾವು ಓದುತ್ತೇವೆ:

"1860ಕ್ಕೂ ಹಿಂದಿನ ಕಾಲದಿಂದಲೂ ಬಂಡವಾಳಶಾಹಿ ಏಕಸ್ವಾಮ್ಯ ರೂಪಿತಗೊಂಡುದಕ್ಕೆ ಪ್ರತ್ಯೇಕ ನಿದರ್ಶನಗಳನ್ನು ಆಧಾರವಾಗಿ ಕೊಡಬಹುದು; ಇವುಗಳಲ್ಲಿ ಇಂದು ಸಾಮಾನ್ಯವಾಗಿರುವಂಥ ರೂಪಗಳನ್ನು ಭ್ರೂಣರೂಪದಲ್ಲಿ ಕಾಣಬಹುದು; ಆದರೆ ಇವೆಲ್ಲವೂ ನಿಸ್ಸಂದೇಹವಾಗಿಯೂ ಕಾರ್ಟೆಲ್‌ಗಳ ಪೂರ್ವೇತಿಹಾಸ. ಆಧುನಿಕ ಏಕಸ್ವಾಮ್ಯಗಳ ನಿಜವಾದ ಆರಂಭ, ತುಂಬ ಹಿಂದೆಂದರೆ, 1860ರ ದಶಕದ ವರ್ಷಗಳಿಗೆ ಹೋಗುತ್ತದೆ. ಏಕಸ್ವಾಮ್ಯಗಳ ಬೆಳವಣಿಗೆಯ ಮೊದಲ ಮುಖ್ಯ ಕಾಲಾವಧಿ 1870ರ ದಶಕದ ವರ್ಷಗಳ ಅಂತರರಾಷ್ಟ್ರೀಯ ಕೈಗಾರಿಕಾ ಮುಗ್ಗಟ್ಟಿನೊಂದಿಗೆ ಪ್ರಾರಂಭವಾಗಿ 1890ರ ದಶಕದ ವರ್ಷಗಳ ಆದಿಯವರೆಗೆ ಇದ್ದಿತು." "ಪ್ರಶ್ನೆಯನ್ನು

ನಾವು ಯೂರೋಪಿಯನ್ ಪ್ರಮಾಣದಲ್ಲಿ ಪರಿಶೀಲಿಸಿದರೆ ಮುಕ್ತ ಸ್ಪರ್ಧೆಯ ಬೆಳವಣಿಗೆಯು 1860ರ ಹಾಗೂ 1870ರ ದಶಕಗಳ ವರ್ಷಗಳಲ್ಲಿ ತುಟ್ಟತುದಿ ಮುಟ್ಟಿತು ಎಂಬುದನ್ನು ಕಾಣುತ್ತೇವೆ. ಆಗಲೇ ಇಂಗ್ಲೆಂಡು ತನ್ನ ಹಳೆಯ ಶೈಲಿಯ ಬಂಡವಾಳವಾದಿ ಸಂಘಟನೆಯ ನಿರ್ಮಾಣವನ್ನು ಪೂರೈಸಿದುದು. ಜರ್ಮನಿಯಲ್ಲಿ ಈ ಸಂಘಟನೆಯು ಕೈಕಸಬು ಹಾಗೂ ಗೃಹಕೈಗಾರಿಕೆಗಳ ವಿರುದ್ಧ ಉಗ್ರ ಹೋರಾಟ ವನ್ನು ಪ್ರಾರಂಭಿಸಿದ್ದಿತು ಮತ್ತು ತನಗಾಗಿ ತನ್ನ ಸ್ವಂತ ಅಸ್ತಿತ್ವದ ರೂಪಗಳನ್ನು ಸೃಜಿಸಿಕೊಳ್ಳತೊಡಗಿದ್ದಿತು."

"ಮಹಾಕ್ರಾಂತಿಯು 1873ರ ಆರ್ಥಿಕ ವಿನಾಶದೊಂದಿಗೆ, ಅಥವಾ ಹೆಚ್ಚು ನಿಷ್ಕೃಷ್ಟವಾಗಿ ಹೇಳುವುದಾದರೆ, ಅದನ್ನನುಸರಿಸಿ ಬಂದ ಮುಗ್ಗಟ್ಟಿನೊಂದಿಗೇ ಪ್ರಾರಂಭ ವಾಯಿತು. ಈ ಮುಗ್ಗಟ್ಟು 1880ರ ದಶಕದ ಆರಂಭದ ವರ್ಷಗಳಲ್ಲಿ ಸ್ವಲ್ಪಸ್ವಲ್ಪ ವಷ್ಟೆ ಗೋಚರಕ್ಕೆ ಬರುವ ವಿರಾಮದೊಂದಿಗೆ ಹಾಗೂ ಸುಮಾರು 1889ರಲ್ಲಿ ಆದ ಪ್ರಬಲವಾದ ಆದರೆ ಅಲ್ಪಾಯುವಾದ ಏಳಿಗೆಯೊಂದಿಗೆ ಐರೋಪ್ಯ ಆರ್ಥಿಕ ಇತಿಹಾಸದ ಇಪ್ಪತ್ತೆರಡು ವರ್ಷಗಳನ್ನು ಗುರುತಿಸುತ್ತದೆ." "1889-1890ರ ಉತ್ಕ ರ್ಷದ ಅಲ್ಪಕಾಲದಲ್ಲಿ ಅನುಕೂಲವಾದ ವ್ಯಾಪಾರ ಪರಿಸ್ಥಿತಿಗಳ ಪ್ರಯೋಜನ ಪಡೆದುಕೊಳ್ಳಲು ಕಾರ್ಟೆಲ್‌ಗಳ ಪದ್ಧತಿಯನ್ನು ವಿಸ್ತೃತವಾಗಿ ಆಚರಣೆಗೆ ತರಲಾ ಯಿತು. ಮುಂದಾಲೋಚನೆ ಇಲ್ಲದ ನೀತಿಯನ್ನು ಅನುಸರಿಸಿದುದರ ಫಲವಾಗಿ ಬೆಲೆಗಳು ಇನ್ನೂ ಹೆಚ್ಚು ಶೀಘ್ರವಾಗಿ ಏರಿದವು, ಕಾರ್ಟೆಲ್‌ಗಳು ಇಲ್ಲದಿದ್ದಾಗ ಏರುತ್ತಿದ್ದುದಕ್ಕಿಂತ ಇನ್ನೂ ಹೆಚ್ಚು ಉನ್ನತ ಮಟ್ಟಕ್ಕೆ ಏರಿದವು ಮತ್ತು ಈ ಆರ್ಥಿಕ ವಿನಾಶದಲ್ಲಿ ಬಹುಮಟ್ಟಿಗೆ ಎಲ್ಲ ಕಾರ್ಟೆಲ್‌ಗಳೂ ಅಪಮಾನಕರವಾಗಿ ನಾಶವಾದವು. ಇನ್ನೂ ಐದು ವರ್ಷಗಳು ಕಳೆದವು. ವ್ಯಾಪಾರ ಕೆಟ್ಟುದಾಗಿದ್ದಿತು, ಬೆಲೆಗಳು ತಗ್ಗಿದ್ದವು. ಆದರೆ ಕೈಗಾರಿಕೆಯಲ್ಲಿ ಒಂದು ಹೊಸ ಚೈತನ್ಯ ಆಧಿಪತ್ಯ ನಡೆಸುತ್ತಿದ್ದಿತು; ಆರ್ಥಿಕ ಮುಗ್ಗಟ್ಟನ್ನು ಇನ್ನೆಷ್ಟು ಮಾತ್ರವೂ ಅನಿವಾರ್ಯವಾಗಿ ಆದುದೆಂದು ಭಾವಿಸಲಾಗ ಲಿಲ್ಲ; ಮತ್ತೊಂದು ಉತ್ಕರ್ಷಕ್ಕೆ ಮುನ್ನ ಬರುವ ಒಂದು ವಿರಾಮವಲ್ಲದೆ ಬೇರೇನೂ ಅಲ್ಲವೆಂದು ಅದನ್ನು ಪರಿಭಾವಿಸಲಾಯಿತು.

"ಕಾರ್ಟೆಲ್ ಚಳವಳಿಯು ತನ್ನ ಎರಡನೆಯ ಯುಗವನ್ನು ಪ್ರವೇಶಿಸಿತು. ಸ್ಥಿತ್ಯಂತರ ಘಟನೆಯಾಗಿರುವ ಬದಲು ಕಾರ್ಟೆಲ್‌ಗಳು ಆರ್ಥಿಕ ಜೀವನದ ಅಡಿಪಾಯಗಳ ಲ್ಲೊಂದಾದವು. ಅವು ಒಂದಾದನಂತರ ಒಂದು ಕೈಗಾರಿಕಾ ಕ್ಷೇತ್ರವನ್ನು ಪ್ರಾಥಮಿಕ ವಾಗಿ ಕಚ್ಚಾ ಪದಾರ್ಥಗಳ ಪರಿಷ್ಕರಣಾ ಕೈಗಾರಿಕೆಯನ್ನು, ಗಳಿಸಿಕೊಳ್ಳುತ್ತಿವೆ. 1890ರ ದಶಕದ ಆರಂಭ ಭಾಗದಲ್ಲಾಗಲೇ ಕಾರ್ಟೆಲ್ ಪದ್ಧತಿಯು – ಕಲ್ಲಿದ್ದಲ ಕಿಟ್ಟ ಸಿಂಡಿಕೇಟ್‌ನ ಸಂಘಟನೆಯಲ್ಲಿ (ಈ ಮಾದರಿಯನ್ನನುಸರಿಸಿಯೇ ಕಲ್ಲಿದ್ದಲು ಸಿಂಡಿಕೇಟನ್ನು ಅನಂತರ ಸಂಘಟಿಸಲಾಯಿತು) – ಒಂದು ಕಾರ್ಟೆಲ್ ತಂತ್ರವನ್ನು ಸಂಪಾದಿಸಿಕೊಂಡಿದ್ದಿತು. ಈ ತಂತ್ರವು ಇಂದಿಗೂ ಸಾರಭೂತವಾಗಿ ಹಾಗೆಯೇ

ಇದ್ದುಕೊಂಡಿದೆ. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಆದ ಮಹಾ ಉತ್ಕರ್ಷವೂ 1900-1903ರ ಮುಗ್ಗಟ್ಟೂ ಮೊಟ್ಟಮೊದಲ ಬಾರಿಗೆ ಸಂಪೂರ್ಣವಾಗಿ – ಕೊನೆಯ ಪಕ್ಷ ಗಣಿ ಹಾಗೂ ಕಲ್ಲಿದ್ದಲು ಕೈಗಾರಿಕೆಗಳಲ್ಲಿ – ಕಾರ್ಟೆಲ್‌ಗಳ ಆಶ್ರಯದಲ್ಲೇ ಜರುಗಿದವು. ಆ ಕಾಲದಲ್ಲಿ ಅದು ಏನೋ ಒಂದು ಹೊಸತಾದುದಾಗಿ ಕಂಡುಬಂದರೂ ಈಗ ಸಾಮಾನ್ಯವಾಗಿ ಆರ್ಥಿಕ ಜೀವನದ ವಿಶಾಲ ವಲಯಗಳು ಮುಕ್ತ ಸ್ಪರ್ಧೆಯ ಕ್ಷೇತ್ರದಿಂದ ದೂರವಿರುವುದನ್ನು ಸಾರ್ವಜನಿಕರು ಮಾಮೂಲು ವಿಷಯವನ್ನಾಗಿಯೇ ಕಂಡುಕೊಳ್ಳುತ್ತಾರೆ." *

ಹೀಗೆ ಏಕಸ್ವಾಮ್ಯ ಸಂಸ್ಥೆಗಳ ಇತಿಹಾಸದಲ್ಲಿ ಪ್ರಧಾನ ಘಟ್ಟಗಳು ಇವು: (1) 1860-1870 – ಮುಕ್ತ ಸ್ಪರ್ಧೆಯ ಅತ್ಯುನ್ನತ ಘಟ್ಟ, ಅದರ ಬೆಳವಣಿಗೆಯ ತುಟ್ಟತುದಿ. ಏಕಸ್ವಾಮ್ಯಗಳು ಕಂಡೂ ಕಾಣದಂತಹ ಭ್ರೂಣ ದೆಸೆಯಲ್ಲಿರುತ್ತವೆ. (2) 1873ರ ಮುಗ್ಗಟ್ಟಿನ ನಂತರ. ಕಾರ್ಟೆಲ್‌ಗಳ ಬೆಳವಣಿಗೆಯ ದೀರ್ಘ ಕಾಲಾವಧಿ; ಆದರೆ ಅವು ಇನ್ನೂ ಅಪವಾದಗಳೇ. ಅವಿನ್ನೂ ಸ್ಥಿರವಾಗಿಲ್ಲ. ಅವಿನ್ನೂ ಒಂದು ಕ್ಷಣಿಕ ಘಟನೆ. (3) ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದ ಆರ್ಥಿಕ ಉತ್ಕರ್ಷ ಹಾಗೂ 1900-1903ರ ಮುಗ್ಗಟ್ಟು. ಕಾರ್ಟೆಲ್‌ಗಳು ಇಡೀ ಆರ್ಥಿಕ ಜೀವನದ ಅಡಿಪಾಯಗಳಲ್ಲೊಂದಾಗುತ್ತವೆ. ಬಂಡವಾಳವಾದವು ಸಾಮ್ರಾಜ್ಯವಾದವಾಗಿ ಪರಿವರ್ತಿತವಾಗಿರುತ್ತದೆ.

ಮಾರಾಟದ ಷರತ್ತುಗಳು, ಸಂದಾಯದ ವಾಯಿದೆಗಳು ಇತ್ಯಾದಿಗಳಿಗೆ ಸಂಬಂಧಿಸಿ ಕಾರ್ಟೆಲ್‌ಗಳು ಒಪ್ಪಂದ ಮಾಡಿಕೊಳ್ಳುತ್ತವೆ. ಅವು ತಮ್ಮ ಮಧ್ಯೆಯೇ ಮಾರುಕಟ್ಟೆಗಳನ್ನು ವಿಭಜಿಸಿಕೊಳ್ಳುತ್ತವೆ. ಉತ್ಪಾದಿಸಬೇಕಾದ ವಸ್ತುಗಳ ಪ್ರಮಾಣವನ್ನು ಅವು ಗೊತ್ತುಪಡಿಸುತ್ತವೆ. ಅವು ಬೆಲೆಗಳನ್ನು ನಿರ್ಣಯಿಸುತ್ತವೆ. ಅವು ನಾನಾ ಉದ್ಯಮಗಳ ಮಧ್ಯೆ ಲಾಭಗಳನ್ನು ಹಂಚುತ್ತವೆ, ಇತ್ಯಾದಿ.

---

* Th. Vogelstein, *Die finanzielle Organisation der Kapitalistischen Industrie und die Monopolbildungen* in *Grundriß der Sozialökonomik*, VI Abt., Tüb., 1914 (ತಿ. ಫೊಗೆಲ್‌ಷ್ಟೈನ್, 'ಬಂಡವಾಳಶಾಹಿ ಕೈಗಾರಿಕೆಯ ಹಣಕಾಸು ಸಂಘಟನೆ ಹಾಗೂ ಏಕಸ್ವಾಮ್ಯಗಳ ರಚನೆ' 'ಸಾಮಾಜಿಕ ಅರ್ಥಶಾಸ್ತ್ರದ ರೂಪುರೇಷೆ'ಯಲ್ಲಿ, ಅಧ್ಯಾಯ VI, ತ್ಯೂಬಿಂಗೇನ್, 1914. – ಸಂ.). ಇದೇ ಲೇಖಕರ *Organisationsformen der Eisenindustrie und Textilindustrie in England und Amerika*, Bd. I, Lpz., 1910 ('ಇಂಗ್ಲೆಂಡ್ ಹಾಗೂ ಅಮೆರಿಕಗಳ ಕಬ್ಬಿಣ ಹಾಗೂ ಅರಿವೆ ಕೈಗಾರಿಕೆಯ ಸಂಘಟನಾತ್ಮಕ ರೂಪಗಳು,' ಸಂ. I, ಲೈಪ್ಸಿಗ್, 1910. – ಸಂ.) ಎಂಬ ಗ್ರಂಥವನ್ನು ನೋಡಿ.

ಜರ್ಮನಿಯಲ್ಲಿ ಕಾರ್ಟೆಲ್‌ಗಳ ಸಂಖ್ಯೆ 1896ರಲ್ಲಿ ಸುಮಾರು 250, 1905ರಲ್ಲಿ 385 ಆಗಿದ್ದಿತೆಂದು ಅಂದಾಜು ಮಾಡಲಾಗಿದ್ದಿತು. ಇವುಗಳಲ್ಲಿ ಸುಮಾರು 12,000 ಸಂಸ್ಥೆಗಳು ಭಾಗವಹಿಸುತ್ತಿದ್ದವು.* ಆದರೆ ಈ ಸಂಖ್ಯೆಗಳು ಕಮ್ಮಿ ಅಂದಾಜಿನವೆಂದು ಎಲ್ಲರೂ ತಿಳಿದುಕೊಳ್ಳುತ್ತಾರೆ. ಈ 12,000 ಅತ್ಯಂತ ದೊಡ್ಡ ಉದ್ಯಮಗಳೂ ದೇಶದಲ್ಲಿ ಬಳಸಲಾದ ಉಗಿ ಹಾಗೂ ವಿದ್ಯುಚ್ಛಕ್ತಿಯ ಅರ್ಧಕ್ಕೂ ಹೆಚ್ಚು ಭಾಗ ವನ್ನು ಖಂಡಿತ ಕೇಂದ್ರೀಕರಿಸಿಕೊಂಡಿವೆ ಎಂಬುದು ನಾವು ಮೇಲೆ ಉದ್ಧರಿಸಿದ 1907ರಲ್ಲಿ ಜರ್ಮನ್ ಕೈಗಾರಿಕೆಯ ಅಂಕಿಅಂಶಗಳಿಂದ ವೇದ್ಯವಾಗುತ್ತದೆ. ಅಮೆರಿ ಕದ ಸಂಯುಕ್ತ ಸಂಸ್ಥಾನಗಳಲ್ಲಿ ಟ್ರಸ್ಟ್‌ಗಳ ಸಂಖ್ಯೆ 1900ರಲ್ಲಿ 185 ಹಾಗೂ 1907 ರಲ್ಲಿ 250 ಎಂದು ಅಂದಾಜು ಮಾಡಲಾಗಿದ್ದಿತು. ಅಮೆರಿಕನ್ ಅಂಕಿಅಂಶಗಳು ಎಲ್ಲ ಕೈಗಾರಿಕೋದ್ಯಮಗಳನ್ನೂ ವ್ಯಕ್ತಿಗಳಿಗೆ ಸಂಬಂಧಿಸಿದವು, ಖಾಸಗಿ ವ್ಯಾಪಾರ ಸಂಸ್ಥೆಗಳಿಗೆ ಅಥವಾ ಕಾರ್ಪೊರೇಷನ್‌ಗಳಿಗೆ ಸಂಬಂಧಿಸಿದವು, ಎಂದು ವಿಭಜಿಸು ತ್ತವೆ. ಈ ಕೊನೆಯವು 1904ರಲ್ಲಿ ಶೇ. 23.6 ಹಾಗೂ 1909ರಲ್ಲಿ ಶೇ. 25.9, ಅಂದರೆ ದೇಶದ ಒಟ್ಟು ಕೈಗಾರಿಕೋದ್ಯಮಗಳಲ್ಲಿ ಕಾಲುಭಾಗಕ್ಕೂ ಹೆಚ್ಚು ಕೈಗಾರಿ ಕೋದ್ಯಮಗಳನ್ನು ತಾವೇ ಒಳಗೊಂಡಿದ್ದವು. ಇವು 1904ರಲ್ಲಿ ಶೇ. 70.6 ಹಾಗೂ 1909ರಲ್ಲಿ ಶೇ. 75.6, ಅಂದರೆ ದೇಶದ ಒಟ್ಟು ಕಾರ್ಮಿಕರಲ್ಲಿ ಮುಕ್ಕಾಲು ಭಾಗಕ್ಕೂ ಹೆಚ್ಚು ಕಾರ್ಮಿಕರನ್ನು ತಾವೇ ನೇಮಕ ಮಾಡಿಕೊಂಡಿದ್ದವು. ಅವುಗಳ ಹುಟ್ಟುವಳಿ ಈ ಎರಡು ತೇದಿಗಳಿಗೆ ಸಂಬಂಧಿಸಿದಂತೆ ಅನುಕ್ರಮವಾಗಿ 10,900,000,000 ಡಾಲರ್ ಹಾಗೂ 16,300,000,000, ಅಂದರೆ ದೇಶದ ಒಟ್ಟು ಹುಟ್ಟುವಳಿಯ ಶೇ. 73.7 ಹಾಗೂ ಶೇ. 79.0 ಆಗಿದ್ದಿತು.

ಬಹುವೇಳೆ ಈ ಕಾರ್ಟೆಲ್‌ಗಳೂ ಟ್ರಸ್ಟ್‌ಗಳೂ ಕೈಗಾರಿಕೆಯ ಒಂದು ನಿರ್ದಿಷ್ಟ ಶಾಖೆಯ ಒಟ್ಟು ಉತ್ಪನ್ನದ ಹತ್ತನೇ ಏಳು ಅಥವಾ ಹತ್ತನೇ ಎಂಟು ಪಾಲನ್ನು ತಮ್ಮ ಕೈಗಳಲ್ಲೇ ಕೇಂದ್ರೀಕರಿಸಿಕೊಂಡಿರುತ್ತವೆ. ರೈನ್-ವೆಸ್ಟ್‌ಫಾಲಿಯನ್ ಕಲ್ಲಿದ್ದಲು

---

*Dr. Riesser, *Die deutschen Großbanken und ihre Konzentration im Zusammenhange mit der Entwicklung der Gesamtwirtschaft in Deutschland*, 4. Aufl., 1912, S. 149 (ಡಾ. ರೀಸ್ಸೆರ್, 'ಜರ್ಮನಿಯ ಆರ್ಥಿಕತೆಯ ಸಾರ್ವತ್ರಿಕ ಬೆಳವಣಿಗೆಗೆ ಸಂಬಂಧಿಸಿದಂತೆ ಜರ್ಮನ್ ಭಾರಿ ಬ್ಯಾಂಕುಗಳು ಮತ್ತು ಅವುಗಳ ಕೇಂದ್ರೀಕರಣ,' 4ನೇ ಆವೃತ್ತಿ, 1912, ಪು. 149.–ಸಂ.) R. Liefmann. *Kartelle und Trusts die Weiterbildung der volkswirtschaftlichen Organisation*, 2. Aufl., 1910, S. 25 (ಆರ್. ಲೀಫ್‌ಮನ್, 'ಕಾರ್ಟೆಲ್‌ಗಳೂ ಟ್ರಸ್ಟ್‌ಗಳೂ ಆರ್ಥಿಕ ಸಂಘಟನೆಯ ಮತ್ತಷ್ಟು ಬೆಳವಣಿಗೆ,' 2ನೇ ಆವೃತ್ತಿ, 1910, ಪು. 25. – ಸಂ.).

ಸಿಂಡಿಕೇಟ್ 1893ರಲ್ಲಿ ಸಂಸ್ಥಾಪಿತವಾದಾಗ, ಆ ಕ್ಷೇತ್ರದ ಒಟ್ಟು ಕಲ್ಲಿದ್ದಲು ಹುಟ್ಟುವಳಿಯ ಶೇ. 86.7ರಷ್ಟನ್ನು ಕೇಂದ್ರೀಕರಿಸಿಕೊಂಡಿದ್ದಲ್ಲಿ, 1910ರಲ್ಲಿ ಅದು ಆಗಲೇ ಶೇ. 95.4ರಷ್ಟನ್ನು ಕೇಂದ್ರೀಕರಿಸಿಕೊಂಡಿದ್ದಿತು.* ಹೀಗೆ ಸೃಜಿತವಾದ ಏಕಸ್ವಾಮ್ಯವು ಭಾರಿ ಲಾಭಗಳನ್ನು ಖಚಿತಪಡಿಸಿಕೊಡುತ್ತದೆ ಮತ್ತು ಬಹು ಭಾರಿ ಪ್ರಮಾಣದ ತಾಂತ್ರಿಕ ಉತ್ಪಾದಕ ಘಟಕಗಳನ್ನು ರಚಿಸುವುದಕ್ಕೆ ದಾರಿ ಮಾಡಿಕೊಡುತ್ತದೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಸುಪ್ರಸಿದ್ಧವಾದ ಸ್ಟ್ಯಾಂಡರ್ಡ್ ಆಯಿಲ್ ಕಂಪನಿ 1900ರಲ್ಲಿ ಸ್ಥಾಪಿತವಾಯಿತು. "ಇದು 150 ಮಿಲಿಯ ಡಾಲರ್ ಆಥರೈಸ್ಡ್ (ಆಧಾರಪೂರ್ವಕವಾದ) ಬಂಡವಾಳವನ್ನು ಹೊಂದಿದೆ. ಇದು 100 ಮಿಲಿಯ ಡಾಲರ್ ಸಾಮಾನ್ಯ ಹಾಗೂ 106 ಮಿಲಿಯ ಡಾಲರ್ ಪ್ರಿಫರ್ಡ್ (ಲಾಭಾಂಶ ಪಡೆಯುವುದರಲ್ಲಿ ಮೊದಲ ಹಕ್ಕಿನ) ಬಂಡವಾಳ ಪತ್ರಗಳನ್ನು ಹೊರಡಿಸಿತು. 1900ರಿಂದ 1907ರವರೆಗೆ ಪ್ರಿಫರ್ಡ್ ಬಂಡವಾಳ ಪತ್ರಗಳಿಗೆ ಲಾಭಾಂಶಗಳನ್ನು ಆಯಾ ವರ್ಷಗಳಿಗೆ ಅನುಕ್ರಮವಾಗಿ ಶೇ. 48, 48, 45, 44, 36, 40, 40, 40 ನೀಡಲಾಯಿತು, ಅಂದರೆ ಒಟ್ಟು 367 ಮಿಲಿಯ ಡಾಲರ್‌ಗಳಷ್ಟು ನೀಡಲಾಯಿತು. 1882ರಿಂದ 1907ರವರೆಗೆ, 889 ಮಿಲಿಯ ಡಾಲರ್‌ಗಳ ಒಟ್ಟು ನಿವ್ವಳ ಲಾಭದಿಂದ 606 ಮಿಲಿಯ ಡಾಲರ್‌ಗಳಷ್ಟನ್ನು ಲಾಭಾಂಶಗಳನ್ನಾಗಿ ಹಂಚಲಾಯಿತು, ಉಳಿದುದು ಮೀಸಲು ಬಂಡವಾಳಕ್ಕೆ ಹೋಯಿತು."** "1907ರಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನಗಳ ಉಕ್ಕು ಕಾರ್ಪೊರೇಷನ್ನಿನ ನಾನಾ ಕಾರ್ಖಾನೆಗಳು 210,180ಕ್ಕೆ ಕಮ್ಮಿ ಇಲ್ಲದಂತೆ ಕಾರ್ಮಿಕರನ್ನು ಮತ್ತಿತರ ನೌಕರರನ್ನು ನೇಮಿಸಿಕೊಂಡಿದ್ದವು. ಜರ್ಮನ್ ಗಣಿ ಕೈಗಾರಿಕೆಯ ಅತ್ಯಂತ ದೊಡ್ಡ ಉದ್ಯಮ ಗೆಲ್ಸೆಂಕಿರ್ಹೆನ್ ಗಣಿ ಕಂಪನಿಯು (Gelsenkirchener Bergwerksgesellschaft) 1908ರಲ್ಲಿ

---

*Dr. Fritz Kestner, *Der Organisationszwang. Eine Untersuchung über die Kämpfe zwischen Kartellen und Außenseitern*, Brl. (ಡಾ. ಫ್ರಿತ್ಸ್ ಕೆಸ್ಟ್ನರ್, 'ಕಡ್ಡಾಯದ ಸಂಘಟನೆ. ಕಾರ್ಟೆಲ್‌ಗಳಿಗೂ ಹೊರಗಿನವರಿಗೂ ನಡುವಿನ ಹೋರಾಟದ ಒಂದು ಪರಿಶೀಲನೆ,' ಬರ್ಲಿನ್. –ಸಂ.) 1912, ಪು. 11.

**R. Liefmann, *Beteiligungs- und Finanzierungsgesellschaften. Eine Studie über den modernen Kapitalismus und das Effektenwesen*, 1. Aufl., Jena, 1909, S. 212 (ಆರ್. ಲೀಫ್‌ಮನ್, 'ಹೋಲ್ಡಿಂಗ್ ಮತ್ತು ಫೈನಾನ್ಸ್ ಕಂಪನಿಗಳು – ಆಧುನಿಕ ಬಂಡವಾಳವಾದದ ಮತ್ತು ಬಂಡವಾಳ ಪತ್ರಗಳ ಒಂದು ಅಧ್ಯಯನ,' ಮೊದಲ ಆವೃತ್ತಿ, ಯೇನ, 1909, ಪು. 212. –ಸಂ.).

46,048 ಕಾರ್ಮಿಕರು ಮತ್ತಿತರ ನೌಕರರನ್ನು ಹೊಂದಿದ್ದಿತು."* 1902ರಲ್ಲಿ ಅಮೆರಿಕದ ಉಕ್ಕಿನ ಕಾರ್ಪೊರೇಷನ್ ಆಗಲೇ 9 ಮಿಲಿಯು ಟನ್ ಉಕ್ಕು ಉತ್ಪಾದಿಸಿದ್ದಿತು.** ಅದರ ಹುಟ್ಟುವಳಿಯು ಸಂಯುಕ್ತ ಸಂಸ್ಥಾನಗಳಲ್ಲಿ 1901ರಲ್ಲಿನ ಒಟ್ಟು ಉಕ್ಕಿನ ಉತ್ಪಾದನೆಯ ಶೇ. 66.3ರಷ್ಟು, 1908 ರಲ್ಲಿನ ಶೇ. 56.1ರಷ್ಟು ಆಗಿದ್ದಿತು.*** ಅದುರಿನ ಹುಟ್ಟುವಳಿ ಅನುಕ್ರಮವಾಗಿ ಶೇ. 43.9 ಹಾಗೂ ಶೇ. 46.3 ಆಗಿದ್ದಿತು.

ಟ್ರಸ್ಟ್‌ಗಳಿಗೆ ಸಂಬಂಧಿಸಿ ಅಮೆರಿಕನ್ ಸರಕಾರದ ಆಯೋಗದ ವರದಿಯು ತಿಳಿಸುತ್ತದೆ: "ಇತರ ಸ್ಪರ್ಧಿಗಳ ಮೇಲೆ ಅವುಗಳ ಉಚ್ಚತೆಗೆ ಕಾರಣ ಅವುಗಳ ಉದ್ಯಮ ಗಳ ಭಾರಿ ಪರಿಮಾಣ ಹಾಗೂ ಅವುಗಳ ಅತ್ಯುತ್ತಮ ತಾಂತ್ರಿಕ ಸಜ್ಜು. ಸ್ಥಾಪಿತ ವಾದಂದಿನಿಂದಲೂ ಹೊಗೆಸೊಪ್ಪು ಟ್ರಸ್ಟ್ ತನ್ನೆಲ್ಲ ಯತ್ನಗಳನ್ನೂ ಶಾರೀರಿಕ ಶ್ರಮದ ಸ್ಥಳದಲ್ಲಿ ಯಾಂತ್ರಿಕ ಶ್ರಮವನ್ನು ವಿಸ್ತೃತ ಪ್ರಮಾಣದಲ್ಲಿ ಜಾರಿಗೆ ತರುವುದಕ್ಕೇ ಮೀಸಲಿರಿಸಿದೆ. ಈ ಗುರಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅದು ಹೊಗೆಸೊಪ್ಪು ತಯಾರಿಕೆಗೆ ಯಾವುದೇ ರೀತಿಯಲ್ಲಿ ಸಂಬಂಧಿಸಿದಂಥ ಎಲ್ಲ ಪೇಟೆಂಟುಗಳನ್ನೂ (ಸ್ವಾಮ್ಯದ ಸನ್ನದುಗಳನ್ನು) ಕೊಂಡುಬಿಟ್ಟಿತು ಮತ್ತು ಈ ಉದ್ದೇಶಕ್ಕಾಗಿ ಭಾರಿ ಹಣವನ್ನು ಖರ್ಚುಮಾಡಿತು. ಈ ಪೇಟೆಂಟುಗಳಲ್ಲಿ ಅನೇಕವು ಮೊದಲು ನಿಷ್ಪ್ರ ಯೋಜಕವಾಗಿ ಕಂಡುಬಂದವು ಮತ್ತು ಟ್ರಸ್ಟ್‌ನ ಎಂಜಿನಿಯರುಗಳು ಅವನ್ನು ಮಾರ್ಪಡಿಸಬೇಕಾಯಿತು. 1906ರ ಕೊನೆಯಲ್ಲಿ ಪೇಟೆಂಟುಗಳನ್ನು ಪಡೆದುಕೊಳ್ಳು ವುದಕ್ಕಾಗಿಯೇ ಎರಡು ಸಹಾಯಕ ಕಂಪನಿಗಳನ್ನು ರಚಿಸಲಾಯಿತು. ಇದೇ ಗುರಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಟ್ರಸ್ಟ್ ತನ್ನ ಸ್ವಂತ ಫೌಂಡ್ರಿಗಳನ್ನೂ, ಮಷೀನ್ ಷಾಪುಗಳನ್ನೂ ರಿಪೇರಿ ಷಾಪುಗಳನ್ನೂ ನಿರ್ಮಿಸಿತು. ಈ ಯಂತ್ರಸ್ಥಾವರಗಳಲ್ಲೊಂದು, ಬ್ರೂಕ್ಲಿನ್‌ನಲ್ಲಿರುವುದು, ಸರಾಸರಿ 300 ಕಾರ್ಮಿಕರನ್ನು ಕೆಲಸಕ್ಕಿರಿಸಿಕೊಂಡಿದೆ. ಸಿಗ ರೇಟುಗಳು, ಚುಟ್ಟಾಗಳು, ನಸ್ಯ, ಪ್ಯಾಕಿಂಗ್‌ಗಾಗಿ ತಗಡಿನ ತೆಳುಹಾಳೆ, ಪೆಟ್ಟಿಗೆಗಳು, ಇತ್ಯಾದಿಗಳ ತಯಾರಿಕೆಗೆ ಸಂಬಂಧಿಸಿ ಆವಿಷ್ಕರಣಗಳ ಬಗೆಗೆ ಇಲ್ಲಿ ಪ್ರಯೋಗಗಳನ್ನು ನಡೆಸಲಾಗುತ್ತಿದೆ. ಇಲ್ಲಿ ಆವಿಷ್ಕರಣಗಳನ್ನು ಪರಿಪೂರ್ಣಗೊಳಿಸಲಾಗುತ್ತಿದೆ ಕೂಡ."****

---

* ಅದೇ ಗ್ರಂಥ, ಪು. 218.

** Dr. S. Tschierschky, *Kartelle und Trust*, Gött. (ಡಾ. ಎಸ್. ಚೀರ್‌ಸ್ಕಿ, 'ಕಾರ್ಟೆಲ್ ಹಾಗೂ ಟ್ರಸ್ಟ್,' ಗೊಟ್ಟಿಂಗೆನ್. – ಸಂ.), 1903, ಪು. 13.

*** Th. Vogelstein, *Organisationsformen*, ಪು. 275.

**** *Report of the Commissioner of Corporations of the Tobacco Industry*, Washington ('ಹೊಗೆಸೊಪ್ಪು ಕೈಗಾರಿಕೆಯ ಕಾರ್ಪೊರೇಷನ್‌ಗಳ ಕಮಿಷನರ್‌ರ ವರದಿ,' ವಾಷಿಂಗ್ಟನ್. – ಸಂ.), 1909, ಪು. 266.

“ಇತರ ಟ್ರಸ್ಟುಗಳೂ ಅಭಿವೃದ್ಧಿ ಎಂಜಿನಿಯರು(developping engineers) ಗಳನ್ನು ನೇಮಿಸಿಕೊಂಡಿವೆ. ಹೊಸ ಉತ್ಪಾದನಾ ವಿಧಾನಗಳನ್ನು ರೂಪಿಸುವುದು, ತಾಂತ್ರಿಕ ಸುಧಾರಣೆಗಳನ್ನು ಪರೀಕ್ಷಿಸುವುದು ಇವರ ಕಾರ್ಯಭಾರ. ತಾಂತ್ರಿಕ ದಕ್ಷತೆಯನ್ನು ಹೆಚ್ಚಿಸುವುದಕ್ಕೆ ಅಥವಾ ಉತ್ಪಾದನಾ ವೆಚ್ಚವನ್ನು ತಗ್ಗಿಸುವುದಕ್ಕೆ ಅನುಕೂಲವಾದ ಎಲ್ಲ ಆವಿಷ್ಕರಣಗಳಿಗಾಗಿ ಅಮೆರಿಕದ ಸಂಯುಕ್ತ ಸಂಸ್ಥಾನಗಳ ಉಕ್ಕು ಕಾರ್ಪೊರೇಷನ್ ತನ್ನ ಕಾರ್ಮಿಕರಿಗೂ ಎಂಜಿನಿಯರುಗಳಿಗೂ ಭಾರಿ ಬೋನಸ್‌ಗಳನ್ನು ನೀಡುತ್ತದೆ.” *

ಜರ್ಮನ್ ಬೃಹತ್ ಪ್ರಮಾಣದ ಕೈಗಾರಿಕೆಯಲ್ಲಿ, ಉದಾಹರಣೆಗೆ, ಕಳೆದ ಕೆಲವು ದಶಕಗಳಲ್ಲಿ ಅಪಾರವಾಗಿ ಅಭಿವೃದ್ಧಿ ಪಡೆದ ರಾಸಾಯನಿಕ ಕೈಗಾರಿಕೆಯಲ್ಲಿ, ತಾಂತ್ರಿಕ ಸುಧಾರಣೆಗೆ ಉತ್ತೇಜನ ನೀಡುವುದನ್ನು ಇದೇ ರೀತಿಯಲ್ಲಿ ಸಂಘಟಿಸಲಾಗಿದೆ. 1908ರ ಹೊತ್ತಿಗೆ ಉತ್ಪಾದನೆಯ ಕೇಂದ್ರೀಕರಣದ ಪ್ರಕ್ರಿಯೆಯು ಆಗಲೇ ಎರಡು ಮುಖ್ಯ “ವೃಂದ”ಗಳಿಗೆ ದಾರಿ ಮಾಡಿಕೊಟ್ಟಿದ್ದಿತು. ಈ ವೃಂದಗಳೂ, ತಮ್ಮದೇ ರೀತಿಯಲ್ಲಿ, ಏಕಸ್ವಾಮ್ಯ ಸಂಸ್ಥೆಗಳಾಗಿದ್ದವು. ಮೊದಲು ಈ ವೃಂದಗಳು ದೊಡ್ಡ ಕಾರ್ಖಾನೆಗಳ ಎರಡು ಜೊತೆ “ದ್ವಂದ್ವ ಕೂಟಗಳ”ನ್ನು ರಚಿಸಿದವು. ಈ ಒಂದೊಂದು ಜೊತೆ ಕಾರ್ಖಾನೆಗಳೂ 20-21 ಮಿಲಿಯ ಮಾರ್ಕುಗಳ ಬಂಡವಾಳ ಹೊಂದಿದ್ದವು. ಒಂದು ಕಡೆ ಹೋಹ್‌ಸ್ಟ್‌ನಲ್ಲಿನ ಮಾಜಿ ಮೆಯ್‌ಸ್ಟರ್ ಕಾರ್ಖಾನೆ ಹಾಗೂ ಮೇಯ್ನ್ ನದಿಯ ಮೇಲಿನ ಫ್ರಾಂಕ್‌ಫುರ್ಟ್‌ನಲ್ಲಿನ ಕಾಸ್ಸೆಲ್ಲ ಕಾರ್ಖಾನೆ; ಮತ್ತೊಂದು ಕಡೆ ಲೂಡ್ವಿಗ್ಸ್‌ಹಾಫೆನ್‌ನಲ್ಲಿನ ಅನಿಲೈನ್ (ನೀಲಿ) ಹಾಗೂ ಸೋಡಾ ಕಾರ್ಖಾನೆ ಮತ್ತು ಎಲ್ಬೆರ್‌ಫೆಲ್ಡ್‌ನಲ್ಲಿನ ಮಾಜಿ ಬೇಯರ್ ಕಾರ್ಖಾನೆ – ಇವೇ ಆ ದ್ವಂದ್ವ ಕೂಟಗಳಾಗಿದ್ದವು. ಅನಂತರ 1905ರಲ್ಲಿ ಈ ವೃಂದಗಳಲ್ಲಿ ಒಂದೂ 1908ರಲ್ಲಿ ಮತ್ತೊಂದು ವೃಂದವೂ, ಒಂದೊಂದೂ ಇನ್ನೂ ಒಂದು ದೊಡ್ಡ ಕಾರ್ಖಾನೆಯೊಂದಿಗೆ ಒಪ್ಪಂದ ಮಾಡಿಕೊಂಡಿತು. ಫಲಿತಾಂಶವಾಗಿ ಎರಡು “ಮುಕ್ಕೂಟ”ಗಳು ರೂಪುಗೊಂಡವು. ಇವುಗಳಲ್ಲಿ ಒಂದೊಂದೂ 40-50 ಮಿಲಿಯ ಮಾರ್ಕುಗಳ ಬಂಡವಾಳವನ್ನು ಹೊಂದಿದ್ದಿತು. ಈ “ಕೂಟಗಳು” ಆಗಲೇ ಪರಸ್ಪರ

---

Dr. Paul Tafel, *Die nordamerikanischen Trusts und ihre Wirkungen auf den Fortschritt der Technik*, Stuttgart (ಡಾ. ಪಾಲ್ ಟಫೆಲ್, ‘ಉತ್ತರ ಅಮೆರಿಕದ ಟ್ರಸ್ಟುಗಳು ಮತ್ತು ತಾಂತ್ರಿಕ ಪ್ರಗತಿಯ ಮೇಲೆ ಅವುಗಳ ಪ್ರಭಾವ.’ – ಸಂ.), 1913, ಪು. 48 – ಇದರಲ್ಲಿರುವಂತೆ ಉಲ್ಲೇಖಿಸಲಾಗಿದೆ.

* ಡಾ. ಪಿ. ಟಫೆಲ್, ಅದೇ ಗ್ರಂಥ, ಪು. 49.

"ಸಮೀಪ" ಬರತೊಡಗಿವೆ, ಬೆಲೆಗಳು ಇತ್ಯಾದಿಗಳ ಬಗೆಗೆ "ಒಮ್ಮನಸ್ಸಿಗೆ" ಬರತೊಡಗಿವೆ." *

ಸ್ಪರ್ಧೆಯು ಏಕಸ್ವಾಮ್ಯವಾಗಿ ಪರಿವರ್ತಿತವಾಗುತ್ತದೆ. ಫಲಿತಾಂಶವೆಂದರೆ ಉತ್ಪಾದನೆಯ ಸಾಮಾಜಿಕೀಕರಣದಲ್ಲಿ ಭಾರಿ ಪ್ರಗತಿ. ಅದರಲ್ಲೂ ನಿರ್ದಿಷ್ಟವಾಗಿ ತಾಂತ್ರಿಕ ಆವಿಷ್ಕರಣ ಹಾಗೂ ಸುಧಾರಣೆಗಳ ಪ್ರಕ್ರಿಯೆಯು ಸಾಮಾಜಿಕೀಕೃತವಾಗುತ್ತದೆ.

ಇದು ತಯಾರಿಕೆಗಾರರ ನಡುವೆ ಇದ್ದ ಹಳೆಯ ಮುಕ್ತ ಸ್ಪರ್ಧೆಯಿಂದ ತುಂಬ ಭಿನ್ನವಾದುದಾಗಿದೆ. ಹಿಂದೆ ಆ ತಯಾರಿಕೆಗಾರರು ಹರಡಿ ಹಂಚಿಹೋಗಿದ್ದರು, ಪರಸ್ಪರ ಸಂಬಂಧ ಹೊಂದಿರಲಿಲ್ಲ ಮತ್ತು ಅವರಿಗೇ ತಿಳಿದಿರದಿದ್ದಂಥ ಮಾರುಕಟ್ಟೆಗಾಗಿ ಉತ್ಪಾದನೆ ಮಾಡುತ್ತಿದ್ದರು. ಈಗ ಕೇಂದ್ರೀಕರಣವು ಎಂಥ ಮಟ್ಟ ಮುಟ್ಟಿದೆಯೆಂದರೆ, ದೇಶವೊಂದರ ಒಂದಲ್ಲ, ನಾವು ಮುಂದೆ ಕಾಣಲಿರುವಂತೆ, ಹಲವಾರು ದೇಶಗಳ ಅಥವಾ ಇಡೀ ಜಗತ್ತಿನ ಕಚ್ಚಾ ಪದಾರ್ಥಗಳ ಎಲ್ಲ ಆಕರಗಳನ್ನೂ (ಉದಾಹರಣೆಗೆ, ಕಬ್ಬಿಣದ ಅದುರು ನಿಕ್ಷೇಪಗಳನ್ನು) ಸರಿಸುಮಾರಾಗಿ ಅಂದಾಜು ಮಾಡುವುದು ಸಾಧ್ಯವಾಗಿದೆ. ಅಂತಹ ಅಂದಾಜುಗಳನ್ನು ಮಾಡಲಾಗುತ್ತಿದೆಯಷ್ಟೆ ಅಲ್ಲ, ಬೃಹತ್ ಏಕಸ್ವಾಮ್ಯ ಸಮುಚ್ಚಯಗಳು ಈ ಆಕರಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿವೆ ಕೂಡ. ಮಾರುಕಟ್ಟೆಗಳ ಸಾಮರ್ಥ್ಯವನ್ನೂ ಸರಿಸುಮಾರಾಗಿ ಅಂದಾಜು ಮಾಡಲಾಗುತ್ತಿದೆ ಮತ್ತು ಅವುಗಳನ್ನು ಸಮುಚ್ಚಯಗಳು ತಮ್ಮ ಮಧ್ಯೆಯೇ ಒಪ್ಪಂದದ ಮೂಲಕ "ಹಂಚಿ"ಕೊಳ್ಳುತ್ತಿವೆ. ಕುಶಲ ಶ್ರಮವನ್ನು ಏಕಸ್ವಾಮ್ಯಗೊಳಿಸಲಾಗಿದೆ. ಅತ್ಯುತ್ತಮ ಎಂಜಿನಿಯರುಗಳನ್ನು ಈ ಸಮುಚ್ಚಯಗಳೇ ನೇಮಕ ಮಾಡಿಕೊಳ್ಳುತ್ತಿವೆ; ಸಾರಿಗೆ ಸಾಧನಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿವೆ. ಅಮೆರಿಕದಲ್ಲಿ ರೈಲ್ವೇಗಳೂ, ಯೂರೋಪ್ ಹಾಗೂ ಅಮೆರಿಕಗಳಲ್ಲಿ ಹಡಗು ಕಂಪನಿಗಳೂ ಇದಕ್ಕೆ ನಿದರ್ಶನ. ಬಂಡವಾಳವಾದವು ತನ್ನ ಸಾಮ್ರಾಜ್ಯಶಾಹಿ ಘಟ್ಟದಲ್ಲಿ ಉತ್ಪಾದನೆಯ ಅತ್ಯಂತ ಸಮಗ್ರ ಸಾಮಾಜಿಕೀಕರಣಕ್ಕೆ ದಾರಿ ಮಾಡಿಕೊಡುತ್ತದೆ. ಅದು ಬಂಡವಾಳಗಾರರನ್ನು ಅವರ ಸಂಕಲ್ಪಕ್ಕೂ ಪ್ರಜ್ಞೆಗೂ ವಿರೋಧವಾಗಿ, ಒಂದು ರೀತಿಯ ಹೊಸ ಸಾಮಾಜಿಕ ವ್ಯವಸ್ಥೆಯತ್ತ, ಸಂಪೂರ್ಣ ಮುಕ್ತ ಸ್ಪರ್ಧೆಯಿಂದ ಸಂಪೂರ್ಣ ಸಾಮಾಜಿಕೀಕರಣಕ್ಕೆ ಪರಿವರ್ತನೆಯ ವ್ಯವಸ್ಥೆಯತ್ತ, ಹೀಗೆ ಹೇಳಬಹುದಾದರೆ, ಎಳೆದೊಯ್ಯುತ್ತದೆ.

ಉತ್ಪಾದನೆಯೇನೋ ಸಾಮಾಜಿಕವಾಗುತ್ತದೆ, ಆದರೆ ಬಳಕೆಯು ಖಾಸಗಿಯಾ

---

* Riesser, ಪೂರ್ವೋಕ್ತ ಗ್ರಂಥ, ತೃತೀಯ ಆವೃತ್ತಿ, ಪು. 547ರಿಂದ. ವೃತ್ತಪತ್ರಿಕೆಗಳು (ಜೂನ್ 1916) ಒಂದು ಹೊಸ ಬೃಹತ್ ಟ್ರಸ್ಟು ರೂಪುಗೊಂಡಿರುವ ವಿಷಯವನ್ನು ವರದಿ ಮಾಡಿವೆ. ಈ ಟ್ರಸ್ಟು ಜರ್ಮನಿಯ ರಾಸಾಯನಿಕ ಕೈಗಾರಿಕೆಯನ್ನು ಒಂದುಗೂಡಿಸುತ್ತದೆ.

ಗಿಯೇ ಉಳಿದಿರುತ್ತದೆ. ಸಾಮಾಜಿಕ ಉತ್ಪಾದನಾ ಸಾಧನಗಳು ಕೆಲವೇ ಜನರ ಖಾಸಗಿ ಆಸ್ತಿಯಾಗಿಯೇ ಉಳಿದಿರುತ್ತವೆ. ಮುಕ್ತ ಸ್ಪರ್ಧೆಯ ಸಾಮಾನ್ಯ ಚೌಕಟ್ಟು ಔಪಚಾರಿಕವಾಗಿ ಮನ್ನಿತವಾಗಿರುತ್ತದೆ, ಆದರೆ ಕೆಲವೇ ಏಕಸ್ವಾಮ್ಯಾಧಿಪತಿಗಳು ಜನಸಂಖ್ಯೆಯ ಉಳಿದ ಜನರೆಲ್ಲರ ಮೇಲೆ ಹೊರಿಸುವ ನೊಗವು ಇನ್ನೂ ಹೆಚ್ಚು ಭಾರವಾಗುತ್ತದೆ, ಹೊರೆಯಾಗುತ್ತದೆ, ಅಸಹನೀಯವಾಗುತ್ತದೆ.

ಜರ್ಮನ್ ಅರ್ಥಶಾಸ್ತ್ರಜ್ಞ ಕೆಸ್ಟ್ನೆರ್‌ರು "ಕಾರ್ಟೆಲ್‌ಗಳಿಗೂ ಹೊರಗಿನವರಿಗೂ" (ಅಂದರೆ ಕಾರ್ಟೆಲ್‌ಗಳಿಂದ ಹೊರಗಿರುವ ಬಂಡವಾಳಗಾರರಿಗೂ) "ನಡುವಿನ ಹೋರಾಟ"ಕ್ಕೆ ವಿಶೇಷವಾಗಿ ಮೀಸಲಾದ ಗ್ರಂಥವೊಂದನ್ನು ರಚಿಸಿದ್ದಾರೆ. ಅವರು ತಮ್ಮ ಕೃತಿಗೆ 'ಕಡ್ಡಾಯದ ಸಂಘಟನೆ' ಎಂಬ ಶೀರ್ಷಿಕೆ ನೀಡಿದ್ದಾರೆ. ಆದರೆ ಬಂಡವಾಳವಾದವನ್ನು ಅದರ ನಿಜವಾದ ರೂಪದಲ್ಲಿ ತೋರಿಸಲು ಅವರು ಏಕಸ್ವಾಮ್ಯ ಸಮುಚ್ಚಯಗಳಿಗೆ ಕಡ್ಡಾಯ ಅಧೀನತೆಯ ಬಗೆಗೆ ಬರೆಯಬೇಕಾಗಿದ್ದಿತೆನ್ನಿ. ಕೊನೆಯ ಪಕ್ಷ, "ಸಂಘಟನೆಗಾಗಿ" ಅತ್ಯಾಧುನಿಕ, ನವೀನ ನಾಗರಿಕ ಹೋರಾಟದಲ್ಲಿ, ಏಕಸ್ವಾಮ್ಯ ಸಮುಚ್ಚಯಗಳು ಇಂದು ಬಳಸುವ ಇತ್ತೀಚೆಗಿನ ವಿಧಾನಗಳ ಕಡೆಗೆ ಕ್ಷಣನೋಟ ಹರಿಸುವುದು ಬೋಧಾತ್ಮಕವಾಗಿರುತ್ತದೆ: 1) ಕಚ್ಚಾ ಪದಾರ್ಥಗಳ ಸರಬರಾಜುಗಳನ್ನು ನಿಲ್ಲಿಸುವುದು (... "ಕಾರ್ಟೆಲ್‌ಗಳಿಗೆ ಅಧೀನತೆಯನ್ನು ಒತ್ತಾಯಿಸುವ ಅತ್ಯಂತ ಮುಖ್ಯ ವಿಧಾನಗಳಲ್ಲೊಂದು"); 2) ಶ್ರಮಿಕರ ಸರಬರಾಜನ್ನು "ಕೂಟಗಳ" ಮೂಲಕ (ಅಂದರೆ, ಕಾರ್ಟೆಲ್‌ಗಳಿಗೆ ಸೇರಿದ ಉದ್ಯಮಗಳಲ್ಲಷ್ಟೆ ಕೆಲಸ ಮಾಡುವಂತೆ ಟ್ರೇಡ್ ಯೂನಿಯನ್‌ಗಳು ತಮ್ಮ ಸದಸ್ಯರಿಗೆ ಅನುಮತಿ ನೀಡುವ ಹಾಗೆ ಟ್ರೇಡ್ ಯೂನಿಯನ್‌ಗಳಿಗೂ ಬಂಡವಾಳಗಾರರಿಗೂ ಮಧ್ಯೆ ಮಾಡಿಕೊಳ್ಳಲಾಗುವ ಒಪ್ಪಂದಗಳ ಮೂಲಕ) ನಿಲ್ಲಿಸುವುದು; 3) ಸರಕು ಸರಬರಾಜನ್ನು ನಿಲ್ಲಿಸುವುದು; 4) ವಾಣಿಜ್ಯ ದ್ವಾರಗಳನ್ನು ಮುಚ್ಚುವುದು; 5) ಕೊಳ್ಳುವವರು ಕಾರ್ಟೆಲ್‌ಗಳೊಂದಿಗಷ್ಟೆ ವ್ಯಾಪಾರ ಮಾಡುವಂತೆ ಕೊಳ್ಳುವವರೊಂದಿಗೆ ಒಪ್ಪಂದ ಮಾಡಿಕೊಳ್ಳುವುದು; 6) ಕ್ರಮಬದ್ಧವಾಗಿ ಬೆಲೆಗಳನ್ನು ತಗ್ಗಿಸುವುದು (ಏಕಸ್ವಾಮ್ಯಾಧಿಪತಿಗಳಿಗೆ ಅಧೀನರಾಗಿರಲು ನಿರಾಕರಿಸುವಂಥ "ಹೊರಗಿನ" ವ್ಯಾಪಾರ ಸಂಸ್ಥೆಗಳನ್ನು ನಾಶಗೊಳಿಸಲು, ವಸ್ತುಗಳನ್ನು ಸ್ವಲ್ಪ ಕಾಲ ಅವುಗಳ ತಯಾರಿಕೆಗೆ ತಗಲುವ ವೆಚ್ಚಕ್ಕಿಂತ ಕಮ್ಮಿ ಬೆಲೆಗಳಿಗೆ ಮಾರಲು ಮಿಲಿಯಗಟ್ಟಲೆ ಹಣ ಖರ್ಚು ಮಾಡಲಾಗುವುದು; ಪೆಟ್ರೋಲಿನ ಬೆಲೆಯನ್ನು 40ರಿಂದ 22 ಮಾರ್ಕುಗಳಿಗೆ, ಅಂದರೆ ಬಹುಮಟ್ಟಿಗೆ ಅರ್ಧದಷ್ಟು, ಕಮ್ಮಿ ಮಾಡಿದ ಅನೇಕ ಪ್ರಸಂಗಗಳಿದ್ದವು!); 7) ಸಾಲ ನೀಡಿಕೆಯನ್ನು ನಿಲ್ಲಿಸುವುದು; 8) ಬಹಿಷ್ಕಾರ ಹಾಕುವುದು.

ನಮ್ಮ ಮುಂದಿರುವುದು ಇನ್ನೆಷ್ಟು ಮಾತ್ರವೂ ಪುಟ್ಟ ಹಾಗೂ ದೊಡ್ಡ, ತಾಂತ್ರಿಕವಾಗಿ ಅಭಿವೃದ್ಧಿಗೊಂಡ ಹಾಗೂ ಹಿಂದುಳಿದ, ಉದ್ಯಮಗಳ ನಡುವೆ ಸ್ಪರ್ಧೆ ಅಲ್ಲ ಏಕಸ್ವಾಮ್ಯಾಧಿಪತಿಗಳು ತಮಗೆ, ತಮ್ಮ ನೊಗಕ್ಕೆ, ತಮ್ಮ ಆದೇಶಕ್ಕೆ ಅಧೀನ

ರಾಗಲು ನಿರಾಕರಿಸುವಂಥವರ ಕತ್ತು ಹಿಸುಕುತ್ತಿರುವುದನ್ನು ಇಲ್ಲಿ ನಾವು ಕಾಣುತ್ತೇವೆ. ಈ ಪ್ರಕ್ರಿಯೆಯು ಬೂರ್ಷ್ವಾ ಅರ್ಥಶಾಸ್ತ್ರಜ್ಞರೊಬ್ಬರ ಮನಸ್ಸಿನಲ್ಲಿ ಈ ಕೆಳಗಿನಂತೆ ಪ್ರತಿಬಿಂಬಿತವಾಗಿದೆ:

"ಶುದ್ಧ ಆರ್ಥಿಕ ವಲಯದಲ್ಲೂ" ಕೆಸ್ಟ್ನರ್ ಬರೆಯುತ್ತಾರೆ, "ಹಳೆಯ ಅರ್ಥದಲ್ಲಿ ವಾಣಿಜ್ಯ ಚಟುವಟಿಕೆಯಿಂದ ಸಂಘಟನಾತ್ಮಕ ಕಾಳಸಂತೆ ಚಟುವಟಿಕೆಯತ್ತ ಏನೋ ಒಂದು ಬದಲಾವಣೆ ಜರುಗುತ್ತಿದೆ. ತನ್ನ ತಾಂತ್ರಿಕ ಹಾಗೂ ವಾಣಿಜ್ಯ ಅನುಭವದಿಂದ ಕೊಳ್ಳುವವರ ಆವಶ್ಯಕತೆಗಳನ್ನು ಅತ್ಯುತ್ತಮವಾಗಿ ಅಂದಾಜು ಮಾಡಬಲ್ಲಂಥ ವರ್ತಕನಿಗೆ, ಗುಪ್ತವಾದ ಕೇಳಿಕೆಯೊಂದನ್ನು ಪತ್ತೆಹಚ್ಚುವ ಹಾಗೂ ಒಂದು ರೀತಿಯಲ್ಲಿ ಹೇಳುವುದಾದರೆ, 'ಜಾಗೃತಗೊಳಿಸುವ' ಸಾಮರ್ಥ್ಯವನ್ನು ಹೊಂದಿರುವಂಥ ವರ್ತಕನಿಗೆ, ಅತ್ಯಂತ ಹೆಚ್ಚಿನ ಯಶಸ್ಸು ಇನ್ನೆಷ್ಟು ಮಾತ್ರವೂ ಲಭಿಸುತ್ತಿಲ್ಲ. ಸಂಘಟನಾತ್ಮಕ ಬೆಳವಣಿಗೆಯನ್ನೂ, ಬಿಡಿ ಉದ್ಯಮಗಳಿಗೂ ಬ್ಯಾಂಕುಗಳಿಗೂ ಮಧ್ಯೆ ಕೆಲವು ಸಂಬಂಧಗಳಿರುವ ಸಾಧ್ಯತೆಗಳನ್ನೂ, ಅಂದಾಜು ಮಾಡುವುದನ್ನು ಅಥವಾ ಮುಂದಾಗಿ ಮನಗಾಣುವುದನ್ನು ಕೂಡ, ತಿಳಿದಿರುವಂಥ ಕಾಳಸಂತೆ ವ್ಯಾಪಾರದ ಪ್ರತಿಭಾಶಾಲಿಗೆ" (? !) "ಯಶಸ್ಸು ಲಭಿಸುತ್ತಿದೆ..."

ಮಾಮೂಲಿ ಮಾನವ ಭಾಷೆಗೆ ಪರಿವರ್ತಿಸಿದರೆ, ಬಂಡವಾಳವಾದದ ಬೆಳವಣಿಗೆಯು ಯಾವ ಘಟ್ಟ ತಲುಪಿದೆಯೆಂದರೆ, ಇದರಲ್ಲಿ ಸರಕು ಉತ್ಪಾದನೆಯು ಇನ್ನೂ "ರಾಜ್ಯಭಾರ" ಮಾಡುತ್ತಿದ್ದರೂ ಮತ್ತು ಆರ್ಥಿಕ ಜೀವನದ ಆಧಾರವಾಗಿ ಪರಿಗಣಿಸಲ್ಪಡುತ್ತಲೇ ಇದ್ದರೂ, ವಾಸ್ತವವಾಗಿ ಅದು ಶಿಥಿಲಗೊಳಿಸಲ್ಪಟ್ಟಿದೆ ಮತ್ತು ಲಾಭಗಳ ಬಹುಭಾಗವು ಹಣಕಾಸು ವ್ಯವಹಾರದ ಚತುರ "ಪ್ರತಿಭಾಶಾಲಿಗಳಿ"ಗೇ ಹೋಗುತ್ತಿದೆ ಎಂದು ಇದರ ಅರ್ಥವಾಗುತ್ತದೆ. ಈ ವ್ಯವಹಾರ ಚಾತುರ್ಯಗಳ ಹಾಗೂ ಮೋಸಕೃತ್ಯಗಳ ಆಧಾರದಲ್ಲಿ ಉತ್ಪಾದನೆಯ ಸಾಮಾಜಿಕೀಕರಣ ಇರುತ್ತದೆ; ಆದರೆ ಈ ಸಾಮಾಜಿಕೀಕರಣವನ್ನು ಸಾಧಿಸಿದಂಥ ಮಾನವಕುಲದ ಅಪಾರ ಪ್ರಗತಿಯು ಯಾರಿಗೆ ಲಾಭ ತಂದುಕೊಡುತ್ತದೆಂದರೆ... ಕಾಳಸಂತೆ ವ್ಯಾಪಾರಿಗಳಿಗೆ. ಬಂಡವಾಳಶಾಹಿ ಸಾಮ್ರಾಜ್ಯವಾದದ ಪ್ರತಿಗಾಮಿ ಪೆಟಿ ಬೂರ್ಷ್ವಾ ವಿಮರ್ಶಕರು ಹೇಗೆ "ಈ ಆಧಾರಗಳ ಮೇಲೆಯೇ" "ಮುಕ್ತ," "ಶಾಂತಿಯುತ" ಹಾಗೂ "ಪ್ರಾಮಾಣಿಕ" ಸ್ಪರ್ಧೆಗೆ ಹಿಂದಿರುಗುವ ಕನಸು ಕಾಣುತ್ತಾರೆಂಬುದನ್ನು ನಾವು ಮುಂದೆ ಕಾಣುವೆವು.

"ಕಾರ್ಟೆಲ್‌ಗಳ ನಿರ್ಮಾಣದ ಫಲವಾಗಿ ಬೆಲೆಗಳು ದೀರ್ಘಕಾಲ ಏರುತ್ತ ಹೋಗುವುದು ಇದುವರೆವಿಗೂ ಅತ್ಯಂತ ಮುಖ್ಯ ಉತ್ಪಾದನಾ ಸಾಧನಗಳಿಗೆ ಸಂಬಂಧಿಸಿಯಷ್ಟೆ, ನಿರ್ದಿಷ್ಟವಾಗಿ ಕಲ್ಲಿದ್ದಲು, ಕಬ್ಬಿಣ ಹಾಗೂ ಪೊಟ್ಯಾಸಿಯಂಗಳಿಗೆ ಸಂಬಂಧಿಸಿ, ಕಂಡುಬಂದಿದೆ, ಆದರೆ ತಯಾರಿತ ವಸ್ತುಗಳಿಗೆ ಸಂಬಂಧಿಸಿ ಎಂದೂ ಕಂಡುಬಂದಿಲ್ಲ" ಎಂದು ಕೆಸ್ಟ್ನರ್ ಹೇಳುತ್ತಾರೆ. "ಅದೇ ರೀತಿ, ಈ ಬೆಲೆಗಳ ಹೆಚ್ಚಳದಿಂದಾಗಿ ಉಂಟಾಗುವ ಲಾಭಗಳಲ್ಲಿನ ಹೆಚ್ಚಳವು ಉತ್ಪಾದನಾ ಸಾಧನಗಳನ್ನು ಉತ್ಪಾದಿಸುವ

ಕೈಗಾರಿಕೆಗಳಿಗೆ ಅಷ್ಟೆ ಸೀಮಿತವಾಗಿದೆ. ಇದಕ್ಕೆ ಇನ್ನೊಂದು ಮಾತು ಸೇರಿಸಬೇಕು; ಕಚ್ಚಾ ಪದಾರ್ಥಗಳನ್ನು (ಅರೆ ತಯಾರಿತ ವಸ್ತುಗಳನ್ನಲ್ಲ) ಪರಿಷ್ಕರಿಸುವ ಕೈಗಾರಿಕೆಗಳು ಕಾರ್ಟೆಲ್ ನಿರ್ಮಾಣದಿಂದ, ಸಿದ್ಧಗೊಂಡ ವಸ್ತುಗಳ ಕೈಗಾರಿಕೆಗೆ ಪ್ರತಿಕೂಲವಾಗಿ, ಅಧಿಕ ಲಾಭಗಳ ರೂಪದಲ್ಲಿ ಅಧಿಕಾನುಕೂಲಗಳನ್ನು ಪಡೆದುಕೊಳ್ಳುತ್ತವಷ್ಟೆ ಅಲ್ಲ, ಈ ಎರಡನೆಯ ಕೈಗಾರಿಕೆಯ ಮೇಲೆ ಆಧಿಪತ್ಯ ಸ್ಥಾನವನ್ನೂ, ಮುಕ್ತ ಸ್ಪರ್ಧೆಯ ಕೆಳಗೆ ಇರದಿದ್ದಂಥ ಸ್ಥಾನವನ್ನೂ, ಪಡೆದುಕೊಂಡಿತು."*

ಬೂರ್ಷ್ವಾ ಅರ್ಥಶಾಸ್ತ್ರಜ್ಞರು ತೀರ ಮನಸ್ಸಿಲ್ಲದೆ ಹಾಗೂ ತೀರ ಅಪರೂಪವಾಗಿ ಒಪ್ಪಿಕೊಳ್ಳುವಂಥ, ಕೆ. ಕೌತ್ಸ್ಕಿಯ ನೇತೃತ್ವದಲ್ಲಿ ಇಂದು ಸಂದರ್ಭಸಾಧಕವಾದವನ್ನು ಬೆಂಬಲಿಸುತ್ತಿರುವವರು ಅಷ್ಟು ಹಠೋತ್ಸಾಹದಿಂದ ಉತ್ತರ ತಪ್ಪಿಸಲು ಹಾಗೂ ತಳ್ಳಿ ಹಾಕಲು ಯತ್ನಿಸುತ್ತಿರುವ ಪ್ರಸಂಗದ ಸಾರವನ್ನು ನಾವು ಮೇಲೆ ಅಡಿಗೆರೆ ಹಾಕಿರುವ ಮಾತುಗಳು ಹೊರಗೆಡಹುತ್ತವೆ. ಆಧಿಪತ್ಯ ಸ್ಥಾನ ಹಾಗೂ ಅದರೊಂದಿಗೆ ಹೋಗುವ ಹಿಂಸಾಚಾರ – ಇವು "ಬಂಡವಾಳಶಾಹಿ ಬೆಳವಣಿಗೆಯ ಇತ್ತೀಚಿಗಿನ ಮಜಲಿ"ನ ಮಾದರಿ ಸಂಬಂಧಗಳಾಗಿವೆ. ಸರ್ವಶಕ್ತ ಆರ್ಥಿಕ ಏಕಸ್ವಾಮ್ಯ ಸಂಸ್ಥೆಗಳ ನಿರ್ಮಾಣದಿಂದ ಅನಿವಾರ್ಯವಾಗಿ ಫಲಗೊಳ್ಳಬೇಕಾಗಿದ್ದುದು ಮತ್ತು ಫಲಗೊಂಡುದು ಇದೇ ಆಗಿದೆ.

ಕಾರ್ಟೆಲ್‌ಗಳು ಉಪಯೋಗಿಸಿದ ವಿಧಾನಗಳಿಗೆ ನಾವು ಮತ್ತೊಂದು ನಿದರ್ಶನವನ್ನು ನೀಡುವೆವು. ಎಲ್ಲಿ ಕಚ್ಚಾ ಪದಾರ್ಥಗಳ ಎಲ್ಲ ಅಥವಾ ಪ್ರಧಾನ ಆಕರಗಳನ್ನು ವಶಪಡಿಸಿಕೊಳ್ಳುವುದು ಸಾಧ್ಯವೋ ಅಲ್ಲಿ ಕಾರ್ಟೆಲ್‌ಗಳ ಉದ್ಭವ ಹಾಗೂ ಏಕಸ್ವಾಮ್ಯ ಸಂಸ್ಥೆಗಳ ನಿರ್ಮಾಣ ವಿಶೇಷವಾಗಿ ಸುಲಭ. ಆದರೆ ಕಚ್ಚಾ ಪದಾರ್ಥಗಳ ಆಕರಗಳನ್ನು ವಶಪಡಿಸಿಕೊಳ್ಳಲು ಸಾಧ್ಯವಿಲ್ಲದಿರುವಂಥ ಇತರ ಕೈಗಾರಿಕೆಗಳಲ್ಲಿ ಏಕಸ್ವಾಮ್ಯ ಸಂಸ್ಥೆಗಳು ಹುಟ್ಟಿಕೊಳ್ಳುವುದಿಲ್ಲ ಎಂದು ಭಾವಿಸುವುದು ತಪ್ಪಾಗುತ್ತದೆ. ಸಿಮೆಂಟ್ ಕೈಗಾರಿಕೆಯು ಇದಕ್ಕೆ ಒಂದು ನಿದರ್ಶನ. ಅದರ ಕಚ್ಚಾ ಪದಾರ್ಥಗಳನ್ನು ಎಲ್ಲೆಲ್ಲೂ ಕಾಣಬಹುದಾಗಿದೆ. ಆದರೂ ಜರ್ಮನಿಯಲ್ಲಿ ಈ ಕೈಗಾರಿಕೆಯೂ ಪ್ರಬಲವಾಗಿ ಕಾರ್ಟೆಲೀಕೃತವಾಗಿದೆ. ಸಿಮೆಂಟ್ ತಯಾರಿಕೆಗಾರರು ಪ್ರಾದೇಶಿಕ ಸಿಂಡಿಕೇಟುಗಳನ್ನು ರೂಪಿಸಿದ್ದಾರೆ: ದಕ್ಷಿಣ ಜರ್ಮನ್, ರೈನ್-ವೆಸ್ಟ್‌ಫಾಲಿಯನ್, ಇತ್ಯಾದಿ. ಗೊತ್ತುಪಡಿಸಲಾದ ಬೆಲೆಗಳು ಏಕಸ್ವಾಮ್ಯ ಬೆಲೆಗಳು: ಉತ್ಪಾದನಾ ವೆಚ್ಚ 180 ಮಾರ್ಕುಗಳಾಗಿದ್ದಾಗ ವ್ಯಾಗನ್‌ಗೆ 230ರಿಂದ 280 ಮಾರ್ಕುಗಳು! ಉದ್ಯಮಗಳು ಶೇ. 12ರಿಂದ ಶೇ. 16ರವರೆಗೆ ಡಿವಿಡೆಂಡುಗಳನ್ನು ನೀಡುತ್ತವೆ – ಈ ಡಿವಿಡೆಂಡುಗಳಲ್ಲದೆ ಭಾರಿ ಲಾಭಗಳನ್ನು ಹೇಗೆ ಲಪಟಾಯಿಸಬೇಕೆಂಬುದನ್ನು ಆಧುನಿಕ ಕಾಳಸಂತೆ ವ್ಯಾಪಾರದ "ಪ್ರತಿಭಾಶಾಲಿಗಳು" ತಿಳಿದಿರುತ್ತಾರೆಂಬುದನ್ನೂ ಮರೆಯು

---

* ಕೆಸ್ಟ್ನೆರ್, ಪೂರ್ವೋಕ್ತ ಗ್ರಂಥ, ಪು. 254.

3*

ಕೂಡದು. ಅಂತಹ ಲಾಭದಾಯಕವಾದ ಕೈಗಾರಿಕೆಯಲ್ಲಿ ಸ್ಪರ್ಧೆಯನ್ನು ತಪ್ಪಿಸಲು ಏಕಸ್ವಾಮ್ಯಾಧಿಪತಿಗಳು ನಾನಾ ಹಂಚಿಕೆಗಳನ್ನೂ ಹೂಡುತ್ತಾರೆ: ತಮ್ಮ ಕೈಗಾರಿಕೆಯಲ್ಲಿ ಪರಿಸ್ಥಿತಿ ಕೆಟ್ಟಿದೆ ಎಂದು ಸುಳ್ಳು ವದಂತಿಗಳನ್ನು ಹಬ್ಬಿಸುತ್ತಾರೆ; ಪತ್ರಿಕೆಗಳಲ್ಲಿ ಈ ಕೆಳಗಿನಂತೆ ಅನಾಮಿಕ ಎಚ್ಚರಿಕೆಗಳನ್ನೂ ಪ್ರಕಟಿಸುತ್ತಾರೆ: "ಬಂಡವಾಳಗಾರರೇ, ನಿಮ್ಮ ಬಂಡವಾಳವನ್ನು ಸಿಮೆಂಟ್ ಕಾರ್ಖಾನೆಯಲ್ಲಿ ತೊಡಗಿಸಬೇಡಿ!"; ಕೊನೆಯದಾಗಿ, ಅವರು "ಹೊರಗಿನವರ" (ಸಿಂಡಿಕೇಟ್‌ಗಳಿಂದ ಹೊರಗಿರುವವರ) ಉದ್ಯಮಗಳನ್ನು ಕೊಂಡುಕೊಂಡು ಬಿಡುತ್ತಾರೆ ಮತ್ತು ಅವರಿಗೆ 60,000, 80,000 ಹಾಗೂ 150,000 ಮಾರ್ಕುಗಳಾಗುವಷ್ಟು "ಪರಿಹಾರ" ನೀಡುತ್ತಾರೆ.* ಏಕಸ್ವಾಮ್ಯ ಸಂಸ್ಥೆಯು ಪ್ರತಿಸ್ಪರ್ಧಿಗಳನ್ನು ಕೊಳ್ಳಲು "ಸ್ವಲ್ಪ" ಹಣ ನೀಡುವುದರಿಂದ ಹಿಡಿದು ಅವರ ವಿರುದ್ಧ ಡೈನಮೈಟ್ "ಪ್ರಯೋಗಿಸುವ" ಅಮೆರಿಕನ್ ಪದ್ಧತಿಯವರೆಗೆ, ಸಾಧನದ ಬಗೆಗೆ ಯಾವ ಅಳುಕೂ ಇಲ್ಲದೆ ಎಲ್ಲೆಲ್ಲೂ ತನ್ನ ಮಾರ್ಗವನ್ನು ತಾನು ನಿರ್ಮಿಸಿಕೊಳ್ಳುತ್ತದೆ.

ಕಾರ್ಟೆಲ್‌ಗಳು ಮುಗ್ಗಟ್ಟುಗಳನ್ನು ತೊಡೆದು ಹಾಕಬಲ್ಲವು ಎಂಬ ಹೇಳಿಕೆಯು, ಬಂಡವಾಳವಾದವನ್ನು ಹೇಗಾದರೂ ಸರಿ ಒಳ್ಳೆಯದೆಂದು ತೋರಿಸಲು ಬಯಸುವ ಬೂರ್ಷ್ವಾ ಅರ್ಥಶಾಸ್ತ್ರಜ್ಞರು ಹರಡಿರುವ ಕಟ್ಟುಕಥೆಯಾಗಿದೆ. ತದ್ವಿರುದ್ಧವಾಗಿ, ಕೈಗಾರಿಕೆಯ ಕೆಲವು ಶಾಖೆಗಳಲ್ಲಿ ಸೃಜಿತವಾಗುವ ಏಕಸ್ವಾಮ್ಯವು ಒಟ್ಟಿನ ಮೇಲೆ ಬಂಡವಾಳಶಾಹಿ ಉತ್ಪಾದನೆಯಲ್ಲಿ ಅಂತರ್ಗತವಾದ ಅರಾಜಕತೆಯನ್ನು ಹೆಚ್ಚಿಸುತ್ತದೆ, ತೀವ್ರಗೊಳಿಸುತ್ತದೆ. ಒಟ್ಟಿನಲ್ಲಿ ಬಂಡವಾಳವಾದದ ವಿಶಿಷ್ಟ ಲಕ್ಷಣವಾದ, ಕೃಷಿ ಹಾಗೂ ಕೈಗಾರಿಕಾ ಬೆಳವಣಿಗೆಗಳ ನಡುವಿನ ವ್ಯತ್ಯಾಸವು ಹೆಚ್ಚುತ್ತದೆ. ಅತ್ಯುನ್ನತವಾಗಿ ಕಾರ್ಟೆಲೀಕೃತವಾದ, ಭಾರಿ ಎಂದು ಕರೆಯಲಾಗುವಂತಹ ಕೈಗಾರಿಕೆಯು, ಅದರಲ್ಲೂ ವಿಶೇಷವಾಗಿ ಕಲ್ಲಿದ್ದಲು ಹಾಗೂ ಕಬ್ಬಿಣ ಕೈಗಾರಿಕೆಯು, ಪ್ರತಿಷ್ಠಿತ ಸ್ಥಾನವು ಕೈಗಾರಿಕೆಯ ಇತರ ಶಾಖೆಗಳಲ್ಲಿ "ಇನ್ನೂ ಹೆಚ್ಚು ಯೋಜನಾರಾಹಿತ್ಯತೆಯನ್ನು" ಉಂಟುಮಾಡುತ್ತದೆ – "ಕೈಗಾರಿಕೆಯೊಂದಿಗೆ ಜರ್ಮನ್ ಭಾರಿ ಬ್ಯಾಂಕುಗಳ ಸಂಬಂಧದ ಕುರಿತು" ಅತ್ಯುತ್ತಮ ಕೃತಿಗಳಲ್ಲೊಂದರ ಕರ್ತೃ ಯೆಯ್‌ಡೆಲ್ಸ್ ಹೇಳುವಂತೆ.**

---

* *Zement* von L. Eschwege, *Die Bank*[20] (ಎಲ್. ಎಷ್ವೆಗೆ, 'ಸಿಮೆಂಟ್,' 'ದಿ ಬ್ಯಾಂಕ್.' – ಸಂ.), 1909, 1, ಪು. 115 ಮುಂತಾದವು.

** Jeidels, *Das Verhältnis der deutschen Großbanken zur Industrie mit besonderer Berücksichtigung der Eisenindustrie*, Lpz. (ಯೆಯ್‌ಡೆಲ್ಸ್, 'ಕೈಗಾರಿಕೆಯೊಂದಿಗೆ ಜರ್ಮನ್ ದೊಡ್ಡ ಬ್ಯಾಂಕುಗಳ ಸಂಬಂಧ, ಲೋಹ ಕೈಗಾರಿಕೆಯೊಂದಿಗೆ ವಿಶೇಷವಾಗಿ,' ಲೈಪ್ಸಿಗ್. – ಸಂ.), 1905, ಪು. 271.

ಬಂಡವಾಳವಾದದ ನಾಚಿಕೆಗೆಟ್ಟ ಸಮರ್ಥಕ ಲೀಫ್‌ಮನ್ ಬರೆಯುತ್ತಾರೆ: "ಆರ್ಥಿಕ ಪದ್ಧತಿ ಎಷ್ಟು ಅಭಿವೃದ್ಧಿಗೊಂಡರೆ, ಅಷ್ಟು ಅದು ಅಪಾಯ ಸಂಭವದ ಉದ್ಯಮಗಳಲ್ಲಿ, ಅಥವಾ ಹೊರದೇಶಗಳ ಉದ್ಯಮಗಳಲ್ಲಿ, ಅಭಿವೃದ್ಧಿಗೊಳ್ಳಲು ತುಂಬ ಸಮಯ ಅವಶ್ಯವಾದಂಥವುಗಳಲ್ಲಿ, ಅಥವಾ, ಕೊನೆಯದಾಗಿ, ಸ್ಥಳೀಯ ಪ್ರಾಮುಖ್ಯತೆ ಮಾತ್ರ ಇರುವಂಥವುಗಳಲ್ಲಿ, ಆಶ್ರಯ ಕಂಡುಕೊಳ್ಳುತ್ತದೆ."* ಬಂಡವಾಳವು ಕಟ್ಟಕಡೆಯಲ್ಲಿ ಅತ್ಯಪಾರವಾಗಿ ಹೆಚ್ಚುವುದರಲ್ಲಿ ಹೆಚ್ಚಿನ ಅಪಾಯವಿರುತ್ತದೆ. ಹೀಗೆ ಹೆಚ್ಚಾದ ಬಂಡವಾಳವು ಅಂಚನ್ನೂ ದಾಟಿ ಹೊರಸೂಸತೊಡಗುವಂತಾಗುತ್ತದೆ, ಹೊರದೇಶಗಳಿಗೆ ಹರಿಯತೊಡಗುತ್ತದೆ, ಇತ್ಯಾದಿ. ಅದೇ ಹೊತ್ತಿನಲ್ಲಿ ತಾಂತ್ರಿಕ ಪ್ರಗತಿಯು ಅತ್ಯಂತ ಶೀಘ್ರ ಗತಿಯಲ್ಲಿ ಜರುಗುವುದು ರಾಷ್ಟ್ರೀಯ ಆರ್ಥಿಕತೆಯ ನಾನಾ ವಲಯಗಳ ನಡುವೆ ಹೆಚ್ಚುತ್ತಿರುವ ಅಂತರದ ಅಂಶಗಳಿಗೆ, ಅರಾಜಕತೆಗೆ, ಮುಗ್ಗಟ್ಟುಗಳಿಗೆ, ದಾರಿ ಮಾಡಿಕೊಡುತ್ತದೆ. ಲೀಫ್‌ಮನ್‌ರು ಇದನ್ನು ಒಪ್ಪಿಕೊಳ್ಳುವ ಬಲವಂತಕ್ಕೊಳಗಾಗಿದ್ದಾರೆ: "ಬಹುಶಃ ಮಾನವಕುಲವು ಸಮೀಪ ಭವಿಷ್ಯತ್ತಿನಲ್ಲೇ ಮತ್ತಷ್ಟು ಮುಖ್ಯ ತಾಂತ್ರಿಕ ಪರಿವರ್ತನೆಗಳನ್ನು ಕಾಣುವುದು. ಅವು ಆರ್ಥಿಕ ಪದ್ಧತಿಯ ಸಂಘಟನೆಯ ಮೇಲೂ ಪ್ರಭಾವ ಬೀರುತ್ತವೆ...." ವಿದ್ಯುಚ್ಛಕ್ತಿ ಹಾಗೂ ವಿಮಾನಯಾನ.... "ಸಾಮಾನ್ಯವಾಗಿ, ಆಮೂಲಾಗ್ರ ಆರ್ಥಿಕ ಬದಲಾವಣೆಯ ಅಂಥ ಕಾಲಾವಧಿಗಳಲ್ಲಿ ಕಾಳಸಂತೆ ವ್ಯಾಪಾರವು ವಿಶಾಲ ಪ್ರಮಾಣದಲ್ಲಿ ಬೆಳೆಯುತ್ತದೆ...."**

ಎಲ್ಲ ರೀತಿಯ ಮುಗ್ಗಟ್ಟುಗಳೂ – ತುಂಬ ಹೆಚ್ಚಾಗಿ ಆರ್ಥಿಕ ಮುಗ್ಗಟ್ಟುಗಳು, ಆದರೆ ಇವಷ್ಟೇ ಅಲ್ಲ – ತಮ್ಮ ಸರದಿಯಲ್ಲಿ ಕೇಂದ್ರೀಕರಣದತ್ತ ಹಾಗೂ ಏಕಸ್ವಾಮ್ಯದತ್ತ ಪ್ರವೃತ್ತಿಯನ್ನು ತುಂಬ ಗಣನೀಯವಾಗಿ ಹೆಚ್ಚಿಸುತ್ತವೆ. ಈ ಸಂದರ್ಭದಲ್ಲಿ, ನಾವು ಈಗಾಗಲೇ ಕಂಡಿರುವಂತೆ ಆಧುನಿಕ ಏಕಸ್ವಾಮ್ಯ ಪದ್ಧತಿಯ ಇತಿಹಾಸದಲ್ಲಿ ಒಂದು ತಿರುಗು ಬಿಂದುವಾಗಿದ್ದ 1900ರ ಮುಗ್ಗಟ್ಟಿನ ಪ್ರಾಮುಖ್ಯತೆಗೆ ಸಂಬಂಧಿಸಿ ಯೆಯ್‌ಡೆಲ್ಸ್‌ರ ಈ ಕೆಳಗಿನ ಅಭಿಪ್ರಾಯಗಳು ಅತ್ಯಂತ ಬೋಧಪ್ರದವಾಗಿವೆ:

"ಮೂಲ ಕೈಗಾರಿಕೆಗಳಲ್ಲಿ ಬೃಹತ್ ಯಂತ್ರಸ್ಥಾವರಗಳ ಜೊತೆಜೊತೆಗೇ, 1900ರ ಮುಗ್ಗಟ್ಟು ಉಂಟಾದಾಗ, ಇಂದು ಕಂದಾಚಾರದವೆಂದು ಪರಿಗಣಿಸಲ್ಪಡುವಂಥ ರೀತಿಯಲ್ಲಿ ಸಂಘಟಿತವಾದ ಅನೇಕ ಯಂತ್ರಸ್ಥಾವರಗಳೂ 'ಶುದ್ಧ'" (ಸಂಯೋಜಿತವಲ್ಲದ) "ಯಂತ್ರಸ್ಥಾವರಗಳೂ ಇನ್ನೂ ಇದ್ದವು. ಈ ಯಂತ್ರಸ್ಥಾವರಗಳು ಕೈಗಾರಿಕಾ ವಿಕಾಸವು ಶಿಖರಕ್ಕೇರಿದ್ದಾಗ ಹುಟ್ಟಿಕೊಂಡಿದ್ದವು. ಬೆಲೆಗಳು ತಗ್ಗಿದುದೂ, ಕೇಳಿಕೆ

---

* Liefmann, *Beteiligungs- etc. Ges.*, ಪು. 434.

** ಅದೇ ಗ್ರಂಥ, ಪು. 465-466.

ಯಲ್ಲಿ ಇಳಿತವಾದುದೂ, ಈ 'ಶುದ್ಧ' ಉದ್ಯಮಗಳನ್ನು ಅಪಾಯಕ್ಕೀಡಾಗುವ ಸ್ಥಿತಿಯಲ್ಲಿರಿಸಿದವು. ಆದರೆ ಅವು ಭಾರಿ ಸಂಯುಕ್ತ ಉದ್ಯಮಗಳಿಗೆ ಯಾವ ರೀತಿಯಲ್ಲೂ ಬಾಧಕ ಉಂಟುಮಾಡಲಿಲ್ಲ ಅಥವಾ ಅತ್ಯಲ್ಪ ಕಾಲದವರೆಗಷ್ಟೆ ಬಾಧಕಪಡಿಸಿದವು. ಇದರ ಫಲವಾಗಿ 1900ರ ಮುಗ್ಗಟ್ಟು 1873ರ ಮುಗ್ಗಟ್ಟಿಗಿಂತ ಕೈಗಾರಿಕೆಯಲ್ಲಿ ಅತಿ ಹೆಚ್ಚು ಸಾಂದ್ರೀಕರಣವಾಗುವ ಪರಿಣಾಮವನ್ನು ಉಂಟುಮಾಡಿತು. 1873ರ ಮುಗ್ಗಟ್ಟೂ ಅತ್ಯುತ್ತಮವಾಗಿ ಸಜ್ಜುಗೊಂಡ ಉದ್ಯಮಗಳ ಒಂದು ರೀತಿಯ ಆಯ್ಕೆಯನ್ನು ಉಂಟುಮಾಡಿತು. ಆದರೆ ಆ ಕಾಲದ ತಾಂತ್ರಿಕ ಬೆಳವಣಿಗೆಯ ಮಟ್ಟದ ಪರಿಸ್ಥಿತಿಯಲ್ಲಿ ಈ ಆಯ್ಕೆಯು ಮುಗ್ಗಟ್ಟಿನಿಂದ ಯಶಸ್ವಿಯಾಗಿ ಹೊರಬಂದ ಸಂಸ್ಥೆಗಳನ್ನು ಏಕಸ್ವಾಮ್ಯದ ಸ್ಥಿತಿಯಲ್ಲಿ ಇರಿಸಲಾರದಾಯಿತು. ಅಂತಹ ಸ್ಥಿರವಾದ ಏಕಸ್ವಾಮ್ಯವು ಆಧುನಿಕ ಕಬ್ಬಿಣ ಹಾಗೂ ಉಕ್ಕು ಮತ್ತು ವಿದ್ಯುತ್ ಕೈಗಾರಿಕೆಗಳಲ್ಲಿ, ಅವುಗಳ ಅತ್ಯಂತ ತೊಡಕಾದ ಯಂತ್ರಕಲೆ, ದೂರವ್ಯಾಪೀ ಸಂಘಟನೆ ಹಾಗೂ ಬಂಡವಾಳದ ಪರಿಮಾಣ ಇವುಗಳಿಂದಾಗಿ, ಉನ್ನತ ಪ್ರಮಾಣದಲ್ಲಿ ಅಸ್ತಿತ್ವದಲ್ಲಿದೆ. ಎಂಜಿನಿಯರಿಂಗ್ ಕೈಗಾರಿಕೆ, ಲೋಹ ಕೈಗಾರಿಕೆಯ ಕೆಲವು ಶಾಖೆಗಳು, ಸಾರಿಗೆ, ಇತ್ಯಾದಿಗಳಲ್ಲಿ ಅದು ಕಮ್ಮಿ ಪ್ರಮಾಣದಲ್ಲಿದೆ."*

ಏಕಸ್ವಾಮ್ಯ ! – "ಬಂಡವಾಳವಾದದ ಬೆಳವಣಿಗೆಯ ಇತ್ತೀಚಿಗಿನ ಮಜಲಿ"ನಲ್ಲಿ ಇದೇ ಕೊನೆಯ ಮಾತು. ಆದರೆ ಬ್ಯಾಂಕುಗಳು ನಿರ್ವಹಿಸುವ ಪಾತ್ರವನ್ನು ನಾವು ಗಣನೆಗೆ ತಂದುಕೊಳ್ಳದೆ ಹೋದರೆ ಆಧುನಿಕ ಏಕಸ್ವಾಮ್ಯಗಳ ನಿಜವಾದ ಶಕ್ತಿ ಹಾಗೂ ಮಹತ್ವಕ್ಕೆ ಸಂಬಂಧಿಸಿದ ನಮ್ಮ ತಿಳಿವಳಿಕೆ ತುಂಬ ಕೊರೆಯಾಗಿ, ಅಸಂಪೂರ್ಣವಾಗಿ, ನಿಕೃಷ್ಟವಾಗಿ ಅಷ್ಟೆ ಇರುತ್ತದೆ.

## II. ಬ್ಯಾಂಕುಗಳು ಮತ್ತು ಅವುಗಳ ಹೊಸ ಪಾತ್ರ

ಹಣಸಂದಾಯಗಳಲ್ಲಿ ಮಧ್ಯವರ್ತಿಯಾಗಿ ನೆರವಾಗುವುದು ಬ್ಯಾಂಕುಗಳ ಪ್ರಧಾನ ಹಾಗೂ ಮೂಲ ಕ್ರಿಯೆ. ಹಾಗೆ ಮಾಡುವಾಗ ಅವು ನಿಷ್ಕ್ರಿಯವಾದ ಹಣ ಬಂಡವಾಳವನ್ನು ಕ್ರಿಯಾಶೀಲವಾದುದನ್ನಾಗಿ, ಅಂದರೆ, ಲಾಭ ದೊರಕಿಸಿಕೊಡುವಂಥ ಬಂಡವಾಳವನ್ನಾಗಿ ಪರಿವರ್ತಿಸುತ್ತವೆ; ಅವು ಎಲ್ಲ ರೀತಿಯ ಹಣ ಆದಾಯಗಳನ್ನು ಸಂಗ್ರಹಿಸಿ ಅವನ್ನು ಬಂಡವಾಳಶಾಹಿ ವರ್ಗದ ವಶದಲ್ಲಿರಿಸುತ್ತವೆ.

ಬ್ಯಾಂಕ್ ವ್ಯವಹಾರವು ಅಭಿವೃದ್ಧಿಗೊಂಡು ಇಡೀ ವ್ಯವಹಾರವು ಕೆಲವೇ ಸಂಸ್ಥೆಗಳಲ್ಲಿ ಕೇಂದ್ರೀಕೃತವಾದಂತೆ, ಸಾಮಾನ್ಯ ಮಧ್ಯವರ್ತಿಗಳಾಗಿದ್ದ ಬ್ಯಾಂಕುಗಳು ಪ್ರಬಲ ಏಕಸ್ವಾಮ್ಯ ಸಂಸ್ಥೆಗಳಾಗಿ ಬೆಳೆಯುತ್ತವೆ. ಅವು ಎಲ್ಲ ಬಂಡವಾಳಗಾರರ

---

*Jeidels, ಪೂರ್ವೋಕ್ತ ಗ್ರಂಥ, ಪು. 108.

ಹಾಗೂ ಸಣ್ಣ ವರ್ತಕರ ಬಹುಮಟ್ಟಿಗೆ ಇಡೀ ಹಣ ಬಂಡವಾಳವನ್ನೂ, ಆ ನಿರ್ದಿಷ್ಟ ದೇಶದ ಹಾಗೂ ಇತರ ಅನೇಕ ದೇಶಗಳಲ್ಲಿನ ಉತ್ಪಾದನಾ ಸಾಧನಗಳ ಹಾಗೂ ಕಚ್ಚಾ ಪದಾರ್ಥ ಆಕರಗಳ ಬಹುಭಾಗವನ್ನೂ, ತಮ್ಮ ಆಧಿಪತ್ಯದಲ್ಲಿ ಹೊಂದಿರುವಂತಾಗುತ್ತವೆ. ಅಸಂಖ್ಯಾತ ಸಾಮಾನ್ಯ ಮಧ್ಯವರ್ತಿಗಳು ಕೆಲವೇ ಏಕಸ್ವಾಮ್ಯಾಧಿಪತಿಗಳಾಗಿ ಬದಲಾಗುವ ಈ ಕ್ರಿಯೆಯು, ಬಂಡವಾಳವಾದವು ಬಂಡವಾಳವಾದಿ ಸಾಮ್ರಾಜ್ಯವಾದವಾಗಿ ಬೆಳೆಯುವ ಮೂಲಭೂತ ಪ್ರಕ್ರಿಯೆಗಳಲ್ಲೊಂದಾಗಿದೆ. ಈ ಕಾರಣದಿಂದಾಗಿ ನಾವು ಮೊಟ್ಟಮೊದಲು ಬ್ಯಾಂಕ್ ವ್ಯವಹಾರದ ಕೇಂದ್ರೀಕರಣದ ಬಗೆಗೆ ವಿವೇಚಿಸಬೇಕು.

1907-1908ರಲ್ಲಿ, ಒಂದೊಂದೂ ಒಂದು ಮಿಲಿಯ ಮಾರ್ಕುಗಳಿಗೂ ಹೆಚ್ಚು ಬಂಡವಾಳವನ್ನು ಹೊಂದಿದ್ದ ಜರ್ಮನ್ ಜಾಯಿಂಟ್ ಸ್ಟಾಕ್ ಬ್ಯಾಂಕುಗಳ ಸಂಯುಕ್ತ ಡಿಪಾಜಿಟ್(ಠೇವಣಿ)ಗಳು 7,000 ಮಿಲಿಯ ಮಾರ್ಕುಗಳಾಗಿದ್ದವು; 1912-1913 ರಲ್ಲಿ ಈ ಡಿಪಾಜಿಟ್ಟುಗಳು ಆಗಲೇ 9,800 ಮಿಲಿಯ ಮಾರ್ಕುಗಳಿಗೇರಿದ್ದವು. ಐದು ವರ್ಷಗಳಲ್ಲಿ ಶೇ. 40ರಷ್ಟು ಹೆಚ್ಚಳ; ಹೆಚ್ಚಾದ 2,800 ಮಿಲಿಯ ಮಾರ್ಕುಗಳಲ್ಲಿ 2,750 ಮಿಲಿಯ ಮಾರ್ಕುಗಳನ್ನು, ಒಂದೊಂದೂ 10 ಮಿಲಿಯ ಮಾರ್ಕುಗಳಿಗೂ ಹೆಚ್ಚು ಬಂಡವಾಳ ಹೊಂದಿದ್ದ 57 ಬ್ಯಾಂಕುಗಳ ಮಧ್ಯೆ ಹಂಚಲಾಯಿತು. ದೊಡ್ಡ ಹಾಗೂ ಸಣ್ಣ ಬ್ಯಾಂಕುಗಳ ನಡುವೆ ಡಿಪಾಜಿಟ್ಟುಗಳ ಹಂಚಿಕೆಯು ಈ ಕೆಳಗಿನಂತಿದ್ದಿತು :*

ಒಟ್ಟು ಡಿಪಾಜಿಟ್ಟುಗಳ ಶೇಕಡಾವಾರು

| | ಒಂಬತ್ತು ಭಾರಿ ಬರ್ಲಿನ್ ಬ್ಯಾಂಕುಗಳಲ್ಲಿ | 10 ಮಿಲಿಯ ಮಾರ್ಕುಗಳಿಗೂ ಹೆಚ್ಚು ಬಂಡವಾಳವುಳ್ಳ ಇತರ 48 ಬ್ಯಾಂಕುಗಳಲ್ಲಿ | ಒಂದರಿಂದ ಹತ್ತು ಮಿಲಿಯ ಮಾರ್ಕುಗಳ ಬಂಡವಾಳವುಳ್ಳ 115 ಬ್ಯಾಂಕುಗಳಲ್ಲಿ | ಸಣ್ಣ ಬ್ಯಾಂಕುಗಳಲ್ಲಿ (ಒಂದು ಮಿಲಿಯ ಮಾರ್ಕುಗಳಿಗೂ ಕಡಿಮೆ ಬಂಡವಾಳ) |
|---|---|---|---|---|
| 1907-1908 | 47 | 32.5 | 16.5 | 4 |
| 1912-1913 | 49 | 36 | 12 | 3 |

*Alfred Lansburgh, *Fünf Jahre deutsches Bankwessen*, *Die Bank*, 1913, №. 8, S. 728. (ಆಲ್‌ಫ್ರೆಡ್ ಲಾನ್ಸ್‌ಬರ್ಗ್, 'ಜರ್ಮನ್ ಬ್ಯಾಂಕುಗಳ ಐದು ವರ್ಷಗಳ ವ್ಯವಹಾರ,' 'ದಿ ಬ್ಯಾಂಕ್.' – ಸಂ.)

ದೊಡ್ಡ ಬ್ಯಾಂಕುಗಳು ಸಣ್ಣ ಬ್ಯಾಂಕುಗಳನ್ನು ಹೊರದೂಡುತ್ತಿವೆ. ಈ ದೊಡ್ಡ ಬ್ಯಾಂಕುಗಳಲ್ಲೂ ಒಂಬತ್ತು ಬ್ಯಾಂಕುಗಳೇ ಒಟ್ಟು ಡಿಪಾಜಿಟ್ಟುಗಳಲ್ಲಿ ಬಹುಪಾಲಿಗೆ ಅರ್ಧದಷ್ಟನ್ನು ತಮ್ಮ ಕೈಯಲ್ಲಿ ಕೇಂದ್ರೀಕರಿಸಿಕೊಂಡಿವೆ. ಆದರೆ ನಾವು ಅನೇಕ ಮುಖ್ಯ ವಿವರಗಳನ್ನು, ಉದಾಹರಣೆಗೆ, ಬಹು ಸಣ್ಣ ಬ್ಯಾಂಕುಗಳು ವಾಸ್ತವವಾಗಿ ದೊಡ್ಡ ಬ್ಯಾಂಕುಗಳ ಶಾಖೆಗಳಾಗಿ ಪರಿವರ್ತನೆಯಾಗುವುದು, ಇತ್ಯಾದಿ ವಿವರಗಳನ್ನು, ಬಿಟ್ಟುಬಿಟ್ಟಿದ್ದೇವೆ. ಇವುಗಳ ಬಗೆಗೆ ನಾವು ಮುಂದೆ ಹೇಳುವೆವು.

1913ರ ಕೊನೆಯ ಭಾಗದಲ್ಲಿ ಒಟ್ಟು ಸುಮಾರು 10,000 ಮಿಲಿಯ ಮಾರ್ಕುಗಳ ಡಿಪಾಜಿಟ್ಟುಗಳಲ್ಲಿ ಒಂಬತ್ತು ದೊಡ್ಡ ಬರ್ಲಿನ್ ಬ್ಯಾಂಕುಗಳಲ್ಲೇ 5,100 ಮಿಲಿಯ ಇದ್ದವೆಂದು ಷುಲ್‌ತ್ಸೆ-ಗೆವೆರ್ನಿತ್ಸ್ ಅಂದಾಜು ಮಾಡಿದರು. ಡಿಪಾಜಿಟ್ಟುಗಳನ್ನಷ್ಟೆ ಅಲ್ಲ, ಬ್ಯಾಂಕಿನ ಒಟ್ಟು ಬಂಡವಾಳವನ್ನೂ ಗಮನಕ್ಕೆ ತಂದುಕೊಂಡು ಈ ಗ್ರಂಥ ಕರ್ತೃ ಬರೆದರು: "1919ರ ಕೊನೆಯ ಭಾಗದಲ್ಲಿ ಒಂಬತ್ತು ದೊಡ್ಡ ಬರ್ಲಿನ್ ಬ್ಯಾಂಕುಗಳು, ಅವುಗಳ ಅನುಬಂಧಿತ ಬ್ಯಾಂಕುಗಳೊಂದಿಗೆ ಕೂಡಿಕೊಂಡು, 11,300 ಮಿಲಿಯ ಮಾರ್ಕುಗಳಷ್ಟು ಬಂಡವಾಳವನ್ನು, ಅಂದರೆ ಒಟ್ಟು ಜರ್ಮನ್ ಬ್ಯಾಂಕ್ ಬಂಡವಾಳದ ಸುಮಾರು ಶೇ. 83ರಷ್ಟನ್ನು ತಮ್ಮ ಹತೋಟಿಯಲ್ಲಿ ಹೊಂದಿದ್ದವು. 'ಡೊಯ್ಚ್ (ಜರ್ಮನ್) ಬ್ಯಾಂಕು' ಅದರ ಅನುಬಂಧಿತ ಬ್ಯಾಂಕುಗಳೊಂದಿಗೊಡಗೂಡಿ ಸುಮಾರು 3,000 ಮಿಲಿಯ ಮಾರ್ಕುಗಳಷ್ಟು ಬಂಡವಾಳವನ್ನು ಹೊಂದಿದೆ. ಇದು, ಪ್ರಷ್ಯನ್ ಸ್ಟೇಟ್ ರೈಲ್ವೇ ಅಡ್ಮಿನಿಸ್ಟ್ರೇಷನ್‌ಗೆ ಸಮಾಂತರವಾಗಿ, ಯೂರೋಪಿನಲ್ಲೇ ಅತ್ಯಂತ ದೊಡ್ಡದಾದ ಹಾಗೂ ಅತ್ಯಂತ ವಿಕೇಂದ್ರೀಕೃತವಾದ ಬಂಡವಾಳದ ಸಂಚಯವಾಗಿದೆ."*

"ಅನುಬಂಧಿತ" ಬ್ಯಾಂಕುಗಳಿಗೆ ಉಲ್ಲೇಖವನ್ನು ನಾವು ಒತ್ತಿ ಹೇಳಿದ್ದೇವೇಕೆಂದರೆ, ಇದು ಆಧುನಿಕ ಬಂಡವಾಳಶಾಹಿ ಕೇಂದ್ರೀಕರಣದ ಅತ್ಯಂತ ಮುಖ್ಯ ಹಾಗೂ ವಿಶಿಷ್ಟ ಗುಣಗಳಲ್ಲೊಂದಾಗಿದೆ. ದೊಡ್ಡ ಉದ್ಯಮಗಳು, ಅದರಲ್ಲೂ ನಿರ್ದಿಷ್ಟವಾಗಿ ಬ್ಯಾಂಕುಗಳು, ಸಣ್ಣವುಗಳನ್ನು ಸಂಪೂರ್ಣವಾಗಿ ತಮ್ಮೊಳಗೆ ಲೀನವಾಗಿಸಿಕೊಳ್ಳುವುವಷ್ಟೆ ಅಲ್ಲ, ಅವುಗಳ ಬಂಡವಾಳದಲ್ಲಿನ "ಹೋಲ್ಡಿಂಗು"ಗಳನ್ನು ಪಡೆದುಕೊಳ್ಳುವ ಮೂಲಕ, ಅವುಗಳ ಷೇರುಗಳನ್ನು ಕೊಳ್ಳುವ ಅಥವಾ ವಿನಿಮಯ ಮಾಡಿಕೊಳ್ಳುವ ಮೂಲಕ, ಸಾಲಗಳ ಪದ್ಧತಿಯ ಮೂಲಕ, ಇತ್ಯಾದಿ ಇತ್ಯಾದಿ ಕ್ರಮಗಳ ಮೂಲಕ ಅವನ್ನು ತಮ್ಮ ಜೊತೆಗೆ "ಕೂಡಿಸಿಕೊಳ್ಳುತ್ತವೆ," ಅವನ್ನು ತಮಗೆ ಅಧೀನವನ್ನಾಗಿ

---

*Schulze-Gaevernitz, *Die deutsche Kreditbank* in *Grundriß der Sozialökonomik*, Tüb. (ಷುಲ್‌ತ್ಸೆ-ಗೆವೆರ್ನಿತ್ಸ್, 'ಸಾಮಾಜಿಕ ಅರ್ಥಶಾಸ್ತ್ರದ ಸ್ಥೂಲ ಚಿತ್ರಣ' ದಲ್ಲಿ 'ಜರ್ಮನ್ ಕ್ರೆಡಿಟ್ ಬ್ಯಾಂಕ್,' ತ್ಯೂಬಿಂಗೆನ್. – ಸಂ.), 1915, ಪು. 12 ಹಾಗೂ 137.

ಮಾಡಿಕೊಳ್ಳುತ್ತವೆ, ಅವನ್ನು ತಮ್ಮ "ಸ್ವಂತ" ವೃಂದ ಅಥವಾ (ಪಾರಿಭಾಷಿಕ ಪದವನ್ನು ಬಳಸುವುದಾದರೆ) "ಕನ್ಸರ್ನ್"ಗಳೊಳಕ್ಕೆ ತರುತ್ತವೆ. ಆಧುನಿಕ "ಹೋಲ್ಡಿಂಗು ಗಳು ಹಾಗೂ ಹಣಕಾಸು ಕಂಪನಿ"ಗಳನ್ನು ವಿವರಿಸುತ್ತ ಪ್ರೊ. ಲೀಫ್‌ಮನ್‌ರು ಸುಮಾರು 500 ಪುಟಗಳ ಒಂದು ಭಾರಿ ಗ್ರಂಥ ರಚಿಸಿದ್ದಾರೆ.* ಆದರೆ ದುರದೃಷ್ಟವಶಾತ್ ಬಹುವೇಳೆ ಸಂಸ್ಕರಿಸದ ಮಾಹಿತಿಗಳಿಗೆ ತಮ್ಮದೇ ಕಳಪೆ "ಸೈದ್ಧಾಂತಿಕ" ಆಲೋಚನೆಗಳನ್ನೂ ಸೇರಿಸಿದ್ದಾರೆ. ಸ್ವತಃ "ಬ್ಯಾಂಕರ್" ಆದ ರೀಸ್ಸೆರ್‌ರವರು ದೊಡ್ಡ ಜರ್ಮನ್ ಬ್ಯಾಂಕುಗಳ ಬಗೆಗೆ ಬರೆದಿರುವ ಗ್ರಂಥದಲ್ಲಿ, ಕೇಂದ್ರೀಕರಣಕ್ಕೆ ಸಂಬಂಧಿಸಿದಂತೆ ಈ "ಹೋಲ್ಡಿಂಗ್" ಪದ್ಧತಿಯು ಯಾವ ಪರಿಣಾಮಗಳತ್ತ ಕರೆದೊಯ್ಯುತ್ತದೆ ಎಂಬುದನ್ನು ಅತ್ಯುತ್ತಮವಾಗಿ ಚಿತ್ರಿಸಿದ್ದಾರೆ. ಆದರೆ ಅವರು ನೀಡಿದ ಮಾಹಿತಿಗಳನ್ನು ಪರಿಶೀಲಿಸುವ ಮುನ್ನ ನಾವು "ಹೋಲ್ಡಿಂಗ್" ಪದ್ಧತಿಯ ಒಂದು ಸ್ಪಷ್ಟ ನಿದರ್ಶನವನ್ನು ನೀಡುವೆವು.

ದೊಡ್ಡ ಬ್ಯಾಂಕ್ ವೃಂದಗಳಲ್ಲಿ 'ಡೊಯ್ಚ್ ಬ್ಯಾಂಕ್' "ವೃಂದ"ವು ಅತ್ಯಂತ ದೊಡ್ಡದಲ್ಲದಿದ್ದರೆ, ಅತ್ಯಂತ ದೊಡ್ಡವುಗಳಲ್ಲೊಂದಾಗಿದೆ. ಈ ವೃಂದದಲ್ಲಿ ಎಲ್ಲ ಬ್ಯಾಂಕುಗಳನ್ನೂ ಸಂಬಂಧಿಸುವ ಮುಖ್ಯ ತಂತುಗಳನ್ನು ಗುರುತಿಸುವುದಕ್ಕೆ, ಮೊದಲ, ಎರಡನೆಯ ಹಾಗೂ ಮೂರನೆಯ ದರ್ಜೆಗಳ "ಹೋಲ್ಡಿಂಗ್"ಗಳ ಮಧ್ಯೆ ಇರುವ ವ್ಯತ್ಯಾಸವನ್ನು, ಅಥವಾ ಅದೇ ಅರ್ಥ ನೀಡುವ ಬೇರೆ ಮಾತುಗಳಲ್ಲಿ ಹೇಳುವುದಾದರೆ, ('ಡೊಯ್ಚ್ ಬ್ಯಾಂಕ್' ಮೇಲೆ ಸಣ್ಣ ಬ್ಯಾಂಕುಗಳ) ಮೊದಲ, ಎರಡನೆಯ ಹಾಗೂ ಮೂರನೆಯ ದರ್ಜೆಗಳ ಪರಾಧೀನತೆಯ ಮಧ್ಯೆ ಇರುವ ವ್ಯತ್ಯಾಸವನ್ನು ಕಂಡುಕೊಳ್ಳುವುದು ಅವಶ್ಯ. ಆಗ ನಮಗೆ ಈ ಕೆಳಗಿನ ಚಿತ್ರ ಲಭಿಸುತ್ತದೆ:** (ಪುಟ 42),

'ಡೊಯ್ಚ್ ಬ್ಯಾಂಕ್' ಮೇಲೆ "ಮೊದಲ ದರ್ಜೆ"ಯಲ್ಲಿ "ಆಗಾಗ್ಗೆ" ಪರಾಧೀನವಾದ ಎಂಟು ಬ್ಯಾಂಕುಗಳಲ್ಲಿ ಮೂರು ವಿದೇಶಿ ಬ್ಯಾಂಕುಗಳಿವೆ: ಒಂದು ಆಸ್ಟ್ರಿಯನ್ (ವಿಯೆನ್ನದ 'ಬ್ಯಾಂಕುಗಳ ಒಕ್ಕೂಟ' – 'Bankverein'), ಎರಡು ರಷ್ಯನ್ (ಸೈಬೀರಿಯನ್ ವಾಣಿಜ್ಯ ಬ್ಯಾಂಕ್ ಹಾಗೂ ವಿದೇಶಾಂಗ ವ್ಯಾಪಾರದ ರಷ್ಯನ್ ಬ್ಯಾಂಕ್). ಒಟ್ಟು 'ಡೊಯ್ಚ್ ಬ್ಯಾಂಕ್' ವೃಂದವು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ, ಭಾಗಶಃವೂ ಪೂರ್ಣವಾಗಿಯೂ, 87 ಬ್ಯಾಂಕುಗಳನ್ನು ಒಳ

---

*R. Liefmann, *Beteilingungs- und Finanzierungsgesellschaften. Eine Studie über den modernen Kapitalismus und das Effecten wesen*, 1. Aufl., Jena, 1909, ಪು. 212.

**Alfred Lansburgh, *Das Beteiligungssystem im deutschen Bankwesen*, *Die Bank*, 1910, 1, S. 500. (ಆಲ್‌ಫ್ರೆಡ್ ಲಾನ್ಸ್‌ಬುರ್ಗ್, 'ಜರ್ಮನ್ ಬ್ಯಾಂಕಿಂಗ್ ವ್ಯವಹಾರದಲ್ಲಿ ಹೋಲ್ಡಿಂಗ್ ಪದ್ಧತಿ', 'ದಿ ಬ್ಯಾಂಕ್.'– ಸಂ.)

ಗೊಂಡಿದೆ; ಒಟ್ಟು ಬಂಡವಾಳ – ಅದರದೇ ಮತ್ತು ಅದು ನಿಯಂತ್ರಿಸುವ ಇತರ ಬ್ಯಾಂಕುಗಳ ಬಂಡವಾಳ – ಎರಡರಿಂದ ಮೂರು ಸಾವಿರ ಮಿಲಿಯ ಮಾರ್ಕುಗಳಿಗೆ ಮಧ್ಯೆ ಇದೆಯೆಂದು ಅಂದಾಜು ಮಾಡಲಾಗಿದೆ.

| | | ಪರಾಧೀನತೆ ಮೊದಲನೆಯ ದರ್ಜೆ | ಪರಾಧೀನತೆ ಎರಡನೆಯ ದರ್ಜೆ | ಪರಾಧೀನತೆ ಮೂರನೆಯ ದರ್ಜೆ |
|---|---|---|---|---|
| ಡೊಯ್ಚ್ ಬ್ಯಾಂಕ್ ಹೋಲ್ಡಿಂಗ್‌ಗಳು ಈ ರೀತಿ ಇವೆ | ಶಾಶ್ವತವಾಗಿ . . | 17 ಬ್ಯಾಂಕುಗಳಲ್ಲಿ | ಅವುಗಳಲ್ಲಿ 34 ರಲ್ಲಿ 9 | ಅವುಗಳಲ್ಲಿ 7ರಲ್ಲಿ 4 |
| | ಅನಿರ್ದಿಷ್ಟ ಕಾಲಾವಧಿಗೆ . . | 5 ಬ್ಯಾಂಕುಗಳಲ್ಲಿ | — | — |
| | ಆಗಾಗ್ಗೆ . . . . | 8 ಬ್ಯಾಂಕುಗಳಲ್ಲಿ | ಅವುಗಳಲ್ಲಿ 14ರಲ್ಲಿ 5 | ಅವುಗಳಲ್ಲಿ 2ರಲ್ಲಿ 2 |
| ಒಟ್ಟು . . . . . . . . . . . . | | 30 ಬ್ಯಾಂಕುಗಳಲ್ಲಿ | ಅವುಗಳಲ್ಲಿ 48ರಲ್ಲಿ 14 | ಅವುಗಳಲ್ಲಿ 9ರಲ್ಲಿ 6 |

ಇಂಥ ವೃಂದದ ಅಧಿಪತಿ ಸ್ಥಾನದಲ್ಲಿರುವ ಬ್ಯಾಂಕೊಂದು, ರಾಜ್ಯ ಸಾಲಗಳನ್ನು ಪ್ರಾರಂಭಿಸುವಂತಹ ಅತ್ಯಸಾಧಾರಣವಾಗಿ ಭಾರಿಯಾದ ಹಾಗೂ ಲಾಭದಾಯಕವಾದ ಹಣಕಾಸು ಕಾರ್ಯಾಚರಣೆಗಳನ್ನು ನಡೆಸುವ ಉದ್ದೇಶಕ್ಕಾಗಿ ತನಗಿಂತ ಸ್ವಲ್ಪವಷ್ಟೆ ಚಿಕ್ಕದಾದ ಇತರ ಅರ್ಧ ಡಜನ್ ಬ್ಯಾಂಕುಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ಬ್ಯಾಂಕೊಂದು, ಆಗಲೇ "ಮಧ್ಯವರ್ತಿ"ಯ ಪಾತ್ರವನ್ನು ಮೀರಿ ಬೆಳೆದಿದೆ ಮತ್ತು ಕೆಲವೇ ಏಕಸ್ವಾಮ್ಯಾಧಿಪತಿಗಳ ಸಮುಚ್ಚಯವಾಗಿದೆ, ಎಂಬುದು ಸ್ವಯಂಸ್ಪಷ್ಟ.

ಜರ್ಮನಿಯಲ್ಲಿ ಬ್ಯಾಂಕ್ ವ್ಯವಹಾರದ ಕೇಂದ್ರೀಕರಣವು ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲೂ ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲೂ ಎಷ್ಟು ದ್ರುತಗತಿಯಲ್ಲಿ ಮುಂದುವರಿಯಿತು ಎಂಬುದನ್ನು ಈ ಕೆಳಗಿನ ಆಧಾರಾಂಶಗಳು ತೋರಿಸುತ್ತವೆ. ಇವನ್ನು ನಾವು ರೀಸ್ಸೆರ್‌ರವರ ಗ್ರಂಥದಿಂದ ಸಂಕ್ಷಿಪ್ತ ರೂಪದಲ್ಲಿ ನೀಡುತ್ತಿದ್ದೇವೆ:

## ಆರು ಭಾರಿ ಬರ್ಲಿನ್ ಬ್ಯಾಂಕುಗಳು

| ವರ್ಷ | ಜರ್ಮನಿಯಲ್ಲಿ ಶಾಖೆಗಳು | ಡಿಪಾಜಿಟ್ ಬ್ಯಾಂಕುಗಳು, ವಿನಿಮಯ ಕಾರ್ಯಾಲಯಗಳು | ಜರ್ಮನ್ ಜಾಯಿಂಟ್ ಸ್ಟಾಕ್ ಬ್ಯಾಂಕುಗಳಲ್ಲಿ ಸ್ಥಿರ ಹೋಲ್ಡಿಂಗುಗಳು | ಒಟ್ಟು ಸಂಸ್ಥೆಗಳು |
|---|---|---|---|---|
| 1895 | 16 | 14 | 1 | 42 |
| 1900 | 21 | 40 | 8 | 80 |
| 1911 | 104 | 276 | 63 | 450 |

ಇಡೀ ದೇಶವನ್ನು ಆವರಿಸುವಂಥ, ಎಲ್ಲ ಬಂಡವಾಳವನ್ನೂ ಎಲ್ಲ ಆದಾಯಗಳನ್ನೂ ಕೇಂದ್ರೀಕರಿಸುವಂಥ, ಚೆಲ್ಲಾಪಿಲ್ಲಿಯಾಗಿದ್ದ ಸಹಸ್ರಾರು ಆರ್ಥಿಕ ಉದ್ಯಮಗಳನ್ನು ಏಕೈಕ ರಾಷ್ಟ್ರೀಯ ಬಂಡವಾಳಶಾಹಿ ಆರ್ಥಿಕತೆಯನ್ನಾಗಿ, ಅನಂತರ ಜಾಗತಿಕ ಬಂಡವಾಳಶಾಹಿ ಆರ್ಥಿಕತೆಯನ್ನಾಗಿ ಪರಿವರ್ತಿಸುವಂಥ ಕಾಲುವೆಗಳ ದಟ್ಟ ಜಾಲಬಂಧವು ಎಷ್ಟು ಶೀಘ್ರವಾಗಿ ವಿಸ್ತರಿಸುತ್ತದೆಂಬುದನ್ನು ನಾವು ಕಾಣುತ್ತೇವೆ. ಇಂದಿನ ಬೂರ್ಷ್ವಾ ರಾಜಕೀಯ ಅರ್ಥಶಾಸ್ತ್ರದ ಪ್ರತಿಪಾದಕರಾದ ಷುಲ್ತ್ಸೆ-ಗೆವೆರ್ನಿತ್ಸ್‌ರವರು ನಾವು ಈ ಮುನ್ನ ಉದ್ಧರಿಸಿರುವ ಭಾಗದಲ್ಲಿ ಹೇಳಿರುವ "ವಿಕೇಂದ್ರೀಕರಣ"ದ ನಿಜವಾದ ಅರ್ಥವೆಂದರೆ, ಹಿಂದೆ ಸಾಪೇಕ್ಷವಾಗಿ "ಸ್ವತಂತ್ರ"ವಾಗಿದ್ದ, ಅಥವಾ ಖಚಿತವಾಗಿ ಸ್ಥಳೀಯವಾಗಿ ಪ್ರತ್ಯೇಕವಾಗಿದ್ದ ಹೆಚ್ಚು ಹೆಚ್ಚು ಸಂಖ್ಯೆಯ ಆರ್ಥಿಕ ಘಟಕಗಳನ್ನು ಏಕೈಕ ಕೇಂದ್ರಕ್ಕೆ ಅಧೀನಗೊಳಿಸುವುದು, ಎಂಬುದಾಗಿದೆ. ವಾಸ್ತವವಾಗಿ ಅದು ಕೇಂದ್ರೀಕರಣವಾಗಿದೆ, ಏಕಸ್ವಾಮ್ಯವಾದಿ ದೈತ್ಯರ ಪಾತ್ರವನ್ನೂ ಪ್ರಾಮುಖ್ಯವನ್ನೂ ಪ್ರಾಬಲ್ಯವನ್ನೂ ಹೆಚ್ಚಿಸುವುದಾಗಿದೆ.

ಹಳೆಯ ಬಂಡವಾಳಶಾಹಿ ದೇಶಗಳಲ್ಲಿ ಈ "ಬ್ಯಾಂಕಿಂಗ್ ಜಾಲಬಂಧ"ವು ಇನ್ನೂ ಹೆಚ್ಚು ದಟ್ಟವಾಗಿದ್ದಿತು. ಗ್ರೇಟ್ ಬ್ರಿಟನ್ ಹಾಗೂ ಐರ್ಲೆಂಡ್‌ಗಳಲ್ಲಿ 1910ರಲ್ಲಿ ಒಟ್ಟು 7,151 ಬ್ಯಾಂಕ್ ಶಾಖೆಗಳಿದ್ದವು. ನಾಲ್ಕು ದೊಡ್ಡ ಬ್ಯಾಂಕುಗಳು ಒಂದೊಂದೂ 400ಕ್ಕೂ ಹೆಚ್ಚು (447ರಿಂದ 689ರವರೆಗೆ) ಶಾಖೆಗಳನ್ನು ಹೊಂದಿದ್ದವು; ನಾಲ್ಕು ಬ್ಯಾಂಕುಗಳು ಒಂದೊಂದೂ 200ಕ್ಕೂ ಹೆಚ್ಚು ಶಾಖೆಗಳನ್ನೂ, ಹನ್ನೊಂದು ಬ್ಯಾಂಕುಗಳು ಒಂದೊಂದೂ 100ಕ್ಕೂ ಹೆಚ್ಚು ಶಾಖೆಗಳನ್ನೂ, ಹೊಂದಿದ್ದವು.

ಫ್ರಾನ್ಸಿನಲ್ಲಿ ಮೂರು ಅತಿ ದೊಡ್ಡ ಬ್ಯಾಂಕುಗಳು 'Crédit Lyonnais,'

'Comptoir National,' 'Société Générale' ಎಂಬುವು, ತಮ್ಮ ಕಾರ್ಯಾಚರಣೆಗಳನ್ನೂ ತಮ್ಮ ಶಾಖೆಗಳ ಜಾಲಬಂಧವನ್ನೂ ಈ ಕೆಳಗಿನ ರೀತಿಯಲ್ಲಿ ವಿಸ್ತರಿಸಿಕೊಂಡವು:*

| | ಶಾಖೆಗಳ ಹಾಗೂ ಕಾರ್ಯಾಲಯಗಳ ಸಂಖ್ಯೆ | | | ಬಂಡವಾಳ ಮಿಲಿಯ ಫ್ರಾಂಕುಗಳಲ್ಲಿ | |
|---|---|---|---|---|---|
| | ಪ್ರಾಂತಗಳಲ್ಲಿ | ಪ್ಯಾರಿಸ್‌ನಲ್ಲಿ | ಒಟ್ಟು | ಸ್ವಂತ ಬಂಡವಾಳ | ಎರವಲು ತಂದ ಬಂಡವಾಳ |
| 1870 | 47 | 17 | 64 | 200 | 427 |
| 1890 | 192 | 66 | 258 | 265 | 1,245 |
| 1909 | 1,033 | 196 | 1,229 | 887 | 4,363 |

ಒಂದು ದೊಡ್ಡ ಬ್ಯಾಂಕೊಂದರ "ಸಂಬಂಧಗಳ"ನ್ನು ತೋರಿಸಲೋಸುಗ ರೀಸ್ಸೆರ್ ರವರು, ಜರ್ಮನಿಯಲ್ಲೇ ಹಾಗೂ ಜಗತ್ತಿನಲ್ಲೇ ಅತ್ಯಂತ ದೊಡ್ಡ ಬ್ಯಾಂಕುಗಳಲ್ಲೊಂದಾದ 'Disconto-Gesellschaft' (1914ರಲ್ಲಿ ಇದರ ಬಂಡವಾಳ 300 ಮಿಲಿಯ ಮಾರ್ಕ್ ಆಗಿದ್ದಿತು) ಪಡೆದ ಹಾಗೂ ಕಳುಹಿಸಿದ ಪತ್ರಗಳ ಸಂಖ್ಯೆಗೆ ಸಂಬಂಧಿಸಿ ಈ ಕೆಳಗಿನ ಸಂಖ್ಯೆಗಳನ್ನು ನೀಡಿದ್ದಾರೆ:

| | ಪಡೆದ ಪತ್ರಗಳು | ಕಳುಹಿಸಿದ ಪತ್ರಗಳು |
|---|---|---|
| 1852 | 6,135 | 6,292 |
| 1870 | 85,800 | 87,513 |
| 1900 | 533,102 | 626,043 |

*Eugen Kaufmann, *Das französische Bankwesen*, Tüb. (ಎವ್ಗೆನಿ ಕೌಫ್ಮನ್, 'ಫ್ರಾನ್ಸಿನಲ್ಲಿ ಬ್ಯಾಂಕಿಂಗ್ ವ್ಯವಹಾರ,' ತ್ಯೂಬಿಂಗೆನ್. – ಸಂ.), 1911, ಪು. 356 ಹಾಗೂ 362.

ಪ್ಯಾರಿಸ್ಸಿನ ದೊಡ್ಡ ಬ್ಯಾಂಕ್('Crédit Lyonnais')ನಲ್ಲಿ ಖಾತೆಗಳ ಸಂಖ್ಯೆ 1875ರಲ್ಲಿ 28,535 ಇದ್ದುದು 1912ರಲ್ಲಿ 633,539ಕ್ಕೆ ಏರಿತು.*

ಬಂಡವಾಳದ ಸಾಂದ್ರೀಕರಣವೂ ಬ್ಯಾಂಕಿನ ವ್ಯಾಪಾರದ ಮೊತ್ತದ ಬೆಳವಣಿಗೆಯೂ ಹೇಗೆ ಬ್ಯಾಂಕುಗಳ ಮಹತ್ವವನ್ನು ಆಮೂಲಾಗ್ರವಾಗಿ ಬದಲಿಸುತ್ತಿವೆ ಎಂಬುದನ್ನು ಈ ಸರಳ ಸಂಖ್ಯೆಗಳು ದೀರ್ಘ ವ್ಯಾಖ್ಯಾನಗಳಿಗಿಂತ ಹೆಚ್ಚು ಉತ್ತಮವಾಗಿ ತೋರಿಸುತ್ತವೆ. ಹರಡಿ ಹಂಚಿಹೋಗಿದ್ದ ಬಂಡವಾಳಗಾರರು ಏಕೈಕ ಸಾಮೂಹಿಕ ಬಂಡವಾಳಗಾರನಾಗಿ ಪರಿವರ್ತಿತರಾಗುತ್ತಾರೆ. ಕೆಲವು ಬಂಡವಾಳಗಾರರ ಕರೆಂಟ್ ಅಕೌಂಟುಗಳನ್ನು ನಿರ್ವಹಿಸುವಾಗ ಬ್ಯಾಂಕೊಂದು ಶುದ್ಧ ತಾಂತ್ರಿಕ ಕೇವಲ ಸಹಾಯಕ ಕಾರ್ಯಾಚರಣೆಯನ್ನು ನಡೆಸುತ್ತದೆ ಎಂದು ಅನ್ನಬಹುದು. ಆದರೆ ಈ ಕಾರ್ಯಾಚರಣೆಯು ಭಾರಿ ಪ್ರಮಾಣಗಳಿಗೆ ಬೆಳೆದಾಗ ಕೆಲವೇ ಏಕಸ್ವಾಮ್ಯಾಧಿಪತಿಗಳು ಇಡೀ ಬಂಡವಾಳಶಾಹಿ ಸಮಾಜದ ವಾಣಿಜ್ಯ ಹಾಗೂ ಕೈಗಾರಿಕಾ ಕಾರ್ಯಾಚರಣೆಗಳೆಲ್ಲವನ್ನೂ ತಮ್ಮ ಸಂಕಲ್ಪಕ್ಕೆ ಅಧೀನಪಡಿಸಿಕೊಳ್ಳುವುದನ್ನು ನಾವು ಕಾಣುತ್ತೇವೆ. ಏಕೆಂದರೆ, ಅವರು – ತಮ್ಮ ಬ್ಯಾಂಕಿಂಗ್ ಸಂಬಂಧಗಳ ಮೂಲಕ, ತಮ್ಮ ಕರೆಂಟ್ ಅಕೌಂಟುಗಳ ಮತ್ತಿತರ ಹಣಕಾಸು ಕಾರ್ಯಾಚರಣೆಗಳ ಮೂಲಕ – ಮೊದಲು ನಾನಾ ಬಂಡವಾಳಗಾರರ ಹಣಕಾಸು ಪರಿಸ್ಥಿತಿಯನ್ನು ನಿಖರವಾಗಿ ಖಚಿತಪಡಿಸಿಕೊಳ್ಳಲು, ಅನಂತರ ಅವರ ಮೇಲೆ ಹತೋಟಿ ಇರಿಸಿಕೊಳ್ಳಲು, ಸಾಲಗಳನ್ನು ಕುಗ್ಗಿಸುವ ಅಥವಾ ಹಿಗ್ಗಿಸುವ ಮೂಲಕ, ಸಾಲಕ್ಕಾಗಿ ಅನುಕೂಲ ಮಾಡಿಕೊಡುವ ಅಥವಾ ಅಡ್ಡಿಪಡಿಸುವ ಮೂಲಕ ಅವರ ಮೇಲೆ ಪ್ರಭಾವ ಬೀರಲು, ಕೊನೆಯದಾಗಿ ಅವರ ಆಗುಹೋಗುಗಳನ್ನು ಸಂಪೂರ್ಣವಾಗಿ ನಿರ್ಧರಿಸಲು, ಅವರ ಆದಾಯವನ್ನು ತಾವೇ ನಿರ್ಧರಿಸಲು, ಅವರನ್ನು ಬಂಡವಾಳ ಇಲ್ಲದವರನ್ನಾಗಿ ಮಾಡಲು, ಅಥವಾ ಬಂಡವಾಳವನ್ನು ಶೀಘ್ರವಾಗಿ ಅಪಾರ ಪ್ರಮಾಣಗಳಿಗೆ ಹೆಚ್ಚಿಸಿಕೊಳ್ಳಲು ಅವರಿಗೆ ಅವಕಾಶ ನೀಡಲು, ಇತ್ಯಾದಿ ಕಾರ್ಯಾಚರಣೆಗಳನ್ನು ನಿರ್ವಹಿಸಲು, ಅವಕಾಶಗಳನ್ನು ಪಡೆದುಕೊಳ್ಳುತ್ತಾರೆ.

ನಾವು ಈಗಷ್ಟೆ ಬರ್ಲಿನ್‌ನ 'Disconto-Gesellschaft' ಬ್ಯಾಂಕಿನ ಬಂಡವಾಳ 300 ಮಿಲಿಯ ಮಾರ್ಕ್ ಆಗಿದ್ದಿತೆಂದು ತಿಳಿಸಿದೆವು. ಬ್ಯಾಂಕಿನ ಬಂಡವಾಳದ ಈ ಹೆಚ್ಚಳವೇ ಬರ್ಲಿನ್‌ನ ಅತಿ ದೊಡ್ಡ ಬ್ಯಾಂಕುಗಳ – 'Deutsche Bank' ಹಾಗೂ 'Disconto-Gesellschaft'ಗಳ – ನಡುವೆ ಅಧಿನಾಯಕತ್ವಕ್ಕಾಗಿ ಹೋರಾಟದ ಪ್ರಸಂಗಗಳಲ್ಲೊಂದಾಗಿದ್ದಿತು. 1870ರಲ್ಲಿ ಮೊದಲಿನದು ಇನ್ನೂ ಆರಂಭಿಗನಾಗಿದ್ದಿತು, ಅದರ ಬಂಡವಾಳ 15 ಮಿಲಿಯ ಮಾರ್ಕ್ ಅಷ್ಟೆ

---

*Jean Lescure, *L'épargne en France*, P. (ಜಾನ್ ಲೆಸ್‌ಕ್ಯೂರ್, 'ಫ್ರಾನ್ಸಿನಲ್ಲಿ ಸೇವಿಂಗ್ಸ್,' ಪ್ಯಾರಿಸ್. – ಸಂ.), 1914, ಪು. 52.

ಆಗಿದ್ದಿತು; ಎರಡನೆಯದು 30 ಮಿಲಿಯ ಮಾರ್ಕ್ ಬಂಡವಾಳ ಹೊಂದಿದ್ದಿತು. 1908ರಲ್ಲಿ ಮೊದಲಿನದು 200 ಮಿಲಿಯ ಮಾರ್ಕ್ ಬಂಡವಾಳವನ್ನೂ, ಎರಡನೆಯದು 170 ಮಿಲಿಯ ಮಾರ್ಕ್ ಬಂಡವಾಳವನ್ನೂ ಹೊಂದಿದ್ದವು. 1914ರಲ್ಲಿ ಮೊದಲಿನದು ತನ್ನ ಬಂಡವಾಳವನ್ನು 250 ಮಿಲಿಯಕ್ಕೆ ಹೆಚ್ಚಿಸಿಕೊಂಡರೆ, ಎರಡನೆಯದು ಮತ್ತೊಂದು ಪ್ರಥಮ ದರ್ಜೆಯ ದೊಡ್ಡ ಬ್ಯಾಂಕ್ ('Schaaffhausenscher Bankverein')ನೊಂದಿಗೆ ಮಿಳನಗೊಳ್ಳುವ ಮೂಲಕ ತನ್ನ ಬಂಡವಾಳವನ್ನು 300 ಮಿಲಿಯಕ್ಕೆ ಏರಿಸಿಕೊಂಡಿತು. ಅಧಿನಾಯಕತ್ವಕ್ಕಾಗಿ ಈ ಹೋರಾಟದೊಂದಿಗೆ ಜೊತೆಜೊತೆಯಾಗಿಯೇ ಈ ಎರಡೂ ಬ್ಯಾಂಕುಗಳ ನಡುವೆ ಹೆಚ್ಚು ಹೆಚ್ಚು ಸ್ಥಿರವಾದ ಸ್ವರೂಪದ "ಒಪ್ಪಂದ"ಗಳು ಆಗುವುದೂ ಹೆಚ್ಚು ಆಗಾಗ್ಗೆ ಜರುಗಿತೆನ್ನಿ. ಅತ್ಯಂತ ಮಿತವಾದ, ಅತ್ಯಂತ ಎಚ್ಚರಿಕೆಯ ಬೂರ್ಷ್ವಾ ಸುಧಾರಣಾವಾದದ ಮೇರೆಗಳನ್ನು ಸ್ವಲ್ಪ ಮಾತ್ರವೂ ಮೀರದಂಥ ದೃಷ್ಟಿಕೋನದಿಂದ ಆರ್ಥಿಕ ಪ್ರಶ್ನೆಗಳನ್ನು ಪರಿಶೀಲಿಸುವಂಥ ಬ್ಯಾಂಕಿಂಗ್ ತಜ್ಞರ ಮೇಲೆ ಈ ಬ್ಯಾಂಕಿಂಗ್ ಬೆಳವಣಿಗೆಯು ಕೆಳಗಿನ ತೀರ್ಮಾನಗಳನ್ನು ಬಲವಂತವಾಗಿ ಹೊರಿಸುತ್ತದೆ:

'Disconto-Gesellschaft' ಬ್ಯಾಂಕಿನ ಬಂಡವಾಳ 300 ಮಿಲಿಯ ಮಾರ್ಕುಗಳಿಗೆ ಏರಿದುದರ ಬಗೆಗೆ ವ್ಯಾಖ್ಯಾನಿಸುತ್ತ ಜರ್ಮನ್ ಪತ್ರಿಕೆ 'ದಿ ಬ್ಯಾಂಕ್' ಹೀಗೆ ಬರೆಯಿತು: "ಇತರ ಬ್ಯಾಂಕುಗಳೂ ಇದೇ ಮಾರ್ಗ ಅನುಸರಿಸುವುವು. ಇಂದು ಜರ್ಮನಿಯನ್ನು ಆರ್ಥಿಕವಾಗಿ ಆಳುತ್ತಿರುವ ಮುನ್ನೂರು ಮಂದಿ ಸ್ವಲ್ಪ ಕಾಲದಲ್ಲೇ, ಕ್ರಮೇಣ ಐವತ್ತು, ಇಪ್ಪತ್ತೈದು ಅಥವಾ ಇನ್ನೂ ಕಮ್ಮಿ ಸಂಖ್ಯೆಗೆ ಇಳಿಯುತ್ತಾರೆ. ಕೇಂದ್ರೀಕರಣದತ್ತ ಚಲಿಸುವ ಈ ನೂತನ ಘಟನೆಯು ಬ್ಯಾಂಕಿಂಗ್ ವ್ಯವಹಾರಕ್ಕಷ್ಟೆ ಸೀಮಿತವಾಗಿರುತ್ತದೆಂದೇನೂ ಹೇಳಲಾಗದು. ಬಿಡಿ ಬ್ಯಾಂಕುಗಳ ಮಧ್ಯೆ ಅಸ್ತಿತ್ವದಲ್ಲಿರುವ ನಿಕಟ ಸಂಬಂಧಗಳು ಸಹಜವಾಗಿಯೇ ಈ ಬ್ಯಾಂಕುಗಳ ಕೃಪಾಶ್ರಯದಲ್ಲಿರುವ ಕೈಗಾರಿಕಾ ಸಿಂಡಿಕೇಟುಗಳು ಪರಸ್ಪರ ಹತ್ತಿರ ಬರುವುದಕ್ಕೆ ದಾರಿ ಮಾಡಿಕೊಡುತ್ತವೆ.... ಒಂದು ಸೊಗಸಾದ ದಿನ ನಾವು ಎಚ್ಚರಾಗಿ ನಮ್ಮ ಕಣ್ಣುಗಳ ಮುಂದೆ ಟ್ರಸ್ಟುಗಳು ಬಿಟ್ಟು ಬೇರೇನೂ ಇರದಿರುವುದನ್ನು ಆಶ್ಚರ್ಯದಿಂದ ಕಾಣುತ್ತೇವೆ. ಖಾಸಗಿ ಏಕಸ್ವಾಮ್ಯ ಸಂಸ್ಥೆಗಳ ಸ್ಥಳದಲ್ಲಿ ರಾಜ್ಯ ಏಕಸ್ವಾಮ್ಯ ಸಂಸ್ಥೆಗಳನ್ನು ಸ್ಥಾಪಿಸುವ ಆವಶ್ಯಕತೆಯನ್ನು ನಾವು ಎದುರಿಸಬೇಕಾಗಿ ಬರುತ್ತದೆ. ಆದರೂ ನಾವು ನಮ್ಮನ್ನೇನೂ ದೂಷಿಸಿಕೊಳ್ಳಬೇಕಾಗಿಲ್ಲ. ಪರಿಸ್ಥಿತಿಯು ತನ್ನ ಮಾರ್ಗವನ್ನು ತಾನು ಸ್ವಲ್ಪವಷ್ಟೆ ಉತ್ಕರ್ಷದೊಂದಿಗೆ ಅನುಸರಿಸಿಕೊಂಡು ಹೋಗಲು ಬಿಟ್ಟುದಕ್ಕಾಗಿ ಮಾತ್ರ ನಮ್ಮನ್ನು ದೂಷಿಸಿಕೊಳ್ಳಬೇಕಷ್ಟೆ."*

---

* A. Lansburgh, *Die Bank mit den 300 Millionen* in *Die Bank* (ಎ. ಲಾನ್ಸ್‌ಬುರ್ಗ್, '300 ಮಿಲಿಯ ಇರುವ ಬ್ಯಾಂಕು,' 'ದಿ ಬ್ಯಾಂಕ್'. – ಸಂ.), 1914, 1, ಪು. 426.

ಇದು ಬೂರ್ಷ್ವಾ ಪತ್ರಿಕೋದ್ಯಮದ ನಿರ್ವೀರ್ಯತೆಗೊಂದು ನಿದರ್ಶನ. ಬೂರ್ಷ್ವಾ ಪತ್ರಿಕೋದ್ಯಮಕ್ಕೂ ಬೂರ್ಷ್ವಾ ವಿಜ್ಞಾನಕ್ಕೂ ಮಧ್ಯೆ ಇರುವ ಒಂದೇ ಒಂದು ವ್ಯತ್ಯಾಸವೆಂದರೆ – ಬೂರ್ಷ್ವಾ ವಿಜ್ಞಾನವು ಇನ್ನೂ ಕಮ್ಮಿ ಪ್ರಾಮಾಣಿಕ ವಾದುದು. ಅದು ವಿಷಯದ ಸಾರವನ್ನು ಅಸ್ಪಷ್ಟಗೊಳಿಸಲು, ಮರಗಳಿಂದ ಅರಣ್ಯ ವನ್ನು ಮುಚ್ಚಿಡಲು, ಯತ್ನಿಸುತ್ತದೆ. ಕೇಂದ್ರೀಕರಣದ ಫಲಿತಾಂಶಗಳನ್ನು ಕಂಡು "ಆಶ್ಚರ್ಯ ಪಡುವುದು," ಬಂಡವಾಳಶಾಹಿ ಜರ್ಮನಿಯ ಸರಕಾರವನ್ನು ಅಥವಾ ಬಂಡವಾಳಶಾಹಿ "ಸಮಾಜ"ವನ್ನು ("ನಮ್ಮನ್ನೇ") "ನಿಂದಿಸುವುದು," ಜರ್ಮನ್ "ಕಾರ್ಟೆಲ್" ತಜ್ಞ ಚೀರ್ಷ್ಕಿ ಅಮೆರಿಕನ್ ಟ್ರಸ್ಟುಗಳಿಗೆ ಭಯಪಟ್ಟುಕೊಂಡು ಜರ್ಮನ್ ಕಾರ್ಟೆಲ್‌ಗಳು "ಟ್ರಸ್ಟುಗಳಂತೆ ತಾಂತ್ರಿಕ ಹಾಗೂ ಆರ್ಥಿಕ ಪ್ರಗತಿಯನ್ನು ಅತಿಹೆಚ್ಚಾಗಿ ಉತ್ಕರ್ಷಿಸದೆ ಇರಬಹುದು"* ಎಂದುಕೊಂಡು ಜರ್ಮನ್ ಕಾರ್ಟೆಲ್ ಗಳನ್ನೇ "ಹೆಚ್ಚು ಇಷ್ಟಪಡುವ" ರೀತಿಯಲ್ಲೇ, ಸ್ಟಾಕುಗಳನ್ನೂ ಷೇರುಗಳನ್ನೂ ಜಾರಿಗೆ ತರುವುದು ಕೇಂದ್ರೀಕರಣವನ್ನು "ಉತ್ಕರ್ಷಿಸ"ಬಹುದೆಂದು ಅಂಜುವುದು – ಇದು ನಿರ್ವೀರ್ಯತೆಯಲ್ಲವೇ ?

ಆದರೆ ವಾಸ್ತವಾಂಶಗಳು ವಾಸ್ತವಾಂಶಗಳಾಗಿಯೇ ಇರುತ್ತವೆ. ಜರ್ಮನಿಯಲ್ಲಿ ಟ್ರಸ್ಟುಗಳಿಲ್ಲ; ಅಲ್ಲಿ ಕಾರ್ಟೆಲ್‌ಗಳು "ಅಷ್ಟೆ" ಇರುವುದು. ಆದರೆ ಜರ್ಮನಿಯನ್ನು ಮುನ್ನೂರಕ್ಕೂ ಹೆಚ್ಚಿರದ ಬಂಡವಾಳ ಪ್ರಭುಗಳು ಆಳುತ್ತಿದ್ದಾರೆ ಮತ್ತು ಅವರ ಸಂಖ್ಯೆಯೂ ಸತತವಾಗಿ ಕಮ್ಮಿಯಾಗುತ್ತಿದೆ. ಏನೇ ಆದರೂ, ಎಲ್ಲ ಬಂಡವಾಳ ಶಾಹಿ ದೇಶಗಳಲ್ಲೂ, ಅವುಗಳಲ್ಲಿನ ಬ್ಯಾಂಕಿಂಗ್ ನಿಯಮಗಳಲ್ಲಿ ಏನೇ ವ್ಯತ್ಯಾಸ ಗಳಿದ್ದರೂ, ಬ್ಯಾಂಕುಗಳು ಬಂಡವಾಳ ಕೇಂದ್ರೀಕರಣ ಪ್ರಕ್ರಿಯೆಯನ್ನೂ ಏಕಸ್ವಾಮ್ಯ ಸಂಸ್ಥೆಗಳ ರಚನೆಯನ್ನೂ ಬಹಳವಾಗಿ ತೀವ್ರಗೊಳಿಸುತ್ತವೆ ಮತ್ತು ಉತ್ಕರ್ಷಿಸು ತ್ತವೆ.

"ಬ್ಯಾಂಕಿಂಗ್ ಪದ್ಧತಿಯು ನಿಜಕ್ಕೂ ಸಾಮಾಜಿಕ ಪ್ರಮಾಣದಲ್ಲಿ ಉತ್ಪಾದನಾ ಸಾಧನಗಳ ಸಾಮಾನ್ಯ ಲೆಕ್ಕಾಚಾರದ ಹಾಗೂ ವಿತರಣೆಯ ಒಂದು ರೂಪ, ಆದರೆ ಒಂದು ರೂಪವಷ್ಟೆ" ಎಂದು ಮಾರ್ಕ್ಸ್ ಅರ್ಧ ಶತಮಾನದ ಹಿಂದೆ 'ಬಂಡವಾಳ'21 ದಲ್ಲಿ ಬರೆದರು. ಬ್ಯಾಂಕ್ ಬಂಡವಾಳದ ಹೆಚ್ಚಳ, ಅತ್ಯಂತ ದೊಡ್ಡ ಬ್ಯಾಂಕುಗಳ ಶಾಖೆಗಳ ಹಾಗೂ ಕಾರ್ಯಾಲಯಗಳ ಸಂಖ್ಯೆಯಲ್ಲಿ ಹೆಚ್ಚಳ, ಅವುಗಳ ಖಾತೆಗಳ ಸಂಖ್ಯೆಯಲ್ಲಿ ಹೆಚ್ಚಳ, ಇತ್ಯಾದಿಗಳ ಬಗೆಗೆ ನಾವು ಉದ್ಧರಿಸಿರುವ ಸಂಖ್ಯೆಗಳು, ಇಡೀ ಬಂಡವಾಳಶಾಹಿ ವರ್ಗದ ಈ "ಸಾಮಾನ್ಯ ಲೆಕ್ಕಾಚಾರ"ದ ಸ್ಪಷ್ಟ ಚಿತ್ರಣ ನೀಡು ತ್ತವೆ; ಬಂಡವಾಳಗಾರರದಷ್ಟೆ ಅಲ್ಲ, ಏಕೆಂದರೆ, ಬ್ಯಾಂಕುಗಳು ತಾತ್ಕಾಲಿಕವಾಗಿ ಯಾದರೂ ನಾನಾ ರೀತಿಯ ಹಣ ಆದಾಯಗಳನ್ನೂ – ಸಣ್ಣ ವ್ಯಾಪಾರಗಾರರ,

---

* ಚೀರ್ಷ್ಕಿ, ಪೂರ್ವೋಕ್ತ ಗ್ರಂಥ, ಪು. 128.

ಆಫೀಸು ಗುಮಾಸ್ತರ ಮತ್ತು ಕಾರ್ಮಿಕ ವರ್ಗದ ಸಣ್ಣ ಮೇಲ್‌ಸ್ತರದ ಜನರ ಆದಾಯಗಳನ್ನೂ – ಸಂಗ್ರಹಿಸುತ್ತವೆ. "ಉತ್ಪಾದನಾ ಸಾಧನಗಳ ಸಾಮಾನ್ಯ ವಿತರಣೆ"ಯೇ, ರೂಪದೃಷ್ಟಿಯಿಂದ, ಆಧುನಿಕ ಬ್ಯಾಂಕುಗಳಿಂದ ಹೊರಹೊಮ್ಮಿದುದಾಗಿದೆ. ಫ್ರಾನ್ಸಿನಲ್ಲಿ ಸುಮಾರು 3-6, ಜರ್ಮನಿಯಲ್ಲಿ 6-8 ಇರುವ ಈ ಅತ್ಯಂತ ದೊಡ್ಡ ಬ್ಯಾಂಕುಗಳು ಕೋಟ್ಯಾಂತರ ಹಣವನ್ನು ತಮ್ಮ ಹತೋಟಿಯಲ್ಲಿ ಹೊಂದಿರುತ್ತವೆ. ಆದರೆ ಸಾರದ ದೃಷ್ಟಿಯಿಂದ ಉತ್ಪಾದನಾ ಸಾಧನಗಳ ವಿತರಣೆಯು "ಸಾಮಾನ್ಯ"ವಾಗಿಲ್ಲ, ಆದರೆ ಖಾಸಗಿಯಾಗಿದೆ, ಅಂದರೆ, ಅದು ಭಾರಿ ಬಂಡವಾಳದ – ಪ್ರಧಾನವಾಗಿ ಬೃಹತ್ ಏಕಸ್ವಾಮ್ಯ ಬಂಡವಾಳದ; ಜನಸಮೂಹಗಳು ತೀವ್ರ ಕೊರತೆಯಲ್ಲಿ ಜೀವನ ಸಾಗಿಸುತ್ತಿರುವಂಥ, ಇಡೀ ಕೃಷಿ ಬೆಳವಣಿಗೆಯು ಕೈಗಾರಿಕಾ ಬೆಳವಣಿಗೆಗಿಂತ ಶೋಚನೀಯವಾಗಿ ಹಿಂದುಳಿದಿರುವಂಥ, ಕೈಗಾರಿಕೆಯೊಳಗೇ "ಭಾರಿ ಕೈಗಾರಿಕೆಗಳು" ಇತರೆಲ್ಲ ಕೈಗಾರಿಕಾ ಶಾಖೆಗಳಿಂದಲೂ ಕಪ್ಪ ವಸೂಲು ಮಾಡುತ್ತಿರುವಂಥ ಪರಿಸ್ಥಿತಿಗಳಲ್ಲಿ ಕಾರ್ಯಜರುಗಿಸುವ ಏಕಸ್ವಾಮ್ಯ ಬಂಡವಾಳದ – ಹಿತಗಳಿಗೆ ಅನುಗುಣವಾಗಿರುತ್ತದೆ.

ಬಂಡವಾಳಶಾಹಿ ಆರ್ಥಿಕತೆಯನ್ನು ಸಾಮಾಜಿಕೀಕರಿಸುವ ವಿಷಯದಲ್ಲಿ ಸೇವಿಂಗ್ಸ್ ಬ್ಯಾಂಕುಗಳೂ ಪೋಸ್ಟ್ ಆಫೀಸುಗಳೂ ಬ್ಯಾಂಕುಗಳೊಂದಿಗೆ ಸ್ಪರ್ಧಿಸತೊಡಗಿವೆ; ಅವು ಹೆಚ್ಚು "ವಿಕೇಂದ್ರೀಕೃತ"ವಾದವು, ಅಂದರೆ, ಅವುಗಳ ಪ್ರಭಾವವು ಇನ್ನೂ ಹೆಚ್ಚು ಸ್ಥಳಗಳಿಗೆ, ಹೆಚ್ಚು ದೂರ ದೂರ ಪ್ರದೇಶಗಳಿಗೆ, ಜನಸಂಖ್ಯೆಯ ಹೆಚ್ಚು ವಿಶಾಲ ವಿಭಾಗಗಳಿಗೆ, ವಿಸ್ತರಿಸುತ್ತದೆ. ಬ್ಯಾಂಕುಗಳಲ್ಲೂ ಸೇವಿಂಗ್ಸ್ ಬ್ಯಾಂಕುಗಳಲ್ಲೂ ಡಿಪಾಜಿಟ್ಟುಗಳ ತುಲನಾತ್ಮಕ ಹೆಚ್ಚಳದ ಬಗೆಗೆ ಅಮೆರಿಕನ್ ಆಯೋಗವೊಂದು ಸಂಗ್ರಹಿಸಿದ ಆಧಾರಾಂಶಗಳು ಈ ರೀತಿ ಇವೆ:*

ಡಿಪಾಜಿಟ್ಟುಗಳು (ಸಾವಿರ ಮಿಲಿಯ ಮಾರ್ಕುಗಳಲ್ಲಿ)

| | ಇಂಗ್ಲೆಂಡ್ | | ಫ್ರಾನ್ಸ್ | | ಜರ್ಮನಿ | | |
|---|---|---|---|---|---|---|---|
| | ಬ್ಯಾಂಕುಗಳು | ಸೇವಿಂಗ್ಸ್ ಬ್ಯಾಂಕುಗಳು | ಬ್ಯಾಂಕುಗಳು | ಸೇವಿಂಗ್ಸ್ ಬ್ಯಾಂಕುಗಳು | ಬ್ಯಾಂಕುಗಳು | ಕ್ರೆಡಿಟ್ ಸೊಸೈಟಿಗಳು | ಸೇವಿಂಗ್ಸ್ ಬ್ಯಾಂಕುಗಳು |
| 1880 | 8.4 | 1.6 | ? | 0.9 | 0.5 | 0.4 | 2.6 |
| 1888 | 12.4 | 2.0 | 1.5 | 2.1 | 1.1 | 0.4 | 4.5 |
| 1908 | 23.2 | 4.2 | 3.7 | 4.2 | 7.1 | 2.2 | 13.9 |

*National Monetary Commission* in *Die Bank* ('ರಾಷ್ಟ್ರೀಯ ಹಣಕಾಸು ಆಯೋಗ'ದ 'ದಿ ಬ್ಯಾಂಕ್'ನಲ್ಲಿ. – ಸಂ.) ಸಂಗ್ರಹಿಸಿದ ಅಂಕಿಅಂಶಗಳು, ಉದ್ಧರಿಸಲಾದುದು, 1910, 2, ಪು. 1200.

ಸೇವಿಂಗ್ಸ್ ಬ್ಯಾಂಕುಗಳು ಡಿಪಾಜಿಟ್ಟುಗಳ ಮೇಲೆ ಶೇ. 4 ಹಾಗೂ ಶೇ. 4.25 ದರದಲ್ಲಿ ಬಡ್ಡಿ ನೀಡುವುದರಿಂದ, ಅವು ತಮ್ಮ ಬಂಡವಾಳವನ್ನು "ಲಾಭದಾಯಕ"ವಾಗಿ ತೊಡಗಿಸುವುದಕ್ಕೆ ಪ್ರಯತ್ನಿಸಬೇಕು; ಬಿಲ್ಲುಗಳು, ಭೋಗ್ಯಪತ್ರಗಳು, ಇತ್ಯಾದಿಗಳಲ್ಲಿ ವ್ಯವಹರಿಸಬೇಕು. ಬ್ಯಾಂಕುಗಳಿಗೂ ಸೇವಿಂಗ್ಸ್ ಬ್ಯಾಂಕುಗಳಿಗೂ ನಡುವಿನ ಗಡಿರೇಖೆ "ಹೆಚ್ಚು ಹೆಚ್ಚಾಗಿ ಅಳಿಸಿ ಹೋಗುತ್ತಿದೆ." ಬಿಲ್ಲುಗಳನ್ನು ಡಿಸ್ಕೌಂಟ್ ಮಾಡುವುದು (ಹುಂಡಿಗಳನ್ನು ಮುಂಗಡವಾಗಿ ಮುರಿಸುವುದು) ಇಂತಹ "ಶುದ್ಧ" ಬ್ಯಾಂಕಿಂಗ್ ವ್ಯವಹಾರಗಳಲ್ಲಿ ತೊಡಗಕೂಡದೆಂದು ಸೇವಿಂಗ್ಸ್ ಬ್ಯಾಂಕುಗಳಿಗೆ "ನಿಷೇಧ ಹಾಕಬೇಕೆ"ಂದು, ಉದಾಹರಣೆಗೆ, ಬೋಕಮ್ ಹಾಗೂ ಎರ್‌ಫುರ್ತ್ ವಾಣಿಜ್ಯ ಮಂಡಳಿಗಳು ಆಗ್ರಹಿಸಿವೆ. ಪೋಸ್ಟ್ ಆಫೀಸ್‌ಗಳ "ಬ್ಯಾಂಕಿಂಗ್" ಕಾರ್ಯಾಚರಣೆಗಳನ್ನು ಸೀಮಿತಗೊಳಿಸಬೇಕೆಂದೂ ಅವು ಆಗ್ರಹಿಸುತ್ತಿವೆ.* ರಾಜ್ಯ ಏಕಸ್ವಾಮ್ಯವು ಅನಿರೀಕ್ಷಿತವಾಗಿ ಎಲ್ಲಿಂದಲೋ ಕಳ್ಳತನದಿಂದ ಬಂದು ತಮ್ಮ ಮೇಲೆ ಎರಗುವುದೆಂದು ಬ್ಯಾಂಕಿಂಗ್ ಪ್ರಭುಗಳು ಅಂಜಿರುವಂತೆ ಕಾಣುತ್ತಿದೆ. ಆದರೆ ಈ ಅಂಜಿಕೆಯು ಒಂದೇ ಆಫೀಸಿನಲ್ಲಿರುವ ಇಬ್ಬರು ಡಿಪಾರ್ಟ್‌ಮೆಂಟ್ ಮ್ಯಾನೇಜರುಗಳ ನಡುವಿನ ಪೈಪೋಟಿ ಎನ್ನುವಂತಹುದರ ಅಭಿವ್ಯಕ್ತಿಗಿಂತ ಹೆಚ್ಚಿಗೇನೂ ಅಲ್ಲವೆಂದು ಹೇಳಬೇಕಾಗಿಲ್ಲ; ಏಕೆಂದರೆ, ಒಂದು ಕಡೆ, ಸೇವಿಂಗ್ಸ್ ಬ್ಯಾಂಕುಗಳ ವಶಕ್ಕೆ ಒಪ್ಪಿಸಲಾದ ಕೋಟ್ಯಾಂತರ ಹಣವನ್ನು, ಅಂತಿಮ ವಿಶ್ಲೇಷಣೆಯಲ್ಲಿ, ವಾಸ್ತವವಾಗಿ ಇದೇ ಬ್ಯಾಂಕ್ ಬಂಡವಾಳ ಪ್ರಭುಗಳೇ ನಿಯಂತ್ರಿಸುತ್ತಾರೆ. ಮತ್ತೊಂದು ಕಡೆ, ಬಂಡವಾಳಶಾಹಿ ಸಮಾಜದಲ್ಲಿ ರಾಜ್ಯ ಏಕಸ್ವಾಮ್ಯವು, ದಿವಾಳಿ ಏಳುವ ಅಂಚಿನಲ್ಲಿರುವ ಒಂದಲ್ಲ ಒಂದು ಕೈಗಾರಿಕಾ ಶಾಖೆಯಲ್ಲಿನ ಲಕ್ಷಾಧಿಪತಿಗಳಿಗೆ ಆದಾಯವನ್ನು ಹೆಚ್ಚಿಸುವ ಹಾಗೂ ಖಚಿತಪಡಿಸಿಕೊಡುವ ಸಾಧನವಷ್ಟೆ ಆಗಿರುತ್ತದೆ.

ಮುಕ್ತ ಸ್ಪರ್ಧೆ ಮೇಲುಗೈ ಪಡೆದಿದ್ದ ಹಳೆಯ ಮಾದರಿಯ ಬಂಡವಾಳವಾದದಿಂದ ಏಕಸ್ವಾಮ್ಯದ್ದೇ ಸರ್ವಾಧಿಕಾರವಾದ ಹೊಸ ಬಂಡವಾಳವಾದಕ್ಕೆ ಪರಿವರ್ತನೆಯನ್ನು, ಬೇರೆ ಅನೇಕ ಅಂಶಗಳ ಜೊತೆಗೆ, ಸ್ಟಾಕ್ ಎಕ್ಸ್‌ಚೇಂಜ್‌ನ ಪ್ರಾಮುಖ್ಯತೆ ತಗ್ಗುವುದು, ವ್ಯಕ್ತಪಡಿಸುತ್ತದೆ. 'ದಿ ಬ್ಯಾಂಕ್' ಪತ್ರಿಕೆ ಬರೆಯುತ್ತದೆ: "ಹೊಸದಾಗಿ ಹೊರಡಿಸಲಾದ ಷೇರುಗಳ ಬಹುಭಾಗವನ್ನು ತಮ್ಮ ಖಾತೇದಾರರಿಗೆ ನೀಡಲು ಹಿಂದೆ ಬ್ಯಾಂಕುಗಳು ಇನ್ನೂ ಸಮರ್ಥವಾಗಿರದಿದ್ದಾಗ ಚಲಾವಣೆಯ ಅತ್ಯಗತ್ಯ ಮಾಧ್ಯಮವಾಗಿದ್ದ ಸ್ಟಾಕ್ ಎಕ್ಸ್‌ಚೇಂಜ್ ಈಗ ಬಹಳ ಕಾಲದಿಂದ ಅಂತಹ ಮಾಧ್ಯಮವಾಗಿರುವುದು ನಿಂತಿದೆ."**

---

**Die Bank*ನಲ್ಲಿ ಅಮೆರಿಕದ *National Monetary Commission*ನ ಅಂಕಿಅಂಶಗಳು, 1913, ಪು. 811, 1022; 1914, ಪು. 713.

***Die Bank*, 1914, 1, ಪು. 316.

4—566

“ ‘ಪ್ರತಿಯೊಂದು ಬ್ಯಾಂಕೂ ಒಂದು ಸ್ಟಾಕ್ ಎಕ್ಸ್‌ಚೇಂಜೇ.’ – ಬ್ಯಾಂಕು ಹೆಚ್ಚು ದೊಡ್ಡದಾಗಿದ್ದಷ್ಟೂ, ಬ್ಯಾಂಕಿಂಗ್ ವ್ಯವಹಾರದ ಕೇಂದ್ರೀಕರಣ ಹೆಚ್ಚು ಯಶಸ್ವಿಯಾಗಿದ್ದಷ್ಟೂ, ಈ ಆಧುನಿಕ ಸೂಕ್ತಿ ಹೆಚ್ಚು ನಿಜವಾಗುತ್ತದೆ.”* “ಹಿಂದೆ, ಎಂಟನೆಯ ದಶಕದ ವರ್ಷಗಳಲ್ಲಿ, ಸ್ಟಾಕ್ ಎಕ್ಸ್‌ಚೇಂಜ್ ಹರಯದ ಹುಮ್ಮಸ್ಸಿನಿಂದ ಕೂಡಿದ್ದು” (1873ರ ಸ್ಟಾಕ್ ಎಕ್ಸ್‌ಚೇಂಜ್ ಕುಸಿತ,[22] ಗ್ರುನ್‌ದರ್ ಗುಲ್ಲುಗಳು[23] ಇತ್ಯಾದಿಗಳಿಗೆ, “ಲಘು” ಉಲ್ಲೇಖ) “ಜರ್ಮನಿಯ ಕೈಗಾರಿಕೀಕರಣ ಯುಗವನ್ನು ಪ್ರಾರಂಭಿಸಿದಲ್ಲಿ, ಈ ದಿನಗಳಲ್ಲಿ ಬ್ಯಾಂಕುಗಳೂ ಕೈಗಾರಿಕೆಯೂ ‘ತಾವೇ ಆ ಕೆಲಸವನ್ನು ಮಾಡ’ಬಲ್ಲವಾಗಿದೆ. ಸ್ಟಾಕ್ ಎಕ್ಸ್‌ಚೇಂಜ್ ಮೇಲೆ ನಮ್ಮ ದೊಡ್ಡ ಬ್ಯಾಂಕುಗಳ ಆಧಿಪತ್ಯವು... ಸಂಪೂರ್ಣವಾಗಿ ಸಂಘಟಿತವಾದ ಜರ್ಮನ್ ಕೈಗಾರಿಕಾ ರಾಜ್ಯದ ಅಭಿವ್ಯಕ್ತಿಯಲ್ಲದೆ ಬೇರೇನೂ ಅಲ್ಲ. ತನ್ನಷ್ಟಕ್ಕೆ ತಾನೆ ಕಾರ್ಯ ಜರುಗಿಸುವ ಆರ್ಥಿಕ ನಿಯಮಗಳ ಕ್ಷೇತ್ರವನ್ನು ಹೀಗೆ ಕುಗ್ಗಿಸಿ, ಬ್ಯಾಂಕುಗಳು ಉದ್ದೇಶಪೂರ್ವಕವಾಗಿ ನಿಯಂತ್ರಿಸುವ ಕ್ಷೇತ್ರವನ್ನು ಗಣನೀಯವಾಗಿ ಹಿಗ್ಗಿಸಿದಲ್ಲಿ, ಕೆಲವೇ ಮಾರ್ಗದರ್ಶಕ ಅಧಿಪತಿಗಳ ರಾಷ್ಟ್ರೀಯ ಆರ್ಥಿಕ ಜವಾಬ್ದಾರಿ ಅಪಾರವಾಗಿ ಹೆಚ್ಚುತ್ತದೆ” ಎಂದು ಜರ್ಮನ್ ಪ್ರೊಫೆಸರ್ ಷುಲ್ತ್ಸೆ-ಗೆವೆರ್ನಿತ್ಸ್ ಬರೆಯುತ್ತಾರೆ.** ಜರ್ಮನ್ ಸಾಮ್ರಾಜ್ಯವಾದದ ಸಮರ್ಥಕರಾದ, ಎಲ್ಲ ದೇಶಗಳ ಸಾಮ್ರಾಜ್ಯವಾದಿಗಳಿಂದಲೂ ಪ್ರಮಾಣವಚನರೆಂದು ಭಾವಿಸಲ್ಪಟ್ಟ ಇವರು, ಒಂದು “ಅಪ್ರಧಾನ ವಿಷಯ”ವನ್ನು – ಬ್ಯಾಂಕುಗಳಿಂದ ಆರ್ಥಿಕ ಜೀವನದ “ಉದ್ದೇಶಪೂರ್ವಕ ನಿಯಂತ್ರಣ” ಎಂದರೆ “ಸಂಪೂರ್ಣವಾಗಿ ಸಂಘಟಿತರಾದ” ಕೆಲವೇ ಏಕಸ್ವಾಮ್ಯಾಧಿಪತಿಗಳಿಂದ ಸಾರ್ವಜನಿಕರ ಲೂಟಿ, ಎಂಬ “ಅಪ್ರಧಾನ ವಿಷಯವನ್ನು” – ಕಡೆಗಾಣಿಸಲು ಯತ್ನಿಸುತ್ತಾರೆ. ಬೂರ್ಷ್ವಾ ಪ್ರಾಧ್ಯಾಪಕರೊಬ್ಬರ ಕಾರ್ಯಭಾರವು ಇಡೀ ಬ್ಯಾಂಕ್ ಯಂತ್ರಭಾಗವನ್ನು ತೆರೆದು ತೋರಿಸುವುದಲ್ಲ, ಅಥವಾ ಬ್ಯಾಂಕ್ ಏಕಸ್ವಾಮ್ಯಾಧಿಪತಿಗಳ ಹಂಚಿಕೆಗಳನ್ನೆಲ್ಲ ಬಯಲು ಮಾಡುವುದಲ್ಲ, ಆದರೆ ಅದನ್ನು ಅನುಕೂಲವಾದ ರೀತಿಯಲ್ಲಿ ಬಣ್ಣಿಸುವುದಾಗಿರುತ್ತದೆ.

ಇದೇ ರೀತಿ ಇನ್ನೂ ಹೆಚ್ಚು ಪ್ರಮಾಣವಚನರಾದ ಅರ್ಥಶಾಸ್ತ್ರಜ್ಞ ಹಾಗೂ ಸ್ವತಃ ಬ್ಯಾಂಕರ್ ಆದ ರೀಸ್ಸೆರ್‌ರವರೂ ಅಲ್ಲಗಳೆಯಲಾಗದಂಥ ವಾಸ್ತವಾಂಶಗಳನ್ನು ಅರ್ಥರಹಿತ ನುಡಿಗಟ್ಟುಗಳಿಂದ ತಿದ್ದಿತೇಲಿಸಿಬಿಡುತ್ತಾರೆ: “...ಒಟ್ಟಿನ ಮೇಲೆ ರಾಷ್ಟ್ರೀಯ

---

*Dr. Oscar Stillich, *Geld- und Bankwesen*, Berlin (ಒಸ್ಕರ್ ಷ್ಟಿಲ್ಲಿಹ್, ‘ಹಣವೂ ಬ್ಯಾಂಕಿಂಗ್ ವ್ಯವಹಾರವೂ,’ ಬರ್ಲಿನ್. – ಸಂ.), 1907, ಪು. 169.

**Schulze-Gaevernitz, *Die deutsche Kreditbank* in *Grundriß der Sozialökonomik*, Tüb., 1915, ಪು. 101.

ಆರ್ಥಿಕತೆಗೆ, ನಿರ್ದಿಷ್ಟವಾಗಿ ಸೆಕ್ಯುರಿಟಿ ಚಲಾವಣೆಗೆ ಅತ್ಯಗತ್ಯವಾದ ಲಕ್ಷಣವನ್ನು – ತನ್ನಲ್ಲಿಗೆ ಬಂದು ಸೇರುವ ಆರ್ಥಿಕ ಚಳವಳಿಗಳ ಅತ್ಯಂತ ಕರಾರುವಾಕ್ಕಾದ ಅಳತೆ ಗೋಲಾಗಿರುವುದಷ್ಟೆ ಅಲ್ಲ, ಬಹುಮಟ್ಟಿಗೆ ಸ್ವಯಂಚಾಲಿತವಾದ ನಿಯಂತ್ರಕನಾಗಿ ರುವ ಲಕ್ಷಣವನ್ನು – ಸ್ಟಾಕ್ ಎಕ್ಸ್‌ಚೇಂಜ್ ಸತತವಾಗಿ ಕಳೆದುಕೊಳ್ಳುತ್ತಿದೆ."*

ಬೇರೆ ಮಾತುಗಳಲ್ಲಿ ಹಳೆಯ ಬಂಡವಾಳವಾದವು – ಮುಕ್ತ ಸ್ಪರ್ಧೆಯನ್ನೂ ಅದರ ಅನಿವಾರ್ಯ ನಿಯಂತ್ರಕ ಸ್ಟಾಕ್ ಎಕ್ಸ್‌ಚೇಂಜ್‌ಅನ್ನೂ ಹೊಂದಿದ್ದ ಬಂಡ ವಾಳವಾದವು – ಹೊರಟು ಹೋಗುತ್ತಿದೆ. ಅದರ ಸ್ಥಾನವನ್ನು ಪಡೆದುಕೊಳ್ಳಲು ಹೊಸ ಬಂಡವಾಳವಾದವೊಂದು ಬಂದಿದೆ. ಇದು ಮುಕ್ತ ಸ್ಪರ್ಧೆ ಹಾಗೂ ಏಕಸ್ವಾಮ್ಯ ಇವೆರಡರ ಸಂಮಿಶ್ರವಾದ, ಸ್ಥಿತ್ಯಂತರ ಕಾಲದ ಯಾವುದೋ ಲಕ್ಷಣಗಳನ್ನು ಸ್ಪಷ್ಟ ವಾಗಿಯೇ ಪಡೆದುಕೊಂಡಿದೆ. ಈಗ ಈ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ: ಈ ಹೊಸ ಬಂಡವಾಳವಾದವು ಯಾವ ಸ್ಥಿತಿಗೆ "ಸಾಗಿ ಹೋಗುತ್ತಿದೆ"? ಆದರೆ ಬೂರ್ಷ್ವಾ ವಿದ್ವಾಂಸರು ಈ ಪ್ರಶ್ನೆಯನ್ನು ಎತ್ತಲೂ ಅಂಜುತ್ತಾರೆ.

"ಮೂವತ್ತು ವರ್ಷಗಳ ಹಿಂದೆ ಸ್ವತಂತ್ರವಾಗಿ ಪರಸ್ಪರರೊಂದಿಗೆ ಸ್ಪರ್ಧಿಸುತ್ತ ಉದ್ಯಮಿಗಳು ತಮ್ಮ ಉದ್ಯಮಕ್ಕೆ ಸಂಬಂಧಿಸಿದ ಕಾರ್ಯದಲ್ಲಿ ಹತ್ತನೇ ಒಂಬತ್ತು ಭಾಗವನ್ನು ತಾವೇ ನೆರವೇರಿಸುತ್ತಿದ್ದರು – "ಕಾರ್ಮಿಕರ" ದೈಹಿಕ ಶ್ರಮವೊಂದನ್ನು ಬಿಟ್ಟು. ಈಗ ಈ ಹತ್ತನೇ ಒಂಬತ್ತು "ಮಿದುಳಿನ ಕೆಲಸ"ವನ್ನೂ ಅವರ ನೌಕರರೇ ಮಾಡುತ್ತಾರೆ. ಬ್ಯಾಂಕಿಂಗ್ ಉದ್ಯಮ ಈ ವಿಕಾಸದ ಮುನ್‌ಸಾಲಿನಲ್ಲಿದೆ."** ಷುಲ್ತ್ಸೆ-ಗೆವೆರ್ನಿತ್ಸ್‌ರವರ ಈ ಒಪ್ಪಿಗೆಯು ನಮ್ಮನ್ನು ಮತ್ತೆ ಈ ಪ್ರಶ್ನೆಯ ಬಳಿಗೆ ತರುತ್ತದೆ: ಈ ಹೊಸ ಬಂಡವಾಳವಾದವು, ತನ್ನ ಸಾಮ್ರಾಜ್ಯಶಾಹಿ ಘಟ್ಟದಲ್ಲಿರುವ ಈ ಬಂಡವಾಳವಾದವು, ಎಲ್ಲಿಗೆ ಸಾಗಿಹೋಗುತ್ತಿದೆ?

ಕೇಂದ್ರೀಕರಣ ಪ್ರಕ್ರಿಯೆಯ ಫಲವಾಗಿ ಎಲ್ಲ ಬಂಡವಾಳಶಾಹಿ ಆರ್ಥಿಕತೆಯ ಅಧಿಪತಿ ಸ್ಥಾನದಲ್ಲಿ ನಿಲ್ಲುವ ಕೆಲವೇ ಬ್ಯಾಂಕುಗಳ ಮಧ್ಯೆ ಏಕಸ್ವಾಮ್ಯವಾದಿ ಒಪ್ಪಂದ ಗಳತ್ತ, ಬ್ಯಾಂಕ್‌ಗಳ ಟ್ರಸ್ಟ್‌ನತ್ತ ಚಲಿಸುವ ಹೆಚ್ಚು ಹೆಚ್ಚಾದ ತೀವ್ರ ಪ್ರವೃತ್ತಿ ಸಹಜವಾಗಿಯೇ ಕಂಡುಬರುತ್ತದೆ. ಅಮೆರಿಕದಲ್ಲಿ ಒಂಬತ್ತಲ್ಲ ಆದರೆ ಎರಡೇ ಅತ್ಯಂತ ದೊಡ್ಡ ಬ್ಯಾಂಕುಗಳು – ಕೋಟ್ಯಾಧೀಶರಾದ ರಾಕ್‌ಫೆಲ್ಲರ್ ಹಾಗೂ ಮಾರ್ಗನ್‌ರ ಬ್ಯಾಂಕುಗಳು – ಹನ್ನೊಂದು ಸಾವಿರ ಮಿಲಿಯ ಮಾರ್ಕ್ ಬಂಡವಾಳವನ್ನು ತಮ್ಮ

---

* ರೀಸ್ಸೆರ್, ಪೂರ್ವೋಕ್ತ ಗ್ರಂಥ, 4ನೆಯ ಆವೃತ್ತಿ, ಪು. 629.

** Schulze-Gaevernitz, *Die deutsche Kreditbank* in *Grundriß der Sozialökonomik*, Tübingen, 1915, ಪು. 151.

4*

ವಶದಲ್ಲಿ ಹೊಂದಿವೆ.* ಜರ್ಮನಿಯಲ್ಲಿ, ನಾವು ಮೇಲೆ ತಿಳಿಸಿದಂತೆ, 'Disconto-Gesellschaft' ಬ್ಯಾಂಕು 'Schaaffhausenscher Bankverein' ಬ್ಯಾಂಕನ್ನು ತನ್ನಲ್ಲಿ ಲೀನವಾಗಿಸಿಕೊಂಡುದರ ಬಗೆಗೆ ಸ್ಟಾಕ್ ಎಕ್ಸ್‌ಚೇಂಜ್ ಹಿತಗಳ ಮುಖಪತ್ರ 'ಫ್ರಾಂಕ್‌ಫುರ್ಟರ್ ತ್ಸೈತುಂಗ್' [24] ಹೀಗೆ ವ್ಯಾಖ್ಯಾನ ಮಾಡಿತು:

"ಬ್ಯಾಂಕುಗಳ ಕೇಂದ್ರೀಕರಣ ಹೆಚ್ಚಾಗುತ್ತಿರುವುದು ಯಾವ ಸಂಸ್ಥೆಗಳಿಂದ ಸಾಲ ಪಡೆದುಕೊಳ್ಳಲು ಸಾಧ್ಯವಿದೆಯೋ ಅಂಥ ಸಂಸ್ಥೆಗಳ ವೃಂದವನ್ನು ಸಂಕುಚಿತ ಗೊಳಿಸುತ್ತಿದೆ ಮತ್ತು ತತ್ಫಲವಾಗಿ ಭಾರಿ ಕೈಗಾರಿಕೆಯು ಸ್ವಲ್ಪ ಸಂಖ್ಯೆಯ ಬ್ಯಾಂಕಿಂಗ್ ವೃಂದಗಳ ಮೇಲೆ ಅವಲಂಬಿಸಿಕೊಂಡಿರುವುದನ್ನು ಹೆಚ್ಚು ಮಾಡುತ್ತಿದೆ. ಕೈಗಾರಿಕೆಗೂ ಹಣಕಾಸು ಜಗತ್ತಿಗೂ ನಡುವೆ ನಿಕಟ ಸಂಬಂಧವಿರುವುದರಿಂದಾಗಿ ಬ್ಯಾಂಕಿಂಗ್ ಬಂಡವಾಳದ ಅಗತ್ಯವಿರುವ ಕೈಗಾರಿಕಾ ಕಂಪನಿಗಳ ಚಲನ ಸ್ವಾತಂತ್ರ್ಯವು ಕುಗ್ಗಿದೆ. ಈ ಕಾರಣದಿಂದಾಗಿಯೇ ಬ್ಯಾಂಕುಗಳು ಹೆಚ್ಚು ಹೆಚ್ಚಾಗಿ ಟ್ರಸ್ಟುಗಳಾಗುತ್ತಿರುವುದನ್ನು ಭಾರಿ ಕೈಗಾರಿಕೆಯು ಮಿಶ್ರ ಭಾವನೆಗಳೊಂದಿಗೆ ಗಮನಿಸುತ್ತಿದೆ. ನಿಜಕ್ಕೂ, ಬಿಡಿ ದೊಡ್ಡ ಬ್ಯಾಂಕಿಂಗ್ ಸಂಸ್ಥೆಗಳ ನಡುವೆ ಸ್ಪರ್ಧೆಯನ್ನು ತಗ್ಗಿಸುವ ದೃಷ್ಟಿಯಿಂದ ಕೆಲವು ಒಪ್ಪಂದಗಳು ಆಗತೊಡಗಿರುವುದನ್ನು ನಾವು ಪದೇ ಪದೇ ಕಂಡಿದ್ದೇವೆ."**

ಮತ್ತೆ ಮತ್ತೆ, ಬ್ಯಾಂಕಿಂಗ್ ಬೆಳವಣಿಗೆಯಲ್ಲಿ ಕೊನೆಯ ಮಾತೆಂದರೆ – ಏಕಸ್ವಾಮ್ಯ.

ಬ್ಯಾಂಕುಗಳಿಗೂ ಕೈಗಾರಿಕೆಗೂ ನಡುವೆ ನಿಕಟ ಸಂಬಂಧದ ಬಗೆಗೆ ಹೇಳುವುದಾದರೆ, ಬಹುಶಃ ಈ ವಲಯದಲ್ಲೇ ಬ್ಯಾಂಕುಗಳ ಹೊಸ ಪಾತ್ರವು ಅತ್ಯಂತ ಎದ್ದು ಕಾಣುವಂತೆ ಗೋಚರಕ್ಕೆ ಬರುವುದು. ಬ್ಯಾಂಕೊಂದು ಒಬ್ಬ ಉದ್ಯಮಿಗಾಗಿ ಒಂದು ಬಿಲ್ಲನ್ನು ಡಿಸ್ಕೌಂಟ್ ಮಾಡಿದಾಗ, ಅದಕ್ಕಾಗಿ ಒಂದು ಕರೆಂಟ್ ಅಕೌಂಟ್ ತೆರೆದಾಗ, ಇತ್ಯಾದಿ ಕಾರ್ಯಾಚರಣೆಗಳನ್ನು ನಡೆಸಿದಾಗ, ಇವು ಆ ಉದ್ಯಮಿಯ ಸ್ವಾತಂತ್ರ್ಯವನ್ನು ಸ್ವಲ್ಪ ಮಾತ್ರವೂ ಕಮ್ಮಿ ಮಾಡುವುದಿಲ್ಲ ಮತ್ತು ಬ್ಯಾಂಕು ವಿನೀತ ಮಧ್ಯವರ್ತಿಯ ಪಾತ್ರವನ್ನಲ್ಲದೆ ಬೇರಾವ ಪಾತ್ರವನ್ನೂ ನಿರ್ವಹಿಸುವುದಿಲ್ಲ. ಆದರೆ ಇಂಥ ಕಾರ್ಯಾಚರಣೆಗಳು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಜರುಗಿ ಒಂದು ಸುಸಂಸ್ಥಾಪಿತ ಅಭ್ಯಾಸವಾದಾಗ, ಬ್ಯಾಂಕು ತನ್ನ ಸ್ವಂತ ಕೈಗಳಲ್ಲೇ ಅಪಾರ ಪ್ರಮಾಣಗಳಲ್ಲಿ ಬಂಡವಾಳವನ್ನು "ಸಂಗ್ರಹಿಸಿ"ಕೊಂಡಾಗ, ಒಬ್ಬ ಉದ್ಯಮಿಗಾಗಿ ಕರೆಂಟ್ ಅಕೌಂಟ್ ತೆರೆದು ಅವನ ವ್ಯವಹಾರಗಳನ್ನು ನಡೆಸುವುದು ಬ್ಯಾಂಕಿಗೆ ಆ ಉದ್ಯಮಿಯ ಆರ್ಥಿಕ

---

* *Die Bank*, 1912, 1, ಪು. 435.

** ಷುಲ್‌ತ್ಸೆ-ಗೆವೆರ್ನಿತ್ಸ್‌ರವರಿಂದ ಉದ್ಧರಿಸಲ್ಪಟ್ಟುದು. ಪೂರ್ವೋಕ್ತ ಗ್ರಂಥ, ಪು. 155.

ಸ್ಥಿತಿಗತಿಗಳ ಬಗೆಗೆ ಹೆಚ್ಚು ಪೂರ್ಣವಾದ ಹಾಗೂ ಹೆಚ್ಚು ವಿವರವಾದ ಸುದ್ದಿ ಪಡೆದುಕೊಳ್ಳುವುದನ್ನು ಸಾಧ್ಯಮಾಡಿಕೊಟ್ಟಾಗ – ಇದು ಹೀಗೆಯೇ ಜರುಗುವುದು – ಇದರ ಫಲಿತಾಂಶವೆಂದರೆ, ಕೈಗಾರಿಕಾ ಬಂಡವಾಳಗಾರನು ಹೆಚ್ಚು ಪೂರ್ಣವಾಗಿ ಬ್ಯಾಂಕಿನ ಮೇಲೆಯೇ ಅವಲಂಬಿಸಿರುವಂತಾಗುತ್ತಾನೆ.

ಅದೇ ಹೊತ್ತಿನಲ್ಲಿ ಬ್ಯಾಂಕುಗಳಿಗೂ ಅತ್ಯಂತ ದೊಡ್ಡ ಕೈಗಾರಿಕಾ ಹಾಗೂ ವಾಣಿಜ್ಯ ಉದ್ಯಮಗಳಿಗೂ ನಡುವೆ ಒಂದು ವ್ಯಕ್ತಿಗತ ಒಕ್ಕೂಟ ಎನ್ನುವಂತಹುದು ಏರ್ಪಡುತ್ತದೆ – ಷೇರುಗಳನ್ನು ಪಡೆದುಕೊಳ್ಳುವ ಮೂಲಕ, ಬ್ಯಾಂಕ್ ಡೈರೆಕ್ಟರುಗಳನ್ನು ಕೈಗಾರಿಕಾ ಹಾಗೂ ವಾಣಿಜ್ಯ ಉದ್ಯಮಗಳ ಮೇಲ್ವಿಚಾರಕ ಮಂಡಳಿಗಳಿಗೂ (ಅಥವಾ ಆಡಳಿತ ಮಂಡಳಿಗಳಿಗೂ) ಹಾಗೂ ಇವುಗಳ ಡೈರೆಕ್ಟರುಗಳನ್ನು ಬ್ಯಾಂಕ್ ಆಡಳಿತ ಮಂಡಳಿಗೂ ನೇಮಿಸುವುದರ ಮೂಲಕ, ಒಂದು ಇನ್ನೊಂದರಲ್ಲಿ ಮಿಳನಗೊಳ್ಳುತ್ತದೆ. ಬಂಡವಾಳದ ಹಾಗೂ ಉದ್ಯಮಗಳ ಈ ರೂಪದ ಕೇಂದ್ರೀಕರಣದ ಬಗೆಗೆ ಜರ್ಮನ್ ಅರ್ಥಶಾಸ್ತ್ರಜ್ಞ ಯೆಯ್‌ಡೆಲ್ಸ್ ಅತ್ಯಂತ ವಿವರವಾದ ಆಧಾರಾಂಶಗಳನ್ನು ಸಂಕಲಿಸಿದ್ದಾರೆ. ಬರ್ಲಿನ್ನಿನ ಆರು ಅತ್ಯಂತ ದೊಡ್ಡ ಬ್ಯಾಂಕುಗಳು ತಮ್ಮ ಡೈರೆಕ್ಟರುಗಳ ಮೂಲಕ 344 ಕೈಗಾರಿಕಾ ಕಂಪನಿಗಳಲ್ಲೂ, ತಮ್ಮ ಮಂಡಳಿ ಸದಸ್ಯರ ಮೂಲಕ 407 ಇತರ ಕೈಗಾರಿಕಾ ಕಂಪನಿಗಳಲ್ಲೂ, ಹೀಗೆ ಒಟ್ಟು 751 ಕಂಪನಿಗಳಲ್ಲಿ ಪ್ರಾತಿನಿಧ್ಯ ಪಡೆದಿದ್ದವು. ಈ ಕಂಪನಿಗಳಲ್ಲಿ 289ರಲ್ಲಿ ಈ ಬ್ಯಾಂಕುಗಳು ಒಂದೊಂದರಲ್ಲೂ ತಮ್ಮ ಇಬ್ಬರು ಪ್ರತಿನಿಧಿಗಳನ್ನು ಆಯಾ ಮೇಲ್ವಿಚಾರಕ ಮಂಡಳಿಗಳಲ್ಲಿ ಹೊಂದಿದ್ದವು ಅಥವಾ ಅಧ್ಯಕ್ಷರ ಪದವಿಯನ್ನು ಪಡೆದಿದ್ದವು. ಈ ಕೈಗಾರಿಕಾ ಹಾಗೂ ವಾಣಿಜ್ಯ ಕಂಪನಿಗಳು ಅತ್ಯಂತ ಭಿನ್ನವಿಭಿನ್ನ ಕೈಗಾರಿಕಾ ಶಾಖೆಗಳಿಗೆ ಸೇರಿದವಾಗಿದ್ದವು – ವಿಮೆ, ಸಾರಿಗೆ, ರೆಸ್ಟೋರೆಂಟು, ರಂಗಮಂದಿರ, ಕಲಾ ಕೈಗಾರಿಕೆ ಇತ್ಯಾದಿ. ಮತ್ತೊಂದು ಕಡೆ, ಈ ಆರು ಬ್ಯಾಂಕುಗಳ ಮೇಲ್ವಿಚಾರಕ ಮಂಡಳಿಗಳಲ್ಲಿ (1910ರಲ್ಲಿ) ಕ್ರುಪ್ಪ್ ಕಂಪನಿಯ ಡೈರೆಕ್ಟರ್, ಅತ್ಯಂತ ಪ್ರಬಲ "ಹಪಾಗ್" (ಹ್ಯಾಮ್‌ಬರ್ಗ್-ಅಮೆರಿಕನ್ ಲೈನ್) ಕಂಪನಿಯ ಡೈರೆಕ್ಟರ್, ಇವರೇ ಮುಂತಾದವರನ್ನು ಒಳಗೊಂಡು ಐವತ್ತೊಂದು ಅತ್ಯಂತ ದೊಡ್ಡ ಕೈಗಾರಿಕೋದ್ಯಮಿಗಳಿದ್ದರು. 1895 ರಿಂದ 1910ರವರೆಗೆ ಈ ಆರು ಬ್ಯಾಂಕುಗಳಲ್ಲಿ ಒಂದೊಂದೂ ನೂರಾರು ಕೈಗಾರಿಕಾ ಕಂಪನಿಗಳ (ಈ ಸಂಖ್ಯೆ 281ರಿಂದ 419ರವರೆಗಿದ್ದಿತು) ಷೇರು ಹಾಗೂ ಬಾಂಡುಗಳನ್ನು ಹೊರಡಿಸುವುದರಲ್ಲಿ ಭಾಗವಹಿಸಿತು.*

ಬ್ಯಾಂಕುಗಳಿಗೂ ಕೈಗಾರಿಕೆಗೂ ನಡುವಿನ ಈ "ವ್ಯಕ್ತಿಗಳ ಒಕ್ಕೂಟ"ಕ್ಕೆ ಅನುಬಂಧವಾಗಿ ಇವೆರಡಕ್ಕೂ ಸರಕಾರಕ್ಕೂ ನಡುವೆ "ವ್ಯಕ್ತಿಗತ ಒಕ್ಕೂಟ"ವಿರುತ್ತದೆ. ಯೆಯ್‌ಡೆಲ್ಸ್ ಬರೆಯುತ್ತಾರೆ: "ಮೇಲ್ವಿಚಾರಕ ಮಂಡಳಿಗಳಲ್ಲಿ ಸ್ಥಾನಗಳನ್ನು

---

* ಯೆಯ್‌ಡೆಲ್ಸ್, ಪೂರ್ವೋಕ್ತ ಗ್ರಂಥ; ರೀಸ್ಸೆರ್, ಪೂರ್ವೋಕ್ತ ಗ್ರಂಥ.

ಬಿರುದಾಂಕಿತ ವ್ಯಕ್ತಿಗಳಿಗೆ ಹಿಡಿತಡೆ ಇಲ್ಲದೆ ನೀಡಲಾಗುತ್ತದೆ. ಅಧಿಕಾರಿಗಳೊಂದಿಗೆ ಸಂಬಂಧಗಳನ್ನು ಸುಗಮ" (!!) "ಮಾಡಿಕೊಡಬಲ್ಲಂಥ ಮಾಜಿ ರಾಜ್ಯ ಉದ್ಯೋಗಿಗಳಿಗೂ ಸ್ಥಾನಗಳನ್ನು ನೀಡಲಾಗುತ್ತದೆ..." "ಸಾಮಾನ್ಯವಾಗಿ ದೊಡ್ಡ ಬ್ಯಾಂಕೊಂದರ ಮೇಲ್ವಿಚಾರಕ ಮಂಡಳಿಯಲ್ಲಿ ಒಬ್ಬ ಪಾರ್ಲಿಮೆಂಟ್ ಸದಸ್ಯನೋ ಅಥವಾ ಬರ್ಲಿನ್ ನಗರ ಸಭಾ ಸದಸ್ಯನೋ ಇರುತ್ತಾನೆ."

ಆದ್ದರಿಂದ ದೊಡ್ಡ ಬಂಡವಾಳಶಾಹಿ ಏಕಸ್ವಾಮ್ಯಗಳ ನಿರ್ಮಾಣವು ಎಲ್ಲ "ಸಹಜ" ಹಾಗೂ "ಸಹಜಾತೀತ" ರೀತಿಗಳಲ್ಲೂ ಪೂರ್ಣ ವೇಗದೊಂದಿಗೆ ಮುಂದುವರಿಯುತ್ತಿದೆಯೆಂದು ಹೇಳಬಹುದು. ಆಧುನಿಕ ಬಂಡವಾಳಶಾಹಿ ಸಮಾಜದ ಮೇಲೆ ಆಧಿಪತ್ಯ ನಡೆಸುತ್ತಿರುವಂಥ ನೂರಾರು ಧನಾಧಿಪತಿಗಳ ಮಧ್ಯೆ ಒಂದು ರೀತಿಯ ಶ್ರಮ ವಿಭಜನೆಯನ್ನು ವ್ಯವಸ್ಥಿತವಾಗಿ ವಿಕಾಸಗೊಳಿಸಲಾಗುತ್ತಿದೆ:

"ಕೆಲವು ದೊಡ್ಡ ಕೈಗಾರಿಕೋದ್ಯಮಿಗಳ ಚಟುವಟಿಕೆಗಳ ವಲಯವನ್ನು ಹೀಗೆ ವಿಸ್ತರಿಸುವುದರೊಂದಿಗೇ" (ಬ್ಯಾಂಕುಗಳ ಮಂಡಳಿಗಳನ್ನು ಸೇರಿಕೊಳ್ಳುವುದು, ಇತ್ಯಾದಿ) "ಮತ್ತು ಪ್ರಾಂತೀಯ ಬ್ಯಾಂಕ್ ಮ್ಯಾನೇಜರುಗಳನ್ನು ನಿರ್ದಿಷ್ಟ ಕೈಗಾರಿಕಾ ಪ್ರದೇಶಗಳಿಗೆ ನಿಯತ ಮಾಡುವುದರೊಂದಿಗೇ, ದೊಡ್ಡ ಬ್ಯಾಂಕುಗಳ ಡೈರೆಕ್ಟರುಗಳ ಮಧ್ಯೆ ವಿಶೇಷೀಕರಣವೂ ಬೆಳೆಯುತ್ತಿದೆ. ಸಾಮಾನ್ಯವಾಗಿ ಹೇಳುವುದಾದರೆ, ಬ್ಯಾಂಕಿಂಗ್ ವ್ಯವಹಾರವನ್ನು ವಿಸ್ತೃತ ಪ್ರಮಾಣದಲ್ಲಿ ನಡೆಸಿದಾಗಲಷ್ಟೆ, ಅದರಲ್ಲೂ ನಿರ್ದಿಷ್ಟವಾಗಿ ಬ್ಯಾಂಕಿಂಗ್ ವ್ಯವಹಾರವು ಕೈಗಾರಿಕೆಯೊಂದಿಗೆ ವಿಸ್ತೃತ ಸಂಬಂಧಗಳನ್ನು ಹೊಂದಿದ್ದಾಗಲಷ್ಟೆ, ಈ ವಿಶೇಷೀಕರಣವನ್ನು ಕಲ್ಪಿಸಿಕೊಳ್ಳುವುದು ಸಾಧ್ಯ. ಈ ಶ್ರಮವಿಭಜನೆಯು ಎರಡು ಮಾರ್ಗಗಳಲ್ಲಿ ಮುಂದುವರಿಯುತ್ತದೆ: ಒಂದು ಕಡೆ, ಒಟ್ಟಿನಲ್ಲಿ ಕೈಗಾರಿಕೆಯೊಂದಿಗೆ ಸಂಬಂಧವನ್ನು ಒಬ್ಬ ಡೈರೆಕ್ಟರನಿಗೆ ಆತನ ವಿಶೇಷ ಕಾರ್ಯಭಾರವನ್ನಾಗಿ ವಹಿಸಿಕೊಡಲಾಗುತ್ತದೆ; ಮತ್ತೊಂದು ಕಡೆ, ಪ್ರತಿಯೊಬ್ಬ ಡೈರೆಕ್ಟರನೂ ಹಲವಾರು ಪ್ರತ್ಯೇಕ ಉದ್ಯಮಗಳ ಮೇಲೆ ಇಲ್ಲವೇ ಒಂದೇ ಕೈಗಾರಿಕಾ ಶಾಖೆಯ, ಅಥವಾ ಒಂದೇ ರೀತಿಯ ಹಿತಗಳನ್ನು ಹೊಂದಿರುವ, ಒಂದು ವೃಂದದ ಉದ್ಯಮಗಳ ಮೇಲೆ ಉಸ್ತುವಾರಿಯನ್ನು ವಹಿಸಿಕೊಳ್ಳುತ್ತಾನೆ..." (ಬಂಡವಾಳವಾದವು ಆಗಲೇ ಬಿಡಿ ಉದ್ಯಮಗಳ ಸಂಘಟಿತ ಮೇಲ್ವಿಚಾರಣೆಯ ಘಟ್ಟವನ್ನು ತಲುಪಿದೆ).... "ಒಬ್ಬನು ಜರ್ಮನ್ ಕೈಗಾರಿಕೆಯಲ್ಲಿ, ಕೆಲವು ವೇಳೆ ಪಶ್ಚಿಮ ಜರ್ಮನ್ ಕೈಗಾರಿಕೆಯಲ್ಲಿ ಮಾತ್ರವೇ ಸಹ, ವಿಶೇಷಜ್ಞತೆಯನ್ನು ಪಡೆದುಕೊಳ್ಳುತ್ತಾನೆ" (ಜರ್ಮನಿಯಲ್ಲಿ ಪಶ್ಚಿಮವು ಅತ್ಯಂತ ಕೈಗಾರಿಕೀಕೃತವಾದ ಭಾಗ), "ಇತರರು ವಿದೇಶೀ ರಾಜ್ಯಗಳೊಂದಿಗೂ ವಿದೇಶೀ ಕೈಗಾರಿಕೆಯೊಂದಿಗೂ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದರಲ್ಲೂ, ಕೈಗಾರಿಕೋದ್ಯಮಿಗಳ ಹಾಗೂ ಇತರರ ವ್ಯಕ್ತಿತ್ವಕ್ಕೆ ಸಂಬಂಧಿಸಿದ ವಿವರಗಳಲ್ಲೂ, ಸ್ಟಾಕ್ ಎಕ್ಸ್‌ಚೇಂಜ್ ಪ್ರಶ್ನೆಯಲ್ಲೂ, ಇತ್ಯಾದಿ ವಿಷಯಗಳಲ್ಲಿ, ತಜ್ಞತೆ ಪಡೆದುಕೊಳ್ಳುತ್ತಾರೆ. ಇದಲ್ಲದೆ ಪ್ರತಿಯೊಬ್ಬ ಬ್ಯಾಂಕ್ ಡೈರೆ

ಕ್ಟರನಿಗೂ ಬಹು ವೇಳೆ ಒಂದು ವಿಶೇಷ ಪ್ರದೇಶವನ್ನಾಗಲೀ ಒಂದು ವಿಶೇಷ ಕೈಗಾರಿಕಾ ಶಾಖೆಯನ್ನಾಗಲೀ ಗೊತ್ತುಪಡಿಸಿಕೊಡಲಾಗುತ್ತದೆ; ಒಬ್ಬನು ಪ್ರಧಾನವಾಗಿ ವಿದ್ಯುತ್ ಕಂಪನಿಗಳ ಮೇಲ್ವಿಚಾರಕ ಮಂಡಳಿಯಲ್ಲಿ ಕೆಲಸ ಮಾಡುತ್ತಾನೆ, ಇನ್ನೊಬ್ಬನು ರಾಸಾಯನಿಕ, ಸಾರಾಯಿ ಅಥವಾ ಬೀಟ್ ಸಕ್ಕರೆ ಕಾರ್ಖಾನೆಗಳಲ್ಲಿ, ಮೂರನೆಯವನು ಕೆಲವು ಪ್ರತ್ಯೇಕ ಕೈಗಾರಿಕೋದ್ಯಮಗಳಲ್ಲಿ ಕೆಲಸ ಮಾಡುತ್ತಾನೆ, ಆದರೆ ಅದೇ ಹೊತ್ತಿನಲ್ಲಿ ವಿಮಾ ಕಂಪನಿಗಳ ಮೇಲ್ವಿಚಾರಕ ಮಂಡಳಿಗಳಲ್ಲೂ ಕೆಲಸ ಮಾಡುತ್ತಾನೆ... ಸ್ವಲ್ಪದರಲ್ಲಿ, ದೊಡ್ಡ ಬ್ಯಾಂಕುಗಳ ಕಾರ್ಯಾಚರಣೆಗಳ ಪ್ರಮಾಣಗಳಲ್ಲೂ ವೈವಿಧ್ಯತೆಯಲ್ಲೂ ಬೆಳವಣಿಗೆಯಾದಂತೆ ಅದರ ಜೊತೆಯಲ್ಲೇ ಅವುಗಳ ಡೈರೆಕ್ಟರುಗಳ ನಡುವೆ ಶ್ರಮವಿಭಜನೆಯೂ ಹೆಚ್ಚುತ್ತದೆಂಬುದರಲ್ಲಿ ಸಂದೇಹವಿಲ್ಲ. ಈ ಶ್ರಮವಿಭಜನೆಯ ಉದ್ದೇಶ (ಹಾಗೂ ಫಲಿತಾಂಶ) ಏನೆಂದರೆ, ಅವರನ್ನು ಶುದ್ಧ ಬ್ಯಾಂಕ್ ವ್ಯವಹಾರಗಳ ಮಟ್ಟದಿಂದ ಸ್ವಲ್ಪ ಮಟ್ಟಿಗೆ ಮೇಲೆತ್ತಿ ಕೈಗಾರಿಕೆಯ ಒಟ್ಟಿನ ಮೇಲಿನ ಸಮಸ್ಯೆಗಳ, ಹಾಗೂ ಕೈಗಾರಿಕೆಯ ಪ್ರತಿಯೊಂದು ಶಾಖೆಯ ವಿಶೇಷ ಸಮಸ್ಯೆಗಳ ಹೆಚ್ಚು ಉತ್ತಮ ತಜ್ಞರನ್ನಾಗಿ, ಹೆಚ್ಚು ಉತ್ತಮ ತೀರ್ಪುಗಾರರನ್ನಾಗಿ ಮಾಡುವುದು, ತನ್ಮೂಲಕ ಅವರು ಆಯಾ ಬ್ಯಾಂಕಿನ ಕೈಗಾರಿಕಾ ಪ್ರಭಾವ ವಲಯದೊಳಗೆ ಹೆಚ್ಚು ಸಮರ್ಥವಾಗಿ ಕಾರ್ಯ ಜರುಗಿಸುವಂತೆ ಮಾಡುವುದು. ಈ ಪದ್ಧತಿಗೆ ಅನುಬಂಧವಾಗಿ ಬ್ಯಾಂಕುಗಳು ತಮ್ಮ ಮೇಲ್ವಿಚಾರಕ ಮಂಡಳಿಗಳಿಗೆ ಕೈಗಾರಿಕೋದ್ಯಮಿಗಳು, ಮಾಜಿ ಸರಕಾರೀ ಉದ್ಯೋಗಿಗಳು, ಅದರಲ್ಲೂ ವಿಶೇಷವಾಗಿ ಹಿಂದೆ ರೈಲ್ವೇ ಸರ್ವಿಸ್ ಅಥವಾ ಗಣಿ ಕೈಗಾರಿಕೆಯಲ್ಲಿದ್ದವರು, ಇಂತಹ ಕೈಗಾರಿಕಾ ವ್ಯವಹಾರಗಳಲ್ಲಿ ತಜ್ಞರಾದ ಜನರನ್ನು ಆಯ್ಕೆ ಮಾಡಿಕೊಳ್ಳಲು ಯತ್ನಿಸುತ್ತವೆ," ಇತ್ಯಾದಿ.*

ಫ್ರೆಂಚ್ ಬ್ಯಾಂಕಿಂಗ್ ವ್ಯವಹಾರದಲ್ಲೂ ಇದೇ ಪದ್ಧತಿ ಸ್ವಲ್ಪ ಭಿನ್ನ ರೂಪದಲ್ಲಿರುವುದನ್ನು ನಾವು ಕಾಣುತ್ತೇವೆ. ಉದಾಹರಣೆಗೆ, ಮೂರು ಅತ್ಯಂತ ದೊಡ್ಡ ಫ್ರೆಂಚ್ ಬ್ಯಾಂಕುಗಳಲ್ಲೊಂದಾದ 'Crédit Lyonnais' ಬ್ಯಾಂಕು, ಹಣಕಾಸು ಸಂಶೋಧನಾ ಶಾಖೆ(service des études financières)ಯೊಂದನ್ನು ಸಂಘಟಿಸಿದೆ. ಇದು ಐವತ್ತಕ್ಕೂ ಹೆಚ್ಚು ಮಂದಿ ಎಂಜಿನಿಯರುಗಳನ್ನೂ, ಅಂಕಿಅಂಶಶಾಸ್ತ್ರಜ್ಞರನ್ನೂ, ಅರ್ಥಶಾಸ್ತ್ರಜ್ಞರು, ನ್ಯಾಯವಾದಿಗಳು ಇತ್ಯಾದಿ ಜನರನ್ನು ಶಾಶ್ವತವಾಗಿ ನೇಮಿಸಿಕೊಂಡಿದೆ. ಇದಕ್ಕಾಗಿ ಬ್ಯಾಂಕು ಪ್ರತಿ ವರ್ಷವೂ ಆರರಿಂದ ಏಳು ಲಕ್ಷ ಫ್ರಾಂಕುಗಳನ್ನು ಖರ್ಚು ಮಾಡುತ್ತಿದೆ. ಈ ಶಾಖೆಯನ್ನು ಮತ್ತೆ ಎಂಟು ಇಲಾಖೆಗಳನ್ನಾಗಿ ವಿಭಜಿಸಲಾಗಿದೆ: ಒಂದು ನಿರ್ದಿಷ್ಟವಾಗಿ ಕೈಗಾರಿಕೋದ್ಯಮಗಳಿಗೆ ಸಂಬಂಧಿಸಿ ಸುದ್ದಿ ಸಮಾಚಾರ ಸಂಗ್ರಹಿಸುತ್ತದೆ, ಇನ್ನೊಂದು ಸಾಮಾನ್ಯ ಅಂಕಿಅಂಶಗಳ ಅಧ್ಯಯನ ಮಾಡುತ್ತದೆ, ಮೂರನೆಯದು ರೈಲ್ವೇ ಹಾಗೂ ಉಗಿಜಹಜು

* ಯೆಯಿಡೆಲ್ಸ್, ಪೂರ್ವೋಕ್ತ ಗ್ರಂಥ, ಪು. 156-157.

ಕಂಪನಿಗಳಲ್ಲಿ, ನಾಲ್ಕನೆಯದು ಸೆಕ್ಯುರಿಟಿಗಳಲ್ಲಿ, ಐದನೆಯದು ಹಣಕಾಸು ವರದಿಗಳಲ್ಲಿ, ಇತ್ಯಾದಿಗಳಲ್ಲಿ ತಜ್ಞತೆಯನ್ನು ಪಡೆದುಕೊಳ್ಳುತ್ತವೆ.*

ಇದರ ಪರಿಣಾಮವೆಂದರೆ – ಒಂದು ಕಡೆ ಬ್ಯಾಂಕ್ ಹಾಗೂ ಕೈಗಾರಿಕಾ ಬಂಡವಾಳಗಳು ಸತತವಾಗಿ ಹೆಚ್ಚು ಹೆಚ್ಚಾಗಿ ಮಿಳನಗೊಳ್ಳುವುದು, ಅಥವಾ ಎನ್. ಐ. ಬುಹಾರಿನ್‌ರವರು ಸರಿಯಾಗಿ ಕರೆಯುವಂತೆ, ಬೆಸುಗೆ, ಮತ್ತೊಂದು ಕಡೆ ಬ್ಯಾಂಕುಗಳು ನಿಜಕ್ಕೂ "ಸಾರ್ವತ್ರಿಕ ಸ್ವರೂಪ"ದ ಸಂಸ್ಥೆಗಳಾಗಿ ಬೆಳೆಯುವುದು. ಈ ವಿಷಯಕ್ಕೆ ಸಂಬಂಧಿಸಿ ಯೆಯ್‌ಡೆಲ್ಸ್‌ರು ಬಳಸಿರುವ ಮಾತುಗಳನ್ನೇ ಸರಿಯಾಗಿ ಉದ್ಧರಿಸುವುದು ಅವಶ್ಯವೆಂದು ನಾವು ಭಾವಿಸುತ್ತೇವೆ. ಅವರು ಈ ವಿಷಯವನ್ನು ಅತ್ಯುತ್ತಮವಾಗಿ ಅಭ್ಯಸಿಸಿದ್ದಾರೆ:

"ಕೈಗಾರಿಕಾ ಸಂಬಂಧಗಳ ಒಟ್ಟು ಮೊತ್ತವನ್ನು ಪರಿಶೀಲಿಸಿದರೆ, ಕೈಗಾರಿಕೆಯ ಪರವಾಗಿ ಕೆಲಸ ಮಾಡುವ ಹಣಕಾಸು ಸಂಸ್ಥೆಗಳ ಸಾರ್ವತ್ರಿಕ ಸ್ವರೂಪ ಗೋಚರಕ್ಕೆ ಬರುತ್ತದೆ. ಇತರ ರೀತಿಯ ಬ್ಯಾಂಕುಗಳಂತಲ್ಲದೆ, ದೃಢವಾಗಿ ನಿಲ್ಲಲೋಸುಗ ಬ್ಯಾಂಕುಗಳು ಒಂದು ರೀತಿಯ ವ್ಯವಹಾರದಲ್ಲಿ ಅಥವಾ ಒಂದು ಕೈಗಾರಿಕಾ ಶಾಖೆಯಲ್ಲಿ ತಜ್ಞತೆ ಗಳಿಸಬೇಕೆಂದು ಸಾಹಿತ್ಯದಲ್ಲಿ ಕೆಲವು ವೇಳೆ ವ್ಯಕ್ತಪಡಿಸುವ ಕೇಳಿಕೆಗೆ ವಿರುದ್ಧವಾಗಿ, ದೊಡ್ಡ ಬ್ಯಾಂಕುಗಳು ಕೈಗಾರಿಕೋದ್ಯಮಗಳೊಂದಿಗೆ ತಮ್ಮ ಸಂಬಂಧಗಳನ್ನು ಸ್ಥಳ ಹಾಗೂ ಕೈಗಾರಿಕಾ ಶಾಖೆಗೆ ಸಂಬಂಧಿಸಿ ಸಾಧ್ಯವಾದಷ್ಟೂ ಹೆಚ್ಚು ವೈವಿಧ್ಯಪೂರ್ಣವನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿವೆ, ಬಿಡಿ ಉದ್ಯಮಗಳ ಚಾರಿತ್ರಿಕ ಬೆಳವಣಿಗೆಯ ಫಲಿತಾಂಶವಾಗಿ ವಿವಿಧ ಸ್ಥಳಗಳ ಹಾಗೂ ಕೈಗಾರಿಕಾ ಶಾಖೆಗಳ ನಡುವೆ ಬಂಡವಾಳದ ಹಂಚಿಕೆಯಲ್ಲಾಗಿರುವ ಅಸಮತೆಯನ್ನು ತೊಡೆದು ಹಾಕಲು ಪ್ರಯತ್ನಿಸುತ್ತಿವೆ." "ಕೈಗಾರಿಕೆಯೊಂದಿಗೆ ಸಂಬಂಧಗಳನ್ನು ಸಾಮಾನ್ಯಗೊಳಿಸುವುದು ಒಂದು ಪ್ರವೃತ್ತಿ; ಆ ಸಂಬಂಧಗಳನ್ನು ಸ್ಥಿರವಾದವನ್ನಾಗಿ, ನಿಕಟವಾದವನ್ನಾಗಿ ಮಾಡುವುದು ಇನ್ನೊಂದು ಪ್ರವೃತ್ತಿ. ಆರು ದೊಡ್ಡ ಬ್ಯಾಂಕುಗಳಲ್ಲಿ ಈ ಎರಡು ಪ್ರವೃತ್ತಿಗಳೂ ಪೂರ್ಣವಾಗಿಯಲ್ಲದಿದ್ದರೂ ಗಣನೀಯವಾದ ಮಟ್ಟಿಗೆ ಮತ್ತು ಸಮಾನ ಪ್ರಮಾಣದಲ್ಲಿ ಈಡೇರಿಸಲ್ಪಟ್ಟಿವೆ."

ಬಹುವೇಳೆ ಕೈಗಾರಿಕಾ ಹಾಗೂ ವಾಣಿಜ್ಯ ವೃತ್ತಗಳು ಬ್ಯಾಂಕುಗಳ "ಭಯೋತ್ಪಾದಕತೆ"ಯ ಬಗೆಗೆ ದೂರುತ್ತವೆ. ಇಂತಹ ದೂರುಗಳು ಕೇಳಿಬರುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ, ಏಕೆಂದರೆ, ದೊಡ್ಡ ಬ್ಯಾಂಕುಗಳು, ಕೆಳಗಿನ ನಿದರ್ಶನದಿಂದ ಕಂಡುಬರುವಂತೆ, "ಆಜ್ಞಾಪಿಸುತ್ತವೆ." 1901ರ ನವೆಂಬರ್ 19ರಂದು, ಬರ್ಲಿನ್ 'D' ಬ್ಯಾಂಕುಗಳು ಎಂದು ಹೇಳುವಂಥ ದೊಡ್ಡ ಬ್ಯಾಂಕುಗಳಲ್ಲೊಂದು (ನಾಲ್ಕು ಅತ್ಯಂತ

---

* *Die Bank* ಪತ್ರಿಕೆಯಲ್ಲಿ Eug. Kaufmannರು ಫ್ರೆಂಚ್ ಬ್ಯಾಂಕುಗಳ ಕುರಿತು ಬರೆದ ಒಂದು ಲೇಖನ, 1909, 2, ಪು. 851 ಇತ್ಯಾದಿ.

ದೊಡ್ಡ ಬ್ಯಾಂಕುಗಳ ಹೆಸರುಗಳು 'D' ಅಕ್ಷರದಿಂದ ಪ್ರಾರಂಭವಾಗುತ್ತವೆ) ಜರ್ಮನ್ ಸೆಂಟ್ರಲ್ ನಾರ್ತ್‌ವೆಸ್ಟ್ ಸಿಮೆಂಟ್ ಸಿಂಡಿಕೇಟ್‌ನ ಡೈರೆಕ್ಟರುಗಳ ಮಂಡಳಿಗೆ ಈ ಕೆಳಗಿನಂತೆ ಬರೆಯಿತು: "ಇದೇ ತಿಂಗಳು 18ರಂದು ವೃತ್ತಪತ್ರಿಕೆಯಲ್ಲಿ ನೀವು ಪ್ರಕಟಿಸಿರುವ ನೋಟೀಸಿನಿಂದ, ನಿಮ್ಮ ಸಿಂಡಿಕೇಟಿನ ಮುಂದಿನ ಸರ್ವಸದಸ್ಯರ (ಜನರಲ್) ಮೀಟಿಂಗ್ ಈ ತಿಂಗಳು 30ರಂದು ಜರುಗಲಿದೆಯೆಂದೂ, ಅದು ನಿಮ್ಮ ಸಂಸ್ಥೆಯಲ್ಲಿ ನಮಗೆ ಅಂಗೀಕಾರಾರ್ಹವಲ್ಲದಂಥ ಬದಲಾವಣೆಗಳನ್ನು ಮಾಡಲು ಕ್ರಮಗಳ ಬಗೆಗೆ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆಯೆಂದೂ, ನಮಗೆ ತಿಳಿದು ಬಂದಿದೆ. ಈ ಕಾರಣಗಳಿಂದಾಗಿ ನಾವು ಇದುವರೆವಿಗೂ ನಿಮಗೆ ನೀಡಲಾಗಿದ್ದ ಸಾಲ ಸೌಲಭ್ಯವನ್ನು ಇನ್ನು ಮುಂದೆ ಹಿಂತೆಗೆದುಕೊಳ್ಳುವ ಒತ್ತಾಯಕ್ಕೊಳಗಾಗಿರುವುದಕ್ಕಾಗಿ ತುಂಬ ವಿಷಾದಿಸುತ್ತೇವೆ... ಆದರೆ ಮೇಲೆ ತಿಳಿಸಿದ ಜನರಲ್ ಮೀಟಿಂಗ್ ನಮಗೆ ಅಂಗೀಕಾರಾರ್ಹವಲ್ಲದಂಥ ಕ್ರಮಗಳ ಬಗೆಗೆ ನಿರ್ಧರಿಸದೆ ಹೋದರೆ ಮತ್ತು ಭವಿಷ್ಯತ್ತಿನಲ್ಲೂ ಹೀಗೆ ಮಾಡಲಾಗುವುದಿಲ್ಲವೆಂದು ಸೂಕ್ತ ಖಾತರಿಗಳನ್ನು ನೀಡಿದರೆ, ನಿಮಗೆ ಹೊಸ ಸಾಲ ನೀಡುವ ಬಗೆಗೆ ನಿಮ್ಮೊಂದಿಗೆ ಮಾತುಕತೆ ನಡೆಸಲು ನಾವು ಸಿದ್ಧರಾಗಿರುತ್ತೇವೆ."*

ವಾಸ್ತವವಾಗಿ ಇದು ದೊಡ್ಡ ಬಂಡವಾಳವು ತನ್ನನ್ನು ಪೀಡಿಸುತ್ತಿದೆಯೆಂದು ಸಣ್ಣ ಬಂಡವಾಳವು ದೂರುವ ಹಳೆಯ ಕಥೆಯೇ ಆಗಿದೆ. ಆದರೆ ಈ ಪ್ರಸಂಗದಲ್ಲಿ ಒಂದು ಇಡೀ ಸಿಂಡಿಕೇಟೇ "ಸಣ್ಣ" ಬಂಡವಾಳದ ಸಂವರ್ಗಕ್ಕೆ ಸೇರಿಕೊಂಡಿದೆ! ಸಣ್ಣ ಹಾಗೂ ದೊಡ್ಡ ಬಂಡವಾಳಗಳ ನಡುವಿನ ಹಳೆಯ ಹೋರಾಟವನ್ನೇ ಹೊಸ ಹಾಗೂ ಅಗಣಿತವಾಗಿ ಹೆಚ್ಚು ಉನ್ನತವಾದ ಬೆಳವಣಿಗೆಯ ಮಟ್ಟದಲ್ಲಿ ಪುನಃ ಪ್ರಾರಂಭಿಸಲಾಗಿದೆ. ದೊಡ್ಡ ಬ್ಯಾಂಕುಗಳ ಉದ್ಯಮಗಳು, ಕೋಟ್ಯಾನುಕೋಟಿ ಬಂಡವಾಳವುಳ್ಳವು, ತಾಂತ್ರಿಕ ಪ್ರಗತಿಯನ್ನೂ ಹಳೆಯ ಸಾಧನಗಳೊಂದಿಗೆ ಹೋಲಿಸಲು ಸಾಧ್ಯವಿಲ್ಲದಂತಹ ಸಾಧನಗಳೊಂದಿಗೆ ಉತ್ಕರ್ಷಿಸಬಲ್ಲವೆಂಬುದು ವಿಚಾರಗ್ರಾಹ್ಯವೇ. ಉದಾಹರಣೆಗೆ, ಬ್ಯಾಂಕುಗಳು ವಿಶೇಷ ತಾಂತ್ರಿಕ ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸುತ್ತವೆ, ಆದರೆ ಅವುಗಳ ಫಲಗಳನ್ನು ಬ್ಯಾಂಕುಗಳ "ಸ್ನೇಹಪರ" ಕೈಗಾರಿಕಾ ಉದ್ಯಮಗಳಷ್ಟೆ ಪಡೆದುಕೊಳ್ಳಬಲ್ಲವು. 'ಎಲೆಕ್ಟ್ರಿಕ್ ರೈಲ್ವೆ ಸಂಶೋಧನಾ ಸಂಸ್ಥೆ,' 'ವೈಜ್ಞಾನಿಕ ಹಾಗೂ ತಾಂತ್ರಿಕ ಸಂಶೋಧನೆಯ ಕೇಂದ್ರ ಸಂಸ್ಥೆ,' ಇತ್ಯಾದಿಗಳು ಈ ಸಂವರ್ಗಕ್ಕೆ ಸೇರುತ್ತವೆ.

ರಾಷ್ಟ್ರೀಯ ಆರ್ಥಿಕತೆಯ ಹೊಸ ಪರಿಸ್ಥಿತಿಗಳು ಸೃಜಿಸಲ್ಪಡುತ್ತಿವೆ ಎಂಬುವನ್ನು ದೊಡ್ಡ ಬ್ಯಾಂಕುಗಳ ಡೈರೆಕ್ಟರುಗಳೇ ಕಾಣದೆ ಹೋಗಲಾರರು, ಆದರೆ ಈ ಘಟನೆಗಳ ಮುಂದೆ ಅವರು ಅಶಕ್ತರಾಗಿರುತ್ತಾರೆ:

---

*Dr. Oscar Stillich, *Geld- und Bankwesen*, Berlin, 1907, ಪು. 148.

ಯೆಯಿಡೆಲ್ಸ್ ಬರೆಯುತ್ತಾರೆ: "ಕೈಗಾರಿಕೆಯ ಸಾಮಾನ್ಯ ಬೆಳವಣಿಗೆಯಲ್ಲಿ ದೊಡ್ಡ ಬ್ಯಾಂಕುಗಳು ಕ್ರಿಯಾಶೀಲವಾಗಿ ಹಸ್ತಕ್ಷೇಪವೆಸಗುವುದು ಅವಶ್ಯ ಹಾಗೂ ಹೆಚ್ಚು ಹೆಚ್ಚು ಮುಖ್ಯವಾದುದು ಎಂದು ಪರಿಗಣಿಸುವಂಥ ಜನರ ಕೈಗಳಿಗೆ ಅಧಿಕಾರವು ಕ್ರಮೇಣ ಹೋಗುತ್ತಿದೆ ಎಂಬುದನ್ನು, ದೊಡ್ಡ ಬ್ಯಾಂಕುಗಳ ಡೈರೆಕ್ಟರುಗಳಲ್ಲೂ ಮೇಲ್ವಿಚಾರಕ ಮಂಡಳಿಗಳ ಸದಸ್ಯರುಗಳಲ್ಲೂ ಆಗುತ್ತಿರುವ ಮಾರ್ಪಾಟುಗಳನ್ನು ಈಚೆಗಿನ ವರ್ಷಗಳಲ್ಲಿ ಗಮನಿಸಿರುವ ಯಾರೇ ಆಗಲಿ, ಕಾಣದೆ ಹೋಗುವುದು ಸಾಧ್ಯವಿಲ್ಲ. ಈ ಹೊಸ ಜನರಿಗೂ ಹಳೆಯ ಬ್ಯಾಂಕ್ ಡೈರೆಕ್ಟರುಗಳಿಗೂ ಮಧ್ಯೆ ಈ ವಿಷಯಕ್ಕೆ ಸಂಬಂಧಿಸಿ ವ್ಯವಹಾರ ಸ್ವರೂಪದ, ಆಗಾಗ್ಗೆ ವೈಯಕ್ತಿಕ ಸ್ವರೂಪದ, ಭಿನ್ನಾಭಿಪ್ರಾಯಗಳು ಹೆಚ್ಚುತ್ತಿವೆ. ಸಾಲ ನೀಡುವ ಸಂಸ್ಥೆಗಳಾಗಿ ಬ್ಯಾಂಕುಗಳು ಕೈಗಾರಿಕೆಯಲ್ಲಿ ಹೀಗೆ ಹಸ್ತಕ್ಷೇಪವೆಸಗುವುದರಿಂದ ನಷ್ಟಕ್ಕೊಳಗಾಗುತ್ತವೋ ನಷ್ಟಕ್ಕೊಳಗಾಗುವುದಿಲ್ಲವೋ; ಸಾಲ ಒದಗಿಸುವುದರಲ್ಲಿ ಮಧ್ಯವರ್ತಿಗಳಾಗಿ ತಮ್ಮ ಪಾತ್ರದೊಂದಿಗೆ ಯಾವ ಸಂಬಂಧವನ್ನೂ ಹೊಂದಿರದಂಥ, ವಾಣಿಜ್ಯ ಏರುಪೇರುಗಳ ಕುರುಡು ಶಕ್ತಿಗಳ ಪ್ರಭಾವಕ್ಕೆ ಬ್ಯಾಂಕುಗಳನ್ನು ಹಿಂದೆಂದಿಗಿಂತ ಹೆಚ್ಚಾಗಿ ಈಡು ಮಾಡುವ ಪರಿಸ್ಥಿತಿಗೆ ಕರೆದೊಯ್ಯುವಂಥ, ಚಟುವಟಿಕೆಯ ಕ್ಷೇತ್ರ ಪ್ರವೇಶಿಸುವ ಮೂಲಕ ತಾವು ಖಚಿತವಾದ ಲಾಭವನ್ನೂ ಸುಪರೀಕ್ಷಿತ ಸೂತ್ರಗಳನ್ನೂ ತ್ಯಾಗ ಮಾಡುತ್ತಿವೆಯೋ, ಎಂಬುದು ಮುಖ್ಯ ವಿಷಯವಾಗಿದೆ. ಹಳೆಯ ಬ್ಯಾಂಕ್ ಡೈರೆಕ್ಟರುಗಳಲ್ಲಿ ಅನೇಕರು ಈ ಅಭಿಪ್ರಾಯ ಹೊಂದಿದ್ದಾರೆ, ಆದರೆ ಯುವಕರಾಗಿರುವ ಹೆಚ್ಚಿನ ಡೈರೆಕ್ಟರುಗಳು, ಬ್ಯಾಂಕುಗಳು ಕೈಗಾರಿಕೆಯಲ್ಲಿ ಕ್ರಿಯಾಶೀಲವಾಗಿ ಹಸ್ತಕ್ಷೇಪ ಮಾಡುವುದು ದೊಡ್ಡ ಆಧುನಿಕ ಕೈಗಾರಿಕೆಯೊಂದಿಗೆ, ದೊಡ್ಡ ಬ್ಯಾಂಕುಗಳೂ, ಆಧುನಿಕ ಕೈಗಾರಿಕಾ ಬ್ಯಾಂಕಿಂಗ್ ವ್ಯವಹಾರಗಳೂ ಉದಯಿಸಿದಷ್ಟೇ ಮಹೋನ್ನತವಾದ ಆವಶ್ಯಕತೆಯಾಗಿದೆ, ಎಂದು ಪರಿಗಣಿಸುತ್ತಾರೆ. ಈ ಎರಡು ಪಕ್ಷಗಳಿಗೂ ಒಂದು ವಿಷಯದಲ್ಲಷ್ಟೆ – ದೊಡ್ಡ ಬ್ಯಾಂಕುಗಳ ಹೊಸ ಚಟುವಟಿಕೆಗಳಲ್ಲಿ ದೃಢ ಸೂತ್ರಗಳೂ ಇಲ್ಲ, ಸ್ಪಷ್ಟವಾದ ಗುರಿಯೂ ಇಲ್ಲ, ಎಂಬ ವಿಷಯದಲ್ಲಷ್ಟೆ – ಒಪ್ಪಿಗೆ ಇದೆ."*

ಹಳೆಯ ಬಂಡವಾಳವಾದದ ದಿನಗಳು ಮುಗಿದಿವೆ. ಹೊಸ ಬಂಡವಾಳವಾದವು ಯಾವುದರತ್ತವೋ ಹೋಗುವ ಒಂದು ಪರಿವರ್ತನಾ ಸ್ಥಿತಿಯಾಗಿದೆ. ಏಕಸ್ವಾಮ್ಯವನ್ನು ಮುಕ್ತ ಸ್ಪರ್ಧೆಯೊಂದಿಗೆ "ಸರಿಹೊಂದಿಸುವ" ಉದ್ದೇಶದಿಂದ ಅದರಲ್ಲಿ "ದೃಢ ಸೂತ್ರ ಹಾಗೂ ಸ್ಪಷ್ಟ ಗುರಿ" ಕಂಡುಹಿಡಿಯ ಹೋಗುವುದು ನಿಷ್ಫಲವೆನ್ನಿ. "ಸಂಘಟಿತ" ಬಂಡವಾಳವಾದದ ಮೋಹಕತೆಯ ಬಗೆಗೆ ಅದರ ಸಮರ್ಥಕರಾದ ಷುಲ್ತ್ಸೆ-

* ಯೆಯಿಡೆಲ್ಸ್, ಪೂರ್ವೋಕ್ತ ಗ್ರಂಥ, ಪು. 183-184.

ಗೆವೆರ್ನಿತ್ಸ್, ಲೀಫ್‌ಮನ್ ಮತ್ತಿತರ ಅಂತಹವರೇ "ಸಿದ್ಧಾಂತಿಗಳು" ಮಾಡುತ್ತಿರುವ ಅಧಿಕೃತ ಹೊಗಳಿಕೆಯ ಹಾಡುಗಳಿಗಿಂತ ತೀರ ಭಿನ್ನ ರೂಪದ್ದಾಗಿವೆ ಪ್ರಾಯೋಗಿಕ ತಜ್ಞರ ಒಪ್ಪಿಗೆಗಳು.[25]

ದೊಡ್ಡ ಬ್ಯಾಂಕುಗಳ "ಹೊಸ ಚಟುವಟಿಕೆಗಳು" ಸರಿಯಾಗಿ ಯಾವ ಕಾಲಾವಧಿಯಲ್ಲಿ ಅಂತಿಮವಾಗಿ ಸ್ಥಾಪಿತವಾದವು? ಯೆಯ್‌ಡೆಲ್ಸ್‌ರು ಈ ಮುಖ್ಯ ಪ್ರಶ್ನೆಗೆ ಸುಮಾರಾಗಿ ಸರಿಯಾದ ಉತ್ತರ ನೀಡುತ್ತಾರೆ:

"ಕೈಗಾರಿಕೋದ್ಯಮಗಳ ನಡುವಣ ಸಂಬಂಧಗಳು – ಹೊಸ ಸಾರ, ಹೊಸ ರೂಪ ಹಾಗೂ ಹೊಸ ಅಂಗಸಂಸ್ಥೆಗಳಿಂದ, ಅಂದರೆ ಕೇಂದ್ರೀಕೃತ ಹಾಗೂ ವಿಕೇಂದ್ರೀಕೃತ ಆಧಾರದ ಮೇಲೆ ಸಂಘಟಿತವಾದ ದೊಡ್ಡ ಬ್ಯಾಂಕುಗಳಿಂದ ಕೂಡಿದ ಕೈಗಾರಿಕೋದ್ಯಮಗಳ ನಡುವಣ ಸಂಬಂಧಗಳು – 1890ರ ದಶಕದ ವರ್ಷಗಳ ಮುನ್ನ ಎಷ್ಟು ಮಾತ್ರವೂ ವಿಶಿಷ್ಟ ಆರ್ಥಿಕ ಘಟನೆಗಳಾಗಿರಲಿಲ್ಲ; ಒಂದು ಅರ್ಥದಲ್ಲಿ, ನಿಜಕ್ಕೂ, ಈ ಆರಂಭಿಕ ತೇದಿಯನ್ನು, ಪ್ರಮುಖ "ಮಿಳನಗಳು" ಜರುಗಿದಂಥ, ಬ್ಯಾಂಕುಗಳ ಕೈಗಾರಿಕಾ ನೀತಿಗೆ ಹೊಂದಿಕೊಳ್ಳುವಂತೆ ವಿಕೇಂದ್ರೀಕೃತ ಸಂಘಟನೆಯ ಹೊಸ ರೂಪವು ಮೊಟ್ಟಮೊದಲ ಬಾರಿಗೆ ಜಾರಿಗೆ ಬಂದಂಥ 1897ನೆಯ ವರ್ಷಕ್ಕೆ ಮುಂದೊಯ್ಯಬಹುದು. ಈ ಆರಂಭ ಬಿಂದುವನ್ನು ಬಹುಶಃ ಇನ್ನೂ ಮುಂದಿನ ತೇದಿಗೆ ಒಯ್ಯಬಹುದು, ಏಕೆಂದರೆ 1900ರ ಮುಗ್ಗಟ್ಟೇ ಕೈಗಾರಿಕೆ ಹಾಗೂ ಬ್ಯಾಂಕಿಂಗ್ ವ್ಯವಹಾರದ ಕೇಂದ್ರೀಕರಣ ಪ್ರಕ್ರಿಯೆಯನ್ನು ದೃಢಗೊಳಿಸಿದುದು, ಕೈಗಾರಿಕೆಯೊಂದಿಗಿನ ಸಂಬಂಧವನ್ನು ದೊಡ್ಡ ಬ್ಯಾಂಕುಗಳ ನಿಜವಾದ ಏಕಸ್ವಾಮ್ಯವನ್ನಾಗಿ ಮೊಟ್ಟಮೊದಲ ಬಾರಿಗೆ ಪರಿವರ್ತಿಸಿದುದು ಮತ್ತು ಈ ಸಂಬಂಧವನ್ನು ಹೆಚ್ಚು ನಿಕಟವನ್ನಾಗಿ, ಹೆಚ್ಚು ಕ್ರಿಯಾಶೀಲವನ್ನಾಗಿ ಮಾಡಿದುದು."*

ಹೀಗೆ, ಇಪ್ಪತ್ತನೆಯ ಶತಮಾನವು ಹಳೆಯ ಬಂಡವಾಳವಾದದಿಂದ ಹೊಸತಿಗೆ, ಒಟ್ಟಿನಲ್ಲಿ ಬಂಡವಾಳದ ಆಧಿಪತ್ಯದಿಂದ ಹಣಕಾಸು ಬಂಡವಾಳದ ಆಧಿಪತ್ಯಕ್ಕೆ, ಪರಿವರ್ತನೆಯಾಗುವ ಸಂಧಿಕಾಲವನ್ನು ಗುರುತಿಸುತ್ತದೆ.

## III. ಹಣಕಾಸು ಬಂಡವಾಳ ಹಾಗೂ ಹಣಕಾಸು ಆಲಿಗಾರ್ಕಿ

ಹಿಲ್ಫೆರ್ಡಿಂಗ್ ಹೀಗೆ ಬರೆಯುತ್ತಾರೆ: "ಕೈಗಾರಿಕೆಯಲ್ಲಿ ಬಂಡವಾಳದ ಸತತವಾಗಿ ಹೆಚ್ಚುತ್ತ ಹೋಗುವ ಭಾಗವು ಅದನ್ನು ಉಪಯೋಗಿಸುವ ಕೈಗಾರಿಕೋದ್ಯಮಿ

---

*ಯೆಯ್‌ಡೆಲ್ಸ್, ಪೂರ್ವೋಕ್ತ ಗ್ರಂಥ, ಪು. 181.

ಗಳಿಗೆ ಸೇರಿರದಂತಾಗುತ್ತದೆ. ಅವರು ಅದನ್ನು ಬಳಕೆಗಾಗಿ ಬ್ಯಾಂಕುಗಳ ಮಾಧ್ಯಮದ ಮೂಲಕವಷ್ಟೆ ಪಡೆದುಕೊಳ್ಳುತ್ತಾರೆ. ಆ ಬ್ಯಾಂಕುಗಳು ಆ ಕೈಗಾರಿಕೋದ್ಯಮಿಗಳಿಗೆ ಸಂಬಂಧಿಸಿದಂತೆ, ಬಂಡವಾಳದ ಮಾಲೀಕರಾಗಿರುತ್ತವೆ. ಮತ್ತೊಂದು ಕಡೆ ಬ್ಯಾಂಕು ತನ್ನ ನಿಧಿಗಳಲ್ಲಿ ಹೆಚ್ಚು ಹೆಚ್ಚು ಭಾಗವನ್ನು ಕೈಗಾರಿಕೆಯಲ್ಲಿ ತೊಡಗಿಸುವ ಒತ್ತಾಯಕ್ಕೊಳಗಾಗುತ್ತದೆ. ಹೀಗೆ ಬ್ಯಾಂಕರನು ಸತತವಾಗಿ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಕೈಗಾರಿಕಾ ಬಂಡವಾಳಗಾರನಾಗಿ ಪರಿವರ್ತಿತನಾಗುತ್ತಿದ್ದಾನೆ. ಈ ಬ್ಯಾಂಕ್ ಬಂಡವಾಳವನ್ನು, ಅಂದರೆ ಕೈಗಾರಿಕಾ ಬಂಡವಾಳವಾಗಿ ಹೀಗೆ ವಾಸ್ತವವಾಗಿ ಪರಿವರ್ತಿತವಾಗುವ ಹಣರೂಪದ ಬಂಡವಾಳವನ್ನು, ನಾನು ಹಣಕಾಸು ಬಂಡವಾಳ ಎಂದು ಕರೆಯುತ್ತೇನೆ." "ಹಣಕಾಸು ಬಂಡವಾಳವು, ಬ್ಯಾಂಕುಗಳಿಂದ ನಿಯಂತ್ರಿತವಾದ ಹಾಗೂ ಕೈಗಾರಿಕೋದ್ಯಮಿಗಳಿಂದ ಬಳಸಲ್ಪಡುವ ಬಂಡವಾಳ."*

ಈ ನಿರೂಪಣೆಯು ಒಂದು ಅತ್ಯಂತ ಮುಖ್ಯ ವಾಸ್ತವಾಂಶದ ಬಗೆಗೆ – ಉತ್ಪಾದನೆಯ ಹಾಗೂ ಬಂಡವಾಳದ ಕೇಂದ್ರೀಕರಣವು ಎಷ್ಟರ ಮಟ್ಟಿಗೆ ಹೆಚ್ಚುವುದೆಂದರೆ, ಕೇಂದ್ರೀಕರಣವು ಏಕಸ್ವಾಮ್ಯಕ್ಕೆ ದಾರಿ ಮಾಡಿಕೊಡುವಂತಾಗುತ್ತದೆ ಮತ್ತು ದಾರಿ ಮಾಡಿಕೊಟ್ಟಿದೆ, ಎಂಬ ವಾಸ್ತವಾಂಶದ ಬಗೆಗೆ – ಮೌನದಿಂದಿರುವ ಮಟ್ಟಿಗೆ ಅಸಂಪೂರ್ಣವಾಗಿದೆ. ಆದರೆ ತಮ್ಮ ಇಡೀ ಕೃತಿಯಾದ್ಯಂತ, ಅದರಲ್ಲೂ ನಿರ್ದಿಷ್ಟವಾಗಿ ಈ ನಿರೂಪಣೆಯನ್ನು ತೆಗೆದುಕೊಂಡಿರುವಂಥ ಅಧ್ಯಾಯದ ಹಿಂದಿನ ಎರಡು ಅಧ್ಯಾಯಗಳಲ್ಲಿ ಹಿಲ್ಫೆರ್ಡಿಂಗ್‌ರವರು ಬಂಡವಾಳಶಾಹಿ ಏಕಸ್ವಾಮ್ಯಗಳು ನಿರ್ವಹಿಸುವ ಪಾತ್ರವನ್ನೇ ಒತ್ತಿ ಹೇಳುತ್ತಾರೆ.

ಉತ್ಪಾದನೆಯ ಕೇಂದ್ರೀಕರಣ; ಅದರಿಂದ ಉದ್ಭವಿಸುವ ಏಕಸ್ವಾಮ್ಯ ಸಂಸ್ಥೆಗಳು; ಬ್ಯಾಂಕುಗಳು ಕೈಗಾರಿಕೆಯೊಂದಿಗೆ ಮಿಳನಗೊಳ್ಳುವುದು ಅಥವಾ ಬೆಸುಗೆಗೊಳ್ಳುವುದು – ಹಣಕಾಸು ಬಂಡವಾಳ ಉದಯವಾದುದರ ಇತಿಹಾಸ ಹೀಗಿದೆ, ಈ ಪದದ ಒಳಅರ್ಥ ಇಂತಹುದಾಗಿದೆ.

ಸರಕು ಉತ್ಪಾದನೆ ಹಾಗೂ ಖಾಸಗಿ ಒಡೆತನದ ಸಾಮಾನ್ಯ ಪರಿಸ್ಥಿತಿಗಳಲ್ಲಿ ಬಂಡವಾಳಶಾಹಿ ಏಕಸ್ವಾಮ್ಯಗಳ ಸ್ವೇಚ್ಛಾಚಾರದ "ವ್ಯವಹಾರಗಳು" ಹೇಗೆ ಅನಿವಾರ್ಯವಾಗಿಯೇ ಹಣಕಾಸು ಆಲಿಗಾರ್ಕಿಯೊಂದರ ಆಧಿಪತ್ಯಕ್ಕೆ ದಾರಿ ಮಾಡಿಕೊಡುತ್ತವೆ ಎಂಬುದನ್ನು ನಾವೀಗ ವಿವರಿಸಬೇಕು. ರೀಸ್ಸೆರ್, ಷುಲ್ತ್ಸೆ-ಗೆವೆರ್ನಿತ್ಸ್, ಲೀಫ್‌ಮನ್ ಮತ್ತಿತರಂಥ ಬೂರ್ಷ್ವಾ ಜರ್ಮನ್ ವಿಜ್ಞಾನದ – ಜರ್ಮನ್ ಅಷ್ಟೆ ಅಲ್ಲ – ಪ್ರತಿನಿಧಿಗಳೆಲ್ಲ ಸಾಮ್ರಾಜ್ಯವಾದದ ಹಾಗೂ ಹಣಕಾಸು ಬಂಡವಾಳದ ಸಮರ್ಥ

---

*ಆರ್. ಹಿಲ್ಫೆರ್ಡಿಂಗ್, 'ಹಣಕಾಸು ಬಂಡವಾಳ,' ಮಾಸ್ಕೋ, 1912, ಪು. 338-339.

ಕರೇ ಆಗಿದ್ದಾರೆಂಬುದನ್ನು ಗಮನಿಸಬೇಕು. ಆಲಿಗಾರ್ಕಿಯು ರೂಪುಗೊಂಡ "ವಿಧಾನ," ಅದು ಕಾರ್ಯ ಜರುಗಿಸುವ ರೀತಿ, ಅದರ "ಪಾಪರಹಿತ ಹಾಗೂ ಪಾಪಭರಿತ" ಆದಾಯಗಳ ಗಾತ್ರ, ಪಾರ್ಲಿಮೆಂಟುಗಳೊಂದಿಗೆ ಅದರ ಸಂಬಂಧ, ಇತ್ಯಾದಿ ಅಂಶಗಳನ್ನು ಹೊರಗೆಡಹುವ ಬದಲು ಅವರು ಅವುಗಳನ್ನು ಮರೆಮಾಚುತ್ತಾರೆ, ಅವುಗಳನ್ನು ಅಂದಗೊಳಿಸುತ್ತಾರೆ. ಅವರು ಆಡಂಬರದ ಅಸ್ಪಷ್ಟ ನುಡಿಗಟ್ಟುಗಳ ಮೂಲಕ, ಬ್ಯಾಂಕ್ ಡೈರೆಕ್ಟರುಗಳ "ಜವಾಬ್ದಾರಿಯುತ ಭಾವನೆ"ಗೆ ಮನವಿ ಮಾಡಿಕೊಳ್ಳುವ ಮೂಲಕ, ಪ್ರಶ್ಯನ್ ಅಧಿಕಾರಿಗಳ "ಕರ್ತವ್ಯ ಭಾವನೆ"ಯನ್ನು ಹೊಗಳುವ ಮೂಲಕ, ಏಕಸ್ವಾಮ್ಯ ಸಂಸ್ಥೆಗಳ ಮೇಲೆ "ನಿಯಂತ್ರಣ" ಹಾಗೂ "ಮೇಲ್ವಿಚಾರಣೆ"ಗೆ ಸಂಬಂಧಿಸಿದ ಸಂಪೂರ್ಣವಾಗಿ ಹಾಸ್ಯಾಸ್ಪದವಾದ ಪಾರ್ಲಿಮೆಂಟ್ ಮಸೂದೆಗಳ ಕ್ಷುಲ್ಲಕ ವಿವರಗಳನ್ನು ಗಹನವಾಗಿ ಅಭ್ಯಸಿಸುವ ಮೂಲಕ, ಪ್ರೊಫೆಸರ್ ಲೀಫ್‌ಮನ್‌ರು ಮಾಡಿದ ಈ ಕೆಳಗಿನ "ವೈಜ್ಞಾನಿಕ" ನಿರೂಪಣೆಗಳಂಥ ಸಿದ್ಧಾಂತಗಳೊಂದಿಗೆ ಆಟವಾಡುವ ಮೂಲಕ, ಈ "ಕಾಡಿಸುವ ಪ್ರಶ್ನೆಗಳಿಗೆ" ಉತ್ತರ ಕೊಡದೆ ನುಣುಚಿಕೊಳ್ಳುತ್ತಾರೆ: "ವಾಣಿಜ್ಯವು ವಸ್ತುಗಳನ್ನು ಸಂಗ್ರಹಿಸುವ, ದಾಸ್ತಾನು ಮಾಡುವ ಹಾಗೂ ಸರಬರಾಜು ಮಾಡುವ ಗುರಿಯುಳ್ಳ ಒಂದು ಕಸಬು."* (ಅಡಿಗೆರೆ ಪ್ರೊಫೆಸರ್‌ರವರದೇ)... ವಾಣಿಜ್ಯವು ವಿನಿಮಯದ ಬಗೆಗೆ ಏನೇನೂ ತಿಳಿದಿರದಿದ್ದಂಥ ಆದಿಮಾನವನ ಕಾಲದಲ್ಲೂ ಅಸ್ತಿತ್ವದಲ್ಲಿದ್ದಿತು, ಸಮಾಜವಾದದಲ್ಲೂ ಅದು ಅಸ್ತಿತ್ವದಲ್ಲಿರುವುದು, ಎಂದು ಇದರಿಂದ ತಿಳಿದುಬರುತ್ತದೆ!

ಆದರೆ ಹಣಕಾಸು ಆಲಿಗಾರ್ಕಿಯ ಪೈಶಾಚಿಕ ಪ್ರಭುತ್ವಕ್ಕೆ ಸಂಬಂಧಿಸಿ ಪೈಶಾಚಿಕ ವಾಸ್ತವಾಂಶಗಳು ಎಷ್ಟು ಕಣ್ಣಿಗೆ ಕುಕ್ಕುವಂತಿವೆಯೆಂದರೆ, ಎಲ್ಲ ಬಂಡವಾಳಶಾಹಿ ದೇಶಗಳಲ್ಲೂ, ಅಮೆರಿಕ, ಫ್ರಾನ್ಸ್ ಹಾಗೂ ಜರ್ಮನಿಗಳಲ್ಲೂ, ಅವುಗಳ ಬಗೆಗೆ ಭಾರಿ ಸಾಹಿತ್ಯವೇ ಹುಟ್ಟಿಕೊಂಡಿದೆ. ಈ ಕೃತಿಗಳನ್ನು ಬೂರ್ಷ್ವಾ ದೃಷ್ಟಿಕೋನದಿಂದ ಬರೆಯಲಾಗಿದೆಯಾದರೂ ಅವು ಈ ಆಲಿಗಾರ್ಕಿಯ ಬಗೆಗೆ ಸ್ವಲ್ಪ ನಿಜವಾದ ಚಿತ್ರಣವನ್ನೂ ಟೀಕೆಯನ್ನೂ – ಸ್ವಾಭಾವಿಕವಾಗಿಯೇ, ಪೆಟಿ ಬೂರ್ಷ್ವಾ ಟೀಕೆಯನ್ನು – ನೀಡುತ್ತವೆ.

ನಾವು ಆಗಲೇ ಮೇಲೆ ಸ್ಥೂಲವಾಗಿ ಪ್ರಸ್ತಾಪಿಸಿದ "ಹೋಲ್ಡಿಂಗ್ ಪದ್ಧತಿ"ಯನ್ನು ಮೂಲಾಧಾರವನ್ನಾಗಿ ಮಾಡಬೇಕು. ಈ ವಿಷಯದತ್ತ ಬಹುಶಃ ಮೊಟ್ಟಮೊದಲ ಬಾರಿಗೆ ಗಮನ ನೀಡಿದ ಜರ್ಮನ್ ಅರ್ಥಶಾಸ್ತ್ರಜ್ಞ ಹೈಮನ್‌ರು ಅದರ ಸಾರವನ್ನು ಹೀಗೆ ವಿವರಿಸುತ್ತಾರೆ:

"ಸಂಸ್ಥೆಯ ಅಧಿಪತಿಯು ಪ್ರಧಾನ ಕಂಪನಿಯನ್ನು" (ಅಕ್ಷರಶಃ "ತಾಯಿ ಕಂಪನಿ") "ನಿಯಂತ್ರಿಸುತ್ತಾನೆ, ಈ ಪ್ರಧಾನ ಕಂಪನಿಯು ಅಧೀನ ಕಂಪನಿಗಳ ಮೇಲೆ"

---

* R. Liefmann, ಪೂರ್ವೋಕ್ತ ಗ್ರಂಥ, ಪು. 476.

("ಮಗಳು ಕಂಪನಿ") "ಪ್ರಭುತ್ವ ನಡೆಸುತ್ತದೆ. ಈ ಸಹಾಯಕ ಕಂಪನಿಗಳು, ತಮ್ಮ ಸರದಿಯಲ್ಲಿ, ಇನ್ನೂ ಇತರ ಅಧೀನ ಕಂಪನಿಗಳನ್ನು" ("ಮೊಮ್ಮಗಳು ಕಂಪನಿಗಳು") "ನಿಯಂತ್ರಿಸುತ್ತವೆ, ಇತ್ಯಾದಿ. ಈ ರೀತಿ ತುಲನಾತ್ಮಕವಾಗಿ ಸಣ್ಣ ಬಂಡವಾಳದೊಂದಿಗೇ ಅಪಾರ ಉತ್ಪಾದನಾ ವಲಯಗಳ ಮೇಲೆ ಆಧಿಪತ್ಯ ಹೊಂದುವುದು ಸಾಧ್ಯವಾಗುತ್ತದೆ. ನಿಜಕ್ಕೂ, ಒಂದು ಕಂಪನಿಯ ಮೇಲೆ ನಿಯಂತ್ರಣ ಸ್ಥಾಪಿಸಲು ಅದರ ಬಂಡವಾಳದ ಶೇ. 50ರಷ್ಟನ್ನು ಹೊಂದಿರುವುದು ಯಾವತ್ತೂ ಸಾಕಾಗಿದ್ದಲ್ಲಿ, "ಮೊಮ್ಮಗಳು ಕಂಪನಿಗಳ" ಪ್ರಧಾನ ಕಂಪನಿಯ ಅಧಿಪತಿಯು ಎರಡನೆಯ ದರ್ಜೆಯ ಅಧೀನ ಕಂಪನಿಗಳಲ್ಲಿ ಎಂಟು ಮಿಲಿಯ ಬಂಡವಾಳದ ಮೇಲೆ ನಿಯಂತ್ರಣ ಸ್ಥಾಪಿಸಲು ಒಂದು ಮಿಲಿಯ ಬಂಡವಾಳ ಹೊಂದಿದ್ದರೆ ಸಾಕು. ಈ 'ಪರಸ್ಪರ ಹೆಣಿಕೆ'ಯನ್ನು ವಿಸ್ತರಿಸಿದಲ್ಲಿ, ಒಂದು ಮಿಲಿಯದಿಂದ ಹದಿನಾರು ಮಿಲಿಯ, ಮೂವತ್ತೆರಡು ಮಿಲಿಯ, ಇತ್ಯಾದಿ ಮೊಬಲಗುಗಳ ಬಂಡವಾಳಗಳನ್ನು ನಿಯಂತ್ರಿಸುವುದು ಸಾಧ್ಯವಾಗುತ್ತದೆ."*

ವಾಸ್ತವವಾಗಿ, ಕಂಪನಿಯೊಂದರ ವ್ಯವಹಾರಗಳನ್ನು ನಿರ್ದೇಶಿಸಲು ಅದರ ಶೇ. 40ರಷ್ಟು ಷೇರುಗಳನ್ನು ಹೊಂದಿದ್ದರೆ ಸಾಕು** ಎಂದು ಅನುಭವ ತೋರಿಸಿಕೊಡುತ್ತದೆ, ಏಕೆಂದರೆ, ಸ್ವಲ್ಪ ಸಂಖ್ಯೆಯ ಸಣ್ಣ ಹರಡಿ ಹೋದ ಷೇರ್ ಹೋಲ್ಡರುಗಳು ಆಚರಣೆಯಲ್ಲಿ ಜನರಲ್ ಮೀಟಿಂಗು ಇತ್ಯಾದಿಗಳಲ್ಲಿ ಹಾಜರಿರಲು ಅಸಾಧ್ಯವನ್ನಾಗಿ ಕಂಡುಕೊಳ್ಳುತ್ತಾರೆ. ಷೇರುಗಳ ಮಾಲೀಕತ್ವದ "ಪ್ರಜಾಪ್ರಭುತ್ವೀಕರಣ" ದಿಂದ "ಬಂಡವಾಳದ ಪ್ರಜಾಪ್ರಭುತ್ವೀಕರಣ" ಸಾಧ್ಯ ಎಂದು ಬೂರ್ಷ್ವಾ ಕುತರ್ಕಿಗಳೂ "ಸೋಷಲ್ ಡೆಮೊಕ್ರಾಟರು" ಎಂದು ಹೇಳಿಕೊಳ್ಳುವಂಥ ಸಂದರ್ಭಸಾಧಕವಾದಿಗಳೂ ನಿರೀಕ್ಷಿಸುವುದು (ಅಥವಾ ತಾವು ನಿರೀಕ್ಷಿಸುತ್ತಾರೆಂದು ಹೇಳುವುದು), ಸಣ್ಣ ಪ್ರಮಾಣದ ಉತ್ಪಾದನೆಯ ಪಾತ್ರವನ್ನೂ, ಮಹತ್ವವನ್ನೂ ದೃಢಗೊಳಿಸುವುದು, ಇತ್ಯಾದಿಗಳು ವಾಸ್ತವವಾಗಿ, ಹಣಕಾಸು ಆಲಿಗಾರ್ಕಿಯ ಶಕ್ತಿಯನ್ನು ಹೆಚ್ಚಿಸುವ ಮಾರ್ಗಗಳಲ್ಲೊಂದಷ್ಟೆ ಆಗಿದೆ.[26] ಅಂದಹಾಗೇ, ಈ ಕಾರಣದಿಂದಾಗಿಯೇ, ಹೆಚ್ಚು ಮುಂದುವರಿದ ಅಥವಾ ಹಳೆಯ ಹಾಗೂ ಹೆಚ್ಚು "ಅನುಭವದ" ಬಂಡವಾಳಶಾಹಿ ದೇಶಗಳಲ್ಲಿ, ಕಮ್ಮಿ ಅಂಕಿತ ಮೌಲ್ಯದ ಷೇರುಗಳನ್ನು ಹೊರಡಿಸುವುದಕ್ಕೆ ಶಾಸನ ಅವಕಾಶ ನೀಡುತ್ತದೆ. ಜರ್ಮನಿಯಲ್ಲಿ ಒಂದು ಸಾವಿರ ಮಾರ್ಕುಗಳಿಗೂ ಕಮ್ಮಿ ಅಂಕಿತ

---

* Hans Gideon Heymann, *Die gemischten Werke im deutschen Großeisengewerbe*, Stuttgart, (ಹ್ಯಾನ್ಸ್ ಗಿಡೆಯೊನ್ ಹೈಮನ್, 'ಜರ್ಮನ್ ಭಾರಿ ಕಬ್ಬಿಣ ಕೈಗಾರಿಕೆಯಲ್ಲಿ ಸಂಯೋಜಿತ ಯಂತ್ರ ಸ್ಥಾವರಗಳು,' ಷ್ಟುಟ್‌ಗರ್ಟ್.–ಸಂ.), 1904, ಪು. 268-269.

** Liefmann, *Beteiligungsgesellschaften, etc.*, ಮೊದಲನೆಯ ಆವೃತ್ತಿ, ಪು. 258.

ಮೌಲ್ಯದ ಷೇರುಗಳನ್ನು ಹೊರಡಿಸುವುದಕ್ಕೆ ಶಾಸನವು ಅನುಮತಿ ನೀಡುವುದಿಲ್ಲ. ಆದ್ದರಿಂದಲೇ ಜರ್ಮನ್ ಹಣಕಾಸು ಪ್ರಭುಗಳು ಇಂಗ್ಲೆಂಡಿನತ್ತ ಅಸೂಯೆಯಿಂದ ನೋಡುತ್ತಾರೆ. ಏಕೆಂದರೆ ಇಂಗ್ಲೆಂಡಿನಲ್ಲಿ ಒಂದು ಪೌಂಡ್ ನಾಮಕ ಷೇರುಗಳನ್ನು (=20 ಮಾರ್ಕುಗಳು, ಸುಮಾರು 10 ರೂಬಲ್) ಹೊರಡಿಸಲು ಅವಕಾಶವಿದೆ. ಜರ್ಮನಿಯ ಅತ್ಯಂತ ದೊಡ್ಡ ಕೈಗಾರಿಕೋದ್ಯಮಿಗಳಲ್ಲಿ "ಹಣಕಾಸು ರಾಜ"ರಲ್ಲಿ ಒಬ್ಬರಾದ ಸೈಮನ್ಸ್ 1900ರ ಜೂನ್ 7ರಂದು ರೈಹ್‌ಸ್ಟಾಗ್‌ನಲ್ಲಿ "ಒಂದು ಪೌಂಡ್ ಷೇರು ಬ್ರಿಟಿಷ್ ಸಾಮ್ರಾಜ್ಯವಾದದ ಆಧಾರ"* ಎಂದು ಹೇಳಿದರು. ರಷ್ಯನ್ ಮಾರ್ಕ್ಸ್‌ವಾದದ ಸಂಸ್ಥಾಪಕರಲ್ಲೊಬ್ಬರೆಂದು ಪರಿಗಣಿಸಲ್ಪಟ್ಟಿರುವ, ಸಾಮ್ರಾಜ್ಯ ವಾದವು ಯಾವುದೇ ಒಂದು ರಾಷ್ಟ್ರದ ಒಂದು ಕೆಟ್ಟ ಅಭ್ಯಾಸವಷ್ಟೆ ಎಂದು ನಂಬಿ ರುವ, ಯಾರೋ ಒಬ್ಬ ಕುಖ್ಯಾತ ಲೇಖಕ[27]ರಿದ್ದಾರಲ್ಲ, ಅವರಿಗಿಂತ ಈ ವರ್ತಕನು ಸಾಮ್ರಾಜ್ಯವಾದದ ಬಗೆಗೆ ಹೆಚ್ಚು ಗಾಢವಾದ ಹಾಗೂ ಹೆಚ್ಚು "ಮಾರ್ಕ್ಸ್‌ವಾದಿ" ಯಾದ ತಿಳಿವಳಿಕೆ ಹೊಂದಿದ್ದಾನೆ...

ಆದರೆ "ಹೋಲ್ಡಿಂಗ್ ಪದ್ಧತಿ"ಯು ಏಕಸ್ವಾಮ್ಯ ಸಂಸ್ಥೆಗಳ ಶಕ್ತಿಯನ್ನು ಅಪಾರ ವಾಗಿ ಹೆಚ್ಚಿಸಲು ನೆರವಾಗುತ್ತದಷ್ಟೆ ಅಲ್ಲ; ಅದು ಅವುಗಳಿಗೆ ಸಾರ್ವಜನಿಕರನ್ನು ಮೋಸಗೊಳಿಸಲು ಶಿಕ್ಷೆಯ ಭಯವಿಲ್ಲದೆ ಬಗೆಬಗೆಯ ಸಂಶಯಾಸ್ಪದವಾದ ಹಾಗೂ ತುಚ್ಛವಾದ ಹಂಚಿಕೆಗಳಲ್ಲಿ ತೊಡಗಲೂ ಸಾಧ್ಯಮಾಡಿಕೊಡುತ್ತದೆ, ಏಕೆಂದರೆ, "ತಾಯಿ ಕಂಪನಿ"ಯ ಡೈರೆಕ್ಟರುಗಳು "ಮಗಳು ಕಂಪನಿ"ಗೆ ಶಾಸನ ರೀತ್ಯಾ ಜವಾಬ್ದಾರರಲ್ಲ. ಈ "ಮಗಳು ಕಂಪನಿ" ಸ್ವತಂತ್ರವಾದುದೆಂದು ಹೇಳಲಾಗುತ್ತದೆ. ಇದರ ಮಾಧ್ಯ ಮದ ಮೂಲಕವೇ ಅವರು ಯಾವ ಆಟವನ್ನೇ ಆಗಲಿ ಆಡಬಲ್ಲರು. ಈ ಕೆಳಗೆ ಒಂದು ಉದಾಹರಣೆ ಇದೆ. ಇದನ್ನು ಜರ್ಮನ್ ಪತ್ರಿಕೆ 'ದಿ ಬ್ಯಾಂಕ್'ನ 1914ರ ಮೇ ಸಂಚಿಕೆಯಿಂದ ತೆಗೆದುಕೊಳ್ಳಲಾಗಿದೆ:

"ಕಾಸ್ಸೆಲ್‌ನಲ್ಲಿರುವ 'ದಿ ಸ್ಪ್ರಿಂಗ್ ಸ್ಟೀಲ್ ಕಂಪನಿಯು' ಜರ್ಮನಿಯಲ್ಲೇ ಅತ್ಯಂತ ಲಾಭದಾಯಕವಾದ ಉದ್ಯಮಗಳಲ್ಲೊಂದೆಂದು ಕೆಲವು ವರ್ಷಗಳವರೆಗೆ ಭಾವಿಸಲಾಗಿ ದ್ದಿತು. ಕೆಟ್ಟ ನಿರ್ವಹಣೆಯ ಫಲವಾಗಿ ಅದರ ಡಿವಿಡೆಂಡುಗಳು ಶೇ. 15ರಿಂದ ಸೊನ್ನೆಗೆ ಇಳಿದವು. ಈ ಕಂಪನಿಯ ಆಡಳಿತ ಮಂಡಳಿಯು ಷೇರುದಾರರೊಂದಿಗೆ ಸಮಾಲೋ ಚಿಸದೆಯೇ ತನ್ನ 'ಮಗಳು ಕಂಪನಿ'ಗಳಲ್ಲೊಂದಾದ 'ಹಾಸ್ಸಿಯ ಲಿಮಿಟೆಡ್'ಗೆ – ಕೇವಲ ಕೆಲವು ಲಕ್ಷ ಮಾರ್ಕುಗಳ ನಾಮಕ ಬಂಡವಾಳವನ್ನಷ್ಟೆ ಹೊಂದಿದ್ದ ಕಂಪನಿಗೆ – ಆರು ಮಿಲಿಯ ಮಾರ್ಕುಗಳಷ್ಟು ಸಾಲ ನೀಡಿದ್ದಿತೆಂದು ಕಂಡುಬರುತ್ತದೆ. 'ತಾಯಿ ಕಂಪನಿ'ಯ ಬಂಡವಾಳದ ಸುಮಾರು ಮೂರು ಪಟ್ಟು ಆಗುವಷ್ಟು ದೊಡ್ಡ ಪ್ರಮಾ

* Schulze-Gaevernitz, *Gruudriß der Soziaökonomik*, V. 2, ಪು. 110.

ಐದ ಈ ಸಾಲ ನೀಡಿಕೆಯನ್ನು ಕಂಪನಿಯು ಬ್ಯಾಲೆನ್ಸ್‌ಷೀಟಿನಲ್ಲಿ ಯಾವತ್ತೂ ತೋರಿಸಲೇ ಇಲ್ಲ. ಈ ಲೋಪವು ಕಾನೂನುಬದ್ಧವೇ ಆಗಿದ್ದಿತು. ಅದು ಕಂಪನಿ ನಿಯಮದ ಯಾವುದೇ ಅಂಶವನ್ನೂ ಉಲ್ಲಂಘಿಸದೆ ಇದ್ದುದರಿಂದ ಅದನ್ನು ಎರಡು ವರ್ಷಗಳ ವರೆಗೆ ಮುಚ್ಚಿಡಲು ಸಾಧ್ಯವಾಯಿತು. ಜವಾಬ್ದಾರಿಯುತ ಅಧಿಪತಿಯಾಗಿ ಸುಳ್ಳು ಬ್ಯಾಲೆನ್ಸ್‌ಷೀಟುಗಳಿಗೆ ಸಹಿ ಹಾಕಿದ್ದ ಮೇಲ್ವಿಚಾರಕ ಮಂಡಳಿಯ ಅಧ್ಯಕ್ಷರೇ 'ಕಾಸ್ಸೆಲ್ ವಾಣಿಜ್ಯ ಭವನ'ದ ಅಧ್ಯಕ್ಷರೂ ಆಗಿದ್ದರು ಮತ್ತು ಈಗಲೂ ಆಗಿದ್ದಾರೆ. 'ಹಾಸ್ಸಿಯ' ಕಂಪನಿಗೆ ಅಷ್ಟೊಂದು ಭಾರಿ ಪ್ರಮಾಣದ ಸಾಲ ಕೊಟ್ಟುದು ತಪ್ಪಾಗಿದ್ದಿತು..." (ಲೇಖಕರು ಈ ಮಾತನ್ನು ಉದ್ಧರಣ ಚಿಹ್ನೆಗಳ ಒಳಗೆ ಇರಿಸಬೇಕಾಗಿತ್ತು) ಎಂದು ಸಾಧಿತವಾದ ದೀರ್ಘ ಕಾಲದನಂತರವಷ್ಟೆ ಮತ್ತೆ ಈ ವಿಷಯವನ್ನು ತಿಳಿದಿದ್ದವರು 'ಸ್ಪ್ರಿಂಗ್ ಸ್ಟೀಲ್ ಕಂಪನಿಯ' ಷೇರುಗಳನ್ನು ಮಾರಿಬಿಡಲು ತೊಡಗಿದ ಕಾರಣದಿಂದಾಗಿ ಅದರ ಷೇರುಗಳು ಸುಮಾರು ಶೇ. 100ರಷ್ಟು ಬಿದ್ದು ಹೋದಾಗಲಷ್ಟೆ, ಷೇರುದಾರರು ಈ ಸಾಲ ನೀಡಿಕೆಯ ಬಗೆಗೆ ತಿಳಿದುದು....

"ಜಾಯಿಂಟ್ ಸ್ಟಾಕ್ ಕಂಪನಿಗಳ ಡೈರೆಕ್ಟರುಗಳ ಮಂಡಳಿಗಳು ಬಿಡಿ ವ್ಯಾಪಾರಗಾರರಿಗಿಂತ ಹೆಚ್ಚು ನಿರ್ಭಯರಾಗಿ ಅಪಾಯಸಂಭವವುಳ್ಳ ವ್ಯವಹಾರಗಳಲ್ಲಿ ತೊಡಗಲು ಏಕೆ ಸಿದ್ಧರಾಗಿರುವರೆಂಬುದನ್ನು, ಅಂತಹ ಕಂಪನಿಗಳಲ್ಲಿ ಸರ್ವೇಸಾಮಾನ್ಯವಾಗಿರುವ ಬ್ಯಾಲೆನ್ಸ್‌ಷೀಟ್ ಗಾರುಡಿಯ ಈ ವಿಶಿಷ್ಟವಾದ ನಿದರ್ಶನವು ವಿವರಿಸುತ್ತದೆ. ಬ್ಯಾಲೆನ್ಸ್‌ಷೀಟುಗಳನ್ನು ರಚಿಸುವ ಆಧುನಿಕ ವಿಧಾನಗಳು ಸಂಶಯಾಸ್ಪದವಾದ ವ್ಯವಹಾರಗಳನ್ನು ಸಾಮಾನ್ಯ ಷೇರುದಾರನ ಗಮನದಿಂದ ಮುಚ್ಚಿಡಲು ಸಾಧ್ಯಮಾಡಿ ಕೊಡುತ್ತವಷ್ಟೆ ಅಲ್ಲ, ಅದರ ಜೊತೆಗೇ, ಈ ಅವ್ಯವಹಾರದಲ್ಲಿ ಎಲ್ಲರಿಗಿಂತ ಹೆಚ್ಚು ಆಸಕ್ತಿಯುಳ್ಳ ಜನರು ತಮ್ಮ ವಿಫಲ ಪ್ರಯೋಗದ ದುಷ್ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತವೆ; ಬಿಡಿ ವ್ಯಾಪಾರಗಾರನು ತಾನು ಮಾಡುವ ಪ್ರತಿ ಕಾರ್ಯದಲ್ಲೂ ತಾನೇ ಅಪಾಯವನ್ನು ಎದುರಿಸಿದಲ್ಲಿ, ಈ ಜನರು ಸಕಾಲದಲ್ಲಿ ತಮ್ಮ ಷೇರುಗಳನ್ನು ಮಾರಿಬಿಡುವ ಮೂಲಕ ಅಪಾಯದಿಂದ ತಪ್ಪಿಸಿಕೊಳ್ಳುತ್ತಾರೆ...

"ಅನೇಕ ಜಾಯಿಂಟ್ ಸ್ಟಾಕ್ ಕಂಪನಿಗಳ ಬ್ಯಾಲೆನ್ಸ್‌ಷೀಟುಗಳು ನಮಗೆ ಮಧ್ಯ ಯುಗದ ಪಾಲಿಂಪ್ಸೆಸ್ಟ್‌ಗಳ ನೆನಪು ತರುತ್ತವೆ, ಅಂದರೆ ದಸ್ತೈವಜಿನ ನಿಜವಾದ ಅರ್ಥವನ್ನು ನೀಡುವ ಮೂಲ ಬರಹವನ್ನು ಪತ್ತೆ ಹಚ್ಚಲು ಮೊದಲು ಅದರ ಮೇಲೆ ಕಾಣಬರುವ ಬರಹವನ್ನು ಅಳಿಸಬೇಕು." (ಪಾಲಿಂಪ್ಸೆಸ್ಟ್‌ಗಳು ಒಂದು ರೀತಿಯ ಚರ್ಮಕಾಗದದ ದಸ್ತೈವಜುಗಳು. ಇವುಗಳಲ್ಲಿ ಮೂಲ ಬರಹವನ್ನು ಅಳಿಸಿಹಾಕಿ ಅದರ ಮೇಲೆ ಮತ್ತೊಂದು ಬರಹವನ್ನು ಬರೆಯಲಾಗಿತ್ತು.)

"ಬ್ಯಾಲೆನ್ಸ್‌ಷೀಟುಗಳನ್ನು ತಿಳಿಯಲಾಗದಂತೆ ಮಾಡುವ ಅತ್ಯಂತ ಸರಳವಾದ, ಆದ್ದರಿಂದಾಗಿ ಅತ್ಯಂತ ಸಾಮಾನ್ಯವಾದ ವಿಧಾನವೆಂದರೆ, 'ಮಗಳು ಕಂಪನಿಗಳ'ನ್ನು

ಸ್ಥಾಪಿಸುವ ಮೂಲಕ ಅಥವಾ ಅಂಥ ಕಂಪನಿಗಳನ್ನು ಜೊತೆಗೂಡಿಸಿಕೊಳ್ಳುವ ಮೂಲಕ ಒಂದೇ ಉದ್ಯಮವನ್ನು ಹಲವಾರು ಭಾಗಗಳನ್ನಾಗಿ ವಿಭಜಿಸುವುದಾಗಿದೆ. ನಾನಾ ಗುರಿಗಳನ್ನು – ಶಾಸನಸಮ್ಮತ ಹಾಗೂ ಶಾಸನಬಾಹಿರ ಗುರಿಗಳನ್ನು – ಸಾಧಿಸಲು ಈ ಪದ್ಧತಿಯ ಅಧಿಕಾನುಕೂಲಗಳು ಎಷ್ಟು ಸುಸ್ಪಷ್ಟವೆಂದರೆ ಇದನ್ನು ಆಚರಣೆಯಲ್ಲಿ ತರದಂಥ ದೊಡ್ಡ ಕಂಪನಿಗಳೇ ಅಪವಾದಗಳಾಗಿರುತ್ತವೆ."*

ಈ ಪದ್ಧತಿಯನ್ನು ವಿಸ್ತೃತವಾಗಿ ಬಳಸುವ ಭಾರಿ ಏಕಸ್ವಾಮ್ಯ ಕಂಪನಿಯೊಂದಕ್ಕೆ ನಿದರ್ಶನವಾಗಿ ಗ್ರಂಥಕರ್ತೃ ಸುಪ್ರಸಿದ್ಧ 'ಜನರಲ್ ಎಲೆಕ್ಟ್ರಿಕ್ ಕಂಪನಿ'(A. E. G. – ಇದರ ಬಗೆಗೆ ನಾವು ಮುಂದೆ ಮತ್ತೆ ಪ್ರಸ್ತಾಪಿಸಲಿರುವೆವು)ಯನ್ನು ಉದ್ಧರಿಸುತ್ತಾರೆ. 1912ರಲ್ಲಿ ಈ ಕಂಪನಿಯು 175ರಿಂದ 200 ಇತರ ಕಂಪನಿಗಳಲ್ಲಿ ಷೇರುಗಳನ್ನು ಹೊಂದಿದ್ದಿತು, ಅವುಗಳ ಮೇಲೆ ಸಹಜವಾಗಿಯೇ ಆಧಿಪತ್ಯ ನಡೆಸುತ್ತಿದ್ದಿತು, ಹಾಗೆ ಒಟ್ಟು ಸುಮಾರು 1.500 ಮಿಲಿಯ ಮಾರ್ಕುಗಳಷ್ಟು ಬಂಡವಾಳದ ಮೇಲೆ ಹತೋಟಿ ಹೊಂದಿದ್ದಿತು.**

ನಿಯಂತ್ರಣ ನಿಬಂಧನೆಗಳು, ಬ್ಯಾಲೆನ್ಸ್‌ಷೀಟುಗಳ ಪ್ರಕಟಣೆ, ಒಂದು ನಿರ್ದಿಷ್ಟ ರೂಪಕ್ಕನುಗುಣವಾಗಿ ಬ್ಯಾಲೆನ್ಸ್‌ಷೀಟುಗಳನ್ನು ರಚಿಸುವುದು, ಲೆಕ್ಕಗಳ ಸಾರ್ವಜನಿಕ ತನಿಖೆ ಇತ್ಯಾದಿಗಳ ಕುರಿತು ಸದುದ್ದೇಶದ ಪ್ರೊಫೆಸರುಗಳೂ ಅಧಿಕಾರಿಗಳೂ – ಅಂದರೆ ಬಂಡವಾಳವಾದವನ್ನು ಸಮರ್ಥಿಸುವ ಹಾಗೂ ಅಂದಗೊಳಿಸಿ ತೋರುವ ಸದುದ್ದೇಶದಿಂದ ಪೂರಿತರಾದವರು – ಸಾರ್ವಜನಿಕರಿಗೆ ನೀಡುವ ಉಪನ್ಯಾಸಗಳೆಲ್ಲ ನಿಷ್ಪ್ರಯೋಜಕ. ಏತಕ್ಕೆಂದರೆ ಖಾಸಗಿ ಆಸ್ತಿಯು ಪವಿತ್ರವಾದುದು, ಷೇರುಗಳನ್ನು ಕೊಳ್ಳುವುದಕ್ಕೆ, ಮಾರುವುದಕ್ಕೆ, ವಿನಿಮಯ ಮಾಡಿಕೊಳ್ಳುವುದಕ್ಕೆ ಅಥವಾ ಒತ್ತೆ ಇಡುವುದಕ್ಕೆ, ಇತ್ಯಾದಿಗಳಿಗೆ ಸಂಬಂಧಿಸಿ ಯಾರ ಮೇಲೂ ಪ್ರತಿಬಂಧಕ ಹಾಕುವುದು ಸಾಧ್ಯವಿಲ್ಲ.

ದೊಡ್ಡ ರಷ್ಯನ್ ಬ್ಯಾಂಕುಗಳಲ್ಲಿ ಈ "ಹೋಲ್ಡಿಂಗ್ ಪದ್ಧತಿ"ಯು ಎಷ್ಟರ ಮಟ್ಟಿಗೆ ಅಭಿವೃದ್ಧಿಗೊಂಡಿದೆ ಎಂಬುದನ್ನು, ಹದಿನೈದು ವರ್ಷ ರುಸ್ಸೋ-ಚೈನೀಸ್ ಬ್ಯಾಂಕಿನ ಅಧಿಕಾರಿಯಾಗಿದ್ದ, 1914ರಲ್ಲಿ 'ದೊಡ್ಡ ಬ್ಯಾಂಕುಗಳು ಹಾಗೂ ಜಾಗತಿಕ

---

* L. Eschwege, *Tochtergesellschaften, Die Bank* (ಎಲ್. ಎಷ್ವೆಗೆ, 'ಮಗಳು ಕಂಪನಿಗಳು,' 'ದಿ ಬ್ಯಾಂಕ್.' – ಸಂ.), 1914, 1, ಪು. 545.

** Kurt Heinig, *Der Weg des Elektrotrusts, Neue Zeit*, 1912, 30. Jahrg. (ಕುರ್ತ್ ಹೈನಿಗ್, 'ಎಲೆಕ್ಟ್ರಿಕ್ ಟ್ರಸ್ಟುಗಳ ಮಾರ್ಗ,' 'ದಿ ನೋಯೆ ತ್ಸೈತ್,' 1912. – ಸಂ.), 2, ಪು. 484.

5—566

ಮಾರುಕಟ್ಟೆ' ಎಂಬ ಸಂಪೂರ್ಣವಾಗಿ ಸರಿಯಾದುದೇನೂ ಅಲ್ಲದ ಶೀರ್ಷಿಕೆಯ ಗ್ರಂಥವನ್ನು ಪ್ರಕಟಿಸಿದ, ಈ. ಅಗಾಡ್‌ರವರು ನೀಡಿರುವ ಸಂಖ್ಯೆಗಳಿಂದ ತೀರ್ಮಾನಿಸಬಹುದಾಗಿದೆ.* ಈ ಲೇಖಕರು ದೊಡ್ಡ ರಷ್ಯನ್ ಬ್ಯಾಂಕುಗಳನ್ನು ಎರಡು ಮುಖ್ಯ ಸಂವರ್ಗಗಳನ್ನಾಗಿ ವಿಭಜಿಸುತ್ತಾರೆ: (ಅ) "ಹೋಲ್ಡಿಂಗ್ ಪದ್ಧತಿ"ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬ್ಯಾಂಕುಗಳು; (ಆ) "ಸ್ವತಂತ್ರ" ಬ್ಯಾಂಕುಗಳು – ಆದರೆ ಈ "ಸ್ವಾತಂತ್ರ್ಯ" ಎಂಬ ಪದವನ್ನು ವಿದೇಶೀ ಬ್ಯಾಂಕುಗಳಿಂದ ಸ್ವತಂತ್ರವಾದವು ಎಂಬ ಅರ್ಥದಲ್ಲಿ ತೆಗೆದುಕೊಳ್ಳಲಾಗಿದೆ. ಲೇಖಕರು ಮೊದಲ ಗುಂಪಿನ ಬ್ಯಾಂಕುಗಳನ್ನು ಮೂರು ಉಪವಿಭಾಗಗಳನ್ನಾಗಿ ವಿಭಾಗಿಸುತ್ತಾರೆ: 1) ಜರ್ಮನ್ ಹೋಲ್ಡಿಂಗುಗಳು, 2) ಬ್ರಿಟಿಷ್ ಹೋಲ್ಡಿಂಗುಗಳು, 3) ಫ್ರೆಂಚ್ ಹೋಲ್ಡಿಂಗುಗಳು. ಆಯಾ ದೇಶಗಳಿಗೆ ಸೇರಿದ ದೊಡ್ಡ ವಿದೇಶೀ ಬ್ಯಾಂಕುಗಳ "ಹೋಲ್ಡಿಂಗು"ಗಳು ಮತ್ತು ಆಧಿಪತ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರು ಈ ವಿಭಜನೆ ಮಾಡಿದ್ದಾರೆ. ಅವರು ಬ್ಯಾಂಕುಗಳ ಬಂಡವಾಳವನ್ನು "ಉತ್ಪಾದನೆಗಾಗಿ" ತೊಡಗಿಸಿದ ಬಂಡವಾಳ (ಕೈಗಾರಿಕಾ ಹಾಗೂ ವಾಣಿಜ್ಯ ಸಂಸ್ಥೆಗಳಲ್ಲಿ), ಹಾಗೂ "ಸಟ್ಟಾ ವ್ಯಾಪಾರಕ್ಕಾಗಿ" ಹಾಕಿದ ಬಂಡವಾಳ (ಸ್ಟಾಕ್ ಎಕ್ಸ್‌ಚೇಂಜ್ ಹಾಗೂ ಹಣಕಾಸು ವ್ಯವಹಾರಗಳಲ್ಲಿ) ಎಂದು ವಿಭಜಿಸುತ್ತಾರೆ – ಬಂಡವಾಳವಾದಿ ಪದ್ಧತಿಯಲ್ಲಿ ಮೊದಲ ಬಂಡವಾಳ ರೂಪವನ್ನು ಎರಡನೆಯ ಬಂಡವಾಳ ರೂಪದಿಂದ ಪ್ರತ್ಯೇಕಿಸುವುದು ಸಾಧ್ಯ ಮತ್ತು ಎರಡನೆಯ ರೂಪವನ್ನು ತೊಡೆದುಹಾಕುವುದು ಸಾಧ್ಯ ಎಂದು ತಮ್ಮ ಪೆಟಿ ಬೂರ್ಷ್ವಾ ಸುಧಾರಣಾವಾದಿ ದೃಷ್ಟಿಕೋನದಿಂದ ಭಾವಿಸಿಕೊಂಡು.

ಅವರು ನೀಡಿರುವ ಸಂಖ್ಯೆಗಳು ಹೀಗಿವೆ:

---

* E. Agahd, *Großbanken und Weltmarkt. Die wirtschaftliche und politische Bedeutung der Großbanken im Weltmarkt unter Berücksichtigung ihres Einflusses auf Rußlands Volkswirtschaft und die deutsch-russischen Beziehungen*, Berl., 1914 (ಈ. ಅಗಾಡ್, 'ದೊಡ್ಡ ಬ್ಯಾಂಕುಗಳು ಹಾಗೂ ಜಾಗತಿಕ ಮಾರುಕಟ್ಟೆ. ಜಾಗತಿಕ ಮಾರುಕಟ್ಟೆಯಲ್ಲಿ ದೊಡ್ಡ ಬ್ಯಾಂಕುಗಳ ಆರ್ಥಿಕ ಹಾಗೂ ರಾಜಕೀಯ ಪ್ರಾಮುಖ್ಯ – ರಷ್ಯದ ರಾಷ್ಟ್ರೀಯ ಆರ್ಥಿಕತೆ ಹಾಗೂ ಜರ್ಮನ್-ರಷ್ಯನ್ ಸಂಬಂಧಗಳ ಮೇಲೆ ಅವು ಬೀರುವ ಪ್ರಭಾವದ ದೃಷ್ಟಿಕೋನದಿಂದ,' ಬರ್ಲಿನ್. – ಸಂ.).

### ಬ್ಯಾಂಕ್ ಆಸ್ತಿಗಳು
### (1913ರ ಅಕ್ಟೋಬರ್-ನವಂಬರ್ ವರದಿಗಳ ಪ್ರಕಾರ)
### ಮಿಲಿಯ ರೂಬಲ್‌ಗಳಲ್ಲಿ

| ರಷ್ಯನ್ ಬ್ಯಾಂಕುಗಳ ಗುಂಪುಗಳು | ತೊಡಗಿಸಿದ ಬಂಡವಾಳ | | |
|---|---|---|---|
| | ಉತ್ಪಾದನೆಯಲ್ಲಿ | ಸಟ್ಟಾ ವ್ಯಾಪಾರದಲ್ಲಿ | ಒಟ್ಟು |
| ಅ. 1) ನಾಲ್ಕು ಬ್ಯಾಂಕುಗಳು: ಸೈಬೀರಿಯನ್ ಕಮರ್ಷಿಯಲ್, ರಷ್ಯನ್, ಇಂಟರ್‌ನ್ಯಾಷನಲ್ ಹಾಗೂ ಡಿಸ್ಕೌಂಟ್ ಬ್ಯಾಂಕ್ . . . . . | 413.7 | 859.1 | 1,272.8 |
| ಅ. 2) ಎರಡು ಬ್ಯಾಂಕುಗಳು: ಕಮರ್ಷಿಯಲ್ ಅಂಡ್ ಇಂಡಸ್ಟ್ರಿಯಲ್ ಹಾಗೂ ರುಸ್ಸೋ-ಬ್ರಿಟಿಷ್ . . . | 239.3 | 169.1 | 408.4 |
| ಅ. 3) ಐದು ಬ್ಯಾಂಕುಗಳು: ರಷ್ಯನ್-ಏಷ್ಯಾಟಿಕ್, ಸೇಂಟ್ ಪೀಟರ್ಸ್‌ಬರ್ಗ್ ಪ್ರೈವೇಟ್, ಅಜೋವ್-ಡಾನ್, ಯೂನಿಯನ್ ಮಾಸ್ಕೋ, ರುಸ್ಸೋ-ಫ್ರೆಂಚ್ ಕಮರ್ಷಿಯಲ್ . . . | 711.8 | 661.2 | 1,373.0 |
| (11 ಬ್ಯಾಂಕುಗಳು) ಮೊತ್ತ: ಅ) = | 1,364.8 | 1,689.4 | 3,054.2 |
| ಆ. ಎಂಟು ಬ್ಯಾಂಕುಗಳು: ಮಾಸ್ಕೋ ಮರ್ಚೆಂಟ್ಸ್, ವೋಲ್ಗಾ-ಕಾಮಾ, ಯುಂಕರ್ ಅಂಡ್ ಕಂಪನಿ, ಸೇಂಟ್ ಪೀಟರ್ಸ್‌ಬರ್ಗ್ ಕಮರ್ಷಿಯಲ್ (ಹಿಂದೆ ವಾವೆಲ್‌ಬರ್ಗ್), ಬ್ಯಾಂಕ್ ಆಫ್ ಮಾಸ್ಕೋ (ಹಿಂದೆ ರ್‍ಯಾಬುಷಿನ್‌ಸ್ಕಿ ಬ್ಯಾಂಕು), ಮಾಸ್ಕೋ ಡಿಸ್ಕೌಂಟ್, ಮಾಸ್ಕೋ ಕಮರ್ಷಿಯಲ್, ಮಾಸ್ಕೋ ಪ್ರೈವೇಟ್ . . . . | 504.2 | 391.1 | 895.3 |
| (19 ಬ್ಯಾಂಕುಗಳು) ಮೊತ್ತ . . . . | 1,869.0 | 2,080.5 | 3,949.5 |

ಈ ಸಂಖ್ಯೆಗಳ ಪ್ರಕಾರ ದೊಡ್ಡ ಬ್ಯಾಂಕುಗಳ ಸುಮಾರು ನಾಲ್ಕು ಸಾವಿರ ಮಿಲಿಯ ರೂಬಲ್‌ಗಳ "ವರ್ಕಿಂಗ್" (ಕಾರ್ಯೋಪಯೋಗಿ) ಬಂಡವಾಳದಲ್ಲಿ ಮುಕ್ಕಾಲು ಪಾಲಿಗೂ ಹೆಚ್ಚು, ಮೂರು ಸಾವಿರ ಮಿಲಿಯ ರೂಬಲ್‌ಗಳಿಗೂ ಹೆಚ್ಚು, ವಾಸ್ತವವಾಗಿ ವಿದೇಶೀ ಬ್ಯಾಂಕುಗಳ, ಪ್ರಧಾನವಾಗಿ ಪ್ಯಾರಿಸ್ ಬ್ಯಾಂಕುಗಳ (ಸುಪ್ರಸಿದ್ಧ ತ್ರಯ: 'Union Parisienne', 'Paris et Pays-Bas,' 'Société Générale') ಹಾಗೂ ಬರ್ಲಿನ್ ಬ್ಯಾಂಕುಗಳ (ನಿರ್ದಿಷ್ಟವಾಗಿ 'Deutsche Bank' ಹಾಗೂ 'Disconto-Gesellschaft') "ಮಗಳು ಬ್ಯಾಂಕುಗಳಿ"ಗಷ್ಟೆ ಸೇರಿದ್ದವು. ಅತ್ಯಂತ ದೊಡ್ಡ ರಷ್ಯನ್ ಬ್ಯಾಂಕುಗಳ ಲ್ಲೆರಡು, 'ರಷ್ಯನ್ ಬ್ಯಾಂಕ್' ('ವಿದೇಶಾಂಗ ವ್ಯಾಪಾರದ ರಷ್ಯನ್ ಬ್ಯಾಂಕ್') ಹಾಗೂ 'ಅಂತರರಾಷ್ಟ್ರೀಯ ಬ್ಯಾಂಕ್' ('ಸೇಂಟ್ ಪೀಟರ್ಸ್‌ಬರ್ಗ್ ಅಂತರರಾಷ್ಟ್ರೀಯ ವಾಣಿಜ್ಯ ಬ್ಯಾಂಕ್'), 1906 ಹಾಗೂ 1912ರ ನಡುವೆ, "ಮುಕ್ಕಾಲು ಭಾಗ ಜರ್ಮನ್ ಬಂಡವಾಳವನ್ನು ಬಳಸಿಕೊಂಡು" ತಮ್ಮ ಬಂಡವಾಳವನ್ನು 44 ಮಿಲಿಯ ದಿಂದ 98 ಮಿಲಿಯ ರೂಬಲ್‌ಗಳಿಗೂ, ತಮ್ಮ ಮೀಸಲು ನಿಧಿಗಳನ್ನು 15 ಮಿಲಿಯದಿಂದ 39 ಮಿಲಿಯಕ್ಕೂ ಹೆಚ್ಚಿಸಿಕೊಂಡವು. ಇವೆರಡರಲ್ಲಿ ಮೊದಲಿನದು ಬರ್ಲಿನ್ 'ಡೊಯ್ಚ್ ಬ್ಯಾಂಕ್' "ಸಂಸ್ಥೆ"("concern")ಗೆ ಸೇರಿದುದು, ಎರಡನೆ ಯದು ಬರ್ಲಿನ್ 'ಡಿಸ್ಕೊಂಟೊ-ಗೆಸೆಲ್‌ಷಾಫ್ಟ್' "ಸಂಸ್ಥೆ"ಗೆ ಸೇರಿದುದು. ಈ ಬ್ಯಾಂಕು ಗಳ ಷೇರುಗಳಲ್ಲಿ ಬಹುಭಾಗವನ್ನು ಬರ್ಲಿನ್ ಬ್ಯಾಂಕುಗಳೇ ಹೊಂದಿವೆ, ಆದ್ದ ರಿಂದ ರಷ್ಯನ್ ಷೇರುದಾರರು ಅಶಕ್ತರಾಗಿದ್ದಾರೆ, ಎಂಬ ವಾಸ್ತವಾಂಶದ ಬಗೆಗೆ ಶ್ರೀಮಾನ್ ಅಗಾಡ್ ತುಂಬ ಕೋಪಗೊಂಡಿದ್ದಾರೆ. ಬಂಡವಾಳವನ್ನು ರಫ್ತು ಮಾಡುವ ದೇಶ, ಸಹಜವಾಗಿಯೇ, ಕೆನೆಯನ್ನು ತಾನೇ ತೆಗೆದುಕೊಳ್ಳುತ್ತದೆ. ಉದಾಹರಣೆಗೆ, ಬರ್ಲಿನ್ ಡೊಯ್ಚ್ ಬ್ಯಾಂಕು ಸೈಬೀರಿಯನ್ ಕಮರ್ಷಿಯಲ್ ಬ್ಯಾಂಕಿನ ಷೇರು ಗಳನ್ನು ಬರ್ಲಿನ್ ಮಾರುಕಟ್ಟೆಯಲ್ಲಿರಿಸುವಾಗ, ಒಂದು ಇಡೀ ವರ್ಷ ಅವುಗಳನ್ನು ತನ್ನ ಪೆಟ್ಟಿಗೆಯಲ್ಲೇ ಇಟ್ಟಿದ್ದಿತು, ಅನಂತರ ಅವನ್ನು 100ಕ್ಕೆ 193ರಂತೆ ಮಾರಿತು, ಹೀಗೆ ಅವುಗಳ ನಾಮಿಕ ಮೌಲ್ಯದ ಸುಮಾರು ಇಮ್ಮಡಿಗೆ ಮಾರಿ ಸುಮಾರು 6 ಮಿಲಿಯ ರೂಬಲ್ ಲಾಭ "ಗಳಿಸಿತು." ಹಿಲ್ಫೆರ್ಡಿಂಗ್‌ರು ಇದನ್ನು "ಪ್ರಮೋಟರ್ಸ್ ಪ್ರಾಫಿಟ್" (ಪ್ರವರ್ತಕರ ಲಾಭ) ಎಂದು ಕರೆಯುತ್ತಾರೆ.

ನಮ್ಮ ಲೇಖಕರು ಪ್ರಧಾನ ಸೇಂಟ್ ಪೀಟರ್ಸ್‌ಬರ್ಗ್ ಬ್ಯಾಂಕುಗಳ ಒಟ್ಟು "ಸಾಮರ್ಥ್ಯ"ವನ್ನು 8,235 ಮಿಲಿಯ, ಅಥವಾ ಸುಮಾರು 8$^1/_4$ ಬಿಲಿಯ ಎಂದು ತಿಳಿಸುತ್ತಾರೆ. ಅವುಗಳ "ಹೋಲ್ಡಿಂಗು"ಗಳನ್ನು ಅಥವಾ ವಿದೇಶೀ ಬ್ಯಾಂಕುಗಳು ಅವುಗಳ ಮೇಲೆ ಎಷ್ಟು ಪ್ರಮಾಣದಲ್ಲಿ ಆಧಿಪತ್ಯ ಹೊಂದಿವೆ ಎಂಬುದನ್ನು ಈ ಕೆಳಗಿನಂತೆ ಅಂದಾಜು ಮಾಡುತ್ತಾರೆ: ಫ್ರೆಂಚ್ ಬ್ಯಾಂಕುಗಳು ಶೇ. 55; ಇಂಗ್ಲಿಷ್ ಬ್ಯಾಂಕುಗಳು ಶೇ. 10; ಜರ್ಮನ್ ಬ್ಯಾಂಕುಗಳು ಶೇ. 35. ಒಟ್ಟು 8,235 ಮಿಲಿಯ

ರೂಬಲ್‌ಗಳ ಕಾರ್ಯೋಪಯೋಗಿ ಬಂಡವಾಳದಲ್ಲಿ 3,687 ಮಿಲಿಯ ರೂಬಲ್‌ಗಳು, ಅಥವಾ ಶೇ. 40ಕ್ಕೂ ಹೆಚ್ಚು ಭಾಗ, ಪ್ರೊಡೂಗಲ್ ಹಾಗೂ ಪ್ರೊಡಮೆಟ್ ಸಿಂಡಿಕೇಟ್‌ಗಳ ಹಾಗೂ ತೈಲ, ಲೋಹೋತ್ಪತ್ತಿ ಮತ್ತು ಸಿಮೆಂಟ್ ಕೈಗಾರಿಕೆಗಳ ಸಿಂಡಿಕೇಟ್‌ಗಳ ಪಾಲಿಗೆ ಹೋಗುತ್ತದೆ, ಎಂದು ಲೇಖಕರು ಲೆಕ್ಕ ಹಾಕುತ್ತಾರೆ. ಹಾಗಾಗಿ, ಬಂಡವಾಳಶಾಹಿ ಏಕಸ್ವಾಮ್ಯ ಸಂಸ್ಥೆಗಳ ನಿರ್ಮಾಣದಿಂದಾಗಿ ರಷ್ಯದಲ್ಲಿಯೂ ಬ್ಯಾಂಕುಗಳ ಹಾಗೂ ಕೈಗಾರಿಕೆಗಳ ಬಂಡವಾಳಗಳು ಮಿಳನಗೊಳ್ಳುವುದು ಭಾರಿ ಹೆಜ್ಜೆ ಹಾಕಿಕೊಂಡು ನಡೆದಿದೆ.

ಕೆಲವೇ ಜನರ ಕೈಗಳಲ್ಲಿ ಸಾಂದ್ರೀಕೃತವಾಗಿ, ಕಾರ್ಯತಃ ಏಕಸ್ವಾಮ್ಯವನ್ನು ಚಲಾಯಿಸುವ ಹಣಕಾಸು ಬಂಡವಾಳವು ಕಂಪನಿಗಳನ್ನು ಪ್ರಾರಂಭಿಸುವುದು, ಷೇರುಗಳನ್ನು ಹೊರಡಿಸುವುದು, ರಾಜ್ಯ ಸಾಲಗಳನ್ನು ಜಾರಿಗೆ ತರುವುದು, ಇತ್ಯಾದಿಗಳ ಮೂಲಕ ಅತ್ಯಪಾರವಾದ ಹಾಗೂ ಸತತವಾಗಿ ಹೆಚ್ಚುವ ಲಾಭಗಳನ್ನು ಸೆಳೆಯುತ್ತದೆ, ಹಣಕಾಸು ಆಲಿಗಾರ್ಕಿಯ ಆಧಿಪತ್ಯವನ್ನು ದೃಢಗೊಳಿಸುತ್ತದೆ ಮತ್ತು ಏಕಸ್ವಾಮ್ಯಾಧಿಪತಿಗಳ ಲಾಭಕ್ಕಾಗಿ ಇಡೀ ಸಮಾಜದ ಮೇಲೆ ಕಪ್ಪವನ್ನು ವಿಧಿಸುತ್ತದೆ. ಅಮೆರಿಕನ್ ಟ್ರಸ್ಟುಗಳು ಉಪಯೋಗಿಸುವ "ವ್ಯವಹಾರ"ಗಳ ಬಗೆಗೆ ಹಿಲ್ಫೆರ್ಡಿಂಗ್‌ರು ನೀಡಿರುವ ಅನೇಕಾನೇಕ ನಿದರ್ಶನಗಳಲ್ಲಿ ಈ ಕೆಳಗಿನದೂ ಒಂದಾಗಿದೆ: 1887ರಲ್ಲಿ ಹ್ಯಾವೆಮೇಯರ್‌ರವರು ಹದಿನೈದು ಸಣ್ಣ ಸಂಸ್ಥೆಗಳನ್ನು ಒಂದುಗೂಡಿಸಿ ಒಂದು ಸಕ್ಕರೆ ಟ್ರಸ್ಟ್ ಏರ್ಪಡಿಸಿದರು. ಇದರ ಒಟ್ಟು ಬಂಡವಾಳ 6.5 ಮಿಲಿಯ ಡಾಲರುಗಳಾಗಿದ್ದಿತು. ಅಮೆರಿಕನರು ಹೇಳುವಂತೆ, ಸಾಕಷ್ಟು "ನೀರು ಬೆರಸಿ" ಟ್ರಸ್ಟಿನ ಬಂಡವಾಳವನ್ನು 50 ಮಿಲಿಯ ಡಾಲರುಗಳೆಂದು ಘೋಷಿಸಲಾಯಿತು. ಈ "ಅಧಿಕ ಬಂಡವಾಳೀಕರಣ"ವು ಏಕಸ್ವಾಮ್ಯ ಲಾಭಗಳನ್ನು ಮುನ್ನವೇ ಖಾತರಿ ಪಡಿಸಿತು – ಸಂಯುಕ್ತ ಸಂಸ್ಥಾನಗಳ ಉಕ್ಕಿನ ಕಾರ್ಪೊರೇಷನ್ ತನ್ನ ಭವಿಷ್ಯತ್ತಿನ ಏಕಸ್ವಾಮ್ಯ ಲಾಭಗಳನ್ನು ಸಾಧ್ಯವಾದಷ್ಟೂ ಹೆಚ್ಚು ಸಂಖ್ಯೆಯಲ್ಲಿ ಕಬ್ಬಿಣದ ಅದುರಿನ ಕ್ಷೇತ್ರಗಳನ್ನು ಕೊಳ್ಳುವ ಮೂಲಕ ಮುನ್ನವೇ ಖಾತರಿ ಪಡಿಸಿಕೊಳ್ಳುವ ರೀತಿಯಲ್ಲೇ. ವಾಸ್ತವವಾಗಿ ಸಕ್ಕರೆ ಟ್ರಸ್ಟು ಏಕಸ್ವಾಮ್ಯ ಬೆಲೆಗಳನ್ನು ಗೊತ್ತುಪಡಿಸಿತು. ಅದು ಟ್ರಸ್ಟಿಗೆ ಎಷ್ಟು ಲಾಭ ತಂದುಕೊಟ್ಟಿತೆಂದರೆ, ಟ್ರಸ್ಟು "ನೀರು ಬೆರಸಿ" ಏಳು ಪಟ್ಟು ಹೆಚ್ಚಿಸಿದ ಬಂಡವಾಳದ ಮೇಲೆ ಶೇ. 10ರಷ್ಟು ಅಥವಾ ಟ್ರಸ್ಟು ರೂಪುಗೊಂಡ ಕಾಲದಲ್ಲಿ ವಾಸ್ತವವಾಗಿ ಹಾಕಿದ ಬಂಡವಾಳದ ಮೇಲೆ ಸುಮಾರು ಶೇ. 70ರಷ್ಟು ಡಿವಿಡೆಂಡ್ ನೀಡಬಲ್ಲುದಿದ್ದಿತು! 1909ರಲ್ಲಿ ಸಕ್ಕರೆ ಟ್ರಸ್ಟಿನ ಬಂಡವಾಳವು 90 ಮಿಲಿಯ ಡಾಲರುಗಳಾಗಿದ್ದಿತು. 22 ವರ್ಷಗಳ ಕಾಲದಲ್ಲಿ ಅದು ತನ್ನ ಬಂಡವಾಳವನ್ನು ಹತ್ತು ಪಟ್ಟಿಗೂ ಮೀರಿ ಹೆಚ್ಚಿಸಿಕೊಂಡಿದ್ದಿತು.

ಫ್ರಾನ್ಸಿನಲ್ಲಿ "ಹಣಕಾಸು ಆಲಿಗಾರ್ಕಿ"ಯ ಆಧಿಪತ್ಯವು ('ಫ್ರಾನ್ಸಿನಲ್ಲಿ ಹಣಕಾಸು ಆಲಿಗಾರ್ಕಿಯ ವಿರುದ್ಧ' – ಇದು ಲಿಸಿಸ್ ರಚಿಸಿದ ಸುಪ್ರಸಿದ್ಧ ಕೃತಿಯ ಶೀರ್ಷಿಕೆ,

1908ರಲ್ಲಿ ಇದರ ಐದನೆಯ ಆವೃತ್ತಿ ಪ್ರಕಟವಾಯಿತು) ಸ್ವಲ್ಪವಷ್ಟೆ ಭಿನ್ನವಾದ ರೂಪ ತಳೆಯಿತು. ಅತ್ಯಂತ ಪ್ರಬಲವಾದ ನಾಲ್ಕು ಬ್ಯಾಂಕುಗಳು ಬಾಂಡುಗಳನ್ನು ಹೊರಡಿಸುವುದರಲ್ಲಿ ಸಾಪೇಕ್ಷವಲ್ಲ ಆದರೆ "ನಿರಪೇಕ್ಷ ಏಕಸ್ವಾಮ್ಯ"ವನ್ನು ಪಡೆದು ಕೊಂಡಿವೆ. ವಾಸ್ತವವಾಗಿ, ಇದು "ದೊಡ್ಡ ಬ್ಯಾಂಕುಗಳ ಒಂದು ಟ್ರಸ್ಟು." ಏಕ ಸ್ವಾಮ್ಯವು ಬಾಂಡುಗಳನ್ನು ಹೊರಡಿಸುವ ಮೂಲಕ ಏಕಸ್ವಾಮ್ಯವಾದಿ ಲಾಭಗಳನ್ನು ಖಚಿತಪಡಿಸಿಕೊಡುತ್ತದೆ. ಸಾಮಾನ್ಯವಾಗಿ ಸಾಲ ತೆಗೆದುಕೊಳ್ಳುವ ದೇಶವು ಸಾಲದ ಪ್ರಮಾಣದಲ್ಲಿ ಶೇ. 90ಕ್ಕಿಂತ ಹೆಚ್ಚಿಗೆ ಪಡೆಯುವುದಿಲ್ಲ. ಈ ಉಳಿದ ಶೇ. 10 ಭಾಗವು ಬ್ಯಾಂಕುಗಳಿಗೂ ಇತರ ಮಧ್ಯವರ್ತಿಗಳಿಗೂ ಹೋಗುತ್ತದೆ. 400 ಮಿಲಿಯ ಫ್ರಾಂಕುಗಳ ರುಸ್ಸೋ-ಚೀಣೀ ಸಾಲದಿಂದ ಬ್ಯಾಂಕುಗಳು ಮಾಡಿದ ಲಾಭ ಶೇ. 8ರಷ್ಟಾಗಿದ್ದಿತು; 800 ಮಿಲಿಯ ಫ್ರಾಂಕುಗಳ ರಷ್ಯನ್ ಸಾಲ(1904)ದಿಂದ ಮಾಡಿದ ಲಾಭ ಶೇ. 10 ಆಗಿದ್ದಿತು; 62.5 ಮಿಲಿಯ ಫ್ರಾಂಕುಗಳ ಮೊರಾಕ್ಕೋ ಸಾಲ(1904) ದಿಂದ ಪಡೆದ ಲಾಭ ಶೇ. 18.75 ಆಗಿದ್ದಿತು. ಪುಟ್ಟ ದುಬಾರಿಬಡ್ಡಿ ಬಂಡವಾಳದಿಂದ ತನ್ನ ವಿಕಾಸವನ್ನು ಆರಂಭಿಸಿದ ಬಂಡವಾಳವಾದವು ತನ್ನ ಬೆಳವಣಿಗೆಯನ್ನು ಬೃಹತ್ ದುಬಾರಿಬಡ್ಡಿ ಬಂಡವಾಳವಾಗಿ ಕೊನೆಗಾಣಿಸುತ್ತಿದೆ. "ಫ್ರೆಂಚರು ಯೂರೋಪಿನ ದುಬಾರಿಬಡ್ಡಿಗಾರರು" ಎಂದು ಲಿಸಿಸ್ ಹೇಳುತ್ತಾರೆ. ಆರ್ಥಿಕ ಜೀವನದ ಎಲ್ಲ ಪರಿಸ್ಥಿತಿಗಳೂ ಬಂಡವಾಳವಾದದ ಈ ಪರಿವರ್ತನೆಯಿಂದ ಪ್ರಗಾಢವಾಗಿ ಮಾರ್ಪ ಡುತ್ತಿವೆ. ಜನಸಂಖ್ಯೆ ಇದ್ದಷ್ಟೆ ಇದ್ದರೂ, ಕೈಗಾರಿಕೆ, ವಾಣಿಜ್ಯ ಹಾಗೂ ನೌಕಾಯಾನ ಗಳು ಸ್ಥಗಿತವಾಗಿದ್ದರೂ, "ದೇಶ"ವೊಂದು ದುಬಾರಿಬಡ್ಡಿಯ ಮೂಲಕ ಸಿರಿವಂತ ವಾಗಿ ಬೆಳೆಯಬಲ್ಲುದು. "8 ಮಿಲಿಯ ಫ್ರಾಂಕುಗಳ ಬಂಡವಾಳವನ್ನು ಪ್ರತಿನಿಧಿ ಸುವ ಐವತ್ತು ಮಂದಿ, ನಾಲ್ಕು ಬ್ಯಾಂಕುಗಳಲ್ಲಿ ಡಿಪಾಜಿಟ್ ಆಗಿರುವ 2,000 ಮಿಲಿಯ ಫ್ರಾಂಕುಗಳನ್ನು ನಿಯಂತ್ರಿಸಬಲ್ಲರು." ನಮಗೆ ಆಗಲೇ ಸುಪರಿಚಿತವಾಗಿ ರುವ "ಹೋಲ್ಡಿಂಗ್ ಪದ್ಧತಿ"ಯೂ ಇದೇ ಪರಿಣಾಮಕ್ಕೆ ದಾರಿ ಮಾಡಿಕೊಡು ತ್ತದೆ. ಉದಾಹರಣೆಗೆ, ಅತ್ಯಂತ ದೊಡ್ಡ ಬ್ಯಾಂಕುಗಳಲ್ಲೊಂದಾದ 'ಸೊಸೈಟಿ ಜನ ರಲ್' ತನ್ನ "ಮಗಳು ಕಂಪನಿ" 'ಈಜಿಪ್ಷಿಯನ್ ಷುಗರ್ ರಿಫೈನರೀಸ್'ಗಾಗಿ 64,000 ಬಾಂಡುಗಳನ್ನು ಹೊರಡಿಸುತ್ತದೆ. ಈ ಬಾಂಡುಗಳನ್ನು ಶೇ. 150ರಂತೆ ಹೊರಡಿ ಸುತ್ತದೆ. ಅಂದರೆ ಬ್ಯಾಂಕು ಒಂದೊಂದೂ ಫ್ರಾಂಕ್ ಮೇಲೆ 50 ಸೆಂಟೈಮ್ಸ್ ಸಂಪಾದಿಸುತ್ತದೆ. ಹೊಸ ಕಂಪನಿಯ ಡಿವಿಡೆಂಡುಗಳು ಖೋಟಾ ಎಂದು ಕಂಡು ಬಂದಿತು, "ಸಾರ್ವಜನಿಕರು" 90ರಿಂದ 100 ಮಿಲಿಯ ಫ್ರಾಂಕುಗಳ ನಷ್ಟವನ್ನು ಅನುಭವಿಸಿದರು. " 'ಸೊಸೈಟಿ ಜನರಲ್ ಬ್ಯಾಂಕಿ'ನ ಡೈರೆಕ್ಟರುಗಳಲ್ಲೊಬ್ಬರು 'ಷುಗರ್ ರಿಫೈನರೀಸ್'ನ ಡೈರೆಕ್ಟರುಗಳ ಮಂಡಳಿಯ ಸದಸ್ಯರಾಗಿದ್ದರು." "ಫ್ರೆಂಚ್ ರಿಪಬ್ಲಿಕ್ಕು ಒಂದು ಹಣಕಾಸು ರಾಜಪ್ರಭುತ್ವ," "ಅದು ಹಣಕಾಸು ಆಲಿಗಾರ್ಕಿಯ ಸಂಪೂರ್ಣ ಆಧಿಪತ್ಯವಾಗಿದೆ; ಈ ಆಲಿಗಾರ್ಕಿಯು ಪತ್ರಿಕೆಗಳ ಮೇಲೂ ಸರಕಾರದ ಮೇಲೂ

ತನ್ನ ಆಧಿಪತ್ಯ ಚಲಾಯಿಸುತ್ತದೆ” ಎಂದು ಲೇಖಕರು ತೀರ್ಮಾನಕ್ಕೆ ಬಂದುದರಲ್ಲಿ ಆಶ್ಚರ್ಯವೇನಿಲ್ಲ.*

ಸೆಕ್ಯೂರಿಟಿಗಳನ್ನು ಹೊರಡಿಸುವುದರಿಂದ ಅತ್ಯಸಾಧಾರಣ ಉನ್ನತ ದರದ ಲಾಭ ಪಡೆದುಕೊಳ್ಳುವುದು ಹಣಕಾಸು ಬಂಡವಾಳದ ಪ್ರಧಾನ ಕ್ರಿಯೆಗಳಲ್ಲೊಂದಾಗಿದೆ. ಇದು ಹಣಕಾಸು ಆಲಿಗಾರ್ಕಿಯ ಬೆಳವಣಿಗೆ ಹಾಗೂ ದೃಢೀಕರಣದಲ್ಲಿ ಒಂದು ಅತ್ಯಂತ ಮುಖ್ಯ ಪಾತ್ರ ನಿರ್ವಹಿಸುತ್ತದೆ. “ವಿದೇಶೀ ಸಾಲಗಳನ್ನು ಚಲಾವಣೆಗೆ ತರುವುದರಿಂದ ಪಡೆಯುವ ಲಾಭಕ್ಕೆ ಸರಿಸುಮಾರಾಗಿಯಾದರೂ ಸಮನಾದಂಥ ಲಾಭ ತಂದುಕೊಡುವ ಈ ಮಾದರಿಯ ಏಕೈಕ ವ್ಯಾಪಾರವೂ ದೇಶದೊಳಗಿಲ್ಲ” ಎಂದು ಹೇಳುತ್ತದೆ ಜರ್ಮನ್ ಪತ್ರಿಕೆ ‘ದಿ ಬ್ಯಾಂಕ್.’**

“ಸೆಕ್ಯೂರಿಟಿಗಳನ್ನು ಹೊರಡಿಸುವುದರಿಂದ ಪಡೆಯುವುದಕ್ಕೆ ಹೋಲಿಸಬಹುದಾದಂಥ ಲಾಭಗಳನ್ನು ಯಾವ ಬ್ಯಾಂಕಿಂಗ್ ಕಾರ್ಯಾಚರಣೆಯೂ ತಂದುಕೊಡದು !” ‘ಜರ್ಮನ್ ಇಕಾನಮಿಸ್ಟ್’ ಪತ್ರಿಕೆಯ ಪ್ರಕಾರ ಕೈಗಾರಿಕಾ ಬಂಡವಾಳವನ್ನು ಜಾರಿಗೆ ತಂದುದರಿಂದ ಪಡೆಯಲಾದ ಸರಾಸರಿ ವಾರ್ಷಿಕ ಲಾಭಗಳು ಈ ಕೆಳಗಿನಂತಿದ್ದವು:

| | ಶೇಕಡಾ |
|---|---|
| 1895 . . . . . . | 38.6 |
| 1896 . . . . . . | 36.1 |
| 1897 . . . . . . | 66.7 |
| 1898 . . . . . . | 67.7 |
| 1899 . . . . . . | 66.9 |
| 1900 . . . . . . | 55.2 |

“1891ರಿಂದ 1900ರವರೆಗಿನ ಹತ್ತು ವರ್ಷಗಳಲ್ಲಿ ಜರ್ಮನ್ ಕೈಗಾರಿಕಾ ಬಂಡವಾಳವನ್ನು ಜಾರಿಗೆ ತರುವ ಮೂಲಕ ಒಂದು ಸಾವಿರ ಮಿಲಿಯಕ್ಕೂ ಹೆಚ್ಚು ಮಾರ್ಕುಗಳನ್ನು ‘ಸಂಪಾದಿಸಲಾಯಿತು.’ ”***

---

* Lysis, *Contre l'oligarchie financière en France*, 5 éd., P. (ಲಿಸಿಸ್, ‘ಫ್ರಾನ್ಸಿನಲ್ಲಿ ಹಣಕಾಸು ಆಲಿಗಾರ್ಕಿಗೆ ವಿರುದ್ಧವಾಗಿ,’ 5ನೆಯ ಆವೃತ್ತಿ, ಪ್ಯಾರಿಸ್. – ಸಂ.), 1908, ಪು. 11, 12, 26, 39, 40, 48.

** *Die Bank*, 1913, ಸಂ. 7, ಪು. 630.

*** ಷ್ಟಿಲ್ಲಿಹ್, ಪೂರ್ವೋಕ್ತ ಗ್ರಂಥ, ಪು. 143 ಮತ್ತು W. Sombart, *Die deutsche Volkswirtschaft im 19 Jahrhundert*, 2. Aufl., 1909,

ಕೈಗಾರಿಕಾ ಉತ್ಕರ್ಷದ ಕಾಲದಲ್ಲಿ ಹಣಕಾಸು ಬಂಡವಾಳದ ಲಾಭಗಳು ಬಹು ಭಾರಿಯಾಗಿರುತ್ತವೆ, ಆದರೆ ಕುಸಿತದ ಕಾಲದಲ್ಲಿ ಪುಟ್ಟ ದೃಢವಲ್ಲದ ಉದ್ಯಮಗಳು ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ; ದೊಡ್ಡ ಬ್ಯಾಂಕುಗಳು ಅವನ್ನು ಅತ್ಯಂತ ಕಮ್ಮಿ ಬೆಲೆಗೆ ಕೊಳ್ಳುವ ಮೂಲಕ ಅವುಗಳಲ್ಲಿ "ಹೋಲ್ಡಿಂಗು"ಗಳನ್ನು ಪಡೆದುಕೊಳ್ಳುತ್ತವೆ, ಅಥವಾ ಅವುಗಳ "ಪುನರ್‌ನಿರ್ಮಾಣ" ಹಾಗೂ "ಪುನಸ್ಸಂಘಟನೆ" ಎಂಬ ಲಾಭದಾಯಕ ಯೋಜನೆಗಳಲ್ಲಿ ಭಾಗವಹಿಸುತ್ತವೆ. ನಷ್ಟದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳ "ಪುನರ್‌ನಿರ್ಮಾಣ"ದಲ್ಲಿ "ಷೇರು ಬಂಡವಾಳವನ್ನು ತಗ್ಗಿಸಿ ಬರೆಯಲಾಗುತ್ತದೆ, ಅಂದರೆ, ಕಮ್ಮಿ ಬಂಡವಾಳದ ಮೇಲೆ ಲಾಭಗಳನ್ನು ಹಂಚಲಾಗುತ್ತದೆ ಮತ್ತು ಈ ಕಮ್ಮಿ ಬಂಡವಾಳದ ಆಧಾರದ ಮೇಲೆಯೇ ಲೆಕ್ಕ ಹಾಕುವುದನ್ನು ಮುಂದುವರಿಸಲಾಗುತ್ತದೆ. ಅಥವಾ, ಆದಾಯವು ಸೊನ್ನೆಯ ಮಟ್ಟಕ್ಕೆ ಇಳಿದಿದ್ದರೆ, ಹೊಸ ಬಂಡವಾಳವನ್ನು ತೆಗೆದುಕೊಳ್ಳಲಾಗುತ್ತದೆ, ಇದು ಹಳೆಯ ಕಮ್ಮಿ ಲಾಭದಾಯಕವಾದ ಬಂಡವಾಳದೊಂದಿಗೆ ಸೇರಿಕೊಂಡು ಸಾಕಷ್ಟು ಪ್ರತಿಫಲವನ್ನು ತಂದುಕೊಡುವುದು." ಹಿಲ್ಫೆರ್ಡಿಂಗ್‌ರು ಈ ಮಾತನ್ನೂ ಸೇರಿಸುತ್ತಾರೆ: "ಅಂದಹಾಗೇ, ಈ ಎಲ್ಲ 'ಪುನಸ್ಸಂಘಟನೆಗಳೂ ಪುನರ್‌ನಿರ್ಮಾಣಗಳೂ' ಬ್ಯಾಂಕುಗಳಿಗೆ ಇಬ್ಬಗೆಯ ಪ್ರಾಮುಖ್ಯ ಹೊಂದಿರುತ್ತವೆ: ಮೊದಲನೆಯದು, ಲಾಭದಾಯಕ ವ್ಯವಹಾರಗಳಾಗಿ; ಎರಡನೆಯದು, ಕಷ್ಟದಲ್ಲಿರುವ ಕಂಪನಿಗಳ ಮೇಲೆ ನಿಯಂತ್ರಣ ಪಡೆದುಕೊಳ್ಳುವ ಅವಕಾಶಗಳಾಗಿ." *

ಇಲ್ಲೊಂದು ಉದಾಹರಣೆ: ಡಾರ್ಟ್‌ಮುಂಡ್‌ನ 'ಯೂನಿಯನ್ ಮೈನಿಂಗ್ ಕಂಪನಿ'ಯನ್ನು 1872ರಲ್ಲಿ ಸ್ಥಾಪಿಸಲಾಯಿತು. ಸುಮಾರು 40 ಮಿಲಿಯ ಮಾರ್ಕುಗಳಾಗುವಷ್ಟು ಷೇರು ಬಂಡವಾಳವನ್ನು ಹೊರಡಿಸಲಾಯಿತು. ಅದು ಮೊದಲ ವರ್ಷವೇ ಶೇ. 12ರಷ್ಟು ಡಿವಿಡೆಂಡುಗಳನ್ನು ನೀಡಿದುದರ ಫಲವಾಗಿ ಅದರ ಷೇರುಗಳ ಮಾರುಕಟ್ಟೆ ಬೆಲೆ 170ಕ್ಕೆ ಏರಿತು. ಹಣಕಾಸು ಬಂಡವಾಳವೇ ಮೇಲಿನ ಕೆನೆಯನ್ನೆಲ್ಲ ತಾನೇ ಪಡೆದುಕೊಂಡಿತು, 28 ಮಿಲಿಯ ಮಾರ್ಕುಗಳಾಗುವಷ್ಟು ಮೊತ್ತವನ್ನು ಗಳಿಸಿಕೊಂಡಿತು. ಅತಿ ದೊಡ್ಡ ಜರ್ಮನ್ ಬ್ಯಾಂಕ್ 'ಡಿಸ್ಕೊಂಟೊ-ಗೆಸೆಲ್‌ಷಾಫ್ಟ್' ಈ ಕಂಪನಿಯ ಪ್ರಧಾನ ಹೊಣೆಗಾರನಾಗಿದ್ದಿತು. ಅದು ಅತ್ಯಂತ ಯಶಸ್ವಿಯಾಗಿ 300 ಮಿಲಿಯ ಮಾರ್ಕುಗಳ ಬಂಡವಾಳವನ್ನು ಪಡೆದುಕೊಂಡಿತು. ಅನಂತರ 'ಯೂನಿಯನ್'ನ ಡಿವಿಡೆಂಡುಗಳು ಸೊನ್ನೆಗೆ ಇಳಿದವು. ಷೇರುದಾರರು

---

S. 526, Anlage 8 (ಡಬ್ಲ್ಯು. ಸೋಂಬರ್ಟ್, 'ಹತ್ತೊಂಬತ್ತನೆಯ ಶತಮಾನದಲ್ಲಿ ಜರ್ಮನ್ ರಾಷ್ಟ್ರೀಯ ಆರ್ಥಿಕತೆ,' ಎರಡನೆಯ ಆವೃತ್ತಿ, 1909, ಪು. 526, ಅನುಬಂಧ 8. – ಸಂ.).

* 'ಹಣಕಾಸು ಬಂಡವಾಳ,' ಪು. 172.

ಬಂಡವಾಳವನ್ನು "ತಗ್ಗಿಸಿ ಬರೆಯುವುದಕ್ಕೆ," ಅಂದರೆ ಎಲ್ಲವನ್ನೂ ಕಳೆದುಕೊಳ್ಳದಿರಲೋಸುಗ ಸ್ವಲ್ಪವನ್ನು ಕಳೆದುಕೊಳ್ಳುವುದಕ್ಕೆ, ಒಪ್ಪಿಕೊಳ್ಳಬೇಕಾಯಿತು. ಈ "ಪುನರ್‌ನಿರ್ಮಾಣಗಳ" ಪರಂಪರೆಯ ಮೂಲಕ ಮೂವತ್ತು ವರ್ಷಗಳ ಅವಧಿಯಲ್ಲಿ 'ಯೂನಿಯನ್'ನ ಲೆಕ್ಕದ ಪುಸ್ತಕಗಳಲ್ಲಿ 73 ಮಿಲಿಯ ಮಾರ್ಕುಗಳಿಗೂ ಹೆಚ್ಚು ಬಂಡವಾಳವನ್ನು ಹೊಡೆದು ಹಾಕಲಾಯಿತು. "ಪ್ರಸ್ತುತದಲ್ಲಿ ಕಂಪನಿಯ ಮೂಲ ಷೇರುದಾರರು ತಮ್ಮ ಷೇರುಗಳ ನಾಮಕ ಮೌಲ್ಯದಲ್ಲಿ ಶೇ. 5ರಷ್ಟನ್ನು ಮಾತ್ರ ಹೊಂದಿದ್ದಾರೆ."* ಆದರೆ ಬ್ಯಾಂಕುಗಳು ಮಾತ್ರ ಪ್ರತಿಯೊಂದು "ಪುನರ್‌ನಿರ್ಮಾಣ"ದಿಂದಲೂ "ಅಷ್ಟು ಇಷ್ಟನ್ನಾದರೂ ಗಳಿಸಿಕೊಂಡವು."

ಶೀಘ್ರವಾಗಿ ಬೆಳೆಯುತ್ತಿರುವ ದೊಡ್ಡ ನಗರಗಳ ಹೊರವಲಯಗಳಲ್ಲಿರುವ ಭೂಮಿಯ ಕಾಳಸಂತೆ ವ್ಯಾಪಾರವೂ ಹಣಕಾಸು ಬಂಡವಾಳಕ್ಕೆ ವಿಶೇಷವಾಗಿ ಲಾಭದಾಯಕವಾದ ಕಾರ್ಯಾಚರಣೆಯಾಗಿರುತ್ತದೆ. ಇಲ್ಲಿ ಬ್ಯಾಂಕುಗಳ ಏಕಸ್ವಾಮ್ಯವು ಭೂಮಿ ಗೇಣಿಯ ಏಕಸ್ವಾಮ್ಯದೊಂದಿಗೂ ಸಾರಿಗೆ ಸಂಪರ್ಕಗಳ ಏಕಸ್ವಾಮ್ಯದೊಂದಿಗೂ ಮಿಳನಗೊಳ್ಳುತ್ತದೆ, ಭೂಮಿಯ ಬೆಲೆಯಲ್ಲಿ ಹೆಚ್ಚಳ, ಅದನ್ನು ಭಾಗಗಳಾಗಿ ಲಾಭಕ್ಕೆ ಮಾರುವ ಸಾಧ್ಯತೆ, ಇತ್ಯಾದಿಗಳು ನಗರದ ಮಧ್ಯಭಾಗದೊಂದಿಗೆ ಉತ್ತಮ ಸಾರಿಗೆ ಸಂಪರ್ಕಗಳ ಮೇಲೆಯೇ ಮುಖ್ಯವಾಗಿ ಅವಲಂಬಿಸಿರುತ್ತವೆ; ಈ ಸಾರಿಗೆ ಸಂಪರ್ಕ ದೊಡ್ಡ ಕಂಪನಿಗಳ ಕೈಗಳಲ್ಲಿರುತ್ತವೆ; ಇವು "ಹೋಲ್ಡಿಂಗ್ ಪದ್ಧತಿ"ಯ ಮೂಲಕವೂ, ಡೈರೆಕ್ಟರೇಟ್‌ಗಳಲ್ಲಿ ಸ್ಥಾನಗಳ ಮೂಲಕವೂ ಈ ದೊಡ್ಡ ಬ್ಯಾಂಕುಗಳೊಂದಿಗೆ ಸಂಬಂಧ ಹೊಂದಿರುತ್ತವೆ. ಇದರ ಫಲವಾಗಿ ನಾವು, ಭೂಮಿ ವ್ಯವಹಾರ ಹಾಗೂ ಅಡಮಾನ ಪದ್ಧತಿ ಇತ್ಯಾದಿಗಳ ವಿಶೇಷ ಅಧ್ಯಯನ ಮಾಡಿರುವ, 'ದಿ ಬ್ಯಾಂಕ್' ಪತ್ರಿಕೆಗೆ ಲೇಖನಗಳನ್ನು ಬರೆಯುವ ಜರ್ಮನ್ ಲೇಖಕ ಎಲ್. ಎಷ್ವೆಗೆಯವರು ಕರೆಯುವಂಥ "ಜೌಗ"ನ್ನು ಪಡೆಯುತ್ತೇವೆ. ನಗರದ ಹೊರವಲಯದಲ್ಲಿನ ನಿರ್ಮಾಣ ನಿವೇಶಗಳ ಉದ್ರಿಕ್ತ ಸಟ್ಟಾ ವ್ಯಾಪಾರ; ನಿರ್ಮಾಣ ಸಂಸ್ಥೆಗಳ ಕುಸಿತ (ಬರ್ಲಿನ್ ಸಂಸ್ಥೆ 'ಬೋಸ್ವಾ ಅಂಡ್ ಕ್ನೌವೆರ್'ನಂತೆ. ಈ ಸಂಸ್ಥೆ "ಭದ್ರವಾದ ಹಾಗೂ ದೃಢವಾದ" 'ಡೊಯ್ಚ್ ಬ್ಯಾಂಕಿ'ನ ಸಹಾಯದಿಂದ 100 ಮಿಲಿಯ ಮಾರ್ಕುಗಳಷ್ಟು ಹಣವನ್ನು ದೋಚಿತು. ಡೊಯ್ಚ್ ಬ್ಯಾಂಕು "ಹೋಲ್ಡಿಂಗ್ ಪದ್ಧತಿ"ಯ ಮೂಲಕ ವರ್ತಿಸುತ್ತ, ಅಂದರೆ ರಹಸ್ಯವಾಗಿ ತೆರೆಮರೆಯಲ್ಲಿ ವರ್ತಿಸುತ್ತ, "ಕೇವಲ" 12 ಮಿಲಿಯ ಮಾರ್ಕುಗಳ ನಷ್ಟದೊಂದಿಗೆ ಈ ವ್ಯವಹಾರದಿಂದ ಹೊರಬಂದಿತು), ಅನಂತರ ಖೋಟಾ ನಿರ್ಮಾಣ ಸಂಸ್ಥೆಗಳಿಂದ ಏನನ್ನೂ ಪಡೆಯದಂಥ ಸಣ್ಣ ಮಾಲೀಕರ ಹಾಗೂ ಕೆಲಸಗಾರರ ಸರ್ವನಾಶ, ನಿರ್ಮಾಣ ನಿವೇಶ ಟೆಂಡರುಗಳು, ನಿರ್ಮಾಣ ಲೈಸನ್ಸ್‌ಗಳು ಇತ್ಯಾದಿ ಇತ್ಯಾದಿಗಳನ್ನು ನೀಡುವುದರ ಮೇಲೆ ಹತೋಟಿ

---

*Stillich, ಅದೇ ಗ್ರಂಥ, ಪು. 138 ಹಾಗೂ Liefmann, ಪು. 51.

ಪಡೆದುಕೊಳ್ಳುವ ಉದ್ದೇಶದಿಂದ "ಸತ್ಯಸಂಧ" ಬರ್ಲಿನ್ ಪೊಲೀಸರೊಂದಿಗೂ ಸರಕಾರೀ ಅಧಿಕಾರಿಗಳೊಂದಿಗೂ ಮೋಸದ ವ್ಯವಹಾರ.*

ಯೂರೋಪಿಯನ್ ಪ್ರಾಧ್ಯಾಪಕರೂ ಸದುದ್ದೇಶದ ಬೂರ್ಷ್ವಾಗಳೂ ಅಷ್ಟು ಕಾಪಟ್ಯದಿಂದ ಯಾವುದರ ಬಗೆಗೆ ಮರುಗುತ್ತಾರೋ ಆ "ಅಮೆರಿಕನ್ ನೀತಿನಡೆವಳಿಗಳು" ಹಣಕಾಸು ಬಂಡವಾಳದ ಯುಗದಲ್ಲಿ ಪ್ರತಿಯೊಂದೂ ದೇಶದಲ್ಲಿ ಅಕ್ಷರಶಃ ಪ್ರತಿಯೊಂದೂ ದೊಡ್ಡ ನಗರದ ನೀತಿನಡೆವಳಿಗಳಾಗಿವೆ.

1914ರ ಆರಂಭದಲ್ಲಿ ಬರ್ಲಿನ್‌ನಲ್ಲಿ "ಸಾರಿಗೆ ಟ್ರಸ್ಟ್" ಸ್ಥಾಪಿಸುವ, ಅಂದರೆ ಬರ್ಲಿನ್‌ನ ಮೂರು ಸಾರಿಗೆ ಸಂಸ್ಥೆಗಳಾದ ಸಿಟಿ ಎಲೆಕ್ಟ್ರಿಕ್ ರೈಲ್ವೇ, ಟ್ರಾಮ್‌ವೇ ಕಂಪನಿ ಹಾಗೂ ಆಮ್ನಿಬಸ್ ಕಂಪನಿ, ಇವುಗಳ ನಡುವೆ "ಹಿತಗಳ ಸಾಮರಸ್ಯ"ವನ್ನು ಸ್ಥಾಪಿಸುವ, ಮಾತು ಕೇಳಿಬಂದಿತು. ಇದಕ್ಕೆ ಸಂಬಂಧಿಸಿ 'ದಿ ಬ್ಯಾಂಕ್' ಹೀಗೆ ಬರೆಯಿತು: "ಆಮ್ನಿಬಸ್ ಕಂಪನಿಯ ಷೇರುಗಳಲ್ಲಿ ಅಧಿಕ ಭಾಗವನ್ನು ಇತರ ಎರಡು ಸಾರಿಗೆ ಕಂಪನಿಗಳೂ ಪಡೆದುಕೊಂಡಿದ್ದವು ಎಂಬುದು ತಿಳಿದುಬಂದನಂತರ ಈ ಯೋಜನೆಯ ವಿಚಾರ ಮಾಡಲಾಗುತ್ತಿದೆ ಎಂದು ನಮಗೆ ತಿಳಿದುಬಂದಿದೆ... ಈ ಸಾರಿಗೆ ವ್ಯವಸ್ಥೆಗಳನ್ನು ಒಂದುಗೂಡಿಸುವ ಮೂಲಕ ತಾವು ಉಳಿತಾಯ ಸಾಧಿಸುವರೆಂದೂ ಹೀಗೆ ಉಳಿಸಿದುದರಲ್ಲಿ ಸ್ವಲ್ಪ ಭಾಗವು ಕಾಲಕ್ರಮೇಣ ಸಾರ್ವಜನಿಕರಿಗೆ ಪ್ರಯೋಜನಕಾರಿಯಾಗುವುದೆಂದೂ ಈ ಐಕ್ಯದ ಗುರಿಯನ್ನು ಅನುಸರಿಸುತ್ತಿರುವವರು ಹೇಳಿದಾಗ ನಾವವರನ್ನು ಸಂಪೂರ್ಣವಾಗಿ ನಂಬಬಹುದು. ಆದರೆ ರೂಪುಗೊಳ್ಳುತ್ತಿರುವ ಸಾರಿಗೆ ಟ್ರಸ್ಟಿನ ಹಿಂದೆ ಬ್ಯಾಂಕುಗಳಿವೆ, ಇವು ಬಯಸಿದಲ್ಲಿ ತಾವು ಏಕಸ್ವಾಮ್ಯಕ್ಕೊಳಪಡಿಸಿಕೊಂಡಿರುವ ಸಾರಿಗೆ ಸಾಧನಗಳನ್ನು ತಮ್ಮ ಭೂವ್ಯವಹಾರ ಹಿತಗಳಿಗೆ ಅಧೀನಪಡಿಸಲು ಸಾಧ್ಯ ಎಂಬ ವಾಸ್ತವಾಂಶವು ಈ ಪ್ರಶ್ನೆಯನ್ನು ತೊಡಕಾಗಿಸಿದೆ. ಇಂಥ ಸಂಭಾವ್ಯವು ಎಷ್ಟು ವಿಚಾರಯೋಗ್ಯವಾದುದು ಎಂಬುದನ್ನು ಮನಗಾಣಲು ನಾವು, ಎಲೆಕ್ಟ್ರಿಕ್ ರೈಲ್ವೇ ಕಂಪನಿಯನ್ನು ಸ್ಥಾಪಿಸಲು ಉತ್ತೇಜನ ನೀಡಿದ ದೊಡ್ಡ ಬ್ಯಾಂಕಿನ ಹಿತಗಳು ಆಗಲೇ ಆ ಕಂಪನಿ ಸ್ಥಾಪಿತವಾದ ಸಮಯದಲ್ಲೇ ಅದರಲ್ಲಿ ಅಡಕವಾಗಿದ್ದವು, ಎಂಬುದನ್ನು ನೆನಪಿಗೆ ತಂದುಕೊಳ್ಳಬೇಕಷ್ಟೆ. ಅಂದರೆ, ಈ ಸಾರಿಗೆ ಸಂಸ್ಥೆಯ ಹಿತಗಳು ಭೂಮಿ ವ್ಯವಹಾರದ ಹಿತಗಳೊಂದಿಗೆ ಹೆಣೆದುಕೊಂಡಿದ್ದವು ಎಂದಾಯಿತು. ನಿಜವಾದ ವಿಷಯ ಏನೆಂದರೆ, ಈ ರೈಲ್ವೇಯ ಪೂರ್ವ ಮಾರ್ಗವು ಈ ಬ್ಯಾಂಕು ಹೊಂದಿದ ಭೂಮಿಯ ಮೇಲೆ ಸಾಗಿ ಹೋಗುವುದಿದ್ದಿತು. ಈ ಮಾರ್ಗವನ್ನು ಹಾಕುವುದು ಖಚಿತವೆಂದು ತಿಳಿದುಬಂದಾಗ ಬ್ಯಾಂಕು ತನಗೂ ಈ ವ್ಯವಹಾರದಲ್ಲಿದ್ದ

---

* *Die Bank*, 1913, ಪು. 952, L. Eschwege, *Der Sumpf* (ಎಲ್. ಎಷ್ವೆಗೆ, 'ಜೌಗು ಪ್ರದೇಶ.'– ಸಂ.); ಅದೇ ಗ್ರಂಥ, 1912, 1, ಪು. 223 ಮತ್ತು ಅನಂತರ.

ಇತರ ಕೆಲವು ಸಹಭಾಗಿಗಳಿಗೂ ಅಪಾರ ಲಾಭ ಬರುವಂತೆ, ಈ ಭೂಮಿಯನ್ನು ಮಾರಿತು." *

ಒಮ್ಮೆ ಸ್ಥಾಪಿತಗೊಂಡು ಮಿಲಿಯಾಂತರ ಹಣ ನಿಯಂತ್ರಿಸತೊಡಗಿತೆಂದರೆ ಏಕಸ್ವಾಮ್ಯವು ಅನಿವಾರ್ಯವಾಗಿಯೇ ಸಾರ್ವಜನಿಕ ಜೀವನದ ಪ್ರತಿಯೊಂದು ವಲಯದೊಳಕ್ಕೂ ನುಗ್ಗುತ್ತದೆ. ಸರಕಾರ ಯಾವ ರೀತಿಯದು ಎಂಬ ಹಾಗೂ ಇತರೆಲ್ಲ "ವಿವರ"ಗಳ ಪರಿವೆ ಅದಕ್ಕಿರುವುದಿಲ್ಲ. ಜರ್ಮನಿಯ ಆರ್ಥಿಕ ಗ್ರಂಥಗಳಲ್ಲಿ ಸಾಮಾನ್ಯವಾಗಿ ಪ್ರಷ್ಯನ್ ಅಧಿಕಾರಶಾಹಿಯ ಪ್ರಾಮಾಣಿಕತೆಯ ಬಗೆಗೆ ಅತಿ ವಿಧೇಯತೆಯ ಹೊಗಳಿಕೆಯನ್ನೂ ಫ್ರೆಂಚ್ ಪನಾಮಾ[28] ಗುಲ್ಲಿಗೂ ಅಮೆರಿಕದಲ್ಲಿನ ರಾಜಕೀಯ ಭ್ರಷ್ಟಾಚಾರಕ್ಕೂ ಉಲ್ಲೇಖಗಳನ್ನೂ ಕಾಣಬಹುದು. ಆದರೆ ವಾಸ್ತವಾಂಶವೆಂದರೆ, ಜರ್ಮನ್ ಬ್ಯಾಂಕಿಂಗ್ ವಿಷಯಗಳಿಗೆ ಮೀಸಲಾದ ಬೂರ್ಷ್ವಾ ಗ್ರಂಥಗಳು ಕೂಡ ಸತತವಾಗಿ ಶುದ್ಧ ಬ್ಯಾಂಕಿಂಗ್ ಕಾರ್ಯಾಚರಣೆಗಳ ಕ್ಷೇತ್ರಕ್ಕೂ ಆಚೆ ತುಂಬ ದೂರ ಹೋಗಬೇಕಾಗುತ್ತದೆ, ಉದಾಹರಣೆಗೆ, ಸಾರ್ವಜನಿಕ ಅಧಿಕಾರಿಗಳು ಎಷ್ಟು ಆಗಾಗ್ಗೆ ಬ್ಯಾಂಕುಗಳಲ್ಲಿ ಉದ್ಯೋಗ ಪಡೆದುಕೊಳ್ಳುತ್ತಾರೆಂಬುದಕ್ಕೆ ಉಲ್ಲೇಖಿಸಿ "ಬ್ಯಾಂಕುಗಳ ಆಕರ್ಷಣೆ"ಯ ಬಗೆಗೆ ಅವು ಈ ಕೆಳಗಿನಂತೆ ಹೇಳಬೇಕಾಗುತ್ತದೆ: "ಬೆರೆನ್‌ಷ್ಟ್ರಾಸೆನಲ್ಲಿ ಒಂದು ಸುಖವಾದ ಉದ್ಯೋಗವನ್ನು ಪಡೆದುಕೊಳ್ಳಬೇಕೆಂದು ತನ್ನ ಅಂತರಂಗದಲ್ಲಿ ಹಾತೊರೆಯುತ್ತಿರುವ ಸರಕಾರೀ ಅಧಿಕಾರಿಯ ಪ್ರಾಮಾಣಿಕತೆಯ ವಿಷಯ ಹೇಗೆ?"** (ಬೆರೆನ್‌ಷ್ಟ್ರಾಸೆ – 'ಡೊಯ್ಚ್ ಬ್ಯಾಂಕ್'ನ ಕೇಂದ್ರ ಕಾರ್ಯಾಲಯ ಇರುವ ಬರ್ಲಿನ್ನಿನ ಬೀದಿ). 1909ರಲ್ಲಿ 'ದಿ ಬ್ಯಾಂಕ್' ಪತ್ರಿಕೆಯ ಪ್ರಕಾಶಕ ಆಲ್‌ಫ್ರೆಡ್ ಲಾನ್ಸ್‌ಬುರ್ಗ್‌ರು 'ಬೈಸಾಂಟೈನಿಸ್ಮ್‌ನ ಆರ್ಥಿಕ ಪ್ರಾಮುಖ್ಯ' ಎಂಬ ಲೇಖನವನ್ನು ಬರೆದು ಅದರಲ್ಲಿ ಪ್ರಾಸಂಗಿಕವಾಗಿ ಪ್ಯಾಲೆಸ್ಟೈನಿನಲ್ಲಿ ದ್ವಿತೀಯ ವಿಲ್‌ಹೆಲ್ಮ್‌ನ ಪ್ರವಾಸಕ್ಕೆ, "ಈ ಪ್ರವಾಸದ ತಕ್ಷಣ ಫಲಿತಾಂಶಕ್ಕೆ, 'ಜರ್ಮನ್ ಉದ್ಯಮದ ಆ ಮಾರಕ ಮಹೋನ್ನತ ಉತ್ಪನ್ನ'ವಾದ, ನಮ್ಮ 'ದಿಗ್ಬಂಧನ'ಕ್ಕೆ ನಮ್ಮೆಲ್ಲ ರಾಜಕೀಯ ಪ್ರಮಾದಗಳಿಗಿಂತ ಹೆಚ್ಚು ಕಾರಣವಾದ ಬಾಗ್ದಾದ್ ರೈಲ್ವೇಯ ನಿರ್ಮಾಣಕ್ಕೆ"*** ಉಲ್ಲೇಖಿಸಿದರು. (ಇಲ್ಲಿ ದಿಗ್ಬಂಧನವೆಂದರೆ, ಜರ್ಮನಿಯನ್ನು ಪ್ರತ್ಯೇಕಗೊಳಿಸಿ ಅದನ್ನು ಸಾಮ್ರಾಜ್ಯಶಾಹಿ ಜರ್ಮನ್ ವಿರೋಧಿ ಮೈತ್ರೀಕೂಟದಿಂದ ಸುತ್ತುವರಿಸುವ ಏಳನೆಯ ಎಡ್ವರ್ಡ್‌ನ ನೀತಿ, ಎಂದರ್ಥ.) ನಾವು ಇದನ್ನು

---

* *Verkehrstrust, Die Bank* ('ಸಾರಿಗೆ ಟ್ರಸ್ಟು,' 'ದಿ ಬ್ಯಾಂಕ್.'– ಸಂ.), 1914, 1, ಪು. 89.

** *Der Zug zur Bank, Die Bank* ('ಬ್ಯಾಂಕಿನ ಆಕರ್ಷಣೆ,' 'ದಿ ಬ್ಯಾಂಕ್.' – ಸಂ.), 1909, 1, ಪು. 79.

*** ಅದೇ ಗ್ರಂಥ, ಪು. 301.

ಹಿಂದೆ ಆಗಲೇ ಪ್ರಸ್ತಾಪಿಸಿರುವ ಪತ್ರಿಕೆಗೆ ಲೇಖನಗಳನ್ನು ಬರೆಯುವ ಎಷ್ವೆಗೆಯುವರು 1911ರಲ್ಲಿ 'ಧನಿಕರ ಪ್ರಭುತ್ವ ಹಾಗೂ ಅಧಿಕಾರಶಾಹಿ' ಎಂಬ ಲೇಖನವನ್ನು ಬರೆದು ಅದರಲ್ಲಿ, ಉದಾಹರಣೆಯಾಗಿ ಫೋಲ್ಕೆರ್ ಎಂಬ ಹೆಸರಿನ ಒಬ್ಬ ಜರ್ಮನ್ ಅಧಿಕಾರಿಯ ಪ್ರಸಂಗವನ್ನು ಬಯಲು ಮಾಡಿದರು. ಈತ ಕಾರ್ಟೆಲ್ ಕಮಿಟಿಯ ಅತ್ಯಭಿಮಾನಿ ಸದಸ್ಯರಾಗಿದ್ದರಂತೆ. ಆದರೆ ಕೆಲ ಕಾಲದನಂತರ ಈತ ಒಂದು ಅತ್ಯಂತ ದೊಡ್ಡ ಕಾರ್ಟೆಲ್‌ನಲ್ಲಿ, ಅಂದರೆ ಉಕ್ಕಿನ ಸಿಂಡಿಕೇಟ್‌ನಲ್ಲಿ, ತುಂಬ ಆದಾಯ ನೀಡುವ ಹುದ್ದೆಯನ್ನು ಗಿಟ್ಟಿಸಿಕೊಂಡರಂತೆ. ಎಷ್ಟು ಮಾತ್ರವೂ ಆಕಸ್ಮಿಕಗಳಲ್ಲದಂಥ ಇಂತಹ ಪ್ರಸಂಗಗಳು ಈ ಬೂರ್ಷ್ವಾ ಲೇಖಕರನ್ನು "ಜರ್ಮನ್ ಸಂವಿಧಾನವು ಖಚಿತ ಪಡಿಸಿಕೊಟ್ಟಿರುವ ಆರ್ಥಿಕ ಸ್ವಾತಂತ್ರ್ಯವು ಆರ್ಥಿಕ ಜೀವನದ ಅನೇಕ ಇಲಾಖೆಗಳಲ್ಲಿ ಅರ್ಥರಹಿತ ನುಡಿಗಟ್ಟಷ್ಟೆ ಆಗಿದೆ" ಎಂದೂ, ಪ್ರಸ್ತುತ ಧನಿಕರ ಪ್ರಭುತ್ವದ ಆಡಳಿತ ದಲ್ಲಿ "ಅತ್ಯಂತ ವಿಶಾಲವಾದ ರಾಜಕೀಯ ಸ್ವಾತಂತ್ರ್ಯವೂ ನಮ್ಮನ್ನು ಅಸ್ವತಂತ್ರರಾದ ಜನರ ರಾಷ್ಟ್ರವಾಗಿ ಪರಿವರ್ತನೆಗೊಳ್ಳುವುದರಿಂದ ರಕ್ಷಿಸಲಾರದು" ಎಂದೂ ಒಪ್ಪಿ ಕೊಳ್ಳುವಂತೆ ಬಲಾತ್ಕರಿಸಿದವು.*

ರಷ್ಯಕ್ಕೆ ಸಂಬಂಧಿಸಿ ಒಂದು ಉದಾಹರಣೆಗಷ್ಟೆ ನಮ್ಮನ್ನು ಸೀಮಿತಗೊಳಿಸಿ ಕೊಳ್ಳುತ್ತೇವೆ. ಸರಕಾರೀ ಖಜಾನೆಯ ಸಾಲ ಇಲಾಖೆಯ ಡೈರೆಕ್ಟರ್ ದವೀದವ್ ತಮ್ಮ ಹುದ್ದೆಗೆ ರಾಜಿನಾಮೆ ನೀಡಿ ಯಾವುದೋ ಒಂದು ದೊಡ್ಡ ಬ್ಯಾಂಕಿನಲ್ಲಿ ಸಂಬಳದ ಮೇಲೆ ಉದ್ಯೋಗ ಕೈಕೊಂಡರೆಂದೂ, ಒಪ್ಪಂದದ ಪ್ರಕಾರ ಅವರ ಸಂಬಳವು ಹಲವಾರು ವರ್ಷಗಳಲ್ಲಿ ಒಂದು ಮಿಲಿಯ ರೂಬಲ್‌ಗಳಿಗೂ ಹೆಚ್ಚಾಗಲಿದ್ದಿತೆಂದೂ, ಕೆಲವು ವರ್ಷಗಳ ಹಿಂದೆ ಎಲ್ಲ ವೃತ್ತಪತ್ರಿಕೆಗಳೂ ಪ್ರಕಟಿಸಿದವು. ಸಾಲ ಇಲಾಖೆಯು "ದೇಶದ ಎಲ್ಲ ಸಾಲ ಸಂಸ್ಥೆಗಳ ಚಟುವಟಿಕೆಗಳನ್ನೂ ಸುಸಂಬದ್ಧಗೊಳಿಸುವ" ಕರ್ತವ್ಯ ವನ್ನುಳ್ಳ ಸಂಸ್ಥೆ. ಅದು ಸೇಂಟ್ ಪೀಟರ್ಸ್‌ಬರ್ಗ್ ಹಾಗೂ ಮಾಸ್ಕೋಗಳಲ್ಲಿನ ಬ್ಯಾಂಕು ಗಳಿಗೆ 800 ಮಿಲಿಯದಿಂದ 1,000 ಮಿಲಿಯ ರೂಬಲ್‌ಗಳವರೆಗೆ ಸಹಾಯ ಧನಗಳನ್ನು ನೀಡುತ್ತದೆ.**

ಬಂಡವಾಳದ ಮಾಲೀಕತ್ವವೂ ಬಂಡವಾಳವನ್ನು ಉತ್ಪಾದನೆಗೆ ತೊಡಗಿಸುವುದೂ ಬೇರೆಬೇರೆಯಾಗಿರುವುದು, ಹಣ ಬಂಡವಾಳವು ಕೈಗಾರಿಕಾ ಅಥವಾ ಉತ್ಪಾದಕ ಬಂಡವಾಳದಿಂದ ಪ್ರತ್ಯೇಕವಾಗಿರುವುದು, ಹಣ ಬಂಡವಾಳದಿಂದ ಬರುವ ಆದಾಯ ದಿಂದಲೇ ಸಂಪೂರ್ಣವಾಗಿ ಜೀವನ ನಡೆಸುವ ಲಾಭಾಂಶ ಜೀವಿಯು ಉದ್ಯಮಿ ಯಿಂದಲೂ ಬಂಡವಾಳ ನಿರ್ವಹಣೆಯೊಂದಿಗೆ ನೇರವಾಗಿ ಸಂಬಂಧಿಸಿದ ಎಲ್ಲರಿಂದಲೂ ಪ್ರತ್ಯೇಕವಾಗಿರುವುದು – ಇದು ಒಟ್ಟಿನಲ್ಲಿ ಬಂಡವಾಳವಾದದ ವಿಶಿಷ್ಟ ಲಕ್ಷಣವಾಗಿದೆ.

---

* ಅದೇ ಗ್ರಂಥ, 1911, 2, ಪು. 825; 1913, 2, ಪು. 962.

** E. Agahd, ಪೂರ್ವೋಕ್ತ ಗ್ರಂಥ, ಪು. 202.

ಸಾಮ್ರಾಜ್ಯವಾದವು ಅಥವಾ ಹಣಕಾಸು ಬಂಡವಾಳದ ಆಧಿಪತ್ಯವು ಬಂಡವಾಳ ವಾದದ ಎಂತಹ ಅತ್ಯುನ್ನತ ಘಟ್ಟವೆಂದರೆ ಅದರಲ್ಲಿ ಈ ಪ್ರತ್ಯೇಕತೆ ಅಪಾರ ಪ್ರಮಾಣ ಗಳನ್ನು ತಲುಪಿರುತ್ತದೆ. ಬಂಡವಾಳದ ಇತರೆಲ್ಲ ರೂಪಗಳಿಗೂ ಮೀರಿ ಹಣಕಾಸು ಬಂಡವಾಳದ ಸರ್ವೋಚ್ಚತೆ ಎಂದರೆ, ಲಾಭಾಂಶ ಜೀವಿಯ ಹಾಗೂ ಹಣಕಾಸು ಆಲಿಗಾರ್ಕಿಯ ಪ್ರಾಧಾನ್ಯ ಎಂದರ್ಥ; ಹಣಕಾಸು ರೀತ್ಯಾ "ಪ್ರಬಲ"ವಾದ ಸಣ್ಣ ಸಂಖ್ಯೆಯ ರಾಜ್ಯಗಳನ್ನು ಉಳಿದೆಲ್ಲ ರಾಜ್ಯಗಳ ಮಧ್ಯದಿಂದಲೂ ಪ್ರತ್ಯೇಕಗೊಳಿಸು ವುದು, ಎಂದರ್ಥ. ಈ ಪ್ರಕ್ರಿಯೆಯು ಎಷ್ಟರ ಮಟ್ಟಿಗೆ ನಡೆಯುತ್ತಿದೆ ಎಂಬುದನ್ನು ನಾನಾ ರೀತಿಯ ಸೆಕ್ಯೂರಿಟಿಗಳನ್ನು ಹೊರಡಿಸುವುದಕ್ಕೆ ಸಂಬಂಧಿಸಿದ ಅಂಕಿಅಂಶ ಗಳಿಂದ ತೀರ್ಮಾನಿಸಬಹುದಾಗಿದೆ.

'ಅಂತರರಾಷ್ಟ್ರೀಯ ಅಂಕಿಅಂಶ ಸಂಸ್ಥೆಯ ಬುಲೆಟಿನ್'ನಲ್ಲಿ ಎ. ನೆಯ್ ಮಾರ್ಕ್*ರು ಜಗತ್ತಿನಾದ್ಯಂತ ಹೊರಡಿಸಿದ ಸೆಕ್ಯೂರಿಟಿಗಳಿಗೆ ಸಂಬಂಧಿಸಿ ಅತ್ಯಂತ ಸಮಗ್ರವಾದ, ಸಂಪೂರ್ಣವಾದ ಹಾಗೂ ತುಲನೆ ಮಾಡಬಹುದಾದ ಸಂಖ್ಯೆಗಳನ್ನು ಪ್ರಕಟಿಸಿದ್ದಾರೆ. ಇವನ್ನು ನಂತರ ಪದೇ ಪದೇ ಆರ್ಥಿಕ ಗ್ರಂಥಗಳಲ್ಲಿ ಭಾಗಶಃ ಉದ್ಧರಿಸಲಾಗಿದೆ. ನಾಲ್ಕು ದಶಕಗಳಿಗೆ ಅವರು ನೀಡುವ ಮೊತ್ತಗಳು ಹೀಗಿವೆ:

| ಸಾವಿರ ಮಿಲಿಯ ಫ್ರಾಂಕುಗಳಲ್ಲಿ<br>ಹೊರಡಿಸಲಾದ ಸೆಕ್ಯೂರಿಟಿಗಳ ಒಟ್ಟು ಮೌಲ್ಯ<br>(ಹತ್ತು ವರ್ಷಗಳ ಅವಧಿಯಲ್ಲಿ) | |
|---|---|
| 1871-1880 . . . . | 76.1 |
| 1881-1890 . . . | 64.5 |
| 1891-1900 . . . | 100.4 |
| 1901-1910 . . . | 197.8 |

1870ರ ದಶಕದ ವರ್ಷಗಳಲ್ಲಿ ಇಡೀ ಜಗತ್ತಿನಲ್ಲಿ ಹೊರಡಿಸಲಾದ ಸೆಕ್ಯೂರಿಟಿ ಗಳ ಮೊತ್ತ ಅತ್ಯುನ್ನತವಾಗಿದ್ದಿತು. ಫ್ರಾಂಕೋ-ಪ್ರಷ್ಯನ್ ಯುದ್ಧಕ್ಕೆ ಸಂಬಂಧಿಸಿ ಮುಖ್ಯವಾಗಿ ಸಾಲಗಳನ್ನು ಹೊರಡಿಸಿದುದೂ, ಯುದ್ಧಾನಂತರ ಜರ್ಮನಿಯಲ್ಲಿ

* *Bulletin de l'institut international de statistique*, t. XIX, livr. II, La Hage, 1912 ('ಅಂತರರಾಷ್ಟ್ರೀಯ ಅಂಕಿಅಂಶ ಸಂಸ್ಥೆಯ ಬುಲೆಟಿನ್,' ಸಂ. XIX, ಗ್ರಂಥ 2, ಹೇಗ್, 1912. – ಸಂ.). ಸಣ್ಣ ರಾಜ್ಯ ಗಳಿಗೆ ಸಂಬಂಧಿಸಿದ ಲೆಕ್ಕಗಳು, ಎರಡನೆಯ ಕಾಲಂನಲ್ಲಿರುವುವು, 1902ರ ಅಂಕಿಗಳಿಗೆ ಶೇ. 20ನ್ನು ಸೇರಿಸುವ ಮೂಲಕ ಸರಿಸುಮಾರಾಗಿ ಲೆಕ್ಕಹಾಕಲಾಗಿದೆ.

ಕಂಪನಿಗಳನ್ನು ಸ್ಥಾಪಿಸುವುದರಲ್ಲಿ ಕಂಡುಬಂದ ವಿಕಾಸವೂ, ಅದಕ್ಕೆ ಕಾರಣಗಳಾಗಿದ್ದವು. ಒಟ್ಟಿನಲ್ಲಿ, 19ನೆಯ ಶತಮಾನದ ಮೂರು ಕೊನೆಯ ದಶಕಗಳಲ್ಲಿ ಹೆಚ್ಚಳವು ಸಾಪೇಕ್ಷವಾಗಿ ಹೆಚ್ಚು ಶೀಘ್ರವಾದುದಾಗಿರಲಿಲ್ಲ. 20ನೆಯ ಶತಮಾನದ ಮೊದಲ ಹತ್ತು ವರ್ಷಗಳಲ್ಲಷ್ಟೆ ಅಪಾರ ಹೆಚ್ಚಳವು – ಶೇ. 100ರಷ್ಟು ಹೆಚ್ಚಳವು – ಕಂಡುಬರುತ್ತದೆ. ಹೀಗೆ 20ನೆಯ ಶತಮಾನದ ಆರಂಭವು ಏಕಸ್ವಾಮ್ಯ ಸಂಸ್ಥೆಗಳ (ಕಾರ್ಟೆಲ್‌ಗಳ, ಸಿಂಡಿಕೇಟ್‌ಗಳ, ಟ್ರಸ್ಟುಗಳ) ಬೆಳವಣಿಗೆಗೆ ಸಂಬಂಧಿಸಿಯಷ್ಟೆ ಅಲ್ಲ – ಇವುಗಳ ಬಗೆಗೆ ನಾವಾಗಲೇ ಹೇಳಿದ್ದೇವೆ – ಹಣಕಾಸು ಬಂಡವಾಳದ ಬೆಳವಣಿಗೆಗೆ ಸಂಬಂಧಿಸಿಯೂ, ಒಂದು ಸಂಧಿಕಾಲವಾಗಿದೆ.

1910ರಲ್ಲಿ ಜಗತ್ತಿನಲ್ಲಿ ಜಾರಿಯಲ್ಲಿದ್ದ ಒಟ್ಟು ಸೆಕ್ಯೂರಿಟಿಗಳ ಮೊತ್ತ ಸುಮಾರು 815,000 ಮಿಲಿಯ ಫ್ರಾಂಕುಗಳೆಂದು ನೆಯ್‌ಮಾರ್ಕ್ ಅಂದಾಜು ಮಾಡುತ್ತಾರೆ. ಎರಡು ಸಾರಿ ಲೆಕ್ಕ ಹಾಕಲ್ಪಟ್ಟಿರಬಹುದಾದ ಹಣವನ್ನು ಈ ಮೊತ್ತದಿಂದ ಕಳೆದು ಅವರು ಒಟ್ಟು ಮೊತ್ತವನ್ನು 575-600 ಸಾವಿರ ಮಿಲಿಯಗಳಿಗೆ ಇಳಿಸುತ್ತಾರೆ. ಇದು ನಾನಾ ದೇಶಗಳ ಮಧ್ಯೆ ಹಂಚಲ್ಪಟ್ಟಿದೆ (ನಾವು 600 ಸಾವಿರ ಮಿಲಿಯವನ್ನು ತೆಗೆದುಕೊಳ್ಳುತ್ತೇವೆ).

1910ರಲ್ಲಿ ಜಾರಿಯಲ್ಲಿದ್ದ
ಹಣಕಾಸು ಸೆಕ್ಯೂರಿಟಿಗಳು
(ಸಾವಿರ ಮಿಲಿಯ ಫ್ರಾಂಕುಗಳಲ್ಲಿ)

| | | |
|---|---|---|
| ಗ್ರೇಟ್ ಬ್ರಿಟನ್ . . . . . . . | 142 | 479 |
| ಸಂಯುಕ್ತ ಸಂಸ್ಥಾನಗಳು . . . . | 132 | |
| ಫ್ರಾನ್ಸ್ . . . . . . . . . . | 110 | |
| ಜರ್ಮನಿ . . . . . . . . . . | 95 | |
| ರಷ್ಯ . . . . . . . . . . . | 31 | |
| ಆಸ್ಟ್ರಿಯ-ಹಂಗೆರಿ . . . . . . | 24 | |
| ಇಟಲಿ . . . . . . . . . . | 14 | |
| ಜಪಾನ್ . . . . . . . . . . | 12 | |
| ಹಾಲೆಂಡ್ . . . . . . . . . | 12.5 | |
| ಬೆಲ್ಜಿಯಂ . . . . . . . . . | 7.5 | |
| ಸ್ಪೈನ್ . . . . . . . . . . | 7.5 | |
| ಸ್ವಿಟ್ಸರ್ಲೆಂಡ್ . . . . . . . | 6.25 | |
| ಡೆನ್‌ಮಾರ್ಕ್ . . . . . . . . | 3.75 | |
| ಸ್ವೀಡನ್, ನಾರ್ವೇ, ರುಮಾನಿಯ ಇತ್ಯಾದಿ | 2.5 | |
| ಒಟ್ಟು . . . . . . . . . . | 600 | |

ನಾಲ್ಕು ಅತ್ಯಂತ ಸಿರಿವಂತ ಬಂಡವಾಳಶಾಹಿ ದೇಶಗಳು ಎದ್ದುಕಾಣುವಂತೆ ಮುಂದಿರುವುದನ್ನು ನಾವು ಈ ಸಂಖ್ಯೆಗಳಿಂದ ಕೂಡಲೇ ಕಾಣುತ್ತೇವೆ. ಇವು ಒಂದೊಂದೂ ಸರಿಸುಮಾರು 100ರಿಂದ 150 ಸಾವಿರ ಮಿಲಿಯ ಫ್ರಾಂಕುಗಳವರೆಗೆ ಸೆಕ್ಯೂರಿಟಿಗಳನ್ನು ಹೊಂದಿವೆ. ಈ ನಾಲ್ಕು ದೇಶಗಳಲ್ಲಿ ಎರಡು – ಇಂಗ್ಲೆಂಡ್ ಹಾಗೂ ಫ್ರಾನ್ಸ್ – ಅತ್ಯಂತ ಹಳೆಯ ಬಂಡವಾಳಶಾಹಿ ದೇಶಗಳು ಮತ್ತು ನಾವು ನೋಡಲಿರುವಂತೆ ಅತ್ಯಂತ ಹೆಚ್ಚಿನ ವಸಾಹತುಗಳನ್ನು ಹೊಂದಿವೆ; ಉಳಿದೆರಡು – ಅಮೆರಿಕದ ಸಂಯುಕ್ತ ಸಂಸ್ಥಾನಗಳು ಹಾಗೂ ಜರ್ಮನಿ – ಬೆಳವಣಿಗೆಯ ದ್ರುತ ಗತಿಗೆ ಸಂಬಂಧಿಸಿ ಹಾಗೂ ಕೈಗಾರಿಕೆಯಲ್ಲಿ ಬಂಡವಾಳಶಾಹಿ ಏಕಸ್ವಾಮ್ಯ ಸಂಸ್ಥೆಗಳು ವಿಸ್ತರಿಸುತ್ತಿರುವ ಪ್ರಮಾಣಕ್ಕೆ ಸಂಬಂಧಿಸಿ ಅಗ್ರಗಾಮಿ ಬಂಡವಾಳಶಾಹಿ ದೇಶಗಳಾಗಿವೆ. ಒಟ್ಟಾಗಿ ಈ ನಾಲ್ಕು ದೇಶಗಳು 479,000 ಮಿಲಿಯ ಫ್ರಾಂಕುಗಳನ್ನು ಅಂದರೆ ಜಗತ್ತಿನ ಹಣಕಾಸು ಬಂಡವಾಳದ ಸುಮಾರು ಶೇ. 80ರಷ್ಟನ್ನು ಹೊಂದಿವೆ. ಬಹುಮಟ್ಟಿಗೆ ಜಗತ್ತಿನ ಉಳಿದ ದೇಶಗಳೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಈ ಅಂತರರಾಷ್ಟ್ರೀಯ ಬ್ಯಾಂಕರ್ ದೇಶಗಳಿಗೆ, ಜಗತ್ತಿನ ಹಣಕಾಸು ಬಂಡವಾಳದ ಈ ನಾಲ್ಕು "ಸ್ತಂಭ"ಗಳಿಗೆ, ಹೆಚ್ಚು ಕಮ್ಮಿ ಋಣಿಯಾಗಿವೆ, ಕಪ್ಪ ನೀಡುತ್ತವೆ.

ಹಣಕಾಸು ಬಂಡವಾಳದ ಪರಸ್ಪರ ಅಧೀನತೆ ಹಾಗೂ ಸಂಬಂಧಗಳ ಅಂತರರಾಷ್ಟ್ರೀಯ ಜಾಲಬಂಧವನ್ನು ಸೃಜಿಸುವುದರಲ್ಲಿ, ಬಂಡವಾಳದ ರಫ್ತು ನಿರ್ವಹಿಸುವ ಪಾತ್ರವನ್ನು ಪರಿಶೀಲಿಸುವುದು ವಿಶೇಷವಾಗಿ ಮುಖ್ಯವಾದುದು.

## IV. ಬಂಡವಾಳದ ರಫ್ತು

ಮುಕ್ತ ಸ್ಪರ್ಧೆಯು ಅವಿಭಕ್ತ ರಾಜ್ಯಭಾರ ಮಾಡುತ್ತಿದ್ದ ಹಳೆಯ ಬಂಡವಾಳವಾದದ ವಿಶಿಷ್ಟ ಲಕ್ಷಣ – ಸರಕುಗಳ ರಫ್ತಾಗಿದ್ದಿತು. ಏಕಸ್ವಾಮ್ಯ ಸಂಸ್ಥೆಗಳು ರಾಜ್ಯಭಾರ ಮಾಡುವ ಬಂಡವಾಳವಾದದ ಇತ್ತೀಚೆಗಿನ ಘಟ್ಟದ ವಿಶಿಷ್ಟ ಲಕ್ಷಣ – ಬಂಡವಾಳದ ರಫ್ತಾಗಿದೆ.

ಬಂಡವಾಳವಾದವು ಸರಕು ಉತ್ಪಾದನೆಯ ಬೆಳವಣಿಗೆಯ ಅತ್ಯುನ್ನತ ಘಟ್ಟ. ಆಗ ಶ್ರಮಶಕ್ತಿಯೇ ಒಂದು ಸರಕಾಗುತ್ತದೆ. ದೇಶದೊಳಗಿನ ವಿನಿಮಯದ ಬೆಳವಣಿಗೆಯು, ನಿರ್ದಿಷ್ಟವಾಗಿ ಅಂತರರಾಷ್ಟ್ರೀಯ ವಿನಿಮಯದ ಬೆಳವಣಿಗೆಯು, ಬಂಡವಾಳವಾದದ ವಿಶಿಷ್ಟ ಲಕ್ಷಣ. ಬಿಡಿ ಉದ್ಯಮಗಳ, ಬಿಡಿ ಕೈಗಾರಿಕಾ ಶಾಖೆಗಳ ಹಾಗೂ ಬಿಡಿ ದೇಶಗಳ ಅಸಮವಾದ ಹಾಗೂ ನೆಗೆತದ ರೀತಿಯಲ್ಲಿ ಆಗುವ ಬೆಳವಣಿಗೆಯು ಬಂಡವಾಳಶಾಹಿ ಪದ್ಧತಿಯಲ್ಲಿ ಅನಿವಾರ್ಯ. ಇಂಗ್ಲೆಂಡು ಬೇರೆ ಯಾವುದೇ ದೇಶಕ್ಕೆ

ಮುನ್ನ ಬಂಡವಾಳಶಾಹಿ ದೇಶವಾಯಿತು. 19ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಅದು ಮುಕ್ತ ವ್ಯಾಪಾರವನ್ನು ಜಾರಿಗೆ ತಂದು ತಾನು "ಜಗತ್ತಿನ ಕರ್ಮ ಶಾಲೆ" ಎಂದೂ, ತಾನು ಎಲ್ಲ ದೇಶಗಳಿಗೂ ತಯಾರಿತ ವಸ್ತುಗಳನ್ನು ಸರಬರಾಜು ಮಾಡುತ್ತದೆಂದೂ ಆ ದೇಶಗಳೆಲ್ಲವೂ ವಿನಿಮಯವಾಗಿ ತನಗೆ ಕಚ್ಚಾ ಪದಾರ್ಥ ಗಳನ್ನು ಒದಗಿಸುತ್ತಿರಬೇಕೆಂದೂ, ತನ್ನ ಹಕ್ಕು ಪ್ರತಿಪಾದಿಸಿತು. ಆದರೆ 19ನೆಯ ಶತಮಾನದ ಕೊನೆಯ ಕಾಲುಭಾಗದಲ್ಲಿ ಈ ಏಕಸ್ವಾಮ್ಯ ಆಗಲೇ ಶಿಥಿಲಗೊಂಡಿದ್ದಿತು; ಏಕೆಂದರೆ, ಇತರ ಹಲವಾರು ದೇಶಗಳು "ರಕ್ಷಣಾತ್ಮಕ" ಸುಂಕಗಳ ಆಶ್ರಯ ಪಡೆದು ಕೊಂಡು ಸ್ವತಂತ್ರ ಬಂಡವಾಳಶಾಹಿ ರಾಜ್ಯಗಳಾಗಿ ಬೆಳೆದವು. 20ನೆಯ ಶತಮಾನದ ಪ್ರಾರಂಭದಲ್ಲಿ ನಾವು ಒಂದು ಹೊಸ ಮಾದರಿಯ ಏಕಸ್ವಾಮ್ಯ ರೂಪುಗೊಂಡು ದನ್ನು ಕಾಣುತ್ತೇವೆ: ಮೊದಲನೆಯದಾಗಿ, ಬಂಡವಾಳಶಾಹಿ ರೀತಿಯಲ್ಲಿ ವಿಕಾಸ ಗೊಂಡ ಎಲ್ಲ ದೇಶಗಳಲ್ಲೂ ಬಂಡವಾಳಗಾರರ ಏಕಸ್ವಾಮ್ಯ ಕೂಟಗಳು ರೂಪು ಗೊಂಡಿವೆ; ಎರಡನೆಯದಾಗಿ, ಬಂಡವಾಳ ಸಂಚಯವು ಬೃಹತ್ ಪ್ರಮಾಣ ತಲುಪಿ ದಂಥ ಕೆಲವೇ ಅತ್ಯಂತ ಶ್ರೀಮಂತ ದೇಶಗಳು ಏಕಸ್ವಾಮ್ಯ ಸ್ಥಾನ ಪಡೆದುಕೊಂಡಿವೆ. ಮುಂದುವರಿದ ದೇಶಗಳಲ್ಲಿ ಭಾರಿ ಪ್ರಮಾಣದಲ್ಲಿ "ಬಂಡವಾಳದ ಮಿಗುತಾಯ" ಉಂಟಾಗಿದೆ.

ಬಂಡವಾಳವಾದವು ಇಂದು ಎಲ್ಲೆಲ್ಲೂ ಕೈಗಾರಿಕೆಗಿಂತ ತುಂಬ ಹಿಂದೆ ಬಿದ್ದಿರುವ ಕೃಷಿಯನ್ನು ವಿಕಾಸಗೊಳಿಸಬಲ್ಲುದಾಗಿದ್ದರೆ, ವಿಸ್ಮಯಗೊಳಿಸುವಷ್ಟು ತಾಂತ್ರಿಕ ಪ್ರಗತಿ ಯಾಗಿದ್ದರೂ ಎಲ್ಲೆಲ್ಲೂ ಬಡತನಕ್ಕೊಳಗಾಗಿರುವ ಹಾಗೂ ಅರೆಉಪವಾಸದ ಜೀವನ ಸಾಗಿಸುತ್ತಿರುವ ಜನಸಮೂಹಗಳ ಜೀವನ ಮಟ್ಟವನ್ನು ಅದು ಹೆಚ್ಚಿಸಬಲ್ಲುದಾಗಿ ದ್ದರೆ, ಬಂಡವಾಳ ಮಿಗುತಾಯದ ಈ ಮಾತೇ ಇರುತ್ತಿರಲಿಲ್ಲ, ಎಂದು ಬೇರೆ ಹೇಳ ಬೇಕಾಗಿಲ್ಲ. ಬಂಡವಾಳವಾದವನ್ನು ಟೀಕಿಸುವ ಪೆಟಿ ಬೂರ್ಷ್ವಾ ವಿಮರ್ಶಕರು ತುಂಬ ಆಗಾಗ್ಗೆ ಮೇಲಿನ "ವಾದ"ವನ್ನು ಮುಂದಿಡುತ್ತಾರೆ. ಆದರೆ ಬಂಡವಾಳ ವಾದವು ಇವೆಲ್ಲವನ್ನೂ ಮಾಡಬಲ್ಲುದಾಗಿದ್ದರೆ ಅದು ಬಂಡವಾಳವಾದವೇ ಆಗಿರು ತ್ತಿರಲಿಲ್ಲ; ಏಕೆಂದರೆ, ಅಸಮ ಬೆಳವಣಿಗೆಯೂ ಜನಸಮೂಹಗಳು ಅರೆಉಪವಾ ಸದ ಮಟ್ಟದಲ್ಲಿರುವುದೂ, ಬಂಡವಾಳಶಾಹಿ ಉತ್ಪಾದನಾ ವಿಧಾನದ ಮೂಲಭೂತ ಹಾಗೂ ಅನಿವಾರ್ಯ ಉಪಾಧಿಗಳಾಗಿವೆ, ಪೂರ್ವಾಧಾರಗಳಾಗಿವೆ. ಬಂಡವಾಳವಾದವು ಎಲ್ಲಿಯವರೆಗೆ ಬಂಡವಾಳವೇ ಆಗಿರುತ್ತದೋ ಅಲ್ಲಿಯವರೆಗೆ ಮಿಗುತಾಯ ಬಂಡ ವಾಳವನ್ನು ಯಾವುದೇ ದೇಶದ ಜನಸಮೂಹಗಳ ಜೀವನ ಮಟ್ಟವನ್ನು ಹೆಚ್ಚಿಸುವ ಉದ್ದೇಶಕ್ಕೆ ಉಪಯೋಗಿಸಲು ಸಾಧ್ಯವೇ ಇಲ್ಲ. ಏಕೆಂದರೆ, ಹಾಗೆ ಮಾಡಿದರೆ ಬಂಡ ವಾಳಗಾರರಿಗೆ ಲಾಭ ಕಮ್ಮಿಯಾಗುತ್ತದೆ. ಆದರೆ ಹಿಂದುಳಿದ ದೇಶಗಳಿಗೆ ಬಂಡವಾಳ ವನ್ನು ರಫ್ತು ಮಾಡುವ ಮೂಲಕ ಲಾಭವನ್ನು ಹೆಚ್ಚಿಸಿಕೊಳ್ಳುವ ಉದ್ದೇಶಕ್ಕೆ ಆ ಮಿಗುತಾಯ ಬಂಡವಾಳವನ್ನು ಉಪಯೋಗಿಸಲಾಗುವುದು. ಈ ಹಿಂದುಳಿದ

ದೇಶಗಳಲ್ಲಿ ಲಾಭ ಸಾಮಾನ್ಯವಾಗಿ ಉನ್ನತವಾಗಿರುತ್ತದೆ, ಏಕೆಂದರೆ, ಅಲ್ಲಿ ಬಂಡವಾಳದ ಕೊರತೆ ಇರುತ್ತದೆ, ಭೂಮಿಯ ಬೆಲೆ ಸಾಪೇಕ್ಷವಾಗಿ ಕಮ್ಮಿಯಾಗಿರುತ್ತದೆ, ಕೂಲಿ ಕಮ್ಮಿಯಾಗಿರುತ್ತದೆ, ಕಚ್ಚಾ ಪದಾರ್ಥಗಳು ಅಗ್ಗವಾಗಿರುತ್ತವೆ. ಅನೇಕ ಹಿಂದುಳಿದ ದೇಶಗಳು ಆಗಲೇ ಜಾಗತಿಕ ಬಂಡವಾಳಶಾಹಿ ವ್ಯವಹಾರಗಳ ಸುಳಿಗೆ ಸೆಳೆಯಲ್ಪಟ್ಟಿವೆ; ಆ ದೇಶಗಳಲ್ಲಿ ಪ್ರಧಾನ ರೈಲುಮಾರ್ಗಗಳನ್ನು ನಿರ್ಮಿಸಲಾಗಿದೆ ಇಲ್ಲವೇ ನಿರ್ಮಿಸಲಾಗುತ್ತಿದೆ, ಕೈಗಾರಿಕಾಭಿವೃದ್ಧಿಗೆ ಪ್ರಾಥಮಿಕ ಪರಿಸ್ಥಿತಿಗಳನ್ನು ಸೃಜಿಸಲಾಗಿದೆ, ಇತ್ಯಾದಿ. ಕೆಲವು ದೇಶಗಳಲ್ಲಿ ಬಂಡವಾಳವಾದವು "ಅತಿಯಾಗಿ ಮಾಗಿದೆ" ಮತ್ತು (ಕೃಷಿಯ ಹಿಂದುಳಿದ ಸ್ಥಿತಿಯಿಂದಾಗಿಯೂ ಜನಸಮೂಹಗಳ ಬಡತನದ ಕಾರಣದಿಂದಾಗಿಯೂ) ಬಂಡವಾಳವನ್ನು ತೊಡಗಿಸುವುದಕ್ಕೆ ಅಲ್ಲಿ "ಲಾಭದಾಯಕ" ಕ್ಷೇತ್ರವಿಲ್ಲ. ಈ ವಾಸ್ತವಾಂಶವು ಬಂಡವಾಳವನ್ನು ಹಿಂದುಳಿದ ದೇಶಗಳಿಗೆ ರಫ್ತು ಮಾಡುವುದನ್ನು ಅವಶ್ಯಮಾಡಿಕೊಟ್ಟಿದೆ.

ಮೂರು ಪ್ರಧಾನ ದೇಶಗಳು ಹೊರದೇಶಗಳಲ್ಲಿ ತೊಡಗಿಸಿದ ಬಂಡವಾಳದ ಪ್ರಮಾಣವನ್ನು ಸರಿಸುಮಾರಾಗಿ ತೋರಿಸುವ ಸಂಖ್ಯೆಗಳು ಹೀಗೆವೆ:*

ಹೊರದೇಶಗಳಲ್ಲಿ ತೊಡಗಿಸಿದ ಬಂಡವಾಳ
(ಸಾವಿರ ಮಿಲಿಯ ಫ್ರಾಂಕುಗಳಲ್ಲಿ)

| ವರ್ಷ | ಗ್ರೇಟ್ ಬ್ರಿಟನ್ | ಫ್ರಾನ್ಸ್ | ಜರ್ಮನಿ |
|---|---|---|---|
| 1862 | 3.6 | – | – |
| 1872 | 15.0 | 10 (1869) | – |
| 1882 | 22.0 | 15 (1880) | ? |
| 1893 | 42.0 | 20 (1890) | ? |
| 1902 | 62.0 | 27-37 | 12.5 |
| 1914 | 75-100.0 | 60 | 44.0 |

*Hobson, *Imperialism*, L. (ಹಾಬ್ಸನ್, 'ಸಾಮ್ರಾಜ್ಯವಾದ,' ಲಂಡನ್. – ಸಂ.), 1902, ಪು, 58; Riesser, ಪೂರ್ವೋಕ್ತ ಗ್ರಂಥ, ಪು. 395 ಹಾಗೂ 404; P. Arndt in *Weltwirtschaftliches Archiv*, Bd. 7, 1916, S. 35 (ಪಿ. ಆರ್ನ್ಡ್ಟ್, 'ಜಾಗತಿಕ ಆರ್ಥಿಕ ವ್ಯವಸ್ಥೆಯ ಪತ್ರಗಳ'ಲ್ಲಿ, ಸಂ. 7, 1916, ಪು. 35. – ಸಂ.); Neymarck in *Bulletin*; ಹಿಲ್ಫೆರ್ಡಿಂಗ್, 'ಹಣಕಾಸು ಬಂಡವಾಳ,' ಪು. 492; Lloyd George, ಹೌಸ್ ಆಫ್ ಕಾಮನ್ಸ್‌ನಲ್ಲಿ

ಬಂಡವಾಳದ ರಫ್ತು 20ನೆಯ ಶತಮಾನದ ಪ್ರಾರಂಭದಲ್ಲಷ್ಟೆ ಅಪಾರ ಪ್ರಮಾಣಗಳನ್ನು ತಲುಪಿತೆಂದು ಈ ಪಟ್ಟಿಯು ತೋರಿಸುತ್ತದೆ. ಯುದ್ಧಕ್ಕೆ ಮುನ್ನ ಮೂರು ಪ್ರಧಾನ ದೇಶಗಳು ಹೊರದೇಶಗಳಲ್ಲಿ ತೊಡಗಿಸಿದ ಬಂಡವಾಳದ ಪ್ರಮಾಣವು 175 ಸಾವಿರ ಮಿಲಿಯ ಹಾಗೂ 200 ಸಾವಿರ ಮಿಲಿಯ ಫ್ರಾಂಕುಗಳ ಮಧ್ಯೆ ಇದ್ದಿತು. ಶೇ. 5ರ ಅಲ್ಪ ದರದಲ್ಲೇ ಈ ಬಂಡವಾಳದಿಂದ ಬರುವ ಆದಾಯ ವರ್ಷಕ್ಕೆ 8ರಿಂದ 10 ಸಾವಿರ ಮಿಲಿಯ ಫ್ರಾಂಕುಗಳನ್ನು ತಲುಪಬೇಕು. ಜಗತ್ತಿನ ಅತ್ಯಂತ ಹೆಚ್ಚಿನ ದೇಶಗಳನ್ನೂ ರಾಷ್ಟ್ರಗಳನ್ನೂ ಸಾಮ್ರಾಜ್ಯಶಾಹಿಗಳು ಶೋಷಿಸುವುದಕ್ಕೂ ಮರ್ದಿಸುವುದಕ್ಕೂ, ಕೆಲವೇ ಸಂಪದ್ಭರಿತ ದೇಶಗಳು ಬಂಡವಾಳಶಾಹಿ ರೀತಿಯಲ್ಲಿ ಪರೋಪಜೀವನ ನಡೆಸುವುದಕ್ಕೂ, ಇದೊಂದು ದೃಢವಾದ ಆಧಾರ!

ಹೊರದೇಶಗಳಲ್ಲಿ ತೊಡಗಿಸಲಾದ ಈ ಬಂಡವಾಳ ವಿವಿಧ ದೇಶಗಳ ನಡುವೆ ಹೇಗೆ ಹಂಚಲ್ಪಟ್ಟಿತು? ಅದನ್ನು ಎಲ್ಲಿ ತೊಡಗಿಸಲಾಯಿತು. ಈ ಪ್ರಶ್ನೆಗಳಿಗೆ ಸರಿಸುಮಾರಾದ, ಆದರೆ ಆಧುನಿಕ ಸಾಮ್ರಾಜ್ಯವಾದದ ಕೆಲವು ಸಾಮಾನ್ಯ ಸಂಬಂಧ ಸಂಪರ್ಕಗಳ ಮೇಲೆ ಬೆಳಕು ಚೆಲ್ಲಲು ಸಾಕಷ್ಟಾದ ಉತ್ತರವನ್ನಷ್ಟೆ ನೀಡಲು ಸಾಧ್ಯ.

ಬ್ರಿಟಿಷ್ ಬಂಡವಾಳವನ್ನು ತೊಡಗಿಸಿದ ಪ್ರಧಾನ ವಲಯಗಳೆಂದರೆ ಬ್ರಿಟಿಷ್

---

ಮಾಡಿದ ಭಾಷಣ, ಮೇ 4, 1915, *Daily Telegraph*ನಲ್ಲಿ ವರದಿಯಾದುದು ಮೇ 5, 1915; B. Harms, *Probleme der Weltwirtschaft*, Jena, 1912, S. 235 (ಬಿ. ಹಾರ್ಮ್ಸ್, 'ಜಾಗತಿಕ ಆರ್ಥಿಕ ವ್ಯವಸ್ಥೆಯ ಸಮಸ್ಯೆಗಳು,' ಯೇನಾ, 1912, ಪು. 235 ಮತ್ತು ಅನಂತರದ ಪುಟಗಳು. – ಸಂ.); Dr. Siegmund Schilder, *Entwicklungstendenzen der Weltwirtschaft*, Berlin, 1912, Bd. 1, S. 150 (ಡಾ. ಸೀಗ್‌ಮುಂಡ್ ಷಿಲ್ಡರ್, 'ಜಾಗತಿಕ ಆರ್ಥಿಕ ವ್ಯವಸ್ಥೆಯ ವಿಕಾಸದಲ್ಲಿನ ಪ್ರವೃತ್ತಿಗಳು,' ಬರ್ಲಿನ್, 1912, ಸಂ. 1, ಪು. 150. – ಸಂ.); George Paish, *Great Britain's Capital Investments etc.* in *Journal of the Royal Statistical Society*, vol. LXXIV, 1910-11, p. 167 (ಜಾರ್ಜ್ ಪೇಯಿಷ್, 'ಗ್ರೇಟ್ ಬ್ರಿಟನ್ ತೊಡಗಿಸಿದ ಬಂಡವಾಳ, ಇತ್ಯಾದಿ' 'ರಾಯಲ್ ಅಂಕಿಅಂಶ ಸಂಸ್ಥೆ ಪತ್ರಿಕೆ'ಯಲ್ಲಿ, ಸಂ. LXXIV, 1910-11, ಪು. 167 ಮತ್ತು ಅನಂತರದ ಪುಟಗಳು. – ಸಂ.); Georges Diouritch, *L'Expansion des banques àllemandes à l'étranger, ses rapports avec le développement économique de l'Allemagne*, P., 1909, p. 84 (ಜಾರ್ಜ್ ಡೀಯುರೀಚ್, 'ಜರ್ಮನಿಯ ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿ ಹೊರದೇಶಗಳಲ್ಲಿ ಜರ್ಮನ್ ಬ್ಯಾಂಕುಗಳ ವಿಸ್ತರಣೆ,' ಪ್ಯಾರಿಸ್, 1909, ಪು. 84. – ಸಂ.).

ವಸಾಹತುಗಳು. ಅವು ಏಷ್ಯ ಇತ್ಯಾದಿಗಳ ಮಾತು ಹಾಗಿರಲಿ, ಅಮೆರಿಕದಲ್ಲೂ ಸಹ (ಉದಾಹರಣೆಗೆ, ಕೆನಡಾ) ಅತ್ಯಂತ ವಿಶಾಲವಾಗಿವೆ. ಈ ಪ್ರಸಂಗದಲ್ಲಿ ಬಂಡವಾಳದ ಅಪಾರ ಪ್ರಮಾಣದ ರಫ್ತುಗಳು ವಿಸ್ತಾರವಾದ ವಸಾಹತುಗಳೊಂದಿಗೆ ಅತ್ಯಂತ ನಿಕಟವಾಗಿ ಸಂಬಂಧಿತವಾಗಿವೆ. ಇದು ಸಾಮ್ರಾಜ್ಯವಾದಕ್ಕೆ ಎಷ್ಟು ಮುಖ್ಯ ಎಂಬುದನ್ನು ನಾವು ಮುಂದೆ ಹೇಳುವೆವು. ಫ್ರಾನ್ಸಿನ ಪ್ರಸಂಗದಲ್ಲಿ ಪರಿಸ್ಥಿತಿ ಭಿನ್ನ. ಫ್ರೆಂಚ್ ಬಂಡವಾಳದ ರಫ್ತುಗಳನ್ನು ಪ್ರಧಾನವಾಗಿ ಯೂರೋಪಿನಲ್ಲಿ, ಮುಖ್ಯವಾಗಿ ರಷ್ಯದಲ್ಲಿ (ಕೊನೆಯ ಪಕ್ಷ ಹತ್ತು ಸಾವಿರ ಮಿಲಿಯ ಫ್ರಾಂಕುಗಳು) ತೊಡಗಿಸಲಾಗಿದೆ. ಇದು ಪ್ರಧಾನವಾಗಿ ಸಾಲ ಬಂಡವಾಳವಾಗಿದೆ, ಸರಕಾರೀ ಸಾಲಗಳಾಗಿವೆ, ಕೈಗಾರಿಕೋದ್ಯಮಗಳಲ್ಲಿ ತೊಡಗಿಸಲಾದ ಬಂಡವಾಳವಲ್ಲ. ಬ್ರಿಟಿಷ್ ವಸಾಹತು ಸಾಮ್ರಾಜ್ಯಶಾಹಿಯಂತಲ್ಲದೆ ಫ್ರೆಂಚ್ ಸಾಮ್ರಾಜ್ಯಶಾಹಿಯನ್ನು ದುಬಾರಿಬಡ್ಡಿಯ ಸಾಮ್ರಾಜ್ಯಶಾಹಿಯೆಂದು ಕರೆಯಬಹುದು. ಜರ್ಮನಿಯ ಪ್ರಸಂಗದಲ್ಲಿ ನಾವು ಒಂದು

ಭೂಮಂಡಲದ ವಿವಿಧ ಭಾಗಗಳಲ್ಲಿ
ವಿದೇಶೀ ಬಂಡವಾಳದ
(ಸರಿಸುಮಾರಾದ) ಹಂಚಿಕೆ
(ಸುಮಾರು 1910ರಲ್ಲಿ)

| | ಗ್ರೇಟ್ ಬ್ರಿಟನ್ | ಫ್ರಾನ್ಸ್ | ಜರ್ಮನಿ | ಒಟ್ಟು |
|---|---|---|---|---|
| | (ಸಾವಿರ ಮಿಲಿಯ ಮಾರ್ಕುಗಳಲ್ಲಿ) | | | |
| ಯೂರೋಪ್ . . . . . | 4 | 23 | 18 | 45 |
| ಅಮೆರಿಕ . . . . . . . | 37 | 4 | 10 | 51 |
| ಏಷ್ಯ, ಆಫ್ರಿಕ ಮತ್ತು ಆಸ್ಟ್ರೇಲಿಯಾ . . . . . | 29 | 8 | 7 | 44 |
| ಮೊತ್ತ . . . . . . . . | 70 | 35 | 35 | 140 |

ಮೂರನೆಯ ಮಾದರಿಯನ್ನು ಕಾಣುತ್ತೇವೆ: ವಸಾಹತುಗಳು ಅತ್ಯಲ್ಪ. ಹೊರದೇಶಗಳಲ್ಲಿ ತೊಡಗಿಸಲಾದ ಜರ್ಮನ್ ಬಂಡವಾಳ ಅತ್ಯಂತ ಸಮನಾಗಿ ಯೂರೋಪ್ ಹಾಗೂ ಅಮೆರಿಕಗಳ ಮಧ್ಯೆ ಹಂಚಿದೆ.

6*

ಬಂಡವಾಳದ ರಫ್ತು ಅದನ್ನು ಪಡೆದ ದೇಶಗಳಲ್ಲಿ ಬಂಡವಾಳವಾದದ ಬೆಳವಣಿಗೆಯ ಮೇಲೆ ತುಂಬ ಪ್ರಭಾವ ಬೀರುತ್ತದೆ, ಅದನ್ನು ಬಹುವಾಗಿ ಉತ್ಕರ್ಷಿಸುತ್ತದೆ. ಆದ್ದರಿಂದ ಬಂಡವಾಳದ ರಫ್ತು ಅದನ್ನು ರಫ್ತು ಮಾಡಿದ ದೇಶದಲ್ಲೇ ಬಂಡವಾಳವಾದದ ಬೆಳವಣಿಗೆಯನ್ನು ಸ್ವಲ್ಪ ಮಟ್ಟಿಗೆ ತಡೆಹಿಡಿಯುವ ಪ್ರವೃತ್ತಿ ಹೊಂದಿದ್ದರೂ, ಅದು ಜಗತ್ತಿನಾದ್ಯಂತ ಬಂಡವಾಳವಾದದ ಮತ್ತೂ ಹೆಚ್ಚಿನ ಬೆಳವಣಿಗೆಯನ್ನು ವಿಸ್ತರಿಸುವ ಹಾಗೂ ಗಾಢಗೊಳಿಸುವ ಮೂಲಕವಷ್ಟೆ ಹಾಗೆ ಮಾಡಬಲ್ಲುದು.

ಬಂಡವಾಳವನ್ನು ರಫ್ತು ಮಾಡುವ ದೇಶಗಳು ಸುಮಾರಾಗಿ ಯಾವತ್ತೂ ಕೆಲವು "ಅಧಿಕಾನುಕೂಲ"ಗಳನ್ನು ಪಡೆದುಕೊಳ್ಳಬಲ್ಲವು. ಈ ಅಧಿಕಾನುಕೂಲಗಳ ಸ್ವರೂಪವು ಹಣಕಾಸು ಬಂಡವಾಳ ಹಾಗೂ ಏಕಸ್ವಾಮ್ಯಗಳ ಯುಗದ ವಿಲಕ್ಷಣತೆಯ ಮೇಲೆ ಬೆಳಕು ಚೆಲ್ಲುತ್ತದೆ. ಉದಾಹರಣೆಗೆ, ಕೆಳಗೆ ಉದ್ಧರಿಸಿದ ಭಾಗವು ಬರ್ಲಿನ್ ಪತ್ರಿಕೆ 'ದಿ ಬ್ಯಾಂಕ್'ನಲ್ಲಿ 1913ರ ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟವಾಯಿತು:

"ಇತ್ತೀಚೆಗೆ ಅಂತರರಾಷ್ಟ್ರೀಯ ಬಂಡವಾಳ ಮಾರುಕಟ್ಟೆಯಲ್ಲಿ ಅರಿಸ್ಟೋಫನೀಸನ ಲೇಖನಿಗೆ ಯೋಗ್ಯವಾದಂಥ ಪ್ರಹಸನವೊಂದು ನಡೆಯುತ್ತಿದೆ. ಅನೇಕಾನೇಕ ವಿದೇಶಗಳು, ಸ್ಪೈನ್‌ನಿಂದ ಹಿಡಿದು ಬಾಲ್ಕನ್ ರಾಜ್ಯಗಳವರೆಗೆ, ರಷ್ಯದಿಂದ ಹಿಡಿದು ಅರ್ಜೆಂಟೈನಾ, ಬ್ರೆಜಿಲ್ ಹಾಗೂ ಚೀಣಾವರೆಗೆ, ಬಹಿರಂಗವಾಗಿಯೋ ರಹಸ್ಯವಾಗಿಯೋ ಭಾರಿ ಪ್ರಮಾಣದ ಹಣ ಮಾರುಕಟ್ಟೆಗಳಿಗೆ ಸಾಲಗಳಿಗಾಗಿ ಕೇಳಿಕೆಗಳೊಂದಿಗೆ, ಕೆಲವು ವೇಳೆ ಸತತವಾದ ಕೇಳಿಕೆಗಳೊಂದಿಗೆ, ಬರುತ್ತಿವೆ. ಹಣ ಮಾರುಕಟ್ಟೆಗಳು ಪ್ರಸ್ತುತ ಸಮಯದಲ್ಲಿ ತುಂಬ ಉತ್ಸಾಹದಿಂದ ಕೂಡಿಲ್ಲ, ರಾಜಕೀಯ ಪರಿಸ್ಥಿತಿಯೂ ಆಶಾಜನಕವಾಗಿಲ್ಲ. ಆದರೆ ಏಕೈಕ ಹಣ ಮಾರುಕಟ್ಟೆಯೂ ಸಾಲವನ್ನು ನಿರಾಕರಿಸುವ ಸಾಹಸ ಮಾಡದು, ಏಕೆಂದರೆ ತನ್ನ ನೆರೆ ರಾಷ್ಟ್ರ ಎಲ್ಲಿ ತನಗಿಂತ ಮುನ್ನವೇ ಸಾಲ ನೀಡಲು ಒಪ್ಪಿ ತನ್ಮೂಲಕ ಏನಾದರೂ ಪ್ರತ್ಯುಪಕಾರಗಳನ್ನು ಪಡೆದುಕೊಂಡು ಬಿಡುವುದೋ, ಎಂಬ ಅಂಜಿಕೆ ಅದಕ್ಕೆ. ಈ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಸಾಲ ನೀಡುವ ದೇಶ ಏನಾದರೂ ಸ್ವಲ್ಪ ಹೆಚ್ಚಿನ ಪ್ರಯೋಜನವನ್ನು – ವಾಣಿಜ್ಯ ಒಪ್ಪಂದದಲ್ಲಿ ತನಗನುಕೂಲವಾಗುವಂಥ ಒಂದು ನಿಬಂಧನೆ, ಇಲ್ಲವೇ ಕಲ್ಲಿದ್ದಲು ಸಾಗಾಣಿಕೆಯ ಒಂದು ಕೇಂದ್ರ, ಬಂದರು ಕಟ್ಟಲು ಒಂದು ಕಾಂಟ್ರಾಕ್ಟ್, ತುಂಬ ಲಾಭ ನೀಡುವಂತಹ ಒಂದು ಕನ್ಸೆಷನ್, ಅಥವಾ ಫಿರಂಗಿ ಸರಬರಾಜು ಮಾಡಲು ಒಂದು ಆರ್ಡರ್, ಇಂತಹ ಯಾವುದನ್ನಾದರೂ ಪ್ರಯೋಜನವನ್ನು – ಪಡೆಯುವುದರಲ್ಲಿ ಯಾವತ್ತೂ ಯಶಸ್ವಿಯಾಗುತ್ತದೆ."*

ಹಣಕಾಸು ಬಂಡವಾಳವು ಏಕಸ್ವಾಮ್ಯ ಸಂಸ್ಥೆಗಳ ಯುಗವನ್ನು ಸೃಜಿಸಿದೆ

* *Die Bank,* 1913, 2, ಪು. 1024-1025.

ಮತ್ತು ಏಕಸ್ವಾಮ್ಯ ಸಂಸ್ಥೆಗಳು ಎಲ್ಲೆಲ್ಲೂ ಏಕಸ್ವಾಮ್ಯ ಸೂತ್ರಗಳನ್ನು ಜಾರಿಗೆ ತರುತ್ತವೆ: ಬಹಿರಂಗ ಮಾರುಕಟ್ಟೆಯಲ್ಲಿ ಸ್ಪರ್ಧೆ ನಡೆಸುವುದರ ಸ್ಥಳದಲ್ಲಿ ಲಾಭ ದಾಯಕ ವ್ಯವಹಾರಗಳಿಗಾಗಿ "ಸಂಬಂಧ"ಗಳನ್ನು ಬಳಸಿಕೊಳ್ಳುವ ನೀತಿ ಬರುತ್ತದೆ. ನೀಡಲಾದ ಸಾಲದಲ್ಲಿ ಒಂದು ಭಾಗವನ್ನು ಸಾಲ ನೀಡುವ ದೇಶದ ಸರಕುಗಳನ್ನೇ ಕೊಳ್ಳಲು, ನಿರ್ದಿಷ್ಟವಾಗಿ ಯುದ್ಧ ಸಾಮುಗ್ರಿಗಳಿಗಾಗಿಯೋ ಹಡಗು ಇತ್ಯಾದಿ ಗಳಿಗಾಗಿಯೋ ಆರ್ಡರುಗಳನ್ನು ನೀಡಲು, ಬಳಸುವಂತೆ ಕಟ್ಟುಪಾಡು ಹಾಕುವುದು ತುಂಬ ಸಾಮಾನ್ಯವಾದ ಪದ್ಧತಿಯಾಗಿದೆ. ಕಳೆದ ಎರಡು ದಶಕಗಳ ಅವಧಿಯಲ್ಲೇ (1890-1910) ಫ್ರಾನ್ಸು ಬಹುವೇಳೆ ಈ ಪದ್ಧತಿಯನ್ನು ಬಳಸಿದೆ. ಹೀಗೆ ಬಂಡ ವಾಳದ ರಫ್ತು ಸರಕುಗಳ ರಫ್ತಿಗೆ ಉತ್ತೇಜನ ನೀಡುವ ಸಾಧನವಾಗಿದೆ. ಈ ಸಂದರ್ಭ ದಲ್ಲಿ ನಿರ್ದಿಷ್ಟವಾಗಿ ದೊಡ್ಡ ವ್ಯಾಪಾರ ಸಂಸ್ಥೆಗಳ ನಡುವಿನ ವ್ಯವಹಾರಗಳು ಎಂತಹ ರೂಪ ತಳೆಯುತ್ತವೆಂದರೆ, ಅದನ್ನು, ಷಿಲ್ಡೆರ್‌ರವರು * "ಸೌಮ್ಯ"ವಾಗಿ ಕರೆದಂತೆ, "ಲಂಚಕ್ಕೆ ಸಮೀಪ"ವೆಂದೇ ಕರೆಯಬಹುದು. ಜರ್ಮನಿಯಲ್ಲಿ ಕ್ರುಪ್ಪ್ ಕಂಪನಿ, ಫ್ರಾನ್ಸಿನಲ್ಲಿ ಷ್ನೈಡೆರ್ ಕಂಪನಿ, ಇಂಗ್ಲೆಂಡಿನಲ್ಲಿ ಆರ್ಮ್‌ಸ್ಟ್ರಾಂಗ್ ಕಂಪನಿ – ಇವು ಪ್ರಬಲ ಬ್ಯಾಂಕುಗಳೊಂದಿಗೂ ಸರಕಾರಗಳೊಂದಿಗೂ ನಿಕಟ ಸಂಬಂಧಗಳನ್ನು ಹೊಂದಿವೆ. ಸಾಲ ತೆಗೆದುಕೊಳ್ಳುವ ಏರ್ಪಾಟು ನಡೆದಾಗ ಈ ಕಂಪನಿಗಳನ್ನು ಅಷ್ಟು ಸುಲಭ ವಾಗಿ "ಉಪೇಕ್ಷಿಸಲು" ಸಾಧ್ಯವಿಲ್ಲ.

ಫ್ರಾನ್ಸು ರಷ್ಯಕ್ಕೆ ಸಾಲ ನೀಡುತ್ತ, 1905ರ ಸೆಪ್ಟೆಂಬರ್ 16ರ ವಾಣಿಜ್ಯ ಒಪ್ಪಂದದಲ್ಲಿ ಅದನ್ನು "ಹಿಸುಕಿ," 1917ರವರೆಗೂ ಚಲಾವಣೆಯಲ್ಲಿರುವಂತೆ ಕೆಲವು ರಿಯಾಯಿತಿಗಳನ್ನು ನೀಡಬೇಕೆಂದು ಕಟ್ಟುಪಾಡು ಹಾಕಿತು. 1911ರ ಆಗಸ್ಟ್ 19ರಂದು ಜಪಾನಿನೊಂದಿಗೆ ಮಾಡಿಕೊಂಡ ವಾಣಿಜ್ಯ ಒಪ್ಪಂದದಲ್ಲೂ ಅದು ಇದೇ ರೀತಿ ಮಾಡಿತು. 1906ರಿಂದ 1911ರವರೆಗೆ, ಮಧ್ಯೆ ಏಳು ತಿಂಗಳಷ್ಟೆ ಬಿಟ್ಟು, ಆಸ್ಟ್ರಿಯಾ ಹಾಗೂ ಸೆರ್ಬಿಯಾಗಳ ನಡುವೆ ನಡೆದ ಸುಂಕದ ಯುದ್ಧವು ಭಾಗಶಃ ಸೆರ್ಬಿಯಾಕ್ಕೆ ಯುದ್ಧ ಸಾಮುಗ್ರಿಗಳನ್ನು ಸರಬರಾಜು ಮಾಡಲು ಆಸ್ಟ್ರಿಯಾ ಹಾಗೂ ಫ್ರಾನ್ಸ್‌ಗಳ ನಡುವೆ ನಡೆದ ಸ್ಪರ್ಧೆಯಿಂದ ಉಂಟಾಗಿದ್ದಿತು. 1908ರಿಂದ 1911ರವರೆಗೆ ಫ್ರೆಂಚ್ ವ್ಯಾಪಾರ ಸಂಸ್ಥೆಗಳು ಸೆರ್ಬಿಯಾಕ್ಕೆ 45 ಮಿಲಿಯ ಫ್ರಾಂಕು ಗಳಾಗುವಷ್ಟು ಯುದ್ಧ ಸಾಮುಗ್ರಿಗಳನ್ನು ಸರಬರಾಜು ಮಾಡಿದ್ದವೆಂದು 1912ರ ಜನವರಿಯಲ್ಲಿ ಪಾಲ್ ಡೆಷಾನೇಲ್ ಡೆಪ್ಯೂಟಿಗಳ ಸದನದಲ್ಲಿ ತಿಳಿಸಿದರು.

ಸೇಂಟ್-ಪೌಲೊ(ಬ್ರೆಜಿಲ್)ನಲ್ಲಿನ ಆಸ್ಟ್ರೋ-ಹಂಗೇರಿಯನ್ ಕಾನ್ಸಲ್‌ನಿಂದ ಬಂದ ಒಂದು ವರದಿ ತಿಳಿಸುತ್ತದೆ: "ಬ್ರೆಜಿಲಿಯನ್ ರೈಲ್ವೇಯನ್ನು ಪ್ರಧಾನವಾಗಿ ಫ್ರೆಂಚ್, ಬೆಲ್ಜಿಯನ್, ಬ್ರಿಟಿಷ್ ಹಾಗೂ ಜರ್ಮನ್ ಬಂಡವಾಳದಿಂದ ನಿರ್ಮಿಸ ಲಾಗುತ್ತಿದೆ. ಈ ರೈಲ್ವೇಗಳ ನಿರ್ಮಾಣಕ್ಕೆ ಸಂಬಂಧಿಸಿದ ಹಣಕಾಸು ಕಾರ್ಯಾಚರಣೆ

* Schilder, ಪೂರ್ವೋಕ್ತ ಗ್ರಂಥ, ಪು. 346, 350 ಹಾಗೂ 371.

ಗಳಲ್ಲಿ ಸಂಬಂಧಪಟ್ಟ ದೇಶಗಳು ನಿರ್ಮಾಣಕ್ಕೆ ಅವಶ್ಯವಾದ ರೈಲ್ವೇ ಸಾಮಗ್ರಿಗಳಿಗೆ ತಮಗೇ ಆರ್ಡರುಗಳನ್ನು ನೀಡಬೇಕೆಂದು ಷರತ್ತು ಹಾಕಿವೆ."

ಹೀಗೆ ಹಣಕಾಸು ಬಂಡವಾಳವು ಅಕ್ಷರಶಃ ಎಂದೇ ಹೇಳಬಹುದು, ತನ್ನ ಬಲೆಯನ್ನು ಜಗತ್ತಿನ ಎಲ್ಲ ದೇಶಗಳ ಮೇಲೂ ಹರಡುತ್ತದೆ. ಇದರಲ್ಲಿ ವಸಾಹತು ಗಳಲ್ಲಿ ಸ್ಥಾಪಿಸಲಾದ ಬ್ಯಾಂಕುಗಳು ಮತ್ತು ಅವುಗಳ ಶಾಖೆಗಳು ಒಂದು ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಈ ವಿಷಯದಲ್ಲಿ ತಮಗೆ ಸೌಕರ್ಯಗಳನ್ನು ಒದಗಿಸಿ ಕೊಳ್ಳುವುದರಲ್ಲಿ ವಿಶೇಷವಾಗಿ "ಯಶಸ್ವಿ"ಯಾದ "ಹಳೆಯ" ವಸಾಹತುವಾದಿ ದೇಶ ಗಳನ್ನು ಜರ್ಮನ್ ಸಾಮ್ರಾಜ್ಯಶಾಹಿಗಳು ಅಸೂಯೆಯಿಂದ ನೋಡುತ್ತಾರೆ. 1904 ರಲ್ಲಿ ಗ್ರೇಟ್ ಬ್ರಿಟನ್ 2,279 ಶಾಖೆಗಳನ್ನುಳ್ಳ 50 ವಸಾಹತು ಬ್ಯಾಂಕುಗಳನ್ನು ಹೊಂದಿದ್ದಿತು (1910ರಲ್ಲಿ 5,449 ಶಾಖೆಗಳುಳ್ಳ 72 ಬ್ಯಾಂಕುಗಳಿದ್ದವು); ಫ್ರಾನ್ಸ್ 136 ಶಾಖೆಗಳುಳ್ಳ 20 ಬ್ಯಾಂಕುಗಳನ್ನು ಹೊಂದಿದ್ದಿತು; ಹಾಲೆಂಡ್ 68 ಶಾಖೆ ಗಳುಳ್ಳ 16 ಬ್ಯಾಂಕುಗಳನ್ನು ಹೊಂದಿದ್ದಿತು; ಜರ್ಮನಿಯು 70 ಶಾಖೆಗಳುಳ್ಳ "ಕೇವಲ" 13 ಬ್ಯಾಂಕುಗಳನ್ನು ಹೊಂದಿದ್ದಿತು.* ಅಮೆರಿಕನ್ ಬಂಡವಾಳಗಾರರು, ತಮ್ಮ ಸರದಿಯಲ್ಲಿ, ಇಂಗ್ಲಿಷರ ಬಗೆಗೂ ಜರ್ಮನರ ಬಗೆಗೂ ಅಸೂಯೆ ಪಡು ತ್ತಾರೆ: "ದಕ್ಷಿಣ ಅಮೆರಿಕದಲ್ಲಿ ಐದು ಜರ್ಮನ್ ಬ್ಯಾಂಕುಗಳು 40 ಶಾಖೆಗಳನ್ನು ಹೊಂದಿವೆ, ಐದು ಇಂಗ್ಲಿಷ್ ಬ್ಯಾಂಕುಗಳು 70 ಶಾಖೆಗಳನ್ನು ಹೊಂದಿವೆ..." ಎಂದ ವರು 1915ರಲ್ಲಿ ದೂರುತ್ತಿದ್ದರು. "ಇಂಗ್ಲೆಂಡ್ ಹಾಗೂ ಜರ್ಮನಿಗಳು ಕಳೆದ 25 ವರ್ಷಗಳಲ್ಲಿ ಅರ್ಜೆಂಟೈನಾ, ಬ್ರೆಜಿಲ್ ಹಾಗೂ ಉರುಗ್ವೆಗಳಲ್ಲಿ ಸರಿಸುಮಾರು ನಾಲ್ಕು ಸಾವಿರ ಮಿಲಿಯ ಡಾಲರುಗಳಷ್ಟು ಬಂಡವಾಳವನ್ನು ತೊಡಗಿಸಿವೆ ಮತ್ತು ತತ್ಫಲವಾಗಿ ಈ ಮೂರು ದೇಶಗಳ ಒಟ್ಟು ವ್ಯಾಪಾರದಲ್ಲಿ ಶೇ. 46ರಷ್ಟನ್ನು ತಮ್ಮ ಕೈಯಲ್ಲೇ ಇರಿಸಿಕೊಂಡಿವೆ."**

ಬಂಡವಾಳವನ್ನು ರಫ್ತು ಮಾಡುವ ದೇಶಗಳು ಪದದ ಅಲಂಕಾರಾರ್ಥದಲ್ಲಿ ಜಗತ್ತನ್ನು ತಮ್ಮ ಮಧ್ಯೆಯೇ ವಿಭಜಿಸಿಕೊಂಡಿವೆ. ಆದರೆ ಹಣಕಾಸು ಬಂಡವಾಳವು ಜಗತ್ತನ್ನು ವಾಸ್ತವವಾಗಿ ವಿಭಜಿಸುವುದಕ್ಕೂ ದಾರಿ ತೆರೆದಿದೆ.

---

*Riesser, ಪೂರ್ವೋಕ್ತ ಗ್ರಂಥ, 4ನೇ ಆವೃತ್ತಿ, ಪು. 375, Diouritch, ಪು. 283.

***The Annals of the American Academy of Political and Social Science*, vol. LIX, May, 1915, p. 301 ('ಅಮೆರಿಕದ ರಾಜಕೀಯ ಹಾಗೂ ಸಾಮಾಜಿಕ ವಿಜ್ಞಾನ ಪರಿಷತ್ತಿನ ವರ್ಷಾನುಚರಿತ್ರೆ,' ಸಂ. LIX, ಮೇ 1915, ಪು. 301.-ಸಂ.). ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಬೆಲ್ಜಿಯಂ ಹಾಗೂ ಹಾಲೆಂಡ್‌ಗಳು ರಫ್ತು ಮಾಡಿದ ಬಂಡವಾಳದ ಒಟ್ಟು ಪ್ರಮಾಣ 40

# V. ಬಂಡವಾಳಶಾಹಿ ಸಮುಚ್ಚಯಗಳ ಮಧ್ಯೆ ಜಗತ್ತಿನ ವಿಭಜನೆ

ಏಕಸ್ವಾಮ್ಯ ಬಂಡವಾಳಶಾಹಿ ಸಮುಚ್ಚಯಗಳು – ಕಾರ್ಟೆಲ್‌ಗಳು, ಸಿಂಡಿಕೇಟುಗಳು ಮತ್ತು ಟ್ರಸ್ಟುಗಳು – ತಮ್ಮ ಮಧ್ಯೆಯೇ ಮೊಟ್ಟಮೊದಲನೆಯದಾಗಿ ಗೃಹ ಮಾರುಕಟ್ಟೆಯನ್ನು ಹಂಚಿಕೊಳ್ಳುತ್ತವೆ, ದೇಶವೊಂದರ ಕೈಗಾರಿಕೆಯನ್ನು ಹೆಚ್ಚು ಕಮ್ಮಿ ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಳ್ಳುತ್ತವೆ. ಆದರೆ ಬಂಡವಾಳಶಾಹಿ ಪದ್ಧತಿಯಲ್ಲಿ ಗೃಹ ಮಾರುಕಟ್ಟೆಯು ಅನಿವಾರ್ಯವಾಗಿಯೇ ವಿದೇಶೀ ಮಾರುಕಟ್ಟೆಯೊಂದಿಗೆ ಸಂಬಂಧಿಸಲ್ಪಟ್ಟಿರುತ್ತದೆ. ಬಂಡವಾಳಶಾಹಿ ಪದ್ಧತಿಯು ಬಹು ಹಿಂದೆಯೇ ಜಾಗತಿಕ ಮಾರುಕಟ್ಟೆಯೊಂದನ್ನು ಸೃಜಿಸಿತು. ಬಂಡವಾಳದ ರಫ್ತು ಹೆಚ್ಚಿದಂತೆ ಮತ್ತು ವಿದೇಶೀ ಹಾಗೂ ವಸಾಹತು ಸಂಬಂಧಗಳೂ ದೊಡ್ಡ ಏಕಸ್ವಾಮ್ಯ ಸಮುಚ್ಚಯಗಳ "ಪ್ರಭಾವ ವಲಯಗಳೂ" ಎಲ್ಲ ರೀತಿಗಳಲ್ಲೂ ವಿಸ್ತರಿಸಿದಂತೆ, ಪರಿಸ್ಥಿತಿ "ಸಹಜವಾಗಿಯೇ" ಈ ಸಮುಚ್ಚಯಗಳ ನಡುವೆ ಅಂತರರಾಷ್ಟ್ರೀಯ ಒಪ್ಪಂದವೊಂದರತ್ತ, ಅಂತರರಾಷ್ಟ್ರೀಯ ಕಾರ್ಟೆಲ್‌ಗಳ ನಿರ್ಮಾಣದತ್ತ, ಆಕರ್ಷಿತವಾಯಿತು.

ಇದು ಬಂಡವಾಳ ಹಾಗೂ ಉತ್ಪಾದನೆಯ ಜಾಗತಿಕ ಕೇಂದ್ರೀಕರಣದಲ್ಲಿ ಒಂದು ಹೊಸ ಘಟ್ಟವಾಗಿದ್ದಿತು, ಅದಕ್ಕೆ ಮುನ್ನಿನ ಎಲ್ಲ ಘಟ್ಟಗಳಿಗಿಂತಲೂ ಅಸದೃಶವಾಗಿ ಹೆಚ್ಚು ಉನ್ನತವಾದ ಘಟ್ಟವಾಗಿದ್ದಿತು. ಈ ಅಧಿಏಕಸ್ವಾಮ್ಯ ಹೇಗೆ ವಿಕಾಸಗೊಳ್ಳುತ್ತದೆಂಬುದನ್ನು ನೋಡೋಣ.

ವಿದ್ಯುತ್ ಕೈಗಾರಿಕೆಯು ಇತ್ತೀಚೆಗಿನ ತಾಂತ್ರಿಕ ಸಾಧನೆಗಳ ಅತ್ಯಂತ ಮಾದರಿ ಕೈಗಾರಿಕೆಯಾಗಿದೆ, 19ನೆಯ ಶತಮಾನದ ಕೊನೆ ಹಾಗೂ 20ನೆಯ ಶತಮಾನದ ಆದಿಭಾಗದ ಬಂಡವಾಳವಾದಕ್ಕೆ ಅತ್ಯಂತ ಮಾದರಿಯದಾಗಿದೆ. ಈ ಕೈಗಾರಿಕೆಯು ಹೊಸ ಬಂಡವಾಳಶಾಹಿ ದೇಶಗಳಲ್ಲಿ ಎರಡು ಅತ್ಯಂತ ಮುಂದುವರಿದ ದೇಶಗಳಲ್ಲಿ – ಸಂಯುಕ್ತ ಸಂಸ್ಥಾನಗಳಲ್ಲಿ ಹಾಗೂ ಜರ್ಮನಿಯಲ್ಲಿ – ತುಂಬ ಹೆಚ್ಚಾಗಿ ವಿಕಾಸಗೊಂಡಿದೆ. ಜರ್ಮನಿಯಲ್ಲಿ 1900ರ ಮುಗ್ಗಟ್ಟು ವಿದ್ಯುತ್ ಕೈಗಾರಿಕೆಯ ಕೇಂದ್ರೀಕರಣಕ್ಕೆ ವಿಶೇಷವಾಗಿ ಪ್ರಬಲವಾದ ಪ್ರಚೋದನೆ ನೀಡಿತು. ಮುಗ್ಗಟ್ಟಿನ ಸಮಯದಲ್ಲಿ, ಆ ಹೊತ್ತಿಗೆ ಕೈಗಾರಿಕೆಯೊಂದಿಗೆ ಸಾಕಷ್ಟು ಚೆನ್ನಾಗಿ ಮಿಳನಗೊಂಡಿದ್ದ ಬ್ಯಾಂಕುಗಳು ಸಾಪೇಕ್ಷವಾಗಿ ಸಣ್ಣವಾಗಿದ್ದ ಸಂಸ್ಥೆಗಳ ವಿನಾಶವನ್ನು ಮತ್ತು ದೊಡ್ಡ ಸಂಸ್ಥೆ

---

ಸಾವಿರ ಮಿಲಿಯ ಡಾಲರುಗಳು, ಅಂದರೆ 200 ಸಾವಿರ ಮಿಲಿಯ ಫ್ರಾಂಕುಗಳು, ಆಗಿದ್ದಿತೆಂದು ಸುಪ್ರಸಿದ್ಧ ಅಂಕಿಅಂಶಶಾಸ್ತ್ರಜ್ಞ Paish (ಪೈಷ್‌ರವರು) *Statist* ಹಣಕಾಸು ಪತ್ರಿಕೆಯ ಕೊನೆಯ ಸಂಚಿಕೆಯಲ್ಲಿ ಅಂದಾಜು ಮಾಡಿದರೆಂದು ನಾವು ಅದೇ ಸಂಪುಟದ ಪು. 331ರಲ್ಲಿ ಓದುತ್ತೇವೆ.

ಗಳಲ್ಲಿ ಅವು ವಿಲೀನಗೊಳ್ಳುವುದನ್ನು ವಿಪರೀತವಾಗಿ ಉತ್ಕರ್ಷಿಸಿದವು ಮತ್ತು ತೀವ್ರಗೊಳಿಸಿದವು. "ಬ್ಯಾಂಕುಗಳು ಯಾವ ಕಂಪನಿಗಳಿಗೆ ಬಂಡವಾಳವು ಅತ್ಯ ವಶ್ಯವೋ ಆ ಕಂಪನಿಗಳಿಗೇ ನೆರವಿನ ಹಸ್ತ ನಿರಾಕರಿಸುವ ಮೂಲಕ ತಮಗೆ ಸಾಕಷ್ಟು ನಿಕಟವಾಗಿ ಸಂಬಂಧಿಸದ ಕಂಪನಿಗಳಲ್ಲಿ ಮೊದಲು ಒಂದು ಉನ್ಮತ್ತ ವಿಕಾಸವನ್ನೂ ಅನಂತರ ನಿರಾಶಾದಾಯಕವಾದ ವೈಫಲ್ಯವನ್ನೂ ಉಂಟುಮಾಡುತ್ತವೆ" * ಎಂದು ಯೆಯ್‌ಡೆಲ್ಸ್ ಬರೆಯುತ್ತಾರೆ....

ಇದರ ಫಲವಾಗಿ, 1900ರ ನಂತರ, ಜರ್ಮನಿಯಲ್ಲಿ ಕೇಂದ್ರೀಕರಣವು ದಾಪು ಗಾಲಿನೊಂದಿಗೆ ಪ್ರಗತಿ ಸಾಧಿಸಿತು. 1900ರವರೆಗೆ ವಿದ್ಯುತ್ ಕೈಗಾರಿಕೆಯಲ್ಲಿ ಎಂಟು ಅಥವಾ ಏಳು "ವೃಂದ"ಗಳಿದ್ದವು. ಒಂದೊಂದೂ ಹಲವಾರು ಕಂಪನಿಗಳನ್ನು ಒಳ ಗೊಂಡಿದ್ದಿತು (ಒಟ್ಟು 28 ಕಂಪನಿಗಳಿದ್ದವು) ಮತ್ತು ಒಂದೊಂದಕ್ಕೂ 2ರಿಂದ 11 ಬ್ಯಾಂಕುಗಳ ಬೆಂಬಲವಿದ್ದಿತು. 1908 ಹಾಗೂ 1912ರ ನಡುವೆ ಈ ಎಲ್ಲ ವೃಂದ ಗಳನ್ನೂ ಎರಡು ಅಥವಾ ಒಂದು ವೃಂದವನ್ನಾಗಿ ಮಿಳನಗೊಳಿಸಲಾಯಿತು. 89 ನೆಯ ಪುಟದಲ್ಲಿರುವ ರೇಖಾಚಿತ್ರ ಈ ಪ್ರಕ್ರಿಯೆಯನ್ನು ಸ್ಪಷ್ಟವಾಗಿ ತಿಳಿಸುತ್ತದೆ.

ಈ ರೀತಿಯಲ್ಲಿ ಬೆಳೆದ ಸುಪ್ರಸಿದ್ಧ A. E. G. (ಜನರಲ್ ಎಲೆಕ್ಟ್ರಿಕ್ ಕಂಪನಿ) 175ರಿಂದ 200 ಕಂಪನಿಗಳ ಮೇಲೆ ("ಹೋಲ್ಡಿಂಗ್" ಪದ್ಧತಿಯ ಮೂಲಕ) ನಿಯಂತ್ರಣ ಹೊಂದಿದೆ ಮತ್ತು ಸರಿಸುಮಾರು 1,500 ಮಿಲಿಯ ಮಾರ್ಕುಗಳ ಒಟ್ಟು ಬಂಡವಾಳ ಹೊಂದಿದೆ. ವಿದೇಶಗಳಲ್ಲೇ ಅದು, 34 ನೇರ ಏಜೆನ್ಸಿಗಳನ್ನು ಹೊಂದಿದೆ. ಇವುಗಳಲ್ಲಿ 12 ಜಾಯಿಂಟ್ ಸ್ಟಾಕ್ ಕಂಪನಿಗಳು. ಇವು ಹತ್ತಕ್ಕೂ ಹೆಚ್ಚು ದೇಶಗಳಲ್ಲಿವೆ. 1904ರಷ್ಟು ಹಿಂದೆಯೇ ಜರ್ಮನ್ ವಿದ್ಯುತ್ ಕೈಗಾರಿಕೆಯು ಹೊರದೇಶಗಳಲ್ಲಿ ಹಾಕಿದ ಬಂಡವಾಳ 233 ಮಿಲಿಯ ಮಾರ್ಕುಗಳೆಂದು ಅಂದಾಜು ಮಾಡಲಾಗಿದ್ದಿತು. ಇದರಲ್ಲಿ 62 ಮಿಲಿಯವನ್ನು ರಷ್ಯದಲ್ಲಿ ಹಾಕಲಾಯಿತು. A. E. G.ಯು ಒಂದು ಭಾರಿ "ಸಮುಚ್ಚಯ" ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅದರ ತಯಾರಿಕಾ ಕಂಪನಿಗಳೇ ಹದಿನಾರಕ್ಕೆ ಕಮ್ಮಿ ಇಲ್ಲದಂತಿವೆ. ಅವು ಕೇಬಲ್ ಹಾಗೂ ಇನ್ಸುಲೇಟರ್‌ಗಳಿಂದ ಹಿಡಿದು ಮೋಟಾರುಕಾರು ಫ್ಲೈಯಿಂಗ್ ಮಷೀನ್ ಗಳವರೆಗೆ ಅತ್ಯಂತ ಭಿನ್ನವಿಭಿನ್ನ ವಸ್ತುಗಳನ್ನು ತಯಾರಿಸುತ್ತವೆ.

---

* ಯೆಯ್‌ಡೆಲ್ಸ್, ಪೂರ್ವೋಕ್ತ ಗ್ರಂಥ, ಪು. 232.

## ವಿದ್ಯುತ್ ಕೈಗಾರಿಕೆಯಲ್ಲಿ ವೃಂದಗಳು

| | | | | | |
|---|---|---|---|---|---|
| 1900ಕ್ಕೆ ಮುನ್ನ | ಫೆಲ್ಟನ್ ಅಂಡ್ ಗಿಲ್ಯೋಮ್ ; ಲಾಮೇಯರ್ | ಯೂನಿಯನ್ A.E.G. | ಸೀಮೆನ್ಸ್ ಅಂಡ್ ಹಾಲ್‌ಸ್ಕೆ ; ಷುಕೆರ್ಟ್ ಅಂಡ್ ಕಂಪನಿ | ಬರ್ಗ್‌ಮನ್ | ಕುಮ್ಮರ್ |
| | ಫೆಲ್ಟನ್ ಅಂಡ್ ಲಾಮೇಯರ್ | A.E.G. | ಸೀಮೆನ್ಸ್ ಅಂಡ್ ಹಾಲ್‌ಸ್ಕೆ-ಷುಕೆರ್ಟ್ | ಬರ್ಗ್‌ಮನ್ | 1900ರಲ್ಲಿ ದಿವಾಳಿ ಎದ್ದಿತು |
| | A.E.G. (ಜನರಲ್ ಎಲೆಕ್ಟ್ರಿಕ್ ಕಂಪನಿ) | | ಸೀಮೆನ್ಸ್ ಅಂಡ್ ಹಾಲ್‌ಸ್ಕೆ-ಷುಕೆರ್ಟ್ | | |
| 1912ರ ಹೊತ್ತಿಗೆ | (1908ರಿಂದ ನಿಕಟ "ಸಹಕಾರ"ದಿಂದಿವೆ) | | | | |

ಆದರೆ ಯೂರೋಪಿನಲ್ಲಿನ ಕೇಂದ್ರೀಕರಣವು ಈ ಕೆಳಗಿನಂತೆ ವಿಕಾಸಗೊಂಡ ಅಮೆರಿಕದಲ್ಲಿನ ಕೇಂದ್ರೀಕರಣ ಪ್ರಕ್ರಿಯೆಯ ಒಂದು ಅಂಗಭಾಗವೂ ಆಗಿದ್ದಿತು:

ಜನರಲ್ ಎಲೆಕ್ಟ್ರಿಕ್ ಕಂಪನಿ (General Electric Co.)

| | | |
|---|---|---|
| ಸಂಯುಕ್ತ ಸಂಸ್ಥಾನಗಳು | ಥಾಮ್ಸನ್-ಹೌಸ್ಟನ್ ಕಂಪನಿ ಯೂರೋಪಿನಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸುತ್ತದೆ | ಎಡಿಸನ್ ಕಂಪನಿಯು ಯೂರೋಪಿನಲ್ಲಿ ಫ್ರೆಂಚ್ ಎಡಿಸನ್ ಕಂಪನಿಯನ್ನು ಸ್ಥಾಪಿಸುತ್ತದೆ. ಇದು ತನ್ನ ಪೇಟೆಂಟುಗಳನ್ನು ಜರ್ಮನ್ ಸಂಸ್ಥೆಗೆ ವರ್ಗಾಯಿಸುತ್ತದೆ |
| ಜರ್ಮನಿ | ಯೂನಿಯನ್ ಎಲೆಕ್ಟ್ರಿಕ್ ಕಂಪನಿ | ಜನರಲ್ ಎಲೆಕ್ಟ್ರಿಕ್ ಕಂಪನಿ (A.E.G.) |

ಜನರಲ್ ಎಲೆಕ್ಟ್ರಿಕ್ ಕಂಪನಿ (A.E.G.)

ಹೀಗೆ, ಎರಡು ವಿದ್ಯುತ್ "ಸಾಮ್ರಾಜ್ಯ"ಗಳನ್ನು ಸ್ಥಾಪಿಸಲಾಯಿತು: "ಇವುಗಳಿಂದ ಸಂಪೂರ್ಣವಾಗಿ ಸ್ವತಂತ್ರವಾದ ಬೇರೆ ಯಾವ ವಿದ್ಯುತ್ ಕಂಪನಿಗಳೂ ಈ ಜಗತ್ತಿನಲ್ಲಿಲ್ಲ" ಎಂದು ಹೈನಿಗ್‌ರವರು 'ವಿದ್ಯುತ್ ಟ್ರಸ್ಟುಗಳ ಮಾರ್ಗ' ಎಂಬ ಲೇಖನದಲ್ಲಿ ಬರೆದರು. ಈ ಎರಡು "ಟ್ರಸ್ಟುಗಳ" ಉದ್ಯಮಗಳ ಗಾತ್ರ ಹಾಗೂ ಹುಟ್ಟುವಳಿಯ ಬಗೆಗೆ ಪೂರ್ಣವಲ್ಲದಿದ್ದರೂ ಒಂದು ಸ್ಪಷ್ಟವಾದ ಭಾವನೆಯನ್ನು ಈ ಕೆಳಗಿನ ಸಂಖ್ಯೆಗಳಿಂದ ಪಡೆದುಕೊಳ್ಳಬಹುದು:

| | ಹುಟ್ಟುವಳಿ (ಮಿಲಿಯ ಮಾರ್ಕುಗಳಲ್ಲಿ) | ಉದ್ಯೋಗಿಗಳ ಸಂಖ್ಯೆ | ನಿವ್ವಳ ಲಾಭ (ಮಿಲಿಯ ಮಾರ್ಕುಗಳಲ್ಲಿ) |
|---|---|---|---|
| ಅಮೆರಿಕ: ಜನರಲ್ ಎಲೆಕ್ಟ್ರಿಕ್ ಕಂಪನಿ (G.E.C.) | | | |
| 1907 . . . . . . | 252 | 28,000 | 35.4 |
| 1910 . . . . . . | 298 | 32,000 | 45.6 |
| ಜರ್ಮನಿ: ಜನರಲ್ ಎಲೆಕ್ಟ್ರಿಕ್ ಕಂಪನಿ (A.E.G.) | | | |
| 1907 . . . . . . | 216 | 30,700 | 14.5 |
| 1911 . . . . . . | 362 | 60,800 | 21.7 |

ಆಮೇಲೆ, 1907ರಲ್ಲಿ ಈ ಜರ್ಮನ್ ಹಾಗೂ ಅಮೆರಿಕನ್ ಟ್ರಸ್ಟುಗಳು ಒಂದು ಒಪ್ಪಂದವನ್ನು ಮಾಡಿಕೊಂಡು ಜಗತ್ತನ್ನು ತಮ್ಮ ಮಧ್ಯೆ ಹಂಚಿಕೊಂಡವು. ಅವುಗಳ ನಡುವೆ ಸ್ಪರ್ಧೆ ನಿಂತಿತು. ಅಮೆರಿಕದ ಜನರಲ್ ಎಲೆಕ್ಟ್ರಿಕ್ ಕಂಪನಿ G. E. C.ಯು ಸಂಯುಕ್ತ ಸಂಸ್ಥಾನಗಳನ್ನು ಹಾಗೂ ಕೆನಡಾವನ್ನು "ಪಡೆದು ಕೊಂಡಿತು." ಜನರಲ್ ಎಲೆಕ್ಟ್ರಿಕ್ ಕಂಪನಿಯು A. E. G. ಜರ್ಮನಿ, ಆಸ್ಟ್ರಿಯಾ, ರಷ್ಯಾ, ಹಾಲೆಂಡ್, ಡೆನ್ಮಾರ್ಕ್, ಸ್ವಿಟ್ಸರ್ಲೆಂಡ್, ಟರ್ಕಿ ಹಾಗೂ ಬಾಲ್ಕನ್ ರಾಜ್ಯ ಗಳನ್ನು "ಪಡೆದುಕೊಂಡಿತು." "ಮಗಳು ಕಂಪನಿಗಳು" ಕೈಗಾರಿಕೆಯ ಹೊಸ ಶಾಖೆ ಗಳಿಗೆ, ಸಾಂಪ್ರದಾಯಿಕವಾಗಿ ಇನ್ನೂ ನಿಗದಿಯಾಗದಿರುವಂಥ "ಹೊಸ" ದೇಶ ಗಳಿಗೆ, ಭೇದಿಸಿಕೊಂಡು ಹೋಗುವುದಕ್ಕೆ ಸಂಬಂಧಿಸಿ, ಸಹಜವಾಗಿಯೇ ರಹಸ್ಯವಾದ, ವಿಶೇಷ ಒಪ್ಪಂದಗಳನ್ನೂ ಮಾಡಿಕೊಳ್ಳಲಾಯಿತು. ಎರಡು ಟ್ರಸ್ಟುಗಳೂ ತಮ್ಮ ಮಧ್ಯೆ ಆವಿಷ್ಕರಣಗಳನ್ನೂ ಪ್ರಯೋಗಗಳನ್ನೂ ವಿನಿಮಯ ಮಾಡಿಕೊಳ್ಳಲೂ ಏರ್ಪಾಟು ಮಾಡಿಕೊಂಡವು.*

ವಾಸ್ತವವಾಗಿ ವಿಶ್ವವ್ಯಾಪಿಯಾದ, ಹಲವಾರು ಸಾವಿರ ಮಿಲಿಯಗಳಾಗುವ ಬಂಡವಾಳವನ್ನು ನಿಯಂತ್ರಿಸುವ, ಜಗತ್ತಿನ ಮೂಲೆ ಮೂಲೆಗಳಲ್ಲಿ ತನ್ನ "ಶಾಖೆ ಗಳನ್ನು," ಏಜೆನ್ಸಿಗಳನ್ನು, ಪ್ರತಿನಿಧಿಗಳನ್ನು, ಸಂಬಂಧ ಇತ್ಯಾದಿಗಳನ್ನು ಹೊಂದಿ ರುವ ಈ ಟ್ರಸ್ಟಿನ ವಿರುದ್ಧ ಸ್ಪರ್ಧಿಸುವುದು ಎಷ್ಟು ಕಷ್ಟವೆಂಬುದು ಸ್ವಯಂವಿದಿತ. ಆದರೆ ಜಗತ್ತನ್ನು ಎರಡು ಪ್ರಬಲ ಟ್ರಸ್ಟುಗಳ ನಡುವೆ ಹಂಚಲಾಗಿದೆ ಎಂದ ಮಾತ್ರಕ್ಕೇ ಅದು, ವಿಷಮ ಬೆಳವಣಿಗೆ, ಯುದ್ಧ, ದಿವಾಳಿ ಇತ್ಯಾದಿಗಳ ಫಲವಾಗಿ ಶಕ್ತಿಗಳ ಸಂಬಂಧ ಬದಲಾದಾಗ ಜಗತ್ತಿನ ಪುನರ್ವಿಭಜನೆಯನ್ನು ಅಸಾಧ್ಯವಾಗಿಸುತ್ತ ದೆಂದೇನೂ ಅಲ್ಲ.

ಅಂತಹ ಪುನರ್ವಿಭಜನೆಯ, ಪುನರ್ವಿಭಜನೆಗಾಗಿ ಹೋರಾಟದ, ಯತ್ನಗಳಿಗೆ ತೈಲ ಕೈಗಾರಿಕೆಯು ಒಂದು ಬೋಧಪ್ರದ ನಿದರ್ಶನ.

"ಜಾಗತಿಕ ತೈಲ ಮಾರುಕಟ್ಟೆಯು ಇಂದಿಗೂ ಸಹ ಎರಡು ಭಾರಿ ಹಣಕಾಸು ವೃಂದಗಳ ನಡುವೆ – ರಾಕ್‌ಫೆಲ್ಲರ್‌ರ ಅಮೆರಿಕನ್ 'ಸ್ಟಾಂಡರ್ಡ್ ಆಯಿಲ್ ಕಂಪನಿ' ಹಾಗೂ ಬಕೂನಲ್ಲಿ ರಷ್ಯನ್ ತೈಲ ಕ್ಷೇತ್ರಗಳ ನಿಯಂತ್ರಣ ಮಾಡುತ್ತಿರುವ ರೊತ್ ಷಿಲ್ಡ್ ಅಂಡ್ ನೊಬೆಲ್, ಇವುಗಳ ನಡುವೆ – ವಿಭಜಿತವಾಗಿದೆ" ಎಂದು 1905ರಲ್ಲಿ ಯೆಯ್‌ಡೆಲ್ಸ್ ಬರೆದರು. "ಈ ಎರಡು ವೃಂದಗಳೂ ನಿಕಟವಾದ ಸಂಬಂಧ ಹೊಂ ದಿವೆ. ಆದರೆ ಈಗ ಹಲವಾರು ವರ್ಷಗಳಿಂದ ಐವರು ಶತ್ರುಗಳು ಅವರ ಏಕಸ್ವಾ ಮ್ಯಕ್ಕೆ ಭೀತಿ ಒಡ್ಡುತ್ತಿವೆ:"** 1) ಅಮೆರಿಕನ್ ತೈಲ ಕ್ಷೇತ್ರಗಳು ಬರಿದಾಗುತ್ತಿರು

---

* Risser, ಪೂರ್ವೋಕ್ತ ಗ್ರಂಥ; Diouritch, ಪೂರ್ವೋಕ್ತ ಗ್ರಂಥ, ಪು. 239; Kurt Heinig, ಪೂರ್ವೋಕ್ತ ಲೇಖನ.

** ಯೆಯ್‌ಡೆಲ್ಸ್, ಪೂರ್ವೋಕ್ತ ಗ್ರಂಥ, ಪು. 193.

ವುದು; 2) ಬಕೂನ ಮಂತಾಷೆವ್ ಸಂಸ್ಥೆಯ ಪೈಪೋಟಿ; 3) ಆಸ್ಟ್ರಿಯಾದ ತೈಲ ಕ್ಷೇತ್ರಗಳು; 4) ರುಮಾನಿಯಾದ ತೈಲ ಕ್ಷೇತ್ರಗಳು; 5) ಸಾಗರೋತ್ತರ ತೈಲ ಕ್ಷೇತ್ರಗಳು, ಅದರಲ್ಲೂ ವಿಶೇಷವಾಗಿ ಡಚ್ ವಸಾಹತುಗಳಲ್ಲಿ (ಅತ್ಯಂತ ಸಿರಿವಂತ ಸಂಸ್ಥೆಗಳಾದ ಸಾಮುಯೆಲ್ ಹಾಗೂ ಷೆಲ್ ಕಂಪನಿಗಳು; ಇವುಗಳು ಬ್ರಿಟಿಷ್ ಬಂಡವಾಳದೊಂದಿಗೂ ಸಂಬಂಧ ಹೊಂದಿವೆ). ಕೊನೆಯ ಮೂರು ವೃಂದಗಳು ಬೃಹತ್ 'ಡೊಯ್ಚ್ ಬ್ಯಾಂಕಿ'ನ ನೇತೃತ್ವದಲ್ಲಿರುವ ಭಾರಿ ಜರ್ಮನ್ ಬ್ಯಾಂಕುಗಳೊಂದಿಗೆ ಸಂಬಂಧ ಹೊಂದಿವೆ. ಈ ಬ್ಯಾಂಕುಗಳು ತಮ್ಮ "ಸ್ವಂತ" ನೆಲೆ ಪಡೆದುಕೊಳ್ಳಲೋಸುಗ, ಉದಾಹರಣೆಗೆ ರುಮಾನಿಯಾದಲ್ಲಿ, ತೈಲ ಕೈಗಾರಿಕೆಯನ್ನು ಸ್ವತಂತ್ರವಾಗಿ ಹಾಗೂ ಕ್ರಮಬದ್ಧವಾಗಿ ವಿಕಾಸಗೊಳಿಸಿದವು. 1907ರಲ್ಲಿ ರುಮಾನಿಯಾದ ತೈಲ ಕೈಗಾರಿಕೆಯಲ್ಲಿ ತೊಡಗಿಸಲಾದ ವಿದೇಶಾಂಗ ಬಂಡವಾಳವು 185 ಮಿಲಿಯ ಫ್ರಾಂಕುಗಳಾಗಿದ್ದಿತೆಂದೂ, ಇದರಲ್ಲಿ 74 ಮಿಲಿಯ ಜರ್ಮನ್ ಬಂಡವಾಳವಾಗಿದ್ದಿತೆಂದೂ, ಅಂದಾಜು ಮಾಡಲಾಗಿದ್ದಿತು.*

"ಜಗತ್ತಿನ ವಿಭಜನೆ"ಗಾಗಿ – ಆರ್ಥಿಕ ಗ್ರಂಥಗಳಲ್ಲಿ ವಾಸ್ತವವಾಗಿ ಇದನ್ನು ಹೀಗೆಯೇ ಕರೆದಿರುವುದು – ಹೋರಾಟ ಪ್ರಾರಂಭವಾಯಿತು. ಒಂದು ಕಡೆ, ರಾಕ್‌ಫೆಲ್ಲರ್‌ನ 'ತೈಲ ಟ್ರಸ್ಟು' ಎಲ್ಲವನ್ನೂ ವಶಪಡಿಸಿಕೊಳ್ಳುವ ಬಯಕೆಯಿಂದ ಸ್ವತಃ ಹಾಲೆಂಡಿನಲ್ಲೇ ಒಂದು "ಮಗಳು ಕಂಪನಿ"ಯನ್ನು ಸ್ಥಾಪಿಸಿತು, ಡಚ್ ಇಂಡೀಸ್‌ನಲ್ಲಿನ ತೈಲ ಕ್ಷೇತ್ರಗಳನ್ನು ಕೊಂಡುಕೊಂಡಿತು. ತನ್ನ ಪ್ರಧಾನ ಶತ್ರುವಾದ ಆಂಗ್ಲೋ-ಡಚ್ ಷೆಲ್ ಟ್ರಸ್ಟಿಗೆ ಪ್ರಹಾರ ನೀಡಲೋಸುಗ ಅದು ಹೀಗೆ ಮಾಡಿತು. ಮತ್ತೊಂದು ಕಡೆ, 'ಡೊಯ್ಚ್ ಬ್ಯಾಂಕೂ' ಇತರ ಜರ್ಮನ್ ಬ್ಯಾಂಕುಗಳೂ ರುಮಾನಿಯಾವನ್ನು "ತಮಗೇ" "ಉಳಿಸಿಕೊಳ್ಳಲು" ಮತ್ತು ಅದನ್ನು ರಾಕ್‌ಫೆಲ್ಲರ್‌ನ ವಿರುದ್ಧ ರಷ್ಯದೊಂದಿಗೆ ಒಂದುಗೂಡಿಸಲು ಉದ್ದೇಶಿಸಿದವು. ರಾಕ್‌ಫೆಲ್ಲರ್ ಕಂಪನಿಯು ಅತ್ಯಂತ ಹೆಚ್ಚು ಬಂಡವಾಳವನ್ನು ಹೊಂದಿದ್ದಿತು ಮತ್ತು ತೈಲ ಸಾಗಣೆಯ ಹಾಗೂ ವಿತರಣೆಯ ಅತ್ಯುತ್ತಮ ವ್ಯವಸ್ಥೆಯನ್ನು ಹೊಂದಿದ್ದಿತು. ಈ ಹೋರಾಟ ಕೊನೆಗಾಣಲೇಬೇಕಾಗಿದ್ದಿತು, 1907ರಲ್ಲಿ ಕೊನೆಗಂಡಿತು. 'ಡೊಯ್ಚ್ ಬ್ಯಾಂಕು' ಸಂಪೂರ್ಣ ಸೋಲನ್ನು ಅನುಭವಿಸಿತು. ಅದರ ಮುಂದೆ ಎರಡು ಆಯ್ಕೆಗಳನ್ನು ಇರಿಸಲಾಯಿತು: ತನ್ನ "ತೈಲ ಹಿತಗಳನ್ನು" ರದ್ದುಗೊಳಿಸಿ ಮಿಲಿಯಾಂತರ ನಷ್ಟ ಅನುಭವಿಸುವುದು ಅಥವಾ ಶರಣಾಗುವುದು. ಅದು ಶರಣಾಗುವುದನ್ನೇ ಆಯ್ಕೆ ಮಾಡಿಕೊಂಡಿತು, 'ತೈಲ ಟ್ರಸ್ಟ್'ನೊಂದಿಗೆ ತುಂಬ ಪ್ರತಿಕೂಲದ ಒಪ್ಪಂದ ಮಾಡಿಕೊಂಡಿತು. "ಅಮೆರಿಕದ ಹಿತಾಸಕ್ತಿಗಳಿಗೆ ಘಾಸಿ ಉಂಟುಮಾಡಬಹುದಾದಂಥ ಯಾವುದೇ ಕಾರ್ಯವನ್ನೂ ತಾನು ಮಾಡಲು ಯತ್ನಿಸುವುದಿಲ್ಲ"ವೆಂದು 'ಡೊಯ್ಚ್ ಬ್ಯಾಂಕ್' ಒಪ್ಪಿ

* Diouritch, ಪೂರ್ವೋಕ್ತ ಗ್ರಂಥ, ಪು. 245.

ಕೊಂಡಿತು. ಆದರೆ ಜರ್ಮನಿಯು ಒಂದು ರಾಜ್ಯ ತೈಲ ಏಕಸ್ವಾಮ್ಯವನ್ನು ಸ್ಥಾಪಿಸಿದಲ್ಲಿ ಆಗ ಈ ಒಪ್ಪಂದವನ್ನು ರದ್ದುಪಡಿಸಬಹುದೆಂಬ ಅವಕಾಶವನ್ನು ಒಪ್ಪಂದದಲ್ಲಿ ಅಳವಡಿಸಲಾಯಿತು.

ಅನಂತರ "ತೈಲ ಪ್ರಹಸನ" ಪ್ರಾರಂಭವಾಯಿತು. ಜರ್ಮನ್ ಹಣಕಾಸು ಪ್ರಭುಗಳಲ್ಲೊಬ್ಬರೂ 'ಡೊಯ್ಚ್ ಬ್ಯಾಂಕ್'ನ ಒಬ್ಬ ಡೈರೆಕ್ಟರೂ ಆದ ಫೋನ್ ಗ್ವಿನ್ನರ್ ತಮ್ಮ ಆಪ್ತ ಕಾರ್ಯದರ್ಶಿ ಷ್ಟಾಸ್‌ರ ಮೂಲಕ ರಾಜ್ಯ ತೈಲ ಏಕಸ್ವಾಮ್ಯದ ಪರವಾಗಿ ಒಂದು ಚಳವಳಿಯನ್ನು ಪ್ರಾರಂಭಿಸಿದರು. ಆ ಭಾರಿ ಜರ್ಮನ್ ಬ್ಯಾಂಕಿನ ಬೃಹತ್ ಯಂತ್ರಾಂಗವನ್ನೂ, ಅದರೆಲ್ಲ ವಿಸ್ತೃತ "ಸಂಬಂಧಗಳ"ನ್ನೂ ಚಾಲನೆಗೆ ತರಲಾಯಿತು. ಅಮೆರಿಕನ್ ಟ್ರಸ್ಟಿನ "ನೊಗ"ದ ಕೆಳಗೆ ನರಳುತ್ತಿರುವುದರ ವಿರುದ್ಧ ಪತ್ರಿಕೆಗಳು "ದೇಶಭಕ್ತಿ"ಯಿಂದ ಕೂಡಿದ ಆಗ್ರಹದಿಂದ ಬಡಬಡಿಸಿದವು. ತೈಲ ಏಕಸ್ವಾಮ್ಯವೊಂದನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿ ಮಸೂದೆಯೊಂದನ್ನು ಮಂಡಿಸಬೇಕೆಂದು ಸರಕಾರವನ್ನು ಕೇಳಿಕೊಂಡು 1911ರ ಮಾರ್ಚ್ 15ರಂದು ರೈಹ್‌ಸ್ಟಾಗ್ ಬಹುಮಟ್ಟಿಗೆ ಸರ್ವಾನುಮತದಿಂದ ತೀರ್ಮಾನವೊಂದನ್ನು ಅಂಗೀಕರಿಸಿತು. ಸರಕಾರವು ಈ "ಜನಪ್ರಿಯ" ವಿಚಾರವನ್ನು ತಕ್ಷಣವೇ ಕೈಗೆತ್ತಿಕೊಂಡಿತು. ತನ್ನ ಅಮೆರಿಕನ್ ಸಹಭಾಗಿಗೆ ಮೋಸಮಾಡಿ ರಾಜ್ಯ ಏಕಸ್ವಾಮ್ಯದಿಂದ ತನ್ನ ವ್ಯವಹಾರಗಳನ್ನು ಸುಧಾರಿಸಿಕೊಳ್ಳಲು ಆಶಿಸಿದ್ದ 'ಡೊಯ್ಚ್ ಬ್ಯಾಂಕಿ'ನ ಆಟ ಗೆದ್ದಂತೆ ಕಂಡುಬಂದಿತು. ಜರ್ಮನ್ ತೈಲ ಪ್ರಭುಗಳು ಆಗಲೇ ರಷ್ಯನ್ ಸಕ್ಕರೆ ಉತ್ಪಾದಕರ ಲಾಭಕ್ಕಿಂತ ಕಮ್ಮಿ ಏನೂ ಅಲ್ಲದಂಥ ಅಪಾರ ಲಾಭಗಳನ್ನು ಪಡೆಯುವ ಕನಸುಗಳನ್ನು ಕಂಡರು... ಆದರೆ, ಮೊದಲನೆಯದಾಗಿ, ದೊಡ್ಡ ಜರ್ಮನ್ ಬ್ಯಾಂಕುಗಳು ಸೂರೆಯನ್ನು ಹಂಚಿಕೊಳ್ಳುವುದಕ್ಕೆ ಸಂಬಂಧಿಸಿ ತಮ್ಮ ಮಧ್ಯೆಯೇ ಜಗಳವಾಡಿದವು. 'ಡಿಸ್ಕೊಂಟೊ-ಗೆಸೆಲ್‌ಷಾಫ್ಟ್' ಬ್ಯಾಂಕು 'ಡೊಯ್ಚ್ ಬ್ಯಾಂಕಿ'ನ ದುರಾಸೆಯ ಉದ್ದೇಶಗಳನ್ನು ಬಯಲು ಮಾಡಿತು; ಎರಡನೆಯದಾಗಿ, ಸರಕಾರವು ರಾಕ್‌ಫೆಲ್ಲರ್ ವಿರುದ್ಧ ಹೋರಾಟ ನಡೆಸಬೇಕಾಗಿ ಬರುವುದನ್ನು ಕಂಡೇ ಗಾಬರಿಗೊಂಡಿತು. ಏಕೆಂದರೆ, ಇತರ ಮೂಲಗಳಿಂದ ಜರ್ಮನಿಯು ತೈಲವನ್ನು ಪಡೆದುಕೊಳ್ಳಬಲ್ಲುದೇ ಎಂಬ ಬಗೆಗೆ ಸರಕಾರಕ್ಕೆ ತುಂಬ ಸಂದೇಹವಿದ್ದಿತು (ರುಮಾನಿಯಾದ ತೈಲೋತ್ಪಾದನೆ ಅಲ್ಪವಾಗಿದ್ದಿತು); ಮೂರನೆಯದಾಗಿ, ಆ ಸಮಯದಲ್ಲೇ ಸರಿಯಾಗಿ ಜರ್ಮನಿಯ ಯುದ್ಧ ಸಿದ್ಧತೆಗಳಿಗಾಗಿ ಒಂದು ಸಾವಿರ ಮಿಲಿಯ ಮಾರ್ಕುಗಳನ್ನು 1913ರಲ್ಲಿ ನಿಗದಿಮಾಡಲಾಯಿತು. ಹಾಗಾಗಿ ತೈಲ ಏಕಸ್ವಾಮ್ಯದ ಯೋಜನೆಯನ್ನು ಮುಂದೆ ಹಾಕಲಾಯಿತು. ರಾಕ್‌ಫೆಲ್ಲರ್ 'ತೈಲ ಟ್ರಸ್ಟು' ಹೋರಾಟದಲ್ಲಿ ತಾತ್ಕಾಲಿಕವಾಗಿ ವಿಜಯಿಯಾಯಿತು.

ಜರ್ಮನಿಯು ವಿದ್ಯುಚ್ಛಕ್ತಿ ಏಕಸ್ವಾಮ್ಯವನ್ನು ಸ್ಥಾಪಿಸುವ ಮೂಲಕವಷ್ಟೆ ಮತ್ತು ಜಲಶಕ್ತಿಯನ್ನು ಅಗ್ಗದ ವಿದ್ಯುಚ್ಛಕ್ತಿಯನ್ನಾಗಿ ಪರಿವರ್ತಿಸುವ ಮೂಲಕ

ವಷ್ಟೆ ತೈಲ ಟ್ರಸ್ಟಿನ ವಿರುದ್ಧ ಹೋರಾಡಲು ಸಾಧ್ಯವಿದ್ದಿತೆಂದು ಜರ್ಮನ್ ಪತ್ರಿಕೆ 'ದಿ ಬ್ಯಾಂಕ್' ಈ ಸಂದರ್ಭದಲ್ಲಿ ಬರೆಯಿತು. ಈ ಲೇಖನಕರ್ತೃ ಮತ್ತೂ ಬರೆದರು: "ಆದರೆ ವಿದ್ಯುಚ್ಛಕ್ತಿ ಏಕಸ್ವಾಮ್ಯವು ಉತ್ಪಾದಕರಿಗೆ ಬೇಕಾದಾಗ ಬರುತ್ತದೆ, ಅಂದರೆ, ವಿದ್ಯುತ್ ಕೈಗಾರಿಕೆಯಲ್ಲಿ ಮುಂದಿನ ಭಾರಿ ಕುಸಿತ ಸನ್ನಿಹಿತವಾದಾಗ ಮತ್ತು ಈಗ ಎಲ್ಲೆಲ್ಲೂ ಅಪಾರ ವೆಚ್ಚದೊಂದಿಗೆ ಖಾಸಗಿ ವಿದ್ಯುತ್ 'ಸಂಸ್ಥೆಗಳಿ'ಂದ ನಿರ್ಮಿಸಲ್ಪಡುತ್ತಿರುವ, ನಗರ, ರಾಜ್ಯ, ಇತ್ಯಾದಿಗಳಿಂದ ಆಗಲೇ ಭಾಗಶಃ ಏಕಸ್ವಾಮ್ಯ ಪಡೆಯುತ್ತಿರುವ, ಬೃಹತ್‌ಗಾತ್ರದ ಭಾರಿ ಖರ್ಚಿನ ವಿದ್ಯುತ್ಕೇಂದ್ರಗಳು ಇನ್ನೆಷ್ಟು ಮಾತ್ರವೂ ಲಾಭದಾಯಕವಾಗಿ ಕೆಲಸ ಮಾಡದೆ ಹೋದಾಗ, ಬರುತ್ತದೆ. ಆಗ ಜಲಶಕ್ತಿಯನ್ನು ಬಳಸಬೇಕಾಗುವುದು. ಆದರೆ ರಾಜ್ಯ ವೆಚ್ಚದಲ್ಲಿ ಅದನ್ನು ಅಗ್ಗವಾದ ವಿದ್ಯುಚ್ಛಕ್ತಿಯನ್ನಾಗಿ ಪರಿವರ್ತಿಸುವುದು ಅಸಾಧ್ಯವಾಗುವುದು; ಅದನ್ನೂ 'ರಾಜ್ಯದಿಂದ ನಿಯಂತ್ರಿತವಾದ ಖಾಸಗಿ ಏಕಸ್ವಾಮ್ಯ'ಕ್ಕೆ ವಹಿಸಿಕೊಡಬೇಕಾಗುವುದು, ಏಕೆಂದರೆ ಖಾಸಗಿ ಕೈಗಾರಿಕೆಯು ಆಗಲೇ ಅನೇಕ ಒಪ್ಪಂದಗಳನ್ನು ಮಾಡಿಕೊಂಡಿರುತ್ತದೆ ಮತ್ತು ಭಾರಿ ಪ್ರಮಾಣದ ನಷ್ಟಪರಿಹಾರಕ್ಕೆ ಷರತ್ತು ಹಾಕಿರುತ್ತದೆ... ನೈಟ್ರೇಟ್ ಏಕಸ್ವಾಮ್ಯದ ವಿಷಯದಲ್ಲಿ ಹಾಗೇ ಆಯಿತು, ತೈಲ ಏಕಸ್ವಾಮ್ಯದ ವಿಷಯದಲ್ಲಿ ಹಾಗೇ ಆಗಿದೆ ಮತ್ತು ವಿದ್ಯುಚ್ಛಕ್ತಿ ಏಕಸ್ವಾಮ್ಯದ ವಿಷಯದಲ್ಲಿ ಹಾಗೇ ಆಗುವುದು. ಜರ್ಮನಿಯಲ್ಲಿ ಏಕಸ್ವಾಮ್ಯ ಸಂಸ್ಥೆಗಳು ಬಳಕೆಗಾರನಿಗೆ ಪ್ರಯೋಜನ ಉಂಟು ಮಾಡಿಕೊಡುವ ಅಥವಾ ಪ್ರೊಮೋಟರ್ಸ್ ಲಾಭದಲ್ಲಿ ಒಂದು ಭಾಗವನ್ನು ರಾಜ್ಯಕ್ಕೆ ವಹಿಸಿಕೊಡುವ ಗುರಿಯನ್ನೂ ಎಂದೂ ಅನುಸರಿಸಿದುದಿಲ್ಲ ಮತ್ತು ಎಂದೂ ಅಂತಹ ಪರಿಣಾಮವನ್ನು ಹೊಂದಿದುದಿಲ್ಲವೆಂಬುದನ್ನು, ಸುಂದರ ಸೂತ್ರಗಳಿಂದ ಕುರುಡರಾಗಿರುವಂಥ ನಮ್ಮ ರಾಜ್ಯ ಸಮಾಜವಾದಿಗಳು ಅರ್ಥಮಾಡಿಕೊಳ್ಳಬೇಕಾದ ಕಾಲ ಬಂದಿದೆ; ಈ ಏಕಸ್ವಾಮ್ಯ ಸಂಸ್ಥೆಗಳು ದಿವಾಳಿ ಏಳುವ ಸ್ಥಿತಿಯಲ್ಲಿದ್ದ ಖಾಸಗಿ ಕೈಗಾರಿಕೆಗಳಿಗೆ ರಾಜ್ಯ ವೆಚ್ಚದಲ್ಲಿ ಪುನಶ್ಚೇತನಗೊಳ್ಳುವುದಕ್ಕಷ್ಟೆ ನೆರವಾಗಿವೆ."*

ಹೀಗಿವೆ ಜರ್ಮನ್ ಬೂರ್ಷ್ವಾ ಅರ್ಥಶಾಸ್ತ್ರಜ್ಞರು ಬಲಾತ್ಕಾರವಾಗಿ ಒಪ್ಪಿಕೊಳ್ಳಬೇಕಾಗಿ ಬಂದಿರುವ ಅಮೂಲ್ಯ ವಿಷಯಗಳು. ಹಣಕಾಸು ಬಂಡವಾಳದ ಯುಗದಲ್ಲಿ ಹೇಗೆ ಖಾಸಗಿ ಹಾಗೂ ರಾಜ್ಯ ಏಕಸ್ವಾಮ್ಯ ಸಂಸ್ಥೆಗಳು ಹಾಸುಹೊಕ್ಕಾಗಿ ಹೆಣೆದುಕೊಂಡಿರುತ್ತವೆ; ಜಗತ್ತನ್ನು ವಿಭಜಿಸಿಕೊಳ್ಳಲು ದೊಡ್ಡ ಏಕಸ್ವಾಮ್ಯ ಸಂಸ್ಥೆಗಳ ನಡುವೆ ಜರುಗುವ ಸಾಮ್ರಾಜ್ಯಶಾಹಿ ಯುದ್ಧದಲ್ಲಿ ಹೇಗೆ ಇವೆರಡೂ ಪ್ರತ್ಯೇಕ ಕೊಂಡಿಗಳಷ್ಟೆ, ಎಂಬುದನ್ನು ನಾವಿಲ್ಲಿ ಸ್ಪಷ್ಟವಾಗಿ ಕಾಣುತ್ತೇವೆ.

ವಾಣಿಜ್ಯ ನೌಕಾ ಸಾಗಣೆಯಲ್ಲಿ ಕೇಂದ್ರೀಕರಣವು ಪ್ರಚಂಡವಾಗಿ ಬೆಳೆದಿರುವುದೂ

---

* *Die Bank*, 1912, 2, ಪು. 1036; 1912, 2, ಪು. 629; 1913, 1, ಪು. 388.

ಜಗತ್ತಿನ ವಿಭಜನೆಯಲ್ಲಿ ಕೊನೆಗಂಡಿದೆ. ಜರ್ಮನಿಯಲ್ಲಿ ಎರಡು ಪ್ರಬಲ ಕಂಪನಿಗಳು ಮುಂದಕ್ಕೆ ಬಂದಿವೆ: 'ಹ್ಯಾಂಬರ್ಗ್-ಅಮೆರಿಕ' ಹಾಗೂ 'ಉತ್ತರ ಜರ್ಮನಿಯ ಲಾಯ್ಡ್' ಕಂಪನಿಗಳು. ಇವು ಒಂದೊಂದೂ 200 ಮಿಲಿಯ ಮಾರ್ಕ್ ಬಂಡವಾಳ ವನ್ನು (ಷೇರುಗಳಲ್ಲೂ ಬಾಂಡುಗಳಲ್ಲೂ) ಹೊಂದಿವೆ ಮತ್ತು 185ರಿಂದ 189 ಮಿಲಿಯ ಮಾರ್ಕುಗಳಾಗುವಷ್ಟು ಮೌಲ್ಯದ ಹಡಗುಗಳನ್ನೂ ಹೊಂದಿವೆ. ಮತ್ತೊಂದು ಕಡೆ, ಅಮೆರಿಕದಲ್ಲಿ 1903ರ ಜನವರಿ 1ರಂದು ಮಾರ್ಗನ್ ಟ್ರಸ್ಟ್ ಎಂದು ಕರೆಯಲಾಗುವ 'ಅಂತರರಾಷ್ಟ್ರೀಯ ವಾಣಿಜ್ಯ ನೌಕಾ ಸಂಸ್ಥೆ'ಯನ್ನು ಸ್ಥಾಪಿಸಲಾ ಯಿತು. ಇದು ಒಂಬತ್ತು ಅಮೆರಿಕನ್ ಹಾಗೂ ಬ್ರಿಟಿಷ್ ಉಗಿಜಹಜು ಕಂಪನಿಗಳನ್ನು ಒಂದುಗೂಡಿಸಿತು ಮತ್ತು 120 ಮಿಲಿಯ ಡಾಲರುಗಳ (480 ಮಿಲಿಯ ಮಾರ್ಕು ಗಳ) ಬಂಡವಾಳ ಹೊಂದಿದ್ದಿತು. 1903ರಲ್ಲೇ ಜರ್ಮನ್ ಬೃಹತ್ ಸಂಸ್ಥೆಗಳೂ ಈ ಅಮೆರಿಕನ್-ಬ್ರಿಟಿಷ್ ಟ್ರಸ್ಟೂ ಲಾಭ ಹಂಚಿಕೆಗೆ ಸಂಬಂಧಿಸಿ ಜಗತ್ತನ್ನು ವಿಭಜಿ ಸುವ ಒಪ್ಪಂದ ಮಾಡಿಕೊಂಡವು. ಜರ್ಮನ್ ಕಂಪನಿಗಳು ಆಂಗ್ಲೋ-ಅಮೆರಿಕನ್ ಹಡಗು ಸಂಚಾರದಲ್ಲಿ ಸ್ಪರ್ಧಿಸುವುದಿಲ್ಲವೆಂದು ಒಪ್ಪಿಕೊಂಡವು. ಒಬ್ಬೊಬ್ಬರಿಗೂ ಯಾವ ರೇವನ್ನು "ಹಂಚಲಾಗಿದೆ" ಎಂಬುದನ್ನು ಗೊತ್ತುಪಡಿಸಲಾಯಿತು; ಒಂದು ಸಂಯುಕ್ತ ನಿಯಂತ್ರಣ ಸಮಿತಿಯನ್ನೂ ಸ್ಥಾಪಿಸಲಾಯಿತು, ಇತ್ಯಾದಿ. ಈ ಒಪ್ಪಂದದ ಅವಧಿ 20 ವರ್ಷ. ಯುದ್ಧ ಸಂದರ್ಭದಲ್ಲಿ ಒಪ್ಪಂದವನ್ನು ರದ್ದುಪಡಿಸಿಕೊಳ್ಳ ಬೇಕೆಂಬ ವಿವೇಕಯುತವಾದ ನಿಬಂಧನೆಯನ್ನು ಇದರಲ್ಲಿ ಸೇರಿಸಲಾಗಿದ್ದಿತು.*

ಇಂಟರ್‌ನ್ಯಾಷನಲ್ ರೈಲ್ ಕಾರ್ಟೆಲ್ ಸ್ಥಾಪನೆಯಾದ ಕಥೆಯೂ ತುಂಬ ಸ್ವಾರಸ್ಯಕರವಾಗಿದೆ. ಬ್ರಿಟಿಷ್, ಬೆಲ್ಜಿಯನ್ ಹಾಗೂ ಜರ್ಮನ್ ರೈಲು ಗಾಡಿಗಳನ್ನು ತಯಾರಿಸುವವರು ಅಂತಹ ಕಾರ್ಟೆಲ್ ಒಂದನ್ನು ರಚಿಸುವ ಮೊದಲ ಯತ್ನ ವನ್ನು 1884ರಲ್ಲೇ, ಉಗ್ರ ಕೈಗಾರಿಕಾ ಕುಸಿತವಾಗಿದ್ದ ಸಮಯದಲ್ಲಿ, ಮಾಡಿದರು. ಉತ್ಪಾದಕರು ತಮ್ಮ ದೇಶಗಳ ಗೃಹ ಮಾರುಕಟ್ಟೆಗಳಲ್ಲಿ ಒಬ್ಬರು ಇನ್ನೊಬ್ಬರ ವಿರುದ್ಧ ಪೈಪೋಟಿ ನಡೆಸುವುದಿಲ್ಲವೆಂದು ಒಪ್ಪಿಕೊಂಡರು. ಅವರು ವಿದೇಶೀ ಮಾರು ಕಟ್ಟೆಗಳನ್ನು ಕೆಳಗಿನಂತೆ ಹಂಚಿಕೊಂಡರು: ಗ್ರೇಟ್ ಬ್ರಿಟನ್ – ಶೇ. 66; ಜರ್ಮನಿ – ಶೇ. 27; ಬೆಲ್ಜಿಯಂ – ಶೇ. 7. ಭಾರತವನ್ನು ಸಂಪೂರ್ಣವಾಗಿ ಗ್ರೇಟ್ ಬ್ರಿಟನ್‌ಗೇ ಬಿಡಲಾಯಿತು. ಈ ಕಾರ್ಟೆಲ್‌ನ ಹೊರಗುಳಿದ ಬ್ರಿಟಿಷ್ ಸಂಸ್ಥೆಯೊಂದರ ವಿರುದ್ಧ ಸಂಯುಕ್ತ ಯುದ್ಧವನ್ನು ಘೋಷಿಸಲಾಯಿತು. ಈ ಯುದ್ಧದ ವೆಚ್ಚವನ್ನು ಎಲ್ಲ ಮಾರಾಟಗಳ ಮೇಲೂ ಒಂದು ಶೇಕಡಾ ಪ್ರಮಾಣ ತೆರಿಗೆ ಹಾಕುವ ಮೂಲಕ ತುಂಬಲಾಯಿತು. ಆದರೆ 1886ರಲ್ಲಿ ಎರಡು ಬ್ರಿಟಿಷ್ ಸಂಸ್ಥೆಗಳು ಇದರಿಂದ

---

* ರೀಸ್ಸೆರ್, ಪೂರ್ವೋಕ್ತ ಗ್ರಂಥ, ಪು. 125.

ಹೊರಹೋದಾಗ ಕಾರ್ಟೆಲ್ ಮುರಿದು ಬಿದ್ದಿತು. ಅನಂತರದ ವಿಕಾಸದ ಕಾಲಾವಧಿಗಳಲ್ಲಿ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಾಗದುದು ವಿಲಕ್ಷಣವಾಗಿದೆ.

1904ರ ಆರಂಭದಲ್ಲಿ ಜರ್ಮನ್ ಉಕ್ಕಿನ ಸಿಂಡಿಕೇಟ್ ಸ್ಥಾಪಿತವಾಯಿತು. 1904ರ ನವೆಂಬರ್‌ನಲ್ಲಿ ಅಂತರರಾಷ್ಟ್ರೀಯ ರೈಲ್ ಕಾರ್ಟೆಲ್‌ಅನ್ನು ಪುನರುಜ್ಜೀವನಗೊಳಿಸಲಾಯಿತು. ಆಗ ಈ ಕೆಳಗಿನಂತೆ ಹಂಚಿಕೆ ಮಾಡಿಕೊಳ್ಳಲಾಯಿತು: ಇಂಗ್ಲೆಂಡ್ – ಶೇ. 53.5; ಜರ್ಮನಿ – ಶೇ. 28.83; ಬೆಲ್ಜಿಯಂ – ಶೇ. 17.67. ಫ್ರಾನ್ಸು ಅನಂತರ ಸೇರಿಕೊಂಡಿತು – ಶೇ. 4.8, ಶೇ. 5.8 ಹಾಗೂ ಶೇ. 6.4ರಷ್ಟನ್ನು ಮೊದಲ, ಎರಡನೆಯ ಹಾಗೂ ಮೂರನೆಯ ವರ್ಷಗಳಲ್ಲಿ ಅನುಕ್ರಮವಾಗಿ, ಶೇ. 100ರ ಮಿತಿಗೂ ಮೀರಿ, ಅಂದರೆ ಒಟ್ಟು ಶೇ. 104.8ರಲ್ಲಿ 4.8 ಇತ್ಯಾದಿ, ಪಡೆಯಿತು. 1905ರಲ್ಲಿ ಸಂಯುಕ್ತ ಸಂಸ್ಥಾನಗಳ 'ಉಕ್ಕಿನ ಕಾರ್ಪೊರೇಷನ್' ಕಾರ್ಟೆಲ್‌ಅನ್ನು ಸೇರಿಕೊಂಡಿತು. ಅನಂತರ ಆಸ್ಟ್ರಿಯಾ ಹಾಗೂ ಸ್ಪೈನ್‌ಗಳು ಸೇರಿಕೊಂಡವು. 1910ರಲ್ಲಿ ಫೊಗೆಲ್‌ಷ್ಟೈನ್ ಹೀಗೆ ಬರೆದರು: "ಪ್ರಸ್ತುತದಲ್ಲಿ ಪ್ರಪಂಚದ ವಿಭಜನೆ ಪೂರ್ಣವಾಗಿದೆ; ದೊಡ್ಡ ಬಳಕೆಗಾರರು, ಪ್ರಧಾನವಾಗಿ ರಾಜ್ಯ ರೈಲ್ವೇಗಳು – ಜಗತ್ತನ್ನು ಅವರ ಹಿತಗಳನ್ನು ಪರಿಗಣಿಸದೆಯೇ ವಿಭಜಿಸಲಾಗಿರುವುದರಿಂದ – ಈಗ ಕವಿಗಳಂತೆ ಇಂದ್ರುಲೋಕದಲ್ಲಿ ವಿಹರಿಸಬಹುದು."*

ನಾವು ಅಂತರರಾಷ್ಟ್ರೀಯ ಸತು ಸಿಂಡಿಕೇಟ್‌ನ ವಿಷಯವನ್ನೂ ತಿಳಿಸುತ್ತೇವೆ. ಇದನ್ನು 1909ರಲ್ಲಿ ಸ್ಥಾಪಿಸಲಾಯಿತು. ಇದು ಐದು ಕಾರ್ಖಾನೆ ಗುಂಪುಗಳ ನಡುವೆ – ಜರ್ಮನ್, ಬೆಲ್ಜಿಯನ್, ಫ್ರೆಂಚ್, ಸ್ಪಾನಿಷ್ ಹಾಗೂ ಬ್ರಿಟಿಷ್ ಗುಂಪುಗಳ ನಡುವೆ – ಉತ್ಪಾದನೆಯನ್ನು ನಿಷ್ಕೃಷ್ಟವಾಗಿ ಗೊತ್ತುಪಡಿಸಿತು. ಇಂಟರ್‌ನ್ಯಾಷನಲ್ ಡೈನಾಮೈಟ್ ಟ್ರಸ್ಟನ್ನೂ ನಾವಿಲ್ಲಿ ನಮೂದಿಸುತ್ತೇವೆ. ಇದರ ಬಗೆಗೆ ಲೀಫ್‌ಮನ್ ಹೇಳುತ್ತಾರೆ: "ಇದು ಎಲ್ಲ ಜರ್ಮನ್ ಸಿಡಿಮದ್ದು ಕಾರ್ಖಾನೆಗಳ ಒಂದು ಆಧುನಿಕ, ನಿಕಟ ಮೈತ್ರೀಕೂಟ. ಇವು ಇದೇ ರೀತಿ ಸಂಘಟಿತವಾದ ಫ್ರೆಂಚ್ ಹಾಗೂ ಅಮೆರಿಕನ್ ಡೈನಾಮೈಟ್ ಕಾರ್ಖಾನೆಗಳೊಂದಿಗೆ ಕೂಡಿಕೊಂಡು ಇಡೀ ಜಗತ್ತನ್ನು ತಮ್ಮ ಮಧ್ಯೆ ಹಂಚಿಕೊಂಡಿವೆ ಎಂದು ಹೇಳಬೇಕು."**

1897ರಲ್ಲಿ ಜರ್ಮನಿಯು ಪಾಲುಗೊಂಡಿದ್ದ ಒಟ್ಟು ಸುಮಾರು 40 ಅಂತರರಾಷ್ಟ್ರೀಯ ಕಾರ್ಟೆಲ್‌ಗಳಿದ್ದವು, 1910ರಲ್ಲಿ ಸುಮಾರು ಒಂದು ನೂರು ಇದ್ದವು, ಎಂದು ಲೀಫ್‌ಮನ್ ಲೆಕ್ಕ ಹಾಕಿದರು.

---

* Vogelstein, *Organisationsformen*, ಪು. 100.

** Liefmann, *Kartelle und Trusts* ('ಕಾರ್ಟೆಲ್‌ಗಳೂ, ಟ್ರಸ್ಟುಗಳೂ'), 2. A., ಪು. 161.

ಅಂತರರಾಷ್ಟ್ರೀಯ ಕಾರ್ಟೆಲ್‌ಗಳು ಬಂಡವಾಳದ ಅಂತರರಾಷ್ಟ್ರೀಕರಣವನ್ನು ಅತ್ಯಂತ ಉಜ್ವಲವಾಗಿ ವ್ಯಕ್ತಪಡಿಸುತ್ತವಾದ್ದರಿಂದ ಅವು ಬಂಡವಾಳವಾದದಡಿ ವಿವಿಧ ರಾಷ್ಟ್ರಗಳ ನಡುವೆ ಶಾಂತಿಗೆ ಭರವಸೆ ನೀಡುತ್ತವೆ ಎಂದು ಕೆಲವು ಬೂರ್ಷ್ವಾ ಲೇಖಕರು (1909ರಲ್ಲಿ ಉದಾಹರಣೆಗೆ, ತಳೆದಿದ್ದ ಮಾರ್ಕ್ಸ್‌ವಾದಿ ಅಭಿಪ್ರಾಯ ಗಳನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟು ಕೆ. ಕೌತ್‌ಸ್ಕಿಯುವರು ಈಗ ಇವರ ಗುಂಪನ್ನೇ ಸೇರಿಕೊಂಡಿದ್ದಾರೆ) ಅಭಿಪ್ರಾಯ ಪಟ್ಟಿದ್ದಾರೆ. ಸೈದ್ಧಾಂತಿಕವಾಗಿ ಈ ಅಭಿಪ್ರಾಯವು ಶುದ್ಧ ಅಸಂಬದ್ಧ, ಕಾರ್ಯತಃ ಇದು ಕುತರ್ಕ ಹಾಗೂ ಅತ್ಯಂತ ಹೀನವಾದ ಸಂದರ್ಭಸಾಧಕತನದ ಮೋಸದ ಸಮರ್ಥನೆ. ಬಂಡವಾಳವಾದಿ ಏಕಸ್ವಾಮ್ಯ ಸಂಸ್ಥೆ ಗಳು ಎಷ್ಟರಮಟ್ಟಿಗೆ ವಿಕಾಸಗೊಂಡಿವೆ, ನಾನಾ ಬಂಡವಾಳಶಾಹಿ ಸಮುಚ್ಚಯಗಳ ನಡುವಿನ ಹೋರಾಟದ ಗುರಿ ಏನು ಎಂಬುದನ್ನಷ್ಟೆ ಅಂತರರಾಷ್ಟ್ರೀಯ ಕಾರ್ಟೆಲ್ ಗಳು ತೋರಿಸಿಕೊಡುತ್ತವೆ. ಈ ಕೊನೆಯ ಅಂಶ ಅತ್ಯಂತ ಮುಖ್ಯವಾದುದು; ಅದಷ್ಟೆ ಈಗ ಏನು ಜರುಗುತ್ತಿದೆಯೋ ಅದರ ಚಾರಿತ್ರಿಕ-ಆರ್ಥಿಕ ಅರ್ಥವನ್ನು ತೋರಿಸಿಕೊಡುತ್ತದೆ; ಏಕೆಂದರೆ ಹೋರಾಟದ ರೂಪಗಳು ಬದಲಾಗುವ, ಸಾಪೇಕ್ಷ ವಾಗಿ ನಿರ್ದಿಷ್ಟವಾದ ಹಾಗೂ ತಾತ್ಕಾಲಿಕವಾದ ಕಾರಣಗಳಿಗನುಗುಣವಾಗಿ ಸತತ ವಾಗಿ ಬದಲಾಗಬಹುದು ಮತ್ತು ಬದಲಾಗುತ್ತವೆ, ಆದರೆ ಹೋರಾಟದ ಸಾರವು, ಅದರ ವರ್ಗ ಸಾರವು, ವರ್ಗಗಳು ಅಸ್ತಿತ್ವದಲ್ಲಿರುವವರೆಗೂ ಧನಾತ್ಮಕವಾಗಿ ಬದ ಲಾಗಲಾರದು. ಪ್ರಸಕ್ತ ಆರ್ಥಿಕ ಹೋರಾಟದ ಸಾರವನ್ನು (ಜಗತ್ತಿನ ವಿಭಜನೆ ಯನ್ನು) ಮರೆಮಾಚುವುದು ಮತ್ತು ಒಂದು ಸಾರಿ ಹೋರಾಟದ ಒಂದು ರೂಪವನ್ನೂ ಇನ್ನೊಂದು ಸಾರಿ ಇನ್ನೊಂದನ್ನೂ ಒತ್ತಿ ಹೇಳುವುದು – ಕೌತ್‌ಸ್ಕಿಯುವರು ಇದೇ ತಪ್ಪನ್ನು ಮಾಡುತ್ತಾರೆ – ಉದಾಹರಣೆಗೆ, ಜರ್ಮನ್ ಬೂರ್ಷ್ವಾಸೀಯ ಹಿತಗಳಿಗೆ ಸಹಜವಾಗಿಯೇ ಅನುಗುಣವಾಗಿದೆ. ಕೌತ್‌ಸ್ಕಿಯುವರು ಪರಿಣಾಮದಲ್ಲಿ ತಮ್ಮ ಸೈದ್ಧಾಂತಿಕ ವಾದಸರಣಿಗಳಲ್ಲಿ (ಇದರ ವಿಷಯವನ್ನು ನಾವು ಮುಂದೆ ವಿವೇಚಿಸು ವೆವು) ಬೂರ್ಷ್ವಾಸೀಯ ಪಕ್ಷವನ್ನೇ ಸೇರಿಕೊಂಡಿರುವುದು. ನಿಜ, ನಾವು ಮನಸ್ಸಿ ನಲ್ಲಿಟ್ಟಿರುವುದು ಜರ್ಮನ್ ಬೂರ್ಷ್ವಾಸೀಯನ್ನಷ್ಟೆ ಅಲ್ಲ, ಆದರೆ ಜಗತ್ತಿನಾದ್ಯಂತ ಬೂರ್ಷ್ವಾಸೀಯನ್ನು. ಬಂಡವಾಳಗಾರರು ಜಗತ್ತನ್ನು ವಿಭಜಿಸುವುದು ಯಾವುದೇ ನಿರ್ದಿಷ್ಟ ಮತ್ಸರದಿಂದಲ್ಲ, ಆದರೆ ಕೇಂದ್ರೀಕರಣವು ತಲುಪಿರುವ ಮಟ್ಟವು ಅವರನ್ನು ಲಾಭ ಗಳಿಸಲೋಸುಗ ಈ ವಿಧಾನವನ್ನು ಅನುಸರಿಸುವಂತೆ ಬಲಾತ್ಕರಿಸುತ್ತದೆ. ಅವರು ಜಗತ್ತನ್ನು "ಬಂಡವಾಳದ ಪ್ರಮಾಣಕ್ಕೆ ತಕ್ಕಂತೆ," "ಶಕ್ತಿಯ ಪ್ರಮಾಣಕ್ಕೆ ತಕ್ಕಂತೆ" ವಿಭಜಿಸುತ್ತಾರೆ, ಏಕೆಂದರೆ, ಸರಕು ಉತ್ಪಾದನೆ ಹಾಗೂ ಬಂಡವಾಳವಾದಿ ವ್ಯವಸ್ಥೆಯಲ್ಲಿ ಬೇರೆ ಯಾವ ವಿಭಜನಾ ವಿಧಾನವೂ ಇರಲು ಸಾಧ್ಯವಿಲ್ಲ. ಆದರೆ ಶಕ್ತಿಯು ಆರ್ಥಿಕ ಹಾಗೂ ರಾಜಕೀಯ ವಿಕಾಸದ ಪ್ರಮಾಣಕ್ಕನುಗುಣವಾಗಿ ಬದ ಲಾಗುತ್ತದೆ. ಏನು ಜರುಗುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು, ಶಕ್ತಿಯ

ಲ್ಲಾಗುವ ಬದಲಾವಣೆಗಳು ಯಾವ ಪ್ರಶ್ನೆಗಳನ್ನು ತೀರ್ಮಾನಿಸುತ್ತವೆ ಎಂಬುದನ್ನು ತಿಳಿಯುವುದು ಅವಶ್ಯ. ಈ ಬದಲಾವಣೆಗಳು "ಶುದ್ಧ" ಆರ್ಥಿಕವೇ ಅಥವಾ ಆರ್ಥಿಕ ಅಲ್ಲದವೇ (ಉದಾಹರಣೆಗೆ ಮಿಲಿಟರಿ) ಎಂಬ ಪ್ರಶ್ನೆಯು ಗೌಣವಾದುದು. ಇದು ಬಂಡವಾಳವಾದದ ಇತ್ತೀಚೆಗಿನ ಕಾಲಘಟ್ಟದ ಕುರಿತು ಮೂಲಭೂತ ಅಭಿಪ್ರಾಯುಗಳ ಮೇಲೆ ಸ್ವಲ್ಪವೂ ಪರಿಣಾಮ ಬೀರದು. ಬಂಡವಾಳಶಾಹಿ ಸಮುಚ್ಚಯಗಳ ನಡುವಿನ ಹೋರಾಟ ಹಾಗೂ ಒಪ್ಪಂದಗಳ ಸಾರಕ್ಕೆ ಸಂಬಂಧಿಸಿದ ಪ್ರಶ್ನೆಯ ಸ್ಥಳದಲ್ಲಿ ಹೋರಾಟ ಹಾಗೂ ಒಪ್ಪಂದಗಳ ರೂಪಕ್ಕೆ (ಇವತ್ತು ಶಾಂತಿಯುತವಾದುದು, ನಾಳೆ ಯುದ್ಧ ಲಕ್ಷಣದ್ದು; ಮಾರನೆಯ ದಿನ ಮತ್ತೆ ಯುದ್ಧ ಲಕ್ಷಣದ್ದು) ಸಂಬಂಧಿಸಿದ ಪ್ರಶ್ನೆಯನ್ನು ಇರಿಸುವುದು, ಕುತರ್ಕದ ಮಟ್ಟಕ್ಕೆ ಕುಸಿದಂತಾಗುತ್ತದೆ.

ಬಂಡವಾಳವಾದದ ಇತ್ತೀಚೆಗಿನ ಮಜಲಿಗೆ ಸೇರಿದ ಕಾಲಘಟ್ಟವು ನಮಗೆ ಈ ಕೆಳಗಿನ ಅಂಶಗಳನ್ನು ತೋರಿಸಿಕೊಡುತ್ತದೆ: ಜಗತ್ತನ್ನು ಆರ್ಥಿಕವಾಗಿ ವಿಭಜಿಸುವುದರ ಮೇಲೆ ಆಧರಿಸಿದ ಕೆಲವು ಸಂಬಂಧಗಳು ಬಂಡವಾಳಶಾಹಿ ಸಮುಚ್ಚಯಗಳ ನಡುವೆ ಬೆಳೆಯುತ್ತವೆ; ಇದಕ್ಕೆ ಸಮಾನಾಂತರವಾಗಿ ಹಾಗೂ ಇದಕ್ಕೆ ಸಂಬಂಧಿಸಿದಂತೆಯೇ ರಾಜಕೀಯ ಸಮುಚ್ಚಯಗಳ ನಡುವೆ, ರಾಜ್ಯಗಳ ನಡುವೆ, ಜಗತ್ತನ್ನು ಪ್ರಾದೇಶಿಕವಾಗಿ ಹಂಚಿಕೊಳ್ಳುವುದರ ಆಧಾರದ ಮೇಲೆ, ವಸಾಹತುಗಳಿಗಾಗಿ ಹೋರಾಟದ ಆಧಾರದ ಮೇಲೆ, "ಆರ್ಥಿಕ ಪ್ರದೇಶಗಳಿಗಾಗಿ ಹೋರಾಟ"ದ ಆಧಾರದ ಮೇಲೆ, ಕೆಲವು ಸಂಬಂಧಗಳು ಬೆಳೆಯುತ್ತವೆ.

## VI. ಬೃಹತ್ ರಾಷ್ಟ್ರಗಳ ಮಧ್ಯೆ ಜಗತ್ತಿನ ವಿಭಜನೆ

'ಯೂರೋಪಿಯನ್ ವಸಾಹತುಗಳ ಪ್ರಾದೇಶಿಕ ಬೆಳವಣಿಗೆ' ಎಂಬ ತಮ್ಮ ಗ್ರಂಥದಲ್ಲಿ ಭೂಗೋಳಶಾಸ್ತ್ರಜ್ಞ ಎ. ಸುಪಾನ್‌ರವರು * 19ನೆಯ ಶತಮಾನದ ಕೊನೆಯ ಭಾಗದಲ್ಲಿ ಈ ಬೆಳವಣಿಗೆಗೆ ಸಂಬಂಧಿಸಿ ಕೆಳಗಿನ ಸ್ಥೂಲ ಸಾರಾಂಶವನ್ನು ನೀಡುತ್ತಾರೆ:

---

*A. Supan, *Die territoriale Entwicklung der europäischen Kolonien* (ಎ. ಸುಪಾನ್, 'ಯೂರೋಪಿಯನ್ ವಸಾಹತುಗಳ ಪ್ರಾದೇಶಿಕ ಬೆಳವಣಿಗೆ.' – ಸಂ.), 1906, ಪು. 254.

ಯೂರೋಪಿಯನ್ ವಸಾಹತು ರಾಷ್ಟ್ರಗಳಿಗೆ
ಸೇರಿದ ಪ್ರದೇಶಗಳ ಶೇಕಡಾವಾರು
(ಸಂಯುಕ್ತ ಸಂಸ್ಥಾನಗಳನ್ನೂ ಒಳಗೊಂಡು)

| | 1876 | 1900 | ಹೆಚ್ಚು ಅಥವಾ ಕಮ್ಮಿ |
|---|---|---|---|
| ಆಫ್ರಿಕಾದಲ್ಲಿ . . . . | 10.8 | 90.4 | +79.6 |
| ಪೊಲಿನೇಷ್ಯಾದಲ್ಲಿ . . . | 56.8 | 98.9 | +42.1 |
| ಏಷ್ಯದಲ್ಲಿ . . . . . | 51.5 | 56.6 | + 5.1 |
| ಆಸ್ಟ್ರೇಲಿಯಾದಲ್ಲಿ . . . | 100.0 | 100.0 | – |
| ಅಮೆರಿಕದಲ್ಲಿ . . . . | 27.5 | 27.2 | –0.3 |

"ಆದ್ದರಿಂದ ಈ ಕಾಲಘಟ್ಟದ ವಿಶಿಷ್ಟ ಲಕ್ಷಣವೆಂದರೆ, ಆಫ್ರಿಕಾವನ್ನೂ ಪೊಲಿನೇಷ್ಯಾವನ್ನೂ ಹಂಚಿಕೊಂಡುದು" ಎಂದು ಅವರು ತೀರ್ಮಾನಕ್ಕೆ ಬರುತ್ತಾರೆ. ಏಷ್ಯ ಹಾಗೂ ಅಮೆರಿಕಗಳಲ್ಲಿ ಆಕ್ರಮಿಸಿಕೊಳ್ಳದೆ ಇರುವ ಪ್ರದೇಶಗಳು – ಅಂದರೆ, ಯಾವುದೇ ರಾಜ್ಯಕ್ಕೂ ಸೇರಿರದ ಪ್ರದೇಶಗಳು – ಇಲ್ಲದಿರುವುದರಿಂದ, ಸುಪಾನ್‌ರ ತೀರ್ಮಾನವನ್ನು ಸ್ವಲ್ಪ ಹಿಗ್ಗಲಿಸಿ ಹೀಗೆ ಹೇಳಬೇಕಾಗುತ್ತದೆ – ಪರಿಶೀಲಿಸುತ್ತಿರುವ ಕಾಲಘಟ್ಟದ ವಿಶಿಷ್ಟ ಲಕ್ಷಣವೆಂದರೆ, ಭೂಮಂಡಲದ ಅಂತಿಮ ವಿಭಜನೆಯಾಗಿದೆ. ಅಂತಿಮ – ಪುನರ್‌ವಿಭಜನೆ ಅಸಾಧ್ಯ ಎನ್ನುವ ಅರ್ಥದಲ್ಲಲ್ಲ. ತದ್ವಿರುದ್ಧವಾಗಿ ಪುನರ್‌ವಿಭಜನೆಗಳು ಸಾಧ್ಯ ಹಾಗೂ ಅನಿವಾರ್ಯ – ಆದರೆ ಬಂಡವಾಳಶಾಹಿ ದೇಶಗಳ ವಸಾಹತು ನೀತಿಯು ನಮ್ಮ ಭೂಮಂಡಲದ ಅನಾಕ್ರಮಿತ ಪ್ರದೇಶಗಳನ್ನು ಆಕ್ರಮಿಸಿಕೊಳ್ಳುವುದನ್ನು ಪೂರ್ಣಗೊಳಿಸಿದೆ ಎಂಬ ಅರ್ಥದಲ್ಲಿ. ಮೊಟ್ಟಮೊದಲ ಬಾರಿಗೆ ಜಗತ್ತು ಸಂಪೂರ್ಣವಾಗಿ ವಿಭಜಿತವಾಗಿದೆ. ಹಾಗಾಗಿ ಭವಿಷ್ಯತ್ತಿನಲ್ಲಿ ಪುನರ್‌ವಿಭಜನೆಯುಷ್ಟೆ ಸಾಧ್ಯ. ಅಂದರೆ, ಪ್ರದೇಶಗಳು ಮಾಲೀಕನಿಲ್ಲದ ಪ್ರದೇಶಗಳಾಗಿ "ಮಾಲೀಕ"ನಿಗೆ ಹೋಗುವ ಬದಲು, ಒಬ್ಬ "ಮಾಲೀಕ"ನಿಂದ ಇನ್ನೊಬ್ಬನಿಗೆ ಹೋಗಬಲ್ಲುದು.

ಆದ್ದರಿಂದ ನಾವು ಜಾಗತಿಕ ವಸಾಹತು ನೀತಿಯ ಒಂದು ವಿಚಿತ್ರ ಕಾಲಘಟ್ಟದ ಮೂಲಕ ಹಾದು ಹೋಗುತ್ತಿದ್ದೇವೆ. ಇದು "ಬಂಡವಾಳವಾದದ ಬೆಳವಣಿಗೆಯ ಇತ್ತೀಚೆಗಿನ ಘಟ್ಟ"ದೊಂದಿಗೆ, ಹಣಕಾಸು ಬಂಡವಾಳದೊಂದಿಗೆ ಅತ್ಯಂತ ನಿಕಟವಾಗಿ ಸಂಬಂಧಿತವಾಗಿದೆ. ಈ ಕಾರಣದಿಂದಾಗಿಯೇ, ಈ ಕಾಲಘಟ್ಟವನ್ನು ಇದಕ್ಕೆ ಮುನ್ನಿನ ಕಾಲಘಟ್ಟಗಳಿಂದ ಪ್ರತ್ಯೇಕಿಸಿ ತೋರಿಸುವುದು ಯಾವುದು, ಇಂದಿನ

ಪರಿಸ್ಥಿತಿ ಏನು, ಎಂಬುದನ್ನು ಸಾಧ್ಯವಾದಷ್ಟೂ ನಿಷ್ಕೃಷ್ಟವಾಗಿ ಖಚಿತಪಡಿಸಿಕೊಳ್ಳಲೋಸುಗ ವಾಸ್ತವಾಂಶಗಳನ್ನು ಹೆಚ್ಚು ವಿವರವಾಗಿ ಪರಿಶೀಲಿಸುವುದು ಬಹು ಮುಖ್ಯ. ಮೊದಲನೆಯದಾಗಿ ಇಲ್ಲಿ ವಾಸ್ತವಾಂಶದ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ: ಹಣಕಾಸು ಬಂಡವಾಳದ ಕಾಲಘಟ್ಟದಲ್ಲೇ, ವಸಾಹತು ನೀತಿ ತೀವ್ರಗೊಳ್ಳುವುದು, ವಸಾಹತುಗಳಿಗಾಗಿ ಹೋರಾಟ ತೀಕ್ಷ್ಣಗೊಳ್ಳುವುದು, ಕಂಡುಬರುತ್ತವೆಯೇ? ಇದಕ್ಕೆ ಸಂಬಂಧಿಸಿದಂತೆ ಜಗತ್ತು ಪ್ರಸ್ತುತದಲ್ಲಿ ಹೇಗೆ ವಿಭಜಿತವಾಗಿದೆ?

ಅಮೆರಿಕನ್ ಲೇಖಕ ಮಾರಿಸ್‌ರವರು ವಸಾಹತೀಕರಣದ ಇತಿಹಾಸ ಕುರಿತಾದ ತಮ್ಮ ಗ್ರಂಥದಲ್ಲಿ,* 19ನೆಯ ಶತಮಾನದ ವಿವಿಧ ಕಾಲಾವಧಿಗಳಲ್ಲಿ ಗ್ರೇಟ್ ಬ್ರಿಟನ್, ಫ್ರಾನ್ಸ್ ಹಾಗೂ ಜರ್ಮನಿಗಳ ವಸಾಹತು ಆಸ್ತಿಗಳ ಕುರಿತ ಮಾಹಿತಿಗಳನ್ನು ಕ್ರೋಢೀಕರಿಸಿ ತಿಳಿಸಲು ಯತ್ನಿಸಿದರು. ಅವರು ಪಡೆದ ಫಲಿತಾಂಶಗಳ ಸ್ಥೂಲ ಸಾರಾಂಶ ಈ ಕೆಳಗಿನಂತಿದೆ:

ವಸಾಹತು ಆಸ್ತಿಗಳು

| ವರ್ಷ | ಗ್ರೇಟ್ ಬ್ರಿಟನ್ | | ಫ್ರಾನ್ಸ್ | | ಜರ್ಮನಿ | |
|---|---|---|---|---|---|---|
| | ಕ್ಷೇತ್ರ (ಮಿಲಿಯ ಚದರ ಮೈಲಿಗಳಲ್ಲಿ) | ಜನಸಂಖ್ಯೆ (ಮಿಲಿಯಗಳಲ್ಲಿ) | ಕ್ಷೇತ್ರ (ಮಿಲಿಯ ಚದರ ಮೈಲಿಗಳಲ್ಲಿ) | ಜನಸಂಖ್ಯೆ (ಮಿಲಿಯಗಳಲ್ಲಿ) | ಕ್ಷೇತ್ರ (ಮಿಲಿಯ ಚದರ ಮೈಲಿಗಳಲ್ಲಿ) | ಜನಸಂಖ್ಯೆ (ಮಿಲಿಯಗಳಲ್ಲಿ) |
| 1815-1830 | ? | 126.4 | 0.02 | 0.5 | – | – |
| 1860 | 2.5 | 145.1 | 0.2 | 3.4 | – | – |
| 1880 | 7.7 | 267.9 | 0.7 | 7.5 | – | – |
| 1899 | 9.3 | 309.0 | 3.7 | 56.4 | 1.0 | 14.7 |

ಗ್ರೇಟ್ ಬ್ರಿಟನ್‌ನ ವಸಾಹತು ವಿಸ್ತರಣೆ ಅಪಾರವಾಗಿ ಜರುಗಿದ ಕಾಲ 1860 ಹಾಗೂ 1880ರ ನಡುವಿನದು. 19ನೆಯ ಶತಮಾನದ ಕೊನೆಯ ಇಪ್ಪತ್ತು ವರ್ಷ

---

*Henry C. Morris, *The History of Colonization*, N. Y., 1900, vol. II, pp. 88; I, 419; II, 304 (ಹೆನ್ರಿ ಸಿ. ಮಾರಿಸ್, 'ವಸಾಹತೀಕರಣದ ಇತಿಹಾಸ,' ನ್ಯೂಯಾರ್ಕ್, 1900, ಸಂ. II, ಪು. 88; ಸಂ. I, ಪು. 419; ಸಂ. II, ಪು. 304. – ಸಂ.).

ಗಳಲ್ಲೂ ಅದು ತುಂಬ ಗಣನೀಯವಾಗಿದ್ದಿತು. ಫ್ರಾನ್ಸ್ ಹಾಗೂ ಜರ್ಮನಿಗಳಿಗೆ ಈ ವಿಸ್ತರಣೆಯು ಕಾಲ ಸರಿಯಾಗಿ ಈ ಇಪ್ಪತ್ತು ವರ್ಷಗಳಲ್ಲೇ ಬೀಳುತ್ತದೆ. ಏಕ ಸ್ವಾಮ್ಯಪೂರ್ವ ಬಂಡವಾಳವಾದದ, ಮುಕ್ತ ಸ್ಪರ್ಧೆ ಪ್ರಬಲವಾಗಿದ್ದ ಬಂಡವಾಳವಾದದ, ಬೆಳವಣಿಗೆಯು 1860ರ ಹಾಗೂ 1870ರ ದಶಕಗಳ ವರ್ಷಗಳಲ್ಲಿ ಪರಿಪೂರ್ಣ ಸ್ಥಿತಿ ತಲುಪಿತೆಂದು ನಾವು ಮೇಲೆ ಕಂಡೆವು. ಸರಿಯಾಗಿ ಆ ಕಾಲದ ನಂತರವೇ ವಸಾಹತು ಆಕ್ರಮಣದ ಪ್ರಚಂಡ "ವಿಕಾಸ"ವು ಪ್ರಾರಂಭವಾಗುತ್ತದೆ, ಜಗತ್ತಿನ ಪ್ರಾದೇಶಿಕ ವಿಭಜನೆಗಾಗಿ ಹೋರಾಟವೂ ಅತ್ಯಸಾಧಾರಣವಾಗಿ ತೀವ್ರಗೊಳ್ಳುತ್ತದೆ, ಎಂಬುದನ್ನು ನಾವೀಗ ಕಾಣುತ್ತೇವೆ. ಆದ್ದರಿಂದ ಬಂಡವಾಳವಾದವು ಏಕಸ್ವಾಮ್ಯ ಬಂಡವಾಳವಾದದ ಘಟ್ಟಕ್ಕೆ, ಹಣಕಾಸು ಬಂಡವಾಳವಾದದ ಘಟ್ಟಕ್ಕೆ, ಪರಿವರ್ತನೆ ಯಾಗುವುದು, ಜಗತ್ತನ್ನು ವಿಭಜಿಸಿಕೊಳ್ಳುವ ಹೋರಾಟವನ್ನು ತೀವ್ರಗೊಳಿಸು ವುದರೊಂದಿಗೆ ಸಂಬಂಧಿತವಾಗಿರುತ್ತದೆ, ಎಂಬುದು ನಿಸ್ಸಂದೇಹ.

ಹಾಬ್ಸನ್‌ರು ಸಾಮ್ರಾಜ್ಯವಾದ ಕುರಿತಾದ ತಮ್ಮ ಗ್ರಂಥದಲ್ಲಿ 1884-1900 ವರ್ಷಗಳನ್ನು ಪ್ರಧಾನ ಯುರೋಪಿಯನ್ ರಾಜ್ಯಗಳ "ವಿಸ್ತರಣೆ"ಯು ತೀವ್ರ ಗೊಂಡ ಕಾಲಘಟ್ಟವನ್ನಾಗಿ ಗುರುತಿಸುತ್ತಾರೆ. ಅವರ ಅಂದಾಜಿನ ಪ್ರಕಾರ, ಈ ವರ್ಷಗಳ ಅವಧಿಯಲ್ಲಿ ಗ್ರೇಟ್ ಬ್ರಿಟನ್ 570 ಲಕ್ಷ ಜನಸಂಖ್ಯೆಯುಳ್ಳ 37 ಲಕ್ಷ ಚದುರ ಮೈಲಿಗಳಷ್ಟು ಭೂಭಾಗವನ್ನು ಪಡೆದುಕೊಂಡಿತು; ಫ್ರಾನ್ಸು 365 ಲಕ್ಷ ಜನಸಂಖ್ಯೆಯುಳ್ಳ 36 ಲಕ್ಷ ಚದುರ ಮೈಲಿಗಳನ್ನು ಪಡೆಯಿತು; ಜರ್ಮನಿಯು 147 ಲಕ್ಷ ಜನಸಂಖ್ಯೆಯುಳ್ಳ ಹತ್ತು ಲಕ್ಷ ಚದುರ ಮೈಲಿಗಳನ್ನು ಪಡೆಯಿತು; ಬೆಲ್ಜಿಯಂ 300 ಲಕ್ಷ ಜನಸಂಖ್ಯೆಯುಳ್ಳ 9 ಲಕ್ಷ ಚದುರ ಮೈಲಿಗಳನ್ನು ಪಡೆಯಿತು; ಪೋರ್ಚುಗಲ್ 90 ಲಕ್ಷ ನಿವಾಸಿಗಳುಳ್ಳ 8 ಲಕ್ಷ ಚದುರ ಮೈಲಿಗಳನ್ನು ಪಡೆಯಿತು. 19ನೆಯ ಶತಮಾನದ ಕೊನೆಯ ಭಾಗದಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ 1880 ರಿಂದೀಚೆಗೆ, ಎಲ್ಲ ಬಂಡವಾಳಶಾಹಿ ರಾಜ್ಯಗಳೂ ವಸಾಹತುಗಳಿಗಾಗಿ ಪ್ರಯತ್ನ ಮಾಡಿದುದು ರಾಜತಾಂತ್ರಿಕತೆಯ ಹಾಗೂ ವಿದೇಶಾಂಗ ನೀತಿಯ ಇತಿಹಾಸದಲ್ಲಿ ಸಾಮಾನ್ಯವಾಗಿ ತಿಳಿದ ವಿಷಯುವೇ ಆಗಿದೆ.

ಗ್ರೇಟ್ ಬ್ರಿಟನ್‌ನಲ್ಲಿ ಮುಕ್ತ ಸ್ಪರ್ಧೆಯು ಅತ್ಯಂತ ಏಳಿಗೆಯನ್ನು ಪಡೆದಿದ್ದ ಕಾಲದಲ್ಲಿ, ಅಂದರೆ 1840 ಹಾಗೂ 1860ರ ನಡುವೆ, ಪ್ರಮುಖ ಬ್ರಿಟಿಷ್ ಬೂರ್ಷ್ವಾ ರಾಜಕಾರಣಿಗಳು ವಸಾಹತು ನೀತಿಗೆ ವಿರೋಧವಿದ್ದರು, ವಸಾಹತುಗಳ ವಿಮೋಚನೆಯು, ಅವು ಬ್ರಿಟನ್ನಿನಿಂದ ಸಂಪೂರ್ಣವಾಗಿ ಪ್ರತ್ಯೇಕಗೊಳ್ಳುವುದು, ಅನಿ ವಾರ್ಯ ಹಾಗೂ ಅಪೇಕ್ಷಣೀಯ ಎಂದೇ ಅಭಿಪ್ರಾಯಪಟ್ಟಿದ್ದರು. 1898ರಲ್ಲಿ ಪ್ರಕಟವಾದ 'ಆಧುನಿಕ ಬ್ರಿಟಿಷ್ ಸಾಮ್ರಾಜ್ಯವಾದ'* ಎಂಬ ಲೇಖನದಲ್ಲಿ ಎಂ.

*_Die Neue Zeit_, XVI, 1898, ಪು. 302.

ಬೇರ್‌ರವರು, ಸಾಮಾನ್ಯವಾಗಿ ಸಾಮ್ರಾಜ್ಯವಾದವನ್ನು ಬೆಂಬಲಿಸುವ ಪ್ರವೃತ್ತಿಯುನ್ನು ಹೊಂದಿದ್ದ ರಾಜನೀತಿಜ್ಞ ಡಿಸ್ರೇಲಿಯವರೇ ಕೆಳಗಿನಂತೆ ಘೋಷಿಸಿದರೆಂದು ತೋರಿಸಿ ಕೊಡುತ್ತಾರೆ: "ವಸಾಹತುಗಳು ನಮ್ಮ ಕುತ್ತಿಗೆಗಳಿಗೆ ಕಟ್ಟಿದ ಬೀಸುವ ಕಲ್ಲುಗಳು." ಆದರೆ 19ನೆಯ ಶತಮಾನದ ಕೊನೆಯಲ್ಲಿ ಇಂಗ್ಲೆಂಡಿನಲ್ಲಿ ನಾಯಕರಾಗಿದ್ದ ಸೆಸಿಲ್ ರೋಡ್ಸ್ ಹಾಗೂ ಜೊಸೆಫ್ ಚೇಂಬರ್ಲಿನ್‌ರವರು ಬಹಿರಂಗವಾಗಿಯೇ ಸಾಮ್ರಾಜ್ಯ ವಾದವನ್ನು ಪ್ರತಿಪಾದಿಸಿದರು ಮತ್ತು ಸಾಮ್ರಾಜ್ಯಶಾಹಿ ನೀತಿಯನ್ನು ಅತ್ಯಂತ ಸಿನಿಕತನದಿಂದ ಅನ್ವಯಿಸಿದರು !

ಆ ಹೊತ್ತಿಗಾಗಲೇ ಈ ಪ್ರಮುಖ ಬ್ರಿಟಿಷ್ ಬೂರ್ಷ್ವಾ ರಾಜಕಾರಣಿಗಳು ಆಧುನಿಕ ಸಾಮ್ರಾಜ್ಯವಾದದ ಶುದ್ಧ ಆರ್ಥಿಕ ಎಂದು ಹೇಳಬಹುದಾದಂತಹ ಬೇರು ಗಳಿಗೂ ಸಾಮಾಜಿಕ-ರಾಜಕೀಯ ಬೇರುಗಳಿಗೂ ಮಧ್ಯೆ ಇದ್ದ ಸಂಬಂಧವನ್ನು ಕಂಡು ಕೊಂಡಿದ್ದರು ಎಂಬುದನ್ನು ಗಮನಿಸುವುದು ಸ್ವಾರಸ್ಯಕರವಿಲ್ಲದಿಲ್ಲ. ಚೇಂಬರ್ಲಿನ್‌ರು ಸಾಮ್ರಾಜ್ಯವಾದವನ್ನು ಒಂದು "ನಿಜವಾದ, ವಿವೇಕಯುತ ಹಾಗೂ ಮಿತವ್ಯಯ ಕಾರಿ ನೀತಿ" ಎಂದು ಪ್ರತಿಪಾದಿಸಿದರು, ಮತ್ತು ಗ್ರೇಟ್ ಬ್ರಿಟನ್ನು ಜಾಗತಿಕ ಮಾರು ಕಟ್ಟೆಯಲ್ಲಿ ಎದುರಿಸುತ್ತಿದ್ದ ಜರ್ಮನ್, ಅಮೆರಿಕನ್ ಹಾಗೂ ಬೆಲ್ಜಿಯನ್ ಸ್ಪರ್ಧೆ ಯನ್ನು ನಿರ್ದಿಷ್ಟವಾಗಿ ಎತ್ತಿತೋರಿಸಿದರು. ಏಕಸ್ವಾಮ್ಯವೇ ಮುಕ್ತಿ ಮಾರ್ಗ ಎಂದು ಕಾರ್ಟೆಲ್‌ಗಳನ್ನೂ ಸಿಂಡಿಕೇಟ್‌ಗಳನ್ನೂ ಟ್ರಸ್ಟುಗಳನ್ನೂ ಸ್ಥಾಪಿಸುತ್ತ ಬಂಡವಾಳ ಗಾರರು ಘೋಷಿಸಿದರು. ಏಕಸ್ವಾಮ್ಯವೇ ಮುಕ್ತಿ ಮಾರ್ಗ ಎಂದು ಬೂರ್ಷ್ವಾ ಸೀಯ ರಾಜಕೀಯ ನಾಯಕರೂ ಇನ್ನೂ ಹಂಚಲ್ಪಡದಿದ್ದ ಜಗತ್ತಿನ ಭಾಗಗಳನ್ನು ವಶಪಡಿಸಿಕೊಳ್ಳಲು ಧಾವಿಸುತ್ತ ಮಾರ್ನುಡಿದರು. ಸೆಸಿಲ್ ರೋಡ್ಸ್‌ರವರು ತಮ್ಮ ಸಾಮ್ರಾಜ್ಯಶಾಹಿ ಭಾವನೆಗಳನ್ನು ಈ ಕೆಳಗಿನ ಮಾತುಗಳಲ್ಲಿ ತಮಗೆ 1895ರಲ್ಲಿ ವ್ಯಕ್ತಪಡಿಸಿದರೆಂದು ಅವರ ಆಪ್ತ ಮಿತ್ರ ಪತ್ರಕರ್ತ ಸ್ಟೆಡ್ ತಿಳಿಸುತ್ತಾರೆ: "ನಾನು ನಿನ್ನೆ ಲಂಡನ್ನಿನ ಈಸ್ಟ್ ಎಂಡ್‌ನಲ್ಲಿ" (ಕಾರ್ಮಿಕ ವರ್ಗದ ವಸತಿಪ್ರದೇಶ) "ನಿರು ದ್ಯೋಗಿಗಳ ಸಭೆಯೊಂದರಲ್ಲಿ ಹಾಜರಿದ್ದೆ. ಅಲ್ಲಿ ಮಾಡಲಾದ ಉನ್ಮತ್ತ ಭಾಷಣ ಗಳನ್ನು ಕೇಳಿದೆ. ಅವುಗಳ ಸಾರವೆಲ್ಲ 'ರೊಟ್ಟಿ ! ರೊಟ್ಟಿ !' ಎಂಬ ಕೂಗಷ್ಟೆ ಆಗಿದ್ದಿತು. ಮನೆಗೆ ಹಿಂದಿರುಗುತ್ತ ಆ ದೃಶ್ಯದ ಕುರಿತು ಯೋಚನೆ ಮಾಡಿದೆ. ಸಾಮ್ರಾಜ್ಯವಾದದ ಪ್ರಾಮುಖ್ಯ ನನಗೆ ಹಿಂದೆಂದಿಗಿಂತ ಹೆಚ್ಚಾಗಿ ಮನದಟ್ಟಾಯಿತು... ನನ್ನ ನಚ್ಚಿನ ವಿಚಾರವು ಸಾಮಾಜಿಕ ಸಮಸ್ಯೆಗೆ ಒಂದು ಪರಿಹಾರವಾಗಿದೆ. ಅಂದರೆ, ಯುನೈಟೆಡ್ ಕಿಂಗ್‌ಡಮ್‌ನ 40 ಮಿಲಿಯ ನಿವಾಸಿಗಳನ್ನು ಅಂತರ್ಯುದ್ಧದ ರಕ್ತಪಾತದಿಂದ ರಕ್ಷಿಸಲೋಸುಗ, ನಾವು, ವಸಾಹತು ರಾಜನೀತಿಜ್ಞರು, ಆವಶ್ಯಕತೆಗೂ ಮೀರಿದ ಜನರಿಗೆ ವಸತಿ ಏರ್ಪಡಿಸಿಕೊಡಲು, ಕಾರ್ಖಾನೆಗಳಲ್ಲೂ ಗಣಿಗಳಲ್ಲೂ ಉತ್ಪಾದಿ ಸಲಾದ ವಸ್ತುಗಳಿಗೆ ಹೊಸ ಮಾರುಕಟ್ಟೆಗಳನ್ನು ಒದಗಿಸಲು, ಹೊಸ ಭೂಮಿ ಗಳನ್ನು ಪಡೆದುಕೊಳ್ಳಬೇಕು. ಸಾಮ್ರಾಜ್ಯ ಎನ್ನುವುದು, ನಾನು ಯಾವಾಗಲೂ

ಹೇಳುತ್ತಿರುವಂತೆ, ಅನ್ನಬಟ್ಟೆಯ ಸಮಸ್ಯೆ. ಅಂತರ್ಯುದ್ಧವನ್ನು ಹೋಗಲಾಡಿಸ ಬಯಸಿದಲ್ಲಿ ನಾವು ಸಾಮ್ರಾಜ್ಯಶಾಹಿಗಳಾಗಬೇಕು."*

ಕೋಟ್ಯಾಧೀಶರೂ, ಹಣಕಾಸು ಜಗತ್ತಿನ ರಾಜರೂ, ಆಂಗ್ಲೋ-ಬೋಯರ್ ಯುದ್ಧಕ್ಕೆ ಪ್ರಧಾನ ಕಾರಣರೂ ಆದ ಸೆಸಿಲ್ ರೋಡ್ಸ್ ಇದನ್ನು 1895ರಲ್ಲಿ ಹೇಳಿದರು. ನಿಜ, ಅವರ ಸಾಮ್ರಾಜ್ಯವಾದದ ಸಮರ್ಥನೆ ಒರಟಾಗಿದೆ, ಸಿನಿಕತನದಿಂದ ಕೂಡಿದೆ, ಆದರೆ ಸಾರದಲ್ಲಿ ಅದು ಮಾಸ್ಲವ್, ಸ್ಯುಡೆಕುಮ್, ಪೊತ್ರೇಸೊವ್, ದಾವೀದ್ ರಷ್ಯನ್ ಮಾರ್ಕ್ಸ್‌ವಾದದ ಸಂಸ್ಥಾಪಕ ಮತ್ತಿತರರು ಪ್ರತಿಪಾದಿಸುವ "ಸಿದ್ಧಾಂತ"ದಿಂದ ಭಿನ್ನವೇನೂ ಅಲ್ಲ. ಸೆಸಿಲ್ ರೋಡ್ಸ್‌ರವರು ಇವರಿಗಿಂತ ಸ್ವಲ್ಪ ಮಟ್ಟಿಗೆ ಹೆಚ್ಚು ಸತ್ಯಸಂಧರಾದ ಸಾಮಾಜಿಕ-ಸ್ವದೇಶ ಮೂಢಾಭಿಮಾನಿಯಾಗಿದ್ದರು....

ಜಗತ್ತಿನ ಪ್ರಾದೇಶಿಕ ವಿಭಜನೆಯನ್ನೂ, ಇದಕ್ಕೆ ಸಂಬಂಧಿಸಿ ಕಳೆದ ದಶಕಗಳಲ್ಲಿ ಆಗಿರುವ ಬದಲಾವಣೆಗಳನ್ನೂ ಸಾಧ್ಯವಾದಷ್ಟೂ ಹೆಚ್ಚು ನಿಷ್ಕೃಷ್ಟವಾಗಿ ಚಿತ್ರಿಸಲು ನಾವು ಜಗತ್ತಿನ ಎಲ್ಲ ಬೃಹತ್ ರಾಷ್ಟ್ರಗಳ ವಸಾಹತು ಆಸ್ತಿಗಳ ಬಗೆಗೆ ನಾವಾಗಲೇ ಉದ್ಧರಿಸುವ ಕೃತಿಯಲ್ಲಿ ಸುಪಾನ್‌ರು ಒದಗಿಸಿರುವ ಆಧಾರಾಂಶಗಳನ್ನು ಬಳಸಿಕೊಳ್ಳುವೆವು. ಸುಪಾನ್‌ರವರು 1876ನೆಯ ಹಾಗೂ 1900ನೆಯ ವರ್ಷಗಳನ್ನು ತೆಗೆದುಕೊಳ್ಳುತ್ತಾರೆ. ನಾವು 1876ನೆಯ ವರ್ಷವನ್ನೂ – ಇದು ತುಂಬ ಸೂಕ್ತವಾದ ಆಯ್ಕೆ, ಏಕೆಂದರೆ, ಸರಿಯಾಗಿ ಆ ಕಾಲದ ಹೊತ್ತಿಗೇ ಪಶ್ಚಿಮ ಯುರೋಪಿಯನ್ ಬಂಡವಾಳವಾದದ ಬೆಳವಣಿಗೆಯ ಏಕಸ್ವಾಮ್ಯಪೂರ್ವ ಘಟ್ಟವು ಪ್ರಧಾನವಾಗಿ ಪೂರ್ಣಗೊಂಡಿತೆಂದು ಹೇಳಬಹುದು – 1914ನೆಯ ವರ್ಷವನ್ನೂ ತೆಗೆದುಕೊಳ್ಳೋಣ ಮತ್ತು ಸುಪಾನ್‌ರ ಸಂಖ್ಯೆಗಳನ್ನು ಉದ್ಧರಿಸುವ ಬದಲು ಹೆಚ್ಚು ಈಚೆಗಿನ ಹ್ಯುಬ್ನರ್‌ರ 'ಭೂಗೋಳಶಾಸ್ತ್ರ ಹಾಗೂ ಅಂಕಿಅಂಶಶಾಸ್ತ್ರ ಪಟ್ಟಿಗಳು' ಎಂಬ ಗ್ರಂಥದಿಂದ ಸಂಖ್ಯೆಗಳನ್ನು ಉದ್ಧರಿಸೋಣ. ಸುಪಾನ್‌ರು ವಸಾಹತುಗಳಿಗೆ ಸಂಬಂಧಿಸಿದ ಸಂಖ್ಯೆಗಳನ್ನಷ್ಟೆ ನೀಡುತ್ತಾರೆ; ಜಗತ್ತಿನ ವಿಭಜನೆಯ ಸಂಪೂರ್ಣ ಚಿತ್ರ ನೀಡಲು, ವಸಾಹತುಗಳಲ್ಲದ ಹಾಗೂ ಅರೆ ವಸಾಹತುಗಳಾದ ದೇಶಗಳಿಗೆ (ಪರ್ಷಿಯಾ, ಚೀಣಾ ಮತ್ತು ಟರ್ಕಿಗಳನ್ನು ನಾವು ಈ ಸಂವರ್ಗದಲ್ಲಿರಿಸುತ್ತೇವೆ – ಇವುಗಳಲ್ಲಿ ಮೊದಲನೆಯದು ಆಗಲೇ ಬಹುಮಟ್ಟಿಗೆ ಸಂಪೂರ್ಣವಾಗಿ ಒಂದು ವಸಾಹತಾಗಿದೆ, ಎರಡನೆಯ ಹಾಗೂ ಮೂರನೆಯ ದೇಶಗಳು, ವಸಾಹತುಗಳಾಗುತ್ತಿವೆ) ಸಂಬಂಧಿಸಿದ ಸಂಖ್ಯೆಗಳನ್ನೂ ಸಂಕ್ಷೇಪವಾಗಿ ಸೇರಿಸುವುದು ಉಪಯುಕ್ತವೆಂದು ನಾವು ಭಾವಿಸುತ್ತೇವೆ.

ಹೀಗೆ ನಮಗೆ ಕೆಳಗಿನ ಫಲಿತಾಂಶ ಲಭಿಸುತ್ತದೆ:

---

*Die Neue Zeit*, XVI, 1, 1898, p. 304.

## ಬೃಹತ್ ರಾಷ್ಟ್ರಗಳ ವಸಾಹತು ಆಸ್ತಿಗಳು
(ಮಿಲಿಯ ಚದುರ ಕಿ.ಮೀ.ಗಳಲ್ಲಿ ಮತ್ತು ಮಿಲಿಯ ಜನಸಂಖ್ಯೆಯಲ್ಲಿ)

| | ವಸಾಹತುಗಳು | | | | ವಸಾಹತುಗಳ ಪ್ರಭುದೇಶಗಳು | | ಒಟ್ಟು | |
|---|---|---|---|---|---|---|---|---|
| | 1876 | | 1914 | | 1914 | | 1914 | |
| | ಕ್ಷೇತ್ರ | ಜನಸಂಖ್ಯೆ | ಕ್ಷೇತ್ರ | ಜನಸಂಖ್ಯೆ | ಕ್ಷೇತ್ರ | ಜನಸಂಖ್ಯೆ | ಕ್ಷೇತ್ರ | ಜನಸಂಖ್ಯೆ |
| ಗ್ರೇಟ್ ಬ್ರಿಟನ್ . | 22.5 | 251.9 | 33.5 | 393.5 | 0.3 | 46.5 | 33.8 | 440.0 |
| ರಷ್ಯ . . . | 17.0 | 15.9 | 17.4 | 33.2 | 5.4 | 136.2 | 22.8 | 169.4 |
| ಫ್ರಾನ್ಸ್ . . | 0.9 | 6.0 | 10.6 | 55.5 | 0.5 | 39.6 | 11.1 | 95.1 |
| ಜರ್ಮನಿ . . | – | – | 2.9 | 12.3 | 0.5 | 64.9 | 3.4 | 77.2 |
| ಅಮೆರಿಕದ ಸಂಯುಕ್ತ ಸಂಸ್ಥಾನಗಳು . | – | – | 0.3 | 9.7 | 9.4 | 97.0 | 9.7 | 106.7 |
| ಜಪಾನ್. . . | – | – | 0.3 | 19.2 | 0.4 | 53.0 | 0.7 | 72.2 |
| 6 ಬೃಹತ್ ರಾಷ್ಟ್ರಗಳು (ಮೊತ್ತ) . . | 40.4 | 273.8 | 65.0 | 523.4 | 16.5 | 437.2 | 81.5 | 960.6 |
| ಇತರ ಬೃಹತ್ ರಾಷ್ಟ್ರಗಳ ವಸಾಹತುಗಳು (ಬೆಲ್ಜಿಯಂ, ಹಾಲೆಂಡ್, ಇತ್ಯಾದಿ) . . . . . . . . . . | | | | | | | 9.9 | 45.3 |
| ಅರೆ ವಸಾಹತು ದೇಶಗಳು (ಪರ್ಷಿಯಾ, ಚೀಣಾ, ಟರ್ಕಿ) . | | | | | | | 14.5 | 361.2 |
| ಇತರ ದೇಶಗಳು . . . . . . . . . . . | | | | | | | 28.0 | 289.9 |
| ಇಡೀ ಜಗತ್ತಿಗೆ ಮೊತ್ತ . . . . . . . . . . | | | | | | | 133.9 | 1,657.0 |

19ನೆಯ ಹಾಗೂ 20ನೆಯ ಶತಮಾನಗಳ ನಡುವಿನ ಗಡಿರೇಖೆಯಲ್ಲಿ ಜಗತ್ತಿನ ವಿಭಜನೆಯು ಹೇಗೆ "ಪೂರ್ಣ"ವಾಗಿದ್ದಿತೆಂಬುದನ್ನು ಈ ಸಂಖ್ಯೆಗಳಿಂದ ನಾವು ಸ್ಪಷ್ಟವಾಗಿ ಕಾಣುತ್ತೇವೆ. 1876ರ ನಂತರ ಆರು ಅತಿದೊಡ್ಡ ಬೃಹತ್ ರಾಷ್ಟ್ರಗಳ ವಸಾಹತು ಆಸ್ತಿಗಳು ಅಪಾರ ಪ್ರಮಾಣಗಳಿಗೆ, ಶೇ. 50ಕ್ಕೂ ಹೆಚ್ಚು, 40 ಮಿಲಿಯದಿಂದ 65 ಮಿಲಿಯ ಚದುರ ಕಿ.ಮೀ.ಗಳಿಗೆ, ಹೆಚ್ಚುತ್ತವೆ; ಈ ಹೆಚ್ಚಳವು 25 ಮಿಲಿಯ ಚದುರ ಕಿ.ಮೀ.ಗಳಾಗಿದೆ, ವಸಾಹತು ಪ್ರಭುದೇಶಗಳ ಕ್ಷೇತ್ರಕ್ಕಿಂತ (16,500,000 ಚದುರ ಕಿ.ಮೀ.) ಶೇ. 50ರಷ್ಟು ಹೆಚ್ಚು. 1876ರಲ್ಲಿ ಮೂರು ಬೃಹತ್ ರಾಷ್ಟ್ರಗಳಿಗೆ ವಸಾಹತುಗಳಿರಲಿಲ್ಲ. ನಾಲ್ಕನೆಯದು – ಫ್ರಾನ್ಸ್ – ಏನೇನೂ ವಸಾಹತು ಹೊಂದಿರಲಿಲ್ಲ. 1914ರ ಹೊತ್ತಿಗೆ ಈ ನಾಲ್ಕು ಬೃಹತ್ ರಾಷ್ಟ್ರಗಳೂ 14,100,000 ಚದುರ ಕಿ.ಮೀ. ಕ್ಷೇತ್ರದ, ಅಂದರೆ ಯೂರೋಪಿನ ಕ್ಷೇತ್ರದ ಸುಮಾರು ಶೇ. 50ಕ್ಕೂ ಹೆಚ್ಚು, ವಸಾಹತುಗಳನ್ನು ಪಡೆದುಕೊಂಡಿದ್ದವು. ಈ ವಸಾಹತುಗಳಲ್ಲಿನ ಜನಸಂಖ್ಯೆ ಸುಮಾರು 100 ಮಿಲಿಯ ಆಗಿದ್ದಿತು. ವಸಾಹತು ಆಸ್ತಿಗಳ ವಿಸ್ತರಣೆಯ ದರದಲ್ಲಿ ಅಸಮತೆಯು ತುಂಬ ಹೆಚ್ಚಾಗಿದೆ. ಉದಾಹರಣೆಗೆ, ಕ್ಷೇತ್ರದಲ್ಲೂ ಜನಸಂಖ್ಯೆಯಲ್ಲೂ ತುಂಬ ಭಿನ್ನವಾಗೇನೂ ಇರದ ಫ್ರಾನ್ಸ್, ಜರ್ಮನಿ ಹಾಗೂ ಜಪಾನ್‌ಗಳನ್ನು ಹೋಲಿಸಿದಲ್ಲಿ, ಮೊದಲನೆಯದು ಇತರೆರಡು ಗಳಿಸಿದ ವಸಾಹತು ಭೂಭಾಗಗಳ ಮೂರರಷ್ಟು ಭೂಭಾಗಗಳನ್ನು ಗಳಿಸಿತೆಂಬುದನ್ನು ನಾವು ಕಾಣುವೆವು. ಹಣಕಾಸು ಬಂಡವಾಳಕ್ಕೆ ಸಂಬಂಧಿಸಿಯೂ ಫ್ರಾನ್ಸು ಬಹುಶಃ ನಾವು ಪರಿಶೀಲಿಸುತ್ತಿರುವ ಕಾಲಾವಧಿಯ ಆರಂಭದಲ್ಲಿ ಜರ್ಮನಿ ಹಾಗೂ ಜಪಾನ್ ಕೂಡಿ ಇದ್ದುದಕ್ಕಿಂತ ಹಲವಾರು ಪಟ್ಟು ಹೆಚ್ಚು ಸಿರಿವಂತವಾಗಿದ್ದಿತು. ಶುದ್ಧ ಆರ್ಥಿಕ ಪರಿಸ್ಥಿತಿಗಳ ಜೊತೆಗೆ ಮತ್ತು ಅವುಗಳ ಆಧಾರದ ಮೇಲೆ, ಭೌಗೋಳಿಕ ಮತ್ತಿತರ ಪರಿಸ್ಥಿತಿಗಳೂ ವಸಾಹತು ಆಸ್ತಿ ಪ್ರಮಾಣಗಳ ಮೇಲೆ ಪರಿಣಾಮ ಬೀರುತ್ತವೆ. ವಿಸ್ತೃತ ಪ್ರಮಾಣದ ಕೈಗಾರಿಕೆ, ವಿನಿಮಯ ಹಾಗೂ ಹಣಕಾಸು ಬಂಡವಾಳ ಇವುಗಳ ಫಲವಾಗಿ ಕಳೆದ ದಶಕಗಳಲ್ಲಿ ಜಗತ್ತನ್ನು ಸಮಮಟ್ಟಕ್ಕೆ ತರುವ, ವಿವಿಧ ದೇಶಗಳಲ್ಲಿನ ಆರ್ಥಿಕ ಹಾಗೂ ಜೀವನ ಪರಿಸ್ಥಿತಿಗಳನ್ನು ಸಮಮಟ್ಟಕ್ಕೆ ತರುವ, ಪ್ರಕ್ರಿಯೆಯು ಎಷ್ಟೇ ಪ್ರಬಲವಾಗಿ ಬೆಳೆದಿದ್ದರೂ ವ್ಯತ್ಯಾಸಗಳು ಗಣನೀಯವಾಗಿ ಉಳಿದೇ ಇವೆ; ಮೇಲೆ ಹೇಳಿದ ಆರು ದೇಶಗಳಲ್ಲಿ ನಾವು ಮೂರು ಮಾದರಿಗಳನ್ನು ಕಾಣುತ್ತೇವೆ. ಮೊದಲನೆಯದು, ಎಳೆಯ ಬಂಡವಾಳಶಾಹಿ ದೇಶಗಳು (ಅಮೆರಿಕ, ಜರ್ಮನಿ, ಜಪಾನ್). ಇವುಗಳ ಪ್ರಗತಿ ಅಸಾಧಾರಣವಾಗಿ ಶೀಘ್ರವಾಗಿದೆ. ಎರಡನೆಯದು, ಹಳೆಯ ಬಂಡವಾಳಶಾಹಿ ಬೆಳವಣಿಗೆಯುಳ್ಳ ದೇಶಗಳು (ಫ್ರಾನ್ಸ್ ಹಾಗೂ ಗ್ರೇಟ್ ಬ್ರಿಟನ್). ಇವುಗಳ ಪ್ರಗತಿ ಈಚೆಗೆ ಈ ಮುನ್ನ ತಿಳಿಸಿರುವ ದೇಶಗಳ ಪ್ರಗತಿಗಿಂತ ಹೆಚ್ಚು ನಿಧಾನವಾಗಿದೆ. ಮೂರನೆಯದು, ಆರ್ಥಿಕವಾಗಿ ಅತ್ಯಂತ ಹಿಂದುಳಿದ ದೇಶ (ರಷ್ಯ). ಇಲ್ಲಿ ಆಧುನಿಕ ಬಂಡವಾಳಶಾಹಿ ಸಾಮ್ರಾಜ್ಯವಾದವು ಬಂಡವಾಳಶಾಹಿಪೂರ್ವ ಸಂಬಂಧಗಳ ವಿಶೇಷ

ವಾಗಿ ದಟ್ಟವಾದ ಜಾಲಬಂಧದ ತೊಡಕಿನಲ್ಲಿ ಸಿಕ್ಕಿಬಿದ್ದಿದೆ ಎಂದು ಹೇಳ ಬಹುದು.

ಬೃಹತ್ ರಾಷ್ಟ್ರಗಳ ವಸಾಹತು ಆಸ್ತಿಗಳ ಪಕ್ಕದಲ್ಲೇ ನಾವು ಸಣ್ಣ ರಾಷ್ಟ್ರಗಳ ಸಣ್ಣ ವಸಾಹತುಗಳನ್ನೂ ಇರಿಸಿದ್ದೇವೆ. ಇವು ಮುಂದೆ ವಸಾಹತುಗಳ "ಪುನರ್ ವಿಭಜನೆ"ಗೆ ಗುರಿಯಾಗಲು ಸಾಧ್ಯವಿರುವಂಥ, ಸಂಭವವಿರುವಂಥ, ದೇಶಗಳು ಎಂದು ಹೇಳಬಹುದು. ಈ ಸಣ್ಣ ರಾಷ್ಟ್ರಗಳು ತಮ್ಮ ವಸಾಹತುಗಳನ್ನು ಉಳಿಸಿಕೊಂಡಿರು ವುದಕ್ಕೆ ಬಹುಮಟ್ಟಿಗಿನ ಕಾರಣವೆಂದರೆ, ಬೃಹತ್ ರಾಷ್ಟ್ರಗಳು ಪರಸ್ಪರ ವಿರುದ್ಧ ಹಿತಗಳಿಂದ, ತಿಕ್ಕಾಟ ಇತ್ಯಾದಿಗಳಿಂದ ವಿಭಜಿತವಾಗಿ ತಮ್ಮ ಸೂರೆಗಳನ್ನು ಹಂಚಿ ಕೊಳ್ಳುವುದರಲ್ಲಿ ಒಂದು ಒಪ್ಪಂದಕ್ಕೆ ಬರಲಾರದೆ ಹೋಗಿರುವುದಾಗಿದೆ. ಇನ್ನು "ಅರೆವಸಾಹತು" ರಾಜ್ಯಗಳ ಬಗೆಗೆ ಹೇಳುವುದಾದರೆ, ಅವು ಸ್ಥಿತ್ಯಂತರ ರೂಪಗಳಿಗೆ ಒಂದು ನಿದರ್ಶನ ಒದಗಿಸುತ್ತವೆ, ಇಂಥವುಗಳನ್ನು ಪ್ರಕೃತಿಯ ಹಾಗೂ ಸಮಾಜದ ಎಲ್ಲ ವಲಯಗಳಲ್ಲೂ ಕಾಣಬಹುದಾಗಿದೆ. ಹಣಕಾಸು ಬಂಡವಾಳವು ಎಲ್ಲ ಆರ್ಥಿಕ ಹಾಗೂ ಅಂತರರಾಷ್ಟ್ರೀಯ ಸಂಬಂಧಗಳಲ್ಲೂ ಎಂತಹ ಮಹೋನ್ನತವಾದ, ನಿರ್ಧಾ ರಕವಾದ ಎಂದೂ ಹೇಳಬಹುದು, ಶಕ್ತಿ, ಎಂದರೆ, ಅತ್ಯಂತ ಪೂರ್ಣ ರಾಜಕೀಯ ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವ ರಾಜ್ಯಗಳನ್ನೂ ತನಗೆ ಅಧೀನ ಮಾಡಿ ಕೊಳ್ಳುವ ಸಾಮರ್ಥ್ಯ ಹೊಂದಿರುತ್ತದೆ, ವಾಸ್ತವವಾಗಿ ಅಧೀನ ಮಾಡಿಕೊಳ್ಳುತ್ತದೆ. ಸಧ್ಯದಲ್ಲೇ ನಾವು ಇದಕ್ಕೆ ನಿದರ್ಶನಗಳನ್ನು ನೋಡೋಣ. ಹಣಕಾಸು ಬಂಡವಾಳವು ತಾನು ಅಧೀನಗೊಳಿಸಿಕೊಳ್ಳುವ ದೇಶಗಳ ಹಾಗೂ ಜನತೆಗಳ ರಾಜಕೀಯ ಸ್ವಾತಂತ್ರ್ಯ ವನ್ನು ನಷ್ಟಗೊಳಿಸುವ ಅಂತಹ ಅಧೀನತೆಯನ್ನು ಅತ್ಯಂತ ಹೆಚ್ಚು "ಅನುಕೂಲ" ವಾದುದನ್ನಾಗಿ ಕಂಡುಕೊಳ್ಳುತ್ತದೆ ಮತ್ತು ಅದರಿಂದ ಅತ್ಯಂತ ಹೆಚ್ಚು ಲಾಭ ಪಡೆದು ಕೊಳ್ಳುತ್ತದೆ. ಈ ಸಂದರ್ಭದಲ್ಲಿ, ಅರೆವಸಾಹತು ದೇಶಗಳು "ಮಧ್ಯಂತರ ಘಟ್ಟ"ಕ್ಕೆ ಮಾದರಿ ಉದಾಹರಣೆಗಳಾಗಿವೆ. ಜಗತ್ತಿನ ಉಳಿದ ಭಾಗವು ಆಗಲೇ ವಿಭಜಿತ ವಾಗಿರುವಾಗ, ಈ ಅರೆ ಪರಾಧೀನ ದೇಶಗಳಿಗಾಗಿ ಹೋರಾಟವು ಹಣಕಾಸು ಬಂಡ ವಾಳದ ಯುಗದಲ್ಲಿ ವಿಶೇಷವಾಗಿ ಉಗ್ರವಾಗುವುದು ಸಹಜವೇ ಆಗಿದೆ.

ವಸಾಹತು ನೀತಿಯೂ ಸಾಮ್ರಾಜ್ಯವಾದವೂ ಬಂಡವಾಳವಾದದ ಇತ್ತೀಚೆಗಿನ ಘಟ್ಟಕ್ಕೂ ಮುನ್ನ, ಬಂಡವಾಳವಾದಕ್ಕೂ ಮುನ್ನವೇ, ಅಸ್ತಿತ್ವದಲ್ಲಿದ್ದವು. ಗುಲಾಮ ಒಡೆತನದ ಮೇಲೆ ಸಂಸ್ಥಾಪಿತವಾಗಿದ್ದ ರೋಮ್ ವಸಾಹತು ನೀತಿಯನ್ನು ಅನು ಸರಿಸುತ್ತಿದ್ದಿತು ಮತ್ತು ಸಾಮ್ರಾಜ್ಯವಾದವನ್ನು ಆಚರಿಸುತ್ತಿದ್ದಿತು. ಆದರೆ ನಾನಾ ಸಾಮಾಜಿಕ-ಆರ್ಥಿಕ ರಚನೆಗಳ ನಡುವಿನ ಮೂಲಭೂತ ವ್ಯತ್ಯಾಸವನ್ನು ಉಪೇಕ್ಷಿ ಸುವಂಥ ಅಥವಾ ಹಿನ್ನೆಲೆಗೆ ತಳ್ಳುವಂಥ, ಸಾಮ್ರಾಜ್ಯವಾದ ಕುರಿತಾದ "ಸಾಮಾನ್ಯ" ಪರಿಶೀಲನೆಗಳು ಅತ್ಯಂತ ನೀರಸ ವಿಚಾರಗಳಾಗಿ ಇಲ್ಲವೇ ಬಡಾಯಿ ಮಾತಾಗಿ ಅನಿ ವಾರ್ಯವಾಗಿ ಪರಿವರ್ತಿತವಾಗುತ್ತವೆ – 'ಮಹತ್ತರ ರೋಮ್ ಹಾಗೂ ಮಹತ್ತರ

ಬ್ರಿಟನ್' ಎಂಬ ಗ್ರಂಥ*ದಲ್ಲಿನ ಹೋಲಿಕೆಯಂತೆ. ಬಂಡವಾಳವಾದದ ಹಳೆಯ ಘಟ್ಟಗಳ ಬಂಡವಾಳಶಾಹಿ ವಸಾಹತು ನೀತಿಯೂ ಸಹ ಹಣಕಾಸು ಬಂಡವಾಳದ ವಸಾಹತು ನೀತಿಯಿಂದ ಸಾರಭೂತವಾಗಿ ಭಿನ್ನವಾದುದು.

ಬಂಡವಾಳವಾದದ ಇತ್ತೀಚೆಗಿನ ಘಟ್ಟದ ಪ್ರಧಾನ ಲಕ್ಷಣವೆಂದರೆ, ಭಾರಿ ಬಂಡವಾಳಗಾರರ ಏಕಸ್ವಾಮ್ಯ ಸಂಸ್ಥೆಗಳ ಪ್ರಾಬಲ್ಯ. ಕಚ್ಚಾ ಪದಾರ್ಥಗಳ ಎಲ್ಲ ಆಕರಗಳನ್ನೂ ಒಂದೇ ವೃಂದವು ವಶಪಡಿಸಿಕೊಂಡಾಗ ಈ ಏಕಸ್ವಾಮ್ಯ ಸಂಸ್ಥೆಗಳು ಅತ್ಯಂತ ದೃಢವಾಗಿ ಸ್ಥಾಪಿತವಾಗಿರುತ್ತವೆ. ಅಂತರರಾಷ್ಟ್ರೀಯ ಬಂಡವಾಳಶಾಹಿ ಸಂಸ್ಥೆಗಳು ತಮ್ಮ ಪ್ರತಿಸ್ಪರ್ಧಿಗಳಿಗೆ ಸ್ಪರ್ಧಿಸುವ ಎಲ್ಲ ಅವಕಾಶಗಳನ್ನೂ ತಪ್ಪಿಸಲು, ಎಷ್ಟು ಉತ್ಸಾಹದಿಂದ ಎಲ್ಲ ಯತ್ನ ಮಾಡುತ್ತವೆಂಬುದನ್ನು, ಉದಾಹರಣೆಗೆ, ಕಬ್ಬಿಣದ ಅದುರು ಕ್ಷೇತ್ರಗಳು, ತೈಲ ಕ್ಷೇತ್ರಗಳು, ಇತ್ಯಾದಿಗಳನ್ನು ಕೊಂಡುಕೊಂಡು ಬಿಡುತ್ತವೆಂಬುದನ್ನು ನಾವು ಕಂಡಿದ್ದೇವೆ. ಪ್ರತಿಸ್ಪರ್ಧಿಗಳೊಂದಿಗೆ ಹೋರಾಟದಲ್ಲಿ ಎಲ್ಲ ಸಂಭವಗಳ ವಿರುದ್ಧವೂ, ಪ್ರತಿಸ್ಪರ್ಧಿಯು ರಾಜ್ಯ ಏಕಸ್ವಾಮ್ಯ ಕುರಿತಾದ ಶಾಸನದ ಮೂಲಕ ರಕ್ಷಣೆ ಪಡೆಯಲು ಬಯಸುವಂಥ ಸಂಭವಗಳಲ್ಲೂ ಸಹ, ಏಕಸ್ವಾಮ್ಯ ಸಂಸ್ಥೆಗಳಿಗೆ ಸಂಪೂರ್ಣ ಸಂರಕ್ಷಣೆ ನೀಡುವುದು ವಸಾಹತು ಮೇಲಿನ ಒಡೆತನವಷ್ಟೆ. ಬಂಡವಾಳವಾದವು ಹೆಚ್ಚು ವಿಕಾಸಗೊಂಡಂತೆ, ಕಚ್ಚಾ ಪದಾರ್ಥಗಳ ಕೊರತೆ ಹೆಚ್ಚು ಪ್ರಬಲವಾಗಿ ಅನುಭವಕ್ಕೆ ಬಂದಂತೆ, ಇಡೀ ಜಗತ್ತಿನಾದ್ಯಂತ ಕಚ್ಚಾ ಪದಾರ್ಥಗಳ ಆಕರಗಳಿಗಾಗಿ ಸ್ಪರ್ಧೆಯೂ ಬೇಟೆಯೂ ಅಷ್ಟೂ ತೀವ್ರಗೊಳ್ಳುತ್ತವೆ, ವಸಾಹತುಗಳನ್ನು ಪಡೆದುಕೊಳ್ಳುವುದಕ್ಕಾಗಿ ಹೋರಾಟವೂ ಅಷ್ಟೂ ಹೆಚ್ಚು ಉಗ್ರ ವಾಗುತ್ತದೆ.

"ಕೆಲವರಿಗೆ ಇದು ವಿರೋಧಾಭಾಸವೆಂದು ಕಾಣಬಹುದಾದರೂ ಅನತಿದೂರ ಭವಿಷ್ಯತ್ತಿನಲ್ಲಿ ನಗರಗಳ ಕೈಗಾರಿಕಾ ಜನಸಂಖ್ಯೆಯಲ್ಲಿ ಹೆಚ್ಚಳಕ್ಕೆ, ಆಹಾರ ಕೊರತೆ ಗಿಂತ ಹೆಚ್ಚಾಗಿ ಕೈಗಾರಿಕೆಗಳಿಗೆ ಕಚ್ಚಾ ಪದಾರ್ಥಗಳ ಕೊರತೆಯು, ಅಡ್ಡಿಯಾಗು ವುದೇ ಹೆಚ್ಚು ಸಂಭವವೆಂದು ದೃಢವಾಗಿ ಹೇಳಬಹುದು" ಎಂದು ಷಿಲ್ಡೆರ್ ಬರೆಯು ತ್ತಾರೆ. ಉದಾಹರಣೆಗೆ, ಮರಮುಟ್ಟುಗಳ ಕೊರತೆ ಹೆಚ್ಚುತ್ತಿದೆ, ಅವುಗಳ ಬೆಲೆಯೂ ಏರುತ್ತಿದೆ, ತೊಗಲಿನ ಹಾಗೂ ಅರಿವೆ ಕೈಗಾರಿಕೆಗಾಗಿ ಕಚ್ಚಾ ಪದಾರ್ಥಗಳ ಕೊರ ತೆಯೂ ಹೆಚ್ಚುತ್ತಿದೆ. "ಉದ್ಯಮಗಾರರ ಸಂಸ್ಥೆಗಳು ಇಡೀ ಜಾಗತಿಕ ಆರ್ಥಿಕತೆಯಲ್ಲಿ ಕೃಷಿ ಹಾಗೂ ಕೈಗಾರಿಕೆಗಳ ನಡುವೆ ಒಂದು ಸಮತೋಲವನ್ನು ಉಂಟುಮಾಡಲು

---

*C. P. Lucas, *Greater Rome and Greater Britain*, ಆಕ್ಸ್‌ಫರ್ಡ್, 1912, ಅಥವಾ Earl of Cromer, *Ancient and Modern Imperialism*, L., 1910 (ಅರ್ಲ್ ಆಫ್ ಕ್ರೊಮರ್, 'ಪುರಾತನ ಹಾಗೂ ಆಧುನಿಕ ಸಾಮ್ರಾಜ್ಯ ವಾದ,' ಲಂಡನ್, 1910. – ಸಂ.)

ಯತ್ನಿಸುತ್ತಿವೆ; ಇದಕ್ಕೆ ಉದಾಹರಣೆಯಾಗಿ, 1904ರಲ್ಲಿ ಹಲವಾರು ಅತ್ಯಂತ ಮುಖ್ಯ ಕೈಗಾರಿಕಾ ದೇಶಗಳಲ್ಲಿ ಸ್ಥಾಪಿತವಾದ 'ಹತ್ತಿ ನೂಲುಕಾರರ ಸಂಸ್ಥೆಗಳ ಅಂತರ ರಾಷ್ಟ್ರೀಯ ಫೆಡರೇಷನ್'ಅನ್ನೂ, ಅದೇ ಮಾದರಿಯಲ್ಲಿ, 1910ರಲ್ಲಿ ಸ್ಥಾಪಿಸಲಾದ 'ಅಗಸೆನಾರು ನೂಲುಕಾರರ ಸಂಸ್ಥೆಗಳ ಯೂರೋಪಿಯನ್ ಫೆಡರೇಷನ್'ಅನ್ನೂ, ನಮೂದಿಸಬಹುದು." *

ಬೂರ್ಷ್ವಾ ಸುಧಾರಣಾವಾದಿಗಳೂ, ಅವರಲ್ಲಿ ನಿರ್ದಿಷ್ಟವಾಗಿ ಪ್ರಸಕ್ತ ಕೌತ್ಸ್ಕಿ ಅನುಯಾಯಿಗಳು, ಕಚ್ಚಾ ಪದಾರ್ಥಗಳನ್ನು ಬಹಿರಂಗ ಮಾರುಕಟ್ಟೆಯಲ್ಲಿ "ಹೆಚ್ಚು ವೆಚ್ಚದ ಹಾಗೂ ಅಪಾಯಕಾರಿಯಾದ" ವಸಾಹತು ನೀತಿ ಇಲ್ಲದೆಯೇ ಪಡೆದು ಕೊಳ್ಳುವುದು "ಸಾಧ್ಯ"ವೆಂದು ವಾದ ಮಾಡುವ ಮೂಲಕ, ಈ ರೀತಿಯ ವಾಸ್ತವಾಂಶ ಗಳ ಪ್ರಾಮುಖ್ಯವನ್ನು ಅಲ್ಪಗಾಣಿಸ ಯತ್ನಿಸುತ್ತಾರೆನ್ನಿ. ಒಟ್ಟಿನಲ್ಲಿ ಕೃಷಿ ಪರಿಸ್ಥಿತಿ ಗಳನ್ನು "ಸುಮ್ಮನೆ" ಸುಧಾರಿಸುವ ಮೂಲಕ ಕಚ್ಚಾ ಪದಾರ್ಥಗಳ ಸರಬರಾಜನ್ನು ಅಪಾರವಾಗಿ ಹೆಚ್ಚಿಸುವುದು "ಸಾಧ್ಯ" ಎಂದು ಅವರು ವಾದಿಸುತ್ತಾರೆ. ಆದರೆ ಅಂಥ ವಾದಗಳು ಸಾಮ್ರಾಜ್ಯವಾದಕ್ಕೆ ಒಂದು ಸಮರ್ಥನೆಯಷ್ಟೆ ಆಗುತ್ತವೆ, ಅದನ್ನು ಅಂದಗೊಳಿಸಿ ತೋರಿಸುವ ಯತ್ನವಾಗುತ್ತವೆ. ಏಕೆಂದರೆ, ಅವು ಬಂಡವಾಳವಾದದ ಇತ್ತೀಚಿನ ಘಟ್ಟದ ಪ್ರಧಾನ ಲಕ್ಷಣವನ್ನು – ಏಕಸ್ವಾಮ್ಯ ಸಂಸ್ಥೆಗಳ ರಚನೆಯನ್ನು – ಉಪೇಕ್ಷಿಸುತ್ತವೆ. ಮುಕ್ತ ಮಾರುಕಟ್ಟೆಯು ಹೆಚ್ಚು ಹೆಚ್ಚಾಗಿ ಗತಕಾಲದ ವಿಷಯ ವಾಗುತ್ತಿದೆ; ಏಕಸ್ವಾಮ್ಯ ಸಿಂಡಿಕೇಟುಗಳೂ ಟ್ರಸ್ಟುಗಳೂ ಅದನ್ನು ದಿನ ಕಳೆದಂತೆ ಹೆಚ್ಚು ನಿರ್ಬಂಧಗೊಳಿಸುತ್ತಿವೆ. ಕೃಷಿ ಪರಿಸ್ಥಿತಿಗಳನ್ನು "ಸುಮ್ಮನೆ" ಸುಧಾರಿಸು ವುದು ಎಂದರೆ, ಜನಸಮೂಹಗಳ ಪರಿಸ್ಥಿತಿಗಳನ್ನು ಸುಧಾರಿಸುವುದು, ಕೂಲಿ ಹೆಚ್ಚಿ ಸುವುದು, ಲಾಭ ತಗ್ಗಿಸುವುದು, ಎಂದರ್ಥವಾಗುತ್ತದೆ. ವಸಾಹತುಗಳನ್ನು ಗೆದ್ದು ಕೊಳ್ಳುವುದನ್ನು ಬಿಟ್ಟು ಜನಸಮೂಹಗಳ ಪರಿಸ್ಥಿತಿಯನ್ನು ಸುಧಾರಿಸುವ ಕಾರ್ಯ ವನ್ನು ಕೈಗೊಳ್ಳುವಂಥ ಯಾವುದೇ ಟ್ರಸ್ಟುಗಳು, ಭಾವಾತಿರೇಕದ ಸುಧಾರಣಾವಾದಿ ಗಳ ಕಲ್ಪನೆಯಲ್ಲಲ್ಲದೆ, ಬೇರೆಲ್ಲಿವೆ?

ಹಣಕಾಸು ಬಂಡವಾಳವು ಆಗಲೇ ಪತ್ತೆ ಹಚ್ಚಲಾದ ಕಚ್ಚಾ ಪದಾರ್ಥಗಳ ಆಕರಗಳಲ್ಲಷ್ಟೆ ಅಲ್ಲ ಸಂಭವನೀಯ ಆಕರಗಳಲ್ಲೂ ಆಸಕ್ತಿ ಉಳ್ಳದ್ದಾಗಿರುತ್ತದೆ, ಏಕೆಂದರೆ, ಇಂದಿನ ತಾಂತ್ರಿಕ ಪ್ರಗತಿ ಅತ್ಯಂತ ಶೀಘ್ರ ಗತಿಯದಾಗಿದೆ. ಇಂದು ನಿಷ್ಪ್ರ ಯೋಜಕವಾಗಿರುವ ಭೂಮಿಯನ್ನು, ಹೊಸ ವಿಧಾನಗಳನ್ನು ಯೋಜಿಸಿದರೆ (ಈ ಗುರಿಸಾಧನೆಗಾಗಿ ದೊಡ್ಡ ಬ್ಯಾಂಕೊಂದು ಎಂಜಿನಿಯರುಗಳ, ಕೃಷಿ ತಜ್ಞರ ಮುಂತಾದ ವರ ವಿಶೇಷ ಕಾರ್ಯತಂಡವನ್ನು ಸಜ್ಜುಗೊಳಿಸಬಲ್ಲುದು), ಮತ್ತು ಭಾರಿ ಪ್ರಮಾಣ ಗಳ ಬಂಡವಾಳವನ್ನು ತೊಡಗಿಸಿದರೆ, ಫಲವತ್ತಾದುದನ್ನಾಗಿ ಮಾಡಬಹುದು.

---

*Schilder, ಪೂರ್ವೋಕ್ತ ಗ್ರಂಥ, ಪು. 38-42.

ಖನಿಜಗಳಿಗಾಗಿ ಶೋಧೆ ನಡೆಸುವುದಕ್ಕೂ, ಕಚ್ಚಾ ಪದಾರ್ಥಗಳನ್ನು ಪೊರತೆಗೆಯುವ ಹಾಗೂ ಬಳಸುವ ಹೊಸ ವಿಧಾನಗಳಿಗೂ, ಇತ್ಯಾದಿಗಳಿಗೂ ಇದೇ ಅನ್ವಯವಾಗುತ್ತದೆ. ಆದ್ದರಿಂದಲೇ ಹಣಕಾಸು ಬಂಡವಾಳವು ತನ್ನ ಆರ್ಥಿಕ ವಲಯವನ್ನು ಒಟ್ಟಿನಲ್ಲಿ ತನ್ನ ಭೂಪ್ರದೇಶವನ್ನೂ ಸಹ, ವಿಸ್ತರಿಸಿಕೊಳ್ಳಲು ಅನಿವಾರ್ಯವಾಗಿ ಯತ್ನಿಸುವುದು. ಟ್ರಸ್ಟುಗಳು ಯಾವ ರೀತಿಯಲ್ಲಿ ತಮ್ಮ ಆಸ್ತಿಯು "ಸಂಭವನೀಯ" (ಈಗಿನದಷ್ಟೆ ಅಲ್ಲ) ಲಾಭಗಳನ್ನೂ ತಮ್ಮ ಏಕಸ್ವಾಮ್ಯದ ಮುಂದಿನ ಫಲಿತಾಂಶಗಳನ್ನೂ ಗಣನೆಗೆ ತಂದುಕೊಂಡು ತಮ್ಮ ಆಸ್ತಿಯ ಮೌಲ್ಯವನ್ನು ಎರಡು ಮೂರು ಪಟ್ಟು ಹೆಚ್ಚಿಸಿ ಬಂಡವಾಳವನ್ನಾಗಿ ಪರಿಗಣಿಸುತ್ತವೋ ಅದೇ ರೀತಿ ಹಣಕಾಸು ಬಂಡವಾಳವು ಕಚ್ಚಾ ಪದಾರ್ಥಗಳ ಸಂಭವನೀಯ ಆಕರಗಳನ್ನು ಗಣನೆಗೆ ತಂದುಕೊಂಡು, ಇನ್ನೂ ವಿಭಜಿತವಾಗದಿರುವ ಭೂಮಿಯ ಕೊನೆಯ ತುಂಡಿಗಾಗಿ ಇಲ್ಲವೇ ಆಗಲೇ ವಿಭಜನೆಗೊಂಡಿರುವ ಭೂಮಿಯ ಪುನರ್‌ಹಂಚಿಕೆಗಾಗಿ ನಡೆಯುವ ಉಗ್ರ ಹೋರಾಟದಲ್ಲಿ ಎಲ್ಲಿ ಹಿಂದೆ ಬಿದ್ದು ಬಿಡುತ್ತದೋ ಎಂದು ಅಂಜಿ, ಎಲ್ಲ ಸ್ಥಳಗಳಲ್ಲೂ ಎಲ್ಲ ವಿಧಾನಗಳ ಮೂಲಕ ಎಲ್ಲ ರೀತಿಯ ಭೂಮಿಗಳನ್ನೂ ಸಾಧ್ಯವಾದಷ್ಟೂ ಹೆಚ್ಚು ಪ್ರಮಾಣದಲ್ಲಿ ವಶಪಡಿಸಿಕೊಳ್ಳಲು ಒಟ್ಟಿನಲ್ಲಿ ಪ್ರಯತ್ನಿಸುತ್ತದೆ.

ಬ್ರಿಟಿಷ್ ಬಂಡವಾಳಗಾರರು ತಮ್ಮ ವಸಾಹತು ಈಜಿಪ್ಟ್‌ನಲ್ಲಿ ಹತ್ತಿ ಬೆಳೆಯುವುದನ್ನು ಅಭಿವೃದ್ಧಿಗೊಳಿಸಲು ಎಲ್ಲ ಯತ್ನ ಮಾಡುತ್ತಿದ್ದಾರೆ (1904ರಲ್ಲಿ, ಕೃಷಿಯಾದ 23 ಲಕ್ಷ ಹೆಕ್ಟಾರುಗಳಷ್ಟು ಭೂಮಿಯಲ್ಲಿ 6 ಲಕ್ಷ ಅಥವಾ ಕಾಲು ಭಾಗಕ್ಕೂ ಹೆಚ್ಚು ಭೂಮಿಯಲ್ಲಿ ಹತ್ತಿ ಬೆಳೆಯಲಾಗುತ್ತಿದ್ದಿತು); ರಷ್ಯನರು ಇದನ್ನೇ ತಮ್ಮ ವಸಾಹತು ತುರ್ಕೀಸ್ತಾನದಲ್ಲಿ ಮಾಡುತ್ತಿದ್ದಾರೆ, ಏಕೆಂದರೆ, ಈ ರೀತಿ ಅವರು ತಮ್ಮ ವಿದೇಶೀ ಪ್ರತಿಸ್ಪರ್ಧಿಗಳನ್ನು ಸೋಲಿಸಲು, ಕಚ್ಚಾ ಪದಾರ್ಥಗಳ ಆಕರಗಳನ್ನು ತಮ್ಮ ಏಕಸ್ವಾಮ್ಯಕ್ಕೊಳಪಡಿಸಿಕೊಳ್ಳಲು, ಮತ್ತು ಹತ್ತಿ ಉತ್ಪಾದನೆಯ ಹಾಗೂ ತಯಾರಿಕೆಯ ಎಲ್ಲ ಪ್ರಕ್ರಿಯೆಗಳೂ ಒಂದೇ ಗುಂಪಿನ ಮಾಲೀಕರ ಕೈಗಳಲ್ಲಿ "ಒಂದುಗೂಡಿರುವ" ಹಾಗೂ ಕೇಂದ್ರೀಕೃತವಾಗಿರುವ, ಹೆಚ್ಚು ಲಾಭದಾಯಕವಾದ ಹಾಗೂ ಮಿತವ್ಯಯಿಯಾದ ಅರಿವೆ ಟ್ರಸ್ಟನ್ನು ರೂಪಿಸಲು, ಹೆಚ್ಚು ಉತ್ತಮ ಸ್ಥಿತಿಯಲ್ಲಿರುವಂತಾಗುತ್ತಾರೆ.

ಬಂಡವಾಳವನ್ನು ರಫ್ತು ಮಾಡುವುದರಲ್ಲಿ ಪಡೆಯುವ ಹಿತಗಳೂ ವಸಾಹತುಗಳನ್ನು ಗೆದ್ದುಕೊಳ್ಳುವುದಕ್ಕೆ ಪ್ರೇರಣೆ ನೀಡುತ್ತವೆ, ಏಕೆಂದರೆ, ವಸಾಹತು ಮಾರುಕಟ್ಟೆಯಲ್ಲಿ ಸ್ಪರ್ಧೆಯನ್ನು ನಿವಾರಿಸಲು, ಸರಬರಾಜುಗಳನ್ನು ಖಚಿತಪಡಿಸಲು ಅವಶ್ಯ "ಸಂಬಂಧ"ಗಳನ್ನು ಪಡೆದುಕೊಳ್ಳಲು, ಇತ್ಯಾದಿಗಳಿಗಾಗಿ ಏಕಸ್ವಾಮ್ಯ ವಿಧಾನಗಳನ್ನು ಉಪಯೋಗಿಸುವುದು ಹೆಚ್ಚು ಸುಲಭ (ಕೆಲವು ವೇಳೆ ಇವಷ್ಟೆ ಉಪಯೋಗಿಸಲು ಸಾಧ್ಯವಿರುವಂಥ ವಿಧಾನಗಳಾಗಿರುತ್ತವೆ).

ಹಣಕಾಸು ಬಂಡವಾಳದ ಅಡಿಪಾಯದ ಮೇಲೆ, ಅದರ ರಾಜಕಾರಣ ಹಾಗೂ

ಅದರ ಸಿದ್ಧಾಂತದ ಆಧಾರದ ಮೇಲೆ, ಬೆಳೆಯುವ ಆರ್ಥಿಕವಲ್ಲದ ಅಧಿರಚನೆಯು, ವಸಾಹತುಗಳನ್ನು ಗೆದ್ದುಕೊಳ್ಳುವ ಯತ್ನಕ್ಕೆ ಉತ್ತೇಜನ ನೀಡುತ್ತದೆ. ಹಿಲ್ಫರ್ಡಿಂಗ್‌ರವರು ತುಂಬ ಸರಿಯಾಗಿಯೇ ಹೇಳುವಂತೆ, "ಹಣಕಾಸು ಬಂಡವಾಳಕ್ಕೆ ಬೇಕಾದುದು ಸ್ವಾತಂತ್ರ್ಯವಲ್ಲ, ಆದರೆ ಆಧಿಪತ್ಯ." ಮೇಲೆ ತಿಳಿಸಿದ ಸೆಸಿಲ್ ರೋಡ್ಸ್ *ರ ವಿಚಾರಗಳನ್ನು ವಿಕಾಸಗೊಳಿಸುತ್ತಿರುವವರೋ, ಮತ್ತಷ್ಟು ಸೇರಿಸುತ್ತಿರುವರೋ ಎಂಬಂತೆ ಫ್ರೆಂಚ್ ಬೂರ್ಷ್ವಾ ಲೇಖಕರೊಬ್ಬರು, ಆಧುನಿಕ ವಸಾಹತು ನೀತಿಯು ಆರ್ಥಿಕ ಕಾರಣಗಳಿಗೆ ಸಾಮಾಜಿಕ ಕಾರಣಗಳನ್ನೂ ಸೇರಿಸಬೇಕು, ಎಂದು ಬರೆಯುತ್ತಾರೆ: "ಜೀವನವು ಹೆಚ್ಚು ಹೆಚ್ಚು ತೊಡಕಾಗುತ್ತಿರುವುದರಿಂದಲೂ, ಕಾರ್ಮಿಕರ ಸಮೂಹಗಳ ಮೇಲಷ್ಟೆ ಅಲ್ಲ, ಮಧ್ಯಮ ವರ್ಗಗಳ ಮೇಲೆಯೂ ಹೊರೆಯಾಗಿರುವ ತೊಂದರೆಗಳಿಂದಾಗಿಯೂ, 'ಅಸಹನೆ, ಚಿತ್ತಕ್ಷೋಭೆ ಹಾಗೂ ದ್ವೇಷಭಾವನೆಗಳು ಹಳೆಯ ನಾಗರಿಕತೆಯ ಎಲ್ಲ ದೇಶಗಳಲ್ಲೂ ಸಂಚಯವಾಗುತ್ತಿವೆ ಮತ್ತು ಸಾರ್ವಜನಿಕ ಶಾಂತಿಗೆ ಗಂಡಾಂತರವಾಗುತ್ತಿವೆ, ನಿರ್ದಿಷ್ಟ ವರ್ಗ ಮಾರ್ಗಗಳಿಂದ ಹೊರಹಾಕಲ್ಪಡುತ್ತಿರುವ ಶಕ್ತಿಯನ್ನು, ಅದು ಸ್ವದೇಶದಲ್ಲೇ ಸ್ಫೋಟಗೊಳ್ಳುವುದನ್ನು ತಪ್ಪಿಸಲೋಸುಗ, ಹೊರದೇಶಗಳಲ್ಲಿ ತೊಡಗಿಸಬೇಕು.' "**

ಬಂಡವಾಳಶಾಹಿಯ ಸಾಮ್ರಾಜ್ಯವಾದಿ ಘಟ್ಟದ ವಸಾಹತು ನೀತಿಯ ಬಗೆಗೆ ನಾವು ಮಾತನಾಡುತ್ತಿರುವುದರಿಂದ, ಹಣಕಾಸು ಬಂಡವಾಳವೂ ಅದರ ಅನುಗುಣವಾದ ವಿದೇಶಾಂಗ ನೀತಿಯೂ – ಇದು, ಅಂತಿಮ ವಿಶ್ಲೇಷಣೆಯಲ್ಲಿ ಬೃಹತ್ ರಾಷ್ಟ್ರಗಳು ಜಗತ್ತನ್ನು ಆರ್ಥಿಕವಾಗಿಯೂ ರಾಜಕೀಯವಾಗಿಯೂ ವಿಭಜಿಸಿಕೊಳ್ಳುವ ಹೋರಾಟವೇ ಆಗಿರುತ್ತದೆ – ರಾಜ್ಯ ಪರಾಧೀನತೆಯ ಅನೇಕ ಸ್ಥಿತ್ಯಂತರ ರೂಪಗಳಿಗೆ ದಾರಿ ಮಾಡಿಕೊಡುತ್ತವೆ, ಎಂಬುದನ್ನು ಗಮನಿಸಬೇಕು. ಈ ಕಾಲಘಟ್ಟದ ವಿಶಿಷ್ಟ ಲಕ್ಷಣ ಎರಡು ಪ್ರಧಾನ ವೃಂದಗಳ ದೇಶಗಳು – ವಸಾಹತುಗಳನ್ನು ಹೊಂದಿರುವ ದೇಶಗಳು ಮತ್ತು ವಸಾಹತುಗಳು – ಇರುವುದಷ್ಟೆ ಅಲ್ಲ, ನಾನಾ ರೀತಿಗಳಲ್ಲಿ ಪರಾಧೀನವಾಗಿರುವ ದೇಶಗಳು ಇರುವುದೂ ಆಗಿದೆ. ಇವು ಹೆಸರಿಗೆ ಮಾತ್ರ ರಾಜಕೀಯ ಸ್ವಾತಂತ್ರ್ಯ ಹೊಂದಿರುತ್ತವೆ. ಆದರೆ ವಾಸ್ತವವಾಗಿ ಹಣಕಾಸು ಹಾಗೂ ರಾಜನೈತಿಕ ಪರಾಧೀನತೆಯ ಬಲೆಯಲ್ಲಿ ಸಿಕ್ಕಿಬಿದ್ದಿರುತ್ತವೆ. ನಾವಾಗಲೇ

---

*ಈ ಪುಸ್ತಕದ ಪು. 102 ನೋಡಿ. – ಸಂ.

**Wahl, *La France aux colonies* (ವಾಲ್, 'ವಸಾಹತುಗಳಲ್ಲಿ ಫ್ರಾನ್ಸ್'. – ಸಂ.), ಉದ್ಧೃತ: Henri Russier, *Le Partage de l'Océanie* (ಹೆನ್ರಿ ರೂಸಿಯೆ, 'ಒಷಿಯಾನಿಯಾ ವಿಭಜನೆ,' ಪ್ಯಾರಿಸ್, 1905, ಪು. 165. – ಸಂ.).

ಒಂದು ರೀತಿಯ ಪರಾಧೀನತೆಗೆ – ಅರೆವಸಾಹತು ಸ್ಥಿತಿಗೆ – ಉಲ್ಲೇಖಿಸಿದ್ದೇವೆ. ಅರ್ಜೆಂಟೈನಾ ಇದಕ್ಕೆ ಇನ್ನೊಂದು ನಿದರ್ಶನ.

"ದಕ್ಷಿಣ ಅಮೆರಿಕವು, ಅದರಲ್ಲೂ ವಿಶೇಷವಾಗಿ ಅರ್ಜೆಂಟೈನಾ, ಆರ್ಥಿಕವಾಗಿ ಲಂಡನ್ನಿನ ಮೇಲೆ ಎಷ್ಟರ ಮಟ್ಟಿಗೆ ಅವಲಂಬಿಸಿದೆಯೆಂದರೆ, ಅದನ್ನು ಬಹು ಮಟ್ಟಿಗೆ ಒಂದು ಬ್ರಿಟಿಷ್ ವಾಣಿಜ್ಯ ವಸಾಹತೆಂದೇ ವರ್ಣಿಸಬೇಕು" ಎಂದು ಬರೆಯುತ್ತಾರೆ ಷುಲ್ತ್ಸೆ-ಗೆವೆರ್ನಿತ್ಸ್ ತಮ್ಮ ಬ್ರಿಟಿಷ್ ಸಾಮ್ರಾಜ್ಯವಾದ ಎಂಬ ಕೃತಿಯಲ್ಲಿ.* ಬ್ಯೂನಸ್ ಐರಿಸ್‌ನಲ್ಲಿ ಆಸ್ಟ್ರೋ-ಹಂಗೇರಿಯನ್ ರಾಯಭಾರಿಯು 1909ಕ್ಕೆ ಸಂಬಂಧಿಸಿ ನೀಡಿದ ವರದಿಯ ಮೇಲೆ ಆಧರಿಸಿಕೊಂಡು ಷಿಲ್ಡೆರ್, ಅರ್ಜೆಂಟೈನಾದಲ್ಲಿ ತೊಡಗಿಸಲಾದ ಬ್ರಿಟಿಷ್ ಬಂಡವಾಳದ ಪ್ರಮಾಣ 8,750 ಮಿಲಿಯ ಫ್ರಾಂಕುಗಳಾಗಿದ್ದವೆಂದು ಅಂದಾಜು ಮಾಡುತ್ತಾರೆ. ಬ್ರಿಟಿಷ್ ಹಣಕಾಸು ಬಂಡವಾಳವು (ಮತ್ತು ಅದರ ವಿಧೇಯ "ಮಿತ್ರ" ರಾಜತಂತ್ರವು) ತನ್ಮೂಲಕ ಅರ್ಜೆಂಟೈನಾದ ಬೂರ್ಷ್ವಾಸೀಯೊಂದಿಗೆ, ದೇಶದ ಇಡೀ ಆರ್ಥಿಕ ಹಾಗೂ ರಾಜಕೀಯ ಜೀವನವನ್ನು ನಿಯಂತ್ರಿಸುವಂಥ ವೃಂದಗಳೊಂದಿಗೆ, ಎಷ್ಟು ಪ್ರಬಲವಾದ ಸಂಬಂಧಗಳನ್ನು ಪಡೆದುಕೊಳ್ಳುತ್ತದೆಂಬುದನ್ನು ಊಹಿಸಿಕೊಳ್ಳುವುದು ಕಷ್ಟವೇನಲ್ಲ.

ಪೋರ್ಚುಗಲ್ ಇದಕ್ಕೆ ಸ್ವಲ್ಪ ಭಿನ್ನವಾದ ನಿದರ್ಶನ ಒದಗಿಸುತ್ತದೆ. ಇದು ಆರ್ಥಿಕ ಹಾಗೂ ರಾಜತಾಂತ್ರಿಕ ಪರಾಧೀನತೆಯನ್ನು ಹೊಂದಿದ್ದರೂ ರಾಜಕೀಯವಾಗಿ ಸ್ವತಂತ್ರವಾಗಿದೆ. ಪೋರ್ಚುಗಲ್ ಒಂದು ಸ್ವತಂತ್ರ ಸಾರ್ವಭೌಮ ರಾಜ್ಯ. ಆದರೆ ಸ್ಪಾನಿಷ್ ಉತ್ತರಾಧಿಕಾರ ಯುದ್ಧ(1701-1714)ವಾದಂದಿನಿಂದ, ಇನ್ನೂರಕ್ಕೂ ಹೆಚ್ಚು ವರ್ಷಗಳಿಂದ ಅದು ವಾಸ್ತವವಾಗಿ ಒಂದು ಬ್ರಿಟಿಷ್ ಆಶ್ರಿತ ರಾಜ್ಯವಾಗಿದ್ದುಕೊಂಡು ಬಂದಿದೆ. ಗ್ರೇಟ್ ಬ್ರಿಟನ್ ತನ್ನ ಪ್ರತಿಸ್ಪರ್ಧಿಗಳಾದ ಸ್ಪೈನ್ ಹಾಗೂ ಫ್ರಾನ್ಸ್‌ಗಳ ವಿರುದ್ಧ ಹೋರಾಟದಲ್ಲಿ ತನ್ನ ಸ್ವಂತ ಸ್ಥಾನವನ್ನು ಭದ್ರ ಪಡಿಸಿಕೊಳ್ಳಲೋಸುಗ ಪೋರ್ಚುಗಲ್ ಮತ್ತದರ ವಸಾಹತುಗಳನ್ನು ರಕ್ಷಿಸಿಕೊಂಡು ಬಂದಿದೆ. ಇದಕ್ಕೆ

---

*Schulze-Gaevernitz, *Britischer Imperialismus und englischer Freihandel zu Beginn des 20-ten Jahrhunderts*, Lpz., 1906 (ಷುಲ್ತ್ಸೆ-ಗೆವೆರ್ನಿತ್ಸ್, '20ನೆಯ ಶತಮಾನದ ಆರಂಭದಲ್ಲಿ ಬ್ರಿಟಿಷ್ ಸಾಮ್ರಾಜ್ಯವಾದ ಹಾಗೂ ಇಂಗ್ಲಿಷ್ ಮುಕ್ತ ವ್ಯಾಪಾರ,' ಲೈಪ್ಸಿಗ್, 1906, ಪು. 318. – ಸಂ.). Sartorius v. Waltershausenರವರೂ ತಮ್ಮ *Das Volkswirtschaftliche System der Kapitalanlage im Auslande*, Berlin, 1907, S. 46 (ಸರ್ಟೋರಿಯಸ್ ವಿ. ವಾಲ್ಟೆರ್ಸ್‌ಹೌಸೆನ್, 'ಹೊರದೇಶಗಳಲ್ಲಿ ಬಂಡವಾಳ ತೊಡಗಿಸುವ ರಾಷ್ಟ್ರೀಯ ಆರ್ಥಿಕ ಪದ್ಧತಿ,' ಬರ್ಲಿನ್, 1907, ಪು. 46. – ಸಂ.) ರಲ್ಲೂ ಇದನ್ನೇ ಹೇಳುತ್ತಾರೆ.

ಪ್ರತಿಫಲವಾಗಿ ಗ್ರೇಟ್ ಬ್ರಿಟನ್ ವಾಣಿಜ್ಯ ವಿಶೇಷಾಧಿಕಾರಗಳನ್ನೂ, ಪೋರ್ಚುಗಲ್ ಮತ್ತವರ ವಸಾಹತುಗಳಿಗೆ ವಸ್ತುಗಳನ್ನು ಅದರಲ್ಲೂ ತನ್ನ ಬಂಡವಾಳವನ್ನು ಕಳುಹಿಸುವುದರಲ್ಲಿ ಆದ್ಯತೆಯ ಸೌಲಭ್ಯಗಳನ್ನೂ, ಪೋರ್ಚುಗಲ್‌ನ ರೇವುಗಳನ್ನೂ ದ್ವೀಪಗಳನ್ನೂ, ಅದರ ಟೆಲಿಗ್ರಾಫ್ ಕೇಬಲ್ ಇತ್ಯಾದಿ, ಇತ್ಯಾದಿಗಳನ್ನೂ ಉಪಯೋಗಿಸುವ ಹಕ್ಕುಗಳನ್ನೂ ಪಡೆದುಕೊಂಡಿದೆ.* ಈ ರೀತಿಯ ಸಂಬಂಧಗಳು ಯಾವತ್ತೂ ದೊಡ್ಡ ಹಾಗೂ ಸಣ್ಣ ರಾಜ್ಯಗಳ ನಡುವೆ ಇದ್ದುಕೊಂಡು ಬಂದಿವೆ. ಆದರೆ ಬಂಡವಾಳಶಾಹಿ ಸಾಮ್ರಾಜ್ಯವಾದದ ಕಾಲಘಟ್ಟದಲ್ಲಿ ಅವು ಒಂದು ಸಾರ್ವತ್ರಿಕ ಪದ್ಧತಿಯಾಗಿ ಆಗುತ್ತವೆ, ಅವು "ಜಗತ್ತನ್ನು ವಿಭಜಿಸುವ" ಸಂಬಂಧಗಳ ಒಟ್ಟು ಮೊತ್ತದಲ್ಲಿ ಒಂದು ಭಾಗವಾಗುತ್ತವೆ, ಜಾಗತಿಕ ಹಣಕಾಸು ಬಂಡವಾಳದ ಕಾರ್ಯಾಚರಣೆಗಳ ಸರಣಿಯಲ್ಲಿ ಕೊಂಡಿಗಳಾಗಿ ಆಗುತ್ತವೆ.

ಜಗತ್ತಿನ ವಿಭಜನೆಯ ಈ ಪ್ರಶ್ನೆಯ ಪರಿಶೀಲನೆಯನ್ನು ಪೂರೈಸಲು ನಾವು ಈ ಕೆಳಗಿನ ಇನ್ನಷ್ಟು ಸಂಗತಿಗಳನ್ನೂ ತಿಳಿಸಬೇಕು. ಈ ಪ್ರಶ್ನೆಯು 19ನೆಯ ಶತಮಾನದ ತುಟ್ಟತುದಿ ಹಾಗೂ 20ನೆಯ ಶತಮಾನದ ಆದಿಭಾಗದಲ್ಲಿ ಸ್ಪ್ಯಾನಿಷ್-ಅಮೆರಿಕನ್ ಯುದ್ಧದನಂತರ ಅಮೆರಿಕನ್ ಸಾಹಿತ್ಯದಲ್ಲೂ, ಆಂಗ್ಲೋ-ಬೋಯರ್ ಯುದ್ಧದ ನಂತರ ಇಂಗ್ಲಿಷ್ ಸಾಹಿತ್ಯದಲ್ಲೂ, ಬಹಿರಂಗವಾಗಿಯೂ ನಿರ್ದಿಷ್ಟವಾಗಿಯೂ ಎತ್ತಲ್ಪಟ್ಟಿತು. "ಬ್ರಿಟಿಷ್ ಸಾಮ್ರಾಜ್ಯವಾದ"ವನ್ನು "ಅತ್ಯಂತ ಅಸೂಯೆಯಿಂದ" ಗಮನಿಸಿದಂಥ ಜರ್ಮನ್ ಸಾಹಿತ್ಯವೂ ಈ ಪ್ರಶ್ನೆಯನ್ನು ಕ್ರಮಬದ್ಧವಾಗಿ ಗಮನಿಸಿದೆ. ಫ್ರೆಂಚ್ ಬೂರ್ಷ್ವಾ ಸಾಹಿತ್ಯವೂ ಬೂರ್ಷ್ವಾ ದೃಷ್ಟಿಕೋನದಿಂದ ಯೋಚಿಸಲು ಸಾಧ್ಯವಿರುವಷ್ಟು ವಿಸ್ತೃತವಾದ ಹಾಗೂ ನಿರ್ದಿಷ್ಟವಾದ ರೀತಿಯಲ್ಲಿ ಈ ಪ್ರಶ್ನೆಯನ್ನು ಪರಿಶೀಲಿಸಿದೆ. ನಾವು ಚರಿತ್ರಕಾರ ಡ್ರಿಯೋರವರನ್ನು ಉದ್ಧರಿಸುತ್ತೇವೆ. ಅವರು 'ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳು' ಎಂಬ ತಮ್ಮ ಕೃತಿಯಲ್ಲಿ 'ಬೃಹತ್ ರಾಷ್ಟ್ರಗಳು ಮತ್ತು ಜಗತ್ತಿನ ವಿಭಜನೆ' ಎಂಬ ಅಧ್ಯಾಯದಲ್ಲಿ ಹೀಗೆ ಬರೆದರು: "ಕಳೆದ ಕೆಲವು ವರ್ಷಗಳಲ್ಲಿ ಚೀಣಾವನ್ನು ಬಿಟ್ಟು ಭೂಮಂಡಲದ ಎಲ್ಲ ಸ್ವತಂತ್ರ ಭೂಭಾಗಗಳನ್ನೂ ಯೂರೋಪ್ ಹಾಗೂ ಉತ್ತರ ಅಮೆರಿಕಗಳ ಬೃಹತ್ ರಾಷ್ಟ್ರಗಳೇ ಆಕ್ರಮಿಸಿಕೊಂಡಿವೆ. ಈ ವಿಷಯಕ್ಕೆ ಸಂಬಂಧಿಸಿ ಆಗಲೇ ಹಲವಾರು ಘರ್ಷಣೆಗಳೂ ಪ್ರಭಾವಪಲ್ಲಟಗಳೂ ಜರುಗಿವೆ. ಸಮೀಪ ಭವಿಷ್ಯತ್ತಿನಲ್ಲೇ ಇನ್ನೂ ಹೆಚ್ಚು ಭೀಕರ ಅಲ್ಲೋಲಕಲ್ಲೋಲಗಳು ಉಂಟಾಗಬಹುದೆಂದು ಇವು ಸೂಚಿಸುತ್ತವೆ. ಏಕೆಂದರೆ ಈಗ ಅವಸರ ಅವಶ್ಯವಾಗಿದೆ. ತಮ್ಮ ಪಾಲನ್ನು ಇನ್ನೂ ಖಾತರಿಪಡಿಸಿಕೊಂಡಿರದಂಥ ರಾಷ್ಟ್ರಗಳು ಅವಸರ ಮಾಡದಿದ್ದಲ್ಲಿ, ಭೂಮಂಡಲವನ್ನು ಶೋಷಿಸುವ ಅಮೋಘ ಕಾರ್ಯ

*ಷಿಲ್ಡರ್, ಪೂರ್ವೋಕ್ತ ಗ್ರಂಥ, ಸಂ. I, ಪು. 160-161.

ದಲ್ಲಿ ಅವು ಎಂದಿಗೂ ಭಾಗವಹಿಸದಂತಾಗುವುದು, ಎಂದಿಗೂ ತಮ್ಮ ಪಾಲು ಪಡೆಯದಂತಾಗುವುದು. ಇಂತಹ ಶೋಷಣೆಯೇ ಮುಂದಿನ ಶತಮಾನದ" (ಅಂದರೆ 20ನೆಯ ಶತಮಾನದ) "ಅತ್ಯಗತ್ಯ ಲಕ್ಷಣಗಳಲ್ಲೊಂದಾಗುವುದು. ಆದ್ದರಿಂದಲೇ ಇಡೀ ಯುರೋಪೂ ಇಡೀ ಅಮೆರಿಕವೂ ಈಗ 19ನೆಯ ಶತಮಾನದ ಕೊನೆಯ ಭಾಗದ ಅತ್ಯಂತ ಗಮನಾರ್ಹ ಲಕ್ಷಣವಾದ ವಸಾಹತು ವಿಸ್ತರಣೆಯ ಹಾಗೂ 'ಸಾಮ್ರಾಜ್ಯವಾದ'ದ ಅಂಟುಜಾಡ್ಯದಿಂದ ಪೀಡಿತವಾಗಿವೆ." ಗ್ರಂಥಕರ್ತೃ ಮತ್ತೂ ಹೀಗೆ ತಿಳಿಸುತ್ತಾರೆ: "ಈ ಪ್ರಚಂಡ ವಿಭಜನೆಯಲ್ಲಿ, ಭೂಮಂಡಲದ ಸಂಪತ್ತುಗಳಿಗಾಗಿಯೂ ಭಾರಿ ಮಾರುಕಟ್ಟೆಗಳಿಗಾಗಿಯೂ ಈ ರೋಷಾವೇಶದ ಬೇಟೆಯಲ್ಲಿ, ಈ ಹತ್ತೊಂಬತ್ತನೆಯ ಶತಮಾನದಲ್ಲಿ ಸಂಸ್ಥಾಪಿತವಾದ ಸಾಮ್ರಾಜ್ಯಗಳ ಸಾಪೇಕ್ಷವಾದ ಶಕ್ತಿಗೂ ಅವುಗಳನ್ನು ಸ್ಥಾಪಿಸಿದ ರಾಷ್ಟ್ರಗಳು ಯುರೋಪಿನಲ್ಲಿ ಹೊಂದಿರುವ ಸ್ಥಾನಕ್ಕೂ ಏನೇನೂ ಸಂಬಂಧವಿಲ್ಲದಂತಾಗಿದೆ. ಯುರೋಪಿನ ಪ್ರಬಲ ರಾಷ್ಟ್ರಗಳು, ಅದರ ಭಾಗ್ಯವಿಧಾತರು, ಇಡೀ ಜಗತ್ತಿನಲ್ಲಿ ಅಷ್ಟೇ ಪ್ರಬಲವಾಗಿ ಇಲ್ಲ. ವಸಾಹತು ಶಕ್ತಿ, ಇನ್ನೂ ಮೌಲ್ಯ ನಿರ್ಣಯವಾಗದಿರುವ ಸಂಪತ್ತಿನ ಮೇಲೆ ಹತೋಟಿ ಹೊಂದುವ ಆಶೆ, ಇವು ಯುರೋಪಿಯನ್ ರಾಷ್ಟ್ರಗಳ ಸಾಪೇಕ್ಷ ಶಕ್ತಿಯ ಮೇಲೆ ಸ್ಪಷ್ಟವಾಗಿಯೇ ಪ್ರಭಾವ ಬೀರುವುವು, ಈಗಾಗಲೇ ಯುರೋಪಿನ ರಾಜಕೀಯ ಪರಿಸ್ಥಿತಿಗಳನ್ನು ಮಾರ್ಪಡಿಸಿರುವ ವಸಾಹತು ಪ್ರಶ್ನೆಯು – ಬೇಕಾದರೆ 'ಸಾಮ್ರಾಜ್ಯವಾದ' ಎಂದು ಹೇಳಿ ಅವುಗಳನ್ನು ಇನ್ನೂ ಹೆಚ್ಚು ಹೆಚ್ಚು ಮಾರ್ಪಡಿಸುವುದು."*

## VII. ಬಂಡವಾಳವಾದದ ಒಂದು ವಿಶೇಷ ಘಟ್ಟವಾಗಿ ಸಾಮ್ರಾಜ್ಯವಾದ

ಈಗ ನಾವು ಸಾಮ್ರಾಜ್ಯವಾದದ ವಿಷಯಕ್ಕೆ ಸಂಬಂಧಿಸಿ ಮೇಲೆ ಏನನ್ನು ತಿಳಿಸಿದ್ದೇವೋ ಅವನ್ನೆಲ್ಲ ಒಟ್ಟಿಗೆ ಸೇರಿಸಿ ಕ್ರೋಡೀಕರಿಸಲು ಯತ್ನಿಸಬೇಕು. ಸಾಮ್ರಾಜ್ಯವಾದವು ಒಟ್ಟಿನಲ್ಲಿ ಬಂಡವಾಳವಾದದ ಮೂಲಭೂತ ವೈಲಕ್ಷಣ್ಯಗಳ ಬೆಳವಣಿಗೆಯಾಗಿ ಹಾಗೂ ನೇರ ಮುಂದುವರಿಕೆಯಾಗಿ ಉದ್ಭವಿಸಿತು. ಆದರೆ ಬಂಡವಾಳವಾದವು ತನ್ನ ಬೆಳವಣಿಗೆಯ ಒಂದು ನಿರ್ದಿಷ್ಟ ಹಾಗೂ ಅತ್ಯುನ್ನತ ಘಟ್ಟದಲ್ಲಷ್ಟೆ, ಅಂದರೆ ಅದರ ಕೆಲವು ಮೂಲಭೂತ ವೈಲಕ್ಷಣ್ಯಗಳು ತಮ್ಮ ವಿರುದ್ಧ ಲಕ್ಷಣಗಳಾಗಿ ಪರಿವರ್ತಿತವಾಗತೊಡಗಿದಾಗಲಷ್ಟೆ, ಬಂಡವಾಳವಾದವು ಹೆಚ್ಚು ಉನ್ನತ ಸಾಮಾಜಿಕ

---

*J.-F. Driault, *Problèmes politiques et sociaux*, P., 1900, p. 299 (ಜೆ. ಈ. ಡ್ರಿಯೋ, 'ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳು,' ಪ್ಯಾರಿಸ್, 1900, ಪು. 299. – ಸಂ.).

ಹಾಗೂ ಆರ್ಥಿಕ ಪದ್ಧತಿಯಾಗಿ ಪರಿವರ್ತನೆಯಾಗುವ ಕಾಲಘಟ್ಟದ ಲಕ್ಷಣಗಳು ರೂಪುಗೊಂಡು ಎಲ್ಲೆಡೆಗಳಲ್ಲೂ ತೋರ್ಪಡಿಸಿಕೊಳ್ಳತೊಡಗಿದಾಗಲಷ್ಟೆ, ಬಂಡವಾಳವಾದ ಸಾಮ್ರಾಜ್ಯವಾದವಾಗಿ ಪರಿವರ್ತಿತವಾಯಿತು. ಆರ್ಥಿಕವಾಗಿ, ಈ ಪ್ರಕ್ರಿಯೆಯಲ್ಲಿ ಮುಖ್ಯ ವಿಷಯವೆಂದರೆ, ಬಂಡವಾಳವಾದಿ ಮುಕ್ತ ಸ್ಪರ್ಧೆಯ ಸ್ಥಳದಲ್ಲಿ ಬಂಡವಾಳವಾದಿ ಏಕಸ್ವಾಮ್ಯ ಬರುವುದಾಗಿದೆ. ಮುಕ್ತ ಸ್ಪರ್ಧೆಯು ಬಂಡವಾಳವಾದದ ಹಾಗೂ ಒಟ್ಟಿನಲ್ಲಿ ಸರಕು ಉತ್ಪಾದನೆಯ ಮೂಲಭೂತ ಲಕ್ಷಣವಾಗಿದೆ; ಏಕಸ್ವಾಮ್ಯವು ಮುಕ್ತ ಸ್ಪರ್ಧೆಯ ವಿರುದ್ಧವಾಗಿದೆ. ಆದರೆ ಮುಕ್ತ ಸ್ಪರ್ಧೆಯು ನಮ್ಮ ಕಣ್ಮುಂದೆಯೇ ಏಕಸ್ವಾಮ್ಯವಾಗಿ ಪರಿವರ್ತನೆಯಾಗುವುದನ್ನು, ಸಣ್ಣ ಕೈಗಾರಿಕೆಯನ್ನು ಹೊರದೂಡಿ ವಿಸ್ತೃತ ಪ್ರಮಾಣದ ಕೈಗಾರಿಕೆಯನ್ನು ಸ್ಥಾಪಿಸುವುದನ್ನು, ಈ ವಿಸ್ತೃತ ಪ್ರಮಾಣದ ಕೈಗಾರಿಕೆಯ ಸ್ಥಳದಲ್ಲಿ ಇನ್ನೂ ಹೆಚ್ಚು ವಿಸ್ತೃತವಾದ ಕೈಗಾರಿಕೆಯನ್ನು ಸ್ಥಾಪಿಸುವುದನ್ನು, ಉತ್ಪಾದನೆಯ ಹಾಗೂ ಬಂಡವಾಳದ ಕೇಂದ್ರೀಕರಣವನ್ನು ವಿಪರೀತಕ್ಕೆ ಕೊಂಡೊಯ್ದು ತತ್ಫಲವಾಗಿ ಅದರಿಂದ ಏಕಸ್ವಾಮ್ಯ ಸಂಸ್ಥೆಗಳು – ಕಾರ್ಟೆಲ್‌ಗಳು, ಸಿಂಡಿಕೇಟುಗಳು ಹಾಗೂ ಟ್ರಸ್ಟುಗಳು – ಬೆಳೆದುದನ್ನು ಹಾಗೂ ಬೆಳೆಯುತ್ತಿರುವುದನ್ನು, ಇವುಗಳೊಂದಿಗೆ ಸಾವಿರಾರು ಮಿಲಿಯಗಟ್ಟಲೆ ಹಣದಲ್ಲಿ ವ್ಯವಹರಿಸುವ ಹತ್ತಾರು ಬ್ಯಾಂಕುಗಳ ಬಂಡವಾಳವು ಮಿಳನಗೊಳ್ಳುವುದನ್ನು, ಕಾಣುತ್ತೇವೆ. ಅದೇ ಹೊತ್ತಿನಲ್ಲಿ, ಮುಕ್ತ ಸ್ಪರ್ಧೆಯಿಂದ ಬೆಳೆದಂಥ ಏಕಸ್ವಾಮ್ಯ ಸಂಸ್ಥೆಗಳು ಮುಕ್ತ ಸ್ಪರ್ಧೆಯನ್ನೇನೂ ತೊಡೆದು ಹಾಕುವುದಿಲ್ಲ, ಆದರೆ ಅದರ ಮೇಲೆಯೇ, ಅದರ ಬದಿಯಲ್ಲೇ ಅಸ್ತಿತ್ವದಲ್ಲಿರುತ್ತವೆ. ಇದರ ಫಲವಾಗಿ ಅನೇಕ ಅತ್ಯುಗ್ರವಾದ ಹಾಗೂ ತೀವ್ರವಾದ ವೈಷಮ್ಯಗಳು, ಘರ್ಷಣೆಗಳು ಹಾಗೂ ತಿಕ್ಕಾಟಗಳು ಉಂಟಾಗುತ್ತವೆ. ಬಂಡವಾಳವಾದವು ಅದಕ್ಕೂ ಹೆಚ್ಚು ಉನ್ನತವಾದ ಪದ್ಧತಿಗೆ ಪರಿವರ್ತನೆಯಾಗುವ ಸ್ಥಿತಿಯೇ ಏಕಸ್ವಾಮ್ಯವಾಗಿದೆ.

ಸಾಮ್ರಾಜ್ಯವಾದಕ್ಕೆ ಸಾಧ್ಯವಾದಷ್ಟೂ ಹ್ರಸ್ವವಾದ ನಿರೂಪಣೆ ನೀಡಬೇಕಾದರೆ, ಸಾಮ್ರಾಜ್ಯವಾದವು ಬಂಡವಾಳವಾದದ ಏಕಸ್ವಾಮ್ಯವಾದಿ ಘಟ್ಟ ಎಂದು ನಾವು ಹೇಳಬೇಕಾಗುತ್ತದೆ. ಇಂತಹ ನಿರೂಪಣೆಯು ಅತ್ಯಂತ ಮುಖ್ಯವಾದ ಅಂಶವನ್ನು ಒಳಗೊಂಡಿರುವುದು. ಏಕೆಂದರೆ, ಹಣಕಾಸು ಬಂಡವಾಳವು ಒಂದು ಕಡೆ, ಕೈಗಾರಿಕೋದ್ಯಮಿಗಳ ಏಕಸ್ವಾಮ್ಯ ಸಮುಚ್ಚಯಗಳ ಬಂಡವಾಳದೊಂದಿಗೆ ಮಿಳಿತವಾದ ಕೆಲವು ಅತ್ಯಂತ ದೊಡ್ಡ ಏಕಸ್ವಾಮ್ಯವಾದಿ ಬ್ಯಾಂಕುಗಳ ಬ್ಯಾಂಕಿಂಗ್ ಬಂಡವಾಳವಾಗಿರುತ್ತದೆ; ಮತ್ತೊಂದು ಕಡೆ, ಜಗತ್ತಿನ ವಿಭಜನೆ ಎಂದರೆ, ಯಾವುದೇ ಬಂಡವಾಳಶಾಹಿ ಬೃಹತ್ ರಾಷ್ಟ್ರವು ಇನ್ನೂ ವಶಪಡಿಸಿಕೊಂಡಿರದ ಭೂಪ್ರದೇಶಗಳಿಗೆ ಅನಿರ್ಬಂಧಿತವಾಗಿ ವಿಸ್ತರಿಸಿದಂಥ ವಸಾಹತು ವಿಸ್ತರಣ ನೀತಿಯಿಂದ, ಆಗಲೇ ಸಂಪೂರ್ಣವಾಗಿ ವಿಭಜಿಸಲ್ಪಟ್ಟಿರುವ ಜಗತ್ತಿನ ಭೂಪ್ರದೇಶಗಳನ್ನು ಏಕಸ್ವಾಮ್ಯವಾಗಿ ಪಡೆದುಕೊಳ್ಳುವ ವಸಾಹತು ನೀತಿಗೆ ಪರಿವರ್ತನೆಯಾಗಿರುತ್ತದೆ.

ಆದರೆ ಅತ್ಯಂತ ಹ್ರಸ್ವ ನಿರೂಪಣೆಗಳು ಮುಖ್ಯಾಂಶಗಳನ್ನು ಕ್ರೋಡೀಕರಿಸಿ ತಿಳಿಸುವುದರಿಂದಾಗಿ ಅನುಕೂಲವಾದವುಗಳಾಗಿದ್ದರೂ, ಅವು ಅರೆಕೊರೆಯಾಗಿಯೇ ಇರುತ್ತವೆ, ಏಕೆಂದರೆ, ನಿರೂಪಿಸಬೇಕಾದ ಘಟನೆಯು ಅತ್ಯಂತ ಮುಖ್ಯ ಲಕ್ಷಣಗಳನ್ನು ವಿಶೇಷವಾಗಿ ನಿಗಮನ ಮಾಡಬೇಕಾಗುತ್ತದೆ. ಆದ್ದರಿಂದ ಒಟ್ಟಿನಲ್ಲಿ ಮಾಡಿದ ಎಲ್ಲ ನಿರೂಪಣೆಗಳೂ ಸಂಪೂರ್ಣವಾಗಿ ವಿಕಾಸಗೊಂಡ ಘಟನೆಯೊಂದರ ಎಲ್ಲ ಸಂಬಂಧ ಗಳನ್ನೂ ಎಂದೂ ಒಳಗೊಳ್ಳಲಾರವಾದುದರಿಂದಾಗಿ ಅವುಗಳು ಯಾವಾಗಲೂ ಸಾಪೇಕ್ಷ ವಾಗಿಯೂ ಷರತ್ತುಗಳೊಂದಿಗೆ ಕೂಡಿಕೊಂಡೂ ಇರುತ್ತವೆಂಬುದನ್ನು ಮರೆಯು ದೆಯೇ ನಾವು ಸಾಮ್ರಾಜ್ಯವಾದದ ಬಗೆಗೆ, ಅದರ ಈ ಕೆಳಗಿನ ಐದು ಮೂಲ ಲಕ್ಷಣ ಗಳನ್ನೂ ಒಳಗೊಂಡಿರುವಂಥ ನಿರೂಪಣೆಯನ್ನು ನೀಡಬೇಕಾಗುತ್ತದೆ: 1) ಉತ್ಪಾ ದನೆಯ ಹಾಗೂ ಬಂಡವಾಳದ ಕೇಂದ್ರೀಕರಣವು ಎಷ್ಟು ಉನ್ನತ ಘಟ್ಟಕ್ಕೆ ಬೆಳೆಯು ತ್ತದೆಂದರೆ ಅದು ಏಕಸ್ವಾಮ್ಯ ಸಂಸ್ಥೆಗಳನ್ನು ಸೃಜಿಸುತ್ತದೆ ಮತ್ತು ಅವು ಆರ್ಥಿಕ ಜೀವನದಲ್ಲಿ ನಿರ್ಧಾರಕ ಪಾತ್ರ ನಿರ್ವಹಿಸುತ್ತವೆ; 2) ಬ್ಯಾಂಕಿಂಗ್ ಬಂಡವಾಳವು ಕೈಗಾರಿಕಾ ಬಂಡವಾಳದೊಂದಿಗೆ ಮಿಳನಗೊಳ್ಳುತ್ತದೆ; ಈ "ಹಣಕಾಸು ಬಂಡವಾಳ"ದ ಆಧಾರದ ಮೇಲೆ ಒಂದು ಹಣಕಾಸು ಆಲಿಗಾರ್ಕಿ ಸ್ಥಾಪಿತವಾಗುತ್ತದೆ; 3) ಸರಕು ಗಳ ರಫ್ತಿನಿಂದ ಭಿನ್ನವಾಗಿ ಬಂಡವಾಳದ ರಫ್ತು ಅತ್ಯಂತ ಹೆಚ್ಚಿನ ಪ್ರಾಮುಖ್ಯ ಪಡೆದುಕೊಳ್ಳುತ್ತದೆ; 4) ಜಗತ್ತನ್ನು ತಮ್ಮ ಮಧ್ಯೆಯೇ ಹಂಚಿಕೊಳ್ಳುವಂಥ ಏಕ ಸ್ವಾಮ್ಯ ಬಂಡವಾಳಶಾಹಿ ಸಮುಚ್ಚಯಗಳ ರಚನೆ; 5) ಅತ್ಯಂತ ದೊಡ್ಡ ಬಂಡವಾಳ ಶಾಹಿ ಬೃಹತ್ ರಾಷ್ಟ್ರಗಳ ಮಧ್ಯೆ ಇಡೀ ಜಗತ್ತಿನ ಪ್ರಾದೇಶಿಕ ವಿಭಜನೆ ಪೂರ್ಣ ಗೊಂಡಿರುತ್ತದೆ. ಸಾಮ್ರಾಜ್ಯವಾದವು ಬಂಡವಾಳವಾದದ ಬೆಳವಣಿಗೆಯ ಎಂತಹ ಘಟ್ಟವೆಂದರೆ, ಅದರಲ್ಲಿ ಏಕಸ್ವಾಮ್ಯ ಸಂಸ್ಥೆಗಳ ಹಾಗೂ ಹಣಕಾಸು ಬಂಡವಾಳದ ಪ್ರಾಬಲ್ಯ ಸುಸ್ಥಾಪಿತವಾಗಿರುತ್ತದೆ; ಅದರಲ್ಲಿ ಬಂಡವಾಳದ ರಫ್ತು ಪ್ರಧಾನ ಪ್ರಾಮುಖ್ಯ ಪಡೆದಿರುತ್ತದೆ; ಅದರಲ್ಲಿ ಅಂತರರಾಷ್ಟ್ರೀಯ ಟ್ರಸ್ಟುಗಳು ಜಗತ್ತನ್ನು ತಮ್ಮ ಮಧ್ಯೆ ಹಂಚಿಕೊಳ್ಳುವ ಕಾರ್ಯ ಪ್ರಾರಂಭವಾಗಿರುತ್ತದೆ; ಅದರಲ್ಲಿ ಭೂ ಮಂಡಲದ ಎಲ್ಲ ಭೂಭಾಗಗಳನ್ನೂ ಅತ್ಯಂತ ದೊಡ್ಡ ಬಂಡವಾಳಶಾಹಿ ಬೃಹತ್ ರಾಷ್ಟ್ರಗಳು ಹಂಚಿಕೊಳ್ಳುವ ಕಾರ್ಯ ಪೂರ್ಣಗೊಂಡಿರುತ್ತದೆ.

ಮೇಲಿನ ನಿರೂಪಣೆಯು ಮೂಲ, ಶುದ್ಧ ಆರ್ಥಿಕ ಪ್ರಕಲ್ಪನೆಗಳಿಗಷ್ಟೆ ಸೀಮಿತ ವಾಗಿದೆ. ಆದರೆ ಇವನ್ನಷ್ಟೆ ಅಲ್ಲದೆ, ಒಟ್ಟಿನಲ್ಲಿ ಬಂಡವಾಳವಾದಕ್ಕೆ ಸಂಬಂಧಿಸಿದಂತೆ ಬಂಡವಾಳವಾದದ ಈ ಘಟ್ಟದ ಚಾರಿತ್ರಿಕ ಸ್ಥಾನವನ್ನೂ ಅಥವಾ ಸಾಮ್ರಾಜ್ಯ ವಾದಕ್ಕೂ ಕಾರ್ಮಿಕ ವರ್ಗ ಚಳವಳಿಯಲ್ಲಿನ ಎರಡು ಪ್ರಧಾನ ಪ್ರವೃತ್ತಿಗಳಿಗೂ ನಡು ವಿನ ಸಂಬಂಧವನ್ನೂ ಗಮನದಲ್ಲಿಟ್ಟುಕೊಂಡರೆ, ಸಾಮ್ರಾಜ್ಯವಾದವನ್ನು ಬೇರೆ ರೀತಿ ಯಲ್ಲಿ ನಿರೂಪಿಸಬಹುದು ಮತ್ತು ನಿರೂಪಿಸಬೇಕು, ಎಂಬುದನ್ನು ನಾವು ಮುಂದೆ ನೋಡುತ್ತೇವೆ. ಇದೀಗ ಗಮನದಲ್ಲಿಡಬೇಕಾದ ಅಂಶವೆಂದರೆ, ಮೇಲೆ ವ್ಯಾಖ್ಯಾನಿ

ಸಿದಂತೆ ಸಾಮ್ರಾಜ್ಯವಾದವು ಬಂಡವಾಳವಾದದ ಬೆಳವಣಿಗೆಯಲ್ಲಿ ಒಂದು ವಿಶೇಷ ಘಟ್ಟವನ್ನು ಸೂಚಿಸುತ್ತದೆ, ಎಂಬುದಾಗಿದೆ. ಓದುಗರು ಸಾಮ್ರಾಜ್ಯವಾದದ ಬಗೆಗೆ ಅತ್ಯಂತ ಸಾಧಾರವಾದ ಭಾವನೆಯನ್ನು ಪಡೆದುಕೊಳ್ಳಲು ಸಾಧ್ಯಮಾಡಿಕೊಡ ಲೋಸುಗ ನಾವು ಉದ್ದೇಶಪೂರ್ವಕವಾಗಿಯೇ, ಬಂಡವಾಳಶಾಹಿ ಆರ್ಥಿಕತೆಯ ಇತ್ತೀಚೆಗಿನ ಘಟ್ಟಕ್ಕೆ ಸಂಬಂಧಿಸಿದ ನಿರ್ದಿಷ್ಟವಾಗಿ ನಿರ್ವಿವಾದಾತ್ಮಕವಾದ ಸತ್ಯಸಂಗತಿ ಗಳನ್ನು ಒಪ್ಪಿಕೊಳ್ಳುವ ಒತ್ತಾಯಕ್ಕೊಳಗಾದ ಸಾಧ್ಯವಾದಷ್ಟೂ ಹೆಚ್ಚು ಸಂಖ್ಯೆಯ ಬೂರ್ಷ್ವಾ ಅರ್ಥಶಾಸ್ತ್ರಜ್ಞರನ್ನೇ ಉದ್ಧರಿಸಲು ಯತ್ನಿಸಿದ್ದೇವೆ. ಇದೇ ಉದ್ದೇಶ ವನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಸವಿವರವಾದ ಅಂಕಿಅಂಶಗಳನ್ನು ಉದ್ಧರಿ ಸಿದ್ದೇವೆ. ಬ್ಯಾಂಕಿಂಗ್ ಬಂಡವಾಳ ಇತ್ಯಾದಿಗಳು ಎಷ್ಟರವರೆಗೂ ಬೆಳೆದಿವೆ, ಪ್ರಮಾಣವು ಗುಣವಾಗಿ ವಿಕಾಸಗೊಂಡ ಬಂಡವಾಳವಾದವು ಸಾಮ್ರಾಜ್ಯವಾದವಾಗಿ ಪರಿ ವರ್ತನೆಗೊಳ್ಳುವುದು ಸರಿಯಾಗಿ ಯಾವುದರಲ್ಲಿ ವ್ಯಕ್ತಗೊಂಡಿದೆ, ಎಂಬುದನ್ನು ಕಂಡು ಕೊಳ್ಳಲು ಈ ಅಂಕಿಅಂಶಗಳು ಸಾಧ್ಯಮಾಡಿಕೊಡುತ್ತವೆ. ಪ್ರಕೃತಿಯಲ್ಲೂ ಸಮಾಜ ದಲ್ಲೂ ಎಲ್ಲ ಸರಹದ್ದುಗಳು ಕೆಲವು ಷರತ್ತುಗಳಿಗೆ ಒಳಪಟ್ಟೇ ಇರುತ್ತವೆ, ಬದ ಲಾವಣೆಗಳಿಗೆ ಒಳಪಟ್ಟೇ ಇರುತ್ತವೆ ಎಂದೂ, ಸಾಮ್ರಾಜ್ಯವಾದವು ಉದಾಹರಣೆಗೆ ಯಾವುದೇ ನಿರ್ದಿಷ್ಟ ವರ್ಷದಲ್ಲಿ ಅಥವಾ ದಶಕದಲ್ಲಿ "ಆಖೈರಾಗಿ" ಸುಸಂಸ್ಥಾಪಿತ ವಾಯಿತು ಎಂದೂ ವಾದಮಾಡುವುದೂ ಅವಿವೇಕವೆಂದು ಬೇರೆ ಹೇಳಬೇಕಾಗಿ ಲ್ಲವೆನ್ನಿ.

ಆದರೆ ಸಾಮ್ರಾಜ್ಯವಾದದ ಬಗೆಗೆ ನಿರೂಪಣೆ ನೀಡುವಾಗ ನಾವು ಎಲ್ಲಕ್ಕಿಂತ ಮೊದಲಾಗಿ ದ್ವಿತೀಯ ಇಂಟರ್‌ನ್ಯಾಷನಲ್‌ನ ಯುಗ ಎಂದು ಕರೆಯಲಾಗುವಂತಹ ಯುಗದ, ಅಂದರೆ 1889ಕ್ಕೂ 1914ಕ್ಕೂ ನಡುವಿನ ಇಪ್ಪತ್ತೈದು ವರ್ಷಗಳ ಕಾಲದ, ಪ್ರಧಾನ ಮಾರ್ಕ್ಸ್‌ವಾದಿ ಸಿದ್ಧಾಂತಿಯಾದ ಕೆ. ಕೌತ್‌ಸ್ಕಿಯವರೊಂದಿಗೆ ವಿವಾದದಲ್ಲಿ ತೊಡಗಬೇಕಾಗುತ್ತದೆ. ಸಾಮ್ರಾಜ್ಯವಾದದ ಕುರಿತು ನಮ್ಮ ನಿರೂಪಣೆ ಯಲ್ಲಿ ವ್ಯಕ್ತಪಡಿಸಲಾದ ಮೂಲಭೂತ ವಿಚಾರಗಳನ್ನು ಕೌತ್‌ಸ್ಕಿಯವರು 1915 ರಲ್ಲಿ ತುಂಬ ದೃಢವಾಗಿ ವಿರೋಧಿಸಿದರು. ಸಾಮ್ರಾಜ್ಯವಾದವನ್ನು ಆರ್ಥಿಕತೆಯ ಒಂದು "ಮಜಲು" ಅಥವಾ ಘಟ್ಟ ಎಂದು ಭಾವಿಸಬಾರದು, ಆದರೆ ಒಂದು ನೀತಿ, ಹಣಕಾಸು ಬಂಡವಾಳವು "ಆದ್ಯತೆ ನೀಡುವ" ಒಂದು ನಿರ್ದಿಷ್ಟ ನೀತಿ, ಎಂದು ಭಾವಿಸಬೇಕು, ಎಂದು ಅವರು 1914ರ ನವಂಬರ್‌ನಲ್ಲೇ ಹೇಳಿದರು. ಸಾಮ್ರಾಜ್ಯ ವಾದವನ್ನು "ಇಂದಿನ ಬಂಡವಾಳವಾದ"ದೊಂದಿಗೆ "ಸರಿಸಮ"ಗೊಳಿಸಬಾರದು; ಸಾಮ್ರಾಜ್ಯವಾದವನ್ನು "ಇಂದಿನ ಬಂಡವಾಳವಾದದ ಎಲ್ಲ ಘಟನೆಗಳು" – ಕಾರ್ಟೆಲ್ ಗಳು, ಸಂರಕ್ಷಣಾ ಸುಂಕ, ಧನಾಧಿಪತಿಗಳ ಪ್ರಾಬಲ್ಯ, ವಸಾಹತು ನೀತಿ, ಇವೆಲ್ಲ – ಎಂದು ಅರ್ಥಮಾಡಿಕೊಳ್ಳುವುದಾದರೆ, ಆಗ ಸಾಮ್ರಾಜ್ಯವಾದವು ಬಂಡವಾಳವಾದಕ್ಕೆ ಅವಶ್ಯವೇ ಎಂಬ ಪ್ರಶ್ನೆಯು "ಶುದ್ಧ ಅಸಂಬದ್ಧ ಪುನರುಕ್ತಿ"ಯ ಮಟ್ಟಕ್ಕೆ ಇಳಿಯು

ತ್ತದೆ, ಏಕೆಂದರೆ, ಅಂತಹ ಪ್ರಸಂಗದಲ್ಲಿ "ಸಾಮ್ರಾಜ್ಯವಾದವು ಬಂಡವಾಳವಾದಕ್ಕೆ ಸಹಜವಾಗಿಯೇ ಒಂದು ಪ್ರಾಣಾಧಾರವಾದ ಆವಶ್ಯಕತೆ"ಯಾಗುತ್ತದೆ, ಎಂದೂ ಅವರು ಹೇಳಿದರು. ಕೌತ್‌ಸ್ಕಿಯವರ ವಿಚಾರವನ್ನು ಮುಂದಿಡುವ ಅತ್ಯುತ್ತಮ ಮಾರ್ಗವೆಂದರೆ, ಸಾಮ್ರಾಜ್ಯವಾದದ ಬಗೆಗೆ ಅವರದೇ ನಿರೂಪಣೆಯನ್ನು ಉದ್ಧರಿಸುವುದಾಗಿದೆ. ಅದು ನಾವು ಪ್ರತಿಪಾದಿಸಿರುವ ವಿಚಾರಗಳ ಸಾರಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿದೆ (ಏಕೆಂದರೆ, ಈಗಾಗಲೇ ಅನೇಕ ವರ್ಷಗಳಿಂದ ಅಂತಹುವೇ ವಿಚಾರಗಳನ್ನು ಪ್ರತಿಪಾದಿಸುತ್ತಿರುವ ಜರ್ಮನ್ ಮಾರ್ಕ್ಸ್‌ವಾದಿಗಳ ಶಿಬಿರದಿಂದ ಬರುವ ಆಕ್ಷೇಪಣೆಗಳು ಕೌತ್‌ಸ್ಕಿಯವರಿಗೆ, ಮಾರ್ಕ್ಸ್‌ವಾದದಲ್ಲಿನ ಒಂದು ನಿರ್ದಿಷ್ಟ ಪ್ರವೃತ್ತಿಯ ಆಕ್ಷೇಪಣೆಗಳಾಗಿ ಬಹಳ ಕಾಲದಿಂದ ತಿಳಿದಿವೆ).

ಕೌತ್‌ಸ್ಕಿಯವರ ನಿರೂಪಣೆ ಈ ಕೆಳಗಿನಂತಿದೆ:

"ಸಾಮ್ರಾಜ್ಯವಾದವು ಅತ್ಯುನ್ನತವಾಗಿ ವಿಕಾಸಗೊಂಡ ಕೈಗಾರಿಕಾ ಬಂಡವಾಳವಾದದ ಉತ್ಪನ್ನವಾಗಿದೆ. ಪ್ರತಿಯೊಂದು ಕೈಗಾರಿಕಾ ಬಂಡವಾಳಶಾಹಿ ದೇಶವೂ ಹೆಚ್ಚು ಹೆಚ್ಚು ಪ್ರಮಾಣಗಳಲ್ಲಿ ಕೃಷಿ (ಅಡಿಗೆರೆ ಕೌತ್‌ಸ್ಕಿಯವರದೇ) ಪ್ರದೇಶಗಳನ್ನು, ಆ ಪ್ರದೇಶಗಳಲ್ಲಿ ಯಾವ ಜನಾಂಗೀಯರು ನೆಲಸಿದ್ದಾರೆ ಎಂಬುದರ ಪರಿಗಣನೆ ಇಲ್ಲದೆಯೇ, ತನ್ನ ಹತೋಟಿಯೊಳಕ್ಕೆ ತಂದುಕೊಳ್ಳಲು ಅಥವಾ ತಮ್ಮ ದೇಶದೊಂದಿಗೆ ಲಗತ್ತಿಸಿಕೊಳ್ಳಲು ಮಾಡುವ ಯತ್ನವಾಗಿದೆ ಅದು."*

ಈ ನಿರೂಪಣೆಯು ಶುದ್ಧ ಕೆಲಸಕ್ಕೆ ಬಾರದುದು, ಏಕೆಂದರೆ, ಇದು ಏಕಪಕ್ಷೀಯವಾಗಿ, ಅಂದರೆ ಸ್ವೇಚ್ಛೆಯಾಗಿ, ಜನಾಂಗೀಯ ಪ್ರಶ್ನೆಯನ್ನಷ್ಟೇ (ಈ ಪ್ರಶ್ನೆಯು ಸ್ವತಃ ಹಾಗೂ ಸಾಮ್ರಾಜ್ಯವಾದಕ್ಕೆ ಸಂಬಂಧಿಸಿದಂತೆ ಅತ್ಯಂತ ಮುಖ್ಯವಾಗಿದ್ದರೂ) ಒಂಟಿಯಾಗಿ ಪ್ರತ್ಯೇಕಿಸುತ್ತದೆ, ಅದು ಸ್ವೇಚ್ಛೆಯಾಗಿ ಹಾಗೂ ತಪ್ಪಾಗಿ ಈ ಪ್ರಶ್ನೆಯನ್ನು ಇತರ ದೇಶಗಳನ್ನು ಲಗತ್ತಿಸಿಕೊಳ್ಳುವ ದೇಶಗಳಲ್ಲಿನ ಕೈಗಾರಿಕಾ ಬಂಡವಾಳದೊಂದಿಗೆ ಮಾತ್ರವೇ ಸಂಬಂಧಿಸುತ್ತದೆ ಮತ್ತು ಅಷ್ಟೇ ಸ್ವೇಚ್ಛೆಯಾದ ಹಾಗೂ ತಪ್ಪಾದ ರೀತಿಯಲ್ಲಿ ಕೃಷಿ ಪ್ರದೇಶಗಳನ್ನು ಲಗತ್ತಿಸಿಕೊಳ್ಳುವುದನ್ನೂ ಮುನ್ನೆಲೆಗೆ ತರುತ್ತದೆ.

ಸಾಮ್ರಾಜ್ಯವಾದವು – ಇದು ಬೇರೆ ದೇಶಗಳನ್ನು ಲಗತ್ತಿಸಿಕೊಳ್ಳುವ ಪ್ರಯತ್ನ – ಇದೇ ಕೌತ್‌ಸ್ಕಿಯವರ ನಿರೂಪಣೆಯ ರಾಜಕೀಯ ಭಾಗ ತಿಳಿಸುವುದು. ಇದು ಸರಿಯೇ, ಆದರೆ ತೀರ ಅಸಂಪೂರ್ಣವಾದುದು. ಏಕೆಂದರೆ, ರಾಜಕೀಯವಾಗಿ ಸಾಮ್ರಾಜ್ಯವಾದವು ಒಟ್ಟಿನಲ್ಲಿ ಹಿಂಸೆ ಹಾಗೂ ಪ್ರತಿಗಾಮಿತ್ವದತ್ತ ಒಂದು ಪ್ರಯತ್ನವಾಗಿ

---

**Die Neue Zeit*, 1914, 2 (ಸಂ. 32), ಪು. 909, ಸೆಪ್ಟೆಂಬರ್ 11. 1914; 1915, 2, ಪು. 107.

ರುತ್ತದೆ. ಆದರೆ ಪ್ರಸ್ತುತದಲ್ಲಿ ನಾವು ಪ್ರಶ್ನೆಯ ಆರ್ಥಿಕ ಸ್ವರೂಪದಲ್ಲಿ ಆಸಕ್ತರಾಗಿದ್ದೇವೆ. ಇದನ್ನು ಕೌತ್‌ಸ್ಕಿಯವರೇ ಸ್ವತಃ ತಮ್ಮ ನಿರೂಪಣೆಯಲ್ಲಿ ಸೇರಿಸಿದರು. ಕೌತ್‌ಸ್ಕಿಯವರ ನಿರೂಪಣೆಯಲ್ಲಿನ ತಪ್ಪುಗಳು ಎದ್ದು ಕಾಣುವಂತಹುವಾಗಿವೆ. ಸಾಮ್ರಾಜ್ಯವಾದದ ವಿಶಿಷ್ಟ ಲಕ್ಷಣ ಕೈಗಾರಿಕಾ ಬಂಡವಾಳ ಅಲ್ಲ, ಆದರೆ ಹಣಕಾಸು ಬಂಡವಾಳ. ಫ್ರಾನ್ಸಿನಲ್ಲಿ ಹಣಕಾಸು ಬಂಡವಾಳದ ಅಸಾಧಾರಣ ಶೀಘ್ರ ಬೆಳವಣಿಗೆಯೇ ಹಾಗೂ ಕೈಗಾರಿಕಾ ಬಂಡವಾಳ ದುರ್ಬಲಗೊಂಡುದೇ 1880ರ ದಶಕದ ವರ್ಷಗಳನಂತರ ಪರದೇಶಗಳನ್ನು ಲಗತ್ತಿಸಿಕೊಳ್ಳುವ (ವಸಾಹತು) ನೀತಿಯು ಅತ್ಯಂತ ಹೆಚ್ಚಿನ ತೀಕ್ಷ್ಣತೆಗೆ ದಾರಿ ಮಾಡಿಕೊಟ್ಟುದು, ಎನ್ನುವುದು ಆಕಸ್ಮಿಕವೇನಲ್ಲ. ಸಾಮ್ರಾಜ್ಯವಾದವು ಕೃಷಿ ಪ್ರದೇಶಗಳನ್ನು ಅಷ್ಟೆ ಅಲ್ಲ, ಅತ್ಯುನ್ನತವಾಗಿ ಕೈಗಾರಿಕೀಕೃತವಾದ ಪ್ರದೇಶಗಳನ್ನೂ (ಬೆಲ್ಜಿಯಂಗಾಗಿ ಜರ್ಮನಿಯ ಪ್ರಬಲೇಚ್ಛೆ, ಲೊರೈನ್‌ಗಾಗಿ ಫ್ರಾನ್ಸ್‌ನ ಪ್ರಬಲೇಚ್ಛೆ) ಲಗತ್ತಿಸಿಕೊಳ್ಳಲು ಪ್ರಯತ್ನಿಸುತ್ತದೆ, ಎಂಬುದೇ ಅದರ ವಿಶಿಷ್ಟ ಲಕ್ಷಣವಾಗಿದೆ. ಏಕೆಂದರೆ, 1) ಜಗತ್ತು ಆಗಲೇ ಹಂಚಿಕೊಳ್ಳಲ್ಪಟ್ಟಿದೆಯಾದ ಕಾರಣ ಅದು ಪುನರ್‌ವಿಭಜನೆಗಾಗಿ ಆಲೋಚಿಸುತ್ತಿರುವವರನ್ನು ಯಾವುದೇ ರೀತಿಯ ಪ್ರದೇಶಕ್ಕಾಗಿಯೂ ಕೈಚಾಚುವಂತೆ ಒತ್ತಾಯಿಸುತ್ತದೆ; 2) ಅಧಿನಾಯಕತ್ವಕ್ಕಾಗಿ ಪ್ರಯತ್ನದಲ್ಲಿ ಹಲವಾರು ಬೃಹತ್ ರಾಷ್ಟ್ರಗಳ ನಡುವೆ ಪೈಪೋಟಿಯೇ, ಅಂದರೆ ಪ್ರದೇಶಗಳನ್ನು ತಮಗಾಗಿಯೇ ನೇರವಾಗಿ ಪಡೆದುಕೊಳ್ಳಲು ಪೈಪೋಟಿಯಾಗಷ್ಟೆ ಅಲ್ಲ, ಆದರೆ ಶತ್ರುವನ್ನು ದುರ್ಬಲಗೊಳಿಸಿ ಅವನ ಅಧಿನಾಯಕತ್ವವನ್ನು ಶಿಥಿಲಗೊಳಿಸಲು ಪೈಪೋಟಿಯಾಗಿ, ಸಾಮ್ರಾಜ್ಯವಾದದ ಒಂದು ಅತ್ಯಗತ್ಯ ಲಕ್ಷಣವಾಗಿದೆ (ಇಂಗ್ಲೆಂಡಿನ ವಿರುದ್ಧ ಕಾರ್ಯಾಚರಣೆಗಳಿಗೆ ನೆಲೆಯಾಗಿ ಜರ್ಮನಿಗೆ ಬೆಲ್ಜಿಯಂ ವಿಶೇಷವಾಗಿ ಮುಖ್ಯವಾದುದು; ಜರ್ಮನಿಯ ವಿರುದ್ಧ ಕಾರ್ಯಾಚರಣೆಗಳಿಗೆ ನೆಲೆಯಾಗಿ ಇಂಗ್ಲೆಂಡಿಗೆ ಬಾಗ್ದಾದ್ ಬೇಕು; ಇತ್ಯಾದಿ).

ಕೌತ್‌ಸ್ಕಿಯವರು ವಿಶೇಷವಾಗಿ – ಹಾಗೂ ಪದೇ ಪದೇ – ಇಂಗ್ಲಿಷರಿಗೆ ಉಲ್ಲೇಖಿಸುತ್ತಾರೆ; ಇಂಗ್ಲಿಷರು "ಸಾಮ್ರಾಜ್ಯವಾದ" ಎಂಬ ಪದಕ್ಕೆ ತಾವು – ಕೌತ್‌ಸ್ಕಿ – ತಿಳಿದುಕೊಂಡಿರುವಂಥ ಅರ್ಥದಲ್ಲಿ ಶುದ್ಧ ರಾಜಕೀಯ ಅರ್ಥ ನೀಡಿದ್ದಾರೆಂದು ಅವರು ಹೇಳುತ್ತಾರೆ. 1902ರಲ್ಲಿ ಪ್ರಕಟವಾದ, ಇಂಗ್ಲಿಷ್‌ಮನ್ ಹಾಬ್ಸನ್‌ರು ಬರೆದ 'ಸಾಮ್ರಾಜ್ಯವಾದ' ಎಂಬ ಕೃತಿಯಲ್ಲಿ ನಾವು ಹೀಗೆ ಓದುತ್ತೇವೆ:

"ಹೊಸ ಸಾಮ್ರಾಜ್ಯವಾದಕ್ಕೂ ಹಳೆಯ ಸಾಮ್ರಾಜ್ಯವಾದಕ್ಕೂ ನಡುವೆ ಇರುವ ವ್ಯತ್ಯಾಸವೆಂದರೆ – ಮೊದಲನೆಯದಾಗಿ, ಏಕೈಕ ವಿಕಾಸಶೀಲ ಸಾಮ್ರಾಜ್ಯದ ಹೆಬ್ಬಯಕೆಯ ಸ್ಥಳದಲ್ಲಿ ಅದು ಪೈಪೋಟಿ ನಡೆಸುತ್ತಿರುವ ಹಲವಾರು ಸಾಮ್ರಾಜ್ಯಗಳ ಸಿದ್ಧಾಂತ ಹಾಗೂ ಆಚರಣೆಗಳನ್ನು ಜಾರಿಗೆ ತರುತ್ತದೆ. ಈ ಒಂದೊಂದೂ ಸಾಮ್ರಾಜ್ಯವೂ ಒಂದೇ ರೀತಿಯ ರಾಜಕೀಯ ವಿಸ್ತರಣೆ ಹಾಗೂ ವಾಣಿಜ್ಯ ಗಳಿಕೆಗಳ ದುರಾಸೆಯಿಂದ ಪ್ರೇರಿತವಾಗಿರುತ್ತದೆ. ಎರಡನೆಯದಾಗಿ, ಹಣಕಾಸಿನ ಅಥವಾ ಬಂಡವಾಳ

ತೊಡಗಿಸುವಿಕೆಯ ಹಿತಗಳು ವಾಣಿಜ್ಯ ಹಿತಗಳ ಮೇಲೆ ಪ್ರಾಬಲ್ಯ ಹೊಂದಿರುತ್ತವೆ."*

ಕೌತ್‌ಸ್ಕಿಯವರು ಒಟ್ಟಿನಲ್ಲಿ ಇಂಗ್ಲಿಷರಿಗೆ ಉಲ್ಲೇಖಿಸುತ್ತ ಶುದ್ಧ ತಪ್ಪು ಮಾಡಿದ್ದಾರೆಂಬುದನ್ನು ನಾವು ಕಾಣುತ್ತೇವೆ (ಅವರು ಪ್ರಾಕೃತ ಇಂಗ್ಲಿಷ್ ಸಾಮ್ರಾಜ್ಯವಾದಿಗಳಿಗೆ ಅಥವಾ ಸಾಮ್ರಾಜ್ಯವಾದದ ದೀಕ್ಷಾಬದ್ಧ ಸಮರ್ಥಕರಿಗೆ, ಉಲ್ಲೇಖಿಸುತ್ತಿದ್ದರೆ, ಅದು ಬೇರೆ ಮಾತು). ತಾವು ಮಾರ್ಕ್ಸ್‌ವಾದವನ್ನು ಪ್ರತಿಪಾದಿಸುತ್ತಲೇ ಇದ್ದಾರೆಂದು ಸಮರ್ಥಿಸುವಾಗಲೇ ಕೌತ್‌ಸ್ಕಿಯವರು ವಾಸ್ತವವಾಗಿ ಸಾಮಾಜಿಕ-ಉದಾರವಾದಿ ಹಾಬ್ಸನ್‌ರಿಗೆ ಹೋಲಿಸಿದಂತೆಯೂ ಒಂದು ಹೆಜ್ಜೆ ಹಿಂದಿಡುತ್ತಾರೆ. ಹಾಬ್ಸನ್‌ರು ಹೆಚ್ಚು ಸರಿಯಾಗಿಯೇ ಆಧುನಿಕ ಸಾಮ್ರಾಜ್ಯವಾದದ ಎರಡು "ಚಾರಿತ್ರಿಕವಾಗಿ ಸ್ಪಷ್ಟವಾದ" (ಕೌತ್‌ಸ್ಕಿಯವರ ನಿರೂಪಣೆಯು ಚಾರಿತ್ರಿಕ ಸ್ಪಷ್ಟತೆಯ ಅಣಕವಾಗಿದೆ!) ಲಕ್ಷಣಗಳನ್ನು ಗಣನೆಗೆ ತಂದುಕೊಳ್ಳುತ್ತಾರೆ: 1) ಹಲವಾರು ಸಾಮ್ರಾಜ್ಯವಾದಗಳ ನಡುವೆ ಪೈಪೋಟಿ; 2) ವರ್ತಕನ ಮೇಲೆ ಬ್ಯಾಂಕರುಗಳ ಪ್ರಾಬಲ್ಯ ಇರುವುದು. ಕೈಗಾರಿಕಾ ದೇಶಗಳು ಕೃಷಿ ದೇಶಗಳನ್ನು ಲಗತ್ತಿಸಿಕೊಳ್ಳುವುದಷ್ಟೆ ಪ್ರಧಾನವಾದ ಪ್ರಶ್ನೆಯಾಗಿದ್ದರೆ, ಆಗ ವರ್ತಕನ ಪಾತ್ರವೇ ಮುನ್ನೆಲೆಗೆ ಬರುತ್ತದೆ.

ಕೌತ್‌ಸ್ಕಿಯವರ ನಿರೂಪಣೆಯು ತಪ್ಪಷ್ಟೆ ಅಲ್ಲ, ಮಾರ್ಕ್ಸ್‌ವಾದಕ್ಕೆ ಅನುಗುಣವಾಗಿಲ್ಲವಷ್ಟೆ ಅಲ್ಲ, ಮಾರ್ಕ್ಸ್‌ವಾದದ ಸಿದ್ಧಾಂತ ಹಾಗೂ ಮಾರ್ಕ್ಸ್‌ವಾದದ ಆಚರಣೆಗಳೊಂದಿಗೆ ಆದ್ಯಂತವೂ ಅಸಾಂಗತ್ಯವನ್ನು ಸೂಚಿಸುವ ಅಭಿಪ್ರಾಯಗಳಿಗೆ ಅದು ಆಧಾರವಾಗಿಯೂ ನೆರವಾಗುತ್ತದೆ. ಇದಕ್ಕೆ ನಾವು ಮುಂದೆ ಉಲ್ಲೇಖಿಸುತ್ತೇವೆ. ಬಂಡವಾಳವಾದದ ಇತ್ತೀಚಿನ ಮಜಲನ್ನು "ಸಾಮ್ರಾಜ್ಯವಾದ" ಎಂದು ಅಥವಾ "ಹಣಕಾಸು ಬಂಡವಾಳದ ಮಜಲು" ಎಂದು ಕರೆಯಬೇಕೇ ಎಂಬ ಪದಗಳ ಬಗೆಗೆ ಕೌತ್‌ಸ್ಕಿಯವರು ಎತ್ತುವ ವಾದವಿವಾದ ಶುದ್ಧ ಹುರುಳಿಲ್ಲದುದು. ನಿಮಗೆ ಬೇಕಾದ ರೀತಿಯಲ್ಲಿ ಕರೆದುಕೊಳ್ಳಿ, ವ್ಯತ್ಯಾಸವೇನೂ ಆಗದು. ವಿಷಯದ ಮುಖ್ಯ ಸಾರವೆಂದರೆ, ಕೌತ್‌ಸ್ಕಿಯವರು ಸಾಮ್ರಾಜ್ಯವಾದದ ರಾಜಕಾರಣವನ್ನು ಅದರ ಆರ್ಥಿಕ ವ್ಯವಹಾರಗಳಿಂದ ಪ್ರತ್ಯೇಕಿಸುವುದಾಗಿದೆ. ಪರದೇಶಗಳ ಭೂಭಾಗಗಳನ್ನು ಲಗತ್ತಿಸಿಕೊಳ್ಳುವುದನ್ನು ಅವರು ಹಣಕಾಸು ಬಂಡವಾಳವು "ಆದ್ಯತೆ" ನೀಡುವ ನೀತಿಯನ್ನಾಗಿ ವಿವರಿಸುತ್ತಾರೆ. ಅದಕ್ಕೆ ವಿರುದ್ಧವಾಗಿ ಮತ್ತೊಂದು ಬೂರ್ಷ್ವಾ ನೀತಿಯನ್ನು ಎತ್ತಿಹಿಡಿಯುತ್ತಾರೆ. ಅದು ಅದೇ ಹಣಕಾಸು ಬಂಡವಾಳದ ಆಧಾರದ ಮೇಲೆಯೇ ಸಾಧ್ಯವೆಂದು ಅವರು ಆರೋಪಿಸುತ್ತಾರೆ. ಅಂದ ಮೇಲೆ ಆರ್ಥಿಕ ವಲಯದಲ್ಲಿ ಏಕಸ್ವಾಮ್ಯವು ರಾಜಕಾರಣದಲ್ಲಿ ಏಕಸ್ವಾಮ್ಯವಲ್ಲದ, ಅಹಿಂಸಾತ್ಮಕವಾದ, ಪರದೇಶಗಳ ಭೂಭಾಗಗಳನ್ನು ಸೇರ್ಪಡೆಮಾಡಿಕೊಳ್ಳುವುದಲ್ಲದ ವಿಧಾನಗಳೊಂದಿಗೆ ಹೊಂದಿಕೆ

---

*Hobson, *Imperialism*, L., 1902, ಪು. 324.

ಯಾಗುತ್ತದೆಂದು ಇದರಿಂದ ಅರ್ಥವಾಗುತ್ತದೆ; ಅಂದ ಮೇಲೆ, ಹಣಕಾಸು ಬಂಡವಾಳದ ಕಾಲಘಟ್ಟದಲ್ಲೇ ಪೂರೈಸಲಾದ ಹಾಗೂ ಇಂದು ಅತ್ಯಂತ ದೊಡ್ಡ ಬಂಡವಾಳಶಾಹಿ ರಾಜ್ಯಗಳ ನಡುವೆ ಪೈಪೋಟಿಯ ವಿಚಿತ್ರ ರೂಪಗಳಿಗೆ ಆಧಾರವಾದ, ಜಗತ್ತಿನ ಪ್ರಾದೇಶಿಕ ವಿಭಜನೆಯು ಸಾಮ್ರಾಜ್ಯಶಾಹಿ ಅಲ್ಲದ ನೀತಿಯೊಂದಿಗೆ ಹೊಂದಿಕೆಯಾಗುತ್ತದೆಂದು ಇದರಿಂದ ಅರ್ಥವಾಗುತ್ತದೆ. ಫಲಿತಾಂಶವೆಂದರೆ, ಬಂಡವಾಳವಾದದ ಇತ್ತೀಚೆಗಿನ ಘಟ್ಟದ ಅತ್ಯಂತ ಪ್ರಗಾಢ ವೈರುಧ್ಯಗಳು ಎಷ್ಟು ಆಳವಾದವು ಎಂಬುದನ್ನು ಬಯಲು ಮಾಡುವ ಬದಲು ಅವುಗಳನ್ನು ತೇಲಿಸಿಬಿಡಲಾಗಿದೆ, ಅವುಗಳ ಮೊನಚನ್ನು ಮೊಂಡು ಮಾಡಲಾಗಿದೆ; ಫಲಿತಾಂಶವೆಂದರೆ, ಮಾರ್ಕ್ಸ್‌ವಾದದ ಬದಲು ಬೂರ್ಷ್ವಾ ಸುಧಾರಣಾವಾದ ಬಂದಿದೆ.

ಕೌತ್‌ಸ್ಕಿಯವರು ಸಾಮ್ರಾಜ್ಯವಾದವನ್ನೂ ಪರದೇಶಗಳ ಭೂಭಾಗಗಳನ್ನು ಸೇರ್ಪಡೆಮಾಡಿಕೊಳ್ಳುವುದನ್ನೂ ಸಮರ್ಥಿಸುವ ಜರ್ಮನಿಯ ಕೂನೊವ್‌ರೊಂದಿಗೆ ವಾದವಿವಾದಗಳಲ್ಲಿ ತೊಡಗುತ್ತಾರೆ. ಸಾಮ್ರಾಜ್ಯವಾದವು ಪ್ರಸಕ್ತ ಕಾಲದ ಬಂಡವಾಳವಾದವಷ್ಟೆ ಎಂದು ಕೂನೊವ್ ಒಡ್ಡೊಡ್ಡಾಗಿ ಸಿನಿಕತನದಿಂದ ವಾದಿಸುತ್ತಾರೆ. ಬಂಡವಾಳವಾದದ ವಿಕಾಸ ಅನಿವಾರ್ಯವಾದುದು ಹಾಗೂ ಪುರೋಗಾಮಿಯಾದುದು; ಆದ್ದರಿಂದ ಸಾಮ್ರಾಜ್ಯವಾದವು ಪುರೋಗಾಮಿಯಾದುದು; ಆದ್ದರಿಂದ ನಾವು ಅದರ ಕಾಲ ಮೇಲೆ ಬಿದ್ದು ಹೊರಳಾಡಬೇಕು, ಅದರ ಕೀರ್ತಿ ಪ್ರಶಂಸೆ ಮಾಡಬೇಕು! ಇದು, ರಷ್ಯನ್ ಮಾರ್ಕ್ಸ್‌ವಾದಿಗಳ ಕುರಿತು ನರೋದ್ನಿಕರು[29] 1894-1895ರಲ್ಲಿ ರಚಿಸಿದ ವಿಕಟ ಚಿತ್ರದಂತಿದೆ. ನರೋದ್ನಿಕರು ಹೀಗೆ ವಾದಮಾಡಿದರು: ಬಂಡವಾಳವಾದವು ರಷ್ಯದಲ್ಲಿ ಅನಿವಾರ್ಯವಾದುದು, ಅದು ಪುರೋಗಾಮಿಯಾದುದು ಎಂದು ಮಾರ್ಕ್ಸ್‌ವಾದಿಗಳು ನಂಬುವುದಾದರೆ, ಅವರು ಮದ್ಯದಂಗಡಿಯನ್ನು ತೆರೆದು ಬಂಡವಾಳವಾದವನ್ನು ನೆಲೆಗೊಳಿಸುವುದರಲ್ಲಿ ತೊಡಗಬೇಕು! ಕೌತ್‌ಸ್ಕಿಯವರು ಕೂನೊವ್‌ರಿಗೆ ಈ ಕೆಳಗಿನಂತೆ ಉತ್ತರ ನೀಡಿದರು: ಸಾಮ್ರಾಜ್ಯವಾದವು ಪ್ರಸಕ್ತ ಕಾಲದ ಬಂಡವಾಳವಾದವಲ್ಲ; ಅದು ಪ್ರಸಕ್ತ ಕಾಲದ ಬಂಡವಾಳವಾದ ಅನುಸರಿಸುತ್ತಿರುವ ನೀತಿಯ ರೂಪಗಳಲ್ಲೊಂದಷ್ಟೆ. ಈ ನೀತಿಯ ವಿರುದ್ಧ ನಾವು ಹೋರಾಡಬಲ್ಲೆವು, ಹೋರಾಡಬೇಕು; ಸಾಮ್ರಾಜ್ಯವಾದ, ಪರದೇಶಗಳ ಭೂಭಾಗಗಳನ್ನು ಸೇರ್ಪಡೆಮಾಡಿಕೊಳ್ಳುವುದು, ಇತ್ಯಾದಿಗಳ ವಿರುದ್ಧ ಹೋರಾಡಬೇಕು.

ಈ ಉತ್ತರವು ನ್ಯಾಯಸಮ್ಮತವೆಂದೇ ಕಂಡುಬರುತ್ತದೆ. ಆದರೆ ಪರಿಣಾಮದಲ್ಲಿ ಅದು ಸಾಮ್ರಾಜ್ಯವಾದದೊಂದಿಗೆ ಹೊಂದಾಣಿಕೆಯನ್ನು ಹೆಚ್ಚು ಸೂಕ್ಷ್ಮವಾಗಿ ಹಾಗೂ ಹೆಚ್ಚು ಮರೆಮಾಚಿದಂತೆ (ಆದ್ದರಿಂದಾಗಿ ಹೆಚ್ಚು ಅಪಾಯಕಾರಿಯಾಗಿ) ಪ್ರತಿಪಾದಿಸುತ್ತದೆ. ಏಕೆಂದರೆ ಟ್ರಸ್ಟುಗಳ ಹಾಗೂ ಬ್ಯಾಂಕುಗಳ ಆರ್ಥಿಕತೆಯ ಆಧಾರಕ್ಕೆ ಬಾಧಕ ಉಂಟುಮಾಡದಂತೆ ಟ್ರಸ್ಟುಗಳ ಹಾಗೂ ಬ್ಯಾಂಕುಗಳ ನೀತಿಯ ವಿರುದ್ಧ "ಹೋರಾಡುವುದು" ಬೂರ್ಷ್ವಾ ಸುಧಾರಣಾವಾದ ಹಾಗೂ ಸಾಂತ್ವನವಾದವಲ್ಲದೆ,

ಪವಿತ್ರ ಕೋರಿಕೆಗಳ ದಯಾಶೀಲ ಹಾಗೂ ಮುಗ್ಧ ಅಭಿವ್ಯಕ್ತಿಯಲ್ಲದೆ, ಬೇರೇನೂ ಅಲ್ಲ. ಇಂದು ಅಸ್ತಿತ್ವದಲ್ಲಿರುವ ವೈರುಧ್ಯಗಳ ಪೂರ್ಣ ಆಳವನ್ನು ಹೊರಗೆಡಹುವ ಬದಲು ಅವುಗಳಿಂದ ತಪ್ಪಿಸಿಕೊಳ್ಳುವುದು, ಅವುಗಳಲ್ಲಿ ಅತ್ಯಂತ ಮುಖ್ಯವಾದವನ್ನು ಮರೆಯುವುದು – ಇದೇ ಕೌತ್‌ಸ್ಕಿಯವರ ಸಿದ್ಧಾಂತವಾಗಿದೆ. ಇದಕ್ಕೂ ಮಾರ್ಕ್ಸ್‌ವಾದಕ್ಕೂ ಏನೇನೂ ಸಂಬಂಧವಿಲ್ಲ. ಸಹಜವಾಗಿಯೇ, ಇಂತಹ "ಸಿದ್ಧಾಂತ"ವು ಕೂನೊವ್‌ರೊಂದಿಗೆ ಐಕ್ಯವನ್ನು ಪ್ರತಿಪಾದಿಸುವ ಉದ್ದೇಶಕ್ಕಷ್ಟೆ ನೆರವಾಗಬಲ್ಲುದು !

"ಶುದ್ಧ ಆರ್ಥಿಕ ದೃಷ್ಟಿಕೋನದಿಂದ ಬಂಡವಾಳವಾದವು ಇನ್ನೂ ಒಂದು ಹೊಸ ಮಜಲಿನ ಮೂಲಕ, ಕಾರ್ಟೆಲ್‌ಗಳ ನೀತಿಯನ್ನು ವಿದೇಶಾಂಗ ನೀತಿಗೂ ವಿಸ್ತರಿಸುವ ಮಜಲಿನ, ಅತೀತ-ಸಾಮ್ರಾಜ್ಯವಾದ(ultra imperialism)ದ ಮಜಲಿನ ಮೂಲಕ, ಹಾದು ಹೋಗುವುದು ಅಸಾಧ್ಯವಾದುದೇನೂ ಅಲ್ಲ* ಎಂದು ಕೌತ್‌ಸ್ಕಿ ಬರೆಯುತ್ತಾರೆ. ಅಂದರೆ ಅತೀತ-ಸಾಮ್ರಾಜ್ಯವಾದದ ಮಜಲು, ಇಡೀ ಜಗತ್ತಿನ ಸಾಮ್ರಾಜ್ಯಶಾಹಿಗಳು ತಮ್ಮ ಮಧ್ಯೆಯೇ ಹೋರಾಡದೆಯೇ ಒಂದುಗೂಡುವ ಮಜಲು, ಬಂಡವಾಳವಾದದಲ್ಲೇ ಯುದ್ಧಗಳು ಅಂತ್ಯಗೊಳ್ಳುವ ಮಜಲು, "ಅಂತರರಾಷ್ಟ್ರೀಯವಾಗಿ ಐಕ್ಯಗೊಂಡ ಹಣಕಾಸು ಬಂಡವಾಳವು ಜಗತ್ತನ್ನು ಜೊತೆಗೂಡಿ ಶೋಷಿಸುವ ಮಜಲು."

ಈ "ಅತೀತ-ಸಾಮ್ರಾಜ್ಯವಾದ ಸಿದ್ಧಾಂತ" ಹೇಗೆ ನಿರ್ದಿಷ್ಟವಾಗಿ ಹಾಗೂ ಸಂಪೂರ್ಣವಾಗಿ ಮಾರ್ಕ್ಸ್‌ವಾದದಿಂದ ದೂರ ಸರಿಯುತ್ತದೆಂಬುದನ್ನು ತೋರಿಸಲೋಸುಗ ನಾವು ಅದರ ಬಗೆಗೆ ಮುಂದೆ ಹೆಚ್ಚು ಹೇಳಬೇಕಾಗುತ್ತದೆ. ಈಗ, ಈ ಕೃತಿಯ ಸಾಮಾನ್ಯ ಯೋಜನೆಗನುಗುಣವಾಗಿ, ಈ ಪ್ರಶ್ನೆಗೆ ಸಂಬಂಧಿಸಿ ನಿಷ್ಕೃಷ್ಟ ಆರ್ಥಿಕ ಆಧಾರಾಂಶಗಳನ್ನು ನಾವು ಪರಿಶೀಲಿಸಬೇಕು. "ಶುದ್ಧ ಆರ್ಥಿಕ ದೃಷ್ಟಿಕೋನದಿಂದ" "ಅತೀತ-ಸಾಮ್ರಾಜ್ಯವಾದವು" ಸಾಧ್ಯವೇ, ಅಥವಾ ಅದು ಅತೀತ-ಅಸಂಬದ್ಧವೇ ?

ಶುದ್ಧ ಆರ್ಥಿಕ ದೃಷ್ಟಿಕೋನ ಎನ್ನುವುದನ್ನು "ಶುದ್ಧ" ಅಮೂರ್ತ ಭಾವನೆಯ ಅರ್ಥದಲ್ಲಿ ಹೇಳಿದ್ದಲ್ಲಿ, ಆಗ ಅದರ ಬಗೆಗೆ ಹೇಳಬಹುದಾದುದೆಲ್ಲ ಕೆಳಗಿನ ಪ್ರತಿಪಾದನೆಯ ಮಟ್ಟಕ್ಕೆ ಇಳಿಯುತ್ತದೆ: ಬೆಳವಣಿಗೆಯು ಏಕಸ್ವಾಮ್ಯ ಸಂಸ್ಥೆಗಳತ್ತ, ಅದ್ದರಿಂದ ಏಕೈಕ ಜಾಗತಿಕ ಏಕಸ್ವಾಮ್ಯದತ್ತ, ಏಕೈಕ ಜಾಗತಿಕ ಟ್ರಸ್ಟಿನತ್ತ, ಮುಂದುವರಿಯುತ್ತಿದೆ. ಇದು ನಿರ್ವಿವಾದವಾದುದು. ಆದರೆ ಇದು, ಆಹಾರ ಪದಾರ್ಥಗಳನ್ನು ಪ್ರಯೋಗಶಾಲೆಯಲ್ಲಿ ತಯಾರಿಸುವತ್ತ "ಬೆಳವಣಿಗೆಯು ಮುಂದುವರಿಯುತ್ತಿದೆ" ಎಂಬ ಹೇಳಿಕೆಯಷ್ಟೇ ಸಂಪೂರ್ಣವಾಗಿ ಅರ್ಥಶೂನ್ಯವಾದುದೂ ಆಗಿರುತ್ತದೆ. ಈ

---

**Die Neue Zeit*, 1914, 2 (ಸಂ. 32), ಪು. 921, ಹೋಲಿಸಿ, 1915, 2, ಪು. 107 ಇತ್ಯಾದಿ.

ಅರ್ಥದಲ್ಲಿ ಅತೀತ-ಸಾಮ್ರಾಜ್ಯವಾದದ "ಸಿದ್ಧಾಂತ"ವು "ಅತೀತ-ಕೃಷಿ ಸಿದ್ಧಾಂತ"ಕ್ಕಿಂತ ಕಮ್ಮಿ ಏನೂ ಅಸಂಬದ್ಧವಾದುದಲ್ಲ.

ಆದರೆ ನಾವು 20ನೆಯ ಶತಮಾನದ ಆದಿಯಲ್ಲಿ ಪ್ರಾರಂಭವಾದ, ಚಾರಿತ್ರಿಕವಾಗಿ ಸುಸ್ಪಷ್ಟವಾದ ಕಾಲಘಟ್ಟವಾಗಿ ಹಣಕಾಸು ಬಂಡವಾಳದ ಕಾಲಘಟ್ಟದ "ಶುದ್ಧ ಆರ್ಥಿಕ" ಪರಿಸ್ಥಿತಿಗಳನ್ನು ಚರ್ಚಿಸುತ್ತಿದ್ದರೆ, ಆಗ "ಅತೀತ-ಸಾಮ್ರಾಜ್ಯವಾದ"ದ ಈ ನಿರ್ಜೀವ ಅಮೂರ್ತ ಕಲ್ಪನೆಗಳಿಗೆ (ಇವು ಪ್ರತ್ಯೇಕವಾಗಿ ಒಂದು ಅತ್ಯಂತ ಪ್ರತಿಗಾಮಿ ಗುರಿಗೆ – ಅಸ್ತಿತ್ವದಲ್ಲಿರುವ ವಿರೋಧಗಳು ಎಷ್ಟು ಆಳವಾದವು ಎಂಬುದರಿಂದ ಗಮನವನ್ನು ದೂರ ಸೆಳೆಯುವ ಗುರಿಗೆ – ಸೇವೆ ಸಲ್ಲಿಸುತ್ತವೆ) ನೀಡಬಹುದಾದ ಅತ್ಯುತ್ತಮ ಉತ್ತರವೆಂದರೆ, ಅವುಗಳನ್ನು ಇಂದಿನ ಜಾಗತಿಕ ಆರ್ಥಿಕತೆಯ ಮೂರ್ತ ಆರ್ಥಿಕ ವಾಸ್ತವಾಂಶಗಳೊಂದಿಗೆ ಹೋಲಿಸಿ ವ್ಯತ್ಯಾಸವನ್ನು ತೋರಿಸುವುದಾಗಿದೆ. ಅತೀತ-ಸಾಮ್ರಾಜ್ಯವಾದರ ಬಗೆಗೆ ಕೌತ್‌ಸ್ಕಿಯವರ ಶುದ್ಧ ಅರ್ಥರಹಿತ ಮಾತು, ಬೇರೆ ಅನೇಕ ಅಂಶಗಳಿಗೆ ಉತ್ತೇಜನ ನೀಡುವುದರ ಜೊತೆಗೆ, ಸಾಮ್ರಾಜ್ಯವಾದದ ಸಮರ್ಥಕರಿಗೆ ಅನುಕೂಲ ಮಾಡಿಕೊಡುವಂಥ ಪ್ರಗಾಢವಾದ ಆ ತಪ್ಪು ವಿಚಾರಕ್ಕೆ, ಅಂದರೆ, ಹಣಕಾಸು ಬಂಡವಾಳದ ಆಳ್ವಿಕೆಯು ಜಾಗತಿಕ ಆರ್ಥಿಕತೆಯಲ್ಲಿ ಅಂತರ್ಗತವಾಗಿರುವ ಅಸಮಾನತೆಯನ್ನೂ ವೈರುಧ್ಯಗಳನ್ನೂ ತಗ್ಗಿ

| ಜಗತ್ತಿನ ಮುಖ್ಯ ಆರ್ಥಿಕ ಕ್ಷೇತ್ರಗಳು | ವಿಸ್ತೀರ್ಣ | ಜನಸಂಖ್ಯೆ |
|---|---|---|
| | ಮಿಲಿಯ ಚದರ ಕಿ.ಮೀ.ಗಳಲ್ಲಿ | ಮಿಲಿಯಗಳಲ್ಲಿ |
| 1) ಮಧ್ಯ ಯೂರೋಪ್ | 27.6 (23.6)* | 388 (146) |
| 2) ಬ್ರಿಟನ್ | 28.9 (28.6)* | 398 (355) |
| 3) ರಷ್ಯ | 22 | 131 |
| 4) ಪೂರ್ವ ಏಷ್ಯ | 12 | 389 |
| 5) ಅಮೆರಿಕ | 30 | 148 |

*ಆವರಣ ಚಿಹ್ನೆಗಳೊಳಗಿರುವ ಸಂಖ್ಯೆಗಳು ವಸಾಹತುಗಳ ಕ್ಷೇತ್ರ ಹಾಗೂ ಜನಸಂಖ್ಯೆಯನ್ನು ಸೂಚಿಸುತ್ತವೆ.

ಸುತ್ತದೆ ಎಂಬ ವಿಚಾರಕ್ಕೆ, ಉತ್ತೇಜನ ನೀಡುತ್ತದೆ. ವಾಸ್ತವವಾಗಿ ಅದು ಅವುಗಳನ್ನು ತೀವ್ರಗೊಳಿಸುತ್ತದೆ.

ಆರ್. ಕಾಲ್ವೆರ್‌ರವರು 'ಜಾಗತಿಕ ಆರ್ಥಿಕತೆಗೆ ಒಂದು ಪೀಠಿಕೆ'* ಎಂಬ ತಮ್ಮ ಪುಟ್ಟ ಗ್ರಂಥದಲ್ಲಿ ಪ್ರಧಾನವಾದ, ಶುದ್ಧವಾಗಿ ಆರ್ಥಿಕವಾದ ಆಧಾರಾಂಶಗಳನ್ನು ಕ್ರೋಡೀಕರಿಸಿ ತಿಳಿಸಲು ಯತ್ನಿಸಿದ್ದಾರೆ. ಅದು 19ನೆಯ ಹಾಗೂ 20ನೆಯ ಶತಮಾನಗಳ ನಡುವಿನ ಗಡಿರೇಖೆಯ ಕಾಲದಲ್ಲಿದ್ದ ಜಾಗತಿಕ ಆರ್ಥಿಕತೆಯ ಆಂತರಿಕ ಸಂಬಂಧಗಳ ಸ್ಪಷ್ಟ ಚಿತ್ರಣ ಪಡೆದುಕೊಳ್ಳಲು ಸಾಧ್ಯಮಾಡಿಕೊಡುತ್ತದೆ. ಅವರು ಜಗತ್ತನ್ನು ಐದು "ಮುಖ್ಯ ಆರ್ಥಿಕ ಕ್ಷೇತ್ರ"ಗಳನ್ನಾಗಿ ವಿಭಜಿಸುತ್ತಾರೆ: 1) ಮಧ್ಯ ಯೂರೋಪ್ (ರಷ್ಯ ಹಾಗೂ ಗ್ರೇಟ್ ಬ್ರಿಟನ್‌ಗಳನ್ನು ಬಿಟ್ಟು ಇಡೀ ಯೂರೋಪ್); 2) ಗ್ರೇಟ್ ಬ್ರಿಟನ್; 3) ರಷ್ಯ; 4) ಪೂರ್ವ ಏಷ್ಯ; 5) ಅಮೆರಿಕ. ಅವರು ವಸಾಹತುಗಳನ್ನು ಅವು ಯಾವ ರಾಜ್ಯಗಳಿಗೆ ಸೇರಿವೆಯೋ ಆ ರಾಜ್ಯಗಳ "ಕ್ಷೇತ್ರ"ಗಳಲ್ಲಿ ಸೇರಿಸಿದ್ದಾರೆ ಮತ್ತು ಕ್ಷೇತ್ರಗಳಿಗನುಗುಣವಾಗಿ ಹಂಚಲ್ಪಡದಿರುವ ಏಷ್ಯದಲ್ಲಿನ ಪರ್ಷಿಯ, ಆಫ್‌ಘಾನಿಸ್ತಾನ್ ಹಾಗೂ ಅರೇಬಿಯಾಗಳನ್ನೂ, ಆಫ್ರಿಕಾದಲ್ಲಿನ ಮೊರಾಕ್ಕೊ ಹಾಗೂ ಅಬಿಸೀನಿಯಾಗಳನ್ನೂ, ಇತ್ಯಾದಿ ಕೆಲವು ದೇಶಗಳನ್ನು "ಬಿಟ್ಟುಬಿಟ್ಟಿದ್ದಾರೆ."

ಈ ಪ್ರದೇಶಗಳಿಗೆ ಸಂಬಂಧಿಸಿ ಅವರು ಉದ್ಧರಿಸುವ ಆರ್ಥಿಕ ಮಾಹಿತಿಗಳು ಸ್ಥೂಲ ರೂಪದಲ್ಲಿ ಹೀಗಿವೆ:

| ಸಾರಿಗೆ | | ವ್ಯಾಪಾರ | ಕೈಗಾರಿಕೆ | | |
|---|---|---|---|---|---|
| ರೈಲ್ವೇ (ಸಾವಿರ ಕಿ.ಮೀ.ಗಳಲ್ಲಿ) | ವ್ಯಾಪಾರದ ಹಡಗುಗಳು (ಮಿಲಿಯ ಟನ್ನುಗಳಲ್ಲಿ) | ಆಮದು ಹಾಗೂ ರಫ್ತು (ಸಾವಿರ ಮಿಲಿಯ ಮಾರ್ಕುಗಳಲ್ಲಿ) | ಕಲ್ಲಿದ್ದಲಿನ ಉತ್ಪಾದನೆ (ಮಿಲಿಯ ಟನ್ನುಗಳಲ್ಲಿ) | ಬೀಡು ಕಬ್ಬಿಣದ ಉತ್ಪಾದನೆ (ಮಿಲಿಯ ಟನ್ನುಗಳಲ್ಲಿ) | ನೂಲಿನ ಕದಿರುಗಳ ಸಂಖ್ಯೆ (ಮಿಲಿಯ) |
| 204 | 8 | 41 | 251 | 15 | 26 |
| 140 | 11 | 25 | 249 | 9 | 51 |
| 63 | 1 | 3 | 16 | 3 | 7 |
| 8 | 1 | 2 | 8 | 0.02 | 2 |
| 379 | 6 | 14 | 245 | 14 | 19 |

*R. Calwer, *Einführung in die Weltwirtschaft*, Brl., 1906.

ಉನ್ನತವಾಗಿ ವಿಕಾಸಗೊಂಡ ಬಂಡವಾಳವಾದದ ಮೂರು ಕ್ಷೇತ್ರಗಳನ್ನು (ಸಾರಿಗೆ, ವಾಣಿಜ್ಯ, ಕೈಗಾರಿಕಾ ಸಾಧನಗಳು ಉನ್ನತಾಭಿವೃದ್ಧಿಗೊಂಡಿರುವ ಕ್ಷೇತ್ರಗಳನ್ನು) ನಾವು ಕಾಣುತ್ತೇವೆ: ಮಧ್ಯ ಯುರೋಪ್, ಬ್ರಿಟನ್ ಹಾಗೂ ಅಮೆರಿಕ. ಇಲ್ಲಿ ಮೂರು ರಾಜ್ಯಗಳು ಜಗತ್ತಿನ ಮೇಲೆ ಪ್ರಾಬಲ್ಯ ಹೊಂದಿವೆ – ಜರ್ಮನಿ, ಗ್ರೇಟ್ ಬ್ರಿಟನ್ ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನಗಳು. ಜರ್ಮನಿಯು ಅತ್ಯಂತ ಕಮ್ಮಿ ಕ್ಷೇತ್ರವನ್ನೂ ಕೆಲವೇ ವಸಾಹತುಗಳನ್ನೂ ಹೊಂದಿರುವುದರಿಂದಾಗಿ ಈ ಮೂರು ರಾಜ್ಯಗಳ ನಡುವೆ ಸಾಮ್ರಾಜ್ಯಶಾಹಿ ಪೈಪೋಟಿಯೂ ಹೋರಾಟವೂ ಅತ್ಯಂತ ತೀವ್ರ ವಾಗಿವೆ; "ಮಧ್ಯ ಯುರೋಪಿ"ನ ನಿರ್ಮಾಣವು ಇನ್ನೂ ಭವಿಷ್ಯತ್ತಿಗೆ ಸೇರಿದ ವಿಷಯುವಾಗಿದೆ, ಭೀಕರ ಹೋರಾಟದ ಮಧ್ಯೆ ಅದು ಜನ್ಮ ತಾಳುತ್ತಿದೆ. ಪ್ರಸ್ತುತ ದಲ್ಲಿ ಇಡೀ ಯುರೋಪಿನ ವಿಶಿಷ್ಟ ಲಕ್ಷಣವೆಂದರೆ, ರಾಜಕೀಯ ವಿಘಟನೆ. ಇದಕ್ಕೆ ವಿರುದ್ಧವಾಗಿ, ಬ್ರಿಟನ್ ಹಾಗೂ ಅಮೆರಿಕಗಳಲ್ಲಿ ರಾಜಕೀಯ ಕೇಂದ್ರೀಕರಣವು ಅತ್ಯುನ್ನತವಾಗಿ ಬೆಳೆದಿದೆ. ಆದರೆ ಮೊದಲನೆಯದರಲ್ಲಿ ಅಪಾರವಾದ ವಸಾಹತು ಗಳು, ಎರಡನೆಯದರಲ್ಲಿ ಅತ್ಯಂತ ಕಮ್ಮಿ ವಸಾಹತುಗಳು, ಇವುಗಳ ನಡುವೆ ಅಂತರ ಬಹು ವಿಶಾಲವಾಗಿದೆ. ವಸಾಹತುಗಳಲ್ಲಾದರೋ ಬಂಡವಾಳವಾದ ಇನ್ನೂ ವಿಕಾಸ ಗೊಳ್ಳತೊಡಗುತ್ತಲೇ ಇದೆ. ದಕ್ಷಿಣ ಅಮೆರಿಕಕ್ಕಾಗಿ ಹೋರಾಟವು ಹೆಚ್ಚು ತೀವ್ರ ವಾಗುತ್ತಲೇ ಇದೆ.

ಎರಡು ಕ್ಷೇತ್ರಗಳಲ್ಲಿ ಬಂಡವಾಳವಾದವು ಸ್ವಲ್ಪವಷ್ಟೆ ಬೆಳೆದಿದೆ – ರಷ್ಯ ಹಾಗೂ ಪೂರ್ವ ವಿಷ್ಯಗಳಲ್ಲಿ. ರಷ್ಯದಲ್ಲಿ ಜನಸಾಂದ್ರತೆ ತುಂಬ ಕಮ್ಮಿ, ಪೂರ್ವ ವಿಷ್ಯದಲ್ಲಿ ಅದು ತುಂಬ ಹೆಚ್ಚು; ರಷ್ಯದಲ್ಲಿ ರಾಜಕೀಯ ಕೇಂದ್ರೀಕರಣ ಉನ್ನತವಾಗಿದೆ, ಪೂರ್ವ ವಿಷ್ಯದಲ್ಲಿ ಅದು ಇಲ್ಲ; ಚೀಣಾದ ವಿಭಜನೆ ಈಗಷ್ಟೆ ಪ್ರಾರಂಭವಾಗಿದೆ. ಅದಕ್ಕಾಗಿ ಜಪಾನ್, ಅಮೆರಿಕದ ಸಂಯುಕ್ತ ಸಂಸ್ಥಾನಗಳು ಇತ್ಯಾದಿ ದೇಶಗಳ ನಡುವೆ ಹೋರಾಟವು ಸತತವಾಗಿ ತೀವ್ರಗೊಳ್ಳುತ್ತಿದೆ.

ಈ ವಾಸ್ತವಿಕತೆಯನ್ನು – ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಗಳ ವಿಶಾಲ ವೈವಿಧ್ಯತೆ, ನಾನಾ ದೇಶಗಳ ಬೆಳವಣಿಗೆಯ ಗತಿಯಲ್ಲಿ ತುಂಬ ವ್ಯತ್ಯಾಸ, ಇತ್ಯಾದಿ ಗಳು, ಸಾಮ್ರಾಜ್ಯಶಾಹಿ ರಾಜ್ಯಗಳ ನಡುವೆ ಉಗ್ರ ಹೋರಾಟಗಳು, ಈ ವಾಸ್ತವಿ ಕತೆಯನ್ನು – ಕೌತ್‌ಸ್ಕಿಯವರ "ಶಾಂತಿಯುತ" ಅತೀತ-ಸಾಮ್ರಾಜ್ಯವಾದ ಕುರಿ ತಾದ ಅವಿವೇಕದ ಸಣ್ಣ ಕಟ್ಟುಕಥೆಯೊಂದಿಗೆ ಹೋಲಿಸಿ ನೋಡಿ. ಇದು ದಿಗಿಲು ಗೊಂಡ ಸಂಕುಚಿತಮತಿಯೊಬ್ಬ ನಿಷ್ಠುರವಾದ ವಾಸ್ತವಿಕತೆಯಿಂದ ಅವಿತುಕೊಳ್ಳಲು ಮಾಡುವ ಪ್ರತಿಗಾಮಿ ಯತ್ನವಲ್ಲವೇ? ಕೌತ್‌ಸ್ಕಿಯವರು "ಅತೀತ-ಸಾಮ್ರಾಜ್ಯ ವಾದ"ದ ಭ್ರೂಣಗಳು ಎಂದು (ಪ್ರಯೋಗಶಾಲೆಯಲ್ಲಿ ಗುಳಿಗೆಗಳನ್ನು ತಯಾರಿಸು ವುದನ್ನು ಭ್ರೂಣಾವಸ್ಥೆಯಲ್ಲಿರುವ ಅತೀತ-ಕೃಷಿ ಎಂದು ವಿವರಿಸಲು "ಸಾಧ್ಯ" ವಿರುವ ರೀತಿಯಲ್ಲೀ) ಕಲ್ಪಿಸಿಕೊಂಡಿರುವಂಥ ಅಂತರರಾಷ್ಟ್ರೀಯ ಕಾರ್ಟೆಲ್‌ಗಳು ಜಗತ್ತಿನ ವಿಭಜನೆ ಹಾಗೂ ಪುನರ್‌ವಿಭಜನೆಗೆ ಒಂದು ನಿದರ್ಶನವಲ್ಲವೇ? ಅವು ಶಾಂತಿಯುತ ವಿಭಜನೆಯಿಂದ ಶಾಂತಿಯುತವಲ್ಲದ ವಿಭಜನೆಗೆ ಮತ್ತು ಶಾಂತಿಯುತ

ವಲ್ಲದ ವಿಭಜನೆಯಿಂದ ಶಾಂತಿಯುತ ವಿಭಜನೆಗೆ ಪರಿವರ್ತನೆಗೆ ಒಂದು ನಿದರ್ಶನ ವಲ್ಲವೇ? ಅಂತರರಾಷ್ಟ್ರೀಯ ರೈಲು ಸಿಂಡಿಕೇಟಿನ ನಿರ್ಮಾಣದಲ್ಲಾಗಲೀ, ಅಂತರ ರಾಷ್ಟ್ರೀಯ ವಾಣಿಜ್ಯ ನೌಕಾ ಸಾರಿಗೆ ಟ್ರಸ್ಟಿನ ರಚನೆಯಲ್ಲಾಗಲೀ ಅಮೆರಿಕದ ಮತ್ತಿತರ ದೇಶಗಳ ಹಣಕಾಸು ಬಂಡವಾಳವು ಜರ್ಮನಿಯೊಂದಿಗೆ ಕೂಡಿಕೊಂಡು ಇಡೀ ಜಗತ್ತನ್ನು ವಿಭಜಿಸಿದ ಮೇಲೆ ಈಗ ಸಂಪೂರ್ಣವಾಗಿ ಶಾಂತಿಯುತವೇನೂ ಅಲ್ಲದ ವಿಧಾನಗಳ ಮೂಲಕ ಬದಲಿಸಲ್ಪಡುತ್ತಿರುವ ಶಕ್ತಿಗಳ ಒಂದು ಹೊಸ ಸಂಬಂಧದ ಆಧಾರದ ಮೇಲೆ ಜಗತ್ತಿನ ಪುನರ್‌ವಿಭಜನೆಯಲ್ಲಿ ತೊಡಗಿಲ್ಲವೇ?

ಹಣಕಾಸು ಬಂಡವಾಳವೂ ಟ್ರಸ್ಟುಗಳೂ ಜಾಗತಿಕ ಆರ್ಥಿಕತೆಯ ನಾನಾ ಭಾಗಗಳ ಬೆಳವಣಿಗೆಯ ಗತಿಯಲ್ಲಿ ವ್ಯತ್ಯಾಸಗಳನ್ನು ಕಮ್ಮಿ ಮಾಡುವುದಿಲ್ಲ, ಆದರೆ ಹೆಚ್ಚಿಸುತ್ತವೆ. ಒಮ್ಮೆ ಶಕ್ತಿಗಳ ಸಂಬಂಧವು ಬದಲಾಯಿತೆಂದರೆ, ಬಂಡವಾಳವಾದದಲ್ಲಿನ ವೈರುಧ್ಯಗಳಿಗೆ ಶಕ್ತಿ ಪ್ರಯೋಗ ಅಲ್ಲದೆ ಬೇರಾವ ಪರಿಹಾರ ಸಾಧ್ಯ? ಜಾಗತಿಕ ಆರ್ಥಿಕತೆಯಲ್ಲಿ ಬಂಡವಾಳವಾದದ ಹಾಗೂ ಹಣಕಾಸು ಬಂಡವಾಳದ ಬೆಳವಣಿಗೆಯ ವಿವಿಧ ದರಗಳಿಗೆ ಸಂಬಂಧಿಸಿ ರೈಲು ಮಾರ್ಗಗಳ ಕುರಿತ ಅಂಕಿಅಂಶಗಳು* ಅದ್ಭುತವಾಗಿ ಕರಾರುವಾಕ್ಕಾದ ಆಧಾರಾಂಶಗಳನ್ನು ಒದಗಿಸುತ್ತವೆ. ಸಾಮ್ರಾಜ್ಯಶಾಹಿ ಬೆಳವಣಿಗೆಯ ಕೊನೆಯ ದಶಕಗಳಲ್ಲಿ ರೈಲು ಮಾರ್ಗಗಳ ಒಟ್ಟು ಉದ್ದ ಈ ಕೆಳಗಿನಂತೆ ಬದಲಾಗಿದೆ:

ರೈಲು ಮಾರ್ಗಗಳು
(ಸಾವಿರ ಕಿ.ಮೀ.ಗಳಲ್ಲಿ)

<table>
<tr><th></th><th colspan="2">1890</th><th colspan="2">1913</th><th colspan="2">+</th></tr>
<tr><td>ಯೂರೋಪು . . . . . .</td><td colspan="2">224</td><td colspan="2">346</td><td colspan="2">+122</td></tr>
<tr><td>ಅಮೆರಿಕದ ಸಂಯುಕ್ತ ಸಂಸ್ಥಾನಗಳು . . . .</td><td colspan="2">268</td><td colspan="2">411</td><td colspan="2">+143</td></tr>
<tr><td>ಎಲ್ಲ ವಸಾಹತುಗಳು . . .</td><td>82</td><td rowspan="2">125</td><td>210</td><td rowspan="2">347</td><td>+128</td><td rowspan="2">+222</td></tr>
<tr><td>ಏಷ್ಯ ಹಾಗೂ ಅಮೆರಿಕಗಳ ಸ್ವತಂತ್ರ ಹಾಗೂ ಅರೆಸ್ವತಂತ್ರ ರಾಜ್ಯಗಳು . . . . . .</td><td>43</td><td>137</td><td>+ 94</td></tr>
<tr><td>ಮೊತ್ತ . . . . . . .</td><td colspan="2">617</td><td colspan="2">1,104</td><td colspan="2"></td></tr>
</table>

*Stat. Jahrbuch für das Deutsche Reich*, 1915; *Archiv für Eisenbahnwesen*, 1892 ('ಜರ್ಮನ್ ಸಾಮ್ರಾಜ್ಯದ ಅಂಕಿಅಂಶ ವಾರ್ಷಿಕ ಗ್ರಂಥ,' 1915; 'ರೈಲ್ವೇ ದಾಖಲೆ ಪತ್ರಗಳು,' 1892) 1890ರಲ್ಲಿ ನಾನಾ ದೇಶಗಳ ವಸಾಹತುಗಳ ಮಧ್ಯೆ ರೈಲು ಮಾರ್ಗಗಳ ಹಂಚಿಕೆಗೆ ಸಂಬಂಧಿಸಿದ ಸಣ್ಣಪುಟ್ಟ ವಿವರಗಳನ್ನು ಸರಿಸುಮಾರಾಗಷ್ಟೆ ಅಂದಾಜು ಮಾಡಬೇಕಾಗಿ ಬಂದಿತು.

ಹೀಗೆ, ರೈಲು ಮಾರ್ಗಗಳ ಬೆಳವಣಿಗೆಯು ವಸಾಹತುಗಳಲ್ಲೂ ಏಷ್ಯ ಹಾಗೂ ಅಮೆರಿಕಗಳ ಸ್ವತಂತ್ರ (ಹಾಗೂ ಅರೆ ಸ್ವತಂತ್ರ) ರಾಜ್ಯಗಳಲ್ಲೂ ಅತ್ಯಂತ ವೇಗವಾಗಿದೆ. ಇಲ್ಲಿ, ನಮಗೆ ತಿಳಿದಿರುವಂತೆ, ಅತ್ಯಂತ ದೊಡ್ಡ ನಾಲ್ಕು ಅಥವಾ ಐದು ಬಂಡವಾಳಶಾಹಿ ರಾಜ್ಯಗಳ ಹಣಕಾಸು ಬಂಡವಾಳವು ಅನಿರ್ಬಂಧಿತವಾದ ರಾಜ್ಯಭಾರ ನಡೆಸುತ್ತಿದೆ. ವಸಾಹತುಗಳಲ್ಲೂ ಏಷ್ಯ ಅಮೆರಿಕಗಳ ಇತರ ದೇಶಗಳಲ್ಲೂ ಎರಡು ಲಕ್ಷ ಕಿ.ಮೀ.ಗಳ ಹೊಸ ರೈಲು ಮಾರ್ಗಗಳೆಂದರೆ 40 ಸಾವಿರ ಮಿಲಿಯ ಮಾರ್ಕುಗಳಿಗೂ ಹೆಚ್ಚು ಬಂಡವಾಳ ಎಂದಾಗುತ್ತದೆ. ಈ ಬಂಡವಾಳವು ವಿಶೇಷವಾಗಿ ಅನುಕೂಲವಾದ ಷರತ್ತುಗಳ ಮೇಲೆ ಉತ್ತಮ ಪ್ರತಿಫಲದ ವಿಶೇಷ ಖಾತರಿಗಳೊಂದಿಗೆ ಮತ್ತು ಉಕ್ಕಿನ ಕರ್ಮಾಗಾರಗಳಿಗಾಗಿ ಲಾಭದಾಯಕ ಆರ್ಡರುಗಳು ಇತ್ಯಾದಿ ಇತ್ಯಾದಿಗಳೊಂದಿಗೆ ಹೊಸದಾಗಿ ಹಾಕಲಾದ ಬಂಡವಾಳವಾಗಿದೆ.

ಬಂಡವಾಳವಾದವು ವಸಾಹತುಗಳಲ್ಲೂ ಸಾಗರೋತ್ತರ ದೇಶಗಳಲ್ಲೂ ಅತ್ಯಂತ ಹೆಚ್ಚಿನ ವೇಗದಲ್ಲಿ ಬೆಳೆಯುತ್ತಿದೆ. ಈ ಸಾಗರೋತ್ತರ ದೇಶಗಳಲ್ಲಿ ಹೊಸ ಸಾಮ್ರಾಜ್ಯಶಾಹಿ ಬೃಹತ್ ರಾಷ್ಟ್ರಗಳು ಉದಯಿಸುತ್ತಿವೆ (ಉದಾ. ಜಪಾನ್). ಜಾಗತಿಕ ಸಾಮ್ರಾಜ್ಯಶಾಹಿಗಳ ನಡುವಿನ ಹೋರಾಟವು ಹೆಚ್ಚು ತೀವ್ರವಾಗುತ್ತಿದೆ. ಅತ್ಯಂತ ಲಾಭದಾಯಕವಾದ ವಸಾಹತು ಹಾಗೂ ಸಾಗರೋತ್ತರ ಉದ್ಯಮಗಳ ಮೇಲೆ ಹಣಕಾಸು ಬಂಡವಾಳವು ವಿಧಿಸುವ ಪೊಗದಿಯೂ ಹೆಚ್ಚುತ್ತಿದೆ. ಈ "ಸೂರೆ"ಯ ಹಂಚಿಕೆಯಲ್ಲಿ ವಿಶೇಷವಾಗಿ ದೊಡ್ಡದಾದ ಭಾಗವು, ಉತ್ಪಾದಕ ಶಕ್ತಿಗಳ ಬೆಳವಣಿಗೆಯ ಶೀಘ್ರತೆಗೆ ಸಂಬಂಧಿಸಿ ಯಾವಾಗಲೂ ಪಟ್ಟಿಯ ಮೇಲಿನ ಸ್ಥಾನದಲ್ಲೇನೂ ಇರದಂಥ ದೇಶಗಳಿಗೆ ಹೋಗುತ್ತದೆ. ಅತ್ಯಂತ ದೊಡ್ಡ ದೇಶಗಳ ಪ್ರಸಂಗದಲ್ಲಿ, ಅವುಗಳ ವಸಾಹತುಗಳನ್ನೂ ಜೊತೆಗೆ ಪರಿಗಣಿಸಿದಾಗ, ರೈಲು ಮಾರ್ಗಗಳ ಒಟ್ಟು ಉದ್ದ ಈ ಕೆಳಗಿನಂತಿದ್ದಿತು:

(ಸಾವಿರ ಕಿಲೋಮೀಟರುಗಳಲ್ಲಿ)

| | 1890 | 1913 | |
|---|---|---|---|
| ಅಮೆರಿಕದ ಸಂಯುಕ್ತ ಸಂಸ್ಥಾನಗಳು . . . | 268 | 413 | +145 |
| ಬ್ರಿಟಿಷ್ ಸಾಮ್ರಾಜ್ಯ . . . . . . . | 107 | 208 | +101 |
| ರಷ್ಯ . . . . . . . . . . . . | 32 | 78 | + 46 |
| ಜರ್ಮನಿ . . . . . . . . . . | 43 | 68 | + 25 |
| ಫ್ರಾನ್ಸ್ . . . . . . . . . . | 41 | 63 | + 22 |
| 5 ಬೃಹತ್ ರಾಷ್ಟ್ರಗಳ ಮೊತ್ತ . . . . | 491 | 830 | +339 |

ಹೀಗೆ, ಅಸ್ತಿತ್ವದಲ್ಲಿರುವ ಒಟ್ಟು ರೈಲು ಮಾರ್ಗಗಳಲ್ಲಿ ಸುಮಾರು ಶೇ. 80ರಷ್ಟು ಐದು ಅತ್ಯಂತ ದೊಡ್ಡ ರಾಷ್ಟ್ರಗಳಲ್ಲೇ ಕೇಂದ್ರೀಕೃತವಾಗಿದೆ. ಆದರೆ ಈ ರೈಲು ಮಾರ್ಗಗಳ ಒಡೆತನದ ಸಾಂದ್ರೀಕರಣವು, ಹಣಕಾಸು ಬಂಡವಾಳದ ಕೇಂದ್ರೀಕರಣವು, ಇನ್ನೂ ಹೆಚ್ಚು ಅಗಣಿತವಾಗಿ ಹೆಚ್ಚಾಗಿದೆ, ಏಕೆಂದರೆ, ಉದಾಹರಣೆಗೆ, ಫ್ರೆಂಚ್ ಹಾಗೂ ಇಂಗ್ಲಿಷ್ ಲಕ್ಷಾಧಿಪತಿಗಳು ಅಮೆರಿಕನ್, ರಷ್ಯನ್ ಮತ್ತಿತರ ರೈಲ್ವೇಗಳಲ್ಲಿ ಅಪಾರ ಪ್ರಮಾಣದ ಷೇರುಗಳನ್ನೂ ಬಾಂಡುಗಳನ್ನೂ ಹೊಂದಿದ್ದಾರೆ.

ತನಗೆ ವಸಾಹತುಗಳು ಇದ್ದಿದ್ದುದರ ಫಲವಾಗಿ ಗ್ರೇಟ್ ಬ್ರಿಟನ್ "ತನ್ನ" ರೈಲು ಮಾರ್ಗಗಳ ಉದ್ದವನ್ನು 100,000 ಕಿ.ಮೀ.ಗಳಷ್ಟು, ಜರ್ಮನಿಗಿಂತ 4 ಪಟ್ಟು ಮೀರಿ ಹೆಚ್ಚಿಸಿಕೊಂಡಿದೆ. ಆದರೂ ಈ ಕಾಲಾವಧಿಯಲ್ಲಿ ಜರ್ಮನಿಯಲ್ಲಿ ಉತ್ಪಾದಕ ಶಕ್ತಿಗಳ ಬೆಳವಣಿಗೆಯು, ಅದರಲ್ಲೂ ವಿಶೇಷವಾಗಿ ಕಲ್ಲಿದ್ದಲು ಹಾಗೂ ಕಬ್ಬಿಣ ಕೈಗಾರಿಕೆಗಳ ಬೆಳವಣಿಗೆಯು, ಇಂಗ್ಲೆಂಡಿನಲ್ಲಾದುದಕ್ಕಿಂತ ಅಗಣಿತವಾಗಿ ಹೆಚ್ಚು ಶೀಘ್ರಗತಿಯಲ್ಲಿ ಜರುಗಿತು – ಇನ್ನು ಫ್ರಾನ್ಸ್ ಹಾಗೂ ರಷ್ಯಗಳ ವಿಷಯ ಹೇಳಬೇಕಾಗಿಯೇ ಇಲ್ಲ. 1892ರಲ್ಲಿ ಜರ್ಮನಿಯು 49 ಲಕ್ಷ ಟನ್ ಬೀಡು ಕಬ್ಬಿಣವನ್ನು ಉತ್ಪಾದಿಸಿದರೆ ಗ್ರೇಟ್ ಬ್ರಿಟನ್ 68 ಲಕ್ಷ ಟನ್ ಉತ್ಪಾದಿಸಿತು. 1912ರಲ್ಲಿ ಜರ್ಮನಿಯು 17,600,000 ಟನ್, ಗ್ರೇಟ್ ಬ್ರಿಟನ್ 9,000,000 ಟನ್ ಉತ್ಪಾದಿಸಿದವು. ಆದ್ದರಿಂದ ಇದಕ್ಕೆ ಸಂಬಂಧಿಸಿ ಜರ್ಮನಿಯು ಇಂಗ್ಲೆಂಡಿನ ಮೇಲೆ ಪಾರಮ್ಯತೆ ಪಡೆದಿದ್ದಿತು !* ಗಮನಿಸಬೇಕಾದ ಮುಖ್ಯ ವಿಷಯವೆಂದರೆ, ಒಂದು ಕಡೆ ಉತ್ಪಾದಕ ಶಕ್ತಿಗಳ ಬೆಳವಣಿಗೆಗೂ ಬಂಡವಾಳದ ಸಂಚಯಕ್ಕೂ ನಡುವಿನ ಅಸಾಂಗತ್ಯವನ್ನೂ, ಮತ್ತೊಂದು ಕಡೆ ವಸಾಹತುಗಳ ವಿಭಜನೆಗೂ ಹಣಕಾಸು ಬಂಡವಾಳಕ್ಕಾಗಿ "ಪ್ರಭಾವ ವಲಯಗಳಿ"ಗೂ ನಡುವಿನ ಅಸಾಂಗತ್ಯವನ್ನೂ, ತೊಡೆದು ಹಾಕಲು ಬಂಡವಾಳವಾದಿ ವ್ಯವಸ್ಥೆಯಲ್ಲಿ ಯುದ್ಧವಲ್ಲದೆ ಬೇರಾವ ಮಾರ್ಗ ಇರಲು ಸಾಧ್ಯ?

## VIII. ಬಂಡವಾಳವಾದಿ ಪದ್ಧತಿಯ ಪರೋಪಜೀವಿ ಸ್ವಭಾವ ಹಾಗೂ ಅದರ ಕ್ಷಯಿಸುವಿಕೆ

ಈಗ ನಾವು ಸಾಮ್ರಾಜ್ಯವಾದದ ಮತ್ತೊಂದು ಅತ್ಯಂತ ಮುಖ್ಯ ಲಕ್ಷಣವನ್ನು ಪರಿಶೀಲಿಸಬೇಕು. ಸಾಮ್ರಾಜ್ಯವಾದದ ಬಗೆಗೆ ಮಾಡಲಾಗಿರುವ ಅತ್ಯಂತ ಹೆಚ್ಚಿನ

---

**Journal of the Royal Statistical Society* ('ರಾಯಲ್ ಸ್ಟಾಟಿಸ್ಟಿಕಲ್ ಸೊಸೈಟಿಯ ಪತ್ರಿಕೆ.' – ಸಂ.)ಯಲ್ಲಿ Edgar Crammond, *The Economic*

ಚಿಂತನೆಗಳಲ್ಲಿ ಈ ಲಕ್ಷಣಕ್ಕೆ ಸಾಮಾನ್ಯವಾಗಿ ಸಾಕಷ್ಟು ಪ್ರಾಮುಖ್ಯ ನೀಡಿಲ್ಲ. ಮಾರ್ಕ್ಸ್‌ವಾದಿ ಹಿಲ್ಫೆರ್ಡಿಂಗ್‌ರ ನ್ಯೂನತೆಗಳಲ್ಲೊಂದು ಈ ಅಂಶಕ್ಕೆ ಸಂಬಂಧಿಸಿ ಅವರು ಮಾರ್ಕ್ಸ್‌ವಾದಿ ಅಲ್ಲದ ಹಾಬ್ಸನ್‌ರಿಗೆ ಹೋಲಿಸಿದಂತೆ ಒಂದು ಹೆಜ್ಜೆ ಹಿಂದಿಟ್ಟಿದ್ದಾರೆ ಎಂಬುದಾಗಿದೆ. ನಾವಿಲ್ಲಿ ಉಲ್ಲೇಖಿಸುತ್ತಿರುವುದು ಸಾಮ್ರಾಜ್ಯವಾದದ ವಿಶಿಷ್ಟ ಲಕ್ಷಣವಾದ ಪರೋಪಜೀವಿ ಸ್ವಭಾವಕ್ಕೆ.

ನಾವಾಗಲೇ ತಿಳಿದಿರುವಂತೆ ಸಾಮ್ರಾಜ್ಯವಾದದ ಅತ್ಯಂತ ದೃಢವಾದ ಆರ್ಥಿಕ ಅಡಿಪಾಯವೆಂದರೆ ಏಕಸ್ವಾಮ್ಯ. ಇದು ಬಂಡವಾಳಶಾಹಿ ಏಕಸ್ವಾಮ್ಯ, ಅಂದರೆ ಬಂಡವಾಳವಾದದಿಂದ ಬೆಳೆದು ಬಂದಂಥ ಮತ್ತು ಬಂಡವಾಳವಾದದ ಸರಕು ಉತ್ಪಾದನೆ ಹಾಗೂ ಸ್ಪರ್ಧೆ ಇವುಗಳ ಸಾಮಾನ್ಯ ವಾತಾವರಣದಲ್ಲಿ ಈ ಸಾಮಾನ್ಯ ವಾತಾವರಣಕ್ಕೆ ಶಾಶ್ವತವಾದ ಹಾಗೂ ಅಪರಿಹಾರ್ಯವಾದ ವೈರುಧ್ಯವಾಗಿ ಅಸ್ತಿತ್ವದಲ್ಲಿರುವಂಥ ಏಕಸ್ವಾಮ್ಯವಾಗಿದೆ. ಆದಾಗ್ಯೂ ಎಲ್ಲ ಏಕಸ್ವಾಮ್ಯಗಳಂತೆ ಇದೂ ಅನಿವಾರ್ಯವಾಗಿಯೇ ಸ್ಥಗಿತತೆ ಹಾಗೂ ಕ್ಷಯಿಸುವಿಕೆಯ ಪ್ರವೃತ್ತಿಯನ್ನು ಉಂಟು ಮಾಡುತ್ತದೆ. ಏಕಸ್ವಾಮ್ಯ ಬೆಲೆಗಳನ್ನು ಸ್ಥಾಪಿಸಲಾಗುವುದರಿಂದ ತಾತ್ಕಾಲಿಕವಾಗಿ ಯಾದರೂ ಸರಿ, ತಾಂತ್ರಿಕ ಹಾಗೂ ತತ್ಫಲವಾಗಿ ಇತರೆಲ್ಲ ಪ್ರಗತಿಯನ್ನು ಮುನ್ನಡೆಯನ್ನು ಪ್ರೇರಿಸುವ ಕಾರಣವು ಸ್ವಲ್ಪಮಟ್ಟಿಗೆ ಕಣ್ಮರೆಯಾಗುತ್ತದೆ. ಅಷ್ಟೇ ಅಲ್ಲ, ತಾಂತ್ರಿಕ ಪ್ರಗತಿಯನ್ನು ಉದ್ದೇಶಪೂರ್ವಕವಾಗಿಯೇ ತಡೆಹಿಡಿಯುವ ಆರ್ಥಿಕ ಸಾಧ್ಯತೆಯೂ ಉದ್ಭವಿಸುತ್ತದೆ. ಉದಾಹರಣೆಗೆ ಅಮೆರಿಕದಲ್ಲಿ ಓವೆನ್ಸ್ ಎಂಬುವರೊಬ್ಬರು ಸೀಸೆಗಳ ತಯಾರಿಕೆಯನ್ನು ಕ್ರಾಂತಿಕಾರಿಗೊಳಿಸಿದಂಥ ಯಂತ್ರವೊಂದನ್ನು ಆವಿಷ್ಕರಿಸಿದರು. ಜರ್ಮನ್ ಸೀಸೆ ತಯಾರಿಸುವ ಉದ್ಯಮಿಗಳ ಕಾರ್ಟೆಲ್ ಓವೆನ್ಸ್‌ರಿಂದ ಈ ಪೇಟೆಂಟನ್ನು ಕೊಂಡುಕೊಂಡಿತು, ಆದರೆ ಅದನ್ನು ಉಪಯೋಗಕ್ಕೆ ತರದೆಯೇ ಹಾಗೆಯೇ ಗೂಡಿನಲ್ಲಿಟ್ಟು ಬಿಟ್ಟಿತು. ಬಂಡವಾಳವಾದಿ ವ್ಯವಸ್ಥೆಯಲ್ಲಿ ಏಕಸ್ವಾಮ್ಯವು ಎಂದಿಗೂ ಸಂಪೂರ್ಣವಾಗಿ ಹಾಗೂ ದೀರ್ಘಕಾಲದವರೆಗೆ ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧೆಯನ್ನು ತೊಡೆದುಹಾಕಲಾರದೆಂಬುದು ಖಂಡಿತ. (ಅಂದಹಾಗೆ ಅತೀತ-ಸಾಮ್ರಾಜ್ಯವಾದದ ಸಿದ್ಧಾಂತವು ಏಕೆ ಅಷ್ಟು ಅವಿವೇಕದ್ದೆಂಬುದಕ್ಕೆ ಇದೂ ಒಂದು ಕಾರಣ.) ತಾಂತ್ರಿಕ ಸುಧಾರಣೆಗಳನ್ನು ಜಾರಿಗೆ ತರುವ ಮೂಲಕ ಉತ್ಪಾದನೆಯ ವೆಚ್ಚವನ್ನು ಕಮ್ಮಿ ಮಾಡಿ ಲಾಭ ಹೆಚ್ಚಿಸುವ ಸಾಧ್ಯತೆಯು ಆವಿಷ್ಕರಣೆಗಳಿಗೆ ಪ್ರೇರಕವಾಗಿ ಕಾರ್ಯ ಜರುಗಿಸುತ್ತದೆಂಬುದು ಖಂಡಿತವೇ. ಆದರೆ ಏಕಸ್ವಾಮ್ಯದ ವಿಶಿಷ್ಟ ಲಕ್ಷಣವಾದ ಸ್ಥಗಿತತೆ ಹಾಗೂ ಕ್ಷಯಿಸುವಿಕೆಯೂ ಕಾರ್ಯ ಜರುಗಿ

---

*Relations of the British and German Empires*(ಎಡ್ಗಾರ್ ಕ್ರಮಾಂಡ್, 'ಬ್ರಿಟಿಷ್ ಹಾಗೂ ಜರ್ಮನ್ ಸಾಮ್ರಾಜ್ಯಗಳ ಆರ್ಥಿಕ ಸಂಬಂಧಗಳು.' – ಸಂ.) ಲೇಖನವನ್ನೂ ನೋಡಿ, ಜುಲೈ 1914, ಪು. 777 ಮತ್ತು ಅನಂತರ.

ಸುತ್ತಲೇ ಇರುತ್ತದೆ ಮತ್ತು ಕೈಗಾರಿಕೆಯ ಕೆಲವು ಶಾಖೆಗಳಲ್ಲಿ, ಕೆಲವು ದೇಶಗಳಲ್ಲಿ ಕೆಲವು ಕಾಲಾವಧಿಗಳಲ್ಲಿ ಅದು ಮೇಲುಗೈ ಪಡೆದುಕೊಳ್ಳುತ್ತದೆ.

ಅತ್ಯಂತ ವಿಸ್ತೃತವಾದ, ಸಿರಿವಂತವಾದ ಅಥವಾ ಒಳ್ಳೆಯ ಸ್ಥಳದಲ್ಲಿರುವ ವಸಾಹತುಗಳ ಏಕಸ್ವಾಮ್ಯ ಒಡೆತನವೂ ಅದೇ ದಿಶೆಯಲ್ಲಿ ಕಾರ್ಯ ಜರುಗಿಸುತ್ತದೆ.

ಅಷ್ಟೇ ಅಲ್ಲ, ಸಾಮ್ರಾಜ್ಯವಾದವು ಕೆಲವು ದೇಶಗಳಲ್ಲಿ ಹಣ ಬಂಡವಾಳದ ಅಪಾರ ಸಂಚಯವಾಗಿರುತ್ತದೆ. ಇದು, ನಾವು ಕಂಡಿರುವಂತೆ, ಸೆಕ್ಯೂರಿಟಿಗಳಲ್ಲಿ 100-150 ಸಾವಿರ ಮಿಲಿಯ ಫ್ರಾಂಕುಗಳಷ್ಟೂ ಆಗಿರುತ್ತದೆ. ಆದ್ದರಿಂದಲೇ ಒಂದು ವರ್ಗವು ಅಥವಾ ಲಾಭಾಂಶಜೀವಿಗಳ (ರಾಂಟ್ಯೆಗಳ), ಅಂದರೆ "ಕೂಪನ್ನುಗಳನ್ನು ಕತ್ತರಿಸುವ" ಮೂಲಕ ಜೀವಿಸುವ, ಯಾವ ಉದ್ಯಮದಲ್ಲೂ ಭಾಗವಹಿಸದ ಸೋಮಾರಿತನವೇ ವೃತ್ತಿಯಾಗಿರುವ ಜನರ, ಒಂದು ಸ್ತರವೇ ಅನ್ನಿ, ಅಸಾಧಾರಣವಾಗಿ ಬೆಳೆಯುವುದು. ಸಾಮ್ರಾಜ್ಯವಾದದ ಪ್ರಧಾನ ಆರ್ಥಿಕ ಬುನಾದಿಗಳಲ್ಲೊಂದಾದ ಬಂಡವಾಳದ ರಫ್ತು ಮಾಡುವಿಕೆಯು ಲಾಭಾಂಶಜೀವಿಗಳನ್ನು ಉತ್ಪಾದನೆಯಿಂದ ಇನ್ನೂ ಹೆಚ್ಚು ಪೂರ್ಣವಾಗಿ ಪ್ರತ್ಯೇಕಿಸುತ್ತದೆ ಮತ್ತು ಹಲವಾರು ಸಾಗರೋತ್ತರ ದೇಶಗಳ ಹಾಗೂ ವಸಾಹತುಗಳ ಶ್ರಮವನ್ನು ಶೋಷಿಸುವ ಮೂಲಕ ಜೀವಿಸಿಕೊಂಡಿರುವ ಇಡೀ ದೇಶದ ಮೇಲೆ ಪರೋಪಜೀವಿ ಸ್ವಭಾವದ ಮುದ್ರೆ ಒತ್ತುತ್ತದೆ.

"1893ರಲ್ಲಿ ಹೊರದೇಶಗಳಲ್ಲಿ ತೊಡಗಿಸಲಾದ ಬ್ರಿಟಿಷ್ ಬಂಡವಾಳದ ಪ್ರಮಾಣವು ಯುನೈಟೆಡ್ ಕಿಂಗ್‌ಡಮ್‌ನ ಒಟ್ಟು ಸಂಪತ್ತಿನ ಸುಮಾರು ಶೇ. 15ರಷ್ಟಾಗಿದ್ದಿತು"* ಎಂದು ಹಾಬ್ಸನ್ ಬರೆಯುತ್ತಾರೆ. 1915ರ ಹೊತ್ತಿಗೆ ಈ ಬಂಡವಾಳವು ಸುಮಾರು ಎರಡೂವರೆ ಪಟ್ಟು ಹೆಚ್ಚಿದ್ದಿತೆಂದು ನಾವು ಓದುಗರಿಗೆ ನೆನಪು ಮಾಡಿಕೊಡುತ್ತೇವೆ. "ತೆರಿಗೆದಾರರ ಮೇಲೆ ಭಾರಿ ಕರಭಾರ ಹೊರಿಸುವಂಥ, ಉದ್ಯಮಿಗಳಿಗೆ ಹಾಗೂ ವ್ಯಾಪಾರಗಾರರಿಗೆ ಕೇವಲ ಅಲ್ಪಮೌಲ್ಯದ್ದಾಗಿರುವಂಥ ಆಕ್ರಮಣಶೀಲ ಸಾಮ್ರಾಜ್ಯವಾದವು... ಬಂಡವಾಳ ಹಾಕಬಯಸುವವರಿಗೆ" (investorsಗೆ), "ಭಾರಿ ಲಾಭದ ಆಕರವಾಗಿರುತ್ತದೆ" ಎಂದು ಹಾಬ್ಸನ್ ಮುಂದುವರಿಯುತ್ತ ಹೇಳುತ್ತಾರೆ. "...ಗ್ರೇಟ್ ಬ್ರಿಟನ್ ತನ್ನ ಇಡೀ ವಿದೇಶಾಂಗ ಹಾಗೂ ವಸಾಹತು ವ್ಯಾಪಾರದಲ್ಲಿ ಕಮಿಷನ್ ಮೂಲಕವೂ, ಆಮದು ರಫ್ತುಗಳ ಮೂಲಕವೂ ಪಡೆಯುವ ವಾರ್ಷಿಕ ವರಮಾನವನ್ನು ಅಂಕಿಅಂಶತಜ್ಞ ಸರ್ ಆರ್. ಗಿಫೆನ್‌ರು 1899ಕ್ಕೆ 18 ಮಿಲಿಯ ಪೌಂಡ್ (ಸುಮಾರು 170 ಮಿಲಿಯ ರೂಬಲ್) ಎಂದು ಅಂದಾಜು ಮಾಡುತ್ತಾರೆ. ಒಟ್ಟು 800 ಮಿಲಿಯ ಪೌಂಡ್ ವ್ಯಾಪಾರ ಮೊತ್ತದ ಮೇಲೆ ಶೇ. 2.5ರಂತೆ ತೆಗೆದುಕೊಂಡು ಈ ಲೆಕ್ಕ ಮಾಡಲಾಗಿದೆ." ಈ ಮೊತ್ತವು

---

*Hobson, ಪೂರ್ವೋಕ್ತ ಗ್ರಂಥ, ಪು. 59, 62.

ಬಹುಭಾರಿಯದಾಗಿದ್ದರೂ ಅದೇನೂ ಆಕ್ರಮಣಶೀಲ ಸಾಮ್ರಾಜ್ಯವಾದಕ್ಕೆ ಪೂರ್ಣ ವಿವರಣೆ ನೀಡಲಾರದು. "ತೊಡಗಿಸಲಾದ" ಬಂಡವಾಳದಿಂದ ಪಡೆದ 90ರಿಂದ 100 ಮಿಲಿಯ ಪೌಂಡ್ ಸ್ಟರ್ಲಿಂಗ್ ವರಮಾನವು, ಲಾಭಾಂಶಜೀವಿಗಳ ವರಮಾನವು, ಅದಕ್ಕೆ ಪೂರ್ಣ ವಿವರಣೆ ನೀಡುತ್ತದೆ.

ಲಾಭಾಂಶಜೀವಿಗಳ ವರಮಾನವು ಜಗತ್ತಿನಲ್ಲೇ ಅತ್ಯಂತ ದೊಡ್ಡ "ವ್ಯಾಪಾರಿ" ದೇಶವು ವಿದೇಶಾಂಗ ವ್ಯಾಪಾರದಿಂದ ಪಡೆದ ವರಮಾನಕ್ಕಿಂತ ಐದು ಪಟ್ಟು ಹೆಚ್ಚಾಗಿದೆ! ಇದೇ ಸಾಮ್ರಾಜ್ಯವಾದದ ಹಾಗೂ ಸಾಮ್ರಾಜ್ಯವಾದಿ ಪರೋಪಜೀವಿ ಸ್ವಭಾವದ ಸಾರವಾಗಿದೆ.

ಈ ಕಾರಣದಿಂದಾಗಿಯೇ "ಲಾಭಾಂಶಜೀವಿ ರಾಜ್ಯ" (Rentnerstaat) ಅಥವಾ ದುಬಾರಿಬಡ್ಡಿ ವಿಧಿಸುವ ರಾಜ್ಯ, ಎಂಬ ಪದವು ಸಾಮ್ರಾಜ್ಯವಾದದ ವಿಷಯವನ್ನು ಪರಿಶೀಲಿಸುವ ಆರ್ಥಿಕ ಸಾಹಿತ್ಯದಲ್ಲಿ ಸಾಮಾನ್ಯ ಬಳಕೆಗೆ ಬರುತ್ತಿದೆ. ಕೆಲವೇ ದುಬಾರಿಬಡ್ಡಿ ವಿಧಿಸುವ ರಾಜ್ಯಗಳು ಹಾಗೂ ವಿಶಾಲ ಬಹುಸಂಖ್ಯೆಯ ಸಾಲಗಾರ ರಾಜ್ಯಗಳು ಎಂಬುದಾಗಿ ಜಗತ್ತು ವಿಭಜನೆಗೊಂಡಿದೆ. "ವಿದೇಶಗಳಲ್ಲಿ ತೊಡಗಿಸಲಾದ ಬಂಡವಾಳಗಳ ಪಟ್ಟಿಯಲ್ಲಿ ಮೊದಲು ರಾಜಕೀಯವಾಗಿ ಪರಾಧೀನವಾದ ಅಥವಾ ಆಶ್ರಿತ ದೇಶಗಳು ಬರುತ್ತವೆ: ಗ್ರೇಟ್ ಬ್ರಿಟನ್ನು ಇಜಿಪ್ಟ್, ಜಪಾನ್, ಚೀಣಾ ಮತ್ತು ದಕ್ಷಿಣ ಅಮೆರಿಕಗಳಿಗೆ ಸಾಲ ನೀಡುತ್ತದೆ" ಎಂದು ಷುಲ್ತ್ಸೆ-ಗೆವೆರ್ನಿತ್ಸ್ ಹೇಳುತ್ತಾರೆ. "ಈ ದೇಶಗಳಲ್ಲಿ ಗ್ರೇಟ್ ಬ್ರಿಟನ್ನಿನ ನೌಕಾದಳವು ಅವಶ್ಯಬಿದ್ದಾಗ ಕಂದಾಯ ವಸೂಲು ಮಾಡುವ ಕೆಲಸವನ್ನೂ ಮಾಡುತ್ತದೆ. ಗ್ರೇಟ್ ಬ್ರಿಟನ್ನಿನ ರಾಜಕೀಯ ಅಧಿಕಾರವು ತನ್ನ ದೇಶವನ್ನು ಅದರ ಸಾಲಗಾರರ ಕೋಪದಿಂದ ಕಾಪಾಡುತ್ತದೆ.* 'ಹೊರದೇಶಗಳಲ್ಲಿ ಬಂಡವಾಳ ತೊಡಗಿಸುವ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆ' ಎಂಬ ತಮ್ಮ ಗ್ರಂಥದಲ್ಲಿ ಸರ್ಟೋರಿಯಸ್ ಫೋನ್ ವಾಲ್ಟೆರ್ಸ್‌ಹೌಸೆನ್‌ರು ಹಾಲೆಂಡ್ ದೇಶವನ್ನು ಮಾದರಿ "ಲಾಭಾಂಶಜೀವಿ ರಾಜ್ಯ"ವನ್ನಾಗಿ ಉದ್ಧರಿಸುತ್ತಾರೆ ಮತ್ತು ಗ್ರೇಟ್ ಬ್ರಿಟನ್ ಹಾಗೂ ಫ್ರಾನ್ಸ್‌ಗಳು ಈಗ ಅಂತಹುವೇ ರಾಜ್ಯಗಳಾಗುತ್ತಿವೆ, ಎಂದು ತಿಳಿಸುತ್ತಾರೆ.** ಐದು ಕೈಗಾರಿಕಾ ರಾಜ್ಯಗಳು "ಪ್ರಧಾನವಾಗಿ ಸಾಲ ನೀಡುವ ದೇಶಗಳಾ"ಗಿವೆ ಎಂದು ಷಿಲ್ಡೆರ್ ಅಭಿಪ್ರಾಯಪಡುತ್ತಾರೆ. ಅವು

---

*Schulze-Gaevernitz, *Br. Imp.*, ಪು. 320 ಮತ್ತು ಅನಂತರ.

**Sart. von Waltershausen, *D. Volkswirt. Syst. etc.*, B., 1907, Buch IV (ಸರ್ಟೋರಿಯಸ್ ಫೋನ್ ವಾಲ್ಟೆರ್ಸ್‌ಹೌಸೆನ್, 'ಹೊರದೇಶಗಳಲ್ಲಿ ಬಂಡವಾಳ ತೊಡಗಿಸುವ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆ,' ಬರ್ಲಿನ್, 1907, ಭಾಗ 4.–ಸಂ).

ಗ್ರೇಟ್ ಬ್ರಿಟನ್, ಫ್ರಾನ್ಸ್, ಜರ್ಮನಿ, ಬೆಲ್ಜಿಯಂ ಹಾಗೂ ಸ್ವಿಟ್ಸರ್ಲೆಂಡ್. ಅವರು ಈ ಪಟ್ಟಿಯಲ್ಲಿ ಹಾಲೆಂಡನ್ನು ಸೇರಿಸಿಲ್ಲ, ಏಕೆಂದರೆ ಹಾಲೆಂಡ್ "ಕೈಗಾರಿಕಾ ದೃಷ್ಟಿಯಿಂದ ಅಲ್ಪಾಭಿವೃದ್ಧಿಗೊಂಡ" ದೇಶ.* ಸಂಯುಕ್ತ ಸಂಸ್ಥಾನಗಳು ಅಮೆರಿಕನ್ ದೇಶಗಳಿಗೆ ಮಾತ್ರ ಸಾಲ ನೀಡುವ ದೇಶವಾಗಿದೆ.

"ಗ್ರೇಟ್ ಬ್ರಿಟನ್ ಕ್ರಮೇಣ ಕೈಗಾರಿಕಾ ರಾಜ್ಯದಿಂದ ಸಾಲ ನೀಡುವ ರಾಜ್ಯವಾಗಿ ಪರಿವರ್ತಿತವಾಗುತ್ತಿದೆ" ಎಂದು ಷುಲ್ತ್ಸೆ-ಗೆವೆರ್ನಿತ್ಸ್ ಹೇಳುತ್ತಾರೆ. "ಕೈಗಾರಿಕಾ ಹುಟ್ಟುವಳಿಯಲ್ಲೂ ತಯಾರಿತ ವಸ್ತುಗಳ ರಫ್ತಿನಲ್ಲೂ ನಿರಪೇಕ್ಷ ಹೆಚ್ಚಳವಾಗಿದ್ದರೂ, ಇಡೀ ರಾಷ್ಟ್ರೀಯ ವರಮಾನದಲ್ಲಿ ಬಡ್ಡಿ ಹಾಗೂ ಲಾಭಾಂಶಗಳಿಂದಲೂ, ಸೆಕ್ಯೂರಿಟಿಗಳನ್ನು ಹೊರಡಿಸುವುದರಿಂದಲೂ, ಕಮಿಷನ್‌ಗಳಿಂದಲೂ ಮತ್ತು ಸಟ್ಟಾ ವ್ಯಾಪಾರದಿಂದಲೂ ಬರುವ ವರಮಾನದ ಪ್ರಾಮುಖ್ಯತೆಯು ಹೆಚ್ಚುತ್ತಿದೆ. ನನ್ನ ಅಭಿಪ್ರಾಯದಲ್ಲಿ ಇದೇ ಸಾಮ್ರಾಜ್ಯಶಾಹಿ ಏಳಿಗೆಗೆ ಆರ್ಥಿಕ ಆಧಾರವಾಗಿರುತ್ತದೆ. ಮಾರಾಟ ಮಾಡುವವರಿಗೂ ಕೊಳ್ಳುವವರಿಗೂ ನಡುವಿನ ಸಂಬಂಧಕ್ಕಿಂತ ಸಾಲ ಕೊಡುವವರ ಹಾಗೂ ಸಾಲ ತೆಗೆದುಕೊಳ್ಳುವವರ ನಡುವಿನ ಸಂಬಂಧವು ಹೆಚ್ಚು ದೃಢವಾಗಿರುತ್ತದೆ."** ಜರ್ಮನಿಗೆ ಸಂಬಂಧಿಸಿ, ಬರ್ಲಿನ್‌ನ 'ದಿ ಬ್ಯಾಂಕ್' ಪತ್ರಿಕೆಯ ಪ್ರಕಾಶಕರಾದ ಎ. ಲಾನ್ಸ್‌ಬುರ್ಗ್‌ರವರು 1911ರಲ್ಲಿ 'ಜರ್ಮನಿ ಒಂದು ಲಾಭಾಂಶಜೀವಿ ರಾಜ್ಯ' ಎಂಬ ಲೇಖನದಲ್ಲಿ ಕೆಳಗಿನಂತೆ ಬರೆದರು: "ಫ್ರಾನ್ಸಿನಲ್ಲಿ ಜನರು ಲಾಭಾಂಶಜೀವಿಗಳಾಗಲು ಹಾತೊರೆಯುತ್ತಿರುವುದನ್ನು ಜರ್ಮನಿಯಲ್ಲಿ ಜನರು ಆಗಾಗ್ಗೆ ಪರಿಹಾಸ್ಯ ಮಾಡುತ್ತಾರೆ. ಆದರೆ ಬೂರ್ಷ್ವಾಸೀಗೆ ಸಂಬಂಧಿಸಿರುವ ಮಟ್ಟಿಗೆ, ಜರ್ಮನಿಯಲ್ಲಿನ ಪರಿಸ್ಥಿತಿ ಹೆಚ್ಚು ಹೆಚ್ಚು ಫ್ರಾನ್ಸಿನಲ್ಲಿನ ಪರಿಸ್ಥಿತಿಯಂತೆಯೇ ಆಗುತ್ತಿದೆ."***

ಲಾಭಾಂಶಜೀವಿ ರಾಜ್ಯವು ಪರೋಪಜೀವಿ ಸ್ವಭಾವದ, ಕ್ಷಯಿಸುತ್ತಿರುವ, ಬಂಡವಾಳವಾದಿ ರಾಜ್ಯವಾಗಿದೆ. ಈ ಗುಣವು ಒಟ್ಟಿನಲ್ಲಿ ಸಂಬಂಧಪಟ್ಟ ಈ ದೇಶಗಳ ಎಲ್ಲ ಸಾಮಾಜಿಕ-ರಾಜಕೀಯ ಪರಿಸ್ಥಿತಿಗಳ ಮೇಲೂ, ನಿರ್ದಿಷ್ಟವಾಗಿ ಕಾರ್ಮಿಕ ವರ್ಗ ಚಳವಳಿಯಲ್ಲಿನ ಎರಡು ಮೂಲಭೂತ ಪ್ರವೃತ್ತಿಗಳ ಮೇಲೂ, ಪ್ರಭಾವ ಬೀರದೆ ಇರಲಾರದು. ಇದನ್ನು ಸಾಧ್ಯವಾದಷ್ಟೂ ಸ್ಪಷ್ಟವಾದ ರೀತಿಯಲ್ಲಿ ತೋರಿಸಿ ಕೊಡಲು ನಾವು ಅತ್ಯಂತ "ನಂಬಲರ್ಹ" ಸಾಕ್ಷಿಯಾದ ಹಾಬ್ಸನ್‌ರನ್ನು ಉದ್ಧರಿಸುವೆವು,

---

*Schilder, 'ಜಾಗತಿಕ ಆರ್ಥಿಕ ವ್ಯವಸ್ಥೆಯ ವಿಕಾಸದಲ್ಲಿನ ಪ್ರವೃತ್ತಿಗಳು,' ಬರ್ಲಿನ್, 1912, ಸಂ. 1, ಪು. 393.

**Schulze-Gaevernitz, *Br. Imp.* (ಷುಲ್ತ್ಸೆ-ಗೆವೆರ್ನಿತ್ಸ್, 'ಬ್ರಿಟಿಷ್ ಸಾಮ್ರಾಜ್ಯವಾದ,' ಪು. 122. – ಸಂ.).

****Die Bank*, 1911, 1, ಪು. 10-11.

9*

ಏಕೆಂದರೆ, ಅವರು "ಮಾರ್ಕ್ಸ್‌ವಾದಿ ಸಂಪ್ರದಾಯಬದ್ಧತೆ"ಯತ್ತ ಮನೋಒಲವು ಹೊಂದಿದ್ದಾರೆಂದು ಅನುಮಾನಿಸುವುದಕ್ಕೆ ಎಷ್ಟು ಮಾತ್ರವೂ ಅವಕಾಶವಿಲ್ಲ. ಮತ್ತೊಂದು ಕಡೆ, ಅವರೊಬ್ಬ ಇಂಗ್ಲಿಷ್‌ಮನ್ ಆಗಿದ್ದಾರೆ, ವಸಾಹತುಗಳನ್ನು ಹೊಂದಿರುವುದರಲ್ಲೂ, ಹಣಕಾಸು ಬಂಡವಾಳದಲ್ಲೂ, ಸಾಮ್ರಾಜ್ಯಶಾಹಿ ಅನುಭವ ದಲ್ಲೂ ಅತ್ಯಂತ ಸಿರಿವಂತವಾದ ಆ ದೇಶದಲ್ಲಿನ ಪರಿಸ್ಥಿತಿಯನ್ನು ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆ.

ಆಂಗ್ಲೋ-ಬೋಯರ್ ಯುದ್ಧದ ವಿಚಾರವನ್ನು ತಮ್ಮ ಮನಸ್ಸಿನಲ್ಲಿ ಇನ್ನೂ ಹಸುರಾಗಿಯೇ ಇಟ್ಟುಕೊಂಡಿದ್ದ ಹಾಬ್ಸನ್‌ರವರು ಸಾಮ್ರಾಜ್ಯವಾದಕ್ಕೂ "ಧನಾಧಿ ಪತಿಗಳ" ಹಿತಗಳಿಗೂ ನಡುವಿನ ಸಂಬಂಧವನ್ನು, ಕಾಂಟ್ರಾಕ್ಟ್‌ಗಳಿಂದಲೂ ಸರಬರಾಜು ಇತ್ಯಾದಿಗಳಿಂದಲೂ ಬರುವ ಲಾಭ ಹೆಚ್ಚುತ್ತಿರುವುದನ್ನು, ವಿವರಿಸುತ್ತ ಹೀಗೆ ಬರೆ ಯುತ್ತಾರೆ: "ಖಚಿತವಾಗಿಯೂ ಪರೋಪಜೀವಿ ಸ್ವಭಾವದ ಈ ನೀತಿಯ ನಿರ್ದೇಶ ಕರು ಬಂಡವಾಳಗಾರರಾಗಿದ್ದರೂ, ಇದೇ ಉದ್ದೇಶಗಳು ಕಾರ್ಮಿಕರ ವಿಶೇಷ ಸ್ತರಗಳಿಗೂ ಆಕರ್ಷಕವಾಗಿ ಕಾಣುತ್ತವೆ. ಅನೇಕ ನಗರಗಳಲ್ಲಿ ಅತ್ಯಂತ ಮುಖ್ಯ ಉದ್ಯಮಗಳು ಸರಕಾರಿ ಉದ್ಯೋಗ ಅಥವಾ ಕಾಂಟ್ರಾಕ್ಟ್‌ಗಳ ಮೇಲೆ ಅವಲಂಬಿಸಿರುತ್ತವೆ; ಲೋಹ ಹಾಗೂ ನೌಕಾ ನಿರ್ಮಾಣ ಕೇಂದ್ರಗಳ ಸಾಮ್ರಾಜ್ಯವಾದಕ್ಕೆ ಬಹುಮಟ್ಟಿಗೆ ಈ ವಾಸ್ತ ವಾಂಶವೇ ಕಾರಣವೆಂದು ಹೇಳಬಹುದು." ಈ ಲೇಖಕರ ಅಭಿಪ್ರಾಯದಲ್ಲಿ, ಎರಡು ಬಗೆಯ ಕಾರಣಗಳು ಹಳೆಯ ಸಾಮ್ರಾಜ್ಯಗಳನ್ನು ದುರ್ಬಲಗೊಳಿಸಿವೆ: 1) "ಆರ್ಥಿಕ ಪರೋಪಜೀವಿ ಸ್ವಭಾವ," 2) ಅಧೀನ ಜನತೆಗಳಿಂದ ಕೂಡಿದ ಸೈನ್ಯಗಳ ರಚನೆ. "ಮೊದಲನೆಯದು ಆರ್ಥಿಕ ಪರೋಪಜೀವನದ ಅಭ್ಯಾಸ. ಇದರ ಮೂಲಕ ಆಳುವ ರಾಜ್ಯವು ತನ್ನ ಪ್ರಾಂತಗಳ, ವಸಾಹತುಗಳ ಹಾಗೂ ಆಶ್ರಿತ ದೇಶಗಳ ಸಂಪತ್ತನ್ನು ತನ್ನ ಆಳುವ ವರ್ಗವನ್ನು ಹೆಚ್ಚು ಸಿರಿವಂತಗೊಳಿಸಲು ಮತ್ತು ಶಾಂತಿಯುತವಾಗಿ ವರ್ತಿಸುವಂತೆ ತನ್ನ ತಳವರ್ಗಗಳಿಗೆ ಲಂಚ ನೀಡಲು, ಬಳಸಿಕೊಳ್ಳುತ್ತದೆ." ಹಾಗೆ ಲಂಚ ನೀಡುವುದಕ್ಕೆ, ಅದರ ರೂಪ ಏನೇ ಆಗಿರಲಿ, ಆರ್ಥಿಕ ಸಾಧ್ಯತೆಯನ್ನು ಉಂಟು ಮಾಡಿಕೊಡಲು ಉನ್ನತ ಏಕಸ್ವಾಮ್ಯ ಲಾಭ ಅವಶ್ಯವಾಗುತ್ತದೆ, ಎಂದೂ ನಾವು ಇದಕ್ಕೆ ಸೇರಿಸುತ್ತೇವೆ.

ಎರಡನೆಯ ಕಾರಣಕ್ಕೆ ಸಂಬಂಧಿಸಿ ಹಾಬ್ಸನ್ ಬರೆಯುತ್ತಾರೆ: "ಸಾಮ್ರಾಜ್ಯ ವಾದದ ಕುರುಡುತನದ ಅತ್ಯಂತ ವಿಚಿತ್ರವಾದ ಲಕ್ಷಣಗಳಲ್ಲೊಂದು, ಗ್ರೇಟ್ ಬ್ರಿಟನ್, ಫ್ರಾನ್ಸ್ ಮತ್ತಿತರ ಸಾಮ್ರಾಜ್ಯವಾದಿ ದೇಶಗಳು ನಿರಾತಂಕ ನಿರ್ಲಕ್ಷದೊಂದಿಗೆ ಈ ಮಾರ್ಗ ಹಿಡಿದುದು. ಈ ಮಾರ್ಗದಲ್ಲಿ ಗ್ರೇಟ್ ಬ್ರಿಟನ್ ತುಂಬ ದೂರ ಸಾಗಿ ಹೋಗಿದೆ. ನಾವು ನಮ್ಮ ಭಾರತೀಯ ಸಾಮ್ರಾಜ್ಯವನ್ನು ಗೆಲ್ಲಲು ನಡೆಸಬೇಕಾಗಿದ್ದ ಬಹುಮಟ್ಟಿಗಿನ ಕದನಗಳನ್ನೆಲ್ಲ ಆ ದೇಶೀಯರಿಂದಲೇ ಕೂಡಿದ ನಮ್ಮ ಸೈನ್ಯ ನಡೆಸಿದೆ; ಭಾರತದಲ್ಲಿ, ತೀರ ಈಚೆಗೆ ಇಜಿಪ್ಟಿನಲ್ಲಿ ಮಾಡಿರುವಂತೆಯೇ ಭಾರಿ ಸ್ಥಾಯಿ

ಸೈನ್ಯಗಳನ್ನು ಬ್ರಿಟಿಷ್ ಕಮಾಂಡರುಗಳ ಅಧೀನದಲ್ಲಿ ಇರಿಸಲಾಗಿದೆ. ನಮ್ಮ ಆಫ್ರಿಕನ್ ಡೊಮಿನಿಯನ್‌ಗಳಿಗೆ ಸಂಬಂಧಿಸಿದ ಬಹುಮಟ್ಟಿಗೆ ಎಲ್ಲ ಯುದ್ಧಗಳನ್ನೂ, ದಕ್ಷಿಣ ಭಾಗದಲ್ಲಿ ಮಾತ್ರ ಬಿಟ್ಟು, ಸ್ಥಳೀಯರೇ ನಮಗಾಗಿ ನಡೆಸಿದ್ದಾರೆ."

ಚೀಣಾದ ವಿಭಜನೆಯ ಪ್ರತೀಕ್ಷೆಗಳ ಬಗೆಗೆ ಹಾಬ್ಸನ್ ಕೆಳಗಿನ ಆರ್ಥಿಕ ಮೌಲ್ಯ ನಿರ್ಣಯ ನೀಡುತ್ತಾರೆ: "ಪಶ್ಚಿಮ ಯೂರೋಪಿನ ಹೆಚ್ಚಿನ ಭಾಗವು ಆಗ, ಇಂಗ್ಲೆಂಡಿನ ದಕ್ಷಿಣದಲ್ಲಿ, ರಿವಿಯೇರಾದಲ್ಲಿ ಮತ್ತು ಇಟಲಿ, ಸ್ವಿಟ್ಸರ್ಲೆಂಡ್‌ಗಳಲ್ಲಿ ಪ್ರವಾಸಿಗಳಿಂದ ತುಂಬಿದ ಪ್ರಾಂತಗಳಲ್ಲಿ, ಧನಾಧಿಪತಿಗಳ ನಿವಾಸಗೃಹಗಳಿರುವ ಪ್ರಾಂತಗಳಲ್ಲಿ, ಇರುವ ಸ್ವರೂಪವನ್ನೇ ಪಡೆದುಕೊಳ್ಳಬಹುದು. ಅಂದರೆ ಆಗ ಅಲ್ಲಿ ದೂರ ಪ್ರಾಚ್ಯಗಳಿಂದ ಬರುವ ಡಿವಿಡೆಂಡುಗಳಿಂದಲೂ ನಿವೃತ್ತಿವೇತನಗಳಿಂದಲೂ ಜೀವನ ಸಾಗಿಸುತ್ತಿರುವ ಶ್ರೀಮಂತ ಪ್ರಭುಗಳ ಪುಟ್ಟ ವೃಂದಗಳಿರುತ್ತವೆ; ಇವರಿಗಿಂತ ಸ್ವಲ್ಪ ಹೆಚ್ಚು ಪ್ರಮಾಣದಲ್ಲಿ ಇವರ ವೃತ್ತಿದಾರ ಅನುಚರರೂ ವ್ಯಾಪಾರಗಾರರೂ ಇರುತ್ತಾರೆ; ಇನ್ನೂ ಹೆಚ್ಚು ಪ್ರಮಾಣದಲ್ಲಿ ಖಾಸಗಿ ಸೇವಕರೂ, ಸಾರಿಗೆ ವ್ಯಾಪಾರ ಹಾಗೂ ವಸ್ತುಗಳ ಉತ್ಪಾದನೆಯ ಅಂತಿಮ ಘಟ್ಟಗಳಲ್ಲಿ ಕೆಲಸ ಮಾಡುವವರೂ ಇರುತ್ತಾರೆ. ಎಲ್ಲ ಮುಖ್ಯ ಶಾಖೋಪಶಾಖೆಗಳನ್ನುಳ್ಳ ಕೈಗಾರಿಕೆಗಳೂ ಕಣ್ಮರೆಯಾಗುತ್ತವೆ. ಮುಖ್ಯ ಆಹಾರ ಪದಾರ್ಥಗಳೂ ಬಳಕೆ ವಸ್ತುಗಳೂ ಏಷ್ಯ ಆಫ್ರಿಕಗಳಿಂದ ಕಪ್ಪಗಳಾಗಿ ಬರುತ್ತವೆ." "ಪಶ್ಚಿಮ ದೇಶಗಳ ಇನ್ನೂ ಹೆಚ್ಚು ದೊಡ್ಡ ಮೈತ್ರೀಕೂಟವೊಂದು, ಬೃಹತ್ ರಾಷ್ಟ್ರಗಳ ಒಂದು ಐರೋಪ್ಯ ಫೆಡರೇಷನ್, ಎಂತಹ ಸಾಧ್ಯತೆಗಳನ್ನು ನಮ್ಮ ಮುಂದೆ ತೆರೆಯುತ್ತದೆ ಎಂಬುದನ್ನು ನಾವು ಮುನ್ಸೂಚಿಸಿದ್ದೇವೆ. ಇದು ಜಾಗತಿಕ ನಾಗರಿಕತೆಯನ್ನು ಮುಂದಕ್ಕೊಯ್ಯುವ ಬದಲು, ಪಾಶ್ಚಿಮಾತ್ಯ ಪರೋಪಜೀವನದ ಭಾರಿ ಗಂಡಾಂತರವನ್ನು ಜಾರಿಗೆ ತರಬಹುದು. ಅತ್ಯಂತ ಮುಂದುವರಿದ ಕೈಗಾರಿಕಾ ರಾಷ್ಟ್ರಗಳ ಒಂದು ತಂಡ, ಇವುಗಳ ಮೇಲ್‌ವರ್ಗಗಳು ಏಷ್ಯ ಆಫ್ರಿಕಗಳಿಂದ ಭಾರಿ ಪ್ರಮಾಣಗಳಲ್ಲಿ ಕಪ್ಪ ಪಡೆಯುತ್ತವೆ. ಈ ಕಪ್ಪದಿಂದ ಅವರು ತಮಗೆ ವಿಧೇಯರಾದ ಭಾರಿ ಸೇವಕರ ಸಮೂಹಗಳನ್ನು ಪೋಷಿಸುತ್ತಾರೆ. ಈ ಸೇವಕರು ಕೃಷಿ ಹಾಗೂ ಕೈಗಾರಿಕೆಯ ಪ್ರಧಾನ ವಸ್ತುಗಳ ತಯಾರಿಕೆಯಲ್ಲೇನೂ ತೊಡಗಿರುವುದಿಲ್ಲ, ಆದರೆ ಖಾಸಗಿ ಸೇವಾಕಾರ್ಯ ಅಥವಾ ಒಂದು ಹೊಸ ಹಣಕಾಸು ಶ್ರೀಮಂತಶಾಹಿಯ ನಿಯಂತ್ರಣದಲ್ಲಿ ಸಣ್ಣಪುಟ್ಟ ಕೈಗಾರಿಕಾ ಕೆಲಸಗಳಲ್ಲಷ್ಟೆ ತೊಡಗಿರುತ್ತಾರೆ. ಅಂತಹ ಸಿದ್ಧಾಂತವನ್ನು" (ಪ್ರತೀಕ್ಷೆಯನ್ನು ಎಂದು ಹೇಳುವುದೇ ಹೆಚ್ಚು ಉತ್ತಮ) "ಪರಿಗಣಿಸಲು ಅಯೋಗ್ಯವಾದುದೆಂದು ಜರಿಯುವವರು, ಇಂದು ಆಗಲೇ ಈ ಪರಿಸ್ಥಿತಿಗೆ ಇಳಿಸಲ್ಪಟ್ಟಿರುವ ದಕ್ಷಿಣ ಇಂಗ್ಲೆಂಡಿನಲ್ಲಿನ ಜಿಲ್ಲೆಗಳ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳನ್ನು ಪರಿಶೀಲಿಸಿ ನೋಡಲಿ. ಚೀಣಾವನ್ನು ಅಂತಹುದೇ ಧನಾಧಿಪತಿಗಳ, 'ಬಂಡವಾಳ ತೊಡಗಿಸುವವರ,' ರಾಜಕೀಯ ಹಾಗೂ ವಾಣಿಜ್ಯ ಅಧಿಕಾರಿಗಳ ಗುಂಪುಗಳ ಆರ್ಥಿಕ ನಿಯಂತ್ರಣಕ್ಕೆ ಅಧೀನಗೊಳಿಸಿ, ಜಗತ್ತು ಎಂದೂ ತಿಳಿದಿರದಂಥ ಅತ್ಯಂತ

ಭಾರಿ ಸಂಭವನೀಯ ಲಾಭದ ಸಂಪದಾಗಾರವನ್ನು ಕೊಳ್ಳೆಹೊಡೆದು ಅದನ್ನು ಯೂರೋಪಿನಲ್ಲಿ ಬಳಸಲು ಏರ್ಪಾಡು ಮಾಡುವ ಮೂಲಕ ಅಂತಹ ಪದ್ಧತಿಯನ್ನು ವಿಶಾಲವಾಗಿ ವಿಸ್ತರಿಸುವುದರ ಬಗೆಗೆ ಅವರು ಯೋಚನೆ ಮಾಡಿ ನೋಡಲಿ. ಭವಿಷ್ಯತ್ತಿನಲ್ಲಿ ಇದೇ ಅಥವಾ ಇನ್ನಾವುದೇ ಏಕೈಕ ವ್ಯಾಖ್ಯಾನ ಅತ್ಯಂತ ಹೆಚ್ಚು ಸಂಭವ ಎಂದು ಹೇಳದಾಗದಂತೆ ಪರಿಸ್ಥಿತಿ ತುಂಬ ತೊಡಕಾದುದಾಗಿದೆ, ಜಾಗತಿಕ ಶಕ್ತಿಗಳ ಕ್ರಿಯೆ ಹೀಗೇ ಎಂದು ಲೆಕ್ಕಹಾಕುವುದು ತುಂಬ ಕಷ್ಟವಾಗಿದೆ; ಆದರೆ ಇಂದು ಪಶ್ಚಿಮ ಯೂರೋಪಿನ ಸಾಮ್ರಾಜ್ಯವಾದವನ್ನು ನಿರ್ವಹಿಸುತ್ತಿರುವಂಥ ಪ್ರಭಾವಗಳು ಈ ದಿಶೆಯಲ್ಲೇ ಚಲಿಸುತ್ತಿವೆ. ಇವುಗಳಿಗೆ ಪ್ರತಿರೋಧ ನೀಡದಿದ್ದಲ್ಲಿ ಅಥವಾ ಇವುಗಳ ದಿಕ್ಕು ಬದಲಿಸದಿದ್ದಲ್ಲಿ, ಅವು ಇಂತಹುದೇ ಪರ್ಯವಸಾನದ ದಿಸೆಯಲ್ಲಿ ಕಾರ್ಯ ಜರುಗಿಸುತ್ತವೆ."*

ಈ ಗ್ರಂಥಕರ್ತೃ ತುಂಬ ಸರಿಯಾಗಿಯೇ ಹೇಳಿದ್ದಾರೆ: ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಪ್ರತಿರೋಧ ನೀಡದೆ ಹೋಗಿದ್ದಲ್ಲಿ ಅವು ಅವರು ವಿವರಿಸಿರುವಂತಹ ಪರಿಸ್ಥಿತಿಗೇ ಸರಿಯಾಗಿ ಕೊಂಡೊಯ್ಯುತ್ತಿದ್ದವು. ಇಂದಿನ ಸಾಮ್ರಾಜ್ಯಶಾಹಿ ಪರಿಸ್ಥಿತಿಯಲ್ಲಿ "ಯೂರೋಪಿನ ಸಂಯುಕ್ತ ಸಂಸ್ಥಾನಗಳ" ಪ್ರಾಮುಖ್ಯವನ್ನು ಸರಿಯಾಗಿಯೇ ಮೌಲ್ಯನಿರ್ಣಯಿಸಲಾಗಿದೆ. ಕಾರ್ಮಿಕ ವರ್ಗ ಚಳವಳಿಯೊಳಗೂ, ಪ್ರಸ್ತುತದಲ್ಲಿ ಬಹು ಹೆಚ್ಚಿನ ದೇಶಗಳಲ್ಲಿ ತಾತ್ಕಾಲಿಕವಾಗಿ ಜಯಶಾಲಿಗಳಾಗಿರುವ ಸಂದರ್ಭಸಾಧಕರು ಈ ದಿಶೆಯಲ್ಲೇ ಕ್ರಮಬದ್ಧವಾಗಿ ಮತ್ತು ವಿಚಲಿತರಾಗದೇ "ದುಡಿಯುತ್ತಿದ್ದಾರೆ" ಎಂದೂ ಅವರು ಸೇರಿಸಬೇಕಿದ್ದಿತು. ಸಾಮ್ರಾಜ್ಯವಾದ ಎಂದರೆ ಜಗತ್ತಿನ ವಿಭಜನೆ ಹಾಗೂ ಚೀಣಾ ದೇಶವನ್ನಲ್ಲದೆ ಇತರ ದೇಶಗಳನ್ನೂ ಶೋಷಿಸುವುದು, ಎಂದರ್ಥ; ಅತ್ಯಂತ ಶ್ರೀಮಂತವಾದ ಕೆಲವೇ ದೇಶಗಳಿಗೆ ಅತ್ಯುನ್ನತ ಏಕಸ್ವಾಮ್ಯ ಲಾಭ, ಎಂದರ್ಥ, ಅದು ಶ್ರಮಜೀವಿ ವರ್ಗದ ಮೇಲ್‌ಸ್ತರಗಳಿಗೆ ಲಂಚ ನೀಡಿ ಅವನ್ನು ಬಲಿಸಿಕೊಳ್ಳುವ ಆರ್ಥಿಕ ಸಾಧ್ಯತೆಯನ್ನು ಉಂಟುಮಾಡುತ್ತದೆ ಮತ್ತು ತನ್ಮೂಲಕ ಸಂದರ್ಭಸಾಧಕತನಕ್ಕೆ ಬೆಂಬಲ ನೀಡುತ್ತದೆ, ರೂಪು ಕೊಡುತ್ತದೆ ಮತ್ತು ದೃಢಗೊಳಿಸುತ್ತದೆ. ಆದರೆ ಒಟ್ಟಿನಲ್ಲಿ ಸಾಮ್ರಾಜ್ಯವಾದದ ವಿರುದ್ಧವೂ, ನಿರ್ದಿಷ್ಟವಾಗಿ ಸಂದರ್ಭಸಾಧಕವಾದದ ವಿರುದ್ಧವೂ, ಕಾರ್ಯ ಜರುಗಿಸುವ ಶಕ್ತಿಗಳೂ ಇರುತ್ತವೆಂಬುದನ್ನು ನಾವು ಮರೆಯಕೂಡದು. ಅವನ್ನು ಸಹಜವಾಗಿಯೇ ಸಾಮಾಜಿಕ-ಉದಾರವಾದಿ ಹಾಬ್ಸನ್‌ರು ಕಾಣದಾಗಿದ್ದಾರೆ.

ಸಾಮ್ರಾಜ್ಯವಾದವನ್ನು ಸಮರ್ಥಿಸಿದುದಕ್ಕಾಗಿ ಒಮ್ಮೆ ಪಾರ್ಟಿಯಿಂದ ಹೊರ ಹಾಕಲಾದ, ಇಂದು ಜರ್ಮನಿಯ "ಸೋಷಲ್ ಡೆಮೊಕ್ರಾಟಿಕ್" ಪಾರ್ಟಿ ಎಂದು ಹೇಳಲಾಗುವಂತಹ ಪಾರ್ಟಿಗೆ ನಾಯಕನಾಗಬಹುದಾಗಿದ್ದ, ಜರ್ಮನ್ ಸಂದರ್ಭಸಾಧಕ ಗೇರ್ಹಾರ್ಡ್ ಹಿಲ್ಡೆಬ್ರಾಂಡ್‌ರವರು, ಆಫ್ರಿಕನ್ ನೀಗ್ರೋಗಳ ವಿರುದ್ಧ, "ಮಹಾ

---

*Hobson, ಪೂರ್ವೋಕ್ತ ಗ್ರಂಥ, ಪು. 103, 205, 144, 335, 386.

ಇಸ್ಲಾಮಿಕ್ ಚಳವಳಿ"ಯ ವಿರುದ್ಧ, ಒಂದು "ಪ್ರಬಲ ಭೂ ಹಾಗೂ ನೌಕಾ ಸೇನೆ" ಯನ್ನು ಪೋಷಿಸುವುದಕ್ಕಾಗಿ, "ಚೀಣಾ-ಜಪಾನ್ ಕೂಟ"ದ ವಿರುದ್ಧ, ಇತ್ಯಾದಿ ಗಳಿಗಾಗಿ "ಸಂಯುಕ್ತ" ಕಾರ್ಯಾಚರಣೆ ನಡೆಸುವ ಉದ್ದೇಶದಿಂದ (ರಷ್ಯವನ್ನು ಬಿಟ್ಟು) "ಪಶ್ಚಿಮ ಯೂರೋಪಿನ ಸಂಯುಕ್ತ ಸಂಸ್ಥಾನಗಳನ್ನು" ಸ್ಥಾಪಿಸಬೇಕೆಂದು ಪ್ರತಿಪಾದಿಸುವ ಮೂಲಕ ಹಾಬ್ಸನ್‌ರ ವಾದವನ್ನು ತುಂಬಿಕೊಡುತ್ತಾರೆ.*

ಷುಲ್ತ್ಸೆ-ಗೆವೆರ್ನಿತ್ಸ್‌ರವರ ಗ್ರಂಥದಲ್ಲಿ "ಬ್ರಿಟಿಷ್ ಸಾಮ್ರಾಜ್ಯವಾದ"ದ ವಿವರಣೆಯೂ ಅದೇ ಪರೋಪಜೀವಿತನದ ಲಕ್ಷಣಗಳನ್ನು ತೋರಿಸುತ್ತದೆ. ಗ್ರೇಟ್ ಬ್ರಿಟನ್‌ನ ರಾಷ್ಟ್ರೀಯ ವರಮಾನವು 1865ರಿಂದ 1898ರವರೆಗಿನ ಕಾಲದಲ್ಲಿ ಸರಿಸುಮಾರು ಇಮ್ಮಡಿಗೊಂಡಿತು. ಅದೇ ಕಾಲಾವಧಿಯಲ್ಲಿ "ಹೊರದೇಶಗಳಿಂದ" ಬಂದ ವರಮಾನವು ಒಂಬತ್ತು ಪಟ್ಟು ವೃದ್ಧಿಗೊಂಡಿತು. "ನೀಗ್ರೋಗಳನ್ನು ಶ್ರಮದ ಅಭ್ಯಾಸಕ್ಕೆ ತರಬೇತುಗೊಳಿಸಿದುದು" ಸಾಮ್ರಾಜ್ಯವಾದದ "ಶ್ರೇಷ್ಠತೆ"ಯಾಗಿದ್ದಲ್ಲಿ (ಬಲಪ್ರಯೋಗವಿಲ್ಲದೆಯೇ ನೀವು ಇದನ್ನು ಮಾಡಲಾರಿರಿ), ಸಾಮ್ರಾಜ್ಯವಾದದ "ಅಪಾಯ" ಎಲ್ಲಿದೆಯೆಂದರೆ, "ಯೂರೋಪು ಶಾರೀರಿಕ ದುಡಿಮೆಯ ಭಾರವನ್ನು – ಮೊದಲು ಕೃಷಿ ಹಾಗೂ ಗಣಿಗಾರಿಕೆಯ, ಅನಂತರ ಕೈಗಾರಿಕೆಯಲ್ಲಿನ ಹೆಚ್ಚು ಒರಟಾದ ಕೆಲಸದ ಭಾರವನ್ನು – ವರ್ಣೀಯರ ಹೆಗಲುಗಳಿಗೆ ವರ್ಗಾಯಿಸುವುದರಲ್ಲಿ, ಮತ್ತು ತಾನೇ ಲಾಭಾಂಶಜೀವಿಯ ಪಾತ್ರದೊಂದಿಗೆ ತೃಪ್ತಿಪಟ್ಟುಕೊಂಡು ಇರುವುದರಲ್ಲಿ; ಈ ರೀತಿ ಬಹುಶಃ ವರ್ಣೀಯರ ಆರ್ಥಿಕ, ಅನಂತರ ರಾಜಕೀಯ ವಿಮೋಚನೆಗೆ ದಾರಿ ಮಾಡಿಕೊಡುವುದರಲ್ಲಿ."

ಗ್ರೇಟ್ ಬ್ರಿಟನ್ನಿನಲ್ಲಿ ಭೂಮಿಯ ಹೆಚ್ಚು ಹೆಚ್ಚು ಭಾಗವನ್ನು ಸಾಗುವಳಿಯಿಂದ ಹೊರ ತೆಗೆದು ಕ್ರೀಡೆಗಾಗಿ, ಶ್ರೀಮಂತರ ವಿನೋದವಿಹಾರಗಳಿಗಾಗಿ ಉಪಯೋಗಿಸಲಾಗುತ್ತಿದೆ. ಷಿಕಾರಿಗೂ ಇತರ ಕ್ರೀಡೆಗಳಿಗೂ ಅತ್ಯಂತ ಪ್ರಶಸ್ತ ಸ್ಥಳವಾದ ಸ್ಕಾಟ್ಲೆಂಡು "ತನ್ನ ಗತಕಾಲದ ಮೇಲೆ ಹಾಗೂ ಮಿ. ಕಾರ್ನಿಜಿಯವರ (ಅಮೆರಿಕನ್ ಕೋಟ್ಯಾಧೀಶ) ಮೇಲೆ" ಬಾಳುತ್ತಿದೆ, ಎಂದು ಹೇಳಲಾಗುತ್ತದೆ. ಬ್ರಿಟನ್ ಪ್ರತಿ ವರ್ಷವೂ ಕುದುರೆ ಪಂದ್ಯ ಹಾಗೂ ಷಿಕಾರಿಗಾಗಿ ಮಾತ್ರವೇ 14 ಮಿಲಿಯ ಪೌಂಡ್ (ಸುಮಾರು 130 ಮಿಲಿಯ ರೂಬಲ್) ಖರ್ಚು ಮಾಡುತ್ತದೆ. ಇಂಗ್ಲೆಂಡಿನಲ್ಲಿರುವ ಲಾಭಾಂಶಜೀವಿಗಳ ಸಂಖ್ಯೆ ಸುಮಾರು ಒಂದು ಮಿಲಿಯ ಆಗಿದೆ. ಒಟ್ಟು ಜನಸಂಖ್ಯೆಯಲ್ಲಿ ಉತ್ಪಾದಕರಾಗಿ ಕಾರ್ಯನಿವಾಸಿಗಳಾದ ಜನರ ಶೇಕಡಾವಾರು ಸಂಖ್ಯೆ ಕಮ್ಮಿಯಾಗುತ್ತಿದೆ:

---

*Gerhard Hildebrand, *Die Erschütterung der Industrieherrschaft und des Industriesozialismus* (ಗೆರ್ಹಾರ್ಡ್ ಹಿಲ್ಡೆಬ್ರಾಂಡ್, 'ಕೈಗಾರಿಕಾ ಆಧಿಪತ್ಯದ ಹಾಗೂ ಕೈಗಾರಿಕಾ ಸಮಾಜವಾದದ ವಿಧ್ವಂಸ.' – ಸಂ.), 1910, ಪು. 229 ಹಾಗೂ ಅನಂತರ.

| | ಜನಸಂಖ್ಯೆ | ಮೂಲ ಕೈಗಾರಿಕೆಗಳಲ್ಲಿ ಕಾರ್ಮಿಕರ ಸಂಖ್ಯೆ | ಒಟ್ಟು ಜನಸಂಖ್ಯೆಯಲ್ಲಿ ಶೇಕಡಾವಾರು |
|---|---|---|---|
| | (ಮಿಲಿಯಗಳಲ್ಲಿ) | | |
| 1851 | 17.9 | 4.1 | 23 % |
| 1901 | 32.5 | 4.9 | 15 % |

ಬ್ರಿಟಿಷ್ ಕಾರ್ಮಿಕ ವರ್ಗದ ಬಗೆಗೆ ಮಾತನಾಡುವಾಗ “20ನೆಯ ಶತಮಾನದ ಆದಿಭಾಗದ ಬ್ರಿಟಿಷ್ ಸಾಮ್ರಾಜ್ಯವಾದ”ದ ಅಧ್ಯಯನ ಮಾಡುವ ಬೂರ್ಷ್ವಾ ಸಂಶೋಧಕನು ಕಾರ್ಮಿಕರ “ಮೇಲ್‌ಸ್ತರ” ಹಾಗೂ “ನಿಜವಾದ ಶ್ರಮಜೀವಿ ವರ್ಗದ ಕೆಳಸ್ತರ” ಇವುಗಳ ನಡುವಿನ ವ್ಯತ್ಯಾಸವನ್ನು ಕ್ರಮಬದ್ಧವಾಗಿ ಗಮನಿಸುವ ಒತ್ತಾಯಕ್ಕೊಳಗಾಗುತ್ತಾನೆ. ಮೇಲ್‌ಸ್ತರವು ಸಹಕಾರಿ ಸಂಸ್ಥೆಗಳ, ಟ್ರೇಡ್ ಯೂನಿಯನ್‌ಗಳ, ಕ್ರೀಡಾ ಕೂಟಗಳ ಮತ್ತು ಅಸಂಖ್ಯಾತ ಧಾರ್ಮಿಕ ಪಂಥಗಳ ಬಹುಭಾಗ ಸದಸ್ಯರನ್ನು ಒದಗಿಸುತ್ತದೆ. ಮತದಾನ ಪದ್ಧತಿಯನ್ನು ಈ ಸ್ತರದ ಜನರಿಗೆ ಅನುಕೂಲವಾಗಿರುವಂತೆಯೇ ರಚಿಸಲಾಗಿದೆ. ಬ್ರಿಟನ್ನಿನಲ್ಲಿ ಮತದಾನ ಪದ್ಧತಿಯು ಇನ್ನೂ “ನಿಜವಾದ ಶ್ರಮಜೀವಿ ವರ್ಗದ ಕೆಳಗಿನ ಸ್ತರದವರನ್ನು ಹೊರಗಿರಿಸುವಂತೆ ಸಾಕಷ್ಟು ನಿರ್ಬಂಧಗಳನ್ನು ಒಳಗೊಂಡಿದೆ!! ಬ್ರಿಟಿಷ್ ಕಾರ್ಮಿಕ ವರ್ಗದ ಪರಿಸ್ಥಿತಿಯನ್ನು ಅಂದವಾಗಿ ಚಿತ್ರಿಸಲೋಸುಗ ಈ ಮೇಲ್‌ಸ್ತರದ ಬಗೆಗಷ್ಟೆ – ಇದು ಶ್ರಮಜೀವಿ ವರ್ಗದ ಅಲ್ಪಮತವಷ್ಟೆ ಆಗಿರುತ್ತದೆ – ಸಾಮಾನ್ಯವಾಗಿ ಹೇಳಲಾಗುತ್ತದೆ. ಉದಾಹರಣೆಗೆ, “ನಿರುದ್ಯೋಗದ ಸಮಸ್ಯೆಯು ಪ್ರಧಾನವಾಗಿ ಲಂಡನ್ನಿನ ಸಮಸ್ಯೆಯಾಗಿದೆ, ಶ್ರಮಜೀವಿ ವರ್ಗದ ಕೆಳಗಿನ ಸ್ತರದ ಸಮಸ್ಯೆಯಾಗಿದೆ, ರಾಜಕಾರಣಿಗಳು ಇದಕ್ಕೆ ಏನೇನೂ ಪ್ರಾಮುಖ್ಯ ನೀಡರು...”* ಬೂರ್ಷ್ವಾ ರಾಜಕಾರಣಿಗಳೂ “ಸಮಾಜವಾದಿ” ಸಂದರ್ಭಸಾಧಕರೂ ಅದಕ್ಕೆ ಏನೇನೂ ಪ್ರಾಮುಖ್ಯ ನೀಡರು, ಎಂದು ಅವರು ಹೇಳಬೇಕಾಗಿದ್ದಿತು.

ನಾವು ವಿವರಿಸುತ್ತಿರುವ ಸತ್ಯಸಂಗತಿಗಳಿಗೆ ಸಂಬಂಧಿಸಿದ, ಸಾಮ್ರಾಜ್ಯವಾದದ ವಿಶೇಷ ಲಕ್ಷಣಗಳಲ್ಲೊಂದು, ಸಾಮ್ರಾಜ್ಯವಾದಿ ದೇಶಗಳಿಂದ ಹೊರದೇಶಗಳಿಗೆ ವಲಸೆ ಹೋಗುವ ಜನರ ಸಂಖ್ಯೆ ತಗ್ಗುವುದು ಮತ್ತು ಕಮ್ಮಿ ಕೂಲಿ ನೀಡುವ ಹೆಚ್ಚು ಹಿಂದುಳಿದ

*Schulze-Gaevernitz, *Br. Imp.*, p. 301 (ಷುಲ್ಡ್ಸೆ-ಗೇವೆರ್ನಿತ್ಸ್, ‘ಬ್ರಿಟಿಷ್ ಸಾಮ್ರಾಜ್ಯವಾದ,’ ಪು. 301. – ಸಂ.).

ದೇಶಗಳಿಂದ ಈ ದೇಶಗಳಿಗೆ ವಲಸೆ ಬರುವ ಜನರ ಸಂಖ್ಯೆ ಹೆಚ್ಚುವುದು, ಆಗಿದೆ. ಹಾಬ್ಸನ್‌ರು ಗಮನಿಸಿರುವಂತೆ, ಗ್ರೇಟ್ ಬ್ರಿಟನ್ನಿನಿಂದ ಹೊರಹೋಗುವವರ ಸಂಖ್ಯೆ 1884ರಿಂದ ಕಮ್ಮಿಯಾಗುತ್ತಿದೆ. ಆ ವರ್ಷ ಹೊರಹೋದವರ ಸಂಖ್ಯೆ 242,000. 1900ರಲ್ಲಿ ಈ ಸಂಖ್ಯೆ 169,000 ಆಗಿದ್ದಿತು. ಜರ್ಮನಿಯಿಂದ ಹೊರಹೋದವರ ಸಂಖ್ಯೆ 1881 ಹಾಗೂ 1890ರ ನಡುವೆ ಅತ್ಯಂತ ಹೆಚ್ಚಿನ ಮಟ್ಟ ಮುಟ್ಟಿದ್ದಿತು. ಆಗ ಒಟ್ಟು 1,453,000 ಮಂದಿ ಹೊರಹೋದರು. ಮುಂದಿನ ಎರಡು ದಶಕಗಳಲ್ಲಿ ಅದು 544,000 ಹಾಗೂ 341,000ಗಳಿಗೆ ಇಳಿಯಿತು. ಇದಕ್ಕೆ ಪ್ರತಿಯಾಗಿ ಆಸ್ಟ್ರಿಯಾ, ಇಟಲಿ, ರಷ್ಯ ಮತ್ತಿತರ ದೇಶಗಳಿಂದ ಜರ್ಮನಿಗೆ ಬಂದ ಕಾರ್ಮಿಕರ ಸಂಖ್ಯೆ ಹೆಚ್ಚಿತು. 1907ರ ಜನಗಣತಿಯ ಪ್ರಕಾರ, ಜರ್ಮನಿಯಲ್ಲಿ 1,342,294 ಮಂದಿ ವಿದೇಶೀಯರಿದ್ದರು. ಇವರಲ್ಲಿ 440,800 ಮಂದಿ ಕೈಗಾರಿಕಾ ಕಾರ್ಮಿಕರಾಗಿದ್ದರು, 257,329 ಮಂದಿ ಕೃಷಿ ಕಾರ್ಮಿಕರಾಗಿದ್ದರು.* ಫ್ರಾನ್ಸಿನಲ್ಲಿ ಗಣಿ ಕೈಗಾರಿಕೆಯಲ್ಲಿ ನೇಮಿತರಾದ ಕಾರ್ಮಿಕರಲ್ಲಿ "ಬಹುಭಾಗ" ವಿದೇಶೀಯರಾಗಿದ್ದರು – ಪೋಲಿಷ್ ಜನರು, ಇಟಾಲಿಯನ್ನರು ಹಾಗೂ ಸ್ಪಾನಿಷ್ ಜನರು.** ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಯೂರೋಪಿನ ಪೂರ್ವ ಹಾಗೂ ದಕ್ಷಿಣ ಭಾಗಗಳಿಂದ ಬಂದ ಜನರು ಅತ್ಯಂತ ಕಮ್ಮಿ ಕೂಲಿಯ ಕೆಲಸಗಳಲ್ಲಿ ತೊಡಗಿದ್ದಾರೆ. ಮೇಲ್ವಿಚಾರಕರ ಮಧ್ಯೆ ಅಥವಾ ಹೆಚ್ಚು ಉತ್ತಮ ಕೂಲಿ ಪಡೆಯುವ ಕೆಲಸಗಾರರ ಮಧ್ಯೆ ಅಮೆರಿಕನ್ ಕಾರ್ಮಿಕರೇ ಹೆಚ್ಚಿನ ಶೇಕಡಾವಾರು ಸಂಖ್ಯೆಯಲ್ಲಿದ್ದಾರೆ.*** ಕಾರ್ಮಿಕರ ಮಧ್ಯೆ ವಿಶೇಷಾಧಿಕಾರಗಳುಳ್ಳ ವಿಭಾಗಗಳನ್ನು ಸೃಜಿಸಿ ಅವುಗಳನ್ನು ಶ್ರಮಜೀವಿ ವರ್ಗದ ವಿಶಾಲ ಸಮೂಹಗಳಿಂದ ಬೇರ್ಪಡಿಸುವುದು ಸಾಮ್ರಾಜ್ಯವಾದದ ಒಂದು ಪ್ರವೃತ್ತಿಯಾಗಿದೆ.

ಕಾರ್ಮಿಕರನ್ನು ವಿಭಜಿಸುವುದು, ಅವರ ಮಧ್ಯೆ ಸಂದರ್ಭಸಾಧಕತನವನ್ನು ದೃಢಗೊಳಿಸುವುದು, ಕಾರ್ಮಿಕ ವರ್ಗ ಚಳವಳಿಯಲ್ಲಿ ತಾತ್ಕಾಲಿಕ ಅವನತಿಯನ್ನು ಉಂಟುಮಾಡುವುದು – ಸಾಮ್ರಾಜ್ಯವಾದದ ಈ ಪ್ರವೃತ್ತಿಯು ಗ್ರೇಟ್ ಬ್ರಿಟನ್ನಿನಲ್ಲಿ 19ನೆಯ ಶತಮಾನದ ಕೊನೆ ಹಾಗೂ 20ನೆಯ ಶತಮಾನದ ಆದಿಭಾಗಕ್ಕೂ ತುಂಬ

---

**Statistik der Deutschen Reichs*, Bd. 211 ('ಜರ್ಮನ್ ಸಾಮ್ರಾಜ್ಯದ ಅಂಕಿಅಂಶಗಳು,' ಸಂ. 211. – ಸಂ.).

**Henger, *Die Kapitalsanlage der Französen*, St., 1913 (ಹೆಂಗೆರ್, 'ಫ್ರೆಂಚ್ ಬಂಡವಾಳ ತೊಡಗಿಸಿದ ವಿವರಗಳು,' ಷ್ಟುಟ್‌ಗರ್ಟ್, 1913. – ಸಂ.).

***Hourwich, *Immigration and Labour*, N. Y., 1913 (ಹೌರ್‍ವಿಚ್, 'ವಲಸೆ ಬಂದವರು ಹಾಗೂ ಶ್ರಮ'), ನ್ಯೂಯಾರ್ಕ್, 1913. – ಸಂ.).

ಮುನ್ನವೇ ಕಾಣಿಸಿಕೊಂಡಿತೆಂಬುದನ್ನು ಗಮನಿಸಬೇಕು. ಏಕೆಂದರೆ ಸಾಮ್ರಾಜ್ಯವಾದದ ಎರಡು ಮುಖ್ಯ ವಿಶಿಷ್ಟ ಲಕ್ಷಣಗಳು – ವಿಶಾಲ ವಸಾಹತು ಆಸ್ತಿಗಳು ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಏಕಸ್ವಾಮ್ಯ ಸ್ಥಾನ, ಇವು – ಗ್ರೇಟ್ ಬ್ರಿಟನ್‌ನಲ್ಲಿ 19ನೆಯ ಶತಮಾನದ ಮಧ್ಯದಿಂದೀಚೆಗೆ ಕಾಣಿಸಿಕೊಂಡವು. ಕಾರ್ಮಿಕ ವರ್ಗ ಚಳವಳಿಯಲ್ಲಿ ಸಂದರ್ಭಸಾಧಕತನ ಹಾಗೂ ಬ್ರಿಟಿಷ್ ಬಂಡವಾಳವಾದದ ಸಾಮ್ರಾಜ್ಯಶಾಹಿ ಲಕ್ಷಣ ಗಳು, ಇವುಗಳ ನಡುವಿನ ಈ ಸಂಬಂಧವನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಹಲವಾರು ದಶಕಗಳ ಕಾಲ ಕ್ರಮಬದ್ಧವಾಗಿ ಪರಿಶೀಲಿಸಿದರು. ಉದಾಹರಣೆಗೆ, 1858ರ ಅಕ್ಟೋಬರ್ 7ರಂದು ಎಂಗೆಲ್ಸ್ ಮಾರ್ಕ್ಸ್‌ರವರಿಗೆ ಬರೆದರು: "ಇಂಗ್ಲಿಷ್ ಶ್ರಮಜೀವಿ ವರ್ಗವು ವಾಸ್ತವವಾಗಿ ಹೆಚ್ಚು ಬೂರ್ಷ್ವಾ ಆಗುತ್ತಿದೆ. ಹಾಗಾಗಿ ಎಲ್ಲ ರಾಷ್ಟ್ರಗಳಿಗಿಂತಲೂ ಅತ್ಯಂತ ಹೆಚ್ಚು ಬೂರ್ಷ್ವಾ ಆದ ಈ ದೇಶವು ಅಂತಿಮವಾಗಿ ಬೂರ್ಷ್ವಾಸೀಯ ಜೊತೆಗೇ ಒಂದು ಬೂರ್ಷ್ವಾ ಶ್ರೀಮಂತ ವರ್ಗವನ್ನೂ ಬೂರ್ಷ್ವಾ ಶ್ರಮಜೀವಿ ವರ್ಗವನ್ನೂ ಹೊಂದಿರುವ ಗುರಿಯನ್ನು ಸ್ಪಷ್ಟವಾಗಿಯೇ ಇಟ್ಟುಕೊಂಡಿದೆ. ಇಡೀ ಜಗತ್ತನ್ನು ಶೋಷಿಸುತ್ತಿರುವಂಥ ದೇಶವೊಂದಕ್ಕೆ ಇದು ಸ್ವಲ್ಪ ಮಟ್ಟಿಗೆ ಸಮರ್ಥನೀಯವಾದುದೇ ಎನ್ನಿ." ಇದಾದ ಸುಮಾರು ಕಾಲು ಶತಮಾನದ ನಂತರ 1881ರ ಆಗಸ್ಟ್ 11ರ ತೇದಿಯ ಪತ್ರವೊಂದರಲ್ಲಿ ಎಂಗೆಲ್ಸ್‌ರು, "ಬೂರ್ಷ್ವಾ ವರ್ಗಕ್ಕೆ ಮಾರಾಟವಾದ, ಅಥವಾ ಆ ವರ್ಗದಿಂದ ಹಣ ಪಡೆಯುವ ಜನರಿಂದ ಮಾರ್ಗದರ್ಶಿತವಾಗುವುದಕ್ಕೆ ತಮ್ಮನ್ನು ಬಿಟ್ಟುಕೊಂಡ ಅತ್ಯಂತ ಕೀಳು ಇಂಗ್ಲಿಷ್ ಟ್ರೇಡ್ ಯೂನಿಯನ್‌ಗಳ" ಬಗೆಗೆ ಹೇಳಿದ್ದಾರೆ. 1882ರ ಸೆಪ್ಟೆಂಬರ್ 12ರ ತೇದಿ ಯುಳ್ಳ, ಕೌತ್‌ಸ್ಕಿಯವರಿಗೆ ಬರೆದ ಪತ್ರವೊಂದರಲ್ಲಿ ಎಂಗೆಲ್ಸ್ ಬರೆದರು: "ಇಂಗ್ಲಿಷ್ ಕಾರ್ಮಿಕರು ವಸಾಹತು ನೀತಿಯ ಬಗೆಗೆ ಏನು ಯೋಚಿಸುತ್ತಾರೆಂದು ನೀವು ಕೇಳು ತ್ತೀರಿ. ಏನು ಹೇಳುವುದು – ಒಟ್ಟಿನಲ್ಲಿ ರಾಜಕಾರಣದ ಬಗೆಗೆ ಏನು ಯೋಚಿ ಸುತ್ತಾರೋ ಅದನ್ನೇ ವಸಾಹತು ನೀತಿಯ ಬಗೆಗೂ ಯೋಚಿಸುತ್ತಾರೆ. ಇಲ್ಲಿ ಕಾರ್ಮಿ ಕರ ಪಾರ್ಟಿ ಎಂಬುದೇ ಇಲ್ಲ. ಕನ್ಸರ್ವಟೀವ್ ಹಾಗೂ ಲಿಬರಲ್-ರ್‍ಯಾಡಿಕಲ್ ಪಾರ್ಟಿ ಗಳಷ್ಟೆ ಇವೆ. ಇಂಗ್ಲೆಂಡಿನ ಜಾಗತಿಕ ಮಾರುಕಟ್ಟೆ ಹಾಗೂ ವಸಾಹತುಗಳ ಏಕಸ್ವಾ ಮ್ಯದ ಸವಿಯೂಟದಲ್ಲಿ ಇಲ್ಲಿನ ಕಾರ್ಮಿಕರೂ ಅತ್ಯಾನಂದದಿಂದ ಪಾಲ್ಗೊಳ್ಳುತ್ತಿದ್ದಾರೆ."*

---

**Briefwechsel von Marx und Engels*, Bd. II, S. 290; IV, 433 ('ಮಾರ್ಕ್ಸ್, ಎಂಗೆಲ್ಸ್ ಪತ್ರವ್ಯವಹಾರ,' ಸಂ. II, ಪು. 290, IV, 433. – ಸಂ.). K. Kautsky, *Sozialismus und Kolonialpolitik*, Brl., 1907 (ಕಾರ್ಲ್ ಕೌತ್‌ಸ್ಕಿ, 'ಸಮಾಜವಾದ ಹಾಗೂ ವಸಾಹತು ನೀತಿ,' ಬರ್ಲಿನ್, 1907. – ಸಂ.), ಪು. 79. ಕೌತ್‌ಸ್ಕಿಯವರು ಈ ಪುಸ್ತಕವನ್ನು ತಾವಿನ್ನೂ ಮಾರ್ಕ್ಸ್‌ವಾದಿಯಾಗಿದ್ದ ಆ ದೂರ ದಿನಗಳಲ್ಲಿ ಬರೆದರು.

(1892ರಲ್ಲಿ ಪ್ರಕಟವಾದ 'ಇಂಗ್ಲೆಂಡಿನಲ್ಲಿ ಕಾರ್ಮಿಕ ವರ್ಗದ ಪರಿಸ್ಥಿತಿ' ಎಂಬ ಗ್ರಂಥದ ದ್ವಿತೀಯ ಆವೃತ್ತಿಗೆ ಬರೆದ ಮುನ್ನುಡಿಯಲ್ಲೂ ಎಂಗೆಲ್ಸ್‌ರು ಇದೇ ವಿಚಾರಗಳನ್ನು ವ್ಯಕ್ತಪಡಿಸಿದರು.)

ಇದು ಸ್ಪಷ್ಟವಾಗಿ ಕಾರಣಗಳನ್ನೂ ಪರಿಣಾಮಗಳನ್ನೂ ತೋರಿಸಿಕೊಡುತ್ತದೆ. ಕಾರಣಗಳು ಇವು: 1) ಈ ದೇಶವು ಇಡೀ ಜಗತ್ತನ್ನು ಶೋಷಿಸುತ್ತಿರುವುದು; 2) ಜಾಗತಿಕ ಮಾರುಕಟ್ಟೆಯಲ್ಲಿ ಅದರ ಏಕಸ್ವಾಮ್ಯ ಸ್ಥಾನ; 3) ಅದರ ವಸಾಹತು ಏಕಸ್ವಾಮ್ಯ. ಪರಿಣಾಮಗಳು ಇವು: 1) ಬ್ರಿಟಿಷ್ ಶ್ರಮಜೀವಿ ವರ್ಗದ ಒಂದು ವಿಭಾಗವು ಬೂರ್ಷ್ವಾ ಆಗುತ್ತಿದೆ; 2) ಶ್ರಮಜೀವಿ ವರ್ಗದ ಒಂದು ವಿಭಾಗವು ಬೂರ್ಷ್ವಾಸೀಯಿಂದ ಕೊಳ್ಳಲ್ಪಟ್ಟ ಅಥವಾ ಕೊನೆಯ ಪಕ್ಷ ಅದರಿಂದ ಹಣವನ್ನು ತೆಗೆದುಕೊಳ್ಳುತ್ತಿರುವ ಜನರಿಂದ ಮಾರ್ಗದರ್ಶಿತವಾಗಿರಲು ತನ್ನನ್ನು ಬಿಟ್ಟುಕೊಳ್ಳುತ್ತಿದೆ. 20ನೆಯ ಶತಮಾನದ ಆದಿಭಾಗದ ಸಾಮ್ರಾಜ್ಯವಾದವು ಜಗತ್ತನ್ನು ಕೆಲವೇ ರಾಜ್ಯಗಳ ನಡುವೆ ವಿಭಜಿಸುವುದನ್ನು ಪೂರ್ಣಗೊಳಿಸಿತು. ಈ ರಾಜ್ಯಗಳಲ್ಲಿ ಒಂದೊಂದೂ ಈಗ "ಇಡೀ ಜಗತ್ತಿನ" ಒಂದು ಭಾಗವನ್ನು 1858ರಲ್ಲಿ ಇಂಗ್ಲೆಂಡು ಶೋಷಿಸುತ್ತಿದ್ದುದಕ್ಕಿಂತ ಸ್ವಲ್ಪ ಕಮ್ಮಿಯಷ್ಟೆ ಆದ ಭಾಗವನ್ನು ಶೋಷಿಸುತ್ತಿದೆ (ಅದರಿಂದ ಅತಿಹೆಚ್ಚಿನ ಲಾಭ ಗಿಟ್ಟಿಸಿಕೊಳ್ಳುತ್ತಿದೆ ಎಂಬ ಅರ್ಥದಲ್ಲಿ); ಟ್ರಸ್ಟುಗಳು, ಕಾರ್ಟೆಲ್‌ಗಳು ಹಣ ಕಾಸು ಬಂಡವಾಳ, ಸಾಲಿಗ ಸಾಲಗಾರ ಸಂಬಂಧಗಳು ಇವುಗಳ ಫಲವಾಗಿ ಈ ಒಂದೊಂದೂ ರಾಜ್ಯವು ಜಾಗತಿಕ ಮಾರುಕಟ್ಟೆಯಲ್ಲಿ ಏಕಸ್ವಾಮ್ಯ ಸ್ಥಾನವನ್ನು ಪಡೆದುಕೊಂಡಿದೆ; ಅವುಗಳಲ್ಲಿ ಒಂದೊಂದೂ ಸ್ವಲ್ಪ ಪ್ರಮಾಣದಲ್ಲಿ ವಸಾಹತು ಏಕಸ್ವಾಮ್ಯವನ್ನು ಅನುಭೋಗಿಸುತ್ತಿದೆ (ಇಡೀ ವಸಾಹತು ಜಗತ್ತು ಒಟ್ಟು 75 ಮಿಲಿಯ ಚದುರ ಕಿ.ಮೀ.ಗಳಷ್ಟು ಪ್ರದೇಶದಲ್ಲಿ ಹರಡಿದ್ದರೆ ಇದರಲ್ಲಿ 65 ಮಿಲಿಯ ಚ.ಕಿ.ಮೀ. ಅಥವಾ ಶೇ. 86ರಷ್ಟು ಆರು ಬೃಹತ್ ರಾಷ್ಟ್ರಗಳಿಗೆ ಸೇರಿದೆ; 61 ಮಿಲಿಯ ಚ.ಕಿ.ಮೀ. ಅಥವಾ ಶೇ. 81ರಷ್ಟು ಮೂರು ಬೃಹತ್ ರಾಷ್ಟ್ರಗಳಿಗೆ ಸೇರಿದೆ).

ಪ್ರಸಕ್ತ ಪರಿಸ್ಥಿತಿಯ ವಿಶಿಷ್ಟ ಲಕ್ಷಣವೆಂದರೆ, ಸಂದರ್ಭಸಾಧಕವಾದಕ್ಕೂ ಕಾರ್ಮಿಕ ವರ್ಗ ಚಳವಳಿಯ ಸಾಮಾನ್ಯ ಹಾಗೂ ಪ್ರಧಾನ ಹಿತಗಳಿಗೂ ಮಧ್ಯೆ ಬದ್ಧ ವಿರೋಧವನ್ನು ಹೆಚ್ಚಿಸದೆ ಇರಲಾಗದಂತಹ ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಗಳು ಪ್ರಬಲವಾಗಿರುವುದು: ಸಾಮ್ರಾಜ್ಯವಾದವು ಇಂದು ಭ್ರೂಣಾವಸ್ಥೆಯಿಂದ ಪ್ರಬಲ ಪದ್ಧತಿಯಾಗಿ ಬೆಳೆದಿದೆ; ಬಂಡವಾಳಶಾಹಿ ಏಕಸ್ವಾಮ್ಯ ಸಂಸ್ಥೆಗಳು ಆರ್ಥಿಕತೆಯಲ್ಲೂ ರಾಜಕಾರಣದಲ್ಲೂ ಪ್ರಥಮ ಸ್ಥಾನ ಪಡೆದುಕೊಂಡಿವೆ; ಜಗತ್ತಿನ ವಿಭಜನೆ ಪೂರ್ಣಗೊಂಡಿದೆ, ಮತ್ತೊಂದು ಕಡೆ ಗ್ರೇಟ್ ಬ್ರಿಟನ್‌ನ ಅವಿಭಕ್ತ ಏಕಸ್ವಾಮ್ಯದ ಬದಲು ಕೆಲವು ಸಾಮ್ರಾಜ್ಯಶಾಹಿ ಬೃಹತ್ ರಾಷ್ಟ್ರಗಳು ಈ ಏಕಸ್ವಾಮ್ಯದಲ್ಲಿ ಪಾಲ್ಗೊಳ್ಳುವ ಹಕ್ಕು ಮುಂದಿಡುತ್ತಿರುವುದನ್ನು ನಾವು ಕಾಣುತ್ತೇವೆ ಮತ್ತು ಈ ಹೋರಾಟವು 20ನೆಯ ಶತಮಾನದ ಆದಿಭಾಗದ ಇಡೀ ಕಾಲಾವಧಿಯ ವಿಶಿಷ್ಟ ಲಕ್ಷಣವಾಗಿದೆ.

19ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಇಂಗ್ಲೆಂಡ್‌ನಲ್ಲಿ ಜಯಗಳಿಸಿದಂತೆ ಸಂದರ್ಭ ಸಾಧಕವಾದವು ಈಗ ಒಂದೇ ದೇಶದ ಕಾರ್ಮಿಕ ವರ್ಗ ಚಳವಳಿಯಲ್ಲಿ ಹಲವಾರು ದಶಕಗಳ ಕಾಲ ಸಂಪೂರ್ಣವಾಗಿ ವಿಜಯಿಯಾಗಿರಲಾರದು; ಆದರೆ ಅದು ಅನೇಕ ದೇಶಗಳಲ್ಲಿ ಕಳಿತಿದೆ, ಅತಿಯಾಗಿ ಕಳಿತಿದೆ ಹಾಗೂ ಕೊಳೆತಿದೆ, "ಸಾಮಾಜಿಕ ಸ್ವದೇಶ ಮೂಢಾಭಿಮಾನ"ದ ರೂಪದಲ್ಲಿ ಬೂರ್ಷ್ವಾ ನೀತಿಯೊಂದಿಗೆ ಸಂಪೂರ್ಣವಾಗಿ ಮಿಳನಗೊಂಡಿದೆ. *

# IX. ಸಾಮ್ರಾಜ್ಯವಾದದ ಪರಾಮರ್ಶೆ

ಸಾಮ್ರಾಜ್ಯವಾದದ ಪರಾಮರ್ಶೆ ಎಂದರೆ, ಅದರ ವಿಶಾಲ ಅರ್ಥದಲ್ಲಿ, ಸಮಾಜದ ವಿವಿಧ ವರ್ಗಗಳು ತಮ್ಮ ಸಾಮಾನ್ಯ ಸಿದ್ಧಾಂತದ ದೃಷ್ಟಿಕೋನದಿಂದ, ಸಾಮ್ರಾಜ್ಯಶಾಹಿ ನೀತಿಯ ಬಗೆಗೆ ತಳೆಯುವ ಮನೋಧರ್ಮ.

ಹಣಕಾಸು ಬಂಡವಾಳವು ಅಪಾರ ಪ್ರಮಾಣಗಳಲ್ಲಿ ಕೆಲವೇ ಜನರ ಕೈಗಳಲ್ಲಿ ಕೇಂದ್ರೀಕೃತವಾಗಿ ಇಂಥ ಸಂಬಂಧಗಳ ಹಾಗೂ ಬಾಂಧವ್ಯಗಳ ಅತ್ಯಂತ ವಿಸ್ತೃತ ಹಾಗೂ ನಿಕಟ ಜಾಲಬಂಧವನ್ನು ಸೃಜಿಸುತ್ತದೆ. ಈ ಜಾಲಬಂಧವು ಒಂದು ಕಡೆ ಸಣ್ಣ ಹಾಗೂ ಮಧ್ಯಮ ಬಂಡವಾಳಗಾರರನ್ನಷ್ಟೆ ಅಲ್ಲ, ಅತ್ಯಂತ ಸಣ್ಣ ಬಂಡವಾಳ ಗಾರರನ್ನೂ ತನಗೆ ಅಧೀನಪಡಿಸಿಕೊಳ್ಳುತ್ತದೆ, ಮತ್ತೊಂದು ಕಡೆ ಜಗತ್ತನ್ನು ವಿಭಜಿಸಿ ಕೊಳ್ಳಲೂ ಇತರ ದೇಶಗಳ ಮೇಲೆ ಪ್ರಭುತ್ವ ಸ್ಥಾಪಿಸಲೂ ಇತರ ರಾಷ್ಟ್ರಗಳ ರಾಜ್ಯಗಳ ಧನಾಧಿಪತಿ ವೃಂದಗಳ ವಿರುದ್ಧ ಹೋರಾಟವನ್ನು ಹೆಚ್ಚು ಹೆಚ್ಚಾಗಿ ತೀವ್ರಗೊಳಿಸುತ್ತದೆ. ಇವೆಲ್ಲವುಗಳ ಫಲವಾಗಿ ಆಸ್ತಿವಂತ ವರ್ಗಗಳು ಸಂಪೂರ್ಣವಾಗಿ ಸಾಮ್ರಾಜ್ಯವಾದದ ಪಕ್ಷಕ್ಕೆ ಹೋಗುವಂತಾಗುತ್ತದೆ. ಸಾಮ್ರಾಜ್ಯವಾದದ ಭವ್ಯ ಭವಿಷ್ಯತ್ತಿನ ಬಗೆಗೆ "ಸಾರ್ವತ್ರಿಕ" ಉತ್ಸಾಹ, ಅದನ್ನು ಉಗ್ರವಾಗಿ ಸಮರ್ಥಿಸುವುದು, ಅದನ್ನು ಅತ್ಯುಜ್ವಲ ವರ್ಣಗಳಲ್ಲಿ ಬಣ್ಣಿಸಿ ತೋರಿಸುವುದು – ಹೀಗಿವೆ ಇಂದಿನ ಕಾಲದ ಚಿಹ್ನೆಗಳು. ಸಾಮ್ರಾಜ್ಯವಾದಿ ಸಿದ್ಧಾಂತವು ಕಾರ್ಮಿಕ ವರ್ಗದೊಳಕ್ಕೂ ಭೇದಿಸಿಕೊಂಡು ಹೋಗುತ್ತದೆ. ಅದನ್ನು ಇತರ ವರ್ಗಗಳಿಂದ ಪ್ರತ್ಯೇಕಿಸಲು ಯಾವುದೇ ಚೀಣೀ ಗೋಡೆಯೂ ಇಲ್ಲ. ಇಂದಿನ ಜರ್ಮನಿಯ "ಸೋಷಲ್ ಡೆಮೊಕ್ರಾಟಿಕ್"

---

*ಪೊತ್ರೇಸೊವ್‌ಗಳು, ಛೆಂಕೇಲಿಗಳು, ಮಾಸ್ಲವ್‌ಗಳು ಇತ್ಯಾದಿ ಜನರು ಪ್ರತಿ ನಿಧಿಸುವ ರಷ್ಯನ್ ಸಾಮಾಜಿಕ ಸ್ವದೇಶ ಮೂಢಾಭಿಮಾನದ ಬಹಿರಂಗ ರೂಪವೂ, (ಛೆಯಿಡ್ಜೆ, ಸ್ಕೋಬೆಲೆವ್, ಅಕ್ಸೆಲ್‌ರೊದ್, ಮಾರ್ತೊವ್ ಇತ್ಯಾದಿ ಜನರು ಪ್ರತಿ ನಿಧಿಸುವ) ಅದರ ಅಂತರಂಗ ರೂಪವೂ ಸಂದರ್ಭಸಾಧಕವಾದದ ರಷ್ಯನ್ ಮಾದರಿ ಯಿಂದಲೇ – ವಿಸರ್ಜನವಾದ[30] ಎಂಬುದರಿಂದಲೇ – ಉದ್ಭವಿಸಿವೆ.

ಎಂದು ಕರೆದುಕೊಳ್ಳುವಂಥ ಪಾರ್ಟಿಯ ನಾಯಕರನ್ನು "ಸಾಮಾಜಿಕ-ಸಾಮ್ರಾಜ್ಯ ವಾದಿಗಳು" ಎಂದು ಸರಿಯಾಗಿಯೇ ಕರೆಯಲಾಗಿದೆ. ಅಂದರೆ ಅವರು ಮಾತಿನಲ್ಲಿ ಸಮಾಜವಾದಿಗಳು ಕೃತಿಯಲ್ಲಿ ಸಾಮ್ರಾಜ್ಯವಾದಿಗಳು. 1902ರಷ್ಟು ಹಿಂದೆಯೇ ಹಾಬ್ಸನ್‌ರು ಇಂಗ್ಲೆಂಡಿನಲ್ಲಿ "ಫೇಬಿಯನ್ ಸಾಮ್ರಾಜ್ಯವಾದಿಗಳು" ಇದ್ದುದನ್ನು ಗಮನಿಸಿದರು. ಈ ಸಾಮ್ರಾಜ್ಯವಾದಿಗಳು ಸಂದರ್ಭಸಾಧಕವಾದಿ 'ಫೇಬಿಯನ್ ಸೊಸೈಟಿ'[31]ಗೆ ಸೇರಿದವರಾಗಿದ್ದರು.

ಬೂರ್ಷ್ವಾ ವಿದ್ವಾಂಸರೂ ಪತ್ರಕರ್ತರೂ ಸಾಮಾನ್ಯವಾಗಿ ಸಾಮ್ರಾಜ್ಯವಾದವನ್ನು ಸ್ವಲ್ಪಮಟ್ಟಿಗೆ ಮರೆಮಾಚಿದ ರೀತಿಯಲ್ಲಿ ಸಮರ್ಥಿಸುತ್ತಾರೆ. ಸಂಪೂರ್ಣ ಆಧಿಪತ್ಯ ಸ್ಥಾಪಿಸುವ ಅದರ ಸ್ವರೂಪವನ್ನೂ ಅದರ ಆಳವಾದ ಬೇರುಗಳನ್ನೂ ಅವರು ಅಸ್ಪಷ್ಟಗೊಳಿಸುತ್ತಾರೆ, ಅಪ್ರಧಾನವಾದ ಹಾಗೂ ಗೌಣವಾದ ವಿವರಗಳನ್ನು ಮುಂದಕ್ಕೆ ತರಲು ಯತ್ನಿಸುತ್ತಾರೆ, ಟ್ರಸ್ಟುಗಳ ಮೇಲೂ ಬ್ಯಾಂಕುಗಳ ಮೇಲೂ ಪೊಲೀಸ್ ಮೇಲ್ವಿಚಾರಣೆಗಳಂಥ "ಸುಧಾರಣೆ"ಗಳ ಶುದ್ಧ ಹಾಸ್ಯಾಸ್ಪದ ಯೋಜನೆಗಳ ಮೂಲಕ ಸಾಮ್ರಾಜ್ಯವಾದದ ಸಾರಭೂತ ಗುಣಗಳಿಂದ ಸಾರ್ವಜನಿಕರ ಗಮನವನ್ನು ಬೇರೆ ಕಡೆಗೆ ಸೆಳೆಯಲು ತಮ್ಮ ಶಕ್ತಿ ಮೀರಿ ಯತ್ನಿಸುತ್ತಾರೆ. ಸಾಮ್ರಾಜ್ಯವಾದದ ಮೂಲಭೂತ ಲಕ್ಷಣಗಳನ್ನು ಸುಧಾರಿಸುವ ವಿಚಾರ ಶುದ್ಧ ಅವಿವೇಕವಾದುದು ಎಂದು ಒಮ್ಮೊಮ್ಮೆ ಸಿನಿಕತನದ, ಬಿಚ್ಚು ಮನಸ್ಸಿನ ಕೆಲವು ಸಾಮ್ರಾಜ್ಯಶಾಹಿಗಳು ಧೈರ್ಯದಿಂದ ಒಪ್ಪಿಕೊಳ್ಳಲು ಮುಂದೆ ಬರುತ್ತಾರೆ.

ಒಂದು ಉದಾಹರಣೆಯನ್ನು ನೀಡುತ್ತೇವೆ. ವಸಾಹತುಗಳಲ್ಲಿ ನಡೆಯುತ್ತಿರುವ ರಾಷ್ಟ್ರೀಯ ವಿಮೋಚನಾ ಚಳವಳಿಗಳನ್ನು ತಾವು ಗಮನವಿತ್ತು ವೀಕ್ಷಿಸುತ್ತಿರುವುದಾಗಿ ಜರ್ಮನ್ ಸಾಮ್ರಾಜ್ಯಶಾಹಿಗಳು 'ವಿಶ್ವ ಆರ್ಥಿಕತೆಯ ದಾಖಲೆ ಪತ್ರಗಳು' ಪತ್ರಿಕೆಯಲ್ಲಿ ತಿಳಿಸಲು ಯತ್ನಿಸುತ್ತಾರೆ. ವಸಾಹತುಗಳಲ್ಲಿ, ಅಂದರೆ, ಜರ್ಮನಿಗೆ ಸೇರಿರದಂಥ ವಸಾಹತುಗಳಲ್ಲಿ, ಎಂದು ಅವರು ಹೇಳುವುದೆನ್ನಿ. ಭಾರತದಲ್ಲಿ ಉಂಟಾಗಿರುವ ಅಶಾಂತ ಪರಿಸ್ಥಿತಿ ಹಾಗೂ ಪ್ರತಿಭಟನಾ ಚಳವಳಿಗಳನ್ನೂ, ನೇಟಾಲ್(ದಕ್ಷಿಣ ಆಫ್ರಿಕಾ)ನಲ್ಲಿನ ಚಳವಳಿಯನ್ನೂ, ಡಚ್ ಈಸ್ಟ್ ಇಂಡೀಸ್ ಇತ್ಯಾದಿ ದೇಶಗಳಲ್ಲಿನ ಸ್ವಾತಂತ್ರ್ಯ ಚಳವಳಿಗಳನ್ನೂ ತಾವು ಗಮನಿಸುತ್ತಿರುವುದಾಗಿ ಅವರು ಬರೆಯುತ್ತಾರೆ. 1910ರ ಜೂನ್ 28-30ರಂದು ಜರುಗಿದ, ವಿದೇಶೀ ಆಳ್ವಿಕೆಗೆ ಒಳಗಾಗಿರುವಂಥ ಏಷ್ಯ, ಆಫ್ರಿಕ, ಯೂರೋಪ್ ಜನತೆಗಳ ವಿವಿಧ ಪರಾಧೀನ ರಾಷ್ಟ್ರಗಳ ಹಾಗೂ ಕುಲಗಳ ಪ್ರತಿನಿಧಿಗಳ ಸಮ್ಮೇಳನದ ಬಗೆಗೆ ಇಂಗ್ಲಿಷ್ ವರದಿಯೊಂದರ ಮೇಲೆ ವ್ಯಾಖ್ಯಾನಿಸುತ್ತ, ಅವರಲ್ಲೊಬ್ಬರು, ಆ ಸಮ್ಮೇಳನದಲ್ಲಿ ಮಾಡಿದ ಭಾಷಣಗಳ ಮೌಲ್ಯನಿರ್ಣಯವನ್ನು ಈ ಕೆಳಗಿನಂತೆ ಮಾಡುತ್ತಾರೆ: "ಸಾಮ್ರಾಜ್ಯವಾದದ ವಿರುದ್ಧ ಹೋರಾಡಬೇಕು; ಆಳುವ ರಾಜ್ಯಗಳು ಪರಾಧೀನ ಜನತೆಗಳ ಸ್ವಾತಂತ್ರ್ಯದ ಹಕ್ಕನ್ನು ಮನ್ನಿಸಬೇಕು; ಬೃಹತ್ ರಾಷ್ಟ್ರಗಳಿಗೂ ದುರ್ಬಲ ಜನತೆಗಳಿಗೂ ನಡುವೆ ಮಾಡಿಕೊಳ್ಳ

ಲಾಗಿರುವ ಒಡಂಬಡಿಕೆಗಳ ಪೂರೈಕೆಯ ಮೇಲೆ ಅಂತರರಾಷ್ಟ್ರೀಯ ಟ್ರಿಬ್ಯೂನಲ್ (ತೀರ್ಪುಗಾರ ಮಂಡಲಿ)ಯೊಂದು ಗಮನವಿರಿಸಿರಬೇಕು, ಎಂದು ನಮಗೆ ಹೇಳ ಲಾಗುತ್ತದೆ. ಈ ಮುಗ್ಧ ಕೋರಿಕೆಗಳನ್ನು ವ್ಯಕ್ತಪಡಿಸುವುದನ್ನು ಬಿಟ್ಟು ಅದಕ್ಕೂ ಮುಂದೆ ಅವರು ಹೋಗುವುದಿಲ್ಲ. ಸಾಮ್ರಾಜ್ಯವಾದವು ಇಂದಿನ ಬಂಡವಾಳವಾದ ದೊಂದಿಗೆ ಅವಿಭಾಜ್ಯವಾಗಿ ಸಂಬಂಧಿತವಾಗಿದೆ; ಆದ್ದರಿಂದ (!!) ಸಾಮ್ರಾಜ್ಯ ವಾದದ ವಿರುದ್ಧ ನೇರ ಹೋರಾಟವು, ಅದು ಸಾಮ್ರಾಜ್ಯವಾದದ ಕೆಲವು ವಿಶೇಷವಾಗಿ ಅಸಹ್ಯವಾದ ಅತಿರೇಕಗಳ ವಿರುದ್ಧ ಪ್ರತಿಭಟಿಸುವುದಕ್ಕಷ್ಟೆ ಸೀಮಿತವಾಗಿರದೆ ಇದ್ದರೆ, ನಿರರ್ಥಕ, ಎಂಬ ಸತ್ಯಾಂಶವನ್ನು ಅವರು ಎಷ್ಟು ಮಾತ್ರವೂ ಅರ್ಥಮಾಡಿಕೊಂಡಿ ರುವಂತೆ ನಮಗೆ ಕಂಡುಬರುವುದಿಲ್ಲ."* ಸಾಮ್ರಾಜ್ಯವಾದದ ಬುನಾದಿಯನ್ನು ಸುಧಾ ರಿಸುವುದು ಮೋಸವಾದುದರಿಂದ, ಅದು ಒಂದು "ಮುಗ್ಧ ಹಾರೈಕೆ"ಯಷ್ಟೆ ಆದು ದರಿಂದ, ಮರ್ದಿತ ರಾಷ್ಟ್ರಗಳ ಬೂರ್ಷ್ವಾ ಪ್ರತಿನಿಧಿಗಳು "ಮತ್ತಷ್ಟು" ಮುಂದಕ್ಕೆ ಹೋಗುವುದಿಲ್ಲವಾದ ಕಾರಣ, ಮರ್ದಿಸುವ ರಾಷ್ಟ್ರದ ಬೂರ್ಷ್ವಾ ಪ್ರತಿನಿಧಿ "ಮತ್ತಷ್ಟು" ಹಿಂದಕ್ಕೆ ಹೋಗುತ್ತಾನೆ, "ವೈಜ್ಞಾನಿಕ"ವೆಂಬ ಸೋಗಿನಲ್ಲಿ ಸಾಮ್ರಾಜ್ಯ ವಾದದ ಮುಂದೆ ಗುಲಾಮನಂತೆ ವರ್ತಿಸುವತ್ತ ಹೋಗುತ್ತಾನೆ. ಎಂತಹ "ತರ್ಕ" ನಿಜಕ್ಕೂ!

ಸಾಮ್ರಾಜ್ಯವಾದದ ಬುನಾದಿಯನ್ನು ಸುಧಾರಿಸುವುದು ಸಾಧ್ಯವೇ ಇಲ್ಲವೇ, ಅದು ಉಂಟುಮಾಡುವಂಥ ವೈರುಧ್ಯಗಳನ್ನು ಮತ್ತಷ್ಟು ತೀವ್ರಗೊಳಿಸಿ ಗಾಢಗೊಳಿ ಸುವತ್ತ ಮುಂದೆ ಹೋಗಬೇಕೇ ಅಥವಾ ಹಿಂದಕ್ಕೆ, ಈ ವೈರುಧ್ಯಗಳನ್ನು ಉಪ ಶಮನಗೊಳಿಸುವತ್ತ ಹೋಗಬೇಕೇ – ಇವು ಸಾಮ್ರಾಜ್ಯವಾದದ ಪರಾಮರ್ಶೆಯಲ್ಲಿನ ಮೂಲಭೂತ ಪ್ರಶ್ನೆಗಳು. ಮಾರ್ಗದುದ್ದಕ್ಕೂ ಪ್ರತಿಗಾಮಿತ್ವ ಇರುವುದೂ, ಹಣ ಕಾಸು ಆಲಿಗಾರ್ಕಿಯ ದಬ್ಬಾಳಿಕೆಯ ಫಲವಾಗಿ ಹಾಗೂ ಮುಕ್ತ ಸ್ಪರ್ಧೆಯನ್ನು ತೊಡೆದು ಹಾಕಿದುದರ ಫಲವಾಗಿ ರಾಷ್ಟ್ರೀಯ ಮರ್ದನವು ಹೆಚ್ಚುವುದೂ ಸಾಮ್ರಾಜ್ಯ ವಾದದ ವಿಶಿಷ್ಟ ರಾಜಕೀಯ ಲಕ್ಷಣಗಳಾದುದರಿಂದ, 20ನೆಯ ಶತಮಾನದ ಆರಂಭದಲ್ಲಿ ಬಹುಮಟ್ಟಿಗೆ ಎಲ್ಲ ಸಾಮ್ರಾಜ್ಯಶಾಹಿ ದೇಶಗಳಲ್ಲೂ ಸಾಮ್ರಾಜ್ಯವಾದಕ್ಕೆ ಒಂದು ಪೆಟಿ ಬೂರ್ಷ್ವಾ ಪ್ರಜಾಸತ್ತಾತ್ಮಕ ವಿರೋಧ ಹುಟ್ಟಿಕೊಂಡಿತು. ಕೌತ್‌ಸ್ಕಿ ಯವರು ಆರ್ಥಿಕ ಬುನಾದಿಯಲ್ಲಿ ನಿಜಕ್ಕೂ ಪ್ರತಿಗಾಮಿಯಾಗಿರುವ ಈ ಪೆಟಿ ಬೂರ್ಷ್ವಾ ಸುಧಾರಣಾವಾದಿ ವಿರೋಧವನ್ನು ಪ್ರತಿಭಟಿಸುವ ತೊಂದರೆಯನ್ನೂ ತೆಗೆದುಕೊಳ್ಳಲಿಲ್ಲ, ಪ್ರತಿಭಟಿಸಲು ಅಸಮರ್ಥರಾಗಿದ್ದರು ಅಷ್ಟೆ ಅಲ್ಲ, ಆಚರಣೆಯಲ್ಲಿ ಅದರೊಂದಿಗೇ ಸೇರಿಕೊಂಡರು. ಇದೇ ಕೌತ್‌ಸ್ಕಿಯವರೂ ವಿಶಾಲವಾದ ಅಂತರ

---

* *Weltwirtschaftliches Archiv*, Bd. II, ('ವಿಶ್ವ ಆರ್ಥಿಕತೆಯ ದಾಖಲೆ ಪತ್ರಗಳು,' ಸಂಪುಟ 2. – ಸಂ.), ಪು. 193.

ರಾಷ್ಟ್ರೀಯ ಕೌತ್ಸ್ಕಿ ಪ್ರವೃತ್ತಿಯೂ ಮಾರ್ಕ್ಸ್‌ವಾದವನ್ನು ತ್ಯಜಿಸಿದುದರ ಸೂಚನೆಯಾಗಿದೆ.

1898ರಲ್ಲಿ ಸ್ಪೈನ್ ವಿರುದ್ಧ ಹೂಡಿದ ಸಾಮ್ರಾಜ್ಯಶಾಹಿ ಯುದ್ಧವು ಸಂಯುಕ್ತ ಸಂಸ್ಥಾನಗಳಲ್ಲಿ "ಸಾಮ್ರಾಜ್ಯಶಾಹಿ ವಿರೋಧಿ"ಗಳಲ್ಲಿ ಆ ಯುದ್ಧಕ್ಕೆ ಸಂಬಂಧಿಸಿ ವಿರೋಧವನ್ನು ಕೆರಳಿಸಿತು. ಇವರನ್ನು ಬೂರ್ಷ್ವಾ ಪ್ರಜಾಪ್ರಭುತ್ವದ ಕೊನೆಯ "ಮೋಹಿಕಾನ್"ರೆಂದು* ಪರಿಗಣಿಸಲಾಗಿದ್ದಿತು. ಇವರು ಈ ಯುದ್ಧವನ್ನು "ಪಾತಕ"ವೆಂದು ಘೋಷಿಸಿದರು, ವಿದೇಶೀ ಭೂಭಾಗಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಸಂವಿಧಾನದ ಉಲ್ಲಂಘನೆ ಎಂದು ಭಾವಿಸಿದರು, ಫಿಲಿಪ್ಪೀನ್ಸ್ ಜನರ ನಾಯಕ ಅಗ್ವಿನಾಲ್ಡೋನ ಬಗೆಗೆ ತೋರಿದ ವರ್ತನೆಯು (ಅಮೆರಿಕನ್ನರು ಆತನ ದೇಶಕ್ಕೆ ಸ್ವಾತಂತ್ರ್ಯ ನೀಡುವುದಾಗಿ ಮಾತು ಕೊಟ್ಟರು, ಆದರೆ ಅನಂತರ ತಮ್ಮ ಸೈನ್ಯವನ್ನು ತಂದಿರಿಸಿ ಅದನ್ನು ಸ್ವಾಧೀನಪಡಿಸಿಕೊಂಡರು) "ಉಗ್ರ ದೇಶಾಭಿಮಾನಿಗಳ ದ್ರೋಹ" ಎಂದು ಘೋಷಿಸಿದರು, ಲಿಂಕನ್‌ರ ಈ ಮಾತುಗಳನ್ನು ಉದ್ಧರಿಸಿದರು: "ಶ್ವೇತವರ್ಣೀಯನು ತನ್ನ ಮೇಲೆ ತಾನು ಆಡಳಿತ ನಡೆಸಿಕೊಂಡರೆ ಅದು ಸ್ವಯಮಾಡಳಿತವಾಗುತ್ತದೆ; ಆದರೆ ಅವನು ತನ್ನ ಮೇಲೆ ತಾನೇ ಆಡಳಿತ ನಡೆಸಿಕೊಳ್ಳುವುದರ ಜೊತೆಗೆ ಇತರರ ಮೇಲೂ ಅಧಿಕಾರ ನಡೆಸಿದರೆ, ಅದು ಇನ್ನೆಷ್ಟು ಮಾತ್ರವೂ ಸ್ವಯಮಾಡಳಿತವಲ್ಲ; ಅದು ನಿರಂಕುಶಾಡಳಿತ."** ಆದರೆ ಈ ಎಲ್ಲ ಟೀಕೆಯೂ ಸಾಮ್ರಾಜ್ಯವಾದಕ್ಕೂ ಟ್ರಸ್ಟುಗಳಿಗೂ ನಡುವೆ ಇರುವ, ಆದ್ದರಿಂದಾಗಿ ಸಾಮ್ರಾಜ್ಯವಾದಕ್ಕೂ ಬಂಡವಾಳವಾದದ ಅಡಿಪಾಯಗಳಿಗೂ ನಡುವೆ ಇರುವ ಅವಿಭಾಜ್ಯ ಸಂಬಂಧವನ್ನು ಗುರುತಿಸಲು ಎಲ್ಲಿಯವರೆಗೆ ಹಿಮ್ಮೆಟ್ಟಲಾಯಿತೋ ಅಲ್ಲಿಯವರೆಗೆ, ವಿಸ್ತೃತ ಪ್ರಮಾಣದ ಬಂಡವಾಳವಾದವೂ ಅದರ ಬೆಳವಣಿಗೆಯೂ ಉಂಟುಮಾಡಿದ ಶಕ್ತಿಗಳೊಂದಿಗೆ ಸೇರಿಕೊಳ್ಳಲು ಎಲ್ಲಿಯವರೆಗೆ ಹಿಮ್ಮೆಟ್ಟಲಾಯಿತೋ ಅಲ್ಲಿಯವರೆಗೆ, ಒಂದು "ಮುಗ್ಧ ಹಾರೈಕೆ"ಯಾಗಿಯೇ ಉಳಿಯಿತು.

ಹಾಬ್ಸನ್‌ರು ತಮ್ಮ ಸಾಮ್ರಾಜ್ಯವಾದದ ಪರಾಮರ್ಶೆಯಲ್ಲಿ ತಳೆದ ಮುಖ್ಯ ಮನೋಧರ್ಮವೂ ಇದೇ ಆಗಿದೆ. "ಸಾಮ್ರಾಜ್ಯವಾದವು ಅನಿವಾರ್ಯ" ಎಂಬ ವಾದದ ವಿರುದ್ಧ ಪ್ರತಿಭಟಿಸುವುದರಲ್ಲೂ, ಜನರ "ಬಳಕೆಯ ಸಾಮರ್ಥ್ಯವನ್ನು

---

* ಫೆನ್ನಿಮೋರ್ ಕೂಪರ್‌ರ 'ಮೋಹಿಕಾನ್‌ರಲ್ಲಿ ಕೊನೆಯವ' ಎಂಬ ಕಾದಂಬರಿಯು, ಶ್ವೇತ ಸಾಮ್ರಾಜ್ಯವಾದಿಗಳಿಂದ ನಾಶಗೊಳಿಸಲ್ಪಟ್ಟ ರೆಡ್ ಇಂಡಿಯನ್ ಬುಡಕಟ್ಟಿನ ಒಬ್ಬ ನಾಯಕನಿಗೆ ಉಲ್ಲೇಖ. – ಸಂ.

**J. Patouillet, *L'impérialisme américain*, Dijon, 1904, p. 272 (ಜೆ. ಪಾತುಲೇ, 'ಅಮೆರಿಕನ್ ಸಾಮ್ರಾಜ್ಯವಾದ,' ಡಿಜೋನ್, 1904, ಪು. 272. – ಸಂ.).

ಪೆಚ್ಚಿಸುವುದು" ಅವಶ್ಯ (ಬಂಡವಾಳವಾದಿ ವ್ಯವಸ್ಥೆಯಲ್ಲಿ!) ಎಂದು ಒತ್ತಾಯಿಸುವುದರಲ್ಲೊ, ಹಾಬ್ಸನ್‌ರು ಕೌತ್‌ಸ್ಕಿಯುವರ ವಿಚಾರವನ್ನೇ ಮುಂಗಂಡಿದ್ದರು. ಸಾಮ್ರಾಜ್ಯವಾದ, ಬ್ಯಾಂಕುಗಳ ಸರ್ವಶಕ್ತತೆ, ಹಣಕಾಸು ಆಲಿಗಾರ್ಕಿ ಇತ್ಯಾದಿಗಳ ಪರಾಮರ್ಶೆಯಲ್ಲಿ ಪೆಟಿ ಬೂರ್ಷ್ವಾ ದೃಷ್ಟಿಕೋನವನ್ನು ನಾವು ಮೇಲೆ ಉದ್ಧರಿಸಿದ ಅಗಾಡ್, ಎ. ಲಾನ್ಸ್‌ಬುರ್ಗ್, ಎಲ್. ಎಷ್ವೆಗೆರಂಥ ಲೇಖಕರೂ, ಫ್ರೆಂಚ್ ಲೇಖಕರಲ್ಲಿ, 1900ರಲ್ಲಿ ಪ್ರಕಟವಾದ 'ಇಂಗ್ಲೆಂಡ್ ಹಾಗೂ ಸಾಮ್ರಾಜ್ಯವಾದ' ಎಂಬ ಗಹನವಲ್ಲದ ಕೃತಿಯ ಕರ್ತೃ ವಿಕ್ಟೊರ್ ಬೆರಾರ್ಡ್‌ರವರೂ, ತಳೆದಿದ್ದರು. ಈ ಎಲ್ಲ ಲೇಖಕರೂ ತಾವು ಮಾರ್ಕ್ಸ್‌ವಾದಿಗಳೆಂದೇನೂ ಹೇಳಿಕೊಳ್ಳುವುದಿಲ್ಲ. ಆದರೂ ಇವರು ಸಾಮ್ರಾಜ್ಯವಾದಕ್ಕೂ ಮುಕ್ತ ಸ್ಪರ್ಧೆ ಪ್ರಜಾಪ್ರಭುತ್ವಗಳಿಗೂ ಮಧ್ಯೆ ಇರುವ ಗಾಢ ವ್ಯತ್ಯಾಸವನ್ನು ಎತ್ತಿ ತೋರಿಸುತ್ತಾರೆ, ಘರ್ಷಣೆಗಳಿಗೂ ಯುದ್ಧಕ್ಕೂ ದಾರಿ ಮಾಡಿಕೊಡುವ ಬಾಗ್ದಾದ್ ರೈಲ್ವೇ ಯೋಜನೆಯನ್ನು ಖಂಡಿಸುತ್ತಾರೆ, ಶಾಂತಿಗಾಗಿ "ಮುಗ್ಧ ಹಾರೈಕೆ"ಗಳನ್ನು ವ್ಯಕ್ತಪಡಿಸುತ್ತಾರೆ, ಇತ್ಯಾದಿ ಚರ್ಯೆಗಳನ್ನು ಎಸಗುತ್ತಾರೆ. ಅಂತರರಾಷ್ಟ್ರೀಯ ಸ್ಟಾಕ್ ಹಾಗೂ ಷೇರ್‌ಗಳ ಅಂಕಿಅಂಶ ಸಂಗ್ರಾಹಕರಾದ ಎ. ನೆಯ್‌ಮಾರ್ಕ್‌ರಿಗೂ ಇದೇ ಅನ್ವಯವಾಗುತ್ತದೆ. ಅವರು ನೂರಾರು ಬಿಲಿಯ ಫ್ರಾಂಕುಗಳ "ಅಂತರರಾಷ್ಟ್ರೀಯ" ಸೆಕ್ಯುರಿಟಿಗಳ ಲೆಕ್ಕಹಾಕಿದ ನಂತರ, 1912ರಲ್ಲಿ ಉದ್ಗರಿಸಿದರು: "ಶಾಂತಿಯನ್ನು ಉಲ್ಲಂಘಿಸಬಹುದೆಂದು ನಂಬಲು ಸಾಧ್ಯವೇ?... ಈ ಬಹುಭಾರಿ ಮೊತ್ತವನ್ನು ನೋಡಿದನಂತರವೂ, ಯಾರೇ ಆಗಲಿ ಯುದ್ಧ ಪ್ರಾರಂಭಿಸುವ ಸಾಹಸ ಮಾಡುವರೆಂದು ನಂಬಲು ಸಾಧ್ಯವೇ?"*

ಬೂರ್ಷ್ವಾ ಅರ್ಥಶಾಸ್ತ್ರಜ್ಞರಲ್ಲಿ ಇಂತಹ ಮುಗ್ಧತೆ ಆಶ್ಚರ್ಯವೇನಲ್ಲ; ಅಷ್ಟೆ ಅಲ್ಲ, ತಾವು ಅಷ್ಟು ಮುಗ್ಧರೆಂದು ಸೋಗು ಹಾಕಿಕೊಂಡು ಸಾಮ್ರಾಜ್ಯವಾದಿ ವ್ಯವಸ್ಥೆಯಲ್ಲಿ ಶಾಂತಿಯ ಬಗೆಗೆ "ಗಂಭೀರವಾಗಿ" ಮಾತನಾಡುವುದು ಅವರಿಗೇ ಹಿತಕಾರಿಯಾದುದು. ಆದರೆ ಕೌತ್‌ಸ್ಕಿಯುವರು 1914, 1915 ಹಾಗೂ 1916ನೇ ವರ್ಷಗಳಲ್ಲಿ ಅದೇ ಬೂರ್ಷ್ವಾ-ಸುಧಾರಣಾವಾದದ ದೃಷ್ಟಿಕೋನ ತಳೆದು, ಶಾಂತಿಯ ವಿಷಯಕ್ಕೆ ಸಂಬಂಧಿಸಿ "ಎಲ್ಲರಿಗೂ ಒಪ್ಪಿಗೆ ಇದೆ" (ಸಾಮ್ರಾಜ್ಯವಾದಿಗಳು, ಸೋಗಿನ ಸಮಾಜವಾದಿಗಳು ಹಾಗೂ ಸೋಷಲ್ ಸಾಂತ್ವನವಾದಿಗಳು, ಎಲ್ಲರಿಗೂ) ಎಂದು ಸಮರ್ಥಿಸಿ ಹೇಳಿದಾಗ, ಅವರ ಮಾರ್ಕ್ಸ್‌ವಾದದಲ್ಲಿ ಏನು ಉಳಿಯುತ್ತದೆ? ಸಾಮ್ರಾಜ್ಯವಾದದ ಲಕ್ಷಣಗಳನ್ನು ವಿಶ್ಲೇಷಿಸಿ ಅದರ ವೈರುಧ್ಯಗಳ ಆಳವನ್ನು ಹೊರ ತೋರಿಸುವುದರ ಬದಲು ನಾವು ಇವರಲ್ಲಿ ಅವುಗಳನ್ನು ತಳ್ಳಿ ಹಾಕುವ, ತೇಲಿಸಿ ಬಿಡುವ ಸುಧಾರಣಾವಾದಿ "ಮುಗ್ಧ ಹಾರೈಕೆ"ಯನ್ನಷ್ಟೆ ಕಾಣುತ್ತೇವೆ.

---

**Bulletin de l'institut international de statistique*, T. XIX, livr. II, p. 225 ('ಅಂತರರಾಷ್ಟ್ರೀಯ ಅಂಕಿಅಂಶ ಸಂಸ್ಥೆಯ ಬುಲೆಟಿನ್,' XIX, 2ನೇ ಭಾಗ, ಪು. 225.–ಸಂ.).

ಸಾಮ್ರಾಜ್ಯವಾದಕ್ಕೆ ಸಂಬಂಧಿಸಿ ಕೌತ್‌ಸ್ಕಿಯವರ ಆರ್ಥಿಕ ವಿಮರ್ಶೆಗೆ ಇಲ್ಲೊಂದು ಉದಾಹರಣೆ ಇದೆ. ಅವರು 1872 ಹಾಗೂ 1912ಕ್ಕೆ ಸಂಬಂಧಿಸಿ ಇಜಿಪ್ಟಿನೊಂದಿಗೆ ಬ್ರಿಟನ್ನಿನ ರಫ್ತು ಹಾಗೂ ಆಮದು ವ್ಯಾಪಾರದ ಅಂಕಿಅಂಶಗಳನ್ನು ತೆಗೆದುಕೊಳ್ಳು ತ್ತಾರೆ. ಈ ರಫ್ತು ಆಮದು ವ್ಯಾಪಾರವು ಒಟ್ಟಿನಲ್ಲಿ ಬ್ರಿಟಿಷ್ ವಿದೇಶಾಂಗ ವ್ಯಾಪಾರಕ್ಕೆ ಹೋಲಿಸಿದಂತೆ ಹೆಚ್ಚು ನಿಧಾನವಾಗಿ ಬೆಳೆದಿದೆಯೆಂದು ಕಂಡುಬರುತ್ತದೆ. ಇದರಿಂದ ಕೌತ್‌ಸ್ಕಿ ಈ ತೀರ್ಮಾನಕ್ಕೆ ಬರುತ್ತಾರೆ: "ಬ್ರಿಟನ್ನು ಇಜಿಪ್ಟಿನ ಮೇಲೆ ಮಿಲಿಟರಿ ಆಕ್ರಮಣ ನಡೆಸದೆ ಹೋಗಿದ್ದರೆ, ಅದರೊಂದಿಗೆ ಬ್ರಿಟನ್ನಿನ ವ್ಯಾಪಾರದ ಬೆಳವಣಿಗೆಯು, ಕೇವಲ ಆರ್ಥಿಕ ಅಂಶಗಳ ಪ್ರಭಾವದ ಫಲವಾಗಿಯಷ್ಟೆ ಕಮ್ಮಿ ಯಾಗುತ್ತಿದ್ದಿತೆಂದು ಭಾವಿಸಲು ನಮಗೆ ಯಾವ ಕಾರಣಗಳೂ ಇಲ್ಲ." "ಬಂಡವಾಳದ ವಿಸ್ತರಣಾಕಾಂಕ್ಷೆಯನ್ನು... ಸಾಮ್ರಾಜ್ಯವಾದದ ಉಗ್ರ ವಿಧಾನಗಳ ಮೂಲಕ ಅಲ್ಲ, ಆದರೆ ಶಾಂತಿಯುತ ಪ್ರಜಾಪ್ರಭುತ್ವದ ಮೂಲಕ ಅತ್ಯುತ್ತಮವಾಗಿ ತೃಪ್ತಿಗೊಳಿಸಲು ಸಾಧ್ಯ."*

ಕೌತ್‌ಸ್ಕಿಯವರ ಈ ವಾದವನ್ನು ಅವರ ರಷ್ಯನ್ ಅನುಚರರಾದ (ಸಾಮಾಜಿಕ ಸ್ವದೇಶ ಮೂಢಾಭಿಮಾನಿಗಳ ರಷ್ಯನ್ ಅಂಗರಕ್ಷಕರೂ ಆದ) ಮಿ. ಸ್ಪೆಕ್ಟೇಟರ್ ಪದೇ ಪದೇ ಪದಶಃ ಉಚ್ಚರಿಸುತ್ತಾರೆ. ಈ ವಾದವು ಸಾಮ್ರಾಜ್ಯವಾದದ ಕುರಿತು ಕೌತ್‌ಸ್ಕಿಯವರ ಪರಾಮರ್ಶೆಯ ಆಧಾರವಾಗಿದೆ. ಆದ್ದರಿಂದಲೇ ನಾವು ಇದನ್ನು ಹೆಚ್ಚು ವಿವರವಾಗಿ ಪರಿಶೀಲಿಸಬೇಕು. ನಾವು ಹಿಲ್ಫೆರ್ಡಿಂಗ್‌ರ ಒಂದು ಉದ್ಧರಣದಿಂದ ಪ್ರಾರಂಭಿಸುತ್ತೇವೆ. ಈತನ ತೀರ್ಮಾನಗಳನ್ನು "ಎಲ್ಲ ಸಮಾಜವಾದಿ ಸಿದ್ಧಾಂತಿಗಳೂ ಒಮ್ಮತದಿಂದ ಅಂಗೀಕರಿಸಿದ್ದಾರೆ" ಎಂದು ಕೌತ್‌ಸ್ಕಿಯವರು ಅನೇಕ ಸಂದರ್ಭಗಳಲ್ಲಿ, 1915ರ ಏಪ್ರಿಲ್‌ನಲ್ಲಿಯೂ, ಘೋಷಿಸಿದ್ದಾರೆ.

ಹಿಲ್ಫೆರ್ಡಿಂಗ್ ಬರೆಯುತ್ತಾರೆ: "ಹೆಚ್ಚು ಪ್ರಗತಿಶೀಲವಾದ ಬಂಡವಾಳವಾದಿ ನೀತಿಗೂ ಈಗಾಗಲೇ ಕಳೆದು ಹೋದ ಮುಕ್ತ ವ್ಯಾಪಾರದ ಹಾಗೂ ರಾಜ್ಯದ ಬಗೆಗೆ ಶತ್ರುತ್ವದ ಯುಗದಲ್ಲಿದ್ದ ನೀತಿಗೂ ನಡುವಿನ ವ್ಯತ್ಯಾಸವನ್ನು ಎತ್ತಿ ತೋರಿಸುವುದು ಶ್ರಮಜೀವಿ ವರ್ಗಕ್ಕೆ ಯೋಗ್ಯವಾದ ಕೆಲಸವಲ್ಲ. ಹಣಕಾಸು ಬಂಡವಾಳದ ಆರ್ಥಿಕ ನೀತಿಗೆ, ಸಾಮ್ರಾಜ್ಯವಾದಕ್ಕೆ ಶ್ರಮಜೀವಿ ವರ್ಗ ನೀಡಬೇಕಾದ ಪ್ರತ್ಯುತ್ತರ ಮುಕ್ತ ವ್ಯಾಪಾರವಲ್ಲ, ಆದರೆ ಸಮಾಜವಾದವಷ್ಟೇ. ಶ್ರಮಜೀವಿ ವರ್ಗದ ನೀತಿಯ ಗುರಿಯು ಈಗ ಮುಕ್ತ ಸ್ಪರ್ಧೆಯನ್ನು ಪುನರ್‌ಸ್ಥಾಪಿಸುವ ಧ್ಯೇಯವಾಗಲಾರದು – ಇದೀಗ

---

*Kautsky, *Nationalstaat, imperialistischer Staat und Staatenbund*. Nürnberg, 1915 (ಕೌತ್‌ಸ್ಕಿ, 'ರಾಷ್ಟ್ರೀಯ ರಾಜ್ಯ, ಸಾಮ್ರಾಜ್ಯವಾದಿ ರಾಜ್ಯ ಹಾಗೂ ರಾಜ್ಯಗಳ ಒಕ್ಕೂಟ,' ನ್ಯುರೆಂಬರ್ಗ್, 1915, ಪು. 72 ಹಾಗೂ 70.–ಸಂ.).

ಒಂದು ಪ್ರತಿಗಾಮಿ ಧ್ಯೇಯವಾಗಿದೆ – ಆದರೆ ಬಂಡವಾಳವಾದವನ್ನು ತೊಡೆದು ಹಾಕುವ ಮೂಲಕ ಸ್ಪರ್ಧೆಯನ್ನೇ ಸಂಪೂರ್ಣವಾಗಿ ತೊಡೆದು ಹಾಕುವುದಾಗಿದೆ."*

ಕೌತ್‌ಸ್ಕಿಯವರು ಹಣಕಾಸು ಬಂಡವಾಳದ ಯುಗಕ್ಕಾಗಿ "ಒಂದು ಪ್ರತಿಗಾಮಿ ಧ್ಯೇಯವನ್ನು," "ಶಾಂತಿಯುತ ಪ್ರಜಾಪ್ರಭುತ್ವವನ್ನು," "ಕೇವಲ ಆರ್ಥಿಕ ಅಂಶಗಳ ಪ್ರಭಾವವನ್ನು" ಪ್ರತಿಪಾದಿಸುವ ಮೂಲಕ ಮಾರ್ಕ್ಸ್‌ವಾದದಿಂದ ದೂರ ಸರಿದರು. ಏಕೆಂದರೆ, ವಸ್ತುನಿಷ್ಠವಾಗಿ ಈ ಧ್ಯೇಯವು ನಮ್ಮನ್ನು ಏಕಸ್ವಾಮ್ಯ ಬಂಡವಾಳವಾದದಿಂದ ಏಕಸ್ವಾಮ್ಯವಿಲ್ಲದ ಬಂಡವಾಳವಾದಕ್ಕೆ ಹಿಂದಕ್ಕೊಯ್ಯುತ್ತದೆ. ಅದೊಂದು ಸುಧಾರಣಾವಾದಿ ಮೋಸವಾಗಿದೆ.

ಮಿಲಿಟರಿ ಆಕ್ರಮಣ ಇಲ್ಲದೆಯೇ, ಸಾಮ್ರಾಜ್ಯವಾದ ಇಲ್ಲದೆಯೇ, ಹಣಕಾಸು ಬಂಡವಾಳ ಇಲ್ಲದೆಯೇ ಇಜಿಪ್ಟಿನೊಂದಿಗೆ (ಅಥವಾ ಬೇರೆ ಯಾವುದೇ ವಸಾಹತು ಅಥವಾ ಅರೆ ವಸಾಹತಿನೊಂದಿಗೆ) ವ್ಯಾಪಾರ "ಹೆಚ್ಚು ಬೆಳೆಯುತ್ತಿದ್ದಿತು." ಇದರ ಅರ್ಥವೇನು? ಒಟ್ಟಿನಲ್ಲಿ ಏಕಸ್ವಾಮ್ಯ ಸಂಸ್ಥೆಗಳು, ಹಣಕಾಸು ಬಂಡವಾಳದ ಸಂಬಂಧಗಳು ಅಥವಾ ದಬ್ಬಾಳಿಕೆ (ಅಂದರೆ ಮತ್ತೆ ಏಕಸ್ವಾಮ್ಯ), ಅಥವಾ ಕೆಲವು ದೇಶಗಳು ವಸಾಹತುಗಳನ್ನು ಏಕಸ್ವಾಮ್ಯ ಆಸ್ತಿಗಳನ್ನಾಗಿ ಹೊಂದಿರುವುದು, ಮುಕ್ತ ಸ್ಪರ್ಧೆಗೆ ನಿರ್ಬಂಧಗಳನ್ನು ಹಾಕದೆ ಇದ್ದಿದ್ದರೆ ಬಂಡವಾಳವಾದವು ಹೆಚ್ಚು ಶೀಘ್ರ ಗತಿಯಲ್ಲಿ ಬೆಳೆಯುತ್ತಿದ್ದಿತು, ಎಂದೇ ಇದರ ಅರ್ಥ?

ಕೌತ್‌ಸ್ಕಿಯವರ ವಾದವು ಇದನ್ನಲ್ಲದೆ ಬೇರಾವ ಅರ್ಥವನ್ನೂ ಹೊಂದಿರಲು ಸಾಧ್ಯವಿಲ್ಲ. ಮತ್ತೆ ಈ "ಅರ್ಥವು" ಅರ್ಥವಿಲ್ಲದುದು. ಯಾವುದೇ ರೀತಿಯ ಏಕಸ್ವಾಮ್ಯವಿಲ್ಲದೆಯೇ ಮುಕ್ತ ಸ್ಪರ್ಧೆಯು ಬಂಡವಾಳವಾದವನ್ನೂ ವ್ಯಾಪಾರವನ್ನೂ ಹೆಚ್ಚು ಶೀಘ್ರಗತಿಯಲ್ಲಿ ಬೆಳೆಸುತ್ತಿದ್ದಿತು ಎಂದೇ ಭಾವಿಸಿಕೊಳ್ಳೋಣ. ಆದರೆ ವ್ಯಾಪಾರವೂ ಬಂಡವಾಳವಾದವೂ ಎಷ್ಟು ಹೆಚ್ಚು ಶೀಘ್ರ ಗತಿಯಲ್ಲಿ ಬೆಳೆಯುತ್ತದೋ ಉತ್ಪಾದನೆಯ ಹಾಗೂ ಬಂಡವಾಳದ ಕೇಂದ್ರೀಕರಣವೂ ಅಷ್ಟೂ ಹೆಚ್ಚು ಶೀಘ್ರ ಗತಿಯಲ್ಲಿ ಬೆಳೆಯುತ್ತದೆ ಮತ್ತು ಅದು ಏಕಸ್ವಾಮ್ಯಕ್ಕೆ ದಾರಿ ಮಾಡಿಕೊಡುತ್ತದೆ. ಹೀಗೆ ಮುಕ್ತ ಸ್ಪರ್ಧೆಯಿಂದಲೇ ಏಕಸ್ವಾಮ್ಯ ಸಂಸ್ಥೆಗಳು ಆಗಲೇ ಹುಟ್ಟಿಕೊಂಡಿದ್ದವು! ಏಕಸ್ವಾಮ್ಯ ಸಂಸ್ಥೆಗಳು ಈಗ ಪ್ರಗತಿಗೆ ತಡೆ ಹಾಕತೊಡಗಿದ್ದರೂ, ಅದು ಮುಕ್ತ ಸ್ಪರ್ಧೆಯನ್ನು ಪ್ರತಿಪಾದಿಸುವುದಕ್ಕೆ ವಾದವಾಗಲಾರದು. ತಾನೇ ಏಕಸ್ವಾಮ್ಯಕ್ಕೆ ದಾರಿ ಮಾಡಿಕೊಟ್ಟನಂತರ ಮುಕ್ತ ಸ್ಪರ್ಧೆಯು ಇರಲು ಸಾಧ್ಯವಿಲ್ಲದುದಾಗಿದೆ.

ಕೌತ್‌ಸ್ಕಿಯವರ ವಾದವನ್ನು ಹೇಗೆ ತಿರುಗಿಸಿ ನೋಡಿದರೂ ಪ್ರತಿಗಾಮಿತ್ವ ಹಾಗೂ ಬೂರ್ಷ್ವಾ ಸುಧಾರಣಾವಾದವನ್ನು ಬಿಟ್ಟು ಅದರಲ್ಲಿ ಬೇರೇನೂ ಕಂಡು ಬರುವುದಿಲ್ಲ.

---

*'ಹಣಕಾಸು ಬಂಡವಾಳ,' ಪು. 567.

ಇಂಗ್ಲೆಂಡಿನೊಂದಿಗೆ ಆ ದೇಶದ ವಸಾಹತುಗಳ ವ್ಯಾಪಾರವು ಈಗ ಇತರ ದೇಶಗಳೊಂದಿಗೆ ಅವುಗಳ ವ್ಯಾಪಾರಕ್ಕಿಂತ ಹೆಚ್ಚು ನಿಧಾನವಾಗಿ ಬೆಳೆಯುತ್ತಿದೆ, ಎಂದು ಸ್ಪೆಕ್ಟೇಟರ್ ಹೇಳಿದಂತೆ ನಾವು ಆ ಪಾದವನ್ನು ಸರಿಪಡಿಸಿ ಹೇಳಿದರೂ, ಅದೇನೂ ಕೌತ್‌ಸ್ಕಿಯುವರನ್ನು ಬಚಾವು ಮಾಡದು, ಏಕೆಂದರೆ ಇಂಗ್ಲೆಂಡ್ ಮೇಲೆ ಪ್ರಹಾರ ನೀಡುತ್ತಿರುವುದೂ ಏಕಸ್ವಾಮ್ಯವೇ, ಸಾಮ್ರಾಜ್ಯವಾದವೇ. ಆದರೆ ಅದು ಮತ್ತೊಂದು ದೇಶದ (ಅಮೆರಿಕ, ಜರ್ಮನಿ) ಏಕಸ್ವಾಮ್ಯ ಹಾಗೂ ಸಾಮ್ರಾಜ್ಯವಾದ, ಅಷ್ಟೆ. ಕಾರ್ಟೆಲ್‌ಗಳು ಒಂದು ಹೊಸ ಹಾಗೂ ವಿಚಿತ್ರ ರೀತಿಯ ರಕ್ಷಣಾತ್ಮಕ ಸುಂಕಗಳಿಗೆ ದಾರಿ ಮಾಡಿಕೊಟ್ಟಿವೆ, ಅಂದರೆ ರಫ್ತಿಗೆ ಯೋಗ್ಯವಾದ ವಸ್ತುಗಳಿಗೆ ರಕ್ಷಣೆ ನೀಡಲಾಗುತ್ತಿದೆ, ಎಂಬುದು ತಿಳಿದ ಸಂಗತಿ (ಎಂಗೆಲ್ಸ್ ಇದನ್ನು 'ಬಂಡವಾಳ'ದ ಮೂರನೆಯ ಸಂಪುಟದಲ್ಲಿ ಗಮನಿಸಿದ್ದಾರೆ). ಕಾರ್ಟೆಲ್ ಹಾಗೂ ಹಣಕಾಸು ಬಂಡವಾಳಗಳು ತಮಗೇ ವಿಶಿಷ್ಟವಾದ ಒಂದು ಪದ್ಧತಿಯನ್ನು – "ತಗ್ಗಿದ ದರದಲ್ಲಿ ವಸ್ತುಗಳನ್ನು ರಫ್ತು ಮಾಡುವ" ಅಥವಾ ಇಂಗ್ಲಿಷರು ಹೇಳುವಂತೆ "ಡಂಪ್" ಮಾಡುವ (ತಂದು ತುಂಬುವ) ಪದ್ಧತಿಯನ್ನು – ಹೊಂದಿವೆ, ಎಂಬುದೂ ತಿಳಿದ ಸಂಗತಿಯೇ ಆಗಿದೆ. ಒಂದು ನಿರ್ದಿಷ್ಟ ದೇಶದೊಳಗೇ ಕಾರ್ಟೆಲ್ ತನ್ನ ವಸ್ತುಗಳನ್ನು ಉನ್ನತ ಏಕಸ್ವಾಮ್ಯ ಬೆಲೆಗಳಿಗೆ ಮಾರುತ್ತದೆ, ಆದರೆ ಹೊರದೇಶಗಳಲ್ಲಿ, ಪ್ರತಿಸ್ಪರ್ಧಿಗಳನ್ನು ಅಡಗಿಸುವುದು, ತನ್ನ ಸ್ವಂತ ಉತ್ಪಾದನೆಯನ್ನೇ ಗರಿಷ್ಠ ಮಟ್ಟಕ್ಕೆ ಏರಿಸುವುದು, ಇತ್ಯಾದಿ ಉದ್ದೇಶಗಳಿಂದ ಅವನ್ನು ಬೀಸಾಡುವ ಬೆಲೆಗೆ ಮಾರುತ್ತದೆ. ಬ್ರಿಟಿಷ್ ವಸಾಹತುಗಳೊಂದಿಗೆ ಜರ್ಮನಿಯ ವ್ಯಾಪಾರವು ಅವುಗಳೊಂದಿಗೆ ಬ್ರಿಟನ್ನಿನ ವ್ಯಾಪಾರಕ್ಕಿಂತಲೂ ಹೆಚ್ಚು ಶೀಘ್ರ ಗತಿಯಲ್ಲಿ ಬೆಳೆಯುತ್ತಿದ್ದರೆ, ಜರ್ಮನ್ ಸಾಮ್ರಾಜ್ಯವಾದವು ಬ್ರಿಟಿಷ್ ಸಾಮ್ರಾಜ್ಯವಾದಕ್ಕಿಂತ ಹೆಚ್ಚು ತಾರುಣ್ಯದಿಂದ ಕೂಡಿದೆ, ಹೆಚ್ಚು ಕಸುವಿನಿಂದ ಕೂಡಿದೆ ಹಾಗೂ ಹೆಚ್ಚು ಉತ್ತಮವಾಗಿ ಸಂಘಟಿತವಾಗಿದೆ ಎಂದಷ್ಟೆ ಸಾಧಿತವಾಗುತ್ತದೆ; ಆದರೆ ಅದು ಮುಕ್ತ ವ್ಯಾಪಾರದ "ಶ್ರೇಷ್ಠತೆ"ಯನ್ನೇನೂ ಸಾಧಿಸದು. ಏಕೆಂದರೆ ಈ ಹೋರಾಟವು ಒಂದು ಕಡೆ ಮುಕ್ತ ವ್ಯಾಪಾರ, ಮತ್ತೊಂದು ಕಡೆ ಸಂರಕ್ಷಣೆ ಹಾಗೂ ವಸಾಹತು ಪರಾಧೀನತೆ ಇವುಗಳ ನಡುವಿನ ಹೋರಾಟವಲ್ಲ, ಆದರೆ ಎರಡು ಪರಸ್ಪರ ಸ್ಪರ್ಧಿಸುವ ಸಾಮ್ರಾಜ್ಯವಾದಗಳ ನಡುವಿನ, ಎರಡು ಏಕಸ್ವಾಮ್ಯ ಸಂಸ್ಥೆಗಳ ನಡುವಿನ, ಹಣಕಾಸು ಬಂಡವಾಳದ ಎರಡು ಗುಂಪುಗಳ ನಡುವಿನ ಹೋರಾಟವಾಗಿರುತ್ತದೆ. ಬ್ರಿಟಿಷ್ ಸಾಮ್ರಾಜ್ಯವಾದದ ಮೇಲೆ ಜರ್ಮನ್ ಸಾಮ್ರಾಜ್ಯವಾದದ ಶ್ರೇಷ್ಠತೆಯು ವಸಾಹತು ಗಡಿ ಎನ್ನುವ ಗೋಡೆಗಿಂತ, ರಕ್ಷಣಾತ್ಮಕ ಸುಂಕ ಎನ್ನುವ ಗೋಡೆಗಿಂತ ಹೆಚ್ಚು ಶಕ್ತವಾದುದಾಗಿದೆ. ಇದನ್ನು ಮುಕ್ತ ವ್ಯಾಪಾರದ ಹಾಗೂ "ಶಾಂತಿಯುತ ಪ್ರಜಾಪ್ರಭುತ್ವ"ದ ಪರವಾಗಿ ಒಂದು "ವಾದವನ್ನಾಗಿ" ಬಳಸುವುದು ಹೀನಾಯಕರವಾದುದು, ಸಾಮ್ರಾಜ್ಯವಾದದ ಸಾರಭೂತ ಲಕ್ಷಣಗಳನ್ನು ವೈಶಿಷ್ಟ್ಯಗಳನ್ನೂ ಮರೆಯುವುದು, ಮಾರ್ಕ್ಸ್‌ವಾದದ ಸ್ಥೂಳ

10*

ದಲ್ಲಿ ಪೆಟಿ ಬೂರ್ಷ್ವಾ ಸುಧಾರಣಾವಾದವನ್ನು ಬಳಸುವುದು, ಎಂದರ್ಥವಾಗುತ್ತದೆ.

ಸಾಮ್ರಾಜ್ಯವಾದದ ಕುರಿತು ಬೂರ್ಷ್ವಾ ಅರ್ಥಶಾಸ್ತ್ರಜ್ಞ ಎ. ಲಾನ್ಸ್‌ಬುರ್ಗ್‌ರ ಟೀಕೆಯು ಕೌತ್‌ಸ್ಕಿಯವರ ಟೀಕೆಯಷ್ಟೇ ಪೆಟಿ ಬೂರ್ಷ್ವಾ ಲಕ್ಷಣದ್ದಾಗಿದ್ದರೂ, ಅವರು ವ್ಯಾಪಾರ ಅಂಕಿಅಂಶಗಳನ್ನು ವೈಜ್ಞಾನಿಕವಾಗಿ ಅಭ್ಯಸಿಸುವುದಕ್ಕೆ ಹೆಚ್ಚು ಸಮೀಪವಾಗಿದ್ದರು ಎಂಬುದನ್ನು ಗಮನಿಸುವುದು ಸ್ವಾರಸ್ಯಕರವಾಗಿದೆ. ಅವರು ಯಾವುದೋ ಒಂದು ದೇಶವನ್ನು, ಒಂದು ವಸಾಹತನ್ನು, ಗೊತ್ತುಗುರಿ ಇಲ್ಲದೆ ಆಯ್ದುಕೊಂಡು ಅದನ್ನು ಇತರ ದೇಶಗಳೊಂದಿಗೆ ಹೋಲಿಸಲಿಲ್ಲ. ಅವರು ಸಾಮ್ರಾಜ್ಯ ಶಾಹಿ ದೇಶವೊಂದರ ರಫ್ತು ವ್ಯಾಪಾರವನ್ನು ಪರಿಶೀಲಿಸಿದರು: 1) ಆರ್ಥಿಕವಾಗಿ ಅದರ ಮೇಲೆ ಅವಲಂಬಿಸಿರುವ, ಅದರಿಂದ ಹಣವನ್ನು ಸಾಲ ತೆಗೆದುಕೊಳ್ಳುವ ದೇಶಗಳೊಂದಿಗೆ ಅದರ ರಫ್ತು ವ್ಯಾಪಾರವನ್ನು ಪರಿಶೀಲಿಸಿದರು; 2) ಆರ್ಥಿಕವಾಗಿ ಸ್ವತಂತ್ರವಾದ ದೇಶಗಳೊಂದಿಗೆ ಅದರ ರಫ್ತು ವ್ಯಾಪಾರವನ್ನು ಪರಿಶೀಲಿಸಿದರು. ಅವರು ಈ ಕೆಳಗಿನ ಫಲಿತಾಂಶಗಳನ್ನು ಪಡೆದುಕೊಂಡರು:

ಜರ್ಮನಿಯ ರಫ್ತು ವ್ಯಾಪಾರ

(ಮಿಲಿಯ ಮಾರ್ಕುಗಳಲ್ಲಿ)

| | | 1889 | 1908 | ಶೇಕಡಾವಾರು ಹೆಚ್ಚಳ |
|---|---|---|---|---|
| ಜರ್ಮನಿಯ ಮೇಲೆ ಆರ್ಥಿಕವಾಗಿ ಅವಲಂಬಿಸಿದ ದೇಶಗಳಿಗೆ | ರುಮಾನಿಯಾ . . | 48.2 | 70.8 | + 47% |
| | ಪೋರ್ಚುಗಲ್ . . | 19.0 | 32.8 | + 73% |
| | ಅರ್ಜೆಂಟೈನಾ . . | 60.7 | 147.0 | +143% |
| | ಬ್ರೆಸಿಲ್ . . . | 48.7 | 84.5 | + 73% |
| | ಚಿಲಿ . . . . | 28.3 | 52.4 | + 85% |
| | ಟರ್ಕಿ . . . . | 29.9 | 64.0 | +114% |
| | ಮೊತ್ತ . . . . | 234.8 | 451.5 | + 92% |
| ಜರ್ಮನಿಯ ಮೇಲೆ ಆರ್ಥಿಕವಾಗಿ ಅವಲಂಬಿಸಿರದ ದೇಶಗಳಿಗೆ | ಗ್ರೇಟ್ ಬ್ರಿಟನ್ . | 651.8 | 997.4 | + 53% |
| | ಫ್ರಾನ್ಸ್ . . . | 210.2 | 437.9 | +108% |
| | ಬೆಲ್ಜಿಯಂ . . . | 137.2 | 322.8 | +135% |
| | ಸ್ವಿಟ್ಸರ್ಲೆಂಡ್ . . | 177.4 | 401.1 | +127% |
| | ಆಸ್ಟ್ರೇಲಿಯಾ . . | 21.2 | 64.5 | +205% |
| | ಡಚ್ ಈಸ್ಟ್ ಇಂಡೀಸ್ | 8.8 | 40.7 | +363% |
| | ಮೊತ್ತ . . . | 1206.6 | 2264.4 | + 87% |

ಲಾನ್ಸ್‌ಬುರ್ಗ್‌ರು ಇದರಿಂದ ಬರಬೇಕಾದ ತೀರ್ಮಾನಗಳಿಗೆ ಬರಲಿಲ್ಲ. ಆದ್ದರಿಂದ, ವಿಚಿತ್ರವೆನ್ನುವಂತೆ ಒಂದು ವಿಷಯುವನ್ನು ಗಮನಿಸದೆ ಹೋದರು: ಈ ಸಂಖ್ಯೆಗಳು ವಾದಿಸುವುದು ಏನಾದರೂ ಇದ್ದರೆ, ಅವರ ವಾದ ತಪ್ಪು ಎಂದಷ್ಟೆ ಸಾಧಿಸುತ್ತವೆ, ಏಕೆಂದರೆ, ಜರ್ಮನಿಯ ಮೇಲೆ ಆರ್ಥಿಕವಾಗಿ ಅವಲಂಬಿಸಿದ ದೇಶಗಳಿಗೆ ರಫ್ತುಗಳು ಆರ್ಥಿಕವಾಗಿ ಸ್ವತಂತ್ರವಾದ ದೇಶಗಳಿಗೆ ರಫ್ತುಗಳಿಗಿಂತ ಸ್ವಲ್ಪವಾದರೂ ಸರಿಯೆ, ಹೆಚ್ಚು ಶೀಘ್ರ ಗತಿಯಲ್ಲಿ ಬೆಳೆದಿವೆ. (ನಾವು "ಇದ್ದರೆ" ಎಂಬುದನ್ನು ಒತ್ತಿ ಹೇಳುತ್ತೇವೆ, ಏಕೆಂದರೆ, ಲಾನ್ಸ್‌ಬುರ್ಗ್‌ರ ಸಂಖ್ಯೆಗಳು ಅಸಂಪೂರ್ಣವಾದವು.)

ರಫ್ತುಗಳಿಗೂ ಸಾಲಗಳಿಗೂ ನಡುವಿನ ಸಂಬಂಧವನ್ನು ಗುರುತಿಸುತ್ತ ಲಾನ್ಸ್‌ಬುರ್ಗ್ ಬರೆಯುತ್ತಾರೆ:

"1890-1891ರಲ್ಲಿ ಜರ್ಮನ್ ಬ್ಯಾಂಕುಗಳ ಮೂಲಕ ರುಮಾನಿಯಾ ಸಾಲವೊಂದನ್ನು ಚಲಾವಣೆಗೆ ತರಲಾಯಿತು. ಈ ಬ್ಯಾಂಕುಗಳು ಆಗಲೇ ಅದಕ್ಕೆ ಮುನ್ನಿನ ವರ್ಷಗಳಲ್ಲೇ ಈ ಸಾಲದ ಮೇಲೆ ಮುಂಗಡಗಳನ್ನು ನೀಡಿದ್ದವು. ಈ ಸಾಲವನ್ನು ಪ್ರಧಾನವಾಗಿ ಜರ್ಮನಿಯ ರೈಲ್ವೇ ಸಾಮಗ್ರಿಗಳನ್ನು ಕೊಳ್ಳಲು ಬಳಸಿಕೊಳ್ಳಲಾಯಿತು. 1891ರಲ್ಲಿ ಜರ್ಮನಿಯು ರುಮಾನಿಯಾಕ್ಕೆ 55 ಮಿಲಿಯ ಮಾರ್ಕುಗಳಾಗುವಷ್ಟು ಸರಕುಗಳನ್ನು ರಫ್ತು ಮಾಡಿತು. ಮಾರನೆಯ ವರ್ಷ ಈ ರಫ್ತಿನ ಪ್ರಮಾಣ 39,400,000 ಮಾರ್ಕುಗಳಿಗೆ ಇಳಿಯಿತು. ಅನಂತರ ಏರುಪೇರಾಗುತ್ತ ಹೋಗಿ ಕೊನೆಗೆ 1900ರಲ್ಲಿ 25,400,000 ಮಾರ್ಕುಗಳಿಗೆ ಇಳಿಯಿತು. ತೀರ ಈಚೆಗಿನ ವರ್ಷಗಳಲ್ಲಷ್ಟೆ ಎರಡು ಹೊಸ ಸಾಲಗಳ ಫಲವಾಗಿ ಈ ರಫ್ತುಗಳು ಪುನಃ 1891ರ ಮಟ್ಟವನ್ನು ತಲುಪಿದವು.

"1888-1889ರ ಸಾಲಗಳ ನಂತರ ಪೋರ್ಚುಗಲ್‌ಗೆ ಜರ್ಮನಿಯ ರಫ್ತುಗಳು 21,100,000 ಮಾರ್ಕುಗಳಿಗೇರಿದವು (1890); ಅನಂತರ ಮಾರನೆಯ ಎರಡು ವರ್ಷಗಳಲ್ಲಿ ಅವು 16,200,000 ಹಾಗೂ 7,400,000 ಮಾರ್ಕುಗಳಿಗಿಳಿದವು. 1903ರಲ್ಲಷ್ಟೆ ಅವು ತಮ್ಮ ಹಿಂದಿನ ಮಟ್ಟವನ್ನು ಪುನಃ ಪಡೆದುಕೊಂಡವು.

"ಅರ್ಜೆಂಟೈನಾದೊಂದಿಗೆ ಜರ್ಮನ್ ವ್ಯಾಪಾರದ ಅಂಕಿಅಂಶಗಳು ಇನ್ನೂ ಹೆಚ್ಚು ಎದ್ದು ಕಾಣುವಂತಿವೆ. 1888 ಹಾಗೂ 1890ರಲ್ಲಿ ಜಾರಿಗೆ ತರಲಾದ ಸಾಲಗಳ ಫಲವಾಗಿ ಅರ್ಜೆಂಟೈನಾಗೆ ಜರ್ಮನ್ ರಫ್ತುಗಳು 1889ರಲ್ಲಿ 60,700,000 ಮಾರ್ಕುಗಳ ಮಟ್ಟ ಮುಟ್ಟಿತು. ಎರಡು ವರ್ಷಗಳ ನಂತರ ಈ ರಫ್ತುಗಳ ಪ್ರಮಾಣ 18,600,000 ಮಾರ್ಕುಗಳಷ್ಟೆ ಆಗಿದ್ದಿತು – ಹಿಂದಿನ ಸಂಖ್ಯೆಯ ಮೂರನೇ ಒಂದು ಪಾಲಿಗೂ ಕಮ್ಮಿ. 1901ರಲ್ಲಷ್ಟೆ ಅವು 1889ರ ಮಟ್ಟ ತಲುಪಿ ಮುಂದೆ ಹೋದವು – ಆಗಲೂ ರಾಜ್ಯವೂ ನಗರ ಸಭೆಗಳೂ ಚಲಾವಣೆಗೆ ತಂದ ಹೊಸ ಸಾಲಗಳ ಫಲವಾಗಿ ಮತ್ತು ವಿದ್ಯುತ್ಕೇಂದ್ರಗಳ ನಿರ್ಮಾಣಕ್ಕಾಗಿ ಮುಂಗಡ ನೀಡಿಕೆ ಮತ್ತಿತರ ಸಾಲ ಸೌಲಭ್ಯಗಳನ್ನು ಕಲ್ಪಿಸಿದುದರ ಫಲವಾಗಿ.

1889ರ ಸಾಲದ ಫಲವಾಗಿ ಚಿಲಿಗೆ ರಫ್ತುಗಳು 45,200,000 ಮಾರ್ಕುಗಳಿಗೆ ಏರಿದವು (1892ರಲ್ಲಿ), ಒಂದು ವರ್ಷದ ನಂತರ 22,500,000 ಮಾರ್ಕುಗಳಿಗೆ ಇಳಿದವು. 1906ರಲ್ಲಿ ಜರ್ಮನ್ ಬ್ಯಾಂಕುಗಳು ನೀಡಿದ ಒಂದು ಹೊಸ ಚಿಲಿಯು ಸಾಲದ ನಂತರ ರಫ್ತುಗಳು 1907ರಲ್ಲಿ 84,700,000 ಮಾರ್ಕುಗಳಿಗೆ ಏರಿದವು. ಆದರೆ ಮತ್ತೆ 1908ರಲ್ಲಿ 52,400,000 ಮಾರ್ಕುಗಳಿಗೆ ಇಳಿದವು."*

ಸಾಲಗಳೊಂದಿಗೆ ಗಂಟುಹಾಕಿದಾಗ ರಫ್ತು ವ್ಯಾಪಾರವು ಎಷ್ಟು ಕ್ರಮರಹಿತವಾಗುತ್ತದೆ, ಅಸ್ಥಿರವಾಗುತ್ತದೆ, ದೇಶೀಯ ಕೈಗಾರಿಕೆಯನ್ನು "ಸಹಜವಾಗಿ, ಸಾಮರಸ್ಯವಾಗಿ" ವಿಕಾಸಗೊಳಿಸುವ ಬದಲು ಬಂಡವಾಳವನ್ನು ಹೊರದೇಶಗಳಲ್ಲಿ ತೊಡಗಿಸುವುದು ಎಷ್ಟು ಕೆಟ್ಟುದು, ವಿದೇಶಿ ಸಾಲಗಳನ್ನು ನೀಡುವಾಗ ಕ್ರುಪ್ಪ್‌ರವರು ಕೊಡಬೇಕಾದ ಮಿಲಿಯಾಂತರ ಭಕ್ಷೀಸು ಹಣವು ಎಷ್ಟು "ಖರ್ಚಿನದು," ಎಂದು ಮುಂತಾಗಿ ಲಾನ್ಸ್‌ಬುರ್ಗ್‌ರು ಮೇಲಿನ ವಾಸ್ತವಾಂಶಗಳಿಂದ ವಿನೋದಕರವಾದ ಪೆಟಿ ಬೂರ್ಷ್ವಾ ನೈತಿಕತೆಯ ತೀರ್ಮಾನಗಳಿಗೆ ಬರುತ್ತಾರೆ. ಆದರೆ ವಾಸ್ತವಾಂಶಗಳು ನಮಗೆ ಸ್ಪಷ್ಟವಾಗಿ ತಿಳಿಸುತ್ತವೆ: ರಫ್ತುಗಳಲ್ಲಿ ಹೆಚ್ಚಳವು ಖಚಿತವಾಗಿ ಹಣಕಾಸು ಬಂಡವಾಳದ ಮೋಸದ ಕುಟಿಲೋಪಾಯಗಳ ಫಲವಾಗಿದೆ, ಈ ಹಣಕಾಸು ಬಂಡವಾಳವು ಬೂರ್ಷ್ವಾ ನೈತಿಕತೆಯನ್ನು ಎಷ್ಟು ಮಾತ್ರವೂ ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ, ಆದರೆ ಅದು ಎತ್ತಿನ ಚರ್ಮವನ್ನು ಎರಡು ಸಾರಿ ಸುಲಿಯುತ್ತದೆ: ಮೊದಲನೆಯದಾಗಿ, ಅದು ಸಾಲದಿಂದ ಬರುವ ಲಾಭಗಳನ್ನು ಜೇಬಿಗೆ ಬಿಡುತ್ತದೆ; ಅನಂತರ ಅದು ಅದೇ ಸಾಲದಿಂದ ಬರುವ ಇತರ ಲಾಭಗಳನ್ನೂ – ಸಾಲಗಾರನು ಆ ಸಾಲವನ್ನು ಕ್ರುಪ್ಪ್‌ನಿಂದ ಸರಕುಗಳನ್ನು ಕೊಳ್ಳುವುದಕ್ಕಾಗಿ ಬಳಸಿದಾಗ ಅಥವಾ ಸ್ಟೀಲ್ ಸಿಂಡಿಕೇಟ್‌ನಿಂದ ರೈಲ್ವೇ ಸಾಮಗ್ರಿಗಳನ್ನು ಕೊಳ್ಳಲು ಬಳಸಿದಾಗ, ಇತ್ಯಾದಿಗಳಿಂದ ಬರುವ ಲಾಭಗಳನ್ನೂ – ಜೇಬಿಗೆ ಬಿಡುತ್ತದೆ.

ಲಾನ್ಸ್‌ಬುರ್ಗ್‌ರ ಸಂಖ್ಯೆಗಳು ಪರಿಪೂರ್ಣವೆಂದು ನಾವು ಯಾವ ರೀತಿಯಲ್ಲೂ ಭಾವಿಸುವುದಿಲ್ಲವೆಂದು ಮತ್ತೆ ಹೇಳುತ್ತೇವೆ; ಆದರೆ ಅವು ಕೌತ್‌ಸ್ಕಿಯವರ ಹಾಗೂ ಸ್ಪೆಕ್ಟೇಟರ್‌ರವರ ಅಂಕಿಅಂಶಗಳಿಗಿಂತ ಹೆಚ್ಚು ವೈಜ್ಞಾನಿಕವಾಗಿವೆ ಮತ್ತು ಲಾನ್ಸ್‌ಬುರ್ಗ್‌ರು ಈ ಪ್ರಶ್ನೆಯನ್ನು ಹೇಗೆ ಪರಿಶೀಲಿಸಬೇಕೆಂಬ ಸರಿಯಾದ ಮಾರ್ಗವನ್ನು ತೋರಿಸಿಕೊಟ್ಟರು ಎಂಬ ಕಾರಣದಿಂದಾಗಿ ನಾವು ಅವನ್ನು ಉದ್ಧರಿಸಬೇಕಾಯಿತು. ರಫ್ತುಗಳಿಗೆ ಸಂಬಂಧಿಸಿ ಹಣಕಾಸು ಬಂಡವಾಳದ ಮಹತ್ವವೇನು ಎಂದು ಮುಂತಾದ ವಿಷಯಗಳನ್ನು ಚರ್ಚಿಸುವಾಗ, ರಫ್ತುಗಳು ವಿಶೇಷವಾಗಿ ಹಾಗೂ ಪ್ರತ್ಯೇಕವಾಗಿ ಧನಾಧಿಪತಿಗಳ ಕುಟಿಲೋಪಾಯಗಳೊಂದಿಗೆ ಹೇಗೆ ಸಂಬಂಧಿಸಿರುತ್ತವೆಂಬುದನ್ನು, ಕಾರ್ಟೆಲ್‌ಗಳು ವಸ್ತುಗಳನ್ನು ಮಾರುವುದರೊಂದಿಗೆ ಹೇಗೆ ವಿಶೇಷವಾಗಿ ಹಾಗೂ

*'ದಿ ಬ್ಯಾಂಕ್,' 1909, 2, ಪು. 819 ಮತ್ತು ಅನಂತರ.

ಪ್ರತ್ಯೇಕವಾಗಿ ಸಂಬಂಧಿಸಿರುತ್ತವೆಂಬುದನ್ನು, ಬಿಡಿಸಿ ತೋರಿಸಬೇಕು. ಕೇವಲ ವಸಾಹತುಗಳನ್ನು ವಸಾಹತು ಅಲ್ಲದವುಗಳೊಂದಿಗೂ, ಒಂದು ಸಾಮ್ರಾಜ್ಯವಾದವನ್ನು ಇನ್ನೊಂದು ಸಾಮ್ರಾಜ್ಯವಾದದೊಂದಿಗೂ, ಒಂದು ಅರೆ ವಸಾಹತು ಅಥವಾ ವಸಾಹತು (ಇಜಿಪ್ಟ್) ದೇಶವನ್ನು ಇತರೆಲ್ಲ ದೇಶಗಳೊಂದಿಗೂ ಹೋಲಿಸಿದರೆ, ಅದು ಪ್ರಶ್ನೆಯ ಸಾರವನ್ನೇ ತಪ್ಪಿಸಿದಂತಾಗುತ್ತದೆ, ಅಸ್ಪಷ್ಟಗೊಳಿಸಿದಂತಾಗುತ್ತದೆ.

ಸಾಮ್ರಾಜ್ಯವಾದದ ಬಗೆಗೆ ಕೌತ್‌ಸ್ಕಿಯವರ ಸೈದ್ಧಾಂತಿಕ ಪರಾಮರ್ಶೆಯು ಮಾರ್ಕ್ಸ್‌ವಾದದೊಂದಿಗೆ ಯಾವ ಸಂಬಂಧವನ್ನೂ ಹೊಂದಿಲ್ಲ. ಸಂದರ್ಭಸಾಧಕರೊಂದಿಗೂ ಸಾಮಾಜಿಕ ಸ್ವದೇಶ ಮೂಢಾಭಿಮಾನಿಗಳೊಂದಿಗೂ ಶಾಂತಿಯನ್ನೂ ಏಕತೆಯನ್ನೂ ಏರ್ಪಡಿಸಿಕೊಳ್ಳಬೇಕೆಂಬ ಪ್ರಚಾರಕಾರ್ಯಕ್ಕೆ ಪೀಠಿಕೆಯಾಗಷ್ಟೆ ಅದು ಉಪಯೋಗಕ್ಕೆ ಬರುತ್ತದೆ. ಏತಕ್ಕೆಂದರೆ ಅದು ಸಾಮ್ರಾಜ್ಯವಾದದ ಅತ್ಯಂತ ಪ್ರಗಾಢವಾದ ಹಾಗೂ ಮೂಲಭೂತವಾದ ವೈರುಧ್ಯಗಳನ್ನು – ಏಕಸ್ವಾಮ್ಯಕ್ಕೂ ಅದರ ಜೊತೆಜೊತೆಯಲ್ಲೇ ಇರುವ ಮುಕ್ತ ಸ್ಪರ್ಧೆಗೂ ನಡುವಿನ ವೈರುಧ್ಯಗಳನ್ನು, ಹಣಕಾಸು ಬಂಡವಾಳದ ಬೃಹತ್ "ಕಾರ್ಯಾಚರಣೆಗಳಿಗೂ" (ಮತ್ತು ಭಾರಿ ಲಾಭಗಳಿಗೂ) ಮುಕ್ತ ಮಾರುಕಟ್ಟೆಯಲ್ಲಿನ "ಪ್ರಾಮಾಣಿಕ" ವ್ಯಾಪಾರಕ್ಕೂ ನಡುವಿನ ವೈರುಧ್ಯಗಳನ್ನು, ಒಂದು ಕಡೆ ಕಾರ್ಟೆಲ್‌ಗಳು, ಟ್ರಸ್ಟುಗಳು ಇವುಗಳಿಗೂ, ಮತ್ತೊಂದು ಕಡೆ ಕಾರ್ಟೆಲ್‌ಗಳಿಗೆ ಸೇರಿರದ ಕೈಗಾರಿಕೆಗೂ ನಡುವಿನ ವೈರುಧ್ಯಗಳನ್ನು, ಇತ್ಯಾದಿ ವೈರುಧ್ಯಗಳನ್ನು – ತಪ್ಪಿಸುತ್ತದೆ, ಅಸ್ಪಷ್ಟಗೊಳಿಸುತ್ತದೆ.

ಕೌತ್‌ಸ್ಕಿಯವರು ಸೃಜಿಸಿದ "ಅತೀತ-ಸಾಮ್ರಾಜ್ಯವಾದ" ಎಂಬ ಕುಖ್ಯಾತ ಸಿದ್ಧಾಂತವೂ ಅಷ್ಟೇ ಪ್ರತಿಗಾಮಿಯಾದುದು. ಈ ವಿಷಯಕ್ಕೆ ಸಂಬಂಧಿಸಿ ಅವರು 1915ರಲ್ಲಿ ಮಾಡಿದ ವಾದವನ್ನು 1902ರಲ್ಲಿ ಹಾಬ್ಸನ್‌ರು ಮಾಡಿದ ವಾದದೊಂದಿಗೆ ಹೋಲಿಸಿ ನೋಡಿ.

ಕೌತ್‌ಸ್ಕಿ: "...ಪ್ರಸಕ್ತ ಸಾಮ್ರಾಜ್ಯವಾದಿ ನೀತಿಯ ಸ್ಥಳದಲ್ಲಿ ಒಂದು ಹೊಸ ಅತೀತ-ಸಾಮ್ರಾಜ್ಯವಾದಿ ನೀತಿಯನ್ನು – ರಾಷ್ಟ್ರೀಯ ಹಣಕಾಸು ಬಂಡವಾಳಗಳ ಪರಸ್ಪರ ವೈರಗಳ ಸ್ಥಳದಲ್ಲಿ ಅಂತರರಾಷ್ಟ್ರೀಯವಾಗಿ ಐಕ್ಯಗೊಂಡ ಹಣಕಾಸು ಬಂಡವಾಳವು ಜಗತ್ತನ್ನು ಸಂಯುಕ್ತವಾಗಿ ಶೋಷಿಸುವುದನ್ನು ಜಾರಿಗೆ ತರುವಂಥ ನೀತಿಯನ್ನು – ಸ್ಥಾಪಿಸುವುದು ಸಾಧ್ಯವಿಲ್ಲವೇ? ಏನೇ ಆಗಲಿ, ಬಂಡವಾಳವಾದದ ಅಂತಹ ಒಂದು ಹೊಸ ಮಜಲು ಗ್ರಹಣೀಯವೇ. ಅದನ್ನು ಸಾಧಿಸುವುದು ಸಾಧ್ಯವೇ? ಈ ಪ್ರಶ್ನೆಗೆ ಉತ್ತರ ಕೊಡಲು ನಮ್ಮಲ್ಲಿನ್ನೂ ಸಾಕಷ್ಟು ಪೂರ್ವಾಧಾರಗಳಿಲ್ಲ."*

ಹಾಬ್ಸನ್: "ಈ ರೀತಿಯಲ್ಲಿ ಪ್ರತಿಯೊಂದು ಸಾಮ್ರಾಜ್ಯಕ್ಕೂ ಅನಾಗರಿಕ ವಸಾಹತುಗಳ ಹಾಗೂ ಪರಾಧೀನ ದೇಶಗಳ ಒಂದು ಪರಿವಾರ ಇರುವಂತೆ ಕೆಲವು ಭಾರಿ

---

**Die Neue Zeit*, ಏಪ್ರಿಲ್ 30, 1915, ಪು. 144.

ಸಂಯುಕ್ತ ಸಾಮ್ರಾಜ್ಯಗಳಲ್ಲಿ ವಿಸ್ತರಿಸಿರುವ ಕ್ರೈಸ್ತ ಧರ್ಮದ ಪ್ರಾಬಲ್ಯವು ಪ್ರಸಕ್ತ ಪ್ರವೃತ್ತಿಗಳ ಅತ್ಯಂತ ನ್ಯಾಯಬದ್ಧ ಬೆಳವಣಿಗೆಯೆಂದೇ, ಅಂತರಸಾಮ್ರಾಜ್ಯ ವಾದ (inter imperialism)ದ ಖಚಿತ ಆಧಾರದ ಮೇಲೆ ಶಾಶ್ವತ ಶಾಂತಿಯು ಅತ್ಯುತ್ತಮ ಭರವಸೆಯನ್ನು ನೀಡುವುದೆಂದೇ, ಅನೇಕರಿಗೆ ಕಂಡುಬರುತ್ತದೆ."

ಹಾಬ್ಸನ್‌ರು ಹದಿಮೂರು ವರ್ಷಗಳ ಹಿಂದೆ ಯಾವುದನ್ನು ಅಂತರಸಾಮ್ರಾಜ್ಯ ವಾದ ಎಂದು ಕರೆದರೋ ಅದನ್ನು ಕೌತ್‌ಸ್ಕಿ ಅತೀತ ಸಾಮ್ರಾಜ್ಯವಾದ ಅಥವಾ ಅಧಿಸಾಮ್ರಾಜ್ಯವಾದ (super imperialism) ಎಂದು ಕರೆದರು. ಒಂದು ಹೊಸ ಹಾಗೂ ಬುದ್ಧಿವಂತ ಆಕರ್ಷಕ ಪದವನ್ನು ಸೃಷ್ಟಿಸಿರುವುದನ್ನು ಬಿಟ್ಟರೆ, ಒಂದು ಲ್ಯಾಟಿನ್ ಪೂರ್ವಪ್ರತ್ಯಯದ ಬದಲು ಮತ್ತೊಂದನ್ನು ಬಳಸಿರುವುದನ್ನು ಬಿಟ್ಟರೆ, ಕೌತ್‌ಸ್ಕಿಯುವರು "ವೈಜ್ಞಾನಿಕ" ಚಿಂತನೆಯ ವಲಯದಲ್ಲಿ ಸಾಧಿಸಿರುವ ಏಕೈಕ ಪ್ರಗತಿ ಯೆಂದರೆ, ಹಾಬ್ಸನ್‌ರು ಯಾವುದನ್ನು ಸಾರತಃ ಇಂಗ್ಲಿಷ್ ಪಾದ್ರಿಗಳ ಡಂಭಾ ಚಾರದ ಮಾತಾಗಿ ವಿವರಿಸಿದರೋ ಅದನ್ನೇ ಇವರು ಮಾರ್ಕ್ಸ್‌ವಾದ ಎಂದು ಹೇಳಿ ರುವುದಾಗಿದೆ. ಅಂಗ್ಲೋ-ಬೋಯರ್ ಯುದ್ಧದ ನಂತರ, ದಕ್ಷಿಣ ಆಫ್ರಿಕದ ರಣಾಂಗಣ ದಲ್ಲಿ ತಮ್ಮ ಅನೇಕ ಬಂಧುಗಳನ್ನು ಕಳೆದುಕೊಂಡಿದ್ದಂಥ, ಬ್ರಿಟಿಷ್ ಧನಾಧಿಪತಿ ಗಳಿಗೆ ಇನ್ನೂ ಹೆಚ್ಚಿನ ಲಾಭವನ್ನು ಖಚಿತಪಡಿಸಿಕೊಡಲೋಸುಗ ಹೆಚ್ಚು ಉನ್ನತ ತೆರಿಗೆಗಳನ್ನು ನೀಡುವ ಒತ್ತಾಯಕ್ಕೊಳಗಾಗಿದ್ದಂಥ, ಬ್ರಿಟಿಷ್ ಮಧ್ಯಮ ವರ್ಗದವ ರನ್ನೂ ಕಾರ್ಮಿಕರನ್ನೂ ಸಮಾಧಾನಗೊಳಿಸಲು ತಮ್ಮ ಪ್ರಧಾನ ಯತ್ನಗಳನ್ನು ವಿನಿಯೋಗಿಸುವುದು ಈ ಉನ್ನತ ಗೌರವಾರ್ಹ ಧರ್ಮಾಧಿಕಾರಿಗಳಿಗೆ ತೀರ ಸಹಜವೇ ಆಗಿದ್ದಿತು. ಸಾಮ್ರಾಜ್ಯವಾದವು ಅಷ್ಟು ಕೆಟ್ಟುದೇನಲ್ಲ, ಅದು ಶಾಶ್ವತ ಶಾಂತಿಯನ್ನು ಖಚಿತಗೊಳಿಸಬಲ್ಲಂಥ ಅಂತರ (ಅಥವಾ ಅತೀತ) ಸಾಮ್ರಾಜ್ಯವಾದಕ್ಕೆ ಸಮೀಪವೇ ಇದೆ, ಎಂಬ ಸಿದ್ಧಾಂತಕ್ಕಿಂತ ಹೆಚ್ಚು ಉತ್ತಮವಾದ ಸಮಾಧಾನ ಮತ್ತೇನು ಇರಲು ಸಾಧ್ಯ? ಇಂಗ್ಲಿಷ್ ಪಾದ್ರಿಗಳ ಅಥವಾ ಭಾವಾತಿರೇಕದ ಕೌತ್‌ಸ್ಕಿಯುವರ ಸದುದ್ದೇಶ ಏನೇ ಆಗಿರಬಹುದಾಗಿದ್ದರೂ, ಕೌತ್‌ಸ್ಕಿಯುವರ "ಸಿದ್ಧಾಂತವು" ಹೊಂದಿರಬಹುದಾದ ಏಕೈಕ ವಸ್ತುನಿಷ್ಠ, ಅಂದರೆ ನಿಜವಾದ, ಸಾಮಾಜಿಕ ಅರ್ಥವೆಂದರೆ ಇದು: ಬಂಡ ವಾಳವಾದಿ ವ್ಯವಸ್ಥೆಯಲ್ಲಿಯೇ ಶಾಶ್ವತ ಶಾಂತಿ ಸಾಧ್ಯ ಎಂಬ ಭರವಸೆಗಳ ಮೂಲಕ, ಪ್ರಸಕ್ತ ಕಾಲದ ತೀವ್ರವಾದ ಸಮಸ್ಯೆಗಳಿಂದಲೂ ತೀಕ್ಷ್ಣ ವೈರುಧ್ಯಗಳಿಂದಲೂ ಜನರ ಗಮನವನ್ನು ಬೇರೆ ಕಡೆಗೆ ತಿರುಗಿಸಿ ಅದನ್ನು ಭವಿಷ್ಯತ್ತಿನ ಕಾಲ್ಪನಿಕ "ಅತೀತ ಸಾಮ್ರಾ ಜ್ಯವಾದದ" ಭ್ರಾಂತ್ಯಾತ್ಮಕ ಪ್ರತೀಕ್ಷೆಗಳ ಕಡೆಗೆ ಹರಿಸುವ ಮೂಲಕ, ಜನರನ್ನು ಸಮಾಧಾನಗೊಳಿಸುವ ಅತ್ಯಂತ ಪ್ರತಿಗಾಮಿ ವಿಧಾನವಾಗಿದೆ. ಜನಸಮೂಹಗಳನ್ನು ಮೋಸಗೊಳಿಸುವುದು – ಕೌತ್‌ಸ್ಕಿಯುವರ "ಮಾರ್ಕ್ಸ್‌ವಾದಿ" ಸಿದ್ಧಾಂತದಲ್ಲಿ ಇದು ಬಿಟ್ಟು ಬೇರೇನೂ ಇಲ್ಲ.

ಕೌತ್‌ಸ್ಕಿಯುವರು ಜರ್ಮನ್ ಕಾರ್ಮಿಕರ ಮುಂದೆ (ಮತ್ತು ಎಲ್ಲ ದೇಶಗಳ

ಕಾರ್ಮಿಕರ ಮುಂದೆಯೂ) ತೋರಿಸ ಯತ್ನಿಸುತ್ತಿರುವ ಪ್ರತೀಕ್ಷೆಗಳು ಎಷ್ಟು ಕಪಟವಾದವು ಎಂಬುದನ್ನು ಮನಗಾಣಲು, ನಿಜಕ್ಕೂ ಸರ್ವವಿದಿತವಾದ, ನಿರ್ವಿವಾದವಾದ ಸತ್ಯಸಂಗತಿಗಳನ್ನು ಹೋಲಿಸಿ ನೋಡುವುದು ಸಾಕು. ಭಾರತ, ಇಂಡೋ-ಚೀಣಾ ಹಾಗೂ ಚೀಣಾಗಳನ್ನು ಪರಿಶೀಲಿಸೋಣ. ಒಟ್ಟು 60-70 ಕೋಟಿ ಜನಸಂಖ್ಯೆಯುಳ್ಳ ಈ ಮೂರು ವಸಾಹತು ಹಾಗೂ ಅರೆ ವಸಾಹತು ದೇಶಗಳು ಹಲವಾರು ಸಾಮ್ರಾಜ್ಯಶಾಹಿ ಬೃಹತ್ ರಾಷ್ಟ್ರಗಳ – ಗ್ರೇಟ್ ಬ್ರಿಟನ್, ಫ್ರಾನ್ಸ್, ಜಪಾನ್, ಅಮೆರಿಕದ ಸಂಯುಕ್ತ ಸಂಸ್ಥಾನಗಳು, ಇತ್ಯಾದಿ ದೇಶಗಳ – ಹಣಕಾಸು ಬಂಡವಾಳದ ಶೋಷಣೆಗೆ ಗುರಿಯಾಗಿವೆ ಎಂಬುದು ತಿಳಿದ ಸಂಗತಿಯೇ ಆಗಿದೆ. ಈ ಸಾಮ್ರಾಜ್ಯಶಾಹಿ ದೇಶಗಳು ಈ ಏಷ್ಯಾಟಿಕ್ ದೇಶಗಳಲ್ಲಿ ತಮ್ಮ ಆಸ್ತಿಗಳನ್ನು, ತಮ್ಮ ಹಿತಗಳನ್ನು ಹಾಗೂ ತಮ್ಮ "ಪ್ರಭಾವ ವಲಯಗಳನ್ನು" ರಕ್ಷಿಸಿಕೊಳ್ಳಲು ಅಥವಾ ಹೆಚ್ಚಿಸಿಕೊಳ್ಳಲು ಒಂದರ ವಿರುದ್ಧ ಒಂದು ಕೂಟಗಳನ್ನು ಏರ್ಪಡಿಸಿಕೊಳ್ಳುತ್ತವೆಂದು ಭಾವಿಸಿಕೊಳ್ಳೋಣ; ಈ ಕೂಟಗಳು "ಅಂತರಸಾಮ್ರಾಜ್ಯಶಾಹಿ" ಅಥವಾ "ಅತೀತ ಸಾಮ್ರಾಜ್ಯಶಾಹಿ" ಕೂಟಗಳಾಗಿರುತ್ತವೆ. ಎಲ್ಲ ಸಾಮ್ರಾಜ್ಯಶಾಹಿ ದೇಶಗಳೂ ಏಷ್ಯದ ಈ ಭಾಗಗಳ "ಶಾಂತಿಯುತ" ವಿಭಜನೆಗಾಗಿ ಕೂಟ ಏರ್ಪಡಿಸಿಕೊಳ್ಳುತ್ತವೆಂದು ಭಾವಿಸಿಕೊಳ್ಳೋಣ. ಈ ಕೂಟವು "ಅಂತರರಾಷ್ಟ್ರೀಯವಾಗಿ ಐಕ್ಯಗೊಂಡ ಹಣಕಾಸು ಬಂಡವಾಳ"ದ ಕೂಟವಾಗಿರುತ್ತದೆ. 20ನೆಯ ಶತಮಾನದ ಇತಿಹಾಸದಲ್ಲಿ ಇಂತಹ ಕೂಟಗಳ ವಾಸ್ತವಿಕ ನಿದರ್ಶನಗಳಿವೆ. ಉದಾಹರಣೆಗೆ, ಚೀಣಾದ ಬಗೆಗೆ ಬೃಹತ್ ರಾಷ್ಟ್ರಗಳ ಮನೋಧರ್ಮ.[32] ಬಂಡವಾಳವಾದಿ ಪದ್ಧತಿಯು ಉಳಿದುಕೊಂಡೇ ಇರುವುದೆಂದು ಭಾವಿಸಿಕೊಂಡರೆ – ಕೌತ್‌ಸ್ಕಿಯವರು ಭಾವಿಸಿಕೊಳ್ಳುವುದು ಇದನ್ನೇ – ಇಂಥ ಕೂಟಗಳು ಶಾಶ್ವತವಾಗಿ ಇರುತ್ತವೆ, ಅವು ಸಾಧ್ಯವಾದ ಪ್ರತಿ ರೀತಿಯಲ್ಲೂ ಘರ್ಷಣೆಗಳನ್ನೂ ತಿಕ್ಕಾಟಗಳನ್ನೂ ಹೋರಾಟಗಳನ್ನೂ ನಿವಾರಿಸುತ್ತವೆ ಎಂದು "ಭಾವಿಸಿಕೊಳ್ಳಲು ಸಾಧ್ಯವೆ?" ಎಂದು ನಾವು ಕೇಳುತ್ತೇವೆ.

ಈ ಪ್ರಶ್ನೆಗೆ ನಕಾರಾತ್ಮಕವಲ್ಲದೆ ಬೇರಾವ ರೀತಿಯ ಉತ್ತರವನ್ನೂ ಕೊಡುವುದು ಅಸಾಧ್ಯವೆಂಬುದನ್ನು ತೋರಿಸಲು ಈ ಪ್ರಶ್ನೆಯನ್ನು ಸ್ಪಷ್ಟವಾಗಿ ತಿಳಿಸುವುದು ಸಾಕು. ಏಕೆಂದರೆ, ಬಂಡವಾಳವಾದಿ ವ್ಯವಸ್ಥೆಯಲ್ಲಿ ಪ್ರಭಾವ ವಲಯಗಳ, ಹಿತಾಸಕ್ತಿಗಳ, ವಸಾಹತುಗಳ, ಇತ್ಯಾದಿಗಳ ವಿಭಜನೆಗೆ, ವಿಭಜನೆಯಲ್ಲಿ ಭಾಗವಹಿಸುವವರ ಶಕ್ತಿ, ಅವರ ಸಾಮಾನ್ಯ ಆರ್ಥಿಕ, ಹಣಕಾಸು, ಸೈನಿಕ ಶಕ್ತಿ ಇತ್ಯಾದಿಗಳನ್ನು ಲೆಕ್ಕ ಹಾಕುವುದಲ್ಲದೆ ಬೇರಾವ ಆಧಾರವನ್ನೂ ಊಹಿಸುವುದು ಸಾಧ್ಯವಿಲ್ಲ. ಮತ್ತೆ, ವಿಭಜನೆಯಲ್ಲಿ ಭಾಗಿಗಳಾಗುವ ಈ ದೇಶಗಳ ಶಕ್ತಿಯು ಸಮಾನ ಪ್ರಮಾಣದಲ್ಲೇನೂ ಬದಲಾಗುವುದಿಲ್ಲ, ಏಕೆಂದರೆ ಬಂಡವಾಳವಾದಿ ವ್ಯವಸ್ಥೆಯಲ್ಲಿ ವಿಭಿನ್ನ ಉದ್ಯಮಗಳ, ಟ್ರಸ್ಟುಗಳ, ಕೈಗಾರಿಕಾ ಶಾಖೆಗಳ, ಅಥವಾ ದೇಶಗಳ ಸಮಾನ ಬೆಳವಣಿಗೆಯು ಅಸಾಧ್ಯ. ಅರ್ಧ ಶತಮಾನದ ಹಿಂದೆ ಜರ್ಮನಿಯು,

ಅದರ ಬಂಡವಾಳಶಾಹಿ ಶಕ್ತಿಯ ಮಟ್ಟಿಗೆ ಹೇಳುವುದಾದರೆ, ಆ ಕಾಲದಲ್ಲಿ ಇಂಗ್ಲೆಂಡಿನ ಶಕ್ತಿಯೊಂದಿಗೆ ಹೋಲಿಸಿದಲ್ಲಿ ದಾರಿದ್ರ್ಯತೆಯ ನಿಕೃಷ್ಟ ದೇಶವಾಗಿದ್ದಿತು. ರಷ್ಯಕ್ಕೆ ಹೋಲಿಸಿದಂತೆ ಜಪಾನ್ ಕೂಡ ಹಾಗೆಯೇ ಇದ್ದಿತು. ಇನ್ನು ಹತ್ತು ಅಥವಾ ಇಪ್ಪತ್ತು ವರ್ಷಗಳ ಕಾಲದಲ್ಲಿ ಸಾಮ್ರಾಜ್ಯಶಾಹಿ ಬೃಹತ್ ರಾಷ್ಟ್ರಗಳ ಬಲಾಬಲ ಹಂಚಿಕೆ ಬದಲಾಗದೆ ಉಳಿಯುವುದೆಂದು "ಊಹಿಸಲು" ಸಾಧ್ಯವೇ? ಖಂಡಿತವಾಗಿಯೂ ಇಲ್ಲ.

ಆದ್ದರಿಂದ, ಇಂಗ್ಲಿಷ್ ಪಾದ್ರಿಗಳ ಅಥವಾ ಜರ್ಮನ್ "ಮಾರ್ಕ್ಸ್‌ವಾದಿ" ಕೌತ್‌ಸ್ಕಿಯವರ ನೀರಸ ಸಂಕುಚಿತಮತಿ ಕಲ್ಪನೆಗಳಲ್ಲಲ್ಲ ಆದರೆ ಬಂಡವಾಳವಾದಿ ವ್ಯವಸ್ಥೆಯ ವಾಸ್ತವಿಕತೆಗಳಲ್ಲಿ, "ಅಂತರಸಾಮ್ರಾಜ್ಯವಾದಿ" ಅಥವಾ "ಅತೀತ ಸಾಮ್ರಾಜ್ಯವಾದಿ" ಕೂಟಗಳು, ಅವು ಒಂದರ ವಿರುದ್ಧ ಇನ್ನೊಂದು ಸೆಣಸಾಡುವ ಸಾಮ್ರಾಜ್ಯಶಾಹಿ ಕೂಟಗಳ ರೂಪ ತಳೆಯಲಿ ಅಥವಾ ಎಲ್ಲ ಸಾಮ್ರಾಜ್ಯಶಾಹಿ ಬೃಹತ್ ರಾಷ್ಟ್ರಗಳನ್ನೂ ಒಳಗೊಂಡ ಸಾರ್ವತ್ರಿಕ ಕೂಟದ ರೂಪ ತಳೆಯಲಿ, ಯಾವುದೇ ರೂಪ ತಳೆಯಲಿ, ಅವು ಯುದ್ಧಗಳ ನಡುವಿನ "ವಿರಾಮ" ಕಾಲಾವಧಿಗಿಂತ ಹೆಚ್ಚಿಗೆ ಏನೂ ಆಗಿರದಿರುವುದು ಅನಿವಾರ್ಯ. ಶಾಂತಿಯುತ ಕೂಟಗಳು ಯುದ್ಧಗಳಿಗೆ ಭೂಮಿಕೆಯನ್ನು ಸಿದ್ಧಪಡಿಸಿಕೊಡುತ್ತವೆ ಮತ್ತು ತಮ್ಮ ಸರದಿಯಲ್ಲಿ ಅವು ಯುದ್ಧಗಳಿಂದ ಹೊರಹೊಮ್ಮುತ್ತವೆ; ಒಂದು ಇನ್ನೊಂದನ್ನು ನಿರ್ಣಯಿಸುತ್ತದೆ, ಒಮ್ಮೆ ಶಾಂತಿಯುತವಾದ ಇನ್ನೊಮ್ಮೆ ಶಾಂತಿಯುತವಲ್ಲದ ಹೋರಾಟ ರೂಪಗಳಿಗೆ ಎಡೆ ಮಾಡಿಕೊಡುತ್ತಿರುತ್ತವೆ. ಆದರೆ ಅವುಗಳಿಗೆ ಆಧಾರ ಒಂದೇ ಆಗಿರುತ್ತದೆ – ಜಾಗತಿಕ ಆರ್ಥಿಕತೆ ಹಾಗೂ ಜಾಗತಿಕ ರಾಜಕಾರಣದೊಳಗೇ ಸಾಮ್ರಾಜ್ಯಶಾಹಿ ಸಂಬಂಧಗಳು ಹಾಗೂ ಬಾಂಧವ್ಯಗಳು. ಆದರೆ ಕಾರ್ಮಿಕರನ್ನು ಶಾಂತಗೊಳಿಸಿ ಸ್ವಪಕ್ಷ ತ್ಯಾಗ ಮಾಡಿ ಬೂರ್ಷ್ವಾಸೀಯ ಪಕ್ಷಕ್ಕೆ ಹೋದಂಥ ಸಾಮಾಜಿಕ ಸ್ವದೇಶ ಮೂಢಾಭಿಮಾನಿಗಳೊಂದಿಗೆ ಅವರನ್ನು ರಾಜಿಮಾಡಿಸಲೋಸುಗ ಪಂಡಿತ ಶಿಖಾಮಣಿ ಕೌತ್‌ಸ್ಕಿ ಒಂದೇ ಸರಪಣಿಯಲ್ಲಿನ ಒಂದು ಕೊಂಡಿಯನ್ನು ಮತ್ತೊಂದರಿಂದ ಪ್ರತ್ಯೇಕಿಸುತ್ತಾರೆ; ಇಂದು ಚೀಣಾವನ್ನು "ಶಾಂತಗೊಳಿಸಲು" (ಬಾಕ್ಸರ್ ಬಂಡಾಯ[33]ವನ್ನು ಹತ್ತಿಕ್ಕಿದುದನ್ನು ಜ್ಞಾಪಿಸಿಕೊಳ್ಳಿ) ಎಲ್ಲ ಬೃಹತ್ ರಾಷ್ಟ್ರಗಳ ಶಾಂತಿಯುತ (ಹಾಗೂ ಅತೀತ ಸಾಮ್ರಾಜ್ಯಶಾಹಿ, ಇಲ್ಲ, ಅತೀತ-ಅತೀತ ಸಾಮ್ರಾಜ್ಯಶಾಹಿ) ಕೂಟವನ್ನು ನಾಳಿನ ಶಾಂತಿಯುತವಲ್ಲದ ಘರ್ಷಣೆಯಿಂದ ಪ್ರತ್ಯೇಕಿಸುತ್ತಾರೆ. ನಾಳಿನ ಈ ಶಾಂತಿಯುತವಲ್ಲದ ಘರ್ಷಣೆಯು ನಾಡಿದ್ದು, ಟರ್ಕಿಯನ್ನೇ ಎಂದಿಟ್ಟುಕೊಳ್ಳಿ, ವಿಭಜಿಸಲು ಮತ್ತೊಂದು "ಶಾಂತಿಯುತ" ಸಾರ್ವತ್ರಿಕ ಕೂಟಕ್ಕೆ ಭೂಮಿಕೆಯನ್ನು ಸಿದ್ಧಗೊಳಿಸುವುದು, ಇತ್ಯಾದಿ, ಇತ್ಯಾದಿ. ಸಾಮ್ರಾಜ್ಯಶಾಹಿ ಶಾಂತಿ ಕಾಲಾವಧಿಗಳಿಗೂ ಸಾಮ್ರಾಜ್ಯಶಾಹಿ ಯುದ್ಧ ಕಾಲಾವಧಿಗಳಿಗೂ ನಡುವೆ ಇರುವ ಜೀವಂತ ಸಂಬಂಧವನ್ನು ತೋರಿಸಿಕೊಡುವ ಬದಲು ಕೌತ್‌ಸ್ಕಿಯವರು ಕಾರ್ಮಿಕರನ್ನು ಅವರ ನಿರ್ಜೀವ ನಾಯಕ

ರೊಂದಿಗೆ ರಾಜಿ ಮಾಡಿಸಲೋಸುಗ ಒಂದು ನಿರ್ಜೀವ ಅಮೂರ್ತ ಕಲ್ಪನೆಯನ್ನು ಅವರ ಮುಂದಿರಿಸುತ್ತಾರೆ.

ಅಮೆರಿಕನ್ ಲೇಖಕ ಹಿಲ್‌ರವರು 'ಯೂರೋಪಿನ ಅಂತರರಾಷ್ಟ್ರೀಯ ಬೆಳವಣಿಗೆಯಲ್ಲಿ ರಾಜತಾಂತ್ರಿಕತೆಯ ಇತಿಹಾಸ' ಎಂಬ ತಮ್ಮ ಗ್ರಂಥಕ್ಕೆ ಬರೆದ ಮುನ್ನುಡಿಯಲ್ಲಿ, ರಾಜತಾಂತ್ರಿಕತೆಯ ಈಚೆಗಿನ ಇತಿಹಾಸದಲ್ಲಿನ ಈ ಕೆಳಗಿನ ಕಾಲಾವಧಿಗಳಿಗೆ ಉಲ್ಲೇಖಿಸುತ್ತಾರೆ: 1) ಕ್ರಾಂತಿಯ ಯುಗ; 2) ಸಂವಿಧಾನಕ್ಕಾಗಿ ಚಳವಳಿ; 3) ಇಂದಿನ "ವಾಣಿಜ್ಯ ಸಾಮ್ರಾಜ್ಯವಾದದ" ಯುಗ.* ಮತ್ತೊಬ್ಬ ಲೇಖಕರು 1870 ರಿಂದ ಹಿಡಿದು ಗ್ರೇಟ್ ಬ್ರಿಟನ್ನಿನ "ಜಾಗತಿಕ ನೀತಿ"ಯ ಇತಿಹಾಸವನ್ನು ನಾಲ್ಕು ಕಾಲಾವಧಿಗಳನ್ನಾಗಿ ವಿಭಜಿಸುತ್ತಾರೆ: 1)ಮೊದಲ ಏಷ್ಯಾಟಿಕ್ ಕಾಲಾವಧಿ (ಮಧ್ಯ ಏಷ್ಯದಲ್ಲಿ ರಷ್ಯವು ಭಾರತದತ್ತ ಮುಂದುವರಿಯುತ್ತಿದ್ದುದರ ವಿರುದ್ಧ ಹೋರಾಟದ ಕಾಲಾವಧಿ); 2) ಆಫ್ರಿಕನ್ ಕಾಲಾವಧಿ (ಸರಿಸುಮಾರು 1885-1902). ಆಫ್ರಿಕಾದ ವಿಭಜನೆಗಾಗಿ ಫ್ರಾನ್ಸಿನ ವಿರುದ್ಧ ಹೋರಾಟದ ಕಾಲಾವಧಿ (ಫ್ರಾನ್ಸಿನೊಂದಿಗೆ ಯುದ್ಧ ಸಂಭವಿಸುವಂತಹ ಸ್ಥಿತಿಗೆ ಕೊಂಡೊಯ್ದು 1898ರ "ಫಷೋದಾ ಘಟನೆ"[34]); 3) ಎರಡನೆಯ ಏಷ್ಯಾಟಿಕ್ ಕಾಲಾವಧಿ (ರಷ್ಯದ ವಿರುದ್ಧ ಜಪಾನಿನೊಂದಿಗೆ ಕೂಟ ರಚನೆ) ಮತ್ತು 4) "ಯೂರೋಪಿಯನ್" ಕಾಲಾವಧಿ, ಪ್ರಧಾನವಾಗಿ ಜರ್ಮನಿಯ ವಿರುದ್ಧ.** "ಮುಂದಳಗಳ ನಡುವೆ ರಾಜಕೀಯ ಘರ್ಷಣೆಗಳು ಆರ್ಥಿಕ ಕ್ಷೇತ್ರದಲ್ಲಿ ಉದ್ಭವಿಸುತ್ತವೆ" ಎಂದು ಬ್ಯಾಂಕರ್ ರೀಸ್ಸೆರ್ 1905 ರಲ್ಲೇ, ಇಟಲಿಯಲ್ಲಿ ಕಾರ್ಯ ಜರುಗಿಸುತ್ತ ಫ್ರೆಂಚ್ ಹಣಕಾಸು ಬಂಡವಾಳವು ಹೇಗೆ ಈ ದೇಶಗಳ ರಾಜಕೀಯ ಮೈತ್ರೀಕೂಟಕ್ಕೆ ಮಾರ್ಗವನ್ನು ಸಿದ್ಧಪಡಿಸಿಕೊಡುತ್ತಿದ್ದಿತು, ಪರ್ಷಿಯಾಕ್ಕೆ ಸಂಬಂಧಿಸಿ ಜರ್ಮನಿಗೂ ಗ್ರೇಟ್ ಬ್ರಿಟನ್‌ಗೂ ನಡುವೆಯೂ, ಚೀನೀ ಸಾಲಗಳಿಗೆ ಸಂಬಂಧಿಸಿ ಎಲ್ಲ ಯೂರೋಪಿಯನ್ ಬಂಡವಾಳಗಾರರ ನಡುವೆಯೂ ಹೇಗೆ ಘರ್ಷಣೆ ಬೆಳೆಯುತ್ತಿದ್ದಿತು, ಇತ್ಯಾದಿಗಳನ್ನು ತೋರಿಸಿಕೊಡುತ್ತ ಬರೆದರು. ಸಾಮಾನ್ಯ ಸಾಮ್ರಾಜ್ಯಶಾಹಿ ಘರ್ಷಣೆಗಳೊಂದಿಗೆ ಅವಿಭಾಜ್ಯ ಸಂಬಂಧ ಹೊಂದಿರುವ ಶಾಂತಿಯುತ "ಅತೀತ ಸಾಮ್ರಾಜ್ಯವಾದಿ" ಕೂಟಗಳ ಜೀವಂತ ವಾಸ್ತವಿಕತೆಯನ್ನು ನೋಡಿ !

ಸಾಮ್ರಾಜ್ಯವಾದದ ಅತ್ಯಂತ ಆಳವಾದ ವೈರುಧ್ಯಗಳನ್ನು ಕೌತ್‌ಸ್ಕಿಯವರು ಅಸ್ಪಷ್ಟಗೊಳಿಸುವುದು ಅನಿವಾರ್ಯವಾಗಿಯೇ ಸಾಮ್ರಾಜ್ಯವಾದವನ್ನು ಅಂದಗೊಳಿಸುವಂತಾಗುತ್ತದೆ. ಈ ಲಕ್ಷಣವು ಈ ಲೇಖಕರು ಸಾಮ್ರಾಜ್ಯವಾದದ ರಾಜಕೀಯ

---

*David Jayne Hill, *A History of the Diplomacy in the International Development of Europe*, vol. I, p. X.

**ಜಿಲ್ಡೆರ್, ಪೂರ್ವೋಕ್ತ ಗ್ರಂಥ, ಪು. 178.

ಲಕ್ಷಣಗಳ ಕುರಿತು ಬರೆದಿರುವ ವಿಮರ್ಶೆಯಲ್ಲೂ ತನ್ನ ಗುರುತುಗಳನ್ನು ಬಿಟ್ಟಿದೆ. ಸಾಮ್ರಾಜ್ಯವಾದವು ಹಣಕಾಸು ಬಂಡವಾಳದ ಹಾಗೂ ಏಕಸ್ವಾಮ್ಯಗಳ ಯುಗವಾಗಿದೆ. ಅದು ಎಲ್ಲೆಲ್ಲೂ ತನ್ನ ಆಧಿಪತ್ಯ ಸ್ಥಾಪಿಸಲು ಪ್ರಯತ್ನಿಸುತ್ತದೆಯೇ ಹೊರತು ಸ್ವಾತಂತ್ರ್ಯವನ್ನಲ್ಲ. ಈ ಪ್ರವೃತ್ತಿಗಳ ಪರಿಣಾಮವೆಂದರೆ, ರಾಜಕೀಯ ಪದ್ಧತಿ ಏನೇ ಆಗಿರಲಿ, ಎಲ್ಲೆಲ್ಲೂ ಪ್ರತಿಗಾಮಿತ್ವ ಮತ್ತು ಈ ಕ್ಷೇತ್ರದಲ್ಲೂ ಆಗಲೇ ಅಸ್ತಿತ್ವದಲ್ಲಿರುವ ವೈರುಧ್ಯಗಳು ಅತ್ಯಂತ ತೀವ್ರವಾಗುವುದು. ರಾಷ್ಟ್ರೀಯ ದಬ್ಬಾಳಿಕೆಯ ಹೊರೆಯೂ ಪರದೇಶಗಳ ಭೂಭಾಗಗಳನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಯತ್ನವೂ, ಅಂದರೆ, ರಾಷ್ಟ್ರೀಯ ಸ್ವಾತಂತ್ರ್ಯದ ಉಲ್ಲಂಘನೆಯೂ (ಏಕೆಂದರೆ ಪರದೇಶಗಳ ಭೂಭಾಗಗಳನ್ನು ಸ್ವಾಧೀನಪಡಿಸಿಕೊಳ್ಳುವುದೆಂದರೆ, ರಾಷ್ಟ್ರಗಳ ಸ್ವಯಂನಿರ್ಣಯಾಧಿಕಾರದ ಹಕ್ಕಿನ ಉಲ್ಲಂಘನೆಯಲ್ಲದೆ ಬೇರೇನೂ ಅಲ್ಲ) ವಿಶೇಷವಾಗಿ ಹೆಚ್ಚು ತೀವ್ರವಾಗುತ್ತವೆ. ಸಾಮ್ರಾಜ್ಯವಾದಕ್ಕೂ, ರಾಷ್ಟ್ರೀಯ ದಬ್ಬಾಳಿಕೆಯನ್ನು ತೀವ್ರಗೊಳಿಸುವುದಕ್ಕೂ ನಡುವೆ ಇರುವ ಸಂಬಂಧವನ್ನು ಹಿಲ್ಫೆರ್ಡಿಂಗ್ ಸರಿಯಾಗಿಯೇ ಗಮನಿಸುತ್ತಾರೆ. ಅವರು ಬರೆಯುತ್ತಾರೆ: "ಹೊಸದಾಗಿ ಕಂಡುಹಿಡಿದ ದೇಶಗಳಿಗೆ ಆಮದಾದ ಬಂಡವಾಳವು ಅವುಗಳಲ್ಲಿನ ವೈರುಧ್ಯಗಳನ್ನು ತೀವ್ರಗೊಳಿಸುತ್ತದೆ, ರಾಷ್ಟ್ರೀಯ ಜಾಗೃತಿ ಪಡೆದುಕೊಳ್ಳುತ್ತಿರುವ ಅಲ್ಲಿನ ಜನತೆಗಳಲ್ಲಿ ಆಕ್ರಮಣಕಾರರ ವಿರುದ್ಧ ಸತತವಾಗಿ ಹೆಚ್ಚು ಹೆಚ್ಚು ಪ್ರತಿಭಟನೆಯನ್ನು ಉದ್ರೇಕಿಸುತ್ತದೆ; ಈ ಪ್ರತಿಭಟನೆಯು ಸುಲಭವಾಗಿ ವಿದೇಶೀ ಬಂಡವಾಳದ ವಿರುದ್ಧ ಅಪಾಯಕಾರಿ ಕ್ರಮಗಳಾಗಿ ವಿಕಾಸಗೊಳ್ಳಬಹುದು. ಹಳೆಯ ಸಾಮಾಜಿಕ ಸಂಬಂಧಗಳು ಸಂಪೂರ್ಣವಾಗಿ ಕ್ರಾಂತಿಕಾರಕವಾಗಿ ಬದಲುತ್ತವೆ, 'ಐತಿಹಾಸಿಕವಾಗಿ ನಿಷ್ಕ್ರಿಯವಾದ ರಾಷ್ಟ್ರಗಳು' ಅನಾದಿ ಕಾಲದಿಂದ ಕೃಷಿ ದೇಶಗಳಾಗಿ ಏಕಾಕಿಯಾಗಿರುವುದು ನಾಶವಾಗಿ ಅವು ಬಂಡವಾಳವಾದದ ಸುಳಿಯೊಳಕ್ಕೆ ಸೆಳೆಯಲ್ಪಡುತ್ತವೆ. ಬಂಡವಾಳವಾದವೇ ಕ್ರಮೇಣ ಅಧೀನ ದೇಶಗಳಿಗೆ ಅವುಗಳ ವಿಮೋಚನೆಗೆ ಸಾಧನೋಪಾಯಗಳನ್ನು ಒದಗಿಸಿಕೊಡುತ್ತದೆ ಮತ್ತು ಅವುಗಳು ಒಮ್ಮೆ ಯುರೋಪಿಯನ್ ದೇಶಗಳಿಗೆ ಅತ್ಯುನ್ನತವೆಂದು ಕಂಡುಬಂದಿದ್ದ ಗುರಿಯನ್ನು – ಆರ್ಥಿಕ ಹಾಗೂ ಸಾಂಸ್ಕೃತಿಕ ಸ್ವಾತಂತ್ರ್ಯಕ್ಕೆ ಸಾಧನವಾಗಿ ಒಂದು ಏಕೀಕೃತ ರಾಷ್ಟ್ರೀಯ ರಾಜ್ಯ ನಿರ್ಮಾಣದ ಗುರಿಯನ್ನು – ಸಾಧಿಸಿಕೊಳ್ಳಲು ತೊಡಗುತ್ತವೆ. ಈ ರಾಷ್ಟ್ರೀಯ ವಿಮೋಚನಾ ಚಳವಳಿಯು ಯುರೋಪಿಯನ್ ಬಂಡವಾಳಕ್ಕೆ, ಅದರ ಅತ್ಯಂತ ಅಮೂಲ್ಯವಾದ ಹಾಗೂ ಅತ್ಯಂತ ಭರವಸೆ ನೀಡುವಂಥ ಶೋಷಣೆಯ ಕ್ಷೇತ್ರಗಳಲ್ಲಿ, ಭೀತಿ ಒಡ್ಡುತ್ತದೆ. ಯುರೋಪಿಯನ್ ಬಂಡವಾಳವು ತನ್ನ ಸೈನಿಕ ಶಕ್ತಿಯನ್ನು ಸತತವಾಗಿ ಹೆಚ್ಚಿಸುತ್ತ ಹೋಗುವ ಮೂಲಕವಷ್ಟೆ ತನ್ನ ದಬ್ಬಾಳಿಕೆಯನ್ನು ಉಳಿಸಿಕೊಂಡಿರಬಲ್ಲುದು."*

---

*'ಹಣಕಾಸು ಬಂಡವಾಳ,' ಪು. 487.

ಹೊಸದಾಗಿ ಕಂಡುಹಿಡಿದ ದೇಶಗಳಲ್ಲಷ್ಟೆ ಅಲ್ಲ, ಹಳೆಯ ದೇಶಗಳಲ್ಲೂ ಸಾಮ್ರಾಜ್ಯವಾದವು ಅನ್ಯ ಭೂಭಾಗಗಳನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ, ರಾಷ್ಟ್ರೀಯ ದಬ್ಬಾಳಿಕೆಯನ್ನು ಹೆಚ್ಚಿಸುವುದಕ್ಕೆ, ತತ್ಫಲವಾಗಿ ಪ್ರತಿಭಟನೆಯನ್ನು ಹೆಚ್ಚಿಸುವುದಕ್ಕೂ, ದಾರಿ ಮಾಡಿಕೊಡುತ್ತಿದೆ, ಎಂದೂ ಮೇಲಿನದಕ್ಕೆ ಸೇರಿಸಬೇಕು. ಸಾಮ್ರಾಜ್ಯವಾದವು ರಾಜಕೀಯ ಪ್ರತಿಗಾಮಿತ್ವವನ್ನು ತೀವ್ರಗೊಳಿಸುತ್ತದೆ ಎಂದು ಆಕ್ಷೇಪಿಸುವಾಗಲೇ ಕೌತ್‌ಸ್ಕಿಯವರು ವಿಶೇಷ ತುರ್ತಿನದಾಗಿರುವಂಥ ಒಂದು ಪ್ರಶ್ನೆಯನ್ನು – ಸಾಮ್ರಾಜ್ಯವಾದದ ಯುಗದಲ್ಲಿ ಸಂದರ್ಭಸಾಧಕರೊಂದಿಗೆ ಏಕತೆ ಅಸಾಧ್ಯವೆಂಬ ಪ್ರಶ್ನೆಯನ್ನು – ಮರೆಯಲ್ಲಿ ಬಿಟ್ಟಿದ್ದಾರೆ. ಪರದೇಶಗಳ ಭೂಭಾಗಗಳನ್ನು ಸ್ವಾಧೀನಪಡಿಸಿಕೊಳ್ಳುವುದನ್ನು ಆಕ್ಷೇಪಿಸುತ್ತ ಅವರು ತಮ್ಮ ಈ ಆಕ್ಷೇಪಣೆಗಳನ್ನು ಸಂದರ್ಭಸಾಧಕರಿಗೆ ತುಂಬ ಒಪ್ಪಿಗೆಯಾಗುವಂಥ ಹಾಗೂ ಅತ್ಯಂತ ಕಮ್ಮಿ ಮನ ನೋಯಿಸುವಂಥ ರೀತಿಯಲ್ಲಿ ಮುಂದಿಡುತ್ತಾರೆ. ಅವರು ಜರ್ಮನ್ ಶ್ರೋತೃಗಳನ್ನುದ್ದೇಶಿಸಿ ತಮ್ಮ ಮಾತುಗಳನ್ನು ಹೇಳುತ್ತಾರೆ, ಆದರೂ ಅತ್ಯಂತ ತುರ್ತಿನ ಹಾಗೂ ಮುಖ್ಯವಾದ ಅಂಶವೊಂದನ್ನು, ಉದಾಹರಣೆಗೆ, ಜರ್ಮನಿಯು ಎಲ್ಸಾಸ್ ಲೊರೈನ್ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡುದನ್ನು ಮರೆಮಾಚುತ್ತಾರೆ. ಕೌತ್‌ಸ್ಕಿಯವರ ಈ "ಬುದ್ಧಿಭ್ರಮಣೆ"ಯ ಮೌಲ್ಯವನ್ನು ನಿರ್ಣಯಿಸಲು ನಾವು ಈ ಕೆಳಗಿನ ನಿದರ್ಶನವನ್ನು ತೆಗೆದುಕೊಳ್ಳೋಣ. ಅಮೆರಿಕನ್ನರು ಫಿಲಿಪ್ಪೀನ್ಸ್ ದ್ವೀಪಗಳನ್ನು ಸ್ವಾಧೀನಪಡಿಸಿಕೊಂಡುದನ್ನು ಒಬ್ಬ ಜಪಾನೀಯನು ಖಂಡಿಸುತ್ತಾನೆಂದು ಇಟ್ಟುಕೊಳ್ಳೋಣ. ಈಗಿನ ಪ್ರಶ್ನೆ: ಅವನು ಹಾಗೆ ಮಾಡುತ್ತಿರುವುದಕ್ಕೆ ಕಾರಣ ಅಂತಹ ಆಕ್ರಮಣವು ಅವನಿಗೆ ಅಸಹ್ಯ ಎಂಬುದೇ ಹೊರತು, ಅವನೇ ಫಿಲಿಪ್ಪೀನ್ಸ್‌ನ್ನು ಆಕ್ರಮಿಸಿಕೊಳ್ಳಬೇಕೆಂಬ ಬಯಕೆ ಹೊಂದಿದ್ದಾನೆ ಎಂಬುದಲ್ಲ ಎಂದು ಅನೇಕರು ನಂಬುವರೇ? ಜಪಾನು ಕೊರಿಯಾವನ್ನು ಸ್ವಾಧೀನಪಡಿಸಿಕೊಂಡಿರುವುದರ ವಿರುದ್ಧವೂ ಅವನು ಹೋರಾಡಿ, ಜಪಾನಿನಿಂದ ಪ್ರತ್ಯೇಕವಾಗಲು ಕೊರಿಯಾಕ್ಕೆ ಸ್ವಾತಂತ್ರ್ಯ ನೀಡಬೇಕು ಎಂದು ಒತ್ತಾಯಿಸಿದರೆ ಮಾತ್ರ ಈ ಜಪಾನೀಯನು ಆಕ್ರಮಣಗಳ ವಿರುದ್ಧ ನಡೆಸುತ್ತಿರುವ "ಹೋರಾಟ"ವು ಪ್ರಾಮಾಣಿಕವಾದುದು ಮತ್ತು ರಾಜಕೀಯವಾಗಿ ನಿಷ್ಕಪಟವಾದುದು ಎಂದು ನಾವು ಒಪ್ಪಿಕೊಳ್ಳುವ ಒತ್ತಾಯಕ್ಕೊಳಗಾಗುತ್ತೇವೆಂದು ಹೇಳಬಹುದಲ್ಲವೇ?

ಸಾಮ್ರಾಜ್ಯವಾದದ ಕುರಿತು ಕೌತ್‌ಸ್ಕಿಯವರ ಸೈದ್ಧಾಂತಿಕ ವಿಶ್ಲೇಷಣೆಯೂ, ಸಾಮ್ರಾಜ್ಯವಾದದ ಬಗೆಗೆ ಅವರ ಆರ್ಥಿಕ ಹಾಗೂ ರಾಜಕೀಯ ಟೀಕೆಯೂ, ಮಾರ್ಕ್ಸ್‌ವಾದದೊಂದಿಗೆ ಏನೇನೂ ಸರಿಹೊಂದದಂತಹ ಸತ್ವದಿಂದ, ಸಾಮ್ರಾಜ್ಯವಾದದ ಮೂಲಭೂತ ವೈರುಧ್ಯಗಳನ್ನು ಅಸ್ಪಷ್ಟಗೊಳಿಸುವ ಹಾಗೂ ತೇಲಿಸಿ ಬಿಡುವ ಸತ್ವದಿಂದ, ಯೂರೋಪಿಯನ್ ಕಾರ್ಮಿಕ ವರ್ಗ ಚಳವಳಿಯಲ್ಲಿ ಸಂದರ್ಭಸಾಧಕವಾದದೊಂದಿಗೆ ಮುರಿದು ಬೀಳುತ್ತಿರುವ ಏಕತೆಯನ್ನು ಹೇಗಾದರೂ ಮಾಡಿ ಉಳಿಸಲು ಯತ್ನಿಸುವ ಸತ್ವದಿಂದ, ಆದ್ಯಂತವಾಗಿ ಪೂರಿತವಾಗಿವೆ.

# X. ಇತಿಹಾಸದಲ್ಲಿ ಸಾಮ್ರಾಜ್ಯವಾದದ ಸ್ಥಾನ

ಸಾಮ್ರಾಜ್ಯವಾದವು, ಅದರ ಆರ್ಥಿಕ ಸಾರದಲ್ಲಿ ಏಕಸ್ವಾಮ್ಯ ಬಂಡವಾಳವಾದವಾಗಿದೆ ಎಂಬುದನ್ನು ನಾವು ಕಂಡಿದ್ದೇವೆ. ಈ ಅಂಶವೇ ಇತಿಹಾಸದಲ್ಲಿ ಸಾಮ್ರಾಜ್ಯವಾದದ ಸ್ಥಾನವನ್ನು ನಿರ್ಧರಿಸುತ್ತದೆ. ಏಕೆಂದರೆ, ಮುಕ್ತ ಸ್ಪರ್ಧೆಯ ನೆಲದಿಂದ, ಹೌದು, ಮುಕ್ತ ಸ್ಪರ್ಧೆಯ ನೆಲದಿಂದಲೇ, ಬೆಳೆದು ಬಂದಂಥ ಏಕಸ್ವಾಮ್ಯವು ಬಂಡವಾಳವಾದಿ ವ್ಯವಸ್ಥೆಯಿಂದ ಹೆಚ್ಚು ಉನ್ನತವಾದ ಸಾಮಾಜಿಕ-ಆರ್ಥಿಕ ವ್ಯವಸ್ಥೆಗೆ ಹೋಗುವುದರಲ್ಲಿ ಒಂದು ಸ್ಥಿತ್ಯಂತರ ರೂಪವಾಗಿದೆ. ನಾವು ಪರಿಶೀಲಿಸುತ್ತಿರುವ ಕಾಲಘಟ್ಟದ ವಿಶಿಷ್ಟ ಲಕ್ಷಣಗಳಾದ ಏಕಸ್ವಾಮ್ಯದ ನಾಲ್ಕು ಪ್ರಧಾನ ಮಾದರಿಗಳನ್ನು ಅಥವಾ ಏಕಸ್ವಾಮ್ಯ ಬಂಡವಾಳವಾದವು ಕಾಣಿಸಿಕೊಳ್ಳುವ ನಾಲ್ಕು ಪ್ರಧಾನ ರೂಪಗಳನ್ನು ವಿಶೇಷವಾಗಿ ಗಮನಕ್ಕೆ ತಂದುಕೊಳ್ಳಬೇಕು.

ಮೊದಲನೆಯದಾಗಿ, ಏಕಸ್ವಾಮ್ಯವು ಉತ್ಪಾದನೆಯ ಕೇಂದ್ರೀಕರಣ ಅತ್ಯುನ್ನತ ಘಟ್ಟಕ್ಕೆ ಬೆಳೆದುದರಿಂದ ಉದ್ಭವಿಸಿದುದಾಗಿದೆ. ಏಕಸ್ವಾಮ್ಯ ಬಂಡವಾಳವಾದಿ ಸಮುಚ್ಚಯಗಳಿಗೆ, ಕಾರ್ಟೆಲ್‌ಗಳಿಗೆ, ಸಿಂಡಿಕೇಟ್ ಹಾಗೂ ಟ್ರಸ್ಟುಗಳಿಗೆ ಇದು ಅನ್ವಯಿಸುತ್ತದೆ. ಇವು ಇಂದಿನ ಆರ್ಥಿಕ ಜೀವನದಲ್ಲಿ ಎಂತಹ ಮುಖ್ಯ ಪಾತ್ರ ನಿರ್ವಹಿಸುತ್ತವೆಂಬುದನ್ನು ನಾವು ಕಂಡುಕೊಂಡಿದ್ದೇವೆ. 20ನೆಯ ಶತಮಾನದ ಆದಿಭಾಗದಲ್ಲಿ ಏಕಸ್ವಾಮ್ಯ ಸಂಸ್ಥೆಗಳು ಮುಂದುವರಿದ ದೇಶಗಳಲ್ಲಿ ಸಂಪೂರ್ಣ ಉಚ್ಚತೆಯನ್ನು ಸಾಧಿಸಿಕೊಂಡಿದ್ದವು. ಹೊರದೇಶದ ವಸ್ತುಗಳ ಮೇಲೆ ಉನ್ನತ ಸುಂಕ ಹಾಕಿ ಸ್ವದೇಶೀ ಸಾಮಾನುಗಳಿಗೆ ರಕ್ಷಣೆ ಕೊಡುವ ವ್ಯವಸ್ಥೆ ಹೊಂದಿದ್ದ ದೇಶಗಳು (ಜರ್ಮನಿ, ಅಮೆರಿಕ) ಪ್ರಥಮವಾಗಿ ಕಾರ್ಟೆಲ್‌ಗಳನ್ನು ರಚಿಸುವ ಮೊದಲ ಕ್ರಮಗಳನ್ನು ಕೈಕೊಂಡರೂ, ಮುಕ್ತ ವ್ಯಾಪಾರ ವ್ಯವಸ್ಥೆ ಇದ್ದ ಗ್ರೇಟ್ ಬ್ರಿಟನ್ ಇದೇ ಮೂಲ ಘಟನೆಯನ್ನು, ಅಂದರೆ ಉತ್ಪಾದನೆಯ ಕೇಂದ್ರೀಕರಣದಿಂದ ಏಕಸ್ವಾಮ್ಯ ಹುಟ್ಟಿಕೊಳ್ಳುತ್ತದೆ ಎಂಬ ವಾಸ್ತವಾಂಶವನ್ನು ಸ್ವಲ್ಪ ತಡವಾಗಿ ತೋರಿಸಿಕೊಟ್ಟಿತು.

ಎರಡನೆಯದಾಗಿ, ಏಕಸ್ವಾಮ್ಯ ಸಂಸ್ಥೆಗಳು ಅದರಲ್ಲೂ ವಿಶೇಷವಾಗಿ ಬಂಡವಾಳಶಾಹಿ ಸಮಾಜದಲ್ಲಿ ಅತ್ಯುನ್ನತವಾಗಿ ಕಾರ್ಟೆಲೀಕೃತವಾದ (ಏಕಸ್ವಾಮ್ಯ ರೂಪ ಪಡೆದ) ಮೂಲ ಕೈಗಾರಿಕೆಗಳಿಗೆ – ಕಲ್ಲಿದ್ದಲು ಹಾಗೂ ಕಬ್ಬಿಣ ಕೈಗಾರಿಕೆಗಳಿಗೆ – ಅವಶ್ಯವಾದ ಕಚ್ಚಾ ಪದಾರ್ಥಗಳ ಆಕರಗಳನ್ನು, ಆಕ್ರಮಿಸಿಕೊಳ್ಳುವ ಭಾವನೆಗೆ ಉತ್ತೇಜನ ನೀಡಿವೆ, ಅತ್ಯಂತ ಮುಖ್ಯ ಕಚ್ಚಾ ಪದಾರ್ಥಗಳ ಆಕರಗಳ ಏಕಸ್ವಾಮ್ಯವು ಭಾರಿ ಬಂಡವಾಳದ ಶಕ್ತಿಯನ್ನು ಅಪಾರವಾಗಿ ಹೆಚ್ಚಿಸಿದೆ ಮತ್ತು ಕಾರ್ಟೆಲ್‌ಗಳಿಗೆ ಸೇರಿದ ಹಾಗೂ ಕಾರ್ಟೆಲ್‌ಗಳಿಗೆ ಸೇರಿರದ ಕೈಗಾರಿಕೆಗಳ ನಡುವಿನ ವೈರುಧ್ಯವನ್ನು ತೀವ್ರಗೊಳಿಸಿದೆ.

ಮೂರನೆಯದಾಗಿ, ಏಕಸ್ವಾಮ್ಯವು ಬ್ಯಾಂಕುಗಳಿಂದ ಉದ್ಭವಿಸಿದೆ. ಬ್ಯಾಂಕುಗಳು ಸಾಧಾರಣ ಮಧ್ಯಸ್ಥಗಾರ ಉದ್ಯಮಗಳ ಸ್ಥಿತಿಯಿಂದ ಹಣಕಾಸು ಬಂಡವಾಳದ ಏಕಸ್ವಾಮ್ಯ ಸಂಸ್ಥೆಗಳ ಸ್ಥಿತಿಗೆ ವಿಕಾಸಗೊಂಡಿವೆ. ಒಂದೊಂದೂ ಅತ್ಯಂತ ಅಗ್ರಗಾಮಿ ಬಂಡವಾಳ ಶಾಹಿ ದೇಶಗಳಲ್ಲಿನ ಸುಮಾರು 3-5 ಅತ್ಯಂತ ದೊಡ್ಡ ಬ್ಯಾಂಕುಗಳು ಕೈಗಾರಿಕಾ ಹಾಗೂ ಬ್ಯಾಂಕಿಂಗ್ ಬಂಡವಾಳದ "ವ್ಯಕ್ತಿಗತ ಒಕ್ಕೂಟ"ವನ್ನು ಸಾಧಿಸಿವೆ, ಇಡೀ ದೇಶದ ಬಂಡವಾಳ ಹಾಗೂ ವರಮಾನಗಳ ಅಧಿಕ ಭಾಗವಾಗುವಷ್ಟು ಕೋಟ್ಯಾನುಕೋಟಿ ಧನ ಸಂಪತ್ತಿನ ಮೇಲಿನ ಹಿಡಿತವನ್ನು ತಮ್ಮ ಕೈಗಳಲ್ಲೇ ಕೇಂದ್ರೀಕರಿಸಿಕೊಂಡಿವೆ. ಇಂದಿನ ಬೂರ್ಷ್ವಾ ಸಮಾಜದ, ಯಾವೊಂದನ್ನೂ ಬಿಡದೆ ಎಲ್ಲ ಆರ್ಥಿಕ ಹಾಗೂ ರಾಜಕೀಯ ಸಂಸ್ಥೆಗಳ ಮೇಲೂ ಅಧೀನತೆಯ ಒಂದು ದಟ್ಟವಾದ ಜಾಲ ಬಂಧವನ್ನು ಹರಡುವಂಥ ಹಣಕಾಸಿನ ಆಲಿಗಾರ್ಕಿ – ಇದೇ ಈ ಏಕಸ್ವಾಮ್ಯದ ಅತ್ಯಂತ ಎದ್ದುಕಾಣುವಂತೆ ತೋರುವ ಲಕ್ಷಣವಾಗಿದೆ.

ನಾಲ್ಕನೆಯದಾಗಿ, ಏಕಸ್ವಾಮ್ಯವು ವಸಾಹತು ನೀತಿಯಿಂದ ಬೆಳೆದು ಬಂದಿದೆ. ವಸಾಹತು ನೀತಿಯ ಅನೇಕಾನೇಕ "ಹಳೆಯ" ಪ್ರೇರಣೆಗಳಿಗೆ ಹಣಕಾಸು ಬಂಡವಾಳವು ಮತ್ತೊಂದನ್ನು ಸೇರಿಸಿದೆ – ಕಚ್ಚಾ ಪದಾರ್ಥಗಳ ಆಕರಗಳಿಗಾಗಿ, ಬಂಡವಾಳದ ರಫ್ತಿಗಾಗಿ, "ಪ್ರಭಾವ ವಲಯ"ಗಳಿಗಾಗಿ, ಅಂದರೆ, ಲಾಭದಾಯಕವಾದ ವ್ಯವಹಾರಗಳು, ಕನ್ಸೆಷನ್‌ಗಳು, ಏಕಸ್ವಾಮ್ಯ ಲಾಭಗಳು ಇತ್ಯಾದಿಗಳ ವಲಯಗಳಿಗಾಗಿ, ಕೊನೆಯದಾಗಿ, ಒಟ್ಟಿನಲ್ಲಿ ಆರ್ಥಿಕ ಪ್ರದೇಶಗಳಿಗಾಗಿ, ಹೋರಾಟ. ಆಫ್ರಿಕದಲ್ಲಿ ಯೂರೋಪಿಯನ್ ಬೃಹತ್ ರಾಷ್ಟ್ರಗಳ ವಸಾಹತುಗಳು, ಉದಾಹರಣೆಗೆ, ಆಫ್ರಿಕದ ಭೂಪ್ರದೇಶದ ಹತ್ತನೇ ಒಂದು ಭಾಗದಲ್ಲಷ್ಟೆ ಇದ್ದಾಗ (1876ರಲ್ಲಿ ಇದ್ದಂತೆ), ವಸಾಹತು ನೀತಿಯು ಏಕಸ್ವಾಮ್ಯವಲ್ಲದ ವಿಧಾನಗಳ ಮೂಲಕ – ಭೂಪ್ರದೇಶಗಳನ್ನು "ಸ್ವತಂತ್ರವಾಗಿ ಕಸಿದುಕೊಳ್ಳುವ" ಮೂಲಕ ಎಂದೇ ಹೇಳಬಹುದು – ವಿಕಾಸಗೊಳ್ಳಲು ಸಾಧ್ಯವಿದ್ದಿತು. ಆದರೆ ಆಫ್ರಿಕದ ಭೂಭಾಗದ ಉಳಿದ ಹತ್ತನೇ ಒಂಬತ್ತು ಭಾಗವನ್ನೂ ಆಕ್ರಮಿಸಿಕೊಂಡಾಗ (1900ರ ಹೊತ್ತಿಗೆ), ಇಡೀ ಜಗತ್ತು ಆಗಲೇ ವಿಭಜಿಸಿಕೊಳ್ಳಲ್ಪಟ್ಟಿದ್ದಾಗ, ವಸಾಹತುಗಳ ಏಕಸ್ವಾಮ್ಯ ಒಡೆತನದ ಯುಗವು, ತತ್ಫಲವಾಗಿ ಜಗತ್ತನ್ನು ವಿಭಜಿಸಿಕೊಳ್ಳುವ ಹಾಗೂ ಪುನರ್‌ವಿಭಜಿಸಿಕೊಳ್ಳುವ ವಿಶೇಷವಾಗಿ ತೀವ್ರವಾದ ಹೋರಾಟದ ಯುಗವು, ಪ್ರಾರಂಭವಾಯಿತು.

ಏಕಸ್ವಾಮ್ಯ ಬಂಡವಾಳವಾದವು ಬಂಡವಾಳವಾದದ ಎಲ್ಲ ವೈರುಧ್ಯಗಳನ್ನೂ ಎಷ್ಟರ ಮಟ್ಟಿಗೆ ಉಲ್ಬಣಗೊಳಿಸಿದೆ ಎಂಬುದು ಸಾಮಾನ್ಯವಾಗಿ ತಿಳಿದ ಸಂಗತಿಯೇ ಆಗಿದೆ. ಉನ್ನತ ಜೀವನ ವೆಚ್ಚ ಹಾಗೂ ಕಾರ್ಟೆಲ್‌ಗಳ ದಬ್ಬಾಳಿಕೆ, ಇವುಗಳನ್ನು ನಮೂದಿಸಿದರೆ ಸಾಕು. ಈ ವೈರುಧ್ಯಗಳ ತೀವ್ರೀಕರಣವು ಜಾಗತಿಕ ಹಣಕಾಸು ಬಂಡವಾಳದ ಅಂತಿಮ ವಿಜಯದ ಕಾಲದಿಂದ ಪ್ರಾರಂಭವಾದ, ಇತಿಹಾಸದ ಸ್ಥಿತ್ಯಂತರ ಕಾಲಾವಧಿಯ ಅತ್ಯಂತ ಪ್ರಬಲ ಚಾಲಕ ಶಕ್ತಿಯಾಗಿದೆ.

ಏಕಸ್ವಾಮ್ಯ ಸಂಸ್ಥೆಗಳು, ಆಲಿಗಾರ್ಕಿ, ಸ್ವಾತಂತ್ರ್ಯಕ್ಕಾಗಿಯಲ್ಲ, ಆದರೆ ಆಧಿಪತ್ಯಕ್ಕಾಗಿ ಪ್ರಯತ್ನ, ಹೆಚ್ಚು ಸಂಖ್ಯೆಯ ಪುಟ್ಟ ಹಾಗೂ ದುರ್ಬಲ ದೇಶಗಳನ್ನು ಕೆಲವೇ ಅತ್ಯಂತ ಸಿರಿವಂತ ಹಾಗೂ ಅತ್ಯಂತ ಪ್ರಬಲ ದೇಶಗಳು ಶೋಷಿಸುವುದು – ಇವೆಲ್ಲವೂ ಸಾಮ್ರಾಜ್ಯವಾದದ ಎಂತಹ ವಿಶಿಷ್ಟ ಲಕ್ಷಣಗಳಿಗೆ ಜನ್ಮ ನೀಡಿವೆಯೆಂದರೆ, ಅವು ಸಾಮ್ರಾಜ್ಯವಾದವನ್ನು ಪರೋಪಜೀವಿ ಸ್ವಭಾವದ ಅಥವಾ ಕ್ಷಯಿಸುತ್ತಿರುವ ಬಂಡವಾಳವಾದ ಎಂದು ನಿರೂಪಿಸುವಂತೆ ನಮ್ಮನ್ನು ಒತ್ತಾಯಿಸಿವೆ. ಸಾಮ್ರಾಜ್ಯವಾದದ ಪ್ರವೃತ್ತಿಗಳಲ್ಲೊಂದಾಗಿ "ಲಾಭಾಂಶಜೀವಿ ರಾಜ್ಯದ," ದುಬಾರಿ ಬಡ್ಡಿ ರಾಜ್ಯದ ಸ್ಥಾಪನೆಯು, ಹೆಚ್ಚು ಹೆಚ್ಚು ಪ್ರಮುಖವಾಗಿ ಕಾಣಿಸಿಕೊಳ್ಳುತ್ತದೆ. ಇಂತಹ ರಾಜ್ಯದಲ್ಲಿ ಬೂರ್ಷ್ವಾಸೀಯು ಸತತವಾಗಿ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಬಂಡವಾಳ ರಫ್ತುಗಳಿಂದ ಬರುವ ವರಮಾನಗಳಿಂದಲೂ "ಕೂಪನ್ನುಗಳನ್ನು ಕತ್ತರಿಸುವ" ಮೂಲಕವೂ ಜೀವಿಸುತ್ತದೆ. ಅವನತಿಗೊಳ್ಳುವ ಈ ಪ್ರವೃತ್ತಿಯು ಬಂಡವಾಳವಾದದ ಶೀಘ್ರ ಬೆಳವಣಿಗೆಯನ್ನು ಅಸಾಧ್ಯವನ್ನಾಗಿ ಮಾಡುತ್ತದೆಂದು ನಂಬುವುದು ತಪ್ಪಾಗುತ್ತದೆ. ಅದು ಅಸಾಧ್ಯವನ್ನಾಗಿಯೇನೂ ಮಾಡುವುದಿಲ್ಲ. ಸಾಮ್ರಾಜ್ಯವಾದದ ಕಾಲಘಟ್ಟದಲ್ಲಿ ಕೈಗಾರಿಕೆಯ ಕೆಲವು ಶಾಖೆಗಳು, ಬೂರ್ಷ್ವಾಸೀಯ ಕೆಲವು ಸ್ತರಗಳು ಹಾಗೂ ಕೆಲವು ದೇಶಗಳು, ಹೆಚ್ಚು ಅಥವಾ ಕಮ್ಮಿ ಪ್ರಮಾಣದಲ್ಲಿ, ಈ ಪ್ರವೃತ್ತಿಗಳಲ್ಲಿ ಈಗ ಒಂದನ್ನು ಇನ್ನೊಮ್ಮೆ ಇನ್ನೊಂದನ್ನು ವ್ಯಕ್ತಪಡಿಸುತ್ತವೆ. ಒಟ್ಟಿನಲ್ಲಿ ಬಂಡವಾಳವಾದವು ಹಿಂದಿಗಿಂತ ತುಂಬ ಹೆಚ್ಚು ಶೀಘ್ರವಾಗಿ ಬೆಳೆಯುತ್ತದೆ. ಆದರೆ ಈ ಬೆಳವಣಿಗೆಯು ಒಟ್ಟಿನಲ್ಲಿ ಹೆಚ್ಚು ಹೆಚ್ಚು ಕ್ರಮರಹಿತವಾಗುತ್ತಿದೆಯಷ್ಟೆ ಅಲ್ಲ, ಈ ಕ್ರಮರಾಹಿತ್ಯತೆಯು ವಿಶೇಷವಾಗಿ ಬಂಡವಾಳದಲ್ಲಿ ಅತ್ಯಂತ ಸಿರಿವಂತವಾದ ದೇಶಗಳ (ಇಂಗ್ಲೆಂಡ್) ಅವನತಿಯಲ್ಲಿ ವ್ಯಕ್ತಗೊಳ್ಳುತ್ತದೆ ಕೂಡ.

ದೊಡ್ಡ ಜರ್ಮನ್ ಬ್ಯಾಂಕುಗಳ ಬಗೆಗೆ ಒಂದು ಗ್ರಂಥವನ್ನು ರಚಿಸಿರುವ ರೀಸ್ಸೆರ್‌ರವರು ಜರ್ಮನಿಯ ಆರ್ಥಿಕತೆಯ ಶೀಘ್ರ ಬೆಳವಣಿಗೆಗೆ ಸಂಬಂಧಿಸಿ ಹೇಳುತ್ತಾರೆ: "ಈ ಮುನ್ನಿನ ಕಾಲಾವಧಿಯ (1848-1870) ಪ್ರಗತಿಯು ನಿಧಾನವಾದುದೇನೂ ಅಲ್ಲ; ಆ ಪ್ರಗತಿಗೆ, ಈಗಿನ ಕಾಲಾವಧಿಯಲ್ಲಿ (1870-1905) ಜರ್ಮನಿಯ ಆರ್ಥಿಕತೆಯೂ ಅದರೊಂದಿಗೇ ಜರ್ಮನ್ ಬ್ಯಾಂಕಿಂಗ್ ಪದ್ಧತಿಯೂ ಪ್ರಗತಿ ಸಾಧಿಸಿದ ಶೀಘ್ರತೆಯೂ ಯಾವ ಹೋಲಿಕೆ ಹೊಂದಿದೆಯೆಂದರೆ, ಹಳೆಯ ಕಾಲದ ಕುದುರೆ ಟಪ್ಪಾಲು ಬಂಡಿಯ ವೇಗಕ್ಕೆ ಈಗಿನ ಕಾಲದ ಮೋಟಾರು ಬಂಡಿಯ ವೇಗವು ಹೊಂದಿರುವ ಹೋಲಿಕೆಯೇ ಆಗಿದೆ.... ಈ ಮೋಟಾರು ಬಂಡಿಯು ಭರ‍್ರನೆ ಶಬ್ದಮಾಡಿಕೊಂಡು ಎಷ್ಟು ವೇಗವಾಗಿ ಹೋಗುತ್ತಿದೆಯೆಂದರೆ ಅದು ತನ್ನ ದಾರಿಯಲ್ಲಿ ಹೋಗುತ್ತಿರುವ ಮುಗ್ಧ ಪಾದಚಾರಿಗಳನ್ನಷ್ಟೆ ಅಲ್ಲ ತನ್ನಲ್ಲೇ ಕುಳಿತಿರುವವರನ್ನೂ ಸಹ ಅಪಾಯಕ್ಕೀಡು ಮಾಡುತ್ತದೆ." ಇಷ್ಟು ಅಸಾಧಾರಣ ವೇಗದೊಂದಿಗೆ ಬೆಳೆದಿರುವ ಹಣಕಾಸು ಬಂಡವಾಳವು ತನ್ನ ಸರದಿಯಲ್ಲಿ, ತಾನು ಅಷ್ಟು ವೇಗದೊಂದಿಗೆ ಬೆಳೆದಿದೆ

ಎಂಬ ಕಾರಣದಿಂದಾಗಿಯೇ, ಶ್ರೀಮಂತ ದೇಶಗಳಿಂದ ಇನ್ನೂ ಸ್ವಾಧೀನಪಡಿಸಿ ಕೊಳ್ಳಬೇಕಾಗಿರುವ ವಸಾಹತುಗಳನ್ನು ಹೆಚ್ಚು "ಸಮಾಧಾನ"ದ ವಿಧಾನಗಳಿಂದ – ಶಾಂತಿ ಯುತ ವಿಧಾನಗಳಿಂದಷ್ಟೆ ಅಲ್ಲ – ಪಡೆದುಕೊಳ್ಳಲು ಸಿದ್ಧವಿಲ್ಲವೆಂದೇನೂ ಅಲ್ಲ. ಕಳೆದ ದಶಕಗಳಲ್ಲಿ ಸಂಯುಕ್ತ ಸಂಸ್ಥಾನಗಳಲ್ಲಿ ಆರ್ಥಿಕ ಬೆಳವಣಿಗೆಯು ಜರ್ಮನಿ ಯಲ್ಲಿ ಆದುದಕ್ಕಿಂತ ಹೆಚ್ಚು ಶೀಘ್ರವಾಗಿದ್ದಿತು. ಈ ಕಾರಣದಿಂದಾಗಿಯೇ, ಆಧು ನಿಕ ಅಮೆರಿಕನ್ ಬಂಡವಾಳವಾದದ ಪರೋಪಜೀವಿ ಸ್ವಭಾವದ ಲಕ್ಷಣಗಳು ವಿಶೇಷ ಪ್ರಾಮುಖ್ಯದೊಂದಿಗೆ ಎದ್ದುಕಾಣುತ್ತವೆ. ಮತ್ತೊಂದು ಕಡೆ, ರಿಪಬ್ಲಿಕನ್ ಅಮೆರಿ ಕನ್ ಬೂರ್ಷ್ವಾಸೀಯನ್ನು ರಾಜಪ್ರಭುತ್ವವಾದಿ ಜಪಾನೀ ಅಥವಾ ಜರ್ಮನ್ ಬೂರ್ಷ್ವಾಸೀಯೊಂದಿಗೆ ಹೋಲಿಸಿದಲ್ಲಿ, ಸಾಮ್ರಾಜ್ಯವಾದದ ಕಾಲಘಟ್ಟದಲ್ಲಿ ಅತ್ಯಂತ ಎದ್ದು ಕಾಣುವಂಥ ರಾಜಕೀಯ ವ್ಯತ್ಯಾಸವು ಅತ್ಯಂತ ಕೆಳಗಿನ ಮಟ್ಟಕ್ಕೆ ತಗ್ಗುತ್ತದೆಂಬುದನ್ನು ಕಂಡುಕೊಳ್ಳುತ್ತೇವೆ – ಈ ರಾಜಕೀಯ ವ್ಯತ್ಯಾಸವು ಒಟ್ಟಿನಲ್ಲಿ ಅಮುಖ್ಯ ಎಂಬ ಕಾರಣದಿಂದಾಗಿ ಅಲ್ಲ, ಆದರೆ ಈ ಎಲ್ಲ ಪ್ರಸಂಗಗಳಲ್ಲೂ ನಾವು ಪರೋಪಜೀವಿ ಸ್ವಭಾವದ ನಿರ್ದಿಷ್ಟ ಲಕ್ಷಣಗಳನ್ನು ಹೊಂದಿರುವ ಬೂರ್ಷ್ವಾ ಸೀಯ ವಿಷಯ ಚರ್ಚಿಸುತ್ತಿದ್ದೇವೆ, ಎಂಬ ಕಾರಣದಿಂದಾಗಿ.

ಬಂಡವಾಳಗಾರರು ಅನೇಕಾನೇಕ ದೇಶಗಳಲ್ಲೊಂದರಲ್ಲಿ, ಅನೇಕಾನೇಕ ಕೈಗಾ ರಿಕಾ ಶಾಖೆಗಳಲ್ಲೊಂದರಲ್ಲಿ ಇತ್ಯಾದಿಗಳಲ್ಲಿ ಏಕಸ್ವಾಮ್ಯ ಲಾಭ ಪಡೆಯುವುದು, ಕಾರ್ಮಿಕರ ಕೆಲವು ವಿಭಾಗಗಳಿಗೆ, ಸ್ವಲ್ಪ ಕಾಲದವರೆಗೆ ಅವರ ಸಾಕಷ್ಟು ಗಣನೀಯ ಪ್ರಮಾಣದ ಅಲ್ಪಮತೀಯ ವಿಭಾಗದವರಿಗೆ, ಲಂಚ ನೀಡುವುದಕ್ಕೆ ಮತ್ತು ಅವ ರನ್ನು ಒಂದು ನಿರ್ದಿಷ್ಟ ಕೈಗಾರಿಕೆ ಅಥವಾ ನಿರ್ದಿಷ್ಟ ದೇಶದಲ್ಲಿ ಇತರೆಲ್ಲರಿಗೆ ವಿರುದ್ಧ ವಾಗಿ ಬೂರ್ಷ್ವಾಸೀಯ ಪಕ್ಷಕ್ಕೆ ಒಲಿಸಿಕೊಳ್ಳುವುದಕ್ಕೆ, ಆರ್ಥಿಕವಾಗಿ ಆ ಬಂಡ ವಾಳಗಾರರಿಗೆ ಸಾಧ್ಯಮಾಡಿಕೊಡುತ್ತದೆ. ಜಗತ್ತನ್ನು ವಿಭಜಿಸಿಕೊಳ್ಳಲು ಸಾಮ್ರಾಜ್ಯ ಶಾಹಿ ದೇಶಗಳ ನಡುವೆಯೇ ವೈರುಧ್ಯಗಳು ತೀವ್ರಗೊಳ್ಳುವುದು ಈ ಪ್ರಯತ್ನ ವನ್ನು ಹೆಚ್ಚಿಸುತ್ತದೆ. ಹೀಗೆ ಸಾಮ್ರಾಜ್ಯವಾದಕ್ಕೂ ಸಂದರ್ಭಸಾಧಕವಾದಕ್ಕೂ ನಡುವೆ ಒಂದು ಸಂಬಂಧ ಸೃಷ್ಟಿಯಾಗುತ್ತದೆ. ಅಂತಹ ಸಂಬಂಧ ಇಂಗ್ಲೆಂಡಿನಲ್ಲಿ ಮೊದಲು ಹೆಚ್ಚು ಸ್ಪಷ್ಟವಾಗಿ ಕಾಣಿಸಿಕೊಂಡಿತು. ಸಾಮ್ರಾಜ್ಯಶಾಹಿ ಬೆಳವಣಿಗೆಯ ಕೆಲವು ಲಕ್ಷಣಗಳು ಅಲ್ಲಿ ಇತರ ದೇಶಗಳಿಗಿಂತ ಹೆಚ್ಚು ಮುನ್ನವೇ ಕಂಡುಬಂದುದು ಅದಕ್ಕೆ ಕಾರಣವಾಗಿದ್ದಿತು. ಕೆಲವು ಲೇಖಕರು, ಉದಾಹರಣೆಗೆ, ಎಲ್. ಮಾರ್ತೋವ್‌ರು, ಸಾಮ್ರಾಜ್ಯವಾದಕ್ಕೂ ಕಾರ್ಮಿಕ ವರ್ಗ ಚಳವಳಿಯಲ್ಲಿನ ಸಂದರ್ಭಸಾಧಕವಾದಕ್ಕೂ ನಡುವಿನ ಈ ಸಂಬಂಧವನ್ನು – ಪ್ರಸ್ತುತದಲ್ಲಿ ವಿಶೇಷವಾಗಿ ಎದ್ದು ಕಾಣುತ್ತಿರುವಂಥ ಈ ಸತ್ಯಸಂಗತಿಯನ್ನು – ಈ ಕೆಳಗಿನಂತೆ "ಅಧಿಕೃತ ಆಶಾವಾದ"ದ ಮೊರೆ ಹೊಗುವ ಮೂಲಕ (ಕೌತ್‌ಸ್ಕಿ ಹಾಗೂ ಹ್ಯುಯಿಸ್‌ಮನ್ಸ್‌ರಂತೆ) ತಳ್ಳಿ ಹಾಕುವ ಮನೋಬಲವು ಹೊಂದಿದ್ದಾರೆ: ಪ್ರಗತಿಶೀಲ ಬಂಡವಾಳವಾದವಷ್ಟೆ ಸಂದರ್ಭಸಾಧಕತನ

ಹೆಚ್ಚುವುದಕ್ಕೆ ದಾರಿ ಮಾಡಿಕೊಡುತ್ತದೆನ್ನುವುದಾದರೆ, ಅಥವಾ ಅತ್ಯಂತ ಹೆಚ್ಚಿನ ಕೂಲಿ ಪಡೆಯುತ್ತಿರುವ ಕಾರ್ಮಿಕರಷ್ಟೆ ಸಂದರ್ಭಸಾಧಕತನದ ಒಲವು ಹೊಂದಿರುತ್ತಾರೆ, ಇತ್ಯಾದಿ ಅನ್ನುವುದಾದರೆ, ಬಂಡವಾಳವಾದದ ವಿರೋಧಿಗಳ ಧ್ಯೇಯವು ಆಶಾರಹಿತವಾಗುತ್ತದೆ. ನಾವು ಆ ರೀತಿಯ "ಆಶಾವಾದ"ದ ಬಗೆಗೆ ಯಾವ ಭ್ರಮೆಯನ್ನೂ ಹೊಂದಿರಬಾರದು. ಇದು ಸಂದರ್ಭಸಾಧಕತನಕ್ಕೆ ಸಂಬಂಧಿಸಿದ ಆಶಾವಾದ. ಇದು ಸಂದರ್ಭಸಾಧಕತನವನ್ನು ಮುಚ್ಚಿಡಲು ಸಹಾಯವಾಗುವಂಥ ಆಶಾವಾದ. ವಾಸ್ತವವಾಗಿ ಸಂದರ್ಭಸಾಧಕತನವು ಅತ್ಯಸಾಧಾರಣ ಶೀಘ್ರತೆಯೊಂದಿಗೆ ಹಾಗೂ ವಿಶೇಷವಾಗಿ ಅಸಹ್ಯಕರವಾದ ಸ್ವರೂಪದೊಂದಿಗೆ ವಿಕಾಸಗೊಂಡುದು, ಅದರ ವಿಜಯ ಶಾಶ್ವತವಾದುದು ಎಂಬುದಕ್ಕೆ ಯಾವ ರೀತಿಯಲ್ಲೂ ಖಾಚಿತ್ಯವಲ್ಲ. ಆರೋಗ್ಯಕರವಾದ ಶರೀರದ ಮೇಲೆ ತೀವ್ರ ಬಾಧೆ ನೀಡುವ ಕೀವುಗುಳ್ಳೆಯು ಶೀಘ್ರವಾಗಿ ಬೆಳೆಯುವುದು, ಅದೇ ಹೆಚ್ಚು ಬೇಗ ಒಡೆದು ಶರೀರದಿಂದ ತೊಲಗಿ ಹೋಗುವಂತಷ್ಟೆ ಮಾಡಬಲ್ಲುದು. ಸಾಮ್ರಾಜ್ಯವಾದದ ವಿರುದ್ಧ ಹೋರಾಟವು ಸಂದರ್ಭಸಾಧಕವಾದದ ವಿರುದ್ಧ ಹೋರಾಟದೊಂದಿಗೆ ಅವಿಭಾಜ್ಯವಾಗಿ ಸಂಬಂಧಿತವಾಗಿಲ್ಲದಿದ್ದರೆ ಅಂತಹ ಹೋರಾಟದ ಮಾತು ಕೇವಲ ಟೊಳ್ಳು ಹಾಗೂ ಸೋಗಿನ ಮಾತಾಗುತ್ತದೆಂಬುದನ್ನು ಅರ್ಥಮಾಡಿಕೊಳ್ಳಲು ಬಯಸದವರೇ ಈ ವಿಷಯದಲ್ಲಿ ಎಲ್ಲರಿಗಿಂತ ಅತ್ಯಂತ ಹೆಚ್ಚು ಅಪಾಯಕಾರಿಯಾಗಿರುತ್ತಾರೆ.

ಸಾಮ್ರಾಜ್ಯವಾದದ ಆರ್ಥಿಕ ಸಾರದ ಬಗೆಗೆ ಈ ಗ್ರಂಥದಲ್ಲಿ ಹೇಳಿರುವುದರಿಂದ ತಿಳಿದು ಬರುವುದೇನೆಂದರೆ, ನಾವು ಸಾಮ್ರಾಜ್ಯವಾದವನ್ನು ಸ್ಥಿತ್ಯಂತರದಲ್ಲಿರುವ ಬಂಡವಾಳವಾದ ಅಥವಾ ಹೆಚ್ಚು ನಿಷ್ಕೃಷ್ಟವಾಗಿ, ಮರಣಾಸನ್ನ ಬಂಡವಾಳವಾದ ಎಂದು ನಿರೂಪಿಸಬೇಕು, ಎಂಬುದಾಗಿದೆ. ಬೂರ್ಷ್ವಾ ಅರ್ಥಶಾಸ್ತ್ರಜ್ಞರು ಆಧುನಿಕ ಬಂಡವಾಳವಾದವನ್ನು ವರ್ಣಿಸುವಾಗ "ಪರಸ್ಪರ ಹೆಣೆದುಕೊಂಡಿರುವುದು," "ಪ್ರತ್ಯೇಕತೆ ಇಲ್ಲದಿರುವುದು," "ತಮ್ಮ ಕರ್ತವ್ಯಗಳಿಗೂ ಬೆಳವಣಿಗೆಯ ಗತಿಗೂ ಅನುಗುಣವಾಗಿ" ಬ್ಯಾಂಕುಗಳು "ಶುದ್ಧ ಖಾಸಗಿ ವ್ಯಾಪಾರ ಉದ್ಯಮಗಳೇನಲ್ಲ; ಅವು ಶುದ್ಧ ಖಾಸಗಿ ವ್ಯಾಪಾರ ನಿಯಂತ್ರಣದ ವಲಯವನ್ನೂ ಹೆಚ್ಚು ಹೆಚ್ಚಾಗಿ ಮೀರಿ ಬೆಳೆಯುತ್ತಿವೆ" ಎಂದು ಮುಂತಾದ ಆಕರ್ಷಕ ಪದಗಳನ್ನೂ ನುಡಿಗಟ್ಟುಗಳನ್ನೂ ಪದೇ ಪದೇ ಉಪಯೋಗಿಸುತ್ತಾರೆಂಬುದನ್ನು ಗಮನಿಸುವುದು ಈ ವಿಷಯದಲ್ಲಿ ಬೋಧಪ್ರದವಾಗಿದೆ. ನಾವು ಈಗಷ್ಟೆ ಉದ್ಧರಿಸಿದ ಮಾತುಗಳನ್ನು ಹೇಳಿದ ಈ ರೀಸ್ಸೆರ್‌ರವರೇ "ಸಾಮಾಜಿಕೀಕರಣ"ಕ್ಕೆ ಸಂಬಂಧಿಸಿ ಮಾರ್ಕ್ಸ್‌ವಾದಿಗಳ "ಭವಿಷ್ಯ ಸೂಚನೆಯು" "ನಿಜವಾಗಲಿಲ್ಲ" ಎಂದು ಎಲ್ಲ ಗಂಭೀರತೆಯೊಂದಿಗೆ ಘೋಷಿಸುತ್ತಾರೆ!

ಹಾಗಾದರೆ, "ಪರಸ್ಪರ ಹೆಣೆದುಕೊಂಡಿರುವುದು" ಎಂಬ ಈ ಆಕರ್ಷಕ ಮಾತು ಏನನ್ನು ವ್ಯಕ್ತಪಡಿಸುತ್ತದೆ? ಅದು ನಮ್ಮ ಕಣ್ಮುಂದೆಯೇ ಜರುಗುತ್ತಿರುವ ಪ್ರಕ್ರಿಯೆಯ ಅತ್ಯಂತ ಎದ್ದು ಕಾಣುವಂಥ ಲಕ್ಷಣವನ್ನಷ್ಟೆ ವ್ಯಕ್ತಪಡಿಸುತ್ತದೆ. ಈ ಪರಿ

ಶೀಲಕನು ಪ್ರತ್ಯೇಕ ಮರಗಳನ್ನು ಎಣಿಸುತ್ತಾನೆ ಆದರೆ ಅರಣ್ಯವನ್ನೇ ಕಾಣದೆ ಹೋಗಿದ್ದಾನೆ ಎಂಬುದನ್ನು ಅದು ತೋರಿಸುತ್ತದೆ. ಅದು ಮೇಲುಮೇಲಿನದನ್ನು, ಆಕಸ್ಮಿಕವಾದುದನ್ನು, ಅರಾಜಕವಾದುದನ್ನು ದಾಸ್ಯಭಾವದಿಂದ ಅನುಕರಿಸುತ್ತದೆ. ಪರಿಶೀಲಕನು ತನ್ನ ಬಳಿ ಇರುವ ವಿಶ್ಲೇಷಿಸದಿರುವ ಮಾಹಿತಿಗಳ ಅಗಾಧ ರಾಶಿಯನ್ನು ಕಂಡು ದಂಗುಬಡಿದವನಂತಾಗಿ ಅದರ ಅರ್ಥವನ್ನೂ ಪ್ರಾಮುಖ್ಯವನ್ನೂ ಗ್ರಹಿಸಲು ಸಂಪೂರ್ಣವಾಗಿ ಅಸಮರ್ಥನಾಗಿದ್ದಾನೆ ಎಂಬುದನ್ನು ಅದು ಹೊರಗೆಡಹುತ್ತದೆ. ಷೇರುಗಳ ಒಡೆತನ, ಖಾಸಗಿ ಆಸ್ತಿಯ ಮಾಲೀಕರ ನಡುವಿನ ಸಂಬಂಧಗಳು, ಇವು "ಅಡ್ಡಾದಿಡ್ಡಿಯಾಗಿ ಪರಸ್ಪರ ಹೆಣೆದುಕೊಂಡಿರುತ್ತವೆ." ಆದರೆ ಈ ರೀತಿ ಪರಸ್ಪರ ಹೆಣೆದುಕೊಂಡಿರುವುದರ ಕೆಳಗೆ, ಈ ಬುನಾದಿಯ ಕೆಳಗೆ, ಉತ್ಪಾದನೆಯ ಬದಲಾಗುವ ಸಾಮಾಜಿಕ ಸಂಬಂಧಗಳಿರುತ್ತವೆ. ದೊಡ್ಡ ಉದ್ಯಮವೊಂದು ಬೃಹತ್ ಪ್ರಮಾಣ ತಳೆದಾಗ, ಹತ್ತಾರು ಮಿಲಿಯ ಜನರಿಗೆ ಅವಶ್ಯವಾದುದೆಲ್ಲದರ ಮೂರನೇ ಎರಡು ಪಾಲು ಅಥವಾ ಮುಕ್ಕಾಲು ಪಾಲು ಪ್ರಾಥಮಿಕ ಕಚ್ಚಾ ಪದಾರ್ಥಗಳನ್ನು ಯೋಜನಾಬದ್ಧವಾಗಿ ಸಾಮೂಹಿಕ ಮಾಹಿತಿಗಳ ನಿಷ್ಕೃಷ್ಟ ಗಣನೆಯ ಆಧಾರದ ಮೇಲೆ ಸರಬರಾಜನ್ನು ಸಂಘಟಿಸಿದಾಗ; ಕಚ್ಚಾ ಪದಾರ್ಥಗಳನ್ನು ವ್ಯವಸ್ಥಾಬದ್ಧವಾದ ಹಾಗೂ ಸುಸಂಘಟಿತವಾದ ರೀತಿಯಲ್ಲಿ ಉತ್ಪಾದನೆಯ ಅತ್ಯಂತ ಸೂಕ್ತ ಸ್ಥಳಗಳಿಗೆ, ಕೆಲವು ವೇಳೆ ನೂರಾರು ಅಥವಾ ಸಾವಿರಾರು ಮೈಲಿಗಳವರೆಗೆ, ಸಾಗಿಸಿದಾಗ; ಅಸಂಖ್ಯಾತ ಮಾದರಿ ಸಿದ್ಧಗೊಂಡ ವಸ್ತುಗಳ ತಯಾರಿಕೆಯವರೆಗೂ ಎಲ್ಲ ಅನುಕ್ರಮಿಕ ಕಾರ್ಯಘಟ್ಟಗಳನ್ನು ಏಕೈಕ ಕೇಂದ್ರವೇ ನಿರ್ದೇಶಿಸಿದಾಗ; ಈ ಉತ್ಪನ್ನಗಳನ್ನು ಏಕೈಕ ಯೋಜನೆಗನುಗುಣವಾಗಿ ಕೋಟ್ಯಾಂತರ ಬಳಕೆಗಾರರ ಮಧ್ಯೆ ಹಂಚಿದಾಗ (ಅಮೆರಿಕದ 'ತೈಲ ಟ್ರಸ್ಟಿ'ನಿಂದ ಅಮೆರಿಕದಲ್ಲೂ ಜರ್ಮನಿಯಲ್ಲೂ ತೈಲ ಹಂಚಿಕೆ) – ಆಗ ನಾವು ಕಾಣುವುದು ಉತ್ಪಾದನೆಯ ಸಾಮಾಜಿಕೀಕರಣವನ್ನು, ಕೇವಲ "ಪರಸ್ಪರ ಹೆಣೆದುಕೊಳ್ಳುವುದ"ನ್ನಲ್ಲ; ಖಾಸಗಿ ಆರ್ಥಿಕ ಹಾಗೂ ಖಾಸಗಿ ಆಸ್ತಿ ಸಂಬಂಧಗಳು ಒಂದು ಹೊರ ಹೊದಿಕೆಯಾಗಿರುತ್ತವೆ; ಈ ಹೊದಿಕೆ ಇನ್ನೆಷ್ಟು ಮಾತ್ರವೂ ತನ್ನ ಒಳಗಿರುವ ವಸ್ತುಗಳನ್ನು ಇರಿಸಿಕೊಳ್ಳದಂತಾಗುತ್ತದೆ, ಈ ಕವಚ ತೆಗೆದುಹಾಕುವುದನ್ನು ಕೃತಕ ಸಾಧನಗಳ ಮೂಲಕ ತಡಮಾಡಿದಲ್ಲಿ ಅದು ಅನಿವಾರ್ಯವಾಗಿಯೇ ಕ್ಷಯಿಸುತ್ತದೆ; (ಅತ್ಯಂತ ಹೆಚ್ಚು ಕೆಡಕು ಸಂಭವಿಸಿ, ಸಂದರ್ಭಸಾಧಕವಾದದ ಕೀವುಗುಳ್ಳೆಯನ್ನು ಗುಣಪಡಿಸುವುದು ತುಂಬ ನಿಧಾನವಾದರೆ), ಈ ಕ್ಷಯಿಸುವಂಥ ಸ್ಥಿತಿಯಲ್ಲೇ ಈ ಕವಚವು ಸಾಕಷ್ಟು ದೀರ್ಘ ಕಾಲದವರೆಗೆ ಮುಂದುವರಿಯಬಹುದು, ಆದರೂ ಅದನ್ನು ಅನಿವಾರ್ಯವಾಗಿಯೇ ತೆಗೆದು ಹಾಕಲಾಗುವುದು, ಎಂಬುದು ಆಗ ಸ್ಪಷ್ಟವಾಗುತ್ತದೆ.

ಜರ್ಮನ್ ಸಾಮ್ರಾಜ್ಯವಾದವನ್ನು ಉತ್ಸಾಹದಿಂದ ಮೆಚ್ಚಿಕೊಳ್ಳುವ ಷುಲ್ಸ್ತ್ಸೆ-ಗವೆರ್ನಿತ್ಸ್ ಉದ್ಗರಿಸುತ್ತಾರೆ:

11*

"ಜರ್ಮನ್ ಬ್ಯಾಂಕುಗಳ ಸರ್ವೋಚ್ಚ ನಿರ್ವಹಣೆಯನ್ನು ಒಮ್ಮೆ ಹತ್ತಾರು ಜನರ ಕೈಗಳಿಗೆ ವಹಿಸಿಕೊಡಲಾಯಿತೆಂದರೆ, ಅವರ ಚಟುವಟಿಕೆಯು ಇಂದೂ ರಾಜ್ಯದ ಸಚಿವರ ಬಹುಭಾಗದವರ ಚಟುವಟಿಕೆಗಿಂತ ಸಾರ್ವಜನಿಕ ಒಳಿತಿಗೆ ಹೆಚ್ಚು ಮಹತ್ವದ್ದಾಗಿರುತ್ತದೆ" (ಬ್ಯಾಂಕರುಗಳ, ಸಚಿವರ, ಕೈಗಾರಿಕಾ ಪ್ರಭುಗಳ ಹಾಗೂ ಲಾಭಾಂಶ ಜೀವಿಗಳ "ಪರಸ್ಪರ ಹೆಣಿಗೆ"ಯನ್ನು ಇಲ್ಲಿ ಅನುಕೂಲವಾಗಿ ಮರೆಯಲಾಗಿದೆ).... "ನಾವು ಗಮನಿಸಿದ ಆ ಪ್ರವೃತ್ತಿಗಳು ತಮ್ಮ ತರ್ಕಬದ್ಧ ಅಂತ್ಯದವರೆಗೂ ಬೆಳೆಯುವುದನ್ನು ಕಲ್ಪಿಸಿಕೊಂಡಲ್ಲಿ, ದೇಶದ ಹಣ ಬಂಡವಾಳವು ಬ್ಯಾಂಕುಗಳಲ್ಲಿ ಏಕೀಕೃತವಾಗಿರುವುದನ್ನು, ಬ್ಯಾಂಕುಗಳೇ ಕಾರ್ಟೆಲ್‌ಗಳಲ್ಲಿ ಒಂದುಗೂಡಿರುವುದನ್ನು, ರಾಷ್ಟ್ರದಲ್ಲಿ ತೊಡಗಿಸಬಹುದಾದ ಬಂಡವಾಳವು ಸೆಕ್ಯುರಿಟಿಗಳ ರೂಪದಲ್ಲಿ ಹಾಕಲ್ಪಟ್ಟಿರುವುದನ್ನು, ಕಾಣುತ್ತೇವೆ. ಆಗ ಆ ಪ್ರತಿಭಾಶಾಲಿ ಸೇನ್-ಸಿಮೋನ್‌ರ ಭವಿಷ್ಯವಾಣಿ ಪೂರೈಕೆಗೊಳ್ಳುವುದು: 'ಆರ್ಥಿಕ ಸಂಬಂಧಗಳು ಏಕರೂಪ ನಿಯಂತ್ರಣವಿಲ್ಲದೆಯೇ ಬೆಳೆಯುತ್ತಿರುವ ವಾಸ್ತವಾಂಶಕ್ಕೆ ಅನುಗುಣವಾದ ಇಂದಿನ ಉತ್ಪಾದನೆಯಲ್ಲಿನ ಅರಾಜಕತೆಯು ಉತ್ಪಾದನೆಯಲ್ಲಿ ಸಂಘಟನೆಗೆ ದಾರಿ ಬಿಟ್ಟುಕೊಡಬೇಕು. ಉತ್ಪಾದನೆಯು ಒಬ್ಬರು ಇನ್ನೊಬ್ಬರಿಂದ ಸ್ವತಂತ್ರರಾದ, ಮಾನವನ ಆರ್ಥಿಕ ಆವಶ್ಯಕತೆಗಳ ಬಗೆಗೆ ಅಜ್ಞಾನಿಗಳಾದ ಪ್ರತ್ಯೇಕಗೊಂಡ, ಕೈಗಾರಿಕೋದ್ಯಮಿಗಳಿಂದ ಇನ್ನೆಷ್ಟು ಮಾತ್ರವೂ ನಿರ್ದೇಶಿಸಲ್ಪಡುವುದಿಲ್ಲ; ಅದನ್ನು ಒಂದು ನಿಶ್ಚಿತ ಸಾಮಾಜಿಕ ಸಂಸ್ಥೆ ನೆರವೇರಿಸುತ್ತದೆ. ಹೆಚ್ಚು ಉನ್ನತ ನೆಲೆಯಿಂದ ಸಾಮಾಜಿಕ ಆರ್ಥಿಕತೆಯ ವಿಶಾಲ ಕ್ಷೇತ್ರವನ್ನು ಸಮೀಕ್ಷಿಸುವ ಸಾಮರ್ಥ್ಯವುಳ್ಳ ಒಂದು ಕೇಂದ್ರ ನಿರ್ವಹಣಾ ಸಮಿತಿಯು ಅದನ್ನು ಇಡೀ ಸಮಾಜದ ಪ್ರಯೋಜನಕ್ಕನುಗುಣವಾಗಿ ನಿಯಂತ್ರಿಸುವುದು, ಉತ್ಪಾದನಾ ಸಾಧನಗಳನ್ನು ಸೂಕ್ತ ಕೈಗಳಲ್ಲಿರಿಸುವುದು ಮತ್ತು ಎಲ್ಲಕ್ಕೂ ಮಿಗಿಲಾಗಿ ಉತ್ಪಾದನೆಗೂ ಬಳಕೆಗೂ ಮಧ್ಯೆ ಸತತವಾಗಿ ಸಾಮರಸ್ಯವಿರುವಂತೆ ಎಚ್ಚರಿಕೆ ವಹಿಸುವುದು. ಆರ್ಥಿಕ ಶ್ರಮ ಸಂಘಟನೆಯನ್ನು ತಮ್ಮ ಕರ್ತವ್ಯಗಳ ಒಂದು ಭಾಗವನ್ನಾಗಿ ಭಾವಿಸಿಕೊಂಡಿರುವಂಥ ಸಂಸ್ಥೆಗಳು – ಬ್ಯಾಂಕುಗಳು – ಆಗಲೇ ಅಸ್ತಿತ್ವದಲ್ಲಿವೆ.' ಸೇನ್-ಸಿಮೋನ್‌ರ ಭವಿಷ್ಯವಾಣಿಯನ್ನು ಪೂರೈಸಲು ನಾವಿನ್ನೂ ತುಂಬ ದೂರ ಹೋಗಬೇಕಾಗಿದೆ, ಆದರೆ ನಾವು ಅದರತ್ತ ಹೋಗುವ ಮಾರ್ಗ ಹಿಡಿದಿದ್ದೇವೆ. ಅದೇ ಮಾರ್ಕ್ಸ್‌ವಾದವಾಗಿದೆ, ಮಾರ್ಕ್ಸ್‌ರವರು ಊಹಿಸಿದುದಕ್ಕಿಂತ ಭಿನ್ನವಾದ, ಆದರೆ ರೂಪದಲ್ಲಷ್ಟೆ ಭಿನ್ನವಾದ, ಮಾರ್ಕ್ಸ್‌ವಾದವಾಗಿದೆ."*

---

*_Grundriß der Sozialökonomik_, 146 ('ಸಾಮಾಜಿಕ ಅರ್ಥಶಾಸ್ತ್ರದ ಸೂತ್ರಗಳು,' ಪು. 146. – ಸಂ.).

ಮಾರ್ಕ್ಸ್‌ರವರಿಗೆ ನಿಜಕ್ಕೂ ಜಜ್ಜುಬಡಿಯುವಂಥ "ಖಂಡನೆ," ಮಾರ್ಕ್ಸ್‌ರವರ ನಿಷ್ಕೃಷ್ಟ ವೈಜ್ಞಾನಿಕ ವಿಶ್ಲೇಷಣೆಯಿಂದ ಸೇನ್-ಸಿಮೋನ್‌ರ ಊಹೆಗೆ, ಪ್ರತಿಭಾಶಾಲಿಯೊಬ್ಬನ ಊಹೆ ಆದರೂ, ಊಹೆಯಷ್ಟೆ ಆದ ಊಹೆಗೆ, ಒಂದು ಹೆಜ್ಜೆ ಹಿಂಜರಿಯುವ ಖಂಡನೆ.

1916ರ ಜನವರಿ-ಜೂನ್‌ನಲ್ಲಿ
ಬರೆಯಲಾದುದು

# ರಾಜ್ಯ ಹಾಗೂ ಕ್ರಾಂತಿ

ರಾಜ್ಯದ ಬಗೆಗೆ ಮಾರ್ಕ್ಸ್‌ವಾದಿ
ಸಿದ್ಧಾಂತ ಹಾಗೂ ಕ್ರಾಂತಿಯಲ್ಲಿ ಶ್ರಮಜೀವಿ
ವರ್ಗದ ಕಾರ್ಯಭಾರಗಳು[35]

# ಮೊದಲನೆಯ ಆವೃತ್ತಿಗೆ ಮುನ್ನುಡಿ

ರಾಜ್ಯದ ಪ್ರಶ್ನೆಯು ಇದೀಗ ಸೈದ್ಧಾಂತಿಕವಾಗಿಯಷ್ಟೆ ಅಲ್ಲ, ವ್ಯಾವಹಾರಿಕ ರಾಜಕಾರಣ ದೃಷ್ಟಿಯಿಂದಲೂ ವಿಶೇಷ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿದೆ. ಏಕಸ್ವಾಮ್ಯ ಬಂಡವಾಳವಾದವು ರಾಜ್ಯ-ಏಕಸ್ವಾಮ್ಯ ಬಂಡವಾಳವಾದವಾಗಿ ಪರಿವರ್ತನೆಯಾಗುವ ಪ್ರಕ್ರಿಯೆಯನ್ನು ಸಾಮ್ರಾಜ್ಯಶಾಹಿ ಯುದ್ಧವು ಅಪಾರವಾಗಿ ಉತ್ಕರ್ಷಿಸಿದೆ ಮತ್ತು ತೀವ್ರಗೊಳಿಸಿದೆ. ಸರ್ವಶಕ್ತ ಬಂಡವಾಳಶಾಹಿ ಸಂಘಸಂಸ್ಥೆಗಳೊಂದಿಗೆ ಹೆಚ್ಚು ಹೆಚ್ಚಾಗಿ ಮಿಳನಗೊಳ್ಳುತ್ತಿರುವ ರಾಜ್ಯವು ಶ್ರಮಿಕಜನಸಮೂಹವನ್ನು ಗುರಿಪಡಿಸಿರುವ ಘೋರ ದಬ್ಬಾಳಿಕೆಯು ಇನ್ನೂ ಹೆಚ್ಚು ಘೋರವಾಗುತ್ತಿದೆ. ಮುಂದುವರಿದ ದೇಶಗಳು – ನಾವು ಅವುಗಳ ಒಳ ಪ್ರದೇಶಗಳ ವಿಷಯವನ್ನು ಇಲ್ಲಿ ಹೇಳುತ್ತಿರುವುದು – ಕಾರ್ಮಿಕರಿಗೆ ಹೆಚ್ಚು ಹೆಚ್ಚಾಗಿ ಸೈನಿಕ ಬಂದೀಖಾನೆಗಳಾಗಿ ಬೆಳೆಯುತ್ತಿವೆ.

ದೀರ್ಘ ಕಾಲದಿಂದ ನಡೆಯುತ್ತಿರುವ ಯುದ್ಧದ ಅಭೂತಪೂರ್ವ ಭೀಕರತೆಗಳೂ ಕ್ಲೇಶಗಳೂ ಜನಸಮೂಹದ ಸ್ಥಿತಿಯನ್ನು ಅಸಹನೀಯವನ್ನಾಗಿ ಮಾಡುತ್ತಿವೆ, ಅವರ ಕೋಪವನ್ನು ಹೆಚ್ಚಿಸುತ್ತಿವೆ. ಜಾಗತಿಕ ಶ್ರಮಜೀವಿ ವರ್ಗ ಕ್ರಾಂತಿಯು ಸ್ಪಷ್ಟವಾಗಿಯೇ ಪರಿಪಕ್ವಗೊಳ್ಳುತ್ತಿದೆ. ರಾಜ್ಯದೊಂದಿಗೆ ಅದರ ಸಂಬಂಧವು ವ್ಯಾವಹಾರಿಕ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿದೆ.

ತುಲನಾತ್ಮಕವಾಗಿ ಶಾಂತಿಯುತ ಬೆಳವಣಿಗೆಯ ದಶಕಗಳಲ್ಲಿ ಸಂಗ್ರಹಿತವಾದ ಸಂದರ್ಭಸಾಧಕವಾದದ ಅಂಶಗಳು ಸಾಮಾಜಿಕ ಸ್ವದೇಶ ಮೂಢಾಭಿಮಾನದ ಪ್ರವೃತ್ತಿಗೆ ಎಡೆಮಾಡಿಕೊಟ್ಟಿವೆ. ಈ ಪ್ರವೃತ್ತಿಯು ಜಗತ್ತಿನಾದ್ಯಂತ ಅಧಿಕೃತ ಸಮಾಜವಾದಿ ಪಾರ್ಟಿಗಳಲ್ಲಿ ಪ್ರಬಲವಾಗಿ ಬೆಳೆದಿದೆ. ಈ ಪ್ರವೃತ್ತಿಯು – ಮಾತಿನಲ್ಲಿ ಸಮಾಜವಾದ, ಕೃತಿಯಲ್ಲಿ ಸ್ವದೇಶ ಮೂಢಾಭಿಮಾನದ ಈ ಪ್ರವೃತ್ತಿಯು – (ರಷ್ಯದಲ್ಲಿ ಪ್ಲೆಹಾನೊವ್, ಪೊತ್ರೇಸೊವ್, ಬ್ರೆಷ್ಕೋವ್‌ಸ್ಕಯ, ರುಬನೋವಿಚ್ ಮತ್ತು ಸ್ವಲ್ಪ ಮರೆಮಾಚಿದ ರೀತಿಯಲ್ಲಿ ತ್ಸೆರೆತೇಲಿ, ಚೆರ್ನೋವ್ ಮತ್ತು ಸಂಗಡಿಗರು; ಜರ್ಮನಿ

ಯಲ್ಲಿ ಷೈದೆಮನ್, ಲೇಗೀನ್, ದಾವೀದ್ ಮತ್ತಿತರರು; ಫ್ರಾನ್ಸ್ ಮತ್ತು ಬೆಲ್ಜಿಯಂಗಳಲ್ಲಿ ರೆನೊದೇಲ್, ಗೆದ್ ಮತ್ತು ವಾಂದೆರ್‌ವೆಲ್ದೆ; ಇಂಗ್ಲೆಂಡಿನಲ್ಲಿ ಹೈಂಡ್‌ಮನ್ ಹಾಗೂ ಫೇಬಿಯನ್ನರು, ಇತ್ಯಾದಿ, ಇತ್ಯಾದಿ ಇವರುಗಳು ಪ್ರತಿನಿಧಿಸುವ ಪ್ರವೃತ್ತಿಯು) ಒಂದು ವಿಶಿಷ್ಟ ಲಕ್ಷಣದಿಂದಾಗಿ ಎದ್ದುಕಾಣುತ್ತಿದೆ. ಅದೆಂದರೆ, ಈ "ಸಮಾಜವಾದದ ನಾಯಕರು" "ತಮ್ಮ" ರಾಷ್ಟ್ರೀಯ ಬೂರ್ಷ್ವಾಸೀಯ ಹಿತಗಳಿಗಷ್ಟೆ ಅಲ್ಲ, "ತಮ್ಮ" ರಾಜ್ಯದ ಹಿತಗಳಿಗೂ ಕೀಳು ರೀತಿಯಲ್ಲಿ ದಾಸ್ಯಭಾವದಿಂದ ಹೊಂದಿಕೊಂಡಿರುವುದು. ಏಕೆಂದರೆ ಬೃಹತ್ ರಾಷ್ಟ್ರಗಳಲ್ಲಿ ಬಹುಸಂಖ್ಯೆಯವು ಬಹಳ ಕಾಲದಿಂದಲೂ ಅಧಿಕ ಸಂಖ್ಯೆಯ ಸಣ್ಣ ಹಾಗೂ ದುರ್ಬಲ ಜನತೆಗಳನ್ನು ಶೋಷಿಸುತ್ತಿವೆ, ತಮ್ಮ ಗುಲಾಮ ಜನತೆಗಳನ್ನಾಗಿ ಮಾಡಿಕೊಳ್ಳುತ್ತಿವೆ. ಸಾಮ್ರಾಜ್ಯಶಾಹಿ ಯುದ್ಧವಾದರೋ ಈ ರೀತಿಯ ಲೂಟಿಯನ್ನು ಹಂಚಿಕೊಳ್ಳುವ ಮತ್ತು ಪುನರ್ ಹಂಚಿಕೊಳ್ಳುವ ಯುದ್ಧವೇ ಆಗಿದೆ. ದುಡಿಯುವ ಜನರನ್ನು ಒಟ್ಟಿನಲ್ಲಿ ಬೂರ್ಷ್ವಾಸೀಯ, ವಿಶಿಷ್ಟವಾಗಿ ಸಾಮ್ರಾಜ್ಯಶಾಹಿ ಬೂರ್ಷ್ವಾಸೀಯ, ಪ್ರಭಾವದಿಂದ ಮುಕ್ತರನ್ನಾಗಿ ಮಾಡುವ ಹೋರಾಟವು, "ರಾಜ್ಯಕ್ಕೆ ಸಂಬಂಧಿಸಿ" ಇರುವ ಸಂದರ್ಭಸಾಧಕ ಪೂರ್ವಾಗ್ರಹಗಳ ವಿರುದ್ಧ ಹೋರಾಟ ನಡೆಸದೆಯೇ, ಸಾಧ್ಯವಿಲ್ಲ.

ಈ ಕಿರುಹೊತ್ತಗೆಯಲ್ಲಿ ನಾವು ಮೊಟ್ಟಮೊದಲನೆಯದಾಗಿ ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ರಾಜ್ಯದ ಬಗೆಗೆ ಮುಂದಿಟ್ಟ ಸಿದ್ಧಾಂತವನ್ನು ಪರಿಶೀಲಿಸುತ್ತೇವೆ. ಸಂದರ್ಭಸಾಧಕವಾದಿಗಳು ಈ ಸಿದ್ಧಾಂತದ ಯಾವ ಅಂಶಗಳನ್ನು ಉಪೇಕ್ಷಿಸಿದ್ದಾರೋ ಅಥವಾ ವಿಕೃತಗೊಳಿಸಿದ್ದಾರೋ ಅವುಗಳನ್ನು ವಿಶೇಷವಾಗಿ ವಿವರವಾಗಿ ಪರಿಶೀಲಿಸುತ್ತೇವೆ. ಅನಂತರ ನಾವು ಈ ವಿಕೃತೀಕರಣಗಳಿಗೆ ಮುಖ್ಯವಾಗಿ ಕಾರಣರಾದ, ಪ್ರಸಕ್ತ ಯುದ್ಧದಲ್ಲಿ ಶೋಚನೀಯವಾದ ದಿವಾಳಿತನಕ್ಕೆ ಗುರಿಯಾದ ದ್ವಿತೀಯ ಇಂಟರ್‌ನ್ಯಾಷನಲ್‌ನ (1889-1914) ಪ್ರಖ್ಯಾತ ನಾಯಕರಾದ ಕಾರ್ಲ್ ಕೌತ್‌ಸ್ಕಿಯವರ ವಿಷಯವನ್ನು ಪ್ರತ್ಯೇಕವಾಗಿ ಪರಿಶೀಲಿಸುತ್ತೇವೆ. ಕೊನೆಯದಾಗಿ ನಾವು 1905ರ[36] ಹಾಗೂ ವಿಶಿಷ್ಟವಾಗಿ 1917ರ[37] ರಷ್ಯನ್ ಕ್ರಾಂತಿಗಳ ಅನುಭವದ ಮುಖ್ಯ ಫಲಿತಾಂಶಗಳನ್ನು ಕ್ರೋಡೀಕರಿಸುತ್ತೇವೆ. 1917ರ ರಷ್ಯನ್ ಕ್ರಾಂತಿಯು ಪ್ರಸಕ್ತ ಸಮಯದಲ್ಲಿ (1917ರ ಆಗಸ್ಟ್ ಆದಿಭಾಗದಲ್ಲಿ) ತನ್ನ ಬೆಳವಣಿಗೆಯ ಮೊದಲ ಘಟ್ಟವನ್ನು ಪೂರೈಸುತ್ತಿದೆ ಎನ್ನಬಹುದು. ಆದರೆ ಈ ಕ್ರಾಂತಿಯನ್ನು ಸಾಮ್ರಾಜ್ಯಶಾಹಿ ಯುದ್ಧದಿಂದಾಗಿ ಉಂಟಾಗುತ್ತಿರುವ ಸಮಾಜವಾದಿ ಶ್ರಮಜೀವಿ ಕ್ರಾಂತಿಗಳ ಸರಣಿಯಲ್ಲಿ ಒಂದು ಕೊಂಡಿಯಾಗಿ ಪರಿಗಣಿಸಿದರಷ್ಟೆ ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯ. ಆದ್ದರಿಂದ ರಾಜ್ಯದೊಂದಿಗೆ ಸಮಾಜವಾದಿ ಶ್ರಮಜೀವಿ ಕ್ರಾಂತಿಯ ಸಂಬಂಧದ ಪ್ರಶ್ನೆಯು ವ್ಯಾವಹಾರಿಕ-ರಾಜಕೀಯ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿದೆಯಷ್ಟೆ ಅಲ್ಲ, ಇಂದಿನ ಅತ್ಯಂತ ತುರ್ತಿನ ಸಮಸ್ಯೆಯಾಗಿಯೂ – ಬಂಡವಾಳಶಾಹಿ ದಬ್ಬಾಳಿಕೆಯಿಂದ ತಮ್ಮನ್ನು ತಾವೇ ವಿಮೋಚನೆಗೊಳಿಸಿಕೊಳ್ಳಲು ತಾವು ಸಮೀಪ

ಭವಿಷ್ಯತ್ತಿನಲ್ಲಿ ಏನು ಮಾಡಬೇಕೆಂಬುದನ್ನು ಜನಸಮೂಹಗಳಿಗೆ ವಿವರಿಸುವ ಸಮಸ್ಯೆಯಾಗಿಯೂ – ವಿಶೇಷ ಮಹತ್ವವನ್ನು ಪಡೆದುಕೊಳ್ಳುತ್ತಿದೆ.

ಗ್ರಂಥಕರ್ತೃ

ಆಗಸ್ಟ್ 1917

## ದ್ವಿತೀಯ ಆವೃತ್ತಿಗೆ ಮುನ್ನುಡಿ

ಈಗಿನ ಈ ದ್ವಿತೀಯ ಆವೃತ್ತಿಯನ್ನು ಬಹುಮಟ್ಟಿಗೆ ಯಾವ ಬದಲಾವಣೆಗಳನ್ನೂ ಮಾಡದೆ ಪ್ರಕಟಿಸಲಾಗುತ್ತಿದೆ. ಎರಡನೆಯ ಅಧ್ಯಾಯಕ್ಕೆ ಮೂರನೆಯ ವಿಭಾಗವನ್ನಷ್ಟೆ ಸೇರಿಸಲಾಗಿದೆ.

ಗ್ರಂಥಕರ್ತೃ

ಮಾಸ್ಕೋ
ಡಿಸೆಂಬರ್ 17, 1918

# ವರ್ಗ ಸಮಾಜ ಹಾಗೂ ರಾಜ್ಯ

## 1. ರಾಜ್ಯ – ವರ್ಗವೈರುಧ್ಯತೆಗಳ ಅಸಾಂಗತ್ಯದ ಉತ್ಪನ್ನ

ಮಾರ್ಕ್ಸ್‌ರವರ ಸಿದ್ಧಾಂತಕ್ಕೆ ಈಗ ಯಾವ ಸ್ಥಿತಿ ಒದಗಿದೆಯೋ ಅದು ವಿಮೋಚನೆಗಾಗಿ ಹೋರಾಡುತ್ತಿರುವ ಮರ್ದಿತ ವರ್ಗಗಳ ಕ್ರಾಂತಿಕಾರಿ ಚಿಂತಕರ ಹಾಗೂ ನಾಯಕರ ಸಿದ್ಧಾಂತಗಳಿಗೆ ಇತಿಹಾಸದಲ್ಲಿ ಪದೇ ಪದೇ ಒದಗಿದೆ. ಮಹಾ ಕ್ರಾಂತಿಕಾರರು ಜೀವಂತವಾಗಿದ್ದಾಗ ಮರ್ದಕ ವರ್ಗಗಳು ಅವರನ್ನು ನಿರಂತರವಾಗಿ ಪೀಡಿಸಿದವು, ಅವರ ಸಿದ್ಧಾಂತಗಳ ಬಗೆಗೆ ಅತ್ಯಂತ ಮೃಗೀಯ ಮಾತ್ಸರ್ಯ ಹಾಗೂ ಅತ್ಯುಗ್ರ ಹಗೆತನ ತೋರಿದವು, ಆ ಸಿದ್ಧಾಂತಗಳ ವಿರುದ್ಧ ಸುಳ್ಳು ಅವಹೇಳನಗಳ ಅತ್ಯಂತ ಹೇಸಿಗೆಯ ಚಳವಳಿಗಳನ್ನು ನಡೆಸಿದವು. ಆದರೆ ಅವರು ತೀರಿಹೋದನಂತರ ಅವರನ್ನು ನಿರಪಾಯಕಾರಿ ವಿಗ್ರಹಗಳನ್ನಾಗಿ ಪರಿವರ್ತಿಸಲು, ಹೀಗೆ ಹೇಳುವುದಾದರೆ ಅವರನ್ನು ಸಂತರನ್ನಾಗಿ ಪರಿಗಣಿಸಲು ಮತ್ತು ಅವರ ಹೆಸರುಗಳನ್ನು ಸ್ವಲ್ಪಮಟ್ಟಿಗೆ ಪ್ರಸಿದ್ಧಿಗೊಳಿಸಲು ಯತ್ನಗಳನ್ನು ಮಾಡಲಾಗುತ್ತಿದೆ. ಇದರ ಉದ್ದೇಶ ಮರ್ದಿತ ವರ್ಗಗಳನ್ನು "ಸಮಾಧಾನಗೊಳಿಸುವುದು" ಮತ್ತು ಮೋಸಕ್ಕೊಳಪಡಿಸುವುದಾಗಿದೆ. ಅದೇ ಹೊತ್ತಿನಲ್ಲಿ ಕ್ರಾಂತಿಕಾರಿ ಸಿದ್ಧಾಂತದಿಂದ ಅದರ ಒಳ ಸಾರವನ್ನೇ ಕಸಿಯಲಾಗುತ್ತಿದೆ, ಅದರ ಕ್ರಾಂತಿಕಾರಿ ಮೊನೆಯನ್ನು ಮೊಂಡು ಮಾಡಿ ಅದನ್ನು ಭ್ರಷ್ಟಗೊಳಿಸಲಾಗುತ್ತಿದೆ. ಇಂದು ಬೂರ್ಷ್ವಾಸೀಯೂ, ಶ್ರಮಜೀವಿ ಚಳವಳಿಯೊಳಗಿರುವ ಸಂದರ್ಭಸಾಧಕರೂ, ಮಾರ್ಕ್ಸ್‌ವಾದವನ್ನು ಹೀಗೆ "ಪರಿಷ್ಕರಣ" ಮಾಡುವುದರಲ್ಲಿ ಒಂದಾಗಿದ್ದಾರೆ. ಅವರು ಈ ಸಿದ್ಧಾಂತದ ಕ್ರಾಂತಿಕಾರಿ ಅಂಶಗಳನ್ನು, ಅದರ ಕ್ರಾಂತಿಕಾರಿ ಜೀವಾಳವನ್ನು, ಬಿಟ್ಟುಬಿಡುತ್ತಾರೆ, ಮುಸುಕುಗೊಳಿಸುತ್ತಾರೆ ಇಲ್ಲವೇ ವಿಕೃತಿಗೊಳಿಸುತ್ತಾರೆ. ಅವರು ಆ ಸಿದ್ಧಾಂತದಲ್ಲಿ ಬೂರ್ಷ್ವಾಸೀಗೆ ಯಾವುದು ಅಂಗೀಕಾರವಾಗುವುದೋ ಅಥವಾ ಹಾಗೆಂದು ತೋರುವುದೋ ಅದನ್ನು ಮುಂದಕ್ಕೆ ತಂದು ಉತ್ಸಾಹಪೂರ್ವಕವಾಗಿ ಶ್ಲಾಘಿಸುತ್ತಾರೆ. ಸಾಮಾಜಿಕ-ಸ್ವದೇಶ ಮೂಢಾಭಿಮಾನಿಗಳೆಲ್ಲ ಈಗ "ಮಾರ್ಕ್ಸ್‌ವಾದಿ"ಗಳಾಗಿಬಿಟ್ಟಿದ್ದಾರೆ (ನಗಬೇಡಿ !). ಈಗ್ಗೆ ಸ್ವಲ್ಪ ಮುನ್ನವಷ್ಟೆ ಮಾರ್ಕ್ಸ್‌ವಾದವನ್ನು ನಿರ್ಮೂಲಗೊಳಿಸುವುದರಲ್ಲಿ ತಜ್ಞರಾಗಿದ್ದ ಜರ್ಮನ್ ಬೂರ್ಷ್ವಾ ಪಂಡಿತರು ಈಗ ಹೆಚ್ಚು ಹೆಚ್ಚಾಗಿ ಮಾರ್ಕ್ಸ್‌ರವರನ್ನು "ರಾಷ್ಟ್ರೀಯ-

ಜರ್ಮನ್" ಎಂದು ಕರೆಯತೊಡಗಿದ್ದಾರೆ. ದರೋಡೆಯ ಯುದ್ಧ ನಡೆಸುವ ಉದ್ದೇಶಕ್ಕಾಗಿ ಅತ್ಯುತ್ತಮವಾಗಿ ಸಂಘಟಿತವಾದ ಕಾರ್ಮಿಕ ಸಂಸ್ಥೆಗಳನ್ನು ಮಾರ್ಕ್ಸ್‌ರವರು ಸುಶಿಕ್ಷಿತಗೊಳಿಸಿದರು, ಎಂದವರು ಪ್ರತಿಪಾದಿಸುತಿದ್ದಾರೆ!

ಇಂಥ ಸಂದರ್ಭದಲ್ಲಿ, ಮಾರ್ಕ್ಸ್‌ವಾದವನ್ನು ಹಿಂದೆಂದೂ ಆಗದಿದ್ದಷ್ಟು ವ್ಯಾಪಕವಾಗಿ ವಿರೂಪಗೊಳಿಸಿರುವುದರಿಂದಾಗಿ, ನಮ್ಮ ಇಂದಿನ ಪ್ರಮುಖ ಕಾರ್ಯಭಾರ, ರಾಜ್ಯದ ಬಗ್ಗೆ ಮಾರ್ಕ್ಸ್‌ರವರು ನಿಜಕ್ಕೂ ಏನು ಬೋಧಿಸಿದರು ಎಂಬುದನ್ನು ಪುನರ್‌ಸ್ಥಾಪಿಸುವುದಾಗಿದೆ. ಇದಕ್ಕೆ ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರ ಕೃತಿಗಳಿಂದಲೇ ಅನೇಕ ಸುದೀರ್ಘ ಉದ್ಧರಣಗಳನ್ನು ನೀಡುವುದು ಅಗತ್ಯವಾಗುತ್ತದೆ. ನಿಜ, ಸುದೀರ್ಘ ಉದ್ಧರಣಗಳು ನಮ್ಮ ಬರಹವನ್ನು ತೊಡಕಿನದನ್ನಾಗಿ ಮಾಡುತ್ತವೆ. ಅದರ ಸರಳ ಅರ್ಥಗ್ರಾಹ್ಯತೆಗೆ ಅವು ಎಷ್ಟು ಮಾತ್ರವೂ ಸಹಕಾರಿಯಾಗವು. ಆದರೆ ಅವನ್ನು ಬಿಟ್ಟುಕೊಡುವುದೂ ಸಾಧ್ಯವಿಲ್ಲ. ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಕೃತಿಗಳಲ್ಲಿ ರಾಜ್ಯದ ವಿಷಯಕ್ಕೆ ಸಂಬಂಧಿಸಿದ ಎಲ್ಲ ಭಾಗಗಳನ್ನೂ, ಅಥವಾ ಕೊನೆಯ ಪಕ್ಷ ಎಲ್ಲ ಅತಿ ಪ್ರಧಾನವಾದ ಭಾಗಗಳನ್ನೂ, ಅಗತ್ಯವಾಗಿ ಸಾಧ್ಯವಾದಷ್ಟೂ ಪೂರ್ಣವಾಗಿ ಉದ್ಧರಿಸಲೇ ಬೇಕು; ಅದರಿಂದಾಗಿ ಓದುಗರು ವೈಜ್ಞಾನಿಕ ಸಮಾಜವಾದದ ಸಂಸ್ಥಾಪಕರ ವಿಚಾರಭಾವನೆಗಳ ಸಮಗ್ರತೆಯ ಬಗೆಗೆ, ಆ ವಿಚಾರಭಾವನೆಗಳ ವಿಕಾಸದ ಬಗೆಗೆ, ಸ್ವತಂತ್ರ ಅಭಿಪ್ರಾಯ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ; ಈಗ ಪ್ರಚಲಿತದಲ್ಲಿರುವ "ಕೌತ್ಸ್ಕಿವಾದ"ವು ಅವುಗಳನ್ನು ಹೇಗೆ ವಿರೂಪಗೊಳಿಸಿದೆ ಎಂಬುದನ್ನು ದಾಖಲೆಗಳಿಂದ ರುಜುವಾತು ಮಾಡಿ ಸಾಧಿಸುವುದು, ಸ್ಪಷ್ಟವಾಗಿ ತೋರಿಸಿಕೊಡುವುದು, ಸಾಧ್ಯವಾಗುತ್ತದೆ.

ನಾವು ಎಂಗೆಲ್ಸ್‌ರ ಕೃತಿಗಳಲ್ಲಿ ಅತ್ಯಂತ ಪ್ರಚಾರ ಗಳಿಸಿದ 'ಕುಟುಂಬ, ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ' ಎಂಬ ಕೃತಿ*ಯಿಂದ ಪ್ರಾರಂಭಿಸೋಣ. ಇದರ ಆರನೆಯ ಆವೃತ್ತಿಯನ್ನು 1894ರಷ್ಟು ಹಿಂದೆಯೇ ಷ್ಟುಟ್‌ಗರ್ಟ್‌ನಲ್ಲಿ ಪ್ರಕಟಿಸಲಾಗಿದ್ದಿತು. ನಾವು ಜರ್ಮನ್ ಮೂಲಗಳಿಂದಲೇ ಉದ್ಧರಣಗಳನ್ನು ಅನುವಾದಿಸಬೇಕು, ಏಕೆಂದರೆ, ರಷ್ಯನ್ ಭಾಷಾಂತರಗಳು ಅನೇಕವಿದ್ದರೂ ಅವುಗಳಲ್ಲಿ ಬಹುಮಟ್ಟಿನವು ಅಸಂಪೂರ್ಣವಾಗಿವೆ ಇಲ್ಲವೇ ತುಂಬ ಅತೃಪ್ತಿಕರವಾಗಿವೆ.

ತಾವು ನಡೆಸಿದ ಚಾರಿತ್ರಿಕ ವಿಶ್ಲೇಷಣೆಯನ್ನು ಕ್ರೋಢೀಕರಿಸುತ್ತ, ಎಂಗೆಲ್ಸ್ ಹೀಗೆ ಹೇಳುತ್ತಾರೆ:

> "ಆದ್ದರಿಂದ ರಾಜ್ಯವು ಸಮಾಜದ ಮೇಲೆ ಹೊರಗಿನಿಂದ ಬಲವಂತವಾಗಿ ಹೊರಿಸಿದ ಶಕ್ತಿಯೇನೂ ಅಲ್ಲ; ಅಂತೆಯೇ ಅದು ಹೆಗೆಲ್ ಹೇಳಿ

---

* ಈ ಕೃತಿ ಕನ್ನಡದಲ್ಲೂ ಪ್ರಕಟವಾಗಿದೆ. ಪ್ರಗತಿ ಪ್ರಕಾಶನ, ಮಾಸ್ಕೋ, 1980. – ಸಂ.

ರುವಂತೆ 'ನೈತಿಕ ವಿಚಾರದ ವಾಸ್ತವಿಕತೆ,' 'ವಿವೇಚನೆಯ ಸಾಕಾರ ಹಾಗೂ ವಾಸ್ತವಿಕ ಸ್ವರೂಪ'ವೂ ಅಲ್ಲ. ಬದಲು, ಅದು ಸಮಾಜದ ಬೆಳವಣಿಗೆಯ ಒಂದು ನಿರ್ದಿಷ್ಟ ಘಟ್ಟದಲ್ಲಿ ಉಂಟಾದ ಉತ್ಪನ್ನವಾಗಿದೆ; ಸಮಾಜವು ತನ್ನೊಂದಿಗೇ ಅಪರಿಹಾರ್ಯವಾದಂಥ ವೈರುಧ್ಯತೆಯ ಬಲೆಯಲ್ಲಿ ಸಿಕ್ಕಿ ಬಿದ್ದಿದೆ, ಅದು ಅಸಾಂಗತ್ಯವಾದ ವೈರುಧ್ಯತೆಗಳಿಂದ ವಿಭಜನೆಗೊಂಡಿದೆ, ಇವುಗಳಿಂದ ಬಿಡಿಸಿಕೊಳ್ಳಲು ಅದಕ್ಕೆ ಶಕ್ತಿ ಇಲ್ಲವಾಗಿದೆ, ಎಂಬುದರ ಒಪ್ಪಿಕೆಯಾಗಿದೆ ರಾಜ್ಯ. ಆದರೆ ಈ ವೈರುಧ್ಯತೆಗಳೂ, ಪರಸ್ಪರ ವಿರುದ್ಧ ಆರ್ಥಿಕ ಹಿತಗಳುಳ್ಳ ಈ ವರ್ಗಗಳೂ, ನಿಷ್ಫಲ ಹೋರಾಟದಲ್ಲಿ ತಮ್ಮನ್ನು ತಾವೇ ಹಾಗೂ ಸಮಾಜವನ್ನೂ ನಾಶಮಾಡದಿರಲೋಸುಗ, ಈ ಘರ್ಷಣೆ ಯನ್ನು ಉಪಶಮನ ಮಾಡುವ ಮತ್ತು ಅದನ್ನು 'ಶಿಸ್ತಿ'ನ ಮಿತಿಗಳೊ ಳಗೇ ಇರಿಸುವ, ಸಮಾಜಕ್ಕೂ ಮೇಲೆ ನಿಂತಂತೆ ಕಾಣುವ, ಶಕ್ತಿಯೊಂದನ್ನು ಹೊಂದಿರುವುದು ಅವಶ್ಯವಾಯಿತು; ಹೀಗೆ ಸಮಾಜದಿಂದಲೇ ಉದ್ಭವ ವಾದ, ಆದರೆ ಅದನ್ನು ಮೀರಿ ನಿಂತ, ಅದರಿಂದ ಹೆಚ್ಚು ಹೆಚ್ಚು ದೂರ ಸರಿಯುತ್ತಿರುವ ಈ ಶಕ್ತಿಯೇ ರಾಜ್ಯವಾಗಿದೆ." (ಆರನೆಯ ಜರ್ಮನ್ ಆವೃತ್ತಿ, ಪುಟಗಳು 177-178.)[38]

ಇದು ರಾಜ್ಯ ಎಂಬುದರ ಮಹತ್ವವೇನು, ಅದರ ಚಾರಿತ್ರಿಕ ಪಾತ್ರವೇನು ಎಂಬುದರ ಬಗೆಗೆ ಮಾರ್ಕ್ಸ್‌ವಾದದ ಮೂಲ ವಿಚಾರವನ್ನು ಸಂಪೂರ್ಣ ಸ್ಪಷ್ಟತೆ ಯೊಂದಿಗೆ ವ್ಯಕ್ತಪಡಿಸುತ್ತದೆ. ರಾಜ್ಯವು ವರ್ಗವೈರುಧ್ಯತೆಗಳ ಅಸಾಂಗತ್ಯದ ಉತ್ಪನ್ನ ವಾಗಿದೆ, ಅದರ ಸ್ಪಷ್ಟ ತೋರಿಕೆಯಾಗಿದೆ. ಎಲ್ಲಿ, ಯಾವಾಗ ಮತ್ತು ಎಷ್ಟರವರೆಗೆ ವರ್ಗವೈರುಧ್ಯತೆಗಳನ್ನು ವಸ್ತುನಿಷ್ಠವಾಗಿ ಹೊಂದಾಣಿಸಲು ಸಾಧ್ಯವಾಗುವುದಿಲ್ಲವೋ ಅಲ್ಲಿ ಆಗ ರಾಜ್ಯವು ಉದ್ಭವವಾಗುತ್ತದೆ. ಇದಕ್ಕೆ ವಿಪರ್ಯಾಯವಾಗಿ, ರಾಜ್ಯ ಅಸ್ತಿತ್ವದಲ್ಲಿರುವುದು, ವರ್ಗ ವೈರುಧ್ಯತೆಗಳು ಅಸಂಗತವಾಗಿವೆ ಎಂಬುದನ್ನು ಸಾಧಿಸಿತೋರುತ್ತದೆ.

ಈ ಅತ್ಯಂತ ಮುಖ್ಯ ಹಾಗೂ ಮೂಲಭೂತ ವಿಷಯದೊಂದಿಗೇ, ಎರಡು ಮುಖ್ಯ ರೀತಿಗಳಲ್ಲಿ ಆಗುತ್ತಿರುವ ಮಾರ್ಕ್ಸ್‌ವಾದದ ವಿಕೃತೀಕರಣವು ಪ್ರಾರಂಭ ವಾಗುವುದು.

ಒಂದು ಕಡೆ, ಎಲ್ಲಿ ವರ್ಗವೈರುಧ್ಯತೆಗಳು ಇರುತ್ತವೋ, ವರ್ಗ ಹೋರಾಟ ಇರುತ್ತದೋ, ಅಲ್ಲಿಯಷ್ಟೆ ರಾಜ್ಯ ಅಸ್ತಿತ್ವದಲ್ಲಿರುತ್ತದೆ ಎಂಬುದನ್ನು ನಿರ್ವಿವಾದ ವಾದ ಚಾರಿತ್ರಿಕ ಸತ್ಯಸಂಗತಿಗಳ ಒತ್ತಡದಿಂದಾಗಿ ಒಪ್ಪಿಕೊಳ್ಳುವ ಬಲಾತ್ಕಾರಕ್ಕೊಳ ಗಾಗಿ ಬೂರ್ಷ್ವಾ, ಅದರಲ್ಲೂ ವಿಶೇಷವಾಗಿ ಪೆಟಿ ಬೂರ್ಷ್ವಾ ಸಿದ್ಧಾಂತಿಗಳು ರಾಜ್ಯವು ವರ್ಗಗಳನ್ನು ಸಾಂಗತ್ಯಗೊಳಿಸುವ ಸಾಧನವೆಂದು ಕಾಣಬರುವಂತೆ ಮಾರ್ಕ್ಸ್

ರವರನ್ನು "ತಿದ್ದುತ್ತಿ"ದ್ದಾರೆ. ಮಾರ್ಕ್ಸ್‌ರವರ ಪ್ರಕಾರ, ವರ್ಗಗಳನ್ನು ಸಾಂಗತ್ಯ ಗೊಳಿಸಲು ಸಾಧ್ಯವಿದ್ದಿದ್ದರೆ ರಾಜ್ಯ ಉದ್ಭವಿಸುತ್ತಲೂ ಇರಲಿಲ್ಲ, ಉಳಿದುಕೊಂಡು ಬರುತ್ತಲೂ ಇರಲಿಲ್ಲ. ಆದರೆ ಪೆಟಿ ಬೂರ್ಷ್ವಾ ಹಾಗೂ ಸಂಕುಚಿತಮತಿ ಪ್ರಾಧ್ಯಾಪಕರೂ ಲೇಖಸಕಾರರೂ ಮಾರ್ಕ್ಸ್‌ರವರಿಗೆ ತುಂಬ ಆಗಾಗ್ಗೆ ಸದುದ್ದೇಶದಿಂದಲೇ ಉಲ್ಲೇಖ ಮಾಡುತ್ತ ಏನು ಬರೆಯುತ್ತಿದ್ದಾರೋ ಅದರಿಂದ ರಾಜ್ಯವು ವರ್ಗಗಳನ್ನು ಸಾಂಗತ್ಯಗೊಳಿಸುತ್ತದೆಂದೇ ಕಂಡುಬರುತ್ತದೆ. ಮಾರ್ಕ್ಸ್‌ರವರ ಪ್ರಕಾರ ರಾಜ್ಯವು ವರ್ಗದ ಆಧಿಪತ್ಯದ ಸಾಧನ, ಒಂದು ವರ್ಗವು ಮತ್ತೊಂದನ್ನು ಮರ್ದನಕ್ಕೊಳಪಡಿಸುವ ಸಾಧನ; ಅದು ಉಂಟುಮಾಡುವ "ವ್ಯವಸ್ಥೆ"ಯೇ ವರ್ಗಗಳ ನಡುವಿನ ಘರ್ಷಣೆಯ ತೀವ್ರತೆಯನ್ನು ತಗ್ಗಿಸುವ ಮೂಲಕ ಈ ಮರ್ದನವನ್ನು ಶಾಸನಬದ್ಧಗೊಳಿಸುತ್ತಿರುವುದು, ಸ್ಥಿರಗೊಳಿಸುತ್ತಿರುವುದು. ಆದರೆ ಪೆಟಿ ಬೂರ್ಷ್ವಾ ರಾಜಕಾರಣಿಗಳ ಅಭಿಪ್ರಾಯದಲ್ಲಿ ವ್ಯವಸ್ಥೆ ಎಂದರೆ ವರ್ಗಗಳನ್ನು ಸಾಂಗತ್ಯಗೊಳಿಸುವುದು, ಒಂದು ವರ್ಗ ಮತ್ತೊಂದನ್ನು ಮರ್ದಿಸುವುದಲ್ಲ; ಘರ್ಷಣೆಯನ್ನು ಉಪಶಮನಗೊಳಿಸುವುದೆಂದರೆ ವರ್ಗಗಳನ್ನು ಸಾಂಗತ್ಯಗೊಳಿಸುವುದು, ಮರ್ದಕರನ್ನು ಉರುಳಿಸುವ ಹೋರಾಟದಲ್ಲಿ ಬಳಸುವ ನಿರ್ದಿಷ್ಟ ಸಾಧನ ವಿಧಾನಗಳು ಮರ್ದಿತರಿಗೆ ದೊರಕದಂತೆ ಮಾಡುವುದಲ್ಲ.

ಉದಾಹರಣೆಗೆ, 1917ರ ಕ್ರಾಂತಿಯಲ್ಲಿ ರಾಜ್ಯದ ಪಾತ್ರ ಹಾಗೂ ಮಹತ್ವದ ಪ್ರಶ್ನೆಯು ತಕ್ಷಣವೇ ನೆರವೇರಿಸಬೇಕಾದ, ಸಾಮೂಹಿಕ ಪ್ರಮಾಣದಲ್ಲಿ ನೆರವೇರಿಸಬೇಕಾದ ವ್ಯಾವಹಾರಿಕ ಪ್ರಶ್ನೆಯಾಗಿ ಬೃಹದಾಕಾರವಾಗಿ ಎದ್ದು ನಿಂತಾಗ, ಎಲ್ಲ ಸಮಾಜವಾದಿ-ಕ್ರಾಂತಿಕಾರಿಗಳೂ ಮೆನ್ಷೆವಿಕರೂ ಕೂಡಲೇ "ರಾಜ್ಯವು" ವರ್ಗಗಳನ್ನು "ಸಾಂಗತ್ಯಗೊಳಿಸುತ್ತದೆ" ಎಂಬ ಪೆಟಿ ಬೂರ್ಷ್ವಾ ಸಿದ್ಧಾಂತಕ್ಕೇ ಶರಣು ಹೋದರು. ಈ ಎರಡೂ ಪಾರ್ಟಿಗಳ ಅಸಂಖ್ಯಾತ ನಿರ್ಣಯಗಳೂ ಅವುಗಳ ರಾಜಕಾರಣಿಗಳ ಲೇಖನಗಳೂ ಈ ಪೆಟಿ ಬೂರ್ಷ್ವಾ ಹಾಗೂ ಸಂಕುಚಿತಮತಿ "ಸಾಂಗತ್ಯೀಕರಣ" ಸಿದ್ಧಾಂತದಿಂದಲೇ ಸಂಪೂರ್ಣವಾಗಿ ಪೂರಿತವಾಗಿವೆ. ರಾಜ್ಯವು ಒಂದು ನಿರ್ದಿಷ್ಟ ವರ್ಗದ ಆಧಿಪತ್ಯದ ಒಂದು ಸಾಧನ, ಆ ವರ್ಗವನ್ನು ಅದರ ಪ್ರತಿವರ್ಗದೊಂದಿಗೆ (ಅದಕ್ಕೆ ವಿರುದ್ಧವಾದ ವರ್ಗದೊಂದಿಗೆ) ಸಾಂಗತ್ಯಗೊಳಿಸಲು ಸಾಧ್ಯವಿಲ್ಲ, ಎಂಬುದನ್ನು ಪೆಟಿ ಬೂರ್ಷ್ವಾ ಪ್ರಜಾಸತ್ತಾತ್ಮಕವಾದಿಗಳು ಎಂದೂ ಅರ್ಥಮಾಡಿಕೊಳ್ಳಲಾರರು. ನಮ್ಮ ಸಮಾಜವಾದಿ-ಕ್ರಾಂತಿಕಾರಿಗಳೂ ಮೆನ್ಷೆವಿಕರೂ ಸಮಾಜವಾದಿಗಳೇ ಅಲ್ಲ (ಈ ವಿಷಯವನ್ನು ನಾವು ಬೋಲ್ಷೆವಿಕರು ಯಾವತ್ತೂ ದೃಢವಾಗಿ ಹೇಳಿದ್ದೇವೆ), ಆದರೆ ಅವರು ಸಮಾಜವಾದಿಯೇನೋ ಎಂಬಂತಹ ನುಡಿಗಟ್ಟುಗಳನ್ನು ಬಳಸುವ ಪೆಟಿ ಬೂರ್ಷ್ವಾ ಪ್ರಜಾಪ್ರಭುತ್ವವಾದಿಗಳು ಎಂಬ ಸತ್ಯಸಂಗತಿಯನ್ನು ರಾಜ್ಯದ ಬಗೆಗೆ ಅವರು ಹೊಂದಿರುವ ಮನೋಧರ್ಮವು ತುಂಬ ಎದ್ದು ಕಾಣುವಂತೆ ತೋರಿಸಿಕೊಡುತ್ತದೆ.

ಮತ್ತೊಂದು ಕಡೆ "ಕೌತ್‌ಸ್ಕಿವಾದಿ"ಗಳು ನಡೆಸಿರುವ ಮಾರ್ಕ್ಸ್‌ವಾದದ ವಿಕೃತೀಕರಣವು ಇದಕ್ಕಿಂತ ಹೆಚ್ಚು ಸೂಕ್ಷ್ಮ ರೀತಿಯದಾಗಿದೆ. ರಾಜ್ಯವು ಒಂದು ವರ್ಗದ ಆಧಿಪತ್ಯದ ಸಾಧನ ಎಂಬುದನ್ನಾಗಲೀ ಅಥವಾ ವರ್ಗ ವೈರುಧ್ಯತೆಗಳು ಅಸಾಂಗತ್ಯವಾದವು ಎಂಬುದನ್ನಾಗಲೀ ಅವರು "ಸೈದ್ಧಾಂತಿಕವಾಗಿ" ನಿರಾಕರಿಸುವುದಿಲ್ಲ. ಆದರೆ ಅವರು ಒಂದು ವಿಷಯವನ್ನು ಉಪೇಕ್ಷಿಸುತ್ತಾರೆ ಅಥವಾ ಮಸುಕುಗೊಳಿಸುತ್ತಾರೆ. ರಾಜ್ಯವು ವರ್ಗ ವೈರುಧ್ಯತೆಗಳ ಅಸಾಂಗತ್ಯದ ಉತ್ಪನ್ನವಾಗಿದ್ದರೆ, ಅದು ಸಮಾಜಕ್ಕೂ ಮೇಲೆ ನಿಂತ ಮತ್ತು "ಅದರಿಂದ ಹೆಚ್ಚು ಹೆಚ್ಚು ದೂರ ಸರಿಯುತ್ತಿರುವ" ಶಕ್ತಿಯಾಗಿದ್ದರೆ, ಮರ್ದಿತ ವರ್ಗದ ವಿಮೋಚನೆಯು ಬಲೋದ್ಬಂಧದ ಕ್ರಾಂತಿಯಿಲ್ಲದೆ ಸಾಧ್ಯವಿಲ್ಲವಷ್ಟೆ ಅಲ್ಲ, ಈ "ದೂರ ಸರಿಯುವಿಕೆ"ಯ ಮೂರ್ತ ರೂಪವಾದ ಹಾಗೂ ಆಳುವ ವರ್ಗವು ಸೃಜಿಸಿದ ರಾಜ್ಯಾಧಿಕಾರ ಯಂತ್ರವನ್ನು ನಾಶ ಮಾಡದೆ ಸಹ ಅದು ಸಾಧ್ಯವಿಲ್ಲ ಎಂಬುದು ಸ್ವತಸ್ಸಿದ್ಧ – ಇದೇ ಆ ವಿಷಯವಾಗಿದೆ. ನಾವು ಮುಂದೆ ಕಾಣುವಂತೆ, ಮಾರ್ಕ್ಸ್‌ರವರು ಕ್ರಾಂತಿಯ ಕಾರ್ಯಭಾರಗಳ ಸ್ಪಷ್ಟ ಚಾರಿತ್ರಿಕ ವಿಶ್ಲೇಷಣೆಯ ಬೆಂಬಲದ ಮೇಲೆ ಈ ಸೈದ್ಧಾಂತಿಕವಾಗಿ ಸ್ವಯಂವೇದ್ಯವಾದ ತೀರ್ಮಾನವನ್ನು ಅತ್ಯಂತ ಸ್ಪಷ್ಟವಾಗಿ ರೂಪಿಸಿದರು. ಮತ್ತೆ ಈ ತೀರ್ಮಾನವನ್ನೇ – ಮುಂದೆ ತೋರಿಸಿಕೊಡಲಿರುವಂತೆ – ಕೌತ್‌ಸ್ಕಿ "ಮರೆತಿರುವುದು" ಮತ್ತು ವಿಕೃತಗೊಳಿಸಿರುವುದು.

## 2. ಸಶಸ್ತ್ರ ಜನರ ವಿಶೇಷ ದಳಗಳು, ಸೆರೆಮನೆಗಳು, ಇತ್ಯಾದಿ

ಎಂಗೆಲ್ಸ್ ಮುಂದುವರಿಸುತ್ತಾರೆ:

"ಪ್ರಾಚೀನ ಕುಲ (ಬಣ ಅಥವಾ ಬುಡಕಟ್ಟು) ವ್ಯವಸ್ಥೆ[39]ಗೆ ಭಿನ್ನವಾಗಿ ರಾಜ್ಯವು ಮೊದಲನೆಯದಾಗಿ ತನ್ನ ಪ್ರಜೆಗಳನ್ನು ಪ್ರದೇಶಕ್ಕನುಗುಣವಾಗಿ ವಿಭಜಿಸುತ್ತದೆ...."

ಈ ವಿಭಜನೆಯು ನಮಗೆ "ಸಹಜ" ಎಂದು ಕಂಡುಬರುತ್ತದೆ. ಆದರೆ ಅದಕ್ಕಾಗಿ ಪೀಳಿಗೆಗಳಿಗೆ ಅಥವಾ ಬುಡಕಟ್ಟುಗಳಿಗೆ ಅನುಗುಣವಾಗಿ ಏರ್ಪಟ್ಟಿದ್ದ ಪುರಾತನ ಸಂಘಟನೆಯ ವಿರುದ್ಧ ಸುದೀರ್ಘ ಹೋರಾಟ ನಡೆಸಬೇಕಾಯಿತು.

"ಎರಡನೆಯ ವಿಭೇದಕ ಲಕ್ಷಣವೆಂದರೆ ಸಾರ್ವಜನಿಕ ಅಧಿಕಾರದ ಸ್ಥಾಪನೆ. ಅದು ಸಶಸ್ತ್ರ ಶಕ್ತಿಯಾಗಿ ಸಂಘಟಿಸಿಕೊಳ್ಳುವ ಜನರೊಂದಿಗೆ ನೇರವಾಗಿ ಎಷ್ಟು ಮಾತ್ರವೂ ಒಂದುಗೂಡದ ಅಧಿಕಾರವಾಗಿದೆ. ಈ ವಿಶೇಷ ಸಾರ್ವಜನಿಕ ಅಧಿಕಾರ ಅವಶ್ಯ, ಏಕೆಂದರೆ, ಸಮಾಜವು ವರ್ಗ

ಗಳಾಗಿ ವಿಭಜನೆಗೊಂಡಂದಿನಿಂದ ಜನರೇ ಸ್ವಯಂಕಾರ್ಯಕಾರಿ ಸಶಸ್ತ್ರ ಸಂಘಟನೆಯಾಗಿ ವರ್ತಿಸುವುದು ಅಸಾಧ್ಯವಾಯಿತು... ಈ ಸಾರ್ವಜನಿಕ ಅಧಿಕಾರವು ಪ್ರತಿಯೊಂದು ರಾಜ್ಯದಲ್ಲೂ ಅಸ್ತಿತ್ವದಲ್ಲಿರುತ್ತದೆ; ಅದ ರಲ್ಲಿ ಸಶಸ್ತ್ರ ಜನರಿರುತ್ತಾರಷ್ಟೆ ಅಲ್ಲ, ಸೆರೆಮನೆಗಳು ಮತ್ತು ವಿಭಿನ್ನ ರೀತಿಯ ಬಲೋದ್ಬಂಧದ ಸಂಸ್ಥೆಗಳೇ ಮೊದಲಾದ ಭೌತಿಕ ಸಾಧನ ಗಳೂ ಇರುತ್ತವೆ. ಕುಲ ವ್ಯವಸ್ಥೆಯ (ಬುಡಕಟ್ಟು) ಸಮಾಜದಲ್ಲಿ ಇವು ಗಳು ಇರಲಿಲ್ಲ...."

ಎಂಗೆಲ್ಸ್‌ರು ರಾಜ್ಯ ಎಂದು ಕರೆಯಲಾಗುವ "ಶಕ್ತಿ"ಯ ಪ್ರಕಲ್ಪನೆಯನ್ನು, ಸಮಾಜದಿಂದಲೇ ಉದ್ಭವಿಸಿದ, ಆದರೆ ತನ್ನನ್ನು ತಾನೇ ಅದಕ್ಕೂ ಮೇಲೆ ಇರಿಸಿ ಕೊಳ್ಳುವ ಮತ್ತು ಅದರಿಂದ ತನ್ನನ್ನು ತಾನೇ ಹೆಚ್ಚು ಹೆಚ್ಚು ದೂರ ಸರಿಸಿಕೊಳ್ಳುವ ಶಕ್ತಿಯ ಪ್ರಕಲ್ಪನೆಯನ್ನು, ವಿಶದಪಡಿಸುತ್ತಾರೆ. ಈ ಶಕ್ತಿಯು ಮುಖ್ಯವಾಗಿ ಏನನ್ನು ಒಳಗೊಂಡಿರುತ್ತದೆ? ಸಶಸ್ತ್ರ ಜನರ ವಿಶೇಷ ದಳಗಳನ್ನು. ಈ ದಳಗಳು ತಮ್ಮ ವಶದಲ್ಲಿ ಸೆರೆಮನೆಗಳು ಇತ್ಯಾದಿಗಳನ್ನು ಹೊಂದಿರುತ್ತವೆ.

ಸಶಸ್ತ್ರ ಜನರ ವಿಶೇಷ ದಳಗಳ ಬಗೆಗೆ ನಾವು ಮಾತನಾಡುವುದು ಸಮರ್ಥ ನೀಯವೇ ಆಗಿದೆ, ಏಕೆಂದರೆ, ಪ್ರತಿಯೊಂದೂ ರಾಜ್ಯದ ಲಕ್ಷಣವಾದ ಸಾರ್ವಜನಿಕ ಅಧಿಕಾರವು ಸಶಸ್ತ್ರ ಜನರೊಂದಿಗೆ, ಅವರ "ಸ್ವಯಂಕಾರ್ಯಕಾರಿ ಸಶಸ್ತ್ರ ಸಂಘಟನೆ ಯೊಂದಿಗೆ" "ನೇರವಾಗಿ ತಾಳೆಯಾಗುವುದಿಲ್ಲ."

ಎಲ್ಲ ಮಹಾನ್ ಕ್ರಾಂತಿಕಾರಿ ಚಿಂತನಕಾರರಂತೆಯೇ ಎಂಗೆಲ್ಸ್‌ರವರೂ ವರ್ಗ ಜಾಗೃತ ಕಾರ್ಮಿಕರ ಗಮನವನ್ನು – ಚಾಲ್ತಿಯಲ್ಲಿರುವ ಸಂಕುಚಿತವಾದದ ಅನುಯಾ ಯಿಗಳು ಯಾವುದರ ಕಡೆಗೆ ಗಮನ ನೀಡುವುದು ತೀರ ಅನುಚಿತವೆಂದು, ಯಾವು ದನ್ನು ಅತ್ಯಂತ ಮಾಮೂಲಿನದೆಂದು ಭಾವಿಸುತ್ತಾರೋ, ಯಾವುವು ಆಳವಾಗಿ ಬೇರು ಬಿಟ್ಟವಷ್ಟೆ ಅಲ್ಲ ಕಲ್ಲಾದವೆಂದೂ ಹೇಳಬಹುದಾದಂಥ ಪೂರ್ವಾಗ್ರಹ ಗಳಿಂದ ಪವಿತ್ರಗೊಳಿಸಲ್ಪಟ್ಟಿರುವುವೋ – ಅವುಗಳ ಕಡೆಗೆ ಸೆಳೆಯಲು ಯತ್ನಿಸುತ್ತಾರೆ. ಸ್ಥಾಯಿ ಸೈನ್ಯ ಹಾಗೂ ಪೊಲೀಸ್ – ಇವು ರಾಜ್ಯಾಧಿಕಾರದ ಪ್ರಧಾನ ಸಾಧನ ಗಳಾಗಿವೆ. ಇದು ಬೇರೆ ರೀತಿ ಇರಲು ಹೇಗೆ ಸಾಧ್ಯ?

ಎಂಗೆಲ್ಸ್‌ರು ತಮ್ಮ ವಿಚಾರವನ್ನು ಹೇಳುತ್ತಿದ್ದುದು ಹತ್ತೊಂಬತ್ತನೆಯ ಶತ ಮಾನದ ಕೊನೆಯ ಭಾಗದ ವಿಶಾಲ ಬಹುಮತದ ಯೂರೋಪಿಯನ್ನರನ್ನುದ್ದೇಶಿಸಿ. ಆಗಿನ ಯೂರೋಪಿಯನ್ನರು ಒಂದಾದರೂ ಮಹಾ ಕ್ರಾಂತಿಯ ಅನುಭವವನ್ನು ಪಡೆದಿರಲಿಲ್ಲ, ಅದನ್ನು ನಿಕಟವಾಗಿಯೂ ವೀಕ್ಷಿಸಿರಲಿಲ್ಲ. ಅವರ ದೃಷ್ಟಿಯಲ್ಲಿ ರಾಜ್ಯದ ಪ್ರಕಲ್ಪನೆ ಬೇರೆ ರೀತಿ ಇರಲು ಸಾಧ್ಯವೇ ಇರಲಿಲ್ಲ. "ಜನರ ಸ್ವಯಂಕಾರ್ಯಕಾರಿ ಸಶಸ್ತ್ರ ಸಂಘಟನೆ" ಎಂದರೇನೆಂಬುದನ್ನು ಅವರು ಅರ್ಥ ಮಾಡಿಕೊಳ್ಳದಾಗಿದ್ದರು.

ಸಮಾಜಕ್ಕೂ ಮೇಲೆ ಇರಿಸಲಾದ ಹಾಗೂ ಸಮಾಜದಿಂದ ತಮ್ಮನ್ನು ತಾವೇ ಹೆಚ್ಚು ಹೆಚ್ಚಾಗಿ ದೂರ ಇರಿಸಿಕೊಳ್ಳುತ್ತಿದ್ದ ಸಶಸ್ತ್ರ ಜನರ ವಿಶೇಷ ದಳಗಳನ್ನು (ಪೊಲೀಸ್ ಹಾಗೂ ಸ್ಥಾಯಿಯಾ ಸೈನ್ಯ) ಹೊಂದಿರುವುದು ಏಕೆ ಅವಶ್ಯವಾಯಿತು ಎಂದು ಕೇಳಿದಾಗ ಪಶ್ಚಿಮ ಯುರೋಪಿನ ಹಾಗೂ ರಷ್ಯದ ಸಂಕುಚಿತಮತಿಗಳು, ಸಾಮಾಜಿಕ ಜೀವನದ ಸಂಕೀರ್ಣತೆ ಹೆಚ್ಚುತ್ತಿರುವುದರಿಂದ, ನಿಯಮಿತ ಕ್ರಿಯೆಗಳು ಭಿನ್ನಗೊಳ್ಳುತ್ತಿರುವುದರಿಂದ, ಎಂದು ಮುಂತಾಗಿ ಸ್ಪೆನ್ಸರ್ ಅಥವಾ ಮಿಹಯ್‌ಲೋವ್‌ಸ್ಕಿಯುವರಿಂದ ಎರವಲು ಪಡೆದ ಕೆಲವು ಪದಗುಚ್ಛಗಳನ್ನಷ್ಟೆ ಉಲ್ಲೇಖಿಸಿ ಹೇಳಹೋಗುತ್ತಾರೆ.

ಅಂಥ ಉಲ್ಲೇಖ "ವೈಜ್ಞಾನಿಕ"ವೆಂದೇನೋ ಕಂಡುಬರುತ್ತದೆ. ಸಮಾಜವು ಅಸಾಂಗತ್ಯವಾದ ಪರಸ್ಪರ ವಿರುದ್ಧ ವರ್ಗಗಳಾಗಿ ವಿಭಜನೆಗೊಂಡಿದ್ದೆಂಬ ಪ್ರಮುಖವಾದ ಹಾಗೂ ಮೂಲಭೂತವಾದ ಸತ್ಯಾಂಶವನ್ನು ಮರೆಮಾಚುವ ಮೂಲಕ ಈ ಉಲ್ಲೇಖ ಸಾಮಾನ್ಯ ಮನುಷ್ಯನನ್ನು ಪರಿಣಾಮಕಾರಿಯಾಗಿ ಮರುಳುಮಾಡುತ್ತದೆ.

ಸಮಾಜವು ಹೀಗೆ ವಿಭಜನೆಗೊಂಡಿರದೆ ಇದ್ದಿದ್ದರೆ, ಈ "ಜನರ ಸ್ವಯಂಕಾರ್ಯಕಾರಿ ಸಶಸ್ತ್ರ ಸಂಘಟನೆ"ಯು ಕೋಲು ಹಿಡಿದ ಕೋತಿಗಳ ಅಥವಾ ಆದಿಕಾಲದ ಜನರ, ಅಥವಾ ಬಣಗಳಲ್ಲಿ ಒಂದುಗೂಡಿದ ಜನರ ಆದಿಕಾಲದ ಸಂಘಟನೆಯಿಂದ, ಅದರ ಸಂಕೀರ್ಣತೆಯಿಂದಾಗಿ, ಅದರ ಉನ್ನತ ತಾಂತ್ರಿಕ ಮಟ್ಟದಿಂದಾಗಿ ಮತ್ತು ಇದೇ ರೀತಿಯ ಇತರ ಕಾರಣಗಳಿಂದಾಗಿ, ಭಿನ್ನವಾಗಿರುತ್ತಿತ್ತು. ಆದರೂ ಅಂಥ ಜನರ ಸ್ವಯಂಕಾರ್ಯಕಾರಿ ಸಶಸ್ತ್ರ ಸಂಘಟನೆ ಇನ್ನೂ ಸಾಧ್ಯವಿರುತ್ತಿತ್ತು.

ಅದು ಅಸಾಧ್ಯ, ಏಕೆಂದರೆ, ನಾಗರಿಕ ಸಮಾಜವು ಪರಸ್ಪರ ವಿರೋಧಿ ವರ್ಗಗಳಾಗಿ, ವಿಭಜನೆಗೊಂಡಿದೆ. ಇವುಗಳನ್ನು "ಸ್ವಯಂಕಾರ್ಯಕಾರಿ"ಗಳಾಗುವಂತೆ ಶಸ್ತ್ರಸಜ್ಜಿತವನ್ನಾಗಿ ಮಾಡುವುದು ಅವುಗಳ ನಡುವೆ ಸಶಸ್ತ್ರ ಹೋರಾಟಕ್ಕೆ ದಾರಿ ಮಾಡಿಕೊಡುತ್ತದೆ. ರಾಜ್ಯದ ಉದ್ಭವವಾಗುತ್ತದೆ; ಒಂದು ವಿಶೇಷ ಶಕ್ತಿಯನ್ನು, ಸಶಸ್ತ್ರ ಜನರ ವಿಶೇಷ ದಳಗಳನ್ನು ಸೃಜಿಸಲಾಗುತ್ತದೆ. ಪ್ರತಿಯೊಂದು ಕ್ರಾಂತಿಯೂ ರಾಜ್ಯಾಧಿಕಾರಯಂತ್ರವನ್ನು ನಾಶಗೊಳಿಸುವ ಮೂಲಕ ನಮಗೆ ವರ್ಗ ಹೋರಾಟವನ್ನು ನಗ್ನವಾಗಿ ತೋರಿಸಿಕೊಡುತ್ತದೆ, ಆಧಿಪತ್ಯ ನಡೆಸುವ ವರ್ಗವು ತನಗೆ ಸೇವೆ ಸಲ್ಲಿಸುವ ಸಶಸ್ತ್ರ ಜನರ ವಿಶೇಷ ದಳಗಳನ್ನು ಹೇಗೆ ಮತ್ತೆ ಸ್ಥಾಪಿಸಲು ಹವಣಿಸುತ್ತದೆ ಎಂಬುದನ್ನು, ಮರ್ದಿತ ವರ್ಗವು ಹೇಗೆ ಶೋಷಕರ ಬದಲು ಶೋಷಿತರಿಗೆ ಸೇವೆ ಸಲ್ಲಿಸಬಲ್ಲಂಥ ಈ ರೀತಿಯ ಒಂದು ಹೊಸ ಸಂಘಟನೆಯನ್ನು ಸೃಜಿಸಲು ಯತ್ನಿಸುತ್ತದೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಡುತ್ತದೆ.

ಮೇಲಿನ ವಾದದಲ್ಲಿ ಎಂಗೆಲ್ಸ್‌ರು ಸೈದ್ಧಾಂತಿಕವಾಗಿ ಎತ್ತಿರುವ ಪ್ರಶ್ನೆಯನ್ನೇ ಪ್ರತಿಯೊಂದು ಮಹಾ ಕ್ರಾಂತಿಯೂ ನಮ್ಮ ಮುಂದೆ ಪ್ರಾಯೋಗಿಕವಾಗಿ, ಸುಲಭಗ್ರಾಹ್ಯವಾಗಿ ಮತ್ತು ಅದಕ್ಕೂ ಹೆಚ್ಚಾಗಿ ಸಾಮೂಹಿಕ ಕ್ರಿಯೆಯ ಪ್ರಮಾಣದಲ್ಲಿ ಎತ್ತಿದೆ. ಸಶಸ್ತ್ರ ಜನರ "ವಿಶೇಷ" ದಳಗಳು ಮತ್ತು "ಜನರ ಸ್ವಯಂಕಾರ್ಯಕಾರಿ

ಯಾದ ಸಶಸ್ತ್ರ ಸಂಘಟನೆ" ಇವುಗಳ ನಡುವಿನ ಸಂಬಂಧ ಏನು ಎಂಬುದೇ ಆ ಪ್ರಶ್ನೆಯಾಗಿದೆ. ಯುರೋಪಿಯನ್ ಹಾಗೂ ರಷ್ಯನ್ ಕ್ರಾಂತಿಗಳ ಅನುಭವವು ಈ ಪ್ರಶ್ನೆಯನ್ನು ಹೇಗೆ ವಿಶದಗೊಳಿಸಿದೆ ಎಂಬುದನ್ನು ನಾವು ಮುಂದೆ ಕಾಣೋಣ.

ಆದರೆ ಈಗ ಎಂಗೆಲ್ಸ್‌ರ ನಿರೂಪಣೆಗೆ ಹಿಂದಿರುಗೋಣ.

ಕೆಲವು ವೇಳೆ – ಉದಾಹರಣೆಗೆ, ಉತ್ತರ ಅಮೆರಿಕದ ಕೆಲವು ಭಾಗಗಳಲ್ಲಿ – ಈ ಸಾರ್ವಜನಿಕ ಅಧಿಕಾರವು ದುರ್ಬಲವಾಗಿರುತ್ತದೆ (ಅವರ ಮನಸ್ಸಿನಲ್ಲಿರುವುದು, ಬಂಡವಾಳಶಾಹಿ ಸಮಾಜದಲ್ಲಿನ ಒಂದು ಅಪರೂಪದ ಅಪವಾದ ಮತ್ತು ಸಾಮ್ರಾಜ್ಯಶಾಹಿ ಪೂರ್ವ ದಿನಗಳಲ್ಲಿ ಸ್ವತಂತ್ರ ನೆಲಸುನಾಡಿಗನ ಮೇಲಧಿಕಾರವಿದ್ದ ಉತ್ತರ ಅಮೆರಿಕದ ಕೆಲವು ಭಾಗಗಳು), ಆದರೆ ಒಟ್ಟಿನಲ್ಲಿ ಹೇಳುವುದಾದರೆ ಅದು ಹೆಚ್ಚು ಶಕ್ತಿಯುತವಾಗಿ ಬೆಳೆಯುತ್ತದೆ, ಎಂದು ಅವರು ತಿಳಿಸುತ್ತಾರೆ:

> "ರಾಜ್ಯದೊಳಗೆ ವರ್ಗ ವೈರುಧ್ಯತೆಗಳು ಹೆಚ್ಚು ತೀವ್ರಗೊಳ್ಳುವುದಕ್ಕೆ ಅನುಗುಣವಾಗಿ ಮತ್ತು ಸಾಮಾನ್ಯ ಗಡಿ ಹೊಂದಿರುವ ರಾಜ್ಯಗಳು ಹೆಚ್ಚು ವಿಶಾಲವೂ ಹೆಚ್ಚು ಜನಭರಿತವೂ ಆದಂತೆ ಅದು (ಸಾರ್ವಜನಿಕ ಅಧಿಕಾರವು) ಹೆಚ್ಚು ಶಕ್ತಿಯುತವಾಗಿ ಬೆಳೆಯುತ್ತದೆ. ಇದಕ್ಕೆ ನಿದರ್ಶನವಾಗಿ ನಾವು ನಮ್ಮ ಇಂದಿನ ಯುರೋಪನ್ನು ನೋಡಿದರೆ ಸಾಕು. ಇಲ್ಲಿ ವರ್ಗ ಹೋರಾಟ ಮತ್ತು ಪರದೇಶಗಳನ್ನು ಅಧೀನಗೊಳಿಸಿಕೊಳ್ಳುವುದರಲ್ಲಿ ಪೈಪೋಟಿ ಸಾರ್ವಜನಿಕ ಅಧಿಕಾರವನ್ನು ಎಂಥ ಸ್ಥಾಯಿಗೆ ಏರಿಸಿವೆಯೆಂದರೆ, ಅದು ಇಡೀ ಸಮಾಜವನ್ನೇ, ರಾಜ್ಯವನ್ನೂ ಸಹ, ನುಂಗಿ ಬಿಡುವ ಭೀತಿ ಹಾಕುತ್ತಿದೆ."

ಕಳೆದ ಶತಮಾನದ ಕೊನೆಯ ದಶಕದ ಮೊದಲ ವರ್ಷಗಳಿಗೂ ಮೀರಿರದ ಕಾಲದಲ್ಲಿ ಇದನ್ನು ಬರೆಯಲಾಯಿತು. ಎಂಗೆಲ್ಸ್‌ರ ಕೊನೆಯ ಮುನ್ನುಡಿಯ ತೇದಿ ಜೂನ್ 16, 1891.[40] ಸಾಮ್ರಾಜ್ಯವಾದದತ್ತ ತಿರುವು – ಅಂದರೆ ಟ್ರಸ್ಟುಗಳ ಸಂಪೂರ್ಣ ಆಧಿಪತ್ಯ, ಭಾರಿ ಬ್ಯಾಂಕುಗಳ ಸರ್ವಶಕ್ತತೆ, ಭಾರಿ ಪ್ರಮಾಣದ ವಸಾಹತು ನೀತಿ ಇವೇ ಮುಂತಾದವು ಎನ್ನುವ ಅರ್ಥದಲ್ಲಿ – ಫ್ರಾನ್ಸಿನಲ್ಲಿ ಆಗಷ್ಟೆ ಪ್ರಾರಂಭವಾಗುತ್ತಿದ್ದಿತು; ಉತ್ತರ ಅಮೆರಿಕ ಹಾಗೂ ಜರ್ಮನಿಗಳಲ್ಲಿ ಅದು ಇನ್ನೂ ತುಂಬ ದುರ್ಬಲವಾಗಿದ್ದಿತು. ಅಂದಿನಿಂದೀಚೆಗೆ "ಪರದೇಶಗಳನ್ನು ಅಧೀನಗೊಳಿಸಿಕೊಳ್ಳುವುದರಲ್ಲಿ ಪೈಪೋಟಿ" ಭಾರಿ ಹೆಜ್ಜೆ ಹಾಕಿಕೊಂಡು ಮುಂದೆ ಸಾಗಿದೆ. ಇಪ್ಪತ್ತನೆಯ ಶತಮಾನದ ದ್ವಿತೀಯ ದಶಕದ ಆರಂಭದ ಹೊತ್ತಿಗೆ ಜಗತ್ತು ಈ "ಪರದೇಶಗಳನ್ನು ಅಧೀನಗೊಳಿಸಿಕೊಳ್ಳುವುದರಲ್ಲಿ ಪೈಪೋಟಿ ನಡೆಸುತ್ತಿದ್ದವರ" ಮಧ್ಯೆ, ಅಂದರೆ ಸೂರೆಗಾರ ಬೃಹತ್ ರಾಷ್ಟ್ರಗಳ ಮಧ್ಯೆ, ಸಂಪೂರ್ಣವಾಗಿ ವಿಭಜಿತವಾಗಿದ್ದಿತು. ಅಂದಿನಿಂದೀಚೆಗೆ ಸೈನಿಕ ಹಾಗೂ ನೌಕಾದಳ ಶಸ್ತ್ರಾಸ್ತ್ರಗಳು ಕಲ್ಪನಾತೀತವಾಗಿ ಬೆಳೆದಿವೆ ಮತ್ತು

12*

ಜಗತ್ತಿನ ಮೇಲೆ ಬ್ರಿಟನ್ನಿನ ಅಥವಾ ಜರ್ಮನಿಯ ಆಧಿಪತ್ಯಕ್ಕಾಗಿ, ಸೂರೆಗಯ್ದ ಸಂಪತ್ತಿನ ವಿಭಜನೆಗಾಗಿ, ನಡೆದ 1914-1917ರ ದರೋಡೆಕೋರ ಯುದ್ಧವು, ಸಮಾಜದ ಎಲ್ಲ ಶಕ್ತಿಗಳನ್ನೂ ದುರಾಗ್ರಹದ ರಾಜ್ಯಾಧಿಕಾರವು "ನುಂಗಿ ಹಾಕುವುದನ್ನು" ಸಂಪೂರ್ಣ ವಿನಾಶದ ಸಮೀಪ ಕರೆದೊಯ್ದಿದೆ.

ಎಂಗೆಲ್ಸ್‌ರು 1891ರಷ್ಟು ಮುನ್ನವೇ ಈ "ಪರದೇಶಗಳನ್ನು ಅಧೀನಗೊಳಿಸಿಕೊಳ್ಳುವುದರಲ್ಲಿ ಪೈಪೋಟಿ"ಯು ಬೃಹತ್ ರಾಷ್ಟ್ರಗಳ ವಿದೇಶಾಂಗ ನೀತಿಯ ಅತ್ಯಂತ ಮುಖ್ಯವಾದ ವಿಶಿಷ್ಟ ಲಕ್ಷಣಗಳಲ್ಲೊಂದೆಂದು ತೋರಿಸಬಲ್ಲವರಾಗಿದ್ದರು. ಸಾಮಾಜಿಕ ಸ್ವದೇಶ ಮೂಢಾಭಿಮಾನಿಗಳಾದರೋ, 1914ರಲ್ಲಿ ಈ ಪೈಪೋಟಿಯು ಅನೇಕ ಪಟ್ಟು ತೀವ್ರಗೊಂಡು ಸಾಮ್ರಾಜ್ಯಶಾಹಿ ಯುದ್ಧಕ್ಕೆ ಎಡೆಮಾಡಿಕೊಟ್ಟಾಗಿನಿಂದ, "ತಮ್ಮ ಸ್ವಂತ" ಬೂರ್ಷ್ವಾಸೀಯ ಸೂರೆಗಾರ ಹಿತಗಳನ್ನು ಸಮರ್ಥಿಸುವುದನ್ನು "ತಾಯ್ನಾಡ ರಕ್ಷಣೆ," "ಕ್ರಾಂತಿ ಹಾಗೂ ಗಣತಂತ್ರಗಳ ರಕ್ಷಣೆ" ಇತ್ಯಾದಿ ಪದಗುಚ್ಛಗಳಿಂದ ಮರೆಮಾಚುತ್ತ ಬಂದಿದ್ದಾರೆ !

## 3. ರಾಜ್ಯ – ಮರ್ದಿತ ವರ್ಗದ ಶೋಷಣೆಗೆ ಒಂದು ಸಾಧನ

ಸಮಾಜಕ್ಕೂ ಮೇಲೆ ನಿಂತ ವಿಶೇಷವಾದ ಸಾರ್ವಜನಿಕ ಅಧಿಕಾರವನ್ನು ಇರಿಸಿಕೊಂಡು ಬರಲು ತೆರಿಗೆಗಳೂ ರಾಜ್ಯ ಸಾಲಗಳೂ ಅವಶ್ಯವಾಗುತ್ತವೆ.

> "ಸಾರ್ವಜನಿಕ ಅಧಿಕಾರವನ್ನೂ ತೆರಿಗೆಗಳನ್ನು ಹಾಕುವ ಹಕ್ಕನ್ನೂ ಹೊಂದಿದ ಅಧಿಕಾರಿಗಳು ಈಗ, ಸಮಾಜದ ಅಂಗಸಂಸ್ಥೆಗಳಾಗಿ, ಸಮಾಜಕ್ಕೂ ಮೇಲೆ ನಿಲ್ಲುತ್ತಾರೆ" ಎಂದು ಎಂಗೆಲ್ಸ್ ಬರೆಯುತ್ತಾರೆ. "ಕುಲ (ಬುಡಕಟ್ಟು) ಸಮಾಜದ ಅಂಗಸಂಸ್ಥೆಗಳಿಗೆ ಸ್ವತಂತ್ರವಾಗಿ ಸ್ವೇಚ್ಛಾನುಸಾರ ನೀಡಲಾಗುತ್ತಿದ್ದ ಗೌರವವನ್ನು ಇವರೂ ಪಡೆದುಕೊಳ್ಳಲು ಸಾಧ್ಯವಾದರೂ ಅದು ಇವರಿಗೆ ತೃಪ್ತಿ ನೀಡದು..." ಅಧಿಕಾರಿಗಳಿಗೆ ಗೌರವಾರ್ಹತೆಯನ್ನೂ ದಂಡನೆಯಿಂದ ವಿನಾಯಿತಿಯನ್ನೂ ಘೋಷಿಸುವ ವಿಶೇಷ ನಿಯಮಗಳನ್ನು ರೂಪಿಸಲಾಗುತ್ತದೆ. "ಅತ್ಯಂತ ಕ್ಷುಲ್ಲಕ ಪೊಲೀಸ್ ಸೇವಕನೂ" ಕುಲದ ಪ್ರತಿನಿಧಿಗಳಿಗಿಂತ ಹೆಚ್ಚು "ಅಧಿಕಾರ" ಹೊಂದಿರುತ್ತಾನೆ. ಆದರೆ ಕುಲದ ಹಿರಿಯನು ಸಮಾಜದಿಂದ ಪಡೆಯುವ ಸ್ವಚ್ಛಂದ "ಗೌರವ"ವನ್ನು ಕಂಡು ನಾಗರಿಕ ರಾಜ್ಯದ ಮಿಲಿಟರಿ ಅಧಿಕಾರದ ಅಧಿಪತಿಯೂ ಅಸೂಯೆಗೊಳ್ಳಬಹುದು.

ರಾಜ್ಯಾಧಿಕಾರದ ಅಂಗಸಂಸ್ಥೆಗಳಾಗಿ ಅಧಿಕಾರಿಗಳು ಪಡೆದಿರುವ ವಿಶೇಷ ಸವಲತ್ತುಗಳ ಪ್ರಶ್ನೆಯನ್ನು ಇಲ್ಲಿ ಎತ್ತಲಾಗಿದೆ. ಸೂಚಿತವಾದ ಮುಖ್ಯ ವಿಷಯ: ಅವರನ್ನು

ಸಮಾಜಕ್ಕೂ ಮೇಲೆ ಇರಿಸುವುದು ಯಾವುದು? ಈ ಸೈದ್ಧಾಂತಿಕ ಪ್ರಶ್ನೆಗೆ 1871ರಲ್ಲಿ ಪ್ಯಾರಿಸ್ ಕಮ್ಯೂನ್[41] ಹೇಗೆ ಆಚರಣೆಯಲ್ಲಿ ಉತ್ತರ ನೀಡಿತು ಮತ್ತು 1912ರಲ್ಲಿ ಕೌತ್ಸ್ಕಿ ಹೇಗೆ ಪ್ರತಿಗಾಮಿ ದೃಷ್ಟಿಕೋನದಿಂದ ಅದನ್ನು ಮಸುಕಗೊಳಿಸಿದರು ಎಂಬುದನ್ನು ನಾವು ನೋಡೋಣ.

> "ರಾಜ್ಯವು ವರ್ಗ ವೈರುಧ್ಯತೆಗಳನ್ನು ಅಂಕೆಯಲ್ಲಿರಿಸುವ ಅಗತ್ಯತೆಯಿಂದ ಉದ್ಭವಿಸಿದುದರಿಂದಾಗಿ ಮತ್ತು ಅದೇ ಹೊತ್ತಿನಲ್ಲಿ ಅದು ಈ ವರ್ಗಗಳ ಘರ್ಷಣೆಯ ಮಧ್ಯದಿಂದ ಉದ್ಭವಿಸಿದುದರಿಂದಾಗಿ ಅದು ಸಾಮಾನ್ಯವಾಗಿ ಅತ್ಯಂತ ಪ್ರಬಲವಾದ, ಆರ್ಥಿಕವಾಗಿ ಮೇಲುಗೈ ಪಡೆದ ವರ್ಗದ ರಾಜ್ಯವಾಗಿರುತ್ತದೆ. ಆ ವರ್ಗವು ರಾಜ್ಯದ ಮಾಧ್ಯಮದ ಮೂಲಕ ರಾಜಕೀಯವಾಗಿ ಮೇಲುಗೈ ಪಡೆದ ವರ್ಗವಾಗಿಯೂ ಬೆಳೆಯುತ್ತದೆ. ಹೀಗೆ ಅದು ಮರ್ದಿತ ವರ್ಗವನ್ನು ಹತ್ತಿಕ್ಕುವ ಹಾಗೂ ಶೋಷಿಸುವ ಹೊಸ ಸಾಧನವನ್ನು ಪಡೆದುಕೊಳ್ಳುತ್ತದೆ..." ಪುರಾತನ ಹಾಗೂ ಸಾಮಂತ ಶಾಹಿ ರಾಜ್ಯಗಳು ಗುಲಾಮರನ್ನೂ ಜೀತದಾಳುಗಳನ್ನೂ ಶೋಷಣೆಗೆ ಒಳಪಡಿಸುವ ಸಾಧನಗಳಾಗಿದ್ದವು; ಅದೇ ರೀತಿ "ಆಧುನಿಕ ಪ್ರಾತಿನಿಧಿಕ ರಾಜ್ಯವು ಬಂಡವಾಳವು ಕೂಲಿ ಕಾರ್ಮಿಕರನ್ನು ಶೋಷಿಸುವ ಸಾಧನವಾಗಿದೆ. ಇದಕ್ಕೆ ಅಪವಾದಗಳಾಗಿ ಕೆಲವು ಕಾಲಾವಧಿಗಳೂ ಬರುವುದುಂಟು. ಆಗ ಪರಸ್ಪರ ಹೋರಾಡುತ್ತಿರುವ ವರ್ಗಗಳು ಒಂದು ಇನ್ನೊಂದರೊಂದಿಗೆ ಎಷ್ಟು ಸಮಬಲ ಪಡೆದಿರುತ್ತವೆಂದರೆ ರಾಜ್ಯಾಧಿಕಾರವು ಆ ಕಾಲದಲ್ಲಿ ತೋರಿಕೆಗೆ ಮಧ್ಯಸ್ಥಿಕೆಯ ಪಾತ್ರ ನಿರ್ವಹಿಸುವಂತೆ, ಎರಡೂ ವರ್ಗಗಳಿಂದ ಸ್ವಲ್ಪಮಟ್ಟಿಗೆ ಸ್ವತಂತ್ರವಾಗಿರುವಂತೆ, ಕಂಡುಬರುತ್ತದೆ...." ಹದಿನೇಳು ಹದಿನೆಂಟನೇ ಶತಮಾನಗಳ ನಿರಂಕುಶ ರಾಜಪ್ರಭುತ್ವಗಳು, ಫ್ರಾನ್ಸ್‌ನಲ್ಲಿನ ಪ್ರಥಮ ಹಾಗೂ ದ್ವಿತೀಯ ಚಕ್ರಾಧಿಪತ್ಯಗಳ ಬೊನಾಪಾರ್ಟ್‌ವಾದ[42] ಹಾಗೂ ಜರ್ಮನಿಯಲ್ಲಿನ ಬೀಸ್ಮಾರ್ಕ್ ಆಡಳಿತ, ಇವು ಅಂಥವಾಗಿದ್ದವು.

ಗಣತಂತ್ರೀಯ ರಷ್ಯದಲ್ಲಿನ ಕೇರೆನ್‌ಸ್ಕಿ ಸರಕಾರವೂ ಅಂಥಾದ್ದೇ ಆಗಿದೆಯೆಂದು ನಾವು ಸೇರಿಸಬಹುದು. ಯಾವಾಗಿನಿಂದೆಂದರೆ, ಪೆಟಿ ಬೂರ್ಷ್ವಾ ಪ್ರಜಾಪ್ರಭುತ್ವವಾದಿಗಳ ನಾಯಕತ್ವದಿಂದಾಗಿ ಸೋವಿಯತ್‌ಗಳು ಆಗಲೇ ನಿರ್ವೀರ್ಯವಾಗಿದ್ದು, ಅವನ್ನು ನೇರವಾಗಿ ವಿಸರ್ಜಿಸಲು ಬೂರ್ಷ್ವಾಸೀಯು ಇನ್ನೂ ಸಾಕಷ್ಟು ಶಕ್ತಿ ಹೊಂದಿರದೆ, ಕೇರೆನ್‌ಸ್ಕಿ ಸರಕಾರವು ಕ್ರಾಂತಿಕಾರಿ ಶ್ರಮಜೀವಿ ವರ್ಗವನ್ನು ಪೀಡಿಸತೊಡಗಿದಾಗಿನಿಂದ.

> ಪ್ರಜಾಸತ್ತಾತ್ಮಕ ಗಣತಂತ್ರದಲ್ಲಿ "ಸಂಪತ್ತು ತನ್ನ ಅಧಿಕಾರವನ್ನು ಪರೋಕ್ಷವಾಗಿ, ಆದರೆ ಅಷ್ಟೇ ಹೆಚ್ಚು ಖಚಿತವಾಗಿ ಚಲಾಯಿಸುತ್ತದೆ" ಎಂದು ಎಂಗೆಲ್ಸ್ ಮುಂದುವರಿಸುತ್ತಾರೆ. ಮೊದಲನೆಯದಾಗಿ "ಅಧಿಕಾರಿಗಳ ಪ್ರತ್ಯಕ್ಷ ಭ್ರಷ್ಟಾಚಾರ"ದ ಮೂಲಕ (ಅಮೆರಿಕ); ಎರಡನೆಯದಾಗಿ, "ಸರಕಾರ ಮತ್ತು ಬಂಡವಾಳಪತ್ರ ವ್ಯಾಪಾರ ಸಂಸ್ಥೆ(ಸ್ಟಾಕ್ ಎಕ್ಸ್‌ಚೇಂಜ್)ಗಳ ನಡುವೆ ಮೈತ್ರೀಕೂಟ"ದ ಮೂಲಕ (ಫ್ರಾನ್ಸ್ ಮತ್ತು ಅಮೆರಿಕ).

ಪ್ರಸ್ತುತದಲ್ಲಿ ಸಾಮ್ರಾಜ್ಯಶಾಹಿಯೂ ಬ್ಯಾಂಕುಗಳ ಆಧಿಪತ್ಯವೂ, ಎಲ್ಲ ರೀತಿನೀತಿಗಳ ಪ್ರಜಾಸತ್ತಾತ್ಮಕ ಗಣತಂತ್ರಗಳಲ್ಲೂ ಸಂಪತ್ತಿನ ಸರ್ವಶಕ್ತತೆಯನ್ನು ಪರಿಣಾಮಕಾರಿಯನ್ನಾಗಿ ಮಾಡುವ ಹಾಗೂ ಅದನ್ನು ಎತ್ತಿ ಹಿಡಿಯುವ ಈ ಎರಡು ವಿಧಾನಗಳನ್ನೂ ಅಸಾಧಾರಣ ಕಲೆಯನ್ನಾಗಿ "ಬೆಳೆಸಿವೆ." ಉದಾಹರಣೆಗೆ, ರಷ್ಯನ್ ಪ್ರಜಾಸತ್ತಾತ್ಮಕ ಗಣತಂತ್ರದ ಮೊದಲ ತಿಂಗಳುಗಳಲ್ಲಿ, ಅಂದರೆ ಬೂರ್ಷ್ವಾಸೀಯೊಂದಿಗೆ ಸಮ್ಮಿಶ್ರ ಸರಕಾರದಲ್ಲಿ "ಸಮಾಜವಾದಿ" ಮೆನ್ಷೆವಿಕರ ಮತ್ತು ಸಮಾಜವಾದಿ-ಕ್ರಾಂತಿಕಾರಿಗಳ ವಿವಾಹನಂತರದ ಮಧುಮಾಸದಲ್ಲಿ ಎಂದು ಹೇಳಬಹುದು, ಬಂಡವಾಳಗಾರರನ್ನೂ ಅವರ ದರೋಡೆಕೋರ ಕಾರ್ಯಾಚರಣೆಗಳನ್ನೂ, ಯುದ್ಧ ಕಾಂಟ್ರಾಕ್ಟುಗಳ ಮೂಲಕ ಅವರು ರಾಜ್ಯವನ್ನು ಸೂರೆ ಮಾಡುತ್ತಿದ್ದುದನ್ನೂ ನಿಗ್ರಹಿಸುವ ಉದ್ದೇಶ ಹೊಂದಿದ್ದ ಪ್ರತಿಯೊಂದು ಕ್ರಮಕ್ಕೂ ಮಿ. ಪಾಲ್‌ಚಿನ್‌ಸ್ಕಿಯವರು ಅಡಚಣೆ ತಂದೊಡ್ಡಿದರು. ಅನಂತರ ಅವರು ರಾಜಿನಾಮೆ ನೀಡಿ ಸಚಿವ ಸಂಪುಟದಿಂದ ಹೊರಬಂದಾಗ (ಅವರ ಸ್ಥಳದಲ್ಲಿ ಮಿ. ಪಾಲ್‌ಚಿನ್‌ಸ್ಕಿಯಂಥವರೇ ಮತ್ತೊಬ್ಬರನ್ನು ನೇಮಿಸಲಾಯಿತೆನ್ನಿ) ಬಂಡವಾಳಶಾಹಿಗಳು ಅವರಿಗೆ ವರ್ಷಕ್ಕೆ 120.000 ರೂಬಲ್ ಸಂಬಳ ತರುವ ಲಾಭದಾಯಕವಾದ ಕೆಲಸವೊಂದನ್ನು "ಬಳುವಳಿ"ಯನ್ನಾಗಿ ನೀಡಿದರು. ಇದನ್ನು ನೀವು ಏನೆಂದು ಕರೆಯುತ್ತೀರಿ? ಪ್ರತ್ಯಕ್ಷ ಅಥವಾ ಪರೋಕ್ಷ ಲಂಚವೆಂದೇ? ಸರಕಾರ ಹಾಗೂ ಸಿಂಡಿಕೇಟ್‌ಗಳ ಮೈತ್ರೀಕೂಟ ಎಂದೇ ಅಥವಾ "ಕೇವಲ" ಸ್ನೇಹ ಸಂಬಂಧಗಳು ಎಂದೇ? ಚೆರ್ನೋವ್‌ಗಳೂ, ತ್ಸೆರೆತೇಲಿಗಳೂ, ಅವ್‌ಕ್ಸೇಂತ್ಯೆವ್‌ಗಳೂ ಮತ್ತು ಸ್ಕೋಬೆಲೆವ್‌ಗಳೂ ಇದರಲ್ಲಿ ಯಾವ ಪಾತ್ರ ನಿರ್ವಹಿಸುತ್ತಾರೆ? ಅವರು ಕೋಶಾಗಾರವನ್ನು ದೋಚುವ ಲಕ್ಷಾಧಿಪತಿಗಳ "ಪ್ರತ್ಯಕ್ಷ" ಸಂಗಡಿಗರೇ ಅಥವಾ ಕೇವಲ ಪರೋಕ್ಷ ಸಂಗಡಿಗರೇ?

"ಸಂಪತ್ತಿ"ನ ಸರ್ವಶಕ್ತತೆ ಪ್ರಜಾಸತ್ತಾತ್ಮಕ ಗಣತಂತ್ರದಲ್ಲಿ ಏಕೆ ಹೆಚ್ಚು ಖಚಿತವಾಗಿರುತ್ತದೆ ಎಂಬುದಕ್ಕೆ ಕಾರಣ, ಅದು ರಾಜಕೀಯ ಯಂತ್ರದಲ್ಲಿ ಬಿಡಿ ನ್ಯೂನತೆಗಳ ಮೇಲೆ ಅಥವಾ ಬಂಡವಾಳವಾದದ ದೋಷಯುಕ್ತ ರಾಜಕೀಯ ಕವಚದ ಮೇಲೆ ಅವಲಂಬಿಸಿಲ್ಲ ಎಂಬುದಾಗಿದೆ. ಪ್ರಜಾಸತ್ತಾತ್ಮಕ ಗಣತಂತ್ರವು ಬಂಡವಾಳ

ವಾದಕ್ಕೆ ಅತ್ಯುತ್ತಮ ರಾಜಕೀಯ ಕವಚವಾಗಿರುತ್ತದೆ. ಆದ್ದರಿಂದ ಒಮ್ಮೆ ಬಂಡವಾಳವು ಈ ಅತ್ಯುತ್ತಮ ಕವಚವನ್ನು ವಶಪಡಿಸಿಕೊಂಡಿತೆಂದರೆ (ಪಾಲ್‌ಚಿನ್‌ಸ್ಕಿಗಳ, ಚೆರ್ನೋವ್‌ಗಳ, ತ್ಸೆರೆತೇಲಿಗಳ ಇವರೇ ಮುಂತಾದವರ ಮೂಲಕ), ಅದು ತನ್ನ ಅಧಿಕಾರವನ್ನು ಎಷ್ಟು ಭದ್ರವಾಗಿ, ಎಷ್ಟು ದೃಢವಾಗಿ ಸ್ಥಾಪಿಸುತ್ತದೆಂದರೆ, ಬೂರ್ಷ್ವಾ-ಪ್ರಜಾಸತ್ತಾತ್ಮಕ ಗಣತಂತ್ರದಲ್ಲಿ ಯಾವುದೇ ವ್ಯಕ್ತಿಗಳ ಸಂಸ್ಥೆಗಳ ಅಥವಾ ಪಾರ್ಟಿಗಳ ಬದಲಾವಣೆಯೂ ಅದನ್ನು ಕದಲಿಸಲು ಸಮರ್ಥವಾಗುವುದಿಲ್ಲ.

ಸಾರ್ವತ್ರಿಕ ಮತದಾನದ ಹಕ್ಕನ್ನು ಎಂಗೆಲ್ಸ್‌ರು ಬೂರ್ಷ್ವಾ ಆಧಿಪತ್ಯದ ಸಾಧನವೆಂದು ಅತ್ಯಂತ ಸ್ಪಷ್ಟವಾಗಿ ಕರೆದಿರುವುದನ್ನೂ ನಾವು ಗಮನಿಸಬೇಕು. ಜರ್ಮನ್ ಸೋಷಲ್ ಡೆಮೊಕ್ರಸಿಯ ಸುದೀರ್ಘ ಅನುಭವವನ್ನು ಸ್ಪಷ್ಟವಾಗಿಯೇ ಗಣನೆಗೆ ತಂದುಕೊಂಡು ಅವರು, ಸಾರ್ವತ್ರಿಕ ಮತದಾನದ ಹಕ್ಕು "ಕಾರ್ಮಿಕ ವರ್ಗದ ಪರಿಪಕ್ವತೆಯ ಒಂದು ಅಳತೆಗೋಲಾಗಿದೆ, ಇಂದಿನ ರಾಜ್ಯದಲ್ಲಿ ಅದು ಇದಕ್ಕಿಂತ ಹೆಚ್ಚಿಗೆ ನೀಡಲು ಸಾಧ್ಯವೂ ಇಲ್ಲ, ಎಂದಿಗೂ ಹೆಚ್ಚಿಗೆ ನೀಡಲಾರದು ಕೂಡ," ಎಂದು ಹೇಳುತ್ತಾರೆ.

ನಮ್ಮ ಸಮಾಜವಾದಿ-ಕ್ರಾಂತಿಕಾರಿಗಳು ಹಾಗೂ ಮೆನ್ಷೆವಿಕರಂಥ ಪೆಟಿ ಬೂರ್ಷ್ವಾ ಪ್ರಜಾಪ್ರಭುತ್ವವಾದಿಗಳು, ಅವರ ಅವಳಿ ಸೋದರರೂ ಸಹ – ಪಶ್ಚಿಮ ಯೂರೋಪಿನ ಎಲ್ಲ ಸಾಮಾಜಿಕ ಸ್ವದೇಶ ಮೂಢಾಭಿಮಾನಿಗಳು ಮತ್ತು ಸಂದರ್ಭಸಾಧಕರು – ಸಾರ್ವತ್ರಿಕ ಮತದಾನ ಹಕ್ಕಿನಿಂದ ಈ "ಹೆಚ್ಚಿಗೆ"ಯನ್ನು ನಿರೀಕ್ಷಿಸುತ್ತಾರೆ. ಸಾರ್ವತ್ರಿಕ ಮತದಾನ ಹಕ್ಕು "ಇಂದಿನ ರಾಜ್ಯದಲ್ಲಿ" ದುಡಿಯುವ ಜನರ ಬಹುಮತದ ಸಂಕಲ್ಪವನ್ನು ನಿಜಕ್ಕೂ ನಿರ್ಧರಿಸಬಲ್ಲುದು ಮತ್ತು ಜೀವನದಲ್ಲಿ ಆ ಸಂಕಲ್ಪದ ಈಡೇರಿಕೆಯನ್ನು ಸಾಧಿಸಬಲ್ಲುದು, ಎಂಬ ತಪ್ಪು ಭಾವನೆಯನ್ನು ಅವರು ತಾವು ಹೊಂದಿದ್ದಾರಷ್ಟೆ ಅಲ್ಲ, ಜನರ ಮನಸ್ಸಿನಲ್ಲೂ ತುಂಬುತ್ತಿದ್ದಾರೆ.

ಇಲ್ಲಿ ನಾವು ಈ ತಪ್ಪು ಭಾವನೆಯನ್ನು ಸೂಚಿಸಬಲ್ಲೆವಷ್ಟೆ, ಎಂಗೆಲ್ಸ್‌ರ ಸಂಪೂರ್ಣವಾಗಿ ಸ್ಪಷ್ಟವಾದ, ನಿಷ್ಕೃಷ್ಟವಾದ ಹಾಗೂ ಮೂರ್ತರೂಪದ ಹೇಳಿಕೆಯನ್ನು "ಅಧಿಕೃತ" (ಅಂದರೆ ಸಂದರ್ಭಸಾಧಕ) ಸಮಾಜವಾದಿ ಪಾರ್ಟಿಗಳು ತಮ್ಮ ಪ್ರಚಾರ ಹಾಗೂ ಪ್ರಕ್ಷೋಭೆಯಲ್ಲಿ ಪ್ರತಿ ಹೆಜ್ಜೆಯಲ್ಲೂ ಹೇಗೆ ವಿರೂಪಗೊಳಿಸಿದ್ದಾರೆ ಎಂಬುದನ್ನು ಎತ್ತಿ ತೋರಿಸಬಲ್ಲೆವಷ್ಟೆ. ಎಂಗೆಲ್ಸ್‌ರು ಇಲ್ಲಿ ತಳ್ಳಿ ಹಾಕುವ ಈ ಭಾವನೆ ಎಷ್ಟು ಸಂಪೂರ್ಣವಾಗಿ ದೋಷಯುಕ್ತವಾದುದು ಎಂಬುದನ್ನು ನಾವು ಮುಂದೆ "ಇಂದಿನ" ರಾಜ್ಯದ ಬಗೆಗೆ ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಅಭಿಪ್ರಾಯಗಳನ್ನು ಇನ್ನಷ್ಟು ನೀಡುವಾಗ ವಿವರವಾಗಿ ಬಯಲು ಮಾಡಲಿರುವೆವು.

ಎಂಗೆಲ್ಸ್‌ರು ತಮ್ಮ ಅತ್ಯಂತ ಜನಪ್ರಿಯ ಕೃತಿಯಲ್ಲಿ ತಮ್ಮ ಅಭಿಪ್ರಾಯಗಳ ಸ್ಥೂಲ ಸಾರಾಂಶವನ್ನು ಕೆಳಗಿನ ಮಾತುಗಳಲ್ಲಿ ನೀಡುತ್ತಾರೆ:

"ಅಂದ ಮೇಲೆ ರಾಜ್ಯವು ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿದ್ದುದೇನೂ ಅಲ್ಲ. ಅದಿಲ್ಲದೆ ಇದ್ದುಕೊಂಡು ಬಂದ, ರಾಜ್ಯದ ಹಾಗೂ ರಾಜ್ಯ ಅಧಿಕಾರದ ಭಾವನೆಯೇ ಇರದಿದ್ದ, ಸಮಾಜಗಳೂ ಇದ್ದವು. ಆರ್ಥಿಕ ಬೆಳವಣಿಗೆಯ ಒಂದು ನಿರ್ದಿಷ್ಟ ಘಟ್ಟದಲ್ಲಿ – ಈ ಘಟ್ಟವು ಅವಶ್ಯವಾಗಿಯೇ ಸಮಾಜ ವರ್ಗಗಳಾಗಿ ವಿಭಜನೆಗೊಂಡುದರೊಂದಿಗೆ ಸಂಬಂಧ ಹೊಂದಿದ್ದಿತು – ಈ ವಿಭಜನೆಯ ಕಾರಣದಿಂದಾಗಿಯೇ ರಾಜ್ಯವು ಅವಶ್ಯವಾಯಿತು. ಉತ್ಪಾದನೆಯ ಬೆಳವಣಿಗೆಯಲ್ಲಿ ನಾವೀಗ ಶೀಘ್ರವಾಗಿ ಎಂಥ ಘಟ್ಟ ತಲುಪುತ್ತಿದ್ದೇವೆಂದರೆ ಆ ಘಟ್ಟದಲ್ಲಿ ವರ್ಗಗಳ ಅಸ್ತಿತ್ವವು ಅವಶ್ಯವಾಗಿ ಇರುವುದಿಲ್ಲವಷ್ಟೆ ಅಲ್ಲ, ಅದು ಉತ್ಪಾದನೆಗೆ ನೇರ ಅಡಚಣೆಯಾಗಿಯೂ ಬೆಳೆಯುತ್ತದೆ. ವರ್ಗಗಳು ಆ ಮುನ್ನಿನ ಘಟ್ಟದಲ್ಲಿ ಎಷ್ಟು ಅನಿವಾರ್ಯವಾಗಿ ಉದ್ಭವವಾದವೋ ಅಷ್ಟೇ ಅನಿವಾರ್ಯವಾಗಿ ಪತನವಾಗುತ್ತವೆ. ಅವುಗಳ ಜೊತೆಗೇ ರಾಜ್ಯವೂ ಅನಿವಾರ್ಯವಾಗಿಯೇ ಪತನವಾಗುತ್ತದೆ. ಅನಂತರ ಉತ್ಪಾದಕರ ಸಮಾನ ಹಾಗೂ ಸ್ವತಂತ್ರ ಸಹಕಾರ್ಯದ ಆಧಾರದ ಮೇಲೆ ಉತ್ಪಾದನೆಯನ್ನು ಪುನರ್‌ಸಂಘಟಿಸುವ ಸಮಾಜವು ಇಡೀ ರಾಜ್ಯಯಂತ್ರವನ್ನು ಅದು ಆಗ ಎಲ್ಲಿ ಸೇರಬೇಕೋ ಅಲ್ಲಿಗೆ – ಪುರಾತನ ಅವಶೇಷಗಳ ಸಂಗ್ರಹಾಲಯದಲ್ಲಿ, ನೂಲುವ ರಾಟೆ ಹಾಗೂ ಕಂಚಿನ ಕೊಡಲಿಯ ಪಕ್ಕಕ್ಕೆ – ಸೇರಿಸುತ್ತದೆ."

ಎಂಗೆಲ್ಸ್‌ರ ಕೃತಿಯ ಈ ಭಾಗವನ್ನು ನಾವು ಸಾಮಾನ್ಯವಾಗಿ ಈಗಿನ ಸೋಷಲ್ ಡೆಮೊಕ್ರಾಟರ ಪ್ರಚಾರ-ಪ್ರಕ್ಷೋಭೆ ಬರಹಗಳಲ್ಲಿ ಕಾಣುವುದೇ ಇಲ್ಲ. ಕಂಡರೂ ಅದನ್ನು ಬಹುಮಟ್ಟಿಗೆ ವಿಗ್ರಹದ ಮುಂದೆ ಬಾಗಿ ನಮಿಸುವ ರೀತಿಯಲ್ಲಿ ಉದ್ಧರಿಸಿರಲಾಗುತ್ತದೆ. ಅಂದರೆ ಎಂಗೆಲ್ಸ್‌ರಿಗೆ ಅಧಿಕೃತ ಗೌರವ ತೋರಲಷ್ಟೆ ಅದನ್ನು ಉದ್ಧರಿಸಿರಲಾಗುತ್ತದೆ. "ಇಡೀ ರಾಜ್ಯಯಂತ್ರವನ್ನು ಪುರಾತನ ಅವಶೇಷಗಳ ಸಂಗ್ರಹಾಲಯಕ್ಕೆ" ತಳ್ಳಿ ಬಿಡುವ ಕ್ರಿಯೆಯು ಸೂಚಿಸುವ ಕ್ರಾಂತಿಯ ಅಗಲ ಆಳಗಳನ್ನು ಅಳೆದು ನೋಡುವ ಯಾವ ಯತ್ನವನ್ನೂ ಇವುಗಳಲ್ಲಿ ಮಾಡಿರುವುದಿಲ್ಲ. ಬಹು ಪ್ರಸಂಗಗಳಲ್ಲಿ ನಾವು ಎಂಗೆಲ್ಸ್‌ರು ರಾಜ್ಯಯಂತ್ರ ಎಂದು ಯಾವುದನ್ನು ಕರೆಯುತ್ತಾರೆ ಎಂಬುದರ ಅರಿವು ಇರುವುದನ್ನು ಕೂಡ ಇವುಗಳಲ್ಲಿ ಕಾಣುವುದಿಲ್ಲ.

## 4. ರಾಜ್ಯವು "ಕ್ಷಯಿಸಿಹೋಗುವುದು" ಮತ್ತು ಬಲೋದ್ಭಂಥ ಕ್ರಾಂತಿ

ರಾಜ್ಯವು "ಕ್ಷಯಿಸಿಹೋಗುವುದ"ಕ್ಕೆ ಸಂಬಂಧಿಸಿದ ಎಂಗೆಲ್ಸ್‌ರ ಮಾತುಗಳು ಸುವಿದಿತವಾಗಿವೆ. ಅವನ್ನು ತುಂಬ ಆಗಾಗ್ಗೆ ಉದ್ಧರಿಸಲಾಗುತ್ತದೆ. ಮಾರ್ಕ್ಸ್‌ವಾದ

ವನ್ನು ಸಂದರ್ಭಸಾಧಕವಾದಕ್ಕೆ ಮಾರ್ಪಡಿಸುವ ಈಗಿನ ಅಭ್ಯಾಸದ ಸಾರವನ್ನೂ ಆ ಮಾತುಗಳು ಸುಸ್ಪಷ್ಟವಾಗಿ ಹೊರಗೆಡಹುತ್ತವೆ. ಆದ್ದರಿಂದ ನಾವು ಅವನ್ನು ಹೆಚ್ಚು ವಿಶದವಾಗಿ ಪರ್ಯಾಲೋಚಿಸಬೇಕು. ಈ ಮಾತುಗಳನ್ನು ಎಂಗೆಲ್ಸ್‌ರ ಲೇಖನದ ಯಾವ ಭಾಗದಿಂದ ತೆಗೆದುಕೊಳ್ಳಲಾಗಿದೆಯೋ ಆ ಇಡೀ ಭಾಗವನ್ನೇ ಉದ್ಧರಿಸೋಣ:

> "ಶ್ರಮಜೀವಿ ವರ್ಗವು ರಾಜ್ಯಾಧಿಕಾರವನ್ನು ವಶಪಡಿಸಿಕೊಳ್ಳುತ್ತದೆ ಮತ್ತು ಮೊದಲ ಕ್ರಮವಾಗಿ ಉತ್ಪಾದನಾ ಸಾಧನಗಳನ್ನು ರಾಜ್ಯದ ಆಸ್ತಿಯನ್ನಾಗಿ ಪರಿವರ್ತಿಸುತ್ತದೆ. ಆದರೆ ಹಾಗೆ ಮಾಡುವಾಗ ಅದು ಶ್ರಮಜೀವಿ ವರ್ಗವಾಗಿ ತನ್ನನ್ನೇ ಅಳಿಸಿ ಹಾಕಿಕೊಳ್ಳುತ್ತದೆ, ಎಲ್ಲ ವರ್ಗ ವೈಪರೀತ್ಯಗಳನ್ನೂ ಎಲ್ಲ ವರ್ಗ ವೈರುಧ್ಯತೆಗಳನ್ನೂ ತೊಡೆದು ಹಾಕುತ್ತದೆ ಮತ್ತು ರಾಜ್ಯವನ್ನು ರಾಜ್ಯವಾಗಿಯೂ ತೊಡೆದು ಹಾಕುತ್ತದೆ. ವರ್ಗ ವೈರುಧ್ಯತೆಗಳ ಮಧ್ಯೆ ಕಾರ್ಯ ನಿರ್ವಹಿಸುತ್ತಿದ್ದ ಸಮಾಜಕ್ಕೆ ಇದುವರೆವಿಗೂ ರಾಜ್ಯದ, ಅಂದರೆ ಆ ವಿಶಿಷ್ಟ ಶೋಷಕ ವರ್ಗದ ಸಂಘಟನೆಯ, ಆವಶ್ಯಕತೆ ಇದ್ದಿತು. ಉತ್ಪಾದನೆಯ ಬಾಹ್ಯ ಪರಿಸ್ಥಿತಿಗಳನ್ನು ಕಾಪಾಡಿಕೊಂಡು ಬರಲು, ಆ ನಿರ್ದಿಷ್ಟ ಉತ್ಪಾದನಾ ವಿಧಾನಗಳು (ಗುಲಾಮಗಿರಿ, ಜೀತದಾಳು ಅಥವಾ ದಾಸ್ಯ, ಕೂಲಿಕೆಲಸ ಇವುಗಳು) ನಿರ್ಧರಿಸುವ ಮರ್ದನದ ಪರಿಸ್ಥಿತಿಗಳಲ್ಲಿ ಶೋಷಿತ ವರ್ಗವನ್ನು ಬಲೋದ್ಬಂಧದಲ್ಲಿ ಇರಿಸುವ ಉದ್ದೇಶಕ್ಕಾಗಿ ವಿಶೇಷವಾಗಿ ಶೋಷಕ ವರ್ಗಕ್ಕೆ ಅದರ ಆವಶ್ಯಕತೆ ಇದ್ದಿತು. ರಾಜ್ಯವು ಇಡೀ ಸಮಾಜದ ಅಧಿಕೃತ ಪ್ರತಿನಿಧಿಯಾಗಿದ್ದಿತು, ಸಮಾಜದ ಸಾರೀಕೃತವಾದ ಕಣ್ಣಿಗೆ ಕಾಣುವಂಥ ಸಂಸ್ಥೆಯಾಗಿದ್ದಿತು ಅದು. ಅಂದರೆ ಯಾವ ವರ್ಗ, ತನ್ನ ಕಾಲದಲ್ಲಿ, ಇಡೀ ಸಮಾಜವನ್ನು ಪ್ರತಿನಿಧಿಸುತ್ತಿದ್ದಿತೋ ಆ ವರ್ಗದ ರಾಜ್ಯವಾಗಿಯಷ್ಟೆ ಆಗಿದ್ದಿತು. ಪುರಾತನ ಕಾಲದಲ್ಲಿ ಅದು ಗುಲಾಮರ ಮೇಲೆ ಒಡೆತನ ಹೊಂದಿದ್ದ ಪ್ರಜೆಗಳ ರಾಜ್ಯವಾಗಿದ್ದಿತು; ಮಧ್ಯಯುಗದಲ್ಲಿ ಅದು ಸಾಮಂತಶಾಹಿ ಕುಲೀನರ ರಾಜ್ಯವಾಗಿದ್ದಿತು; ನಮ್ಮ ಕಾಲದಲ್ಲಿ ಬೂರ್ಷ್ವಾಸೀಯ ರಾಜ್ಯವಾಗಿದೆ. ಕೊನೆಯಲ್ಲಿ ಅದು ಇಡೀ ಸಮಾಜದ ನಿಜವಾದ ಪ್ರತಿನಿಧಿಯಾದಾಗ ಅದು ತನ್ನನ್ನು ಅನಾವಶ್ಯಕವನ್ನಾಗಿ ಮಾಡಿಕೊಳ್ಳುತ್ತದೆ. ಅಧೀನದಲ್ಲಿ ಇರಿಸಬೇಕಾದಂತಹ ಯಾವ ಸಾಮಾಜಿಕ ವರ್ಗವೂ ಎಷ್ಟು ಮಾತ್ರವೂ ಇಲ್ಲದಂತಾದ ಕೂಡಲೇ, ವರ್ಗ ಆಧಿಪತ್ಯವೂ ಇಂದಿನ ಉತ್ಪಾದನೆಯಲ್ಲಿ ಅರಾಜಕತೆ ಇರುವುದರಿಂದ ವ್ಯಕ್ತಿಗಳು ಪ್ರತ್ಯೇಕ ಅಸ್ತಿತ್ವಕ್ಕಾಗಿ ನಡೆಸುವ ಹೋರಾಟವೂ ಈ ಹೋರಾಟದಿಂದ ಉದ್ಭವವಾಗುವ ಸಂಘಟ್ಟನೆಗಳೂ

ಅತಿರೇಕಗಳೂ ಇಲ್ಲವಾದ ಕೂಡಲೇ, ಅಧೀನದಲ್ಲಿರಿಸಲು ಬೇರೇನೂ ಉಳಿದಿರುವುದಿಲ್ಲ, ರಾಜ್ಯವೆಂಬ ವಿಶೇಷ ಬಲೋದ್ಬಂಧದ ಶಕ್ತಿಯನ್ನು ಅವಶ್ಯವನ್ನಾಗಿ ಮಾಡುವಂತಹುದೇನೂ ಉಳಿದಿರುವುದಿಲ್ಲ. ರಾಜ್ಯವು ನಿಜಕ್ಕೂ ಇಡೀ ಸಮಾಜದ ಪ್ರತಿನಿಧಿಯಾಗಿ ಮುಂದೆ ಬಂದು ನಿರ್ವಹಿಸುವ ಮೊದಲ ಕ್ರಮವು – ಸಮಾಜದ ಹೆಸರಿನಲ್ಲಿ ಉತ್ಪಾದನಾ ಸಾಧನಗಳನ್ನು ವಶಪಡಿಸಿಕೊಳ್ಳುವ ಕ್ರಮವು – ರಾಜ್ಯವಾಗಿ ಅದರ ಕೊನೆಯ ಸ್ವತಂತ್ರ ಕ್ರಿಯೆಯೂ ಆಗಿರುತ್ತದೆ. ಸಾಮಾಜಿಕ ಸಂಬಂಧಗಳಲ್ಲಿ ರಾಜ್ಯಾಧಿಕಾರದ ಹಸ್ತಕ್ಷೇಪವು ಒಂದು ಕ್ಷೇತ್ರದ ನಂತರ ಮತ್ತೊಂದರಲ್ಲಿ ಅನಾವಶ್ಯಕವಾಗುತ್ತ ಹೋಗುತ್ತದೆ ಮತ್ತು ಅನಂತರ ತನಗೆ ತಾನೇ ಇಲ್ಲವಾಗುತ್ತದೆ. ವ್ಯಕ್ತಿಗಳ ಮೇಲಿನ ಸರಕಾರದ ಸ್ಥಳದಲ್ಲಿ ವಸ್ತು ವಿಷಯಗಳ ಮೇಲಿನ ನಿರ್ವಹಣೆ, ಉತ್ಪಾದನಾ ಪ್ರಕ್ರಿಯೆಗಳ ಮೇಲಿನ ನಿಯಂತ್ರಣ ಸ್ಥಾಪಿತವಾಗುತ್ತವೆ. ರಾಜ್ಯವೇನೂ "ತೊಡೆದು ಹಾಕಲ್ಪಡುವುದಿಲ್ಲ." ಅದು ತನ್ನಷ್ಟಕ್ಕೆ ತಾನೆ ಕ್ಷಯಿಸಿಹೋಗುತ್ತದೆ. ಇದು "ಒಂದು ಸ್ವತಂತ್ರ ಜನತಾ ರಾಜ್ಯ" ಎಂಬ ಪದಗುಚ್ಛದ ಮೌಲ್ಯ ಎಷ್ಟೆಂಬುದರ ಭಾವನೆಯನ್ನು ನೀಡುತ್ತದೆ. ಪ್ರಕ್ಷೋಭೆಯ ದೃಷ್ಟಿಯಿಂದ ಸ್ವಲ್ಪ ಕಾಲದವರೆಗೆ ಸಮರ್ಥನೀಯವಾಗಿಯೇ ಬಳಸುವ ಈ ಪದಗುಚ್ಛದ ಮೌಲ್ಯವನ್ನಷ್ಟೆ ಅಲ್ಲ, ಅಂತಿಮವಾಗಿ ವೈಜ್ಞಾನಿಕವಾಗಿ ಅದು ಎಷ್ಟು ಅಸಮರ್ಪಕ ಎಂಬುದನ್ನೂ ತೋರಿಸಿಕೊಡುತ್ತದೆ. ರಾಜ್ಯವನ್ನು ತಕ್ಷಣವೇ ತೊಡೆದು ಹಾಕಬೇಕೆಂಬ ಅರಾಜಕತಾವಾದಿಗಳ ಕೇಳಿಕೆಯ ಮೌಲ್ಯ ಎಷ್ಟೆಂಬುದನ್ನೂ ಇದು ತೋರಿಸಿಕೊಡುತ್ತದೆ." ('ವಿಜ್ಞಾನದಲ್ಲಿ ಮಾನ್ಯ ಎವ್‌ಗೆನಿ ಡ್ಯೂರಿಂಗ್ ಸಾಧಿಸಿದ ಕ್ರಾಂತಿ' ['ಆ್ಯಂಟಿ ಡ್ಯೂರಿಂಗ್'], ಪು. 301-303, ಮೂರನೆಯ ಜರ್ಮನ್ ಆವೃತ್ತಿ.)[43]

ಅನೇಕ ಅಸಾಧಾರಣ ವಿಚಾರಗಳಿಂದ ಸಿರಿವಂತವಾಗಿರುವ ಎಂಗೆಲ್ಸ್‌ರ ಈ ವಾದದಲ್ಲಿ ಕೇವಲ ಒಂದು ಅಂಶವಷ್ಟೆ – ರಾಜ್ಯ "ಕ್ಷಯಿಸಿಹೋಗುತ್ತದೆ" ಎಂಬ ಅಂಶವಷ್ಟೆ – ಆಧುನಿಕ ಸಮಾಜವಾದಿ ಪಾರ್ಟಿಗಳ ಸಮಾಜವಾದಿ ಚಿಂತನೆಯ ಅವಿಭಾಜ್ಯ ಭಾಗವಾಗಿದೆ, ಎಂದು ಹೇಳಿದರೆ ತಪ್ಪಾಗಲಾರದು. ಮಾರ್ಕ್ಸ್‌ರವರ ಪ್ರಕಾರ ರಾಜ್ಯವು "ಕ್ಷಯಿಸಿಹೋಗುತ್ತದೆ," ಇದು ಅರಾಜಕತಾವಾದಿ ಸಿದ್ಧಾಂತ ಹೇಳುವಂತೆ ರಾಜ್ಯವನ್ನು "ತೊಡೆದು ಹಾಕುವುದ"ರಿಂದ ಭಿನ್ನ ಎಂಬುದನ್ನಷ್ಟೆ ಅವರು ತೆಗೆದುಕೊಂಡಿದ್ದಾರೆ. ಮಾರ್ಕ್ಸ್‌ವಾದವನ್ನು ಇಷ್ಟೊಂದು ಪರಿಷ್ಕರಿಸುವುದೆಂದರೆ ಅದನ್ನು ಸಂದರ್ಭಸಾಧಕವಾದಕ್ಕೆ ಇಳಿಸಿದಂತಾಗುತ್ತದೆ. ಏಕೆಂದರೆ ಈ "ವ್ಯಾಖ್ಯಾನ"ವು, ಬದಲಾವಣೆಯು ನಿಧಾನವಾಗಿ ಕ್ರಮಕ್ರಮವಾಗಿ ಜರುಗುತ್ತದೆ, ಅದರಲ್ಲಿ ಮುನ್ನೆಗೆತಗಳು ಬಿರುಗಾಳಿಗಳು ಇರುವುದಿಲ್ಲ, ಕ್ರಾಂತಿಯು ಇರುವುದಿಲ್ಲ,

ಎಂಬ ಬಗೆಗೆ ಅಸ್ಪಷ್ಟ ಭಾವನೆಯನ್ನಷ್ಟೆ ಉಂಟುಮಾಡುತ್ತದೆ. ರಾಜ್ಯವು "ಕ್ಷಯಿಸಿ ಹೋಗುವುದಕ್ಕೆ" ಸಂಬಂಧಿಸಿ ಈಗ ವ್ಯಾಪಕವಾಗಿರುವ, ಹೀಗೆ ಹೇಳಬಹುದಾದರೆ, ಜನಪ್ರಿಯವೂ ಆಗಿರುವ, ಪ್ರಕಲ್ಪನೆಯು ಕ್ರಾಂತಿಯನ್ನು ನಿರಾಕರಿಸದಿದ್ದಲ್ಲಿ ಕೊನೆಯ ಪಕ್ಷ ಮಸುಕುಗೊಳಿಸುತ್ತದೆ ಎಂದಂತೂ ನಿಸ್ಸಂದೇಹವಾಗಿಯೂ ಅರ್ಥ ನೀಡುತ್ತದೆ.

ಅಲ್ಲದೆ ಅಂಥ "ವ್ಯಾಖ್ಯಾನ"ವು ಮಾರ್ಕ್ಸ್‌ವಾದದ ಅತ್ಯಂತ ಒರಟು ರೀತಿಯ ವಿಕೃತೀಕರಣವಾಗಿದೆ. ಅದು ಬೂರ್ಷ್ವಾಸೀಗಷ್ಟೆ ಅನುಕೂಲವಾದುದು. ಸೈದ್ಧಾಂತಿಕ ವಾಗಿ ಅದು, ನಾವು ಈಗಷ್ಟೆ ಪೂರ್ಣವಾಗಿ ಉದ್ಧರಿಸಿರುವ ಎಂಗೆಲ್ಸ್‌ರ "ಕ್ರೋಡೀಕರಿಸುವ" ವಾದದಲ್ಲಿ ಸೂಚಿತವಾದ ಅತ್ಯಂತ ಮುಖ್ಯ ಪರಿಸ್ಥಿತಿ ಪರಿಗಣನೆಗಳನ್ನೆಲ್ಲ ಉಪೇಕ್ಷಿಸುವುದರ ಮೇಲೆ ಆಧರಿಸಿದೆ.

ಮೊದಲನೆಯದಾಗಿ, ತಮ್ಮ ವಾದದ ಆರಂಭದಲ್ಲೇ ಎಂಗೆಲ್ಸ್‌ರು ರಾಜ್ಯಾಧಿಕಾರವನ್ನು ವಶಪಡಿಸಿಕೊಂಡು ಶ್ರಮಜೀವಿ ವರ್ಗವು ತನ್ಮೂಲಕ "ರಾಜ್ಯವನ್ನು ರಾಜ್ಯವಾಗಿ ತೊಡೆದು ಹಾಕುತ್ತದೆ" ಎಂದು ತಿಳಿಸಿದ್ದಾರೆ. ಇದರ ಅರ್ಥದ ಬಗೆಗೆ ವಿಚಾರ ಮಾಡುವುದು "ಅಭ್ಯಾಸವಿಲ್ಲ." ಸಾಮಾನ್ಯವಾಗಿ ಇದನ್ನು ಸಂಪೂರ್ಣವಾಗಿ ಉಪೇಕ್ಷಿಸಲಾಗುತ್ತದೆ, ಇಲ್ಲವೇ ಇದು ಎಂಗೆಲ್ಸ್‌ರಲ್ಲಿ ಕಂಡುಬರುವ "ಹೆಗಲ್ ರೀತಿಯ ದೌರ್ಬಲ್ಯ"ದ ಲಕ್ಷಣವೆಂದು ಪರಿಗಣಿಸಲಾಗುತ್ತದೆ. ಆದರೆ ವಾಸ್ತವವಾಗಿ ಈ ಮಾತುಗಳು ಅತ್ಯಂತ ಮಹೋನ್ನತವಾದ ಶ್ರಮಜೀವಿ ವರ್ಗದ ಕ್ರಾಂತಿಗಳಲ್ಲೊಂದಾದ 1871ರ ಪ್ಯಾರಿಸ್ ಕಮ್ಯೂನ್‌ನ ಅನುಭವವನ್ನು ಸ್ಥೂಲವಾಗಿ ವ್ಯಕ್ತಪಡಿಸುತ್ತವೆ. ಈ ಪ್ಯಾರಿಸ್ ಕಮ್ಯೂನ್‌ನ ಬಗೆಗೆ ನಾವು ಮುಂದೆ ಸೂಕ್ತ ಸ್ಥಳದಲ್ಲಿ ಹೆಚ್ಚು ವಿವರವಾಗಿ ಹೇಳುವೆವು. ವಾಸ್ತವವಾಗಿ ಎಂಗೆಲ್ಸ್‌ರು ಇಲ್ಲಿ ಶ್ರಮಜೀವಿ ವರ್ಗದ ಕ್ರಾಂತಿಯು ಬೂರ್ಷ್ವಾ ರಾಜ್ಯವನ್ನು "ತೊಡೆದು ಹಾಕುವುದರ" ಬಗೆಗೆ ಹೇಳುತ್ತಾರೆ. ರಾಜ್ಯವು ಕ್ಷಯಿಸಿಹೋಗುವ ಮಾತುಗಳು ಸಮಾಜವಾದಿ ಕ್ರಾಂತಿಯ ನಂತರ ಶ್ರಮಜೀವಿ ವರ್ಗ ರಾಜ್ಯದ ಅವಶೇಷಗಳಿಗೆ ಸಂಬಂಧಿಸಿದವು. ಎಂಗೆಲ್ಸ್‌ರ ಪ್ರಕಾರ ಬೂರ್ಷ್ವಾ ರಾಜ್ಯವು "ಕ್ಷಯಿಸಿಹೋಗುವು"ದಿಲ್ಲ, ಆದರೆ ಅದನ್ನು ಶ್ರಮಜೀವಿ ವರ್ಗವು ಕ್ರಾಂತಿಯ ಸಮಯದಲ್ಲಿ "ತೊಡೆದು ಹಾಕುತ್ತದೆ." ಈ ಕ್ರಾಂತಿಯ ನಂತರ ಕ್ಷಯಿಸಿಹೋಗುವುದೇ ಶ್ರಮಜೀವಿ ವರ್ಗದ ರಾಜ್ಯ ಅಥವಾ ಅರೆರಾಜ್ಯ.

ಎರಡನೆಯದಾಗಿ, ರಾಜ್ಯವು ಒಂದು "ವಿಶೇಷ ಬಲೋದ್ಬಂಧದ ಶಕ್ತಿ." ಎಂಗೆಲ್ಸ್‌ರು ಈ ಭವ್ಯವಾದ ಹಾಗೂ ಅತ್ಯಂತ ಪ್ರಗಾಢವಾದ ನಿರೂಪಣೆಯನ್ನು ಇಲ್ಲಿ ಅತ್ಯಂತ ಸ್ಪಷ್ಟತೆಯೊಂದಿಗೆ ನೀಡುತ್ತಾರೆ. ಬೂರ್ಷ್ವಾಸೀಯು ಶ್ರಮಜೀವಿ ವರ್ಗವನ್ನು, ಕೆಲವೇ ಶ್ರೀಮಂತ ಜನರು ಲಕ್ಷಾಂತರ ದುಡಿಯುವ ಜನರನ್ನು, ಹತ್ತಿಕ್ಕಲು ಬಳಸುವ ಈ "ವಿಶೇಷ ಬಲೋದ್ಬಂಧದ ಶಕ್ತಿ"ಯ ಸ್ಥಳದಲ್ಲಿ ಶ್ರಮಜೀವಿ ವರ್ಗವು ಬೂರ್ಷ್ವಾಸೀಯನ್ನು ಹತ್ತಿಕ್ಕುವ "ವಿಶೇಷ ಬಲೋದ್ಬಂಧದ ಶಕ್ತಿ"ಯನ್ನು (ಶ್ರಮಜೀವಿ ವರ್ಗದ ಸರ್ವಾಧಿಕಾರತ್ವವನ್ನು) ಸ್ಥಾಪಿಸಬೇಕು, ಎಂದು ಇದರಿಂದ ಅರ್ಥ

ವಾಗುತ್ತದೆ. "ರಾಜ್ಯವನ್ನು ರಾಜ್ಯವಾಗಿ ತೊಡೆದು ಹಾಕುವುದು" ಎಂಬುದಕ್ಕೆ ಸ್ಪಷ್ಟವಾಗಿ ಇದುವೇ ಅರ್ಥವಾಗಿದೆ. ಉತ್ಪಾದನಾ ಸಾಧನಗಳನ್ನು ಸಮಾಜದ ಹೆಸರಿನಲ್ಲಿ ವಶಪಡಿಸಿಕೊಳ್ಳುವ "ಕ್ರಿಯೆ"ಯೂ ಸ್ಪಷ್ಟವಾಗಿ ಇದುವೇ ಆಗಿದೆ. ಹೀಗೆ ಒಂದು (ಬೂರ್ಷ್ವಾ) "ವಿಶೇಷ ಶಕ್ತಿ"ಯ ಸ್ಥಳದಲ್ಲಿ ಇನ್ನೊಂದು (ಶ್ರಮಜೀವಿ ವರ್ಗದ) "ವಿಶೇಷ ಶಕ್ತಿ"ಯನ್ನು ಸ್ಥಾಪಿಸುವುದು "ಕ್ಷಯಿಸಿಹೋಗುವ" ರೂಪದಲ್ಲಿ ಜರುಗುವುದು ಸಾಧ್ಯವಿಲ್ಲವೆಂಬುದು ಸ್ವಯಂಸ್ಪಷ್ಟ.

ಮೂರನೆಯದಾಗಿ, ರಾಜ್ಯವು "ಕ್ಷಯಿಸಿಹೋಗುವ" ವಿಷಯ ಹೇಳುವಾಗ ಅಥವಾ "ತನಗೆ ತಾನೇ ಇಲ್ಲವಾಗುತ್ತದೆ" ಎಂದು ಇನ್ನೂ ಹೆಚ್ಚು ಕಣ್ಣಿಗೆ ಕಟ್ಟುವಂತೆ ಹಾಗೂ ವರ್ಣರಂಜಿತವಾಗಿ ಹೇಳುವಾಗ ಎಂಗೆಲ್ಸ್‌ರು ತುಂಬ ಸ್ಪಷ್ಟವಾಗಿಯೇ ಹಾಗೂ ನಿರ್ದಿಷ್ಟವಾಗಿಯೇ "ರಾಜ್ಯವು ಇಡೀ ಸಮಾಜದ ಹೆಸರಿನಲ್ಲಿ ಉತ್ಪಾದನಾ ಸಾಧನಗಳನ್ನು ವಶಪಡಿಸಿಕೊಂಡ"ನಂತರದ, ಅಂದರೆ ಸಮಾಜವಾದಿ ಕ್ರಾಂತಿಯನಂತರದ, ಕಾಲಾವಧಿಗಷ್ಟೆ ಉಲ್ಲೇಖಿಸುತ್ತಾರೆ. ಆ ಕಾಲದಲ್ಲಿ "ರಾಜ್ಯ"ದ ರಾಜಕೀಯ ರೂಪವು ಅತ್ಯಂತ ಸಂಪೂರ್ಣವಾದ ಪ್ರಜಾಪ್ರಭುತ್ವವಾಗಿರುತ್ತದೆಂಬುದನ್ನು ನಾವೆಲ್ಲ ಬಲ್ಲೆವು. ಆದ್ದರಿಂದ ಎಂಗೆಲ್ಸ್‌ರು ಇಲ್ಲಿ ಪ್ರಜಾಪ್ರಭುತ್ವ "ತನಗೆ ತಾನೇ ಇಲ್ಲವಾಗುವ" ಅಥವಾ "ಕ್ಷಯಿಸಿಹೋಗುವ" ವಿಷಯವನ್ನು ತಿಳಿಸುತ್ತಾರೆ ಎಂಬುದು, ಮಾರ್ಕ್ಸ್‌ವಾದವನ್ನು ನಾಚಿಕೆಗೆಟ್ಟ ರೀತಿಯಲ್ಲಿ ಭ್ರಷ್ಟಗೊಳಿಸುತ್ತಿರುವ ಯಾವುದೇ ಸಂದರ್ಭಸಾಧಕವಾದಿಗಳ ತಲೆಯೊಳಕ್ಕೇ ಹೋಗುವುದಿಲ್ಲ. ಇದು ಮೊದಲ ನೋಟಕ್ಕೆ ತುಂಬ ವಿಚಿತ್ರವೆಂದು ಕಂಡುಬರುತ್ತದೆ. ಆದರೆ ಅದು ಪ್ರಜಾಪ್ರಭುತ್ವವೂ ಒಂದು ರಾಜ್ಯವಾಗಿರುತ್ತದೆ ಮತ್ತು ತತ್ಫಲವಾಗಿ ರಾಜ್ಯ ಕಣ್ಮರೆಯಾದಾಗ ಅದೂ ಕಣ್ಮರೆಯಾಗುತ್ತದೆ ಎಂಬುದರ ಬಗೆಗೆ ಯೋಚನೆ ಮಾಡದೆ ಇರುವವರಿಗಷ್ಟೆ "ಅರ್ಥ ಮಾಡಿಕೊಳ್ಳಲಾಗದುದಾಗಿ" ಇರುತ್ತದೆ. ಕ್ರಾಂತಿಯಷ್ಟೆ ಬೂರ್ಷ್ವಾ ರಾಜ್ಯವನ್ನು "ತೊಡೆದು ಹಾಕ" ಬಲ್ಲುದು. ಸರ್ವಸಾಮಾನ್ಯವಾದ ರಾಜ್ಯವು, ಅಂದರೆ ಅತ್ಯಂತ ಸಂಪೂರ್ಣ ಪ್ರಜಾಪ್ರಭುತ್ವವು, "ಕ್ಷಯಿಸಿಹೋಗ"ಬಲ್ಲುದಷ್ಟೆ.

ನಾಲ್ಕನೆಯದಾಗಿ, "ರಾಜ್ಯವು ಕ್ಷಯಿಸಿಹೋಗುತ್ತದೆ" ಎಂಬ ತಮ್ಮ ಸುಪ್ರಸಿದ್ಧ ಪ್ರತಿಪಾದನೆಯನ್ನು ನಿರೂಪಿಸಿದನಂತರ ಎಂಗೆಲ್ಸ್‌ರು ಒಡನೆಯೇ ಈ ಪ್ರತಿಪಾದನೆ ಅರಾಜಕತಾವಾದಿಗಳ ಹಾಗೂ ಸಂದರ್ಭಸಾಧಕವಾದಿಗಳ ವಿರುದ್ಧ ನಿರ್ದೇಶಿತವಾದುದು ಎಂದು ವಿಶಿಷ್ಟವಾಗಿ ವಿವರಿಸುತ್ತಾರೆ. ಹೀಗೆ ಮಾಡುವಾಗ ಎಂಗೆಲ್ಸ್‌ರು "ರಾಜ್ಯ ಕ್ಷಯಿಸಿಹೋಗುತ್ತದೆ" ಎಂಬ ಪ್ರತಿಪಾದನೆಯಿಂದ ಲಭಿಸಿದ, ಸಂದರ್ಭಸಾಧಕವಾದಿಗಳ ವಿರುದ್ಧ ನಿರ್ದೇಶಿತವಾದ ಆ ತೀರ್ಮಾನವನ್ನೇ ಮುಂದೆ ತರುತ್ತಾರೆ.

ರಾಜ್ಯವು "ಕ್ಷಯಿಸಿಹೋಗುವ" ವಿಷಯವನ್ನು ಓದಿದ ಅಥವಾ ಕೇಳಿದ ಪ್ರತಿ 10,000 ವ್ಯಕ್ತಿಗಳಲ್ಲಿ 9,990 ಮಂದಿ, ಎಂಗೆಲ್ಸ್‌ರು ಈ ಪ್ರತಿಪಾದನೆಯಿಂದ ಬಂದ ತೀರ್ಮಾನಗಳನ್ನು ಅರಾಜಕತಾವಾದಿಗಳ ವಿರುದ್ಧ ಮಾತ್ರವೇ ನಿರ್ದೇಶಿಸಲಿಲ್ಲ

ಎಂಬುದರ ಬಗೆಗೆ ಸಂಪೂರ್ಣವಾಗಿ ಅರಿವಿಲ್ಲದವರಾಗಿದ್ದಾರೆ ಇಲ್ಲವೇ ಜ್ಞಾಪಕದಲ್ಲಿರಿಸಿಲ್ಲ ಎಂದು ಪಣವೊಡ್ಡಿ ಹೇಳಬಹುದಾಗಿದೆ. ಉಳಿದ ಈ ಹತ್ತರಲ್ಲಿ ಬಹುಶಃ ಒಂಬತ್ತು ಮಂದಿ "ಸ್ವತಂತ್ರ ಜನತಾ ರಾಜ್ಯ"ದ ಅರ್ಥವನ್ನು, ಅಥವಾ ಈ ಘೋಷಣೆಯು ಖಂಡನೆ ಏಕೆ ಸಂದರ್ಭಸಾಧಕರ ಖಂಡನೆ ಎಂದರ್ಥವಾಗುತ್ತದೆ ಎಂಬುದನ್ನು, ತಿಳಿಯರು. ಹೀಗೆಯೇ ಇತಿಹಾಸವನ್ನು ಬರೆಯಲಾಗುತ್ತಿರುವುದು! ಹೀಗೆಯೇ ಮಹೋನ್ನತ ಕ್ರಾಂತಿಕಾರಿ ಬೋಧೆಯೊಂದನ್ನು ಅಗೋಚರವಾಗಿ ಮೋಸದಿಂದ ಬದಲಾಯಿಸಲಾಗುತ್ತಿರುವುದು, ಚಾಲ್ತಿಯಲ್ಲಿರುವ ಸಂಕುಚಿತಮನಸ್ಕತೆಗೆ ತಕ್ಕಂತೆ ಮಾರ್ಪಡಿಸಲಾಗುತ್ತಿರುವುದು. ಅರಾಜಕತಾವಾದಿಗಳ ವಿರುದ್ಧ ನಿರ್ದೇಶಿತವಾದ ತೀರ್ಮಾನವನ್ನು ಸಾವಿರಾರು ಬಾರಿ ಪದೇಪದೇ ಹೇಳಲಾಗಿದೆ; ಅದನ್ನು ಪ್ರಾಕೃತಗೊಳಿಸಲಾಗಿದೆ, ಅತ್ಯಂತ ಕ್ಷುಲ್ಲಕ ರೀತಿಯಲ್ಲಿ ಜನರ ತಲೆಗಳೊಳಕ್ಕೆ ತುಂಬಲಾಗಿದೆ. ಅದು ಪೂರ್ವಾಗ್ರಹವಾಗುವಷ್ಟು ಶಕ್ತಿಶಾಲಿಯಾಗಿಬಿಟ್ಟಿದೆ. ಆದರೆ ಸಂದರ್ಭಸಾಧಕರ ವಿರುದ್ಧ ನಿರ್ದೇಶಿತವಾದ ತೀರ್ಮಾನವನ್ನು ಮಾತ್ರ ಮಸುಕುಗೊಳಿಸಲಾಗಿದೆ ಮತ್ತು "ಮರೆತು ಬಿಡಲಾಗಿದೆ!"

"ಸ್ವತಂತ್ರ ಜನತಾ ರಾಜ್ಯ" ಎಂಬುದು ಎಂಟನೆಯ ದಶಕದಲ್ಲಿ ಜರ್ಮನ್ ಸೋಷಲ್ ಡೆಮೊಕ್ರಾಟರ ಮಧ್ಯೆ ಪ್ರಚಲಿತ ಗುರಿನುಡಿಯಾಗಿದ್ದಿತು, ಕಾರ್ಯಕ್ರಮ ಕೇಳಿಕೆಯಾಗಿದ್ದಿತು. ಈ ಗುರಿನುಡಿಯು ಪ್ರಜಾಪ್ರಭುತ್ವದ ಪ್ರಕಲ್ಪನೆಯನ್ನು ಆಡಂಬರದ ಸಂಕುಚಿತಮತಿಯ ರೀತಿಯಲ್ಲಿ ವಿವರಿಸುತ್ತದೆಯೇ ಹೊರತು ಯಾವ ರಾಜಕೀಯ ಸಾರವನ್ನೂ ಒಳಗೊಂಡಿಲ್ಲ. ಅದು ಶಾಸನಬದ್ಧವಾಗಿ ಅಂಗೀಕಾರಾರ್ಹವಾಗುವ ರೀತಿಯಲ್ಲಿ ಪ್ರಜಾಸತ್ತಾತ್ಮಕ ಗಣತಂತ್ರದ ಅರ್ಥ ಸೂಚಿಸುತ್ತದೆ ಎನ್ನುವಷ್ಟರ ಮಟ್ಟಿಗೆ ಎಂಗೆಲ್ಸ್‌ರವರು ಅದನ್ನು "ಸ್ವಲ್ಪ ಕಾಲದವರೆಗೆ" ಪ್ರಕ್ಷೋಭೆಯ ದೃಷ್ಟಿಯಿಂದ ಬಳಸುವುದನ್ನು "ಸಮರ್ಥಿಸಲು" ಸಿದ್ಧವಿದ್ದರು. ಆದರೆ ಅದು ಸಂದರ್ಭಸಾಧಕವಾದಿ ಘೋಷಣೆಯಾಗಿದ್ದಿತು. ಏಕೆಂದರೆ ಅದು ಬೂರ್ಷ್ವಾ ಪ್ರಜಾಪ್ರಭುತ್ವವನ್ನು ಅಂದಗೊಳಿಸಿ ತೋರಿಸುವುದನ್ನು ವ್ಯಕ್ತಪಡಿಸುತ್ತಿದ್ದಿತು ಮತ್ತು ಒಟ್ಟಿನಲ್ಲಿ ಯಾವುದೇ ರಾಜ್ಯದ ಬಗೆಗೆ ಸಮಾಜವಾದಿ ಟೀಕೆಯನ್ನು ಅರ್ಥಮಾಡಿಕೊಳ್ಳುವ ವಿಫಲತೆಯನ್ನೂ ಸೂಚಿಸುವುದಾಗಿದ್ದಿತು. ಬಂಡವಾಳವಾದದಡಿ ಶ್ರಮಜೀವಿ ವರ್ಗಕ್ಕೆ ಪ್ರಜಾಸತ್ತಾತ್ಮಕ ಗಣತಂತ್ರವೇ ಅತ್ಯುತ್ತಮವಾದ ರಾಜ್ಯದ ರೂಪ ಎಂಬುದರ ಪರವಾಗಿದ್ದೇವೆ ನಾವು. ಆದರೆ ಅತ್ಯಂತ ಪ್ರಜಾಸತ್ತಾತ್ಮಕವಾದ ಬೂರ್ಷ್ವಾ ಗಣತಂತ್ರದಲ್ಲೂ ಕೂಲಿ ಗುಲಾಮಗಿರಿಯೇ ಜನರ ಪಾಲಿನ ಪಾಡು ಎಂಬುದನ್ನು ಮರೆಯುವ ಹಕ್ಕು ನಮಗಿಲ್ಲ. ಅಷ್ಟೇ ಅಲ್ಲ, ಪ್ರತಿಯೊಂದು ರಾಜ್ಯವೂ ಮರ್ದಿತ ವರ್ಗವನ್ನು ಹತ್ತಿಕ್ಕುವುದಕ್ಕಾಗಿ ಇರುವ ಒಂದು "ವಿಶೇಷ ಶಕ್ತಿ"ಯಾಗಿದೆ. ತತ್ಫಲವಾಗಿ, <u>ಪ್ರತಿಯೊಂದು</u> ರಾಜ್ಯವೂ "ಸ್ವತಂತ್ರ"ವಾದುದ<u>ಲ್ಲ</u>, "ಜನತಾ ರಾಜ್ಯ" <u>ಅಲ್ಲ</u>. ಮಾರ್ಕ್ಸ್‌

ಮತ್ತು ಎಂಗೆಲ್ಸ್‌ರು ಇದನ್ನು ಎಂಟನೆಯ ದಶಕದಲ್ಲಿ ತಮ್ಮ ಪಾರ್ಟಿ ಸಂಗಾತಿಗಳಿಗೆ ಪದೇಪದೇ ವಿವರಿಸಿ ತಿಳಿಸಿದರು.[44]

ಐದನೆಯದಾಗಿ, ಪ್ರತಿಯೊಬ್ಬರೂ ನೆನಪಿನಲ್ಲಿಟ್ಟಿರುವ ರಾಜ್ಯ ಕ್ಷಯಿಸಿಹೋಗುವ ಎಂಗೆಲ್ಸ್‌ರ ವಾದವನ್ನು ಒಳಗೊಂಡಿರುವ ಅದೇ ಕೃತಿಯೇ ಬಲೋದ್ಬಂಧ ಕ್ರಾಂತಿಯ ಮಹತ್ವದ ಬಗೆಗೆ ಒಂದು ವಾದವನ್ನೂ ಒಳಗೊಂಡಿದೆ. ಬಲೋದ್ಬಂಧ ಕ್ರಾಂತಿಯ ಪಾತ್ರದ ಬಗೆಗೆ ಎಂಗೆಲ್ಸ್‌ರು ನೀಡಿರುವ ಚಾರಿತ್ರಿಕ ವಿಶ್ಲೇಷಣೆಯು ಬಲೋದ್ಬಂಧ ಕ್ರಾಂತಿಯ ಕುರಿತಾದ ಒಂದು ನಿಜವಾದ ಗುಣಗಾನವೇ ಆಗಿದೆ. ಇದನ್ನು "ಯಾರೂ ನೆನಪಿನಲ್ಲಿಡರು." ಆಧುನಿಕ ಸಮಾಜವಾದಿ ಪಾರ್ಟಿಗಳಲ್ಲಿ ಈ ವಿಚಾರದ ಮಹತ್ವದ ಬಗೆಗೆ ಮಾತನಾಡುವುದೂ ಇಲ್ಲ, ಯೋಚಿಸುವುದೂ ಇಲ್ಲ. ಜನರ ಮಧ್ಯೆ ಅವುಗಳ ಪ್ರಚಾರ ಪ್ರಕ್ಷೋಭೆಯಲ್ಲೂ ಇದು ಯಾವ ಪಾತ್ರವನ್ನೂ ನಿರ್ವಹಿಸುತ್ತಿಲ್ಲ. ಆದರೂ ಅದು, ರಾಜ್ಯವು "ಕ್ಷಯಿಸಿಹೋಗುವು"ದರೊಂದಿಗೆ ಅವಿಭಾಜ್ಯವಾಗಿ, ಒಂದೇ ಸಾಮರಸ್ಯ ಘಟಕವಾಗಿ ಸಂಬಂಧಿತವಾಗಿದೆ.

ಎಂಗೆಲ್ಸ್‌ರ ವಾದ ಹೀಗಿದೆ:

> "...ಬಲಪ್ರಯೋಗವು ಇತಿಹಾಸದಲ್ಲಿ ಮತ್ತೂ ಒಂದು ಪಾತ್ರವನ್ನು, (ಪೈಶಾಚಿಕ ಶಕ್ತಿಯ ಪಾತ್ರವಲ್ಲದೆ ಮತ್ತೊಂದನ್ನು), ಒಂದು ಕ್ರಾಂತಿಕಾರಿ ಪಾತ್ರವನ್ನು, ನಿರ್ವಹಿಸುತ್ತದೆ; ಅದು, ಮಾರ್ಕ್ಸ್‌ರವರ ಮಾತುಗಳಲ್ಲಿ, ಹೊಸ ಸಮಾಜದ ಗರ್ಭಧಾರಣೆ ಮಾಡಿರುವ ಪ್ರತಿಯೊಂದೂ ಹಳೆಯ ಸಮಾಜದ ಸೂಲಗಿತ್ತಿ ಇದ್ದಂತೆ.[45] ಸತ್ತು ಜಡವಾಗಿ ಹೋಗಿದ್ದ ರಾಜಕೀಯ ರೂಪಗಳ ಮೂಲಕ ಬಲವಂತವಾಗಿ ಮಾರ್ಗ ಮಾಡಿಕೊಂಡು ಆ ರೂಪಗಳನ್ನು ತೊಡೆದು ಹಾಕಲು ಸಾಮಾಜಿಕ ಬೆಳವಣಿಗೆಯು ಬಳಸುವ ಸಾಧನವಾಗಿದೆ ಅದು. ಇದರ ಬಗೆಗೆ ಹೆರ್ ಡ್ಯೂರಿಂಗ್‌ರ ಕೃತಿಯಲ್ಲಿ ಒಂದು ಮಾತೂ ಇಲ್ಲ. ಶೋಷಣೆಯ ಮೇಲೆ ಆಧರಿಸಿದ ಆರ್ಥಿಕತೆಯನ್ನು ಉರುಳಿಸಲು ಬಲಪ್ರಯೋಗವು ಬಹುಶಃ ಅವಶ್ಯವಾಗುವ ಸಾಧ್ಯತೆಯೂ ಇರಬಹುದೆಂದು ಅವರು ನರಳುತ್ತ ಕೊರಗುತ್ತಲಷ್ಟೆ ಒಪ್ಪಿಕೊಳ್ಳುತ್ತಾರೆ. ಇದು ದುರದೃಷ್ಟಕರ, ಏಕೆಂದರೆ ಎಲ್ಲ ಬಲಪ್ರಯೋಗವೂ ಅದನ್ನು ಬಳಸುವವನ ಸ್ಥೈರ್ಯವನ್ನೇ ಕುಂದಿಸುತ್ತದೆ, ಎನ್ನುತ್ತಾರೆ ಅವರು. ಪ್ರತಿಯೊಂದು ವಿಜಯೀ ಕ್ರಾಂತಿಯೂ ಅಪಾರ ನೈತಿಕ ಹಾಗೂ ಆತ್ಮಿಕ ಧೈರ್ಯಸ್ಥೈರ್ಯಗಳನ್ನು ನೀಡಿದ್ದಾಗ್ಯೂ ಅವರು ಹೀಗೆ ಹೇಳುತ್ತಾರೆ! ಮತ್ತೆ ಇದೂ ಜರ್ಮನಿಯಲ್ಲಿ. ಇಲ್ಲಿ ಉಗ್ರ ಸಂಘಟ್ಟನೆಯೊಂದು – ಇದನ್ನು ಜನರ ಮೇಲೆ ಹೊರಿಸಿದರೂ ಹೊರಿಸಬಹುದು – ಕೊನೆಯ ಪಕ್ಷ ಮೂವತ್ತು ವರ್ಷಗಳ ಯುದ್ಧ[46]ದ ತೇಜೋವಧೆಯನಂತರ ರಾಷ್ಟ್ರದ

ಮನೋಭಾವವನ್ನು ಹೊಕ್ಕಿರುವ ದಾಸ್ಯತನವನ್ನು ತೊಡೆದು ಹಾಕಲಾದರೂ ಅನುಕೂಲವಾಗುತ್ತದೆ. ಮತ್ತೆ ಈ ಪಾದ್ರಿಯಂತೆ ಆಲೋಚಿಸುವ ರೀತಿಯು – ನೀರಸ, ನಿಸ್ಸಾರ ಹಾಗೂ ನಿರ್ವೀರ್ಯ ಆಲೋಚನಾ ರೀತಿಯು – ಇತಿಹಾಸ ತಿಳಿದಿರುವಂಥ ಅತ್ಯಂತ ಕ್ರಾಂತಿಕಾರಿಯಾದ ಪಾರ್ಟಿಯ ಮೇಲೆ ತನ್ನ ಪ್ರಭಾವವನ್ನು ಬೀರುವುದಾಗಿ ಭಾವಿಸಿಕೊಳ್ಳುತ್ತದೆ!" (ಪು. 193, ತೃತೀಯ ಜರ್ಮನ್ ಆವೃತ್ತಿ, ಭಾಗ II, ನಾಲ್ಕನೇ ಅಧ್ಯಾಯದ ಕೊನೆ.) [47]

1878ರಿಂದ ಹಿಡಿದು 1894ರವರೆಗೆ, ಅಂದರೆ ತಮ್ಮ ಸಾವಿನ ಸಮಯದ ವರೆಗೂ ಎಂಗೆಲ್ಸ್‌ರು ನಿರಂತರವಾಗಿ ಜರ್ಮನ್ ಸೋಷಲ್ ಡೆಮೊಕ್ರಾಟರ ಗಮನಕ್ಕೆ ತಂದಂಥ ಬಲೋದ್ಬಂಧ ಕ್ರಾಂತಿಯ ಕುರಿತಾದ ಈ ಗುಣಗಾನವನ್ನು, ರಾಜ್ಯವು "ಕ್ಷಯಿಸಿಹೋಗುವ" ಸಿದ್ಧಾಂತದೊಂದಿಗೆ ಕೂಡಿಸಿ ಏಕೈಕ ಸಿದ್ಧಾಂತವನ್ನು ರೂಪಿಸುವುದು ಹೇಗೆ?

ಸಾಮಾನ್ಯವಾಗಿ ಇವೆರಡನ್ನೂ ಸಾರಸಂಗ್ರಹವಾದದ ಮೂಲಕ, ಸ್ವೇಚ್ಛೆಯಿಂದ (ಅಥವಾ ಅಧಿಕಾರದಲ್ಲಿರುವವರನ್ನು ಸಂತೋಷಪಡಿಸಲೋಸುಗ) ಮೊದಲು ಒಂದನ್ನು ಅನಂತರ ಮತ್ತೊಂದು ವಾದವನ್ನು ಅನೀತಿಯುತವಾಗಿ ಇಲ್ಲವೇ ಕುತರ್ಕದಿಂದ ಆಯ್ಕೆ ಮಾಡುವ ಮೂಲಕ, ಜೋಡಿಸಲಾಗುತ್ತದೆ. ಇಂಥ ನೂರರಲ್ಲಿ ತೊಂಬತ್ತೊಂಬತ್ತು ಪ್ರಸಂಗಗಳಲ್ಲಿ – ಅಥವಾ ಇದಕ್ಕೂ ಹೆಚ್ಚಿದ್ದರೂ ಇರಬಹುದು – ರಾಜ್ಯವು "ಕ್ಷಯಿಸಿಹೋಗುವ" ವಿಚಾರವನ್ನೇ ಮುಂಭಾಗದಲ್ಲಿ ತಂದಿರಿಸಲಾಗುತ್ತದೆ. ದ್ವಂದ್ವಾತ್ಮಕವಾದದ ಸ್ಥಳದಲ್ಲಿ ಸಾರಸಂಗ್ರಹವಾದವನ್ನೂ ಇರಿಸಲಾಗುತ್ತದೆ. ಮಾರ್ಕ್ಸ್‌ವಾದಕ್ಕೆ ಸಂಬಂಧಿಸಿ ಇಂದಿನ ಅಧಿಕೃತ ಸೋಷಲ್ ಡೆಮೊಕ್ರಾಟಿಕ್ ಸಾಹಿತ್ಯದಲ್ಲೆಲ್ಲ ಕಾಣಬರುವುದು ಈ ಅತ್ಯಂತ ವಾಡಿಕೆಯ, ಅತ್ಯಂತ ವ್ಯಾಪಕವಾದ ಕಾರ್ಯಭ್ಯಾಸವೇ. ಈ ರೀತಿಯಲ್ಲಿ ಒಂದರ ಬದಲು ಮತ್ತೊಂದನ್ನು ಬಳಸುವುದು ಹೊಸತೇನೂ ಅಲ್ಲವೆನ್ನಿ. ಇದನ್ನು ಪ್ರಾಚೀನ ಗ್ರೀಕ್ ತತ್ವಶಾಸ್ತ್ರ ಇತಿಹಾಸದಲ್ಲೂ ಕಾಣಬಹುದು. ಮಾರ್ಕ್ಸ್‌ವಾದವನ್ನು ಸಂದರ್ಭಸಾಧಕ ರೀತಿಯಲ್ಲಿ ಮೋಸದಿಂದ ಬದಲಾಯಿಸುವ ಕಾರ್ಯದಲ್ಲಿ, ದ್ವಂದ್ವಾತ್ಮಕವಾದದ ಸ್ಥಳದಲ್ಲಿ ಸಾರಸಂಗ್ರಹವಾದವನ್ನು ಬಳಸುವುದು ಜನರನ್ನು ಮೋಸಗೊಳಿಸುವ ಅತ್ಯಂತ ಸುಲಭವಾದ ಮಾರ್ಗ. ಅದು ಭ್ರಾಮಕ ತೃಪ್ತಿ ನೀಡುತ್ತದೆ, ಅದು ಪ್ರಕ್ರಿಯೆಯ ಎಲ್ಲ ಪಕ್ಕಗಳನ್ನೂ, ಬೆಳವಣಿಗೆಯ ಎಲ್ಲ ಪ್ರವೃತ್ತಿಗಳನ್ನೂ, ಎಲ್ಲ ಪರಸ್ಪರ ವಿರೋಧಿ ಪ್ರಭಾವಗಳನ್ನೂ ಇತ್ಯಾದಿಗಳೆಲ್ಲವನ್ನೂ ಗಣನೆಗೆ ತಂದುಕೊಂಡಂತೆ ಕಂಡುಬರುತ್ತದೆ. ಆದರೆ ವಾಸ್ತವವಾಗಿ ಅದು ಯಾವುದೇ ರೀತಿಯ ಸಾಮಾಜಿಕ ಬೆಳವಣಿಗೆಯ ಪ್ರಕ್ರಿಯೆಯ ಏಕೀಕೃತ ಹಾಗೂ ಕ್ರಾಂತಿಕಾರಿ ಪ್ರಕಲ್ಪನೆಯನ್ನೂ ಒದಗಿಸುವುದಿಲ್ಲ.

ಬಲೋದ್ಬಂಧ ಕ್ರಾಂತಿಯು ಅನಿವಾರ್ಯ ಎಂಬ ಮಾರ್ಕ್ಸ್ ಹಾಗೂ ಎಂಗೆಲ್ಸ್‌ರ ಸಿದ್ಧಾಂತವು ಬೂರ್ಷ್ವಾ ರಾಜ್ಯಕ್ಕೆ ಸಂಬಂಧಿಸಿದುದು ಎಂಬುದನ್ನು ನಾವು ಆಗಲೇ ಮೇಲೆ ಹೇಳಿದ್ದೇವೆ ಮತ್ತು ಮುಂದೆ ಇನ್ನೂ ಹೆಚ್ಚು ಪೂರ್ಣವಾಗಿ ತೋರಿಸಿ ಕೊಡಲಿರುವೆವು. ಬೂರ್ಷ್ವಾ ರಾಜ್ಯದ ಸ್ಥಳದಲ್ಲಿ ಶ್ರಮಜೀವಿ ವರ್ಗದ ರಾಜ್ಯವು (ಶ್ರಮಜೀವಿ ವರ್ಗ ಸರ್ವಾಧಿಕಾರತ್ವವು) ಆ ಹಿಂದಿನ ರಾಜ್ಯ "ಕ್ಷಯಿಸಿಹೋಗುವ" ಪ್ರಕ್ರಿಯೆಯ ಮೂಲಕ ಬರಲು ಸಾಧ್ಯವಿಲ್ಲ, ಆದರೆ ಸಾಮಾನ್ಯ ನಿಯಮವಾಗಿ ಬಲೋದ್ಬಂಧ ಕ್ರಾಂತಿಯ ಮೂಲಕವಷ್ಟೆ ಬರುತ್ತದೆ. ಬಲೋದ್ಬಂಧ ಕ್ರಾಂತಿಯ ಬಗೆಗೆ ಎಂಗೆಲ್ಸ್‌ರ ಗುಣಗಾನವು ಮಾರ್ಕ್ಸ್‌ರವರು ಪದೇಪದೇ ನೀಡಿದ ಹೇಳಿಕೆಗಳಿಗೆ ಸಂಪೂರ್ಣವಾಗಿ ಅನುಗುಣವಾಗಿದೆ ('ತತ್ವಶಾಸ್ತ್ರದ ದಾರಿದ್ರ್ಯ' ಹಾಗೂ 'ಕಮ್ಯೂನಿಸ್ಟ್ ಪ್ರಣಾಳಿಕೆ'[48]ಯ ಅಂತಿಮ ಭಾಗಗಳನ್ನು ನೋಡಿ. ಅವುಗಳಲ್ಲಿ ಮಾರ್ಕ್ಸ್‌ರವರು ಬಲೋದ್ಬಂಧ ಕ್ರಾಂತಿಯ ಅನಿವಾರ್ಯತೆಯ ಬಗೆಗೆ ಹೆಮ್ಮೆಯಿಂದ ಹಾಗೂ ಬಹಿರಂಗವಾಗಿ ಘೋಷಿಸಿದ್ದಾರೆ; ಸುಮಾರು ಮೂವತ್ತು ವರ್ಷಗಳನಂತರ 1875ರ 'ಗೋಥಾ ಕಾರ್ಯಕ್ರಮ'ವನ್ನು ಟೀಕಿಸುತ್ತ ಮಾರ್ಕ್ಸ್‌ರವರು ಏನು ಬರೆದರೆಂಬುದನ್ನು ನೋಡಿ. ಅದರಲ್ಲಿ ಅವರು ಆ ಕಾರ್ಯಕ್ರಮದ ಸಂದರ್ಭಸಾಧಕ ಸ್ವರೂಪವನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದರು[49]). ಹಾಗಾಗಿ ಬಲೋದ್ಬಂಧ ಕ್ರಾಂತಿಯ ಬಗೆಗೆ ಎಂಗೆಲ್ಸ್‌ರ ಗುಣಗಾನವು ಎಷ್ಟು ಮಾತ್ರವೂ ಕೇವಲ "ಮನಸ್ಸಿನ ಆವೇಗ"ವಾಗಿರಲಿಲ್ಲ, ಕೇವಲ ಉಜ್ವಲ ವರ್ಣನೆಯಾಗಿರಲಿಲ್ಲ, ಅಥವಾ ವಾದಚಾತುರ್ಯದ ಚಮತ್ಕಾರ ನುಡಿಯಾಗಿರಲಿಲ್ಲ. ಬಲೋದ್ಬಂಧ ಕ್ರಾಂತಿಯ ಬಗೆಗೆ ಜನಸಮೂಹಗಳಲ್ಲಿ ಈ, ಸ್ಪಷ್ಟವಾಗಿ ಈ, ವಿಚಾರವನ್ನು ಕ್ರಮಬದ್ಧವಾಗಿ ತುಂಬುವ ಆವಶ್ಯಕತೆಯೇ ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಇಡೀ ಸಿದ್ಧಾಂತದ ಮೂಲವಾಗಿದೆ. ಇಂಥ ಪ್ರಚಾರ ಪ್ರಕ್ಷೋಭೆ ನಡೆಸುವುದನ್ನು ಈಗ ಚಾಲ್ತಿಯಲ್ಲಿರುವ ಸಾಮಾಜಿಕ ಸ್ವದೇಶ ಮೂಢಾಭಿಮಾನದ ಹಾಗೂ ಕೌತ್ಸ್ಕಿವಾದದ ಪ್ರವೃತ್ತಿಗಳು ಉಪೇಕ್ಷಿಸಿರುವುದೇ ಈ ಎರಡೂ ಪ್ರವೃತ್ತಿಗಳು ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರ ಸಿದ್ಧಾಂತಕ್ಕೆ ದ್ರೋಹ ಬಗೆದಿರುವುದನ್ನು ಎದ್ದುಕಾಣುವಂತೆ ವ್ಯಕ್ತಪಡಿಸುತ್ತದೆ.

ಬೂರ್ಷ್ವಾ ರಾಜ್ಯದ ಬದಲಿಗೆ ಶ್ರಮಜೀವಿ ವರ್ಗದ ರಾಜ್ಯ ಬರುವುದು ಬಲೋದ್ಬಂಧ ಕ್ರಾಂತಿಯ ಮೂಲಕವಲ್ಲದೆ ಬೇರೆ ರೀತಿಯಲ್ಲಿ ಸಾಧ್ಯವಿಲ್ಲ. ಶ್ರಮಜೀವಿ ವರ್ಗದ ರಾಜ್ಯವನ್ನು, ಅಂದರೆ ಸರ್ವಸಾಮಾನ್ಯವಾದ ರಾಜ್ಯವನ್ನು, ತೊಡೆದುಹಾಕುವುದು "ಕ್ಷಯಿಸಿಹೋಗುವ" ಪ್ರಕ್ರಿಯೆಯ ಮೂಲಕವಲ್ಲದೆ ಬೇರೆ ರೀತಿಯಲ್ಲಿ ಸಾಧ್ಯವಿಲ್ಲ.

ಈ ಅಭಿಪ್ರಾಯಗಳ ವಿವರವಾದ ಹಾಗೂ ಸ್ಪಷ್ಟವಾದ ವಿಶದೀಕರಣವನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರು ಒಂದೊಂದೂ ಕ್ರಾಂತಿಯ ಅನುಭವದ ಪಾಠಗಳನ್ನು ವಿಶ್ಲೇಷಿಸಿದಾಗ, ಒಂದೊಂದೂ ನಿರ್ದಿಷ್ಟ ಕ್ರಾಂತಿಯ ಪರಿಸ್ಥಿತಿಯನ್ನು

ಅಭ್ಯಸಿಸಿದಾಗ ನೀಡಿದ್ದಾರೆ. ನಾವು ಈಗ ಅವರ ಸಿದ್ಧಾಂತದ ನಿಸ್ಸಂದೇಹವಾಗಿಯೂ ಅತ್ಯಂತ ಮುಖ್ಯವಾದ ಈ ಭಾಗದ ಪರಿಶೀಲನೆ ಮಾಡೋಣ.

ಅಧ್ಯಾಯ II

# ರಾಜ್ಯ ಹಾಗೂ ಕ್ರಾಂತಿ. 1848-1851ರ ಅನುಭವ

## 1. ಕ್ರಾಂತಿಯ ಪೂರ್ವಕಾಲ

ಪರಿಪಕ್ವಗೊಂಡ ಮಾರ್ಕ್ಸ್‌ವಾದದ ಮೊದಲ ಕೃತಿಗಳು – 'ತತ್ವಶಾಸ್ತ್ರದ ದಾರಿದ್ರ್ಯ' ಹಾಗೂ 'ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ' – 1848ರ ಕ್ರಾಂತಿಯ ಪೂರ್ವ ಕಾಲದಲ್ಲಿ ಕಾಣಿಸಿಕೊಂಡವು. ಈ ಕಾರಣದಿಂದಾಗಿ ಅವು ಮಾರ್ಕ್ಸ್‌ವಾದದ ಸಾಮಾನ್ಯ ಸೂತ್ರಗಳನ್ನು ನೀಡುವುದರ ಜೊತೆಗೆ ಸ್ವಲ್ಪಮಟ್ಟಿಗೆ ಆ ಕಾಲದ ವಾಸ್ತವಿಕ ಕ್ರಾಂತಿಕಾರಿ ಪರಿಸ್ಥಿತಿಯನ್ನೂ ಪ್ರತಿಬಿಂಬಿಸುತ್ತವೆ. ಆದ್ದರಿಂದ ಈ ಗ್ರಂಥಕರ್ತೃಗಳು 1848-1851ನೇ ವರ್ಷಗಳ ಅನುಭವದಿಂದ ತೀರ್ಮಾನಗಳಿಗೆ ಬರುವುದಕ್ಕೆ ಸ್ವಲ್ಪ ಮುನ್ನ ರಾಜ್ಯದ ಬಗೆಗೆ ಏನು ಹೇಳಿದರೆಂಬುದನ್ನು ಪರಿಶೀಲಿಸುವುದು ಬಹುಶಃ ಹೆಚ್ಚು ಯುಕ್ತವಾದೀತು.

'ತತ್ವಶಾಸ್ತ್ರದ ದಾರಿದ್ರ್ಯ'ದಲ್ಲಿ ಮಾರ್ಕ್ಸ್ ಹೀಗೆ ಬರೆದಿದ್ದಾರೆ:

> "ಕಾರ್ಮಿಕ ವರ್ಗವು ತನ್ನ ಬೆಳವಣಿಗೆಯ ಅವಧಿಯಲ್ಲಿ ಹಳೆಯ ಬೂರ್ಷ್ವಾ ಸಮಾಜದ ಸ್ಥಳದಲ್ಲಿ, ವರ್ಗಗಳನ್ನೂ ಅವುಗಳ ವೈರುಧ್ಯತೆಯನ್ನೂ ಹೊರತಾಗಿಸುವ ಸಂಸ್ಥೆಯೊಂದನ್ನು ಸ್ಥಾಪಿಸುವುದು. ಆಗ ರಾಜಕೀಯ ಅಧಿಕಾರ ಎನ್ನುವುದು ಎಷ್ಟು ಮಾತ್ರವೂ ಇರುವುದಿಲ್ಲ. ಏಕೆಂದರೆ ರಾಜಕೀಯ ಅಧಿಕಾರ ಎಂಬುದು ಬೂರ್ಷ್ವಾ ಸಮಾಜದಲ್ಲಿ ವರ್ಗ ವೈರುಧ್ಯಗಳ ಅಧಿಕೃತ ಅಭಿವ್ಯಕ್ತಿ ಆಗಿದೆ" (ಪು. 182, ಜರ್ಮನ್ ಆವೃತ್ತಿ, 1885).[50]

ವರ್ಗಗಳನ್ನು ತೊಡೆದು ಹಾಕಿದನಂತರ ರಾಜ್ಯವು ಕಣ್ಮರೆಯಾಗುವ ವಿಚಾರದ ಈ ಸಾರ್ವತ್ರಿಕ ಪ್ರತಿಪಾದನೆಯನ್ನು, ಕೆಲವು ತಿಂಗಳನಂತರ, ನಿಖರವಾಗಿ ಹೇಳುವುದಾದರೆ 1847ರ ನವಂಬರ್‌ನಲ್ಲಿ, ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರು ಬರೆದ 'ಕಮ್ಯೂನಿಸ್ಟ್ ಪ್ರಣಾಳಿಕೆ' ಒಳಗೊಂಡಿರುವ ಪ್ರತಿಪಾದನೆಯೊಂದಿಗೆ ಹೋಲಿಸಿ ನೋಡುವುದು ಬೋಧಪ್ರದವಾಗಿದೆ:

"...ಶ್ರಮಜೀವಿ ವರ್ಗದ ಬೆಳವಣಿಗೆಯ ಅತ್ಯಂತ ಸರ್ವೇಸಾಮಾನ್ಯ ಮಜಲುಗಳನ್ನು ಚಿತ್ರಿಸುವಾಗ ನಾವು ಅಸ್ತಿತ್ವದಲ್ಲಿರುವ ಸಮಾಜದ ಒಳಗೇ ಕೆರಳುತ್ತಿದ್ದ ಹೆಚ್ಚು ಕಮ್ಮಿ ತೆರೆಮರೆಯ ಅಂತರ್ಯುದ್ಧವನ್ನು, ಆ ಯುದ್ಧವು ಬಹಿರಂಗ ಕ್ರಾಂತಿಯಾಗಿ ಹೊರಹೊಮ್ಮುವವರೆಗೆ ಮತ್ತು ಬೂರ್ಷ್ವಾಸೀಯನ್ನು ಬಲಪ್ರಯೋಗದೊಂದಿಗೆ ಅಧಿಕಾರದಿಂದ ಉರುಳಿಸುವುದು ಶ್ರಮಜೀವಿ ವರ್ಗದ ಆಧಿಪತ್ಯಕ್ಕೆ ಅಡಿಪಾಯ ಹಾಕಿಕೊಡುವವರೆಗೆ, ಗುರುತಿಸಿದೆವು...."

"...ಕಾರ್ಮಿಕ ವರ್ಗದ ಕ್ರಾಂತಿಯಲ್ಲಿ ಮೊದಲ ಹೆಜ್ಜೆ ಶ್ರಮಜೀವಿ ವರ್ಗವನ್ನು ಆಳುವ ವರ್ಗದ ಸ್ಥಾನಕ್ಕೆ ಏರಿಸುವುದಾಗಿದೆ, ಪ್ರಜಾಪ್ರಭುತ್ವದ ಹೋರಾಟದಲ್ಲಿ ಜಯ ಗಳಿಸುವುದಾಗಿದೆ, ಎಂಬುದನ್ನು ನಾವು ಮೇಲೆ ಕಂಡೆವು."

"ಶ್ರಮಜೀವಿ ವರ್ಗವು ಬೂರ್ಷ್ವಾಸೀಯಿಂದ ಎಲ್ಲ ಬಂಡವಾಳವನ್ನೂ ಕ್ರಮೇಣ ಕಿತ್ತುಕೊಳ್ಳಲು, ಎಲ್ಲ ಉತ್ಪಾದನಾ ಸಲಕರಣೆಗಳನ್ನೂ ರಾಜ್ಯದ, ಅಂದರೆ ಆಳುವ ವರ್ಗವಾಗಿ ಸಂಘಟಿತವಾದ ಶ್ರಮಜೀವಿ ವರ್ಗದ ಕೈಗಳಲ್ಲೇ ಕೇಂದ್ರೀಕರಿಸಲು, ಮತ್ತು ಉತ್ಪಾದಕ ಶಕ್ತಿಗಳ ಮೊತ್ತವನ್ನು ಸಾಧ್ಯವಾದಷ್ಟೂ ಶೀಘ್ರವಾಗಿ ಹೆಚ್ಚಿಸಲು, ತನ್ನ ರಾಜಕೀಯ ಪರಮಾಧಿಕಾರವನ್ನು ಬಳಸುವುದು." (ಪು. 31 ಮತ್ತು 37, ಏಳನೆಯ ಜರ್ಮನ್ ಆವೃತ್ತಿ, 1906.)[51]

ಇಲ್ಲಿ ನಾವು ರಾಜ್ಯದ ವಿಷಯಕ್ಕೆ ಸಂಬಂಧಿಸಿ ಮಾರ್ಕ್ಸ್‌ವಾದದ ಅತ್ಯಂತ ಗಮನಾರ್ಹವಾದ ಹಾಗೂ ಅತ್ಯಂತ ಮುಖ್ಯವಾದ ವಿಚಾರಗಳಲ್ಲೊಂದರ, ಅಂದರೆ "ಶ್ರಮಜೀವಿ ವರ್ಗದ ಸರ್ವಾಧಿಕಾರತ್ವ" (ಪ್ಯಾರಿಸ್ ಕಮ್ಯೂನ್‌ನಂತರ ಅದನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಕರೆಯತೊಡಗಿದಂತೆ) ವಿಚಾರದ ಸೂತ್ರೀಕರಣವನ್ನು ಹೊಂದಿದ್ದೇವೆ. ಇದಲ್ಲದೆ ನಾವಿಲ್ಲಿ ರಾಜ್ಯದ ಬಗೆಗೆ ಅತ್ಯಂತ ಸ್ವಾರಸ್ಯಕರವಾದ ನಿರೂಪಣೆಯನ್ನೂ – "ರಾಜ್ಯ, ಅಂದರೆ ಆಳುವ ವರ್ಗವಾಗಿ ಸಂಘಟಿತವಾದ ಶ್ರಮಜೀವಿ ವರ್ಗ" ಎಂಬ ನಿರೂಪಣೆಯನ್ನೂ – ಹೊಂದಿದ್ದೇವೆ. ಇದೂ ಮಾರ್ಕ್ಸ್‌ವಾದದ "ಮರೆತುಹೋದ ಮಾತುಗಳಲ್ಲಿ" ಒಂದಾಗಿದೆ.

ರಾಜ್ಯ ಕುರಿತಾದ ಈ ನಿರೂಪಣೆಯನ್ನು ಅಧಿಕೃತ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಗಳ ಅಸ್ತಿತ್ವದಲ್ಲಿರುವ ಪ್ರಚಾರ ಹಾಗೂ ಪ್ರಕ್ಷೋಭೆಯ ಸಾಹಿತ್ಯದಲ್ಲಿ ಎಂದೂ ವಿವರಿಸಿಯೇ ಇಲ್ಲ. ಅಷ್ಟೇ ಅಲ್ಲ, ಅದನ್ನು ಉದ್ದೇಶಪೂರ್ವಕವಾಗಿಯೇ ಉಪೇಕ್ಷಿಸಲಾಗಿದೆ, ಏಕೆಂದರೆ, ಅದು ಸುಧಾರಣಾವಾದದೊಂದಿಗೆ ಎಷ್ಟು ಮಾತ್ರವೂ ಸರಿಹೊಂದದು ಮತ್ತು "ಪ್ರಜಾಪ್ರಭುತ್ವದ ಶಾಂತಿಯುತ ಬೆಳವಣಿಗೆ"ಯ ಬಗೆಗೆ

ಇರುವ ಸಾಮಾನ್ಯ ಸಂದರ್ಭಸಾಧಕವಾದಿ ಪೂರ್ವಾಗ್ರಹಗಳ ಹಾಗೂ ಸಂಕುಚಿತಮತಿ ಭ್ರಮೆಗಳ ಮುಖದ ಮೇಲೆ ಹೊಡೆಯುವಂಥ ನಿರೂಪಣೆಯಾಗಿದೆ.

ಶ್ರಮಜೀವಿ ವರ್ಗಕ್ಕೆ ರಾಜ್ಯ ಅವಶ್ಯ – ಇದನ್ನು ಎಲ್ಲ ಸಂದರ್ಭಸಾಧಕರೂ ಸಾಮಾಜಿಕ ಸ್ವದೇಶ ಮೂಢಾಭಿಮಾನಿಗಳೂ ಮತ್ತು ಕೌತ್‌ಸ್ಕಿವಾದಿಗಳೂ ಪದೇ ಪದೇ ಹೇಳುತ್ತಾರೆ. ಮಾರ್ಕ್ಸ್‌ರವರು ಬೋಧಿಸಿದುದು ಇದನ್ನೇ ಎಂದು ಅವರು ಖಾತರಿಯಿಂದ ಹೇಳುತ್ತಾರೆ. ಆದರೆ ಮಾರ್ಕ್ಸ್‌ರವರ ಪ್ರಕಾರ, ಮೊದಲನೆಯದಾಗಿ ಶ್ರಮಜೀವಿ ವರ್ಗಕ್ಕೆ ಬೇಕಾದುದು ಕ್ಷಯಿಸಿಹೋಗುತ್ತಿರುವ ರಾಜ್ಯವಷ್ಟೆ, ಅಂದರೆ ಹೇಗೆ ಸಂಘಟಿತವಾದ ರಾಜ್ಯವೆಂದರೆ ಅದು ಕೂಡಲೇ ಕ್ಷಯಿಸಿಹೋಗತೊಡಗುತ್ತದೆ ಮತ್ತು ಕ್ಷಯಿಸಿಹೋಗದೆ ಇರುವುದಕ್ಕೆ ಅದಕ್ಕೆ ಸಾಧ್ಯವೇ ಇಲ್ಲ, ಎಂಬುದನ್ನೂ ಹೇಳಲು ಅವರು "ಮರೆಯುತ್ತಾರೆ." ಎರಡನೆಯದಾಗಿ, ದುಡಿಯುವ ಜನರಿಗೆ ಬೇಕಾದುದು ಒಂದು "ರಾಜ್ಯ, ಅಂದರೆ ಆಳುವ ವರ್ಗವಾಗಿ ಸಂಘಟಿತವಾದ ಶ್ರಮಜೀವಿ ವರ್ಗ."

ರಾಜ್ಯವು ಬಲಾತ್ಕಾರದ ಒಂದು ವಿಶೇಷ ಸಂಘಟನೆ: ಅದು ಒಂದು ವರ್ಗವನ್ನು ಹತ್ತಿಕ್ಕಲು ಬಳಸುವ ಹಿಂಸಾಚರಣೆಯ ಸಂಘಟನೆ. ಶ್ರಮಜೀವಿ ವರ್ಗವು ಯಾವ ವರ್ಗವನ್ನು ಹತ್ತಿಕ್ಕಬೇಕು? ಸಹಜವಾಗಿಯೇ ಶೋಷಕ ವರ್ಗವನ್ನಷ್ಟೆ, ಅಂದರೆ ಬೂರ್ಷ್ವಾಸೀಯನ್ನು. ದುಡಿಯುವ ಜನರಿಗೆ ಶೋಷಕರ ಪ್ರತಿರೋಧವನ್ನು ದಮನ ಮಾಡಲಷ್ಟೆ ರಾಜ್ಯ ಬೇಕು. ಶ್ರಮಜೀವಿ ವರ್ಗವಷ್ಟೆ ಈ ದಮನ ಕಾರ್ಯವನ್ನು ನಿರ್ದೇಶಿಸಬಲ್ಲುದು, ನೆರವೇರಿಸಬಲ್ಲುದು. ಏಕೆಂದರೆ ಶ್ರಮಜೀವಿ ವರ್ಗವಷ್ಟೆ ಕೊನೆಯವರೆಗೂ ಕ್ರಾಂತಿಕಾರಿಯಾದ ಏಕೈಕ ವರ್ಗವಾಗಿದೆ, ಬೂರ್ಷ್ವಾಸೀಯ ವಿರುದ್ಧ ಹೋರಾಟದಲ್ಲಿ ಬೂರ್ಷ್ವಾಸೀಯನ್ನು ಸಂಪೂರ್ಣವಾಗಿ ತೊಡೆದು ಹಾಕುವುದರಲ್ಲಿ ಎಲ್ಲ ದುಡಿಯುವ ಹಾಗೂ ಶೋಷಿತ ಜನರನ್ನೂ ಒಂದುಗೂಡಿಸಬಲ್ಲ ಏಕೈಕ ವರ್ಗವಾಗಿದೆ.

ಶೋಷಕ ವರ್ಗಗಳಿಗೆ, ಶೋಷಣೆಯನ್ನು ಉಳಿಸಿಕೊಂಡು ಬರಲು, ಅಂದರೆ ಜನತೆಯ ವಿಶಾಲ ಬಹುಸಂಖ್ಯಾತರ ಹಿತಕ್ಕೆ ವಿರುದ್ಧ ನಿಕೃಷ್ಟ ಅಲ್ಪ ಸಂಖ್ಯಾತರ ಸ್ವಾರ್ಥಪರ ಹಿತ ಸಂರಕ್ಷಣೆಗಾಗಿ, ರಾಜಕೀಯ ಅಧಿಕಾರ ಅವಶ್ಯ. ಆದರೆ ಶೋಷಿತ ವರ್ಗಗಳಿಗೆ, ಎಲ್ಲ ಶೋಷಣೆಯನ್ನೂ ಸಂಪೂರ್ಣವಾಗಿ ಅಳಿಸಿಹಾಕಲು, ಅಂದರೆ ಜನತೆಯ ವಿಶಾಲ ಬಹುಸಂಖ್ಯಾತರ ಹಿತ ಸಂರಕ್ಷಿಸಲು ಮತ್ತು ಆಧುನಿಕ ಗುಲಾಮು ಒಡೆಯರುಗಳಾದ ಭೂಮಾಲೀಕರನ್ನೂ ಬಂಡವಾಳಗಾರರನ್ನೂ ಒಳಗೊಂಡ ನಿಕೃಷ್ಟ ಅಲ್ಪಸಂಖ್ಯಾತರ ವಿರುದ್ಧ ಹೋರಾಟ ನಡೆಸಲು, ರಾಜಕೀಯ ಅಧಿಕಾರ ಬೇಕು.

ಪೆಟಿ ಬೂರ್ಷ್ವಾ ಡೆಮೊಕ್ರಾಟರು, ವರ್ಗ ಹೋರಾಟದ ಸ್ಥಳದಲ್ಲಿ ವರ್ಗ ಸಾಮರಸ್ಯದ ಕನಸು ಇರಿಸಿದ ಸೋಗಿನ ಸಮಾಜವಾದಿಗಳು, ಸಮಾಜವಾದಿ ಪರಿವರ್ತನೆಯನ್ನೂ ಕನಸಿನ ರೀತಿಯಲ್ಲೇ ಚಿತ್ರಿಸಿದರು – ಶೋಷಕ ವರ್ಗದ ಆಧಿಪತ್ಯ

13*

ವನ್ನು ಉರುಳಿಸುವ ರೀತಿಯಲ್ಲಲ್ಲ, ಆದರೆ ತಮ್ಮ ಗುರಿಗಳ ಬಗೆಗೆ ಎಚ್ಚೆತ್ತುಕೊಂಡ ಬಹುಸಂಖ್ಯಾತರಿಗೆ ಅಲ್ಪಸಂಖ್ಯಾತರು ಶಾಂತಿಯುತವಾಗಿ ಶರಣಾಗುವ ರೀತಿಯಲ್ಲಿ. ಈ ಪೆಟಿ ಬೂರ್ಷ್ವಾ ಅಸಾಧ್ಯಾದರ್ಶ ಕಲ್ಪನೆಯು, ರಾಜ್ಯವು ವರ್ಗಗಳಿಗೂ ಮೇಲಿರು ವಂಥದು ಎಂಬ ವಿಚಾರದಿಂದ ಅವಿಭಾಜ್ಯವಾದುದು. ಇದು ಆಚರಣೆಯಲ್ಲಿ ದುಡಿಯುವ ವರ್ಗಗಳ ಹಿತಗಳಿಗೆ ದ್ರೋಹ ಬಗೆಯುವುದಕ್ಕೆ ದಾರಿ ಮಾಡಿಕೊಟ್ಟಿತು. 1848ರ ಹಾಗೂ 1871ರ ಫ್ರೆಂಚ್ ಕ್ರಾಂತಿಗಳ ಇತಿಹಾಸವೂ, ಈ ಶತಮಾನದ ತಿರುವಿನಲ್ಲಿ ಬ್ರಿಟನ್, ಫ್ರಾನ್ಸ್, ಇಟಲಿ ಮತ್ತಿತರ ದೇಶಗಳಲ್ಲಿ "ಸಮಾಜವಾದಿಗಳು" ಬೂರ್ಷ್ವಾ ಸಚಿವ ಸಂಪುಟಗಳಲ್ಲಿ ಭಾಗವಹಿಸಿದುದರ ಅನುಭವವೂ ಇದನ್ನೇ ತೋರಿಸಿಕೊಟ್ಟವು.[52]

ಮಾರ್ಕ್ಸ್‌ರವರು ತಮ್ಮ ಜೀವಮಾನ ಪರ್ಯಂತ ಈ ಪೆಟಿ ಬೂರ್ಷ್ವಾ ಸಮಾಜವಾದದ ವಿರುದ್ಧ ಹೋರಾಡಿದರು. ಈಗ ಅದನ್ನು ರಷ್ಯದಲ್ಲಿ ಸಮಾಜವಾದಿ-ಕ್ರಾಂತಿಕಾರಿ ಹಾಗೂ ಮೆನ್ಷೆವಿಕ್ ಪಾರ್ಟಿಗಳು ಪುನರುಜ್ಜೀವನಗೊಳಿಸಿವೆ. ಮಾರ್ಕ್ಸ್‌ರವರು ವರ್ಗ ಹೋರಾಟದ ತಮ್ಮ ಸಿದ್ಧಾಂತವನ್ನು ಸುಸಂಗತವಾಗಿ ರಾಜಕೀಯ ಅಧಿಕಾರದ, ರಾಜ್ಯದ, ಸಿದ್ಧಾಂತದವರೆಗೂ ಅಭಿವೃದ್ಧಿಗೊಳಿಸಿದರು.

ಬೂರ್ಷ್ವಾ ಆಧಿಪತ್ಯವನ್ನು ಉರುಳಿಸುವುದನ್ನು ಶ್ರಮಜೀವಿ ವರ್ಗವಷ್ಟೆ ಸಾಧಿಸಲು ಸಾಧ್ಯ. ಈ ವಿಶಿಷ್ಟ ವರ್ಗದ ಅಸ್ತಿತ್ವದ ಆರ್ಥಿಕ ಪರಿಸ್ಥಿತಿಗಳು ಅದನ್ನು ಈ ಕಾರ್ಯಭಾರಕ್ಕಾಗಿ ಸಿದ್ಧಗೊಳಿಸುತ್ತವೆ, ಈ ಕಾರ್ಯಭಾರವನ್ನು ಈಡೇರಿಸಲು ಅದಕ್ಕೆ ಸಾಧ್ಯತೆ ಮತ್ತು ಶಕ್ತಿಯನ್ನು ಒದಗಿಸಿಕೊಡುತ್ತವೆ. ಬೂರ್ಷ್ವಾಸೀಯು ರೈತಾಪಿ ಜನರನ್ನೂ ಎಲ್ಲ ಪೆಟಿ ಬೂರ್ಷ್ವಾ ಗುಂಪುಗಳನ್ನೂ ವಿಭಜಿಸಿ ಭಿನ್ನಭಿನ್ನ ಮಾಡುವ ಸಮಯದಲ್ಲೇ ಅದು ಶ್ರಮಜೀವಿ ವರ್ಗವನ್ನು ಒಟ್ಟಾಗಿ ಬೆಸೆಯುತ್ತದೆ, ಐಕ್ಯಗೊಳಿಸುತ್ತದೆ ಮತ್ತು ಸಂಘಟಿಸುತ್ತದೆ. ಶ್ರಮಜೀವಿ ವರ್ಗವಷ್ಟೆ, ವಿಸ್ತೃತ ಪ್ರಮಾಣದ ಉತ್ಪಾದನೆಯಲ್ಲಿ ಅದು ನಿರ್ವಹಿಸುವ ಆರ್ಥಿಕ ಪಾತ್ರದಿಂದಾಗಿ, ಎಲ್ಲ ದುಡಿಯುವ ಹಾಗೂ ಶೋಷಿತ ಜನರ ನಾಯಕನಾಗುವ ಸಾಮರ್ಥ್ಯ ಹೊಂದಿರುತ್ತದೆ. ಬೂರ್ಷ್ವಾಸೀಯು ಶ್ರಮಜೀವಿ ವರ್ಗವನ್ನಷ್ಟೆ ಅಲ್ಲ, ಉಳಿದೆಲ್ಲ ದುಡಿಯುವ ಜನರನ್ನೂ ಆಗಾಗ್ಗೆ ಎಷ್ಟೂ ಕಮ್ಮಿಯಲ್ಲ, ಆದರೆ ಅದಕ್ಕೂ ಹೆಚ್ಚಾಗಿಯೇ ಶೋಷಿಸುತ್ತದೆ, ಮರ್ದನಕ್ಕೊಳಪಡಿಸುತ್ತದೆ, ತುಳಿಯುತ್ತದೆ. ಆದರೂ ಅವರು ತಮ್ಮ ವಿಮೋಚನೆಗಾಗಿ ಸ್ವತಂತ್ರ ಹೋರಾಟ ಹೂಡಲು ಅಸಮರ್ಥರಾಗಿರುತ್ತಾರೆ.

ರಾಜ್ಯದ ಹಾಗೂ ಸಮಾಜವಾದಿ ಕ್ರಾಂತಿಯ ಪ್ರಶ್ನೆಗೆ ಮಾರ್ಕ್ಸ್‌ರವರು ಅನ್ವಯಿಸಿದ ವರ್ಗ ಹೋರಾಟದ ಸಿದ್ಧಾಂತವು ಸಹಜವಾಗಿಯೇ ಶ್ರಮಜೀವಿ ವರ್ಗದ ರಾಜಕೀಯ ಆಧಿಪತ್ಯವನ್ನು, ಅದರ ಸರ್ವಾಧಿಕಾರತ್ವವನ್ನು, ಅಂದರೆ ಜನರ ಸಶಸ್ತ್ರ ಬಲದ ನೇರ ಬೆಂಬಲವುಳ್ಳ ಅವಿಭಕ್ತ ಅಧಿಕಾರವನ್ನು, ಮನ್ನಿಸುವುದರತ್ತ ಕರೆದೊಯ್ಯುತ್ತದೆ. ಬೂರ್ಷ್ವಾಸೀಯನ್ನು ಆಡಳಿತದಿಂದ ಉರುಳಿಸುವುದನ್ನು ಶ್ರಮಜೀವಿ

ವರ್ಗವು ಆಳುವ ವರ್ಗವಾಗಿ ಪರಿವರ್ತನೆಗೊಳ್ಳುವುದರಿಂದ ಮಾತ್ರ, ಬೂರ್ಷ್ವಾಸೀಯ ಅನಿವಾರ್ಯ ಹಾಗೂ ಹತಾಶ ಪ್ರತಿರೋಧವನ್ನು ಹತ್ತಿಕ್ಕಲು ಮತ್ತು ಹೊಸ ಆರ್ಥಿಕ ವ್ಯವಸ್ಥೆಗಾಗಿ ಎಲ್ಲ ದುಡಿಯುವ ಹಾಗೂ ಶೋಷಿತ ಜನರನ್ನು ಸಂಘಟಿಸಲು ಸಮರ್ಥವಾಗುವುದರಿಂದ ಮಾತ್ರ, ಸಾಧಿಸಲು ಸಾಧ್ಯ.

ಶೋಷಕರ ಪ್ರತಿರೋಧವನ್ನು ಸದೆಬಡಿಯಲೋಸುಗವೂ, ಅಪಾರ ಜನಸ್ತೋಮಕ್ಕೆ – ರೈತಾಪಿ ಜನರು, ಪೆಟಿ ಬೂರ್ಷ್ವಾಸೀ ಹಾಗೂ ಅರೆಶ್ರಮಜೀವಿಗಳಿಗೆ – ಸಮಾಜವಾದಿ ಆರ್ಥಿಕತೆಯನ್ನು ಸಂಘಟಿಸುವ ಕಾರ್ಯದಲ್ಲಿ ನಾಯಕತ್ವ ನೀಡಲೋಸುಗವೂ, ಶ್ರಮಜೀವಿ ವರ್ಗಕ್ಕೆ ರಾಜ್ಯಾಧಿಕಾರ, ಒಂದು ಕೇಂದ್ರೀಕೃತವಾದ ಅಧಿಕಾರ ಸಂಘಟನೆ, ಹಿಂಸಾಚರಣೆಯ ಸಂಘಟನೆ, ಅವಶ್ಯ.

ಕಾರ್ಮಿಕರ ಪಾರ್ಟಿಯನ್ನು ಸುಶಿಕ್ಷಿತಗೊಳಿಸುವ ಮೂಲಕ ಮಾರ್ಕ್ಸ್‌ವಾದವು, ರಾಜ್ಯಾಧಿಕಾರ ಪಡೆದುಕೊಂಡು ಇಡೀ ಜನರನ್ನು ಸಮಾಜವಾದದತ್ತ ಕರೆದೊಯ್ಯಲು, ಹೊಸ ವ್ಯವಸ್ಥೆಯನ್ನು ನಿರ್ದೇಶಿಸಲು ಹಾಗೂ ಸಂಘಟಿಸಲು, ಎಲ್ಲ ದುಡಿಯುವ ಹಾಗೂ ಶೋಷಿತ ಜನರಿಗೂ ಸಾಮಾಜಿಕ ಜೀವನವನ್ನು ಬೂರ್ಷ್ವಾಸೀ ಇಲ್ಲದೆ ಮತ್ತು ಬೂರ್ಷ್ವಾಸೀಯ ವಿರುದ್ಧ ಸಂಘಟಿಸಿಕೊಳ್ಳುವುದರಲ್ಲಿ ಬೋಧಕ, ಮಾರ್ಗದರ್ಶಿ ಹಾಗೂ ನಾಯಕನಾಗಲು ಸಾಮರ್ಥ್ಯವುಳ್ಳಂಥ ಶ್ರಮಜೀವಿ ವರ್ಗದ ಮುಂಚೂಣಿಯನ್ನು ಸುಶಿಕ್ಷಿತಗೊಳಿಸುತ್ತದೆ. ಇದಕ್ಕೆ ಪ್ರತಿಯಾಗಿ ಈಗ ಚಾಲ್ತಿಯಲ್ಲಿರುವ ಸಂದರ್ಭಸಾಧಕವಾದವು ಕಾರ್ಮಿಕ ಪಾರ್ಟಿಯ ಸದಸ್ಯರನ್ನು ಉತ್ತಮ ಕೂಲಿ ಕೆಲಸಗಾರರ ಪ್ರತಿನಿಧಿಗಳಾಗಿರುವಂತೆ, ಜನಸಮೂಹಗಳೊಂದಿಗೆ ಸಂಪರ್ಕ ಕಳೆದುಕೊಂಡು ಬಂಡವಾಳವಾದದಡಿಯೇ ಸಾಕಷ್ಟು ಚೆನ್ನಾಗಿ "ಏಳಿಗೆ" ಪಡೆಯುವಂತೆ, ತಮ್ಮ ಜನ್ಮಸಿದ್ಧ ಹಕ್ಕುಗಳನ್ನು ಒಂದಿಷ್ಟು ಗಂಜಿ ಸುಖಕ್ಕಾಗಿ ಮಾರುವಂತೆ, ಅಂದರೆ, ಬೂರ್ಷ್ವಾಸೀ ವಿರುದ್ಧ ಜನರ ಕ್ರಾಂತಿಕಾರಿ ನಾಯಕರಾಗಿ ತಮ್ಮ ಪಾತ್ರವನ್ನು ಬಿಟ್ಟುಕೊಡುವಂತೆ, ತರಬೇತುಗೊಳಿಸುತ್ತದೆ.

"ರಾಜ್ಯ, ಅಂದರೆ ಆಳುವ ವರ್ಗವಾಗಿ ಸಂಘಟಿತವಾದ ಶ್ರಮಜೀವಿ ವರ್ಗ"ದ ಬಗೆಗೆ ಮಾರ್ಕ್ಸ್‌ರವರ ಸಿದ್ಧಾಂತವು ಇತಿಹಾಸದಲ್ಲಿ ಶ್ರಮಜೀವಿ ವರ್ಗದ ಕ್ರಾಂತಿಕಾರಿ ಪಾತ್ರದ ಬಗೆಗೆ ಅವರ ಇಡೀ ಬೋಧೆಯೊಂದಿಗೆ ಅವಿಭಾಜ್ಯವಾಗಿ ಸಂಬಂಧಿತವಾಗಿದೆ. ಈ ಪಾತ್ರದ ಅಂತಿಮ ಹಂತವೇ ಶ್ರಮಜೀವಿ ವರ್ಗದ ಸರ್ವಾಧಿಕಾರತ್ವ, ಶ್ರಮಜೀವಿ ವರ್ಗದ ರಾಜಕೀಯ ಆಳ್ವಿಕೆ.

ಆದರೆ ಶ್ರಮಜೀವಿ ವರ್ಗಕ್ಕೆ ಬೂರ್ಷ್ವಾಸೀಯ ವಿರುದ್ಧ ಬಲಾತ್ಕಾರದ ಒಂದು ವಿಶೇಷ ಸಂಘಟನೆಯ ರೂಪವಾಗಿ ರಾಜ್ಯದ ಆವಶ್ಯಕತೆ ಇರುವುದರಿಂದ ಕೆಳಗಿನ ತೀರ್ಮಾನ ತನ್ನಷ್ಟಕ್ಕೆ ತಾನೇ ಸೂಚಿತವಾಗುತ್ತದೆ: ಅಂಥ ಸಂಘಟನೆಯನ್ನು, ಬೂರ್ಷ್ವಾಸೀಯು ತನಗಾಗಿಯೇ ಸೃಜಿಸಿಕೊಂಡಿರುವ ರಾಜ್ಯಯಂತ್ರವನ್ನು ಮೊದಲು ಥೊಡೆದು ಥಾಕದೆ, ನಾಶಗೊಳಿಸದೆ, ಸೃಜಿಸುವುದು ಸಾಧ್ಯವೆಂದು ಗ್ರಹಿಸಲಾದರೂ

ಸಾಧ್ಯವೇ? 'ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ' ನೇರವಾಗಿ ಈ ತೀರ್ಮಾನದ ತ್ತವೇ ಕರೆದೊಯ್ಯುತ್ತದೆ ಮತ್ತು ಮಾರ್ಕ್ಸ್‌ರವರು 1848-1851ರ ಕ್ರಾಂತಿಯ ಅನುಭವವನ್ನು ಕ್ರೋಡೀಕರಿಸುವಾಗ ಶ್ರುತಪಡಿಸುವುದೂ ಈ ತೀರ್ಮಾನವನ್ನೇ.

## 2. ಕ್ರಾಂತಿಯ ಅನುಭವದ ಪಾಠಗಳು

ನಾವೀಗ ಪರ್ಯಾಲೋಚಿಸುತ್ತಿರುವ ರಾಜ್ಯದ ವಿಷಯದ ಬಗೆಗೆ ಮಾರ್ಕ್ಸ್‌ರವರು 1848-1851ರ ಕ್ರಾಂತಿಯ ಫಲಿತಾಂಶಗಳನ್ನು ಕ್ರೋಡೀಕರಿಸುತ್ತ ತಮ್ಮ ತೀರ್ಮಾನಗಳನ್ನು ಈ ಕೆಳಗಿನ ಮಾತುಗಳಲ್ಲಿ ವರ್ಣಿಸುತ್ತಾರೆ. ಇದು ಅವರ 'ಲೂಯಿ ಬೊನಾಪಾರ್ಟೆಯ ಹದಿನೆಂಟನೆಯ ಬ್ರೂಮೇರ್' ಎಂಬ ಗ್ರಂಥದಲ್ಲಿದೆ:

> "ಆದರೆ ಕ್ರಾಂತಿಯು ಕೂಲಂಕಷವಾಗಿ ಕಾರ್ಯ ನೆರವೇರಿಸುವಂತಹುದು. ಅದು ಇನ್ನೂ ಶುದ್ಧಿಕಾರಕ ಲೋಕದ ಮೂಲಕ ಸಾಗಿ ಹೋಗುತ್ತಿದೆ. ಅದು ತನ್ನ ಕಾರ್ಯವನ್ನು ಕ್ರಮಬದ್ಧವಾಗಿ ನೆರವೇರಿಸುತ್ತದೆ. 1851ರ ಡಿಸೆಂಬರ್ 2ರ ಹೊತ್ತಿಗೆ (ಲೂಯಿ ಬೊನಾಪಾರ್ಟ್‌ರವರ ಕ್ಷಿಪ್ರಕ್ರಾಂತಿಯ ದಿನ) ಅದು ತನ್ನ ಸಿದ್ಧತಾ ಕಾರ್ಯದಲ್ಲಿ ಅರ್ಧದಷ್ಟನ್ನು ಮುಗಿಸಿದ್ದಿತು. ಈಗ ಅದು ಉಳಿದ ಅರ್ಧವನ್ನು ಪೂರೈಸುತ್ತಿದೆ. ಮೊದಲು ಅದು ಸಂಸದೀಯ ಅಧಿಕಾರವನ್ನು, ಅದನ್ನು ಉರುಳಿಸಲು ಸಮರ್ಥವಾಗುವ ಸಲುವಾಗಿ, ಪರಿಪೂರ್ಣಗೊಳಿಸಿಕೊಂಡಿತು. ಈಗ, ಅದನ್ನು ಸಾಧಿಸಿಕೊಂಡಿರುವಾಗ ಅದು ಕಾರ್ಯಾಂಗದ ಅಧಿಕಾರವನ್ನು ಪರಿಪೂರ್ಣಗೊಳಿಸಿಕೊಳ್ಳುತ್ತಿದೆ, ಅದನ್ನು ಅದರ ಅತ್ಯಂತ ಶುದ್ಧ ಭಾವಾರ್ಥಕ್ಕಿಳಿಸುತ್ತಿದೆ, ಅದನ್ನು ಪ್ರತ್ಯೇಕಗೊಳಿಸುತ್ತಿದೆ, ಅದನ್ನು ತನ್ನ ವಿರುದ್ಧವೇ ತನ್ನ ಏಕಮಾತ್ರ ನಿಂದನೆಯಾಗಿ ಸ್ಥಾಪಿಸಿಕೊಳ್ಳುತ್ತಿದೆ. ಅದರ ವಿರುದ್ಧ ತನ್ನೆಲ್ಲ ವಿನಾಶಾತ್ಮಕ ಶಕ್ತಿಗಳನ್ನೂ ಸಾಂದ್ರೀಕರಿಸಲು ಅದು ಹೀಗೆ ಮಾಡುತ್ತಿದೆ." (ಅಡಿಗೆರೆ ನಮ್ಮದು.) "ಅದು ತನ್ನ ಪೂರ್ವಭಾವೀ ಕಾರ್ಯದ ಈ ದ್ವಿತೀಯಾರ್ಧವನ್ನು ಮಾಡಿ ಮುಗಿಸಿದಾಗ ಯೂರೋಪು ತನ್ನ ಆಸನದಿಂದ ಜಿಗಿದೆದ್ದು ಅಮಿತೋತ್ಸಾಹದಿಂದ ಉದ್ಗರಿಸುತ್ತದೆ: ಚೆನ್ನಾಗಿ ತೋಡಿದೆ, ಮುದಿ ಹೆಗ್ಗಣವೇ!
>
> "ಬಹು ಭಾರಿಯಾದ ಅಧಿಕಾರಶಾಹಿ ಹಾಗೂ ಸೈನಿಕ ಸಂಘಟನೆ, ವಿಶಾಲವಾದ ಹಾಗೂ ಚಾತುರ್ಯದಿಂದ ಕೂಡಿದ ರಾಜ್ಯಾಧಿಕಾರ ಯಂತ್ರ, ಐದು ಲಕ್ಷ ಸಂಖ್ಯೆಯ ಅಧಿಕಾರಿಗಳ ಪಡೆ, ಇದಲ್ಲದೆ ಮತ್ತೆ ಐದು ಲಕ್ಷ ಸಂಖ್ಯೆಯ ಸೈನ್ಯ – ಇವುಗಳನ್ನೆಲ್ಲ ಒಳಗೊಂಡ ಈ ಕಾರ್ಯಾಂಗದ ಅಧಿಕಾರವು, ಈ ಭೀತಿ ಹುಟ್ಟಿಸುವಂಥ ಪರೋಪಜೀವಿಯು, ಫ್ರೆಂಚ್ ಸಮಾಜ

ದೇಹವನ್ನು ಬಲೆಯಲ್ಲಿ ಸಿಕ್ಕಿಸಿಕೊಂಡು ಅದರ ರಂಧ್ರಗಳಲ್ಲೆಲ್ಲ ಗಿಡಿಗಿ ತುಂಬಿದೆ. ಇದು ಹುಟ್ಟಿಕೊಂಡದ್ದು ನಿರಂಕುಶ ರಾಜಪ್ರಭುತ್ವದ ದಿನಗಳಲ್ಲಿ. ಆಗ ಸಾಮಂತಶಾಹಿ ವ್ಯವಸ್ಥೆ ಕ್ಷೀಣಿಸುತ್ತಿತ್ತು. ಇದು ಹುಟ್ಟಿಕೊಂಡು ಆ ವ್ಯವಸ್ಥೆ ಕ್ಷೀಣಗೊಳ್ಳುವುದನ್ನು ತ್ವರಿತಗೊಳಿಸಲು ನೆರವಾಯಿತು." ಮೊದಲನೆಯ ಫ್ರೆಂಚ್ ಕ್ರಾಂತಿಯು ಕೇಂದ್ರೀಕರಣವನ್ನು ಅಭಿವೃದ್ಧಿಗೊಳಿಸಿತು, "ಆದರೆ ಅದೇ ಹೊತ್ತಿನಲ್ಲಿ" ಅದು "ಸರಕಾರೀ ಆಡಳಿತ ಯಂತ್ರದ ವ್ಯಾಪ್ತಿ, ಅಧಿಕಾರ ಸಂಕೇತಗಳ ಹಾಗೂ ಭಂಟರುಗಳ ಸಂಖ್ಯೆಯನ್ನು" ಹೆಚ್ಚಿಸಿತು. "ನೆಪೋಲಿಯನ್ ಈ ರಾಜ್ಯಾಧಿಕಾರ ಯಂತ್ರವನ್ನು ಪೂರ್ಣಗೊಳಿಸಿದನು." ಲೆಜಿಟಿಮಿಸ್ಟ್ ರಾಜಪ್ರಭುತ್ವ ಹಾಗೂ ಜುಲೈ ರಾಜಪ್ರಭುತ್ವಗಳು[53] "ಹೆಚ್ಚಿನ ಶ್ರಮ ವಿಭಜನೆಯನ್ನಷ್ಟೆ ಅಲ್ಲದೆ ಬೇರೇನನ್ನೂ ಸೇರಿಸಲಿಲ್ಲ.

"ಕೊನೆಯದಾಗಿ, ಕ್ರಾಂತಿಯ ವಿರುದ್ಧ ಹೋರಾಟದಲ್ಲಿ ಸಂಸದೀಯ ಗಣತಂತ್ರವು ದಬ್ಬಾಳಿಕೆಯ ಕ್ರಮಗಳ ಜೊತೆಗೇ ಸರಕಾರಿ ಅಧಿಕಾರ ಯಂತ್ರದ ಸಾಧನಗಳನ್ನೂ ಕೇಂದ್ರೀಕರಣವನ್ನೂ ಬಲಪಡಿಸುವ ಬಲಾತ್ಕಾರಕ್ಕೊಳಗಾಯಿತು. ಎಲ್ಲ ಕ್ರಾಂತಿಗಳೂ ಈ ಯಂತ್ರವನ್ನು ತೊಡೆದು ಹಾಕುವ ಬದಲು ಅದನ್ನು ಪರಿಪೂರ್ಣಗೊಳಿಸಿದವು" (ಅಡಿಗೆರೆ ನಮ್ಮದು). "ಸರದಿಯಂತೆ ದಬ್ಬಾಳಿಕೆಗೆ ಸ್ಪರ್ಧೆ ಹೂಡಿದ ಪಕ್ಷಗಳು ಈ ಭಾರಿ ರಾಜ್ಯ ಸೌಧವನ್ನು ವಶಪಡಿಸಿಕೊಳ್ಳುವುದೇ ತಮ್ಮ ವಿಜಯದ ಪ್ರಧಾನ ಗಳಿಕೆಯೆಂದು ಭಾವಿಸಿದ್ದವು." ('ಲೂಯಿ ಬೊನಾಪಾರ್ಟೆಯ ಹದಿನೆಂಟನೆಯ ಬ್ರೂಮೇರ್,' ಪು. 98-99, ನಾಲ್ಕನೆಯ ಆವೃತ್ತಿ, ಹ್ಯಾಂಬರ್ಗ್, 1907. *)[54]

ಈ ಗಮನಾರ್ಹವಾದ ವಾದದಲ್ಲಿ ಮಾರ್ಕ್ಸ್‌ವಾದವು, 'ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ'ಗೆ ಹೋಲಿಸಿದಂತೆ, ಒಂದು ಭಾರಿ ಹೆಜ್ಜೆ ಮುಂದಿಟ್ಟಿದೆ. 'ಪ್ರಣಾಳಿಕೆ'ಯಲ್ಲಿ ರಾಜ್ಯದ ವಿಷಯವನ್ನು ಇನ್ನೂ ಅತ್ಯಂತ ಅಮೂರ್ತ ರೀತಿಯಲ್ಲಿ, ಅತ್ಯಂತ ಸರ್ವೇಸಾಮಾನ್ಯವಾದ ಪದ ಹಾಗೂ ವಾಕ್ಸರಣಿಗಳಲ್ಲಿ ವಿವೇಚಿಸಲಾಗಿದೆ. ಆದರೆ ಮೇಲಿನ ಉದ್ಧೃತ ಭಾಗದಲ್ಲಿ ವಿಷಯವನ್ನು ಮೂರ್ತ ರೂಪದಲ್ಲಿ ವಿವೇಚಿಸಲಾಗಿದೆ, ತೀರ್ಮಾನವು ತುಂಬ ನಿಷ್ಕೃಷ್ಟವಾಗಿದೆ, ಕರಾರುವಾಕ್ಕಾಗಿದೆ, ವ್ಯಾವಹಾರಿಕವೂ ಸುಲಭಗ್ರಾಹ್ಯವೂ ಆಗಿದೆ. ಎಲ್ಲ ಈ ಮುನ್ನಿನ ಕ್ರಾಂತಿಗಳೂ ರಾಜ್ಯಯಂತ್ರವನ್ನು ಪರಿ

---

* ಈ ಪುಸ್ತಕ ಕನ್ನಡದಲ್ಲೂ ಪ್ರಕಟವಾಗಿದೆ, ಪ್ರಗತಿ ಪ್ರಕಾಶನ, ಮಾಸ್ಕೋ, 1985. – ಸಂ.

ಪೂರ್ಣಗೊಳಿಸಿದವು, ಆದರೆ ವಾಸ್ತವವಾಗಿ ಅದನ್ನು ಮುರಿಯಬೇಕಾಗಿದೆ, ತೊಡೆದು ಹಾಕಬೇಕಾಗಿದೆ, ಎಂಬುದೇ ಆ ತೀರ್ಮಾನವಾಗಿದೆ.

ಈ ತೀರ್ಮಾನವು ರಾಜ್ಯದ ಬಗೆಗೆ ಮಾರ್ಕ್ಸ್‌ವಾದಿ ಸಿದ್ಧಾಂತದ ಮುಖ್ಯ ಹಾಗೂ ಮೂಲಭೂತ ಅಂಶವಾಗಿದೆ. ಈ ಮೂಲಭೂತ ವಿಷಯವನ್ನೇ ಮೇಲುಗೈ ಪಡೆದಿರುವ ಅಧಿಕೃತ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಗಳು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದು; ಇದನ್ನೇ ದ್ವಿತೀಯ ಇಂಟರ್‌ನ್ಯಾಷನಲ್‌ನ ಅಗ್ರಗಣ್ಯ ಸಿದ್ಧಾಂತ ವಾದಿ ಕಾರ್ಲ್ ಕೌತ್‌ಸ್ಕಿ ನಿಜಕ್ಕೂ ವಿರೂಪಗೊಳಿಸಿರುವುದು (ಇದನ್ನು ನಾವು ಮುಂದೆ ಕಾಣಲಿರುವೆವು).

'ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ'ಯು ಇತಿಹಾಸದ ಸ್ಥೂಲ ಸಾರಾಂಶ ವನ್ನು ನೀಡುತ್ತದೆ. ರಾಜ್ಯವನ್ನು ವರ್ಗ ಆಳ್ವಿಕೆಯ ಸಾಧನವನ್ನಾಗಿ ಭಾವಿಸುವಂತೆ ಅದು ನಮ್ಮನ್ನು ಒತ್ತಾಯಿಸುತ್ತದೆ. ಅನಂತರ ಅದು ನಮ್ಮನ್ನು, ಶ್ರಮಜೀವಿ ವರ್ಗವು ಮೊದಲು ತಾನೇ ರಾಜಕೀಯ ಅಧಿಕಾರ ಗಳಿಸಿಕೊಳ್ಳದೆ, ರಾಜಕೀಯ ಆಧಿಪತ್ಯ ವನ್ನು ಸಾಧಿಸಿಕೊಳ್ಳದೆ, ರಾಜ್ಯವನ್ನು "ಆಳುವ ವರ್ಗವಾಗಿ ಸಂಘಟಿತವಾದ ಶ್ರಮ ಜೀವಿ ವರ್ಗವನ್ನಾಗಿ ಪರಿವರ್ತಿಸದೆ" ಬೂರ್ಷ್ವಾಸೀಯನ್ನು ಉರುಳಿಸುವುದು ಸಾಧ್ಯ ವಿಲ್ಲವೆಂಬ ಅನಿವಾರ್ಯ ತೀರ್ಮಾನದತ್ತ ಕರೆದೊಯ್ಯುತ್ತದೆ; ಈ ಶ್ರಮಜೀವಿ ವರ್ಗದ ರಾಜ್ಯವು ವಿಜಯ ಸಾಧಿಸಿದನಂತರ ಕೂಡಲೇ ಕ್ಷಯಿಸಿಹೋಗತೊಡಗುತ್ತದೆ; ಏಕೆಂದರೆ, ವರ್ಗ ವೈರುಧ್ಯತೆಗಳಿಲ್ಲದಂಥ ಸಮಾಜದಲ್ಲಿ ರಾಜ್ಯವು ಅನವಶ್ಯವಾಗು ತ್ತದೆ, ಅದು ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ, ಎಂದದು ತಿಳಿಸುತ್ತದೆ. ಆದರೆ ಐತಿಹಾಸಿಕ ಬೆಳವಣಿಗೆಯ ದೃಷ್ಟಿಯಿಂದ ಬೂರ್ಷ್ವಾ ರಾಜ್ಯದ ಸ್ಥಳದಲ್ಲಿ ಈ ಶ್ರಮಜೀವಿ ವರ್ಗದ ರಾಜ್ಯ ಸ್ಥಾಪಿತವಾಗುವುದು ಹೇಗೆ ಜರುಗಬೇಕು ಎಂಬ ವಿಷಯವನ್ನು ಇಲ್ಲಿ ಎತ್ತ ಲಾಗಿಲ್ಲ.

ಮಾರ್ಕ್ಸ್‌ರವರು ಈ ಪ್ರಶ್ನೆಯನ್ನು 1852ರಲ್ಲಿ ಎತ್ತಿ ಅದಕ್ಕೆ ಉತ್ತರವನ್ನು ನೀಡುತ್ತಾರೆ. ತಮ್ಮ ದ್ವಂದ್ವಾತ್ಮಕ ಭೌತಿಕವಾದ ಸಿದ್ಧಾಂತಕ್ಕೆ ಅನುಗುಣವಾಗಿ ಮಾರ್ಕ್ಸ್‌ರವರು 1848-1851ರ ಕ್ರಾಂತಿಯ ಮಹಾ ವರ್ಷಗಳ ಚಾರಿತ್ರಿಕ ಅನು ಭವವನ್ನು ಆಧಾರವಾಗಿ ತೆಗೆದುಕೊಳ್ಳುತ್ತಾರೆ. ಬೇರೆ ಎಲ್ಲೆಡೆಗಳಲ್ಲಿನಂತೆಯೇ ಇಲ್ಲಿಯೂ ಮಾರ್ಕ್ಸ್‌ರವರ ಸಿದ್ಧಾಂತವು ಅನುಭವದ ಕ್ರೋಡೀಕರಣವಾಗಿದೆ, ಪ್ರಗಾಢ ತಾತ್ವಿಕ ವಿಶ್ವಮನೋಧರ್ಮದಿಂದ ಹಾಗೂ ಇತಿಹಾಸದ ಸಿರಿವಂತ ಜ್ಞಾನದಿಂದ ಅನು ಭವದ ಕ್ರೋಡೀಕರಣವಾಗಿದೆ.

ರಾಜ್ಯದ ಸಮಸ್ಯೆಯನ್ನು ಮೂರ್ತ ರೀತಿಯಲ್ಲಿ ಮುಂದಿಡಲಾಗಿದೆ: ಬೂರ್ಷ್ವಾ ರಾಜ್ಯವು, ಬೂರ್ಷ್ವಾ ಆಧಿಪತ್ಯಕ್ಕೆ ಅವಶ್ಯವಾದ ರಾಜ್ಯಯಂತ್ರವು, ಚಾರಿತ್ರಿಕವಾಗಿ ಹೇಗೆ ಅಸ್ತಿತ್ವಕ್ಕೆ ಬಂದಿತು? ಅದು ಯಾವ ಬದಲಾವಣೆಗಳಿಗೆ ಒಳಗಾಯಿತು? ಬೂರ್ಷ್ವಾ ಕ್ರಾಂತಿಗಳ ಕಾಲದಲ್ಲಿ, ಮರ್ದಿತ ವರ್ಗಗಳ ಸ್ವತಂತ್ರ ಚಳವಳಿಯ

ಎದುರಿಸಲ್ಲಿ ಅದು ಯಾವ ವಿಕಾಸವನ್ನು ಉಂಟುಮಾಡಿತು? ಈ ರಾಜ್ಯಯಂತ್ರಕ್ಕೆ ಸಂಬಂಧಿಸಿ ಶ್ರಮಜೀವಿ ವರ್ಗದ ಕಾರ್ಯಭಾರಗಳು ಯಾವುವು?

ಬೂರ್ಷ್ವಾ ಸಮಾಜದ ವಿಶಿಷ್ಟ ಲಕ್ಷಣವಾದ ಕೇಂದ್ರೀಕೃತ ರಾಜ್ಯಾಧಿಕಾರವು ನಿರಂಕುಶ ಪ್ರಭುತ್ವದ ಪತನದ ಕಾಲಾವಧಿಯಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ರಾಜ್ಯ ಯಂತ್ರದ ಎರಡು ಅತ್ಯಂತ ವಿಶಿಷ್ಟವಾದ ಅಂಗಸಂಸ್ಥೆಗಳೆಂದರೆ ಅಧಿಕಾರಶಾಹಿ ಹಾಗೂ ಸ್ಥಾಯಿಯಾ ಸೈನ್ಯ. ಬೂರ್ಷ್ವಾಸೀಯು ಈ ಅಂಗಸಂಸ್ಥೆಗಳೊಂದಿಗೆ ಸಹಸ್ರಾರು ಎಳೆಗಳಿಂದ ಸಂಬಂಧಿತವಾಗಿರುತ್ತದೆಂದು ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ತಮ್ಮ ಕೃತಿಗಳಲ್ಲಿ ಪದೇಪದೇ ತೋರಿಸಿಕೊಟ್ಟಿದ್ದಾರೆ. ಪ್ರತಿಯೊಬ್ಬ ಕಾರ್ಮಿಕನ ಅನುಭವವೂ ಈ ಸಂಬಂಧವನ್ನು ಅತ್ಯಂತ ಸ್ಪಷ್ಟವಾಗಿ ಹಾಗೂ ಎದ್ದು ಕಾಣುವಂತೆ ಎತ್ತಿ ತೋರಿಸುತ್ತದೆ. ಕಾರ್ಮಿಕ ವರ್ಗವು ಈ ಸಂಬಂಧವನ್ನು ತನ್ನ ಸ್ವಂತ ಕಟು ಅನುಭವದಿಂದ ಕಂಡುಕೊಳ್ಳುವುದನ್ನು ಕಲಿಯುತ್ತದೆ. ಆದ್ದರಿಂದಲೇ ಅದು ಈ ಸಂಬಂಧದ ಅನಿವಾರ್ಯತೆಯನ್ನು ತೋರಿಸಿಕೊಡುವ ಸಿದ್ಧಾಂತವನ್ನು ಅಷ್ಟು ಸುಲಭವಾಗಿ ಗ್ರಹಿಸುವುದು ಮತ್ತು ಅಷ್ಟು ದೃಢವಾಗಿ ಕಲಿಯುವುದು. ಪೆಟಿ ಬೂರ್ಷ್ವಾ ಡೆಮೊಕ್ರಾಟರು ಈ ಸಿದ್ಧಾಂತವನ್ನು ಅಜ್ಞತೆಯಿಂದ ಹಾಗೂ ಲಾಘವವಾಗಿ ನಿರಾಕರಿಸುತ್ತಾರೆ, ಅಥವಾ ಇನ್ನೂ ಹೆಚ್ಚು ಲಾಘವವಾಗಿ ಅದನ್ನು "ಒಟ್ಟಿನ ಮೇಲೆ" ಒಪ್ಪಿಕೊಳ್ಳುತ್ತಾರೆ. ಆದರೆ ಅದರಿಂದ ಸೂಕ್ತ ವ್ಯಾವಹಾರಿಕ ತೀರ್ಮಾನಗಳಿಗೆ ಬರುವುದನ್ನು ಮರೆಯುತ್ತಾರೆ.

ಅಧಿಕಾರಶಾಹಿಯೂ ಸ್ಥಾಯಿಯಾ ಸೈನ್ಯವೂ ಬೂರ್ಷ್ವಾ ಸಮಾಜ ದೇಹಕ್ಕೆ ಹತ್ತಿಕೊಂಡಿರುವ "ಪರೋಪಜೀವಿ"ಗಳಾಗಿವೆ. ಇವು ಆ ಸಮಾಜವನ್ನು ವಿಭಜಿಸಿರುವ ಆಂತರಿಕ ವೈರುಧ್ಯಗಳಿಂದ ಸೃಜಿತವಾದುದಾಗಿವೆ, ಆದರೆ ಆ ಸಮಾಜದ ಪ್ರಾಣಾಧಾರ ರಂಧ್ರಗಳಲ್ಲೆಲ್ಲ "ಗಿಡಿಕಿ" ತುಂಬಿರುವಂಥ ಪರೋಪಜೀವಿಗಳಾಗಿವೆ. ಅಧಿಕೃತ ಸೋಷಲ್ ಡೆಮೊಕ್ರಸಿಯಲ್ಲಿ ಈಗ ಮೇಲುಗೈ ಪಡೆದಿರುವ ಕೌತ್‌ಸ್ಕಿವಾದಿ ಸಂದರ್ಭಸಾಧಕವಾದವು, ರಾಜ್ಯವು ಒಂದು ಪರೋಪಜೀವಿ ಅಂಗಸತ್ವ ಎಂಬ ಅಭಿಪ್ರಾಯವನ್ನು ಅರಾಜಕತಾವಾದದ ವಿಶಿಷ್ಟ ಹಾಗೂ ಪ್ರತ್ಯೇಕ ಲಕ್ಷಣವೆಂದು ಪರಿಗಣಿಸುತ್ತದೆ. ಈ ರೀತಿ ಮಾರ್ಕ್ಸ್‌ವಾದವನ್ನು ವಿರೂಪಗೊಳಿಸುವುದು ಸಂಕುಚಿತಮತಿಗಳಿಗೆ ತುಂಬ ಅನುಕೂಲವಾದುದೆಂದು ಬೇರೆ ಹೇಳಬೇಕಾಗಿಲ್ಲ. ಈ ಸಂಕುಚಿತಮತಿಗಳು ಸಮಾಜವಾದವನ್ನು, ಸಾಮ್ರಾಜ್ಯಶಾಹಿ ಯುದ್ಧವನ್ನು ಸಮರ್ಥಿಸುವ ಹಾಗೂ ಅಂದಗೊಳಿಸುವ ಕೀಳರಿಯುದ ಅವಮಾನಕರ ಮಟ್ಟಕ್ಕೆ ಇಳಿಸಿ, ಆ ಯುದ್ಧಕ್ಕೆ "ತಾಯ್ನಾಡ ರಕ್ಷಣೆ"ಯ ಪ್ರಕಲ್ಪನೆ ನೀಡ ಹೋಗುತ್ತಾರೆ. ಆದಾಗ್ಯೂ ಇದು ನಿಸ್ಸಂದೇಹವಾಗಿಯೂ ಭ್ರಷ್ಟೀಕರಣವೇ.

ಸಾಮಂತಶಾಹಿಯು ಪತನದನಂತರ ಯೂರೋಪು ಕಂಡ ಅನೇಕಾನೇಕ ಬೂರ್ಷ್ವಾ ಕ್ರಾಂತಿಗಳೆಲ್ಲವುಗಳ ಸಮಯದಲ್ಲೂ ಅಧಿಕಾರಶಾಹಿ ಹಾಗೂ ಸೈನಿಕಸಾಧನವನ್ನು

ಅಭಿವೃದ್ಧಿಗೊಳಿಸುವುದು, ಪರಿಪೂರ್ಣಗೊಳಿಸುವುದು ಹಾಗೂ ದೃಢಗೊಳಿಸುವುದು ಸಾಗುತ್ತಲೇ ಹೋಯಿತು. ನಿರ್ದಿಷ್ಟವಾಗಿ ಬಹುಮಟ್ಟಿಗೆ ಈ ಸಾಧನದ ಮೂಲಕವೇ ದೊಡ್ಡ ಬೂರ್ಷ್ವಾಸೀಯು ಪೆಟಿ ಬೂರ್ಷ್ವಾಸೀಯನ್ನು ತನ್ನ ಕಡೆಗೆ ಆಕರ್ಷಿಸುವುದು ಮತ್ತು ತನ್ನ ಅಧೀನದಲ್ಲಿರಿಸಿಕೊಳ್ಳುವುದು. ಈ ಸಾಧನವು ರೈತರ, ಪುಟ್ಟ ಕೈಕೆಲಸಗಾರರ, ವ್ಯಾಪಾರಿಗಳ ಮತ್ತು ಅಂಥವೇ ಜನರ ಮೇಲು ವಿಭಾಗಗಳಿಗೆ ತುಲನಾತ್ಮಕವಾಗಿ ಹೆಚ್ಚು ಸುಖಕರವಾದ, ಶಾಂತವಾದ ಹಾಗೂ ಗೌರವಾರ್ಹವಾದ ಕೆಲಸಗಳನ್ನು ಒದಗಿಸಿ ಅಂಥ ಕೆಲಸಗಳನ್ನು ಹೊಂದಿರುವವರನ್ನು ಜನತೆಗೂ ಮೇಲೆ ಎತ್ತಿ ಇರಿಸುತ್ತದೆ. 1917ರ ಫೆಬ್ರುವರಿ 27ರನಂತರದ ಆರು ತಿಂಗಳುಗಳಲ್ಲಿ ರಷ್ಯದಲ್ಲಿ ಏನು ಜರುಗಿತೆಂಬುದನ್ನು ಪರಿಗಣಿಸಿ ನೋಡಿ. ಹಿಂದೆ ಕಾಳಶತಕರಿ[55]ಗೇ ಆದ್ಯತೆ ನೀಡಿ ಕೊಡಲಾಗುತ್ತಿದ್ದ ಅಧಿಕಾರ ಪದವಿಗಳು ಈಗ ಕಾಡೆಟ್ಟು[56]ರ, ಮೆನ್ಷೆವಿಕರ ಹಾಗೂ ಸಮಾಜವಾದಿ-ಕ್ರಾಂತಿಕಾರಿಗಳ ಕೊಳ್ಳೆಯಾಗಿವೆ. ಯಾರೂ ಯಾವ ಗಹನವಾದ ಸುಧಾರಣೆಗಳನ್ನು ಜಾರಿಗೆ ತರುವುದನ್ನು ನಿಜಕ್ಕೂ ಯೋಚಿಸುತ್ತಲೇ ಇಲ್ಲ. "ಸಂವಿಧಾನ ಸಭೆ ಸೇರುವವರೆಗೂ" ಅವುಗಳನ್ನು ಮುಂದೆ ಹಾಕಲು, ಸಂವಿಧಾನ ಸಭೆ ಸೇರಿಸುವುದನ್ನೇ ಯುದ್ಧಾನಂತರದವರೆಗೂ ಏಕಪ್ರಕಾರವಾಗಿ ಮುಂದೆ ಹಾಕಲು, ಎಲ್ಲ ಯತ್ನ ಮಾಡಲಾಗುತ್ತಿದೆ! ಆದರೆ ಕೊಳ್ಳೆ ಹಂಚಿಕೊಳ್ಳುವುದರಲ್ಲಿ, ಸಚಿವರುಗಳು, ಉಪಸಚಿವರುಗಳು, ಗವರ್ನರ್-ಜನರಲ್ಲರುಗಳು ಇತ್ಯಾದಿ ಇತ್ಯಾದಿ ಲಾಭದಾಯಕ ಪದವಿಗಳನ್ನು ಪಡೆದುಕೊಳ್ಳುವುದರಲ್ಲಿ, ಸಂವಿಧಾನ ಸಭೆಗಾಗಿ ಕಾಯಬೇಕಾಗಿಲ್ಲ, ಅದು ಸೇರುವವರೆಗೂ ತಡಮಾಡಬೇಕಿಲ್ಲ! ಸರಕಾರವನ್ನು ರಚಿಸುವುದರಲ್ಲಿ ಆಡಲಾಗುತ್ತಿರುವ ಕೂಟ ಆಯ್ಕೆ ಆಟವು, ಸಾರಭೂತವಾಗಿ, ಈ "ಕೊಳ್ಳೆ"ಯನ್ನು ಹಂಚಿಕೊಳ್ಳುವುದರ ಮತ್ತು ಪುನರ್‌ಹಂಚಿಕೆ ಮಾಡಿಕೊಳ್ಳುವುದರ ಅಭಿವ್ಯಕ್ತಿಯೇ ಆಗಿದೆ. ಈ ಹಂಚಿಕೆ ಮತ್ತು ಪುನರ್‌ಹಂಚಿಕೆ ದೇಶದಾದ್ಯಂತ, ಕೇಂದ್ರ ಹಾಗೂ ಸ್ಥಳೀಯ ಸರಕಾರದ ಪ್ರತಿಶಾಖೆಯಲ್ಲೂ ಜರುಗುತ್ತಿವೆ. 1917ರ ಫೆಬ್ರುವರಿ 27 ಹಾಗೂ ಆಗಸ್ಟ್ 27ರ ನಡುವಿನ ಆರು ತಿಂಗಳ ಕಾಲದ ಸಾಧನೆಗಳನ್ನು ನಿರ್ವಿವಾದವಾಗಿ, ವಸ್ತುನಿಷ್ಠವಾಗಿ ಹೀಗೆ ಕ್ರೋಡೀಕರಿಸಿ ಹೇಳಬಹುದು: ಸುಧಾರಣೆಗಳನ್ನು ಮುಂದೆ ಹಾಕಲಾಗಿದೆ, ಅಧಿಕಾರ ಸ್ಥಾನಗಳನ್ನು ಹಂಚಿಕೊಳ್ಳುವುದನ್ನು ಸಾಧಿಸಲಾಗಿದೆ, ಈ ರೀತಿ ಹಂಚಿಕೆಯಲ್ಲಾದ "ತಪ್ಪು"ಗಳನ್ನು ಕೆಲವು ಪುನರ್‌ಹಂಚಿಕೆಗಳ ಮೂಲಕ ತಿದ್ದಲಾಗಿದೆ.

ಆದರೆ ಈ ಅಧಿಕಾರಶಾಹಿ ಸಾಧನವನ್ನು ನಾನಾ ಬೂರ್ಷ್ವಾ ಹಾಗೂ ಪೆಟಿ ಬೂರ್ಷ್ವಾ ಪಾರ್ಟಿಗಳ ಮಧ್ಯೆ (ರಷ್ಯದ ಪ್ರಸಂಗದಲ್ಲಿ ಕಾಡೆಟ್ಟರು, ಸಮಾಜವಾದಿ-ಕ್ರಾಂತಿಕಾರಿಗಳು, ಮೆನ್ಷೆವಿಕರು ಇವರ ಮಧ್ಯೆ) ಎಷ್ಟು ಹೆಚ್ಚು "ಪುನರ್‌ಹಂಚಿಕೆ" ಮಾಡಲಾಗುತ್ತದೋ, ಮರ್ದಿತ ವರ್ಗಗಳೂ ಅವುಗಳ ನಾಯಕತ್ವದಲ್ಲಿರುವ ಶ್ರಮಜೀವಿ ವರ್ಗವೂ ಇಡೀ ಬೂರ್ಷ್ವಾ ಸಮಾಜದ ಬಗೆಗೆ ತಮ್ಮ ನಿರ್ದಾಕ್ಷಿಣ್ಯ ವೈರವು

ಅಷ್ಟೂ ಹೆಚ್ಚು ತೀವ್ರವಾಗಿ ಮನಗಾಣತೊಡಗುತ್ತವೆ. ಆದ್ದರಿಂದಲೇ ಎಲ್ಲ ಬೂರ್ಷ್ವಾ ಪಾರ್ಟಿಗಳೂ, ಅವುಗಳ ಮಧ್ಯದ ಅತ್ಯಂತ ಪ್ರಜಾಸತ್ತಾತ್ಮಕ ಹಾಗೂ "ಕ್ರಾಂತಿಕಾರಿ-ಪ್ರಜಾಸತ್ತಾತ್ಮಕ" ಪಾರ್ಟಿಗಳೂ ಸಹ, ಕ್ರಾಂತಿಕಾರಿ ಶ್ರಮಜೀವಿ ವರ್ಗದ ವಿರುದ್ಧ ದಮನಕಾರಿ ಕ್ರಮಗಳನ್ನು ತೀವ್ರಗೊಳಿಸುವ, ಬಲೋದ್ಬಂಧದ ಸಾಧನವನ್ನು, ಅಂದರೆ ರಾಜ್ಯಯಂತ್ರವನ್ನು, ಬಲಗೊಳಿಸುವ ಆವಶ್ಯಕತೆಯನ್ನು ಕಂಡುಕೊಳ್ಳುವುದು. ಘಟನೆಗಳು ಈ ಮಾರ್ಗ ಹಿಡಿಯುವುದರಿಂದಾಗಿ ಕ್ರಾಂತಿಯು "ತನ್ನೆಲ್ಲ ವಿನಾಶಾತ್ಮಕ ಶಕ್ತಿಯನ್ನೂ ರಾಜ್ಯಾಧಿಕಾರದ ವಿರುದ್ಧ" "ಕೇಂದ್ರೀಕರಿಸುವ," ರಾಜ್ಯಯಂತ್ರವನ್ನು ಸುಧಾರಿಸುವುದನ್ನಲ್ಲ ಆದರೆ ಅದನ್ನು ತೊಡೆದು ಹಾಕುವುದನ್ನು ಮತ್ತು ನಾಶಗೊಳಿಸುವುದನ್ನು ತನ್ನ ಗುರಿಯನ್ನಾಗಿ ಇರಿಸಿಕೊಳ್ಳುವ ಬಲವಂತಕ್ಕೊಳಗಾಗುತ್ತದೆ.

ವಿಷಯವನ್ನು ಈ ರೀತಿ ಮುಂದಿಡುವುದಕ್ಕೆ ದಾರಿ ಮಾಡಿಕೊಟ್ಟಿರುವುದು ಕೇವಲ ತಾರ್ಕಿಕ ಚಿಂತನೆಯೇನಲ್ಲ ಆದರೆ ವಾಸ್ತವಿಕ ಬೆಳವಣಿಗೆಗಳು, 1848-1851ರ ವಾಸ್ತವಿಕ ಅನುಭವ. ನಾಶಗೊಳಿಸಿದ ರಾಜ್ಯಯಂತ್ರದ ಸ್ಥಳವನ್ನು ಬೇರೆ ಯಾವುದು ಪಡೆದುಕೊಳ್ಳಬೇಕು ಎಂಬ ಪ್ರಶ್ನೆಯನ್ನು ಮಾರ್ಕ್ಸ್‌ರವರು 1852ರಲ್ಲಿ ವಿಶಿಷ್ಟವಾಗಿ ಎತ್ತಲಿಲ್ಲ ಎಂಬ ಸಂಗತಿಯು, ಅವರು ಚಾರಿತ್ರಿಕ ಅನುಭವದ ದೃಢ ನೆಲೆಗೆ ಎಷ್ಟು ಕಟ್ಟುನಿಟ್ಟಾಗಿ ಅಂಟಿಕೊಂಡಿದ್ದರೆಂಬುದನ್ನು ತೋರಿಸಿ ಕೊಡುತ್ತದೆ. ಈ ಪ್ರಶ್ನೆಯನ್ನು ಪರಿಶೀಲಿಸಲು ಆಗ ಅನುಭವವು ಇನ್ನೂ ಸಾಮಗ್ರಿಯನ್ನು ಒದಗಿಸಿರಲಿಲ್ಲ. ಈ ಪ್ರಶ್ನೆಯನ್ನು ಇತಿಹಾಸವು ಆನಂತರ, 1871ರಲ್ಲಷ್ಟೆ, ಪರ್ಯಾಲೋಚಿಸಬೇಕಾದ ವಿಷಯಗಳ ಪಟ್ಟಿಯಲ್ಲಿ ಸೇರಿಸಿತು. 1852ರಲ್ಲಿ ವೈಜ್ಞಾನಿಕ ವೀಕ್ಷಣೆಯ ನಿಷ್ಕೃಷ್ಟತೆಯೊಂದಿಗೆ ದೃಢಪಡಿಸಿ ಹೇಳಬಹುದಾಗಿದ್ದುದೆಲ್ಲ, ಶ್ರಮಜೀವಿ ವರ್ಗ ಕ್ರಾಂತಿಯು ರಾಜ್ಯಾಧಿಕಾರದ ವಿರುದ್ಧ "ತನ್ನೆಲ್ಲ ವಿನಾಶಾತ್ಮಕ ಶಕ್ತಿಗಳನ್ನೂ ಕೇಂದ್ರೀಕರಿಸುವ," ರಾಜ್ಯಯಂತ್ರವನ್ನು "ತೊಡೆದು ಹಾಕುವ" ಕಾರ್ಯಭಾರದ ಸಮೀಪ ತಲುಪಿದ್ದಿತು, ಎಂದಷ್ಟೆ.

ಇಲ್ಲಿ ಈ ಪ್ರಶ್ನೆ ಉದ್ಭವಿಸಬಹುದು: 1848-1851ರ ನಡುವಿನ ಮೂರು ವರ್ಷಗಳ ಫ್ರಾನ್ಸಿನ ಇತಿಹಾಸದ ಮೇಲೆ ಆಧರಿಸಿದ ಮಾರ್ಕ್ಸ್‌ರವರ ಅನುಭವ, ವೀಕ್ಷಣೆ ಹಾಗೂ ತೀರ್ಮಾನಗಳನ್ನು ಅದಕ್ಕೂ ಹೆಚ್ಚು ವಿಸ್ತಾರವಾದ ಕ್ಷೇತ್ರಕ್ಕೆ ಅನ್ವಯಿಸುವಂತೆ ಸಾಮಾನ್ಯೀಕರಿಸುವುದು ಸರಿಯೆ? ಈ ಪ್ರಶ್ನೆಯನ್ನು ಪರಿಶೀಲಿಸಲು ಹೋಗುವ ಮುನ್ನ ಎಂಗೆಲ್ಸ್‌ರವರು ಮಾಡಿದ ಒಂದು ಹೇಳಿಕೆಯನ್ನು ನೆನಪಿಗೆ ತಂದುಕೊಂಡು ಅನಂತರ ಸತ್ಯಸಂಗತಿಗಳನ್ನು ಪರೀಕ್ಷಿಸೋಣ.

'ಹದಿನೆಂಟನೆಯ ಬ್ರೂಮೇರ್'ನ ಮೂರನೆಯ ಆವೃತ್ತಿಯ ಪೀಠಿಕೆಯಲ್ಲಿ, ಎಂಗೆಲ್ಸ್ ಬರೆದರು:

> "ಬೇರಾವ ದೇಶಗಳಿಗಿಂತ ಹೆಚ್ಚಾಗಿ ಫ್ರಾನ್ಸ್ ದೇಶದಲ್ಲಿಯೇ ಚಾರಿತ್ರಿಕ ವರ್ಗ ಹೋರಾಟಗಳನ್ನು ಪ್ರತಿಬಾರಿಯೂ ಅವುಗಳ ನಿರ್ಧಾರಕ ಕೊನೆ

ತಲುಪುವವರೆಗೂ ನಡೆಸಲಾದುದು ಮತ್ತು ತತ್ಫಲವಾಗಿ ಅಲ್ಲಿಯೇ ಬದಲಾಗುತ್ತಿದ್ದ ರಾಜಕೀಯ ರೂಪಗಳು ಅತ್ಯಂತ ಸ್ಫುಟ ರೂಪುರೇಷೆಗಳಲ್ಲಿ ಮುದ್ರಿತವಾಗಿದ್ದುದು. ಈ ರಾಜಕೀಯ ರೂಪಗಳೊಳಗೇ ವರ್ಗ ಹೋರಾಟಗಳು ನಡೆಯುತ್ತಿದ್ದುದು ಮತ್ತು ಅವುಗಳ ಫಲಿತಾಂಶಗಳು ಕ್ರೋಡೀಕೃತವಾದುದು. ಮಧ್ಯಯುಗದಲ್ಲಿ ಸಾಮಂತಶಾಹಿ ವ್ಯವಸ್ಥೆಯ ಕೇಂದ್ರವಾಗಿದ್ದ, ಪುನರುಜ್ಜೀವನ ಕಾಲದಿಂದೀಚೆಗೆ ಸಾಮಾಜಿಕ ಅಂತಸ್ತುಗಳ ಆಧಾರದ ಏಕೀಕೃತ ರಾಜಪ್ರಭುತ್ವದ ಆದರ್ಶ ದೇಶವೆನಿಸಿಕೊಂಡಿದ್ದ ಫ್ರಾನ್ಸ್ ದೇಶವು ಮಹಾ ಕ್ರಾಂತಿಯಲ್ಲಿ ಸಾಮಂತಶಾಹಿ ವ್ಯವಸ್ಥೆಯನ್ನು ಧ್ವಂಸ ಮಾಡಿ ಬೂರ್ಷ್ವಾಸೀಯ ಆಧಿಪತ್ಯವನ್ನು ಬೇರೆ ಯಾವುದೇ ಯೂರೋಪಿಯನ್ ದೇಶದಲ್ಲೂ ಸ್ಥಾಪಿಸಲಾಗದಿದ್ದ ಅಸದೃಶ ಶ್ರೇಷ್ಠ ಪರಿಶುದ್ಧ ರೀತಿಯಲ್ಲಿ ಸ್ಥಾಪಿಸಿತು. ಆಧಿಪತ್ಯ ನಡೆಸುವ ಬೂರ್ಷ್ವಾಸೀಯ ವಿರುದ್ಧ ಮೇಲೇರಲು ಪ್ರಯತ್ನಿಸುತ್ತಿದ್ದ ಶ್ರಮಜೀವಿ ವರ್ಗದ ಹೋರಾಟವು ಬೇರೆಲ್ಲೂ ತಿಳಿದುಬರದಿದ್ದಂಥ ತೀವ್ರ ರೂಪದಲ್ಲಿ ಕಾಣಿಸಿಕೊಂಡುದೂ ಇಲ್ಲಿಯೇ." (ಪು. 4, 1907ನೆಯ ಆವೃತ್ತಿ.)

ಎಂಗೆಲ್ಸ್‌ರ ಮೇಲಿನ ಹೇಳಿಕೆಯಲ್ಲಿನ ಕೊನೆಯ ಅಂಶ ಹಳತಾಗಿ ಹೋಗಿದೆ. ಏಕೆಂದರೆ 1871ರಿಂದೀಚೆಗೆ ಫ್ರೆಂಚ್ ಶ್ರಮಜೀವಿ ವರ್ಗದ ಕ್ರಾಂತಿಕಾರಿ ಹೋರಾಟದಲ್ಲಿ ಸ್ತಬ್ಧತೆ ಉಂಟಾಗಿದೆ. ಆದರೂ ಈ ಸ್ತಬ್ಧತೆ ಎಷ್ಟೇ ದೀರ್ಘಕಾಲವಿರಬಹುದಾದರೂ, ಬರಲಿರುವ ಶ್ರಮಜೀವಿ ವರ್ಗ ಕ್ರಾಂತಿಯಲ್ಲಿ ಫ್ರಾನ್ಸ್ ವರ್ಗ ಹೋರಾಟವನ್ನು ಅಂತ್ಯದವರೆಗೂ ನಡೆಸುವ ಶ್ರೇಷ್ಠ ದೇಶವಾಗಿ ತೋರಿಸಿಕೊಳ್ಳುವ ಸಾಧ್ಯತೆಯನ್ನು ಅದು ಹೊರತಾಗಿಸುವುದಿಲ್ಲ.

ಶತಮಾನದ ತಿರುವಿನಲ್ಲಿ ಮುಂದುವರಿದ ದೇಶಗಳ ಇತಿಹಾಸದತ್ತ ಸ್ಥೂಲ ದೃಷ್ಟಿ ಹರಿಸೋಣ. ಈ ದೇಶಗಳಲ್ಲಿ ಒಂದೇ ಪ್ರಕ್ರಿಯೆ ಹೆಚ್ಚು ನಿಧಾನವಾಗಿ, ಹೆಚ್ಚು ವೈವಿಧ್ಯಪೂರ್ಣ ರೂಪಗಳಲ್ಲಿ ಹೆಚ್ಚು ವಿಶಾಲವಾದ ಕ್ಷೇತ್ರದಲ್ಲಿ ಜರುಗಿತೆಂಬುದನ್ನು ನಾವು ಕಾಣುವೆವು: ಒಂದು ಕಡೆ ಗಣತಂತ್ರೀಯ ದೇಶಗಳಲ್ಲೂ (ಫ್ರಾನ್ಸ್, ಅಮೆರಿಕ, ಸ್ವಿಟ್ಸರ್ಲೆಂಡ್) ಮತ್ತು ರಾಜಪ್ರಭುತ್ವಗಳಲ್ಲೂ (ಬ್ರಿಟನ್, ಸ್ವಲ್ಪ ಮಟ್ಟಿಗೆ ಜರ್ಮನಿ, ಇಟಲಿ, ಸ್ಕ್ಯಾಂಡಿನೇವಿಯನ್ ದೇಶಗಳು, ಇತ್ಯಾದಿ) "ಸಂಸದೀಯ ಅಧಿಕಾರ"ದ ಬೆಳವಣಿಗೆ; ಮತ್ತೊಂದು ಕಡೆ, ಬೂರ್ಷ್ವಾ ಸಮಾಜದ ಅಡಿಪಾಯಗಳು ಬದಲಾಗದೆಯೇ, ಅಧಿಕಾರಸ್ಥಾನಗಳ "ಕೊಳ್ಳೆ"ಗಳನ್ನು ಹಂಚಿಕೊಂಡ ಹಾಗೂ ಪುನರ್‌ಹಂಚಿಕೆ ಮಾಡಿಕೊಂಡ ನಾನಾ ಬೂರ್ಷ್ವಾ ಹಾಗೂ ಪೆಟಿ ಬೂರ್ಷ್ವಾ ಪಾರ್ಟಿಗಳ ಮಧ್ಯೆ ಅಧಿಕಾರಕ್ಕಾಗಿ ಹೋರಾಟ; ಮತ್ತು ಕೊನೆಯದಾಗಿ, "ಕಾರ್ಯಕಾರಿ ಅಧಿಕಾರ"ದ, ಅದರ ಅಧಿಕಾರಶಾಹಿ ಹಾಗೂ ಸೈನಿಕ ಸಾಧನದ ಪರಿಪೂರ್ಣೀಕರಣ ಹಾಗೂ ದೃಢೀಕರಣ.

ಈ ಲಕ್ಷಣಗಳು ಒಟ್ಟಿನ ಮೇಲೆ ಎಲ್ಲ ಬಂಡವಾಳಶಾಹಿ ರಾಜ್ಯಗಳ ಇಡೀ ಆಧುನಿಕ ವಿಕಾಸಕ್ಕೆ ಸರ್ವಸಾಮಾನ್ಯವಾದವುಗಳೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. 1848-1851ರ ಮೂರು ವರ್ಷಗಳಲ್ಲಿ ಫ್ರಾನ್ಸ್ ಇಡೀ ಬಂಡವಾಳಶಾಹಿ ಜಗತ್ತಿನ ಬೆಳವಣಿಗೆಯ ವಿಶಿಷ್ಟ ಪ್ರಕ್ರಿಯೆಗಳನ್ನೇ ಶೀಘ್ರವಾದ, ತೀಕ್ಷ್ಣವಾದ ಹಾಗೂ ಸಾಂದ್ರೀಕೃತವಾದ ರೀತಿಯಲ್ಲಿ ತೋರಿಸಿಕೊಟ್ಟಿತು.

ಸಾಮ್ರಾಜ್ಯಶಾಹಿ ಯುಗದಲ್ಲಿ – ಬ್ಯಾಂಕ್ ಬಂಡವಾಳದ ಯುಗದಲ್ಲಿ, ಬೃಹತ್ ಬಂಡವಾಳಶಾಹಿ ಏಕಸ್ವಾಮ್ಯಗಳ, ಏಕಸ್ವಾಮ್ಯ ಬಂಡವಾಳವಾದವು ರಾಜ್ಯ-ಏಕಸ್ವಾಮ್ಯ ಬಂಡವಾಳವಾದವಾಗಿ ಬೆಳವಣಿಗೆಯಾಗುವ ಯುಗದಲ್ಲಿ – "ರಾಜ್ಯಯಂತ್ರ"ವು ಅಸಾಧಾರಣವಾಗಿ ದೃಢಗೊಂಡುದನ್ನೂ, ಶ್ರಮಜೀವಿ ವರ್ಗದ ವಿರುದ್ಧ ದಮನಕಾರಿ ಕ್ರಮಗಳನ್ನು ತೀವ್ರಗೊಳಿಸುವುದಕ್ಕೆ ಸಂಬಂಧಿಸಿ "ರಾಜ್ಯಯಂತ್ರ"ದ ಅಧಿಕಾರಶಾಹಿ ಹಾಗೂ ಸೈನಿಕ ಸಾಧನವು ಅಭೂತಪೂರ್ವವಾಗಿ ಬೆಳವಣಿಗೆಗೊಂಡುದನ್ನೂ ಸ್ಪಷ್ಟವಾಗಿ ಕಾಣಬಹುದು. ಇದು ರಾಜಪ್ರಭುತ್ವಗಳಲ್ಲಷ್ಟೆ ಅಲ್ಲ, ಅತ್ಯಂತ ಸ್ವತಂತ್ರವೆನಿಸಿಕೊಂಡ ಗಣತಂತ್ರೀಯ ದೇಶಗಳಲ್ಲೂ ಕಂಡುಬಂದಿದೆ.

ಜಾಗತಿಕ ಇತಿಹಾಸವು ಈಗ 1852ರಲ್ಲಿದ್ದುದಕ್ಕಿಂತ ಅಪ್ರತಿಮವಾಗಿ ಹೆಚ್ಚು ವಿಶಾಲವಾದ ಪ್ರಮಾಣದಲ್ಲಿ, ಶ್ರಮಜೀವಿ ವರ್ಗದ ಕ್ರಾಂತಿಯ "ಎಲ್ಲ ಶಕ್ತಿಗಳನ್ನೂ" ರಾಜ್ಯಯಂತ್ರವನ್ನು "ತೊಡೆದು ಹಾಕುವುದರ" ಮೇಲೆ "ಕೇಂದ್ರೀಕರಿಸುವುದರತ್ತವೇ" ನಿಸ್ಸಂದೇಹವಾಗಿಯೂ ಕರೆದೊಯ್ಯುತ್ತಿದೆ.

ತೊಡೆದು ಹಾಕಲಾದ ರಾಜ್ಯಯಂತ್ರದ ಸ್ಥಳದಲ್ಲಿ ಶ್ರಮಜೀವಿ ವರ್ಗವು ಏನನ್ನು ಇರಿಸಲಿರುವುದು ಎಂಬುದನ್ನು ಪ್ಯಾರಿಸ್ ಕಮ್ಯೂನ್ ಒದಗಿಸಿದ ಅತ್ಯುನ್ನತವಾಗಿ ಬೋಧಪ್ರದವಾದ ಸಾಮಗ್ರಿಯು ಸೂಚಿಸುತ್ತದೆ.

## 3. 1852ರಲ್ಲಿ ಮಾರ್ಕ್ಸ್‌ರವರು ಈ ಪ್ರಶ್ನೆಯನ್ನು ಮುಂದಿಟ್ಟ ರೀತಿ*

ಮಾರ್ಕ್ಸ್‌ರವರು 1852ರ ಮಾರ್ಚ್ 5ರಂದು ವೆಯ್ಡೆಮೆಯರ್‌ಗೆ ಬರೆದ ಪತ್ರದ ಉದ್ಧೃತ ಭಾಗಗಳನ್ನು 1907ರಲ್ಲಿ ಮೇರಿಂಗ್‌ರವರು *Neue Zeit* ('ನೋಯೆ ತ್ಸೈತ್') (ಸಂ. XXV, 2, ಪು. 164) ಪತ್ರಿಕೆ[57]ಯಲ್ಲಿ ಪ್ರಕಟಿಸಿದರು. ಈ ಪತ್ರವು, ಇತರ ಅನೇಕ ವಿಷಯಗಳ ಜೊತೆಗೆ, ಕೆಳಗಿನ ಗಮನಾರ್ಹ ಅಭಿಪ್ರಾಯೋಕ್ತಿಯನ್ನೂ ಒಳಗೊಂಡಿದ್ದಿತು.

---

* ದ್ವಿತೀಯ ಆವೃತ್ತಿಯಲ್ಲಿ ಸೇರಿಸಿದುದು.

"ಇನ್ನು ನನ್ನ ಮಟ್ಟಿಗೆ ಹೇಳುವುದಾದರೆ, ಆಧುನಿಕ ಸಮಾಜದಲ್ಲಿ ವರ್ಗಗಳು ಅಸ್ತಿತ್ವದಲ್ಲಿವೆ, ಅವುಗಳ ನಡುವೆ ಹೋರಾಟ ನಡೆಯುತ್ತಿರುತ್ತದೆ ಎಂದು ಪತ್ತೆ ಹಚ್ಚಿದುದಕ್ಕಾಗಿ ನನಗೇನೂ ಪ್ರಶಸ್ತಿ ಸಲ್ಲಬೇಕಾಗಿಲ್ಲ. ನನಗಿಂತ ತುಂಬ ಮುನ್ನವೇ ಬೂರ್ಷ್ವಾ ಇತಿಹಾಸಕಾರರು ಈ ವರ್ಗ ಹೋರಾಟದ ಚಾರಿತ್ರಿಕ ಬೆಳವಣಿಗೆಯನ್ನು, ಬೂರ್ಷ್ವಾ ಅರ್ಥಶಾಸ್ತ್ರಜ್ಞರು ವರ್ಗಗಳ ಆರ್ಥಿಕ ಸ್ವರೂಪವನ್ನು, ವರ್ಣಿಸಿದ್ದರು. ನಾನು ಹೊಸದಾಗಿ ಏನನ್ನು ಮಾಡಿದೆನೆಂದರೆ, ಈ ಕೆಳಗಿನವನ್ನು ರುಜುವಾತು ಮಾಡಿದೆ: (1) ವರ್ಗಗಳ ಅಸ್ತಿತ್ವವು ಉತ್ಪಾದನೆಯ ಬೆಳವಣಿಗೆಯಲ್ಲಿನ ನಿರ್ದಿಷ್ಟ ಚಾರಿತ್ರಿಕ ಮಜಲುಗಳೊಂದಿಗಷ್ಟೆ ಸಂಬಂಧಿತವಾಗಿದೆ, (historische Entwicklungsphasen der Produktion); (2) ವರ್ಗ ಹೋರಾಟವು ಅವಶ್ಯವಾಗಿಯೇ ಶ್ರಮಜೀವಿ ವರ್ಗದ ಸರ್ವಾಧಿಕಾರತ್ವಕ್ಕೆ ದಾರಿ ಮಾಡಿಕೊಡುತ್ತದೆ; (3) ಈ ಸರ್ವಾಧಿಕಾರತ್ವವೇ ಎಲ್ಲ ವರ್ಗಗಳ ನಿರ್ಮೂಲನಕ್ಕೆ ಮತ್ತು ವರ್ಗರಹಿತ ಸಮಾಜಕ್ಕೆ ಸ್ಥಿತ್ಯಂತರ ಘಟ್ಟವಾಗಿರುತ್ತದೆ..."

ಈ ಮಾತುಗಳಲ್ಲಿ ಮಾರ್ಕ್ಸ್‌ರವರು ಎದ್ದುಕಾಣುವಂಥ ಸ್ಪಷ್ಟತೆಯೊಂದಿಗೆ, ಮೊದಲನೆಯದಾಗಿ ತಮ್ಮ ಸಿದ್ಧಾಂತ ಹಾಗೂ ಬೂರ್ಷ್ವಾಸೀಯ ಅತ್ಯಂತ ಪ್ರಗಾಢ ಹಾಗೂ ಅಗ್ರಗಾಮಿ ಚಿಂತನಕಾರರ ಸಿದ್ಧಾಂತಗಳ ನಡುವಿನ ಪ್ರಧಾನ ಹಾಗೂ ಮೂಲಭೂತ ವ್ಯತ್ಯಾಸವನ್ನು, ಎರಡನೆಯದಾಗಿ, ರಾಜ್ಯದ ಬಗೆಗೆ ತಮ್ಮ ಸಿದ್ಧಾಂತದ ಸಾರವನ್ನು, ವ್ಯಕ್ತಪಡಿಸುವುದರಲ್ಲಿ ಯಶಸ್ವಿಯಾದರು.

ಮಾರ್ಕ್ಸ್‌ರವರ ಸಿದ್ಧಾಂತದಲ್ಲಿ ಮುಖ್ಯವಾದ ಅಂಶ ವರ್ಗ ಹೋರಾಟ, ಎಂದು ಆಗಾಗ್ಗೆ ಹೇಳಲಾಗುತ್ತದೆ, ಬರೆಯಲಾಗುತ್ತದೆ. ಆದರೆ ಇದು ತಪ್ಪು. ಈ ತಪ್ಪು ಭಾವನೆ ತುಂಬ ಆಗಾಗ್ಗೆ ಮಾರ್ಕ್ಸ್‌ವಾದವನ್ನು ಸಂದರ್ಭಸಾಧಕ ರೀತಿಯಲ್ಲಿ ವಿರೂಪಗೊಳಿಸುವುದರಲ್ಲಿ ಮತ್ತು ಬೂರ್ಷ್ವಾಸೀಗೆ ಅಂಗೀಕಾರವಾಗುವ ರೀತಿಯಲ್ಲಿ ಅದನ್ನು ಮೋಸದಿಂದ ಬದಲಾಯಿಸುವುದರಲ್ಲಿ ಪರಿಣಾಮಗೊಳ್ಳುತ್ತದೆ. ಏಕೆಂದರೆ ವರ್ಗ ಹೋರಾಟದ ಸಿದ್ಧಾಂತವನ್ನು ಸೃಜಿಸಿದುದು ಮಾರ್ಕ್ಸ್‌ರವರು ಅಲ್ಲ, ಆದರೆ ಮಾರ್ಕ್ಸ್‌ರವರಿಗೂ ಮುನ್ನ ಅದನ್ನು ಬೂರ್ಷ್ವಾಸೀಯೇ ಸೃಜಿಸಿದ್ದಿತು ಮತ್ತು ಸಾಮಾನ್ಯವಾಗಿ ಹೇಳುವುದಾದರೆ, ಈ ಸಿದ್ಧಾಂತವು ಬೂರ್ಷ್ವಾಸೀಗೆ ಅಂಗೀಕಾರಾರ್ಹವೂ ಹೌದು. ವರ್ಗ ಹೋರಾಟವನ್ನಷ್ಟೆ ಮನ್ನಿಸುವವರು ಇನ್ನೂ ಮಾರ್ಕ್ಸ್‌ವಾದಿಗಳಲ್ಲ; ಅವರು ಇನ್ನೂ ಬೂರ್ಷ್ವಾ ಚಿಂತನೆಯ ಹಾಗೂ ಬೂರ್ಷ್ವಾ ರಾಜಕಾರಣದ ಮಿತಿಗಳೊಳಗೇ ಇರುವಂತೆ ಕಂಡುಬರಬಹುದು. ಮಾರ್ಕ್ಸ್‌ವಾದವನ್ನು ವರ್ಗ ಹೋರಾಟದ ಸಿದ್ಧಾಂತಕ್ಕಷ್ಟೆ ಸೀಮಿತಗೊಳಿಸುವುದು ಮಾರ್ಕ್ಸ್‌ವಾದವನ್ನು ಮೊಟಕು

ಮಾಡಿದಂತಾಗುತ್ತದೆ, ಅದನ್ನು ವಿರೂಪಗೊಳಿಸಿದಂತಾಗುತ್ತದೆ, ಅದನ್ನು ಬೂರ್ಷ್ವಾಸೀಗೇ ಅಂಗೀಕಾರವಾಗುವ ವಸ್ತುವಿನ ಮಟ್ಟಕ್ಕೆ ಇಳಿಸಿದಂತಾಗುತ್ತದೆ. ವರ್ಗ ಹೋರಾಟವನ್ನು ಮನ್ನಿಸುವುದನ್ನು ಶ್ರಮಜೀವಿ ವರ್ಗದ ಸರ್ವಾಧಿಕಾರತ್ವವನ್ನು ಮನ್ನಿಸುವವರೆಗೆ ವಿಸ್ತರಿಸುವವನೇ, ಅವನೊಬ್ಬನೇ, ಮಾರ್ಕ್ಸ್‌ವಾದಿ. ಇದೇ ಮಾರ್ಕ್ಸ್‌ವಾದಿಗೂ ಸಾಮಾನ್ಯ ಪೆಟಿ (ಹಾಗೂ ದೊಡ್ಡ) ಬೂರ್ಷ್ವಾಗೂ ಮಧ್ಯೆ ಇರುವ ಅತ್ಯಂತ ಪ್ರಗಾಢವಾದ ವ್ಯತ್ಯಾಸ. ಮಾರ್ಕ್ಸ್‌ವಾದವನ್ನು ನಿಜಕ್ಕೂ ಅರ್ಥಮಾಡಿಕೊಳ್ಳಲಾಗಿದೆಯೇ, ಮನ್ನಿಸಲಾಗಿದೆಯೇ ಎಂಬುದನ್ನು ಪರೀಕ್ಷಿಸುವುದಕ್ಕೆ ಇದೇ ಒರೆಗಲ್ಲು. ಆದ್ದರಿಂದಲೇ ಯೂರೋಪಿನ ಇತಿಹಾಸವು ಈ ಪ್ರಶ್ನೆಯನ್ನು ಕಾರ್ಮಿಕ ವರ್ಗದ ಮುಂದೆ ವ್ಯಾವಹಾರಿಕ ಪ್ರಾಮುಖ್ಯತೆಯ ವಿಷಯವಾಗಿ ಇರಿಸಿದಾಗ, ಸಂದರ್ಭಸಾಧಕವಾದಿಗಳು ಮತ್ತು ಸುಧಾರಣಾವಾದಿಗಳಷ್ಟೆ ಅಲ್ಲ ಕೌತ್‌ಸ್ಕಿವಾದಿಗಳೆಲ್ಲರೂ (ಸುಧಾರಣಾವಾದ ಮತ್ತು ಮಾರ್ಕ್ಸ್‌ವಾದಗಳ ನಡುವೆ ಡೋಲಾಯಮಾನರಾದ ಜನ) ಶ್ರಮಜೀವಿ ವರ್ಗದ ಸರ್ವಾಧಿಕಾರತ್ವವನ್ನು ನಿರಾಕರಿಸುವ ಶೋಚನೀಯ ಸಂಕುಚಿತಮತಿಗಳಾಗಿ ಹಾಗೂ ಪೆಟಿ ಬೂರ್ಷ್ವಾ ಪ್ರಜಾಪ್ರಭುತ್ವವಾದಿಗಳಾಗಿ ತೋರ್ಪಡಿಸಿಕೊಂಡುದರಲ್ಲಿ ಆಶ್ಚರ್ಯವೇನಿಲ್ಲ. 1918ರ ಆಗಸ್ಟ್‌ನಲ್ಲಿ ಪ್ರಕಟವಾದ, ಅಂದರೆ ಈ ಪುಸ್ತಕದ ಮೊದಲ ಆವೃತ್ತಿ ಪ್ರಕಟವಾದ ತುಂಬ ಕಾಲದನಂತರ ಪ್ರಕಟವಾದ, ಕೌತ್‌ಸ್ಕಿಯವರ 'ಶ್ರಮಜೀವಿ ವರ್ಗದ ಸರ್ವಾಧಿಕಾರತ್ವ' ಎಂಬ ಹೊತ್ತಗೆಯು ಮಾರ್ಕ್ಸ್‌ವಾದದ ಪೆಟಿ ಬೂರ್ಷ್ವಾ ಭ್ರಷ್ಟೀಕರಣಕ್ಕೆ, ಮಾರ್ಕ್ಸ್‌ವಾದವನ್ನು ಮಾತುಗಳಲ್ಲಿ ಬೂಟಾಟಿಕೆಯಿಂದ ಮನ್ನಿಸುವಾಗಲೇ ಕೃತಿಯಲ್ಲಿ ನೀಚತನದಿಂದ ನಿರಾಕರಿಸುವುದಕ್ಕೆ (ನನ್ನ ಕಿರುಹೊತ್ತಗೆ 'ಶ್ರಮಜೀವಿ ವರ್ಗದ ಕ್ರಾಂತಿ ಹಾಗೂ ತತ್ತ್ವಭ್ರಷ್ಟ ಕೌತ್‌ಸ್ಕಿ,' ಪೆತ್ರೊಗ್ರಾದ್ ಹಾಗೂ ಮಾಸ್ಕೋ, 1918, ನೋಡಿ) ಒಂದು ಉತ್ಕೃಷ್ಟ ನಿದರ್ಶನವಾಗಿದೆ.

ಮಾಜಿ ಮಾರ್ಕ್ಸ್‌ವಾದಿ ಕಾರ್ಲ್ ಕೌತ್‌ಸ್ಕಿಯವರೇ ಪ್ರಧಾನ ವಕ್ತಾರರಾಗಿರುವ ಮತ್ತು ಅವರಿಂದ ಪ್ರತಿನಿಧಿತವಾದ ಇಂದಿನ ಸಂದರ್ಭಸಾಧಕವಾದವು ಮೇಲೆ ಉದ್ಧರಿಸಿರುವ ಬೂರ್ಷ್ವಾ ನಿಲುವಿನ ಬಗೆಗೆ ಮಾರ್ಕ್ಸ್‌ರವರ ಗುಣವಿವರಣೆಯೊಂದಿಗೆ ಸಂಪೂರ್ಣವಾಗಿ ಸರಿಹೊಂದುತ್ತದೆ; ಏಕೆಂದರೆ, ಈ ಸಂದರ್ಭಸಾಧಕವಾದವು ವರ್ಗ ಹೋರಾಟದ ಮನ್ನಣೆಯನ್ನು ಬೂರ್ಷ್ವಾ ಸಂಬಂಧಗಳ ವಲಯಕ್ಕೆ ಸೀಮಿತಗೊಳಿಸುತ್ತದೆ. (ಈ ವಲಯದೊಳಗೆ, ಅದರ ಚೌಕಟ್ಟಿನೊಳಗೆ ವರ್ಗ ಹೋರಾಟವನ್ನು "ತತ್ತ್ವಶಃ" ಮನ್ನಿಸಲು ಯಾವೊಬ್ಬ ಸುಶಿಕ್ಷಿತ ಉದಾರವಾದಿಯೂ ನಿರಾಕರಿಸುವುದಿಲ್ಲ!) ಸಂದರ್ಭಸಾಧಕವಾದವು ವರ್ಗ ಹೋರಾಟಕ್ಕೆ ನೀಡುವ ಮನ್ನಣೆಯನ್ನು ಪ್ರಧಾನವಾದ ಅಂಶದವರೆಗೆ, ಬಂಡವಾಳವಾದದಿಂದ ಕಮ್ಯೂನಿಸಂಗೆ ಪರಿವರ್ತನೆಯ, ಬೂರ್ಷ್ವಾಸೀಯನ್ನು ಉರುಳಿಸಿ ಸಂಪೂರ್ಣವಾಗಿ ನಿರ್ಮೂಲಗೊಳಿಸುವ, ಕಾಲಾವಧಿಯವರೆಗೆ ವಿಸ್ತರಿಸುವುದಿಲ್ಲ. ವಾಸ್ತವವಾಗಿ ಈ ಕಾಲಾವಧಿಯು ಅನಿವಾ

ರ್ಯವಾಗಿಯೇ ಅಭೂತಪೂರ್ವವಾದ ಉಗ್ರ ವರ್ಗ ಹೋರಾಟದ ಕಾಲಾವಧಿಯಾಗಿದೆ. ಈ ಹೋರಾಟವು ಅಭೂತಪೂರ್ವವಾದ ತೀವ್ರ ರೂಪಗಳಲ್ಲಿ ನಡೆಯುತ್ತದೆ. ತತ್ಫಲವಾಗಿ ಈ ಕಾಲಾವಧಿಯಲ್ಲಿ ರಾಜ್ಯವು ಅನಿವಾರ್ಯವಾಗಿಯೇ ಒಂದು ಹೊಸ ರೀತಿಯಲ್ಲಿ ಪ್ರಜಾಸತ್ತಾತ್ಮಕವಾದ (ಸರ್ವೇಸಾಮಾನ್ಯವಾಗಿ ಶ್ರಮಜೀವಿ ವರ್ಗಕ್ಕೆ ಮತ್ತು ಆಸ್ತಿ ಇಲ್ಲದವರಿಗೆ ಸಂಬಂಧಿಸಿ) ರಾಜ್ಯವಾಗಿರುತ್ತದೆ ಮತ್ತು ಒಂದು ಹೊಸ ರೀತಿಯಲ್ಲಿ ಸರ್ವಾಧಿಕಾರತ್ವದ (ಬೂರ್ಷ್ವಾಸೀಯ ವಿರುದ್ಧ) ರಾಜ್ಯವಾಗಿರುತ್ತದೆ.

ಇಷ್ಟೇ ಅಲ್ಲ. ಒಟ್ಟಿನ ಮೇಲೆ ಪ್ರತಿಯೊಂದು ವರ್ಗ ಸಮಾಜಕ್ಕೂ ಏಕೈಕ ವರ್ಗದ ಸರ್ವಾಧಿಕಾರತ್ವ ಅವಶ್ಯ, ಬೂರ್ಷ್ವಾಸೀಯನ್ನು ಉರುಳಿಸಿದ ಶ್ರಮಜೀವಿ ವರ್ಗಕ್ಕಷ್ಟೆ ಅಲ್ಲ, ಬಂಡವಾಳವಾದವನ್ನು "ವರ್ಗರಹಿತ ಸಮಾಜ"ದಿಂದ, ಕಮ್ಯೂನಿಸಂನಿಂದ ಪ್ರತ್ಯೇಕಿಸುವ ಇಡೀ ಚಾರಿತ್ರಿಕ ಕಾಲಾವಧಿಗೂ ಅವಶ್ಯ, ಎಂಬುದನ್ನು ಮನಗಂಡವರಷ್ಟೆ ಮಾರ್ಕ್ಸ್‌ರವರ ರಾಜ್ಯ ಸಿದ್ಧಾಂತದ ಸಾರವನ್ನು ಚೆನ್ನಾಗಿ ಗ್ರಹಿಸಿಕೊಂಡಿರುತ್ತಾರೆ. ಬೂರ್ಷ್ವಾ ರಾಜ್ಯಗಳು ರೂಪದಲ್ಲಿ ಅತ್ಯಂತ ವೈವಿಧ್ಯಪೂರ್ಣವಾಗಿರುತ್ತವೆ. ಆದರೆ ಅವುಗಳ ಸಾರ ಒಂದೇ ಆಗಿರುತ್ತದೆ – ಈ ಎಲ್ಲ ರಾಜ್ಯಗಳೂ, ಅವುಗಳ ರೂಪ ಏನೇ ಇರಲಿ, ಅಂತಿಮ ವಿಶ್ಲೇಷಣೆಯಲ್ಲಿ ಅನಿವಾರ್ಯವಾಗಿಯೇ ಬೂರ್ಷ್ವಾಸೀಯ ಸರ್ವಾಧಿಕಾರತ್ವ ಆಗಿರುತ್ತವೆ. ಬಂಡವಾಳವಾದದಿಂದ ಕಮ್ಯೂನಿಸಂಗೆ ಸ್ಥಿತ್ಯಂತರ ಕಾಲದಲ್ಲಿ ಭಾರಿ ಸಮೃದ್ಧ ಹಾಗೂ ವೈವಿಧ್ಯಪೂರ್ಣ ರಾಜಕೀಯ ರೂಪಗಳು ಕಂಡುಬರುವುದು ಖಂಡಿತ. ಆದರೆ ಅವೆಲ್ಲವುಗಳ ಸಾರವು ಅನಿವಾರ್ಯವಾಗಿಯೇ ಒಂದೇ ಆಗಿರುತ್ತದೆ: ಶ್ರಮಜೀವಿ ವರ್ಗದ ಸರ್ವಾಧಿಕಾರತ್ವ.[58]

ಅಧ್ಯಾಯ III

# ರಾಜ್ಯ ಹಾಗೂ ಕ್ರಾಂತಿ. 1871ರ ಪ್ಯಾರಿಸ್ ಕಮ್ಯೂನ್‌ನ ಅನುಭವ. ಮಾರ್ಕ್ಸ್‌ರವರ ವಿಶ್ಲೇಷಣೆ

## 1. ಕಮ್ಯೂನಾರ್ಡ್‌ರ ಯತ್ನದಲ್ಲಿ ವೀರೋಚಿತವಾಗಿದ್ದುದು ಯಾವುದು ?

1870ರ ಶರತ್ಕಾಲದಲ್ಲಿ, ಕಮ್ಯೂನ್‌ಗೆ ಕೆಲವು ತಿಂಗಳುಗಳ ಮುನ್ನ ಮಾರ್ಕ್ಸ್‌ರವರು ಪ್ಯಾರಿಸ್ ಕಾರ್ಮಿಕರಿಗೆ ಸರಕಾರವನ್ನು ಉರುಳಿಸಲು ಯಾವುದೇ ಯತ್ನವೂ ಹುಚ್ಚು ಸಾಹಸದಿಂದ ಉಂಟಾದ ತಪ್ಪು ಕಾರ್ಯವಾಗುವುದೆಂದು ಎಚ್ಚರಿಕೆ ನೀಡಿದರೆಂಬುದು ಸುವಿದಿತವಾಗಿದೆ.[59] ಆದರೆ 1871ರ ಮಾರ್ಚ್ ತಿಂಗಳಲ್ಲಿ ಕಾರ್ಮಿಕರು

ನಿರ್ಧಾರಕ ಹೋರಾಟ ನಡೆಸುವ ಬಲಾತ್ಕಾರಕ್ಕೊಳಗಾದಾಗ ಮತ್ತು ಅವರು ಅದನ್ನು ಒಪ್ಪಿಕೊಂಡಾಗ, ಬಂಡಾಯವು ಒಂದು ಸತ್ಯಸಂಗತಿಯಾದಾಗ, ಮಾರ್ಕ್ಸ್‌ರವರು ಶ್ರಮಜೀವಿ ವರ್ಗದ ಕ್ರಾಂತಿಯನ್ನು, ಪ್ರತಿಕೂಲ ಸೂಚನೆಗಳಿದ್ದಾಗ್ಯೂ ಸಹ, ಅತ್ಯಂತ ಹೆಚ್ಚಿನ ಉತ್ಸಾಹದೊಂದಿಗೆ ಸ್ವಾಗತಿಸಿದರು. ಮಾರ್ಕ್ಸ್‌ವಾದದ ಕುಖ್ಯಾತ ರಷ್ಯನ್ ತತ್ವಭ್ರಷ್ಟ ಪ್ಲೆಹಾನೊವ್ 1905ರ ನವಂಬರ್‌ನಲ್ಲಿ ಕಾರ್ಮಿಕರ ಹಾಗೂ ರೈತರ ಹೋರಾಟದ ಬಗೆಗೆ ಉತ್ತೇಜಕವಾಗಿ ಬರೆದು 1905ರ ಡಿಸೆಂಬರ್‌ನಂತರ ಉದಾರವಾದಿಯ ರೀತಿಯಲ್ಲಿ "ಅವರು ಶಸ್ತ್ರ ಕೈಕೊಳ್ಳಬಾರದಿತ್ತು" ಎಂದು ಹೇಳಿದಂತೆ[60] ಮಾರ್ಕ್ಸ್‌ರವರು ಶುಷ್ಕತಾತ್ವಿಕ ಮನೋಧರ್ಮ ತಳೆದು ಚಳವಳಿಯನ್ನು "ಅಕಾಲಿಕ"ವೆಂದೇನೂ ಖಂಡಿಸಲಿಲ್ಲ.

"ಆಕಾಶಕ್ಕೇ ಲಗ್ಗೆ ಹಾಕಿದರು" ಎಂದು ವರ್ಣಿಸಿದ ಮಾರ್ಕ್ಸ್‌ರವರು ಕಮ್ಯೂನಾರ್ಡ್‌ರ ಸಾಹಸದ ಬಗೆಗೆ ಉತ್ಸಾಹಿತರಾಗಿದ್ದರಷ್ಟೆ ಅಲ್ಲ.[61] ಈ ಸಾಮೂಹಿಕ ಕ್ರಾಂತಿಕಾರಿ ಚಳವಳಿಯು ತನ್ನ ಗುರಿಯನ್ನು ಸಾಧಿಸದೆ ಹೋದರೂ ಅವರು ಅದನ್ನು ಅಪಾರ ಪ್ರಾಮುಖ್ಯತೆಯ ಚಾರಿತ್ರಿಕ ಅನುಭವವೆಂದು, ವಿಶ್ವ ಶ್ರಮಜೀವಿ ವರ್ಗ ಕ್ರಾಂತಿಯಲ್ಲಿನ ಒಂದು ಖಚಿತ ಮುನ್ನಡೆಯೆಂದು, ನೂರಾರು ಕಾರ್ಯಕ್ರಮ ಹಾಗೂ ವಾದಗಳಿಗಿಂತ ಹೆಚ್ಚು ಮುಖ್ಯವಾದ ಒಂದು ವ್ಯವಹಾರೋಚಿತ ಕ್ರಮವೆಂದು ಭಾವಿಸಿದರು. ಮಾರ್ಕ್ಸ್‌ರವರು ಈ ಪ್ರಯೋಗವನ್ನು ವಿಶ್ಲೇಷಿಸಲು, ಅದರಿಂದ ತಾಂತ್ರಿಕ ತೀರ್ಮಾನಗಳಿಗೆ ಬರಲು ಮತ್ತು ಅದರ ಬೆಳಕಿನಲ್ಲಿ ತಮ್ಮ ಸಿದ್ಧಾಂತವನ್ನು ಪುನಃ ಪರೀಕ್ಷಿಸಲು, ಯತ್ನಿಸಿದರು.

'ಕಮ್ಯೂನಿಸ್ಟ್ ಪ್ರಣಾಳಿಕೆ'ಗೆ ಸೇರಿಸಲು ಅವಶ್ಯವೆಂದು ಬಗೆದ ಏಕೈಕ "ತಿದ್ದುಪಾಟಿ"ಗೂ ಮಾರ್ಕ್ಸ್‌ರವರು ಪ್ಯಾರಿಸ್ ಕಮ್ಯೂನಾರ್ಡ್‌ರ ಕ್ರಾಂತಿಕಾರಿ ಅನುಭವವನ್ನೇ ಆಧಾರವಾಗಿ ಇಟ್ಟುಕೊಂಡಿದ್ದರು.

'ಕಮ್ಯೂನಿಸ್ಟ್ ಪ್ರಣಾಳಿಕೆ'ಯ ಇಬ್ಬರು ಕರ್ತೃಗಳೂ ಸಹಿ ಹಾಕಿದ ಹೊಸ ಜರ್ಮನ್ ಆವೃತ್ತಿಯ ಕೊನೆಯ ಮುನ್ನುಡಿ 1872ರ ಜೂನ್ 24 ಎಂಬ ತೇದಿಯನ್ನು ಹೊಂದಿದೆ. ಈ ಮುನ್ನುಡಿಯಲ್ಲಿ ಗ್ರಂಥಕರ್ತೃಗಳು, ಕಾರ್ಲ್ ಮಾರ್ಕ್ಸ್ ಹಾಗೂ ಫ್ರೆಡರಿಕ್ ಎಂಗೆಲ್ಸ್‌ರು, 'ಕಮ್ಯೂನಿಸ್ಟ್ ಪ್ರಣಾಳಿಕೆ'ಯ ಕಾರ್ಯಕ್ರಮವು "ಕೆಲವು ವಿವರಗಳಲ್ಲಿ ಹಳತಾಗಿದೆ" ಎಂದು ಹೇಳಿ ಮುಂದುವರಿಯುತ್ತ ಹೀಗೆ ಬರೆದಿದ್ದಾರೆ:

> ...."ಕಮ್ಯೂನ್ ಒಂದು ವಿಷಯವನ್ನು ವಿಶೇಷವಾಗಿ ಸಾಧಿಸಿ ತೋರಿಸಿತು; ಅದೆಂದರೆ 'ಆಗಲೇ ಸಿದ್ಧಗೊಳಿಸಿ ಇರಿಸಲಾದ ರಾಜ್ಯಯಂತ್ರವನ್ನು ಕಾರ್ಮಿಕ ವರ್ಗವು ಸುಮ್ಮನೆ ತನ್ನ ಕೈಗೆ ತೆಗೆದುಕೊಂಡು ಅದನ್ನು ತನ್ನ ಸ್ವಂತ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲ'...."

ಈ ಮೇಲಿನ ವಾಕ್ಯದಲ್ಲಿ ಒಂಟಿ ಉದ್ಧರಣ ಚಿಹ್ನೆಯೊಳಗಿರುವ ಮಾತುಗಳನ್ನು

ಕರ್ತೃಗಳು ಮಾರ್ಕ್ಸ್‌ರವರ 'ಫ್ರಾನ್ಸಿನಲ್ಲಿ ಅಂತರ್ಯುದ್ಧ' ಎಂಬ ಗ್ರಂಥದಿಂದ ತೆಗೆದು ಕೊಂಡಿದ್ದರು.[62]

ಹೀಗೆ ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರು ಪ್ಯಾರಿಸ್ ಕಮ್ಯೂನ್‌ನ ಒಂದು ಪ್ರಧಾನ ಹಾಗೂ ಮೂಲಭೂತ ಪಾಠವನ್ನು ಎಷ್ಟು ಅಪಾರ ಪ್ರಾಮುಖ್ಯತೆಯು ದೆಂದು ಭಾವಿಸಿದರೆಂದರೆ, ಅವರು ಅದನ್ನು 'ಕಮ್ಯೂನಿಸ್ಟ್ ಪ್ರಣಾಳಿಕೆ'ಗೆ ಒಂದು ಪ್ರಮುಖ ತಿದ್ದುಪಾಟಾಗಿ ಸೇರಿಸಿದರು.

ಅತ್ಯಂತ ಹೆಚ್ಚಿನ ವೈಶಿಷ್ಟ್ಯವೆಂದರೆ ಈ ಪ್ರಮುಖ ತಿದ್ದುಪಾಟನ್ನೇ ಸಂದರ್ಭ ಸಾಧಕವಾದಿಗಳು ವಿರೂಪಗೊಳಿಸಿರುವುದು ಮತ್ತು ಅದರ ಅರ್ಥವನ್ನು 'ಕಮ್ಯೂ ನಿಸ್ಟ್ ಪ್ರಣಾಳಿಕೆ'ಯ ಓದುಗರಲ್ಲಿ ನೂರರಲ್ಲಿ ತೊಂಬತ್ತೊಂಬತ್ತು ಮಂದಿ ಅಲ್ಲದಿ ದ್ದರೆ, ಬಹುಶಃ ಹತ್ತರಲ್ಲಿ ಒಂಬತ್ತು ಮಂದಿ, ತಿಳಿದಿಲ್ಲ. ಈ ವಿರೂಪೀಕರಣದ ಬಗೆಗೆ ಮುಂದೆ, ವಿರೂಪೀಕರಣಕ್ಕೆ ವಿಶೇಷವಾಗಿ ಮೀಸಲಾದ ಅಧ್ಯಾಯದಲ್ಲಿ, ಹೆಚ್ಚು ಪೂರ್ಣವಾಗಿ ಪರಿಶೀಲಿಸೋಣ. ಇಲ್ಲಿ ಮೇಲೆ ಉದ್ಧರಿಸಿರುವ ಮಾರ್ಕ್ಸ್‌ರವರ ಸುಪ್ರಸಿದ್ಧ ಹೇಳಿಕೆಯನ್ನು ಪ್ರಸ್ತುತದಲ್ಲಿ ಹೇಗೆ ಕೀಳು ತರದಲ್ಲಿ "ವ್ಯಾಖ್ಯಾನಿಸಲಾಗು ತ್ತಿದೆ" ಎಂಬುದನ್ನು ಗಮನಿಸಿದರೆ ಸಾಕು. ಅಧಿಕಾರವನ್ನು ವಶಪಡಿಸಿಕೊಳ್ಳುವುದಕ್ಕೆ ವಿರುದ್ಧವಾಗಿ ಮಾರ್ಕ್ಸ್‌ರವರು ನಿಧಾನ ಬೆಳವಣಿಗೆಯ ವಿಚಾರವನ್ನು ಒತ್ತಿ ಹೇಳು ತ್ತಾರೆ ಎಂದು ಮುಂತಾಗಿ ಆರೋಪಿಸುವುದೇ ಈ ಕೀಳು ವ್ಯಾಖ್ಯಾನವಾಗಿದೆ.

ವಾಸ್ತವವಾಗಿ, ಇದಕ್ಕೆ ತೀರ ವಿರುದ್ಧವಾದುದೇ ನಿಜಾಂಶವಾಗಿದೆ. "ಆಗಲೇ ರೂಪುಗೊಂಡಿರುವ ರಾಜ್ಯಯಂತ್ರವನ್ನು" ಕಾರ್ಮಿಕ ವರ್ಗವು ಒಡೆಯಬೇಕು, ಕುಟ್ಟಿ ಪುಡಿಮಾಡಬೇಕು, ಅದನ್ನು ಕೇವಲ ತನ್ನ ಕೈಗೆ ತೆಗೆದುಕೊಳ್ಳುವುದಕ್ಕಷ್ಟೆ ತನ್ನನ್ನು ಸೀಮಿತಗೊಳಿಸಿಕೊಳ್ಳಕೂಡದು, ಎಂಬುದೇ ಮಾರ್ಕ್ಸ್‌ರವರ ವಿಚಾರವಾಗಿದೆ.

1871ರ ಏಪ್ರಿಲ್ 12ರಂದು, ಕಮ್ಯೂನ್‌ನ ಸಮಯದಲ್ಲಿ ಸರಿಯಾಗಿ ಮಾರ್ಕ್ಸ್‌ ರವರು ಕೂಗೆಲ್‌ಮನ್‌ಗೆ ಬರೆದರು:

> "ನೀವು ನನ್ನ 'ಹದಿನೆಂಟನೆಯ ಬ್ರೂಮೇರ್'ನ ಕೊನೆಯ ಅಧ್ಯಾಯ ವನ್ನು ನೋಡಿದಲ್ಲಿ, ಫ್ರೆಂಚ್ ಕ್ರಾಂತಿಯ ಮುಂದಿನ ಯತ್ನವು ಇನ್ನೆಷ್ಟು ಮಾತ್ರವೂ ಹಿಂದಿನಂತೆ ಅಧಿಕಾರಶಾಹಿ-ಸೈನಿಕ ಯಂತ್ರವನ್ನು ಒಂದು ಕೈ ಯಿಂದ ಮತ್ತೊಂದಕ್ಕೆ ವರ್ಗಾಯಿಸುವುದಾಗಿರುವುದಿಲ್ಲ, ಆದರೆ ಅದನ್ನು ಒಡೆದುಹಾಕುವುದಾಗಿರುವುದು" (ಅಡಿಗೆರೆ ಮಾರ್ಕ್ಸ್‌ರವರದೇ. ಮೂಲ ದಲ್ಲಿ (zerbrechen) ಎಂಬ ಪದವನ್ನು ಬಳಸಲಾಗಿದೆ) "ಮತ್ತು ಇದು ಯೂರೋಪು ಖಂಡದಲ್ಲಿ ಜರುಗಲಿರುವ ಪ್ರತಿಯೊಂದು ನಿಜವಾದ ಜನತಾ ಕ್ರಾಂತಿಗೂ ಪೂರ್ವಭಾವಿ ಷರತ್ತಾಗಿದೆ, ಎಂದು ನಾನು ಘೋಷಿ ಸಿರುವುದನ್ನು ನೀವು ಕಾಣುವಿರಿ. ಪ್ಯಾರಿಸ್ಸಿನಲ್ಲಿ ನಮ್ಮ ವೀರ ಸಂಗಾತಿ

ಗಳು ಮಾಡಲು ಯತ್ನಿಸುತ್ತಿರುವುದು ಇದನ್ನೇ." (*Neue Zeit*, ಸಂ. XX, 1, 1901-1902, ಪು. 709)[63](ಮಾರ್ಕ್ಸ್‌ರವರು ಕೂಗೆಲ್ ಮನ್‌ರಿಗೆ ಬರೆದ ಪತ್ರಗಳು ರಷ್ಯನ್‌ನಲ್ಲಿ ಎರಡಕ್ಕೂ ಕಮ್ಮಿ ಇಲ್ಲದಷ್ಟು ಆವೃತ್ತಿಗಳಲ್ಲಿ ಪ್ರಕಟವಾಗಿವೆ. ಅವುಗಳಲ್ಲೊಂದನ್ನು ನಾನೇ ಸಂಪಾದಿಸಿ ಅದಕ್ಕೆ ಮುನ್ನುಡಿಯನ್ನೂ ಬರೆದಿದ್ದೇನೆ.)

"ಅಧಿಕಾರಶಾಹಿ-ಸೈನಿಕ ಯಂತ್ರವನ್ನು ಒಡೆದುಹಾಕುವುದು" ಎಂಬ ಮಾತು ಗಳು ಕ್ರಾಂತಿಯ ಸಮಯದಲ್ಲಿ ರಾಜ್ಯಕ್ಕೆ ಸಂಬಂಧಿಸಿ ಶ್ರಮಜೀವಿ ವರ್ಗದ ಕಾರ್ಯ ಭಾರದ ಬಗೆಗೆ ಮಾರ್ಕ್ಸ್‌ವಾದದ ಸಂಕ್ಷಿಪ್ತವಾಗಿ ನಿರೂಪಿಸಿದ ಪ್ರಧಾನ ಪಾಠವನ್ನು ವ್ಯಕ್ತಪಡಿಸುತ್ತವೆ. ಈ ಪಾಠವನ್ನು ಇಂದು ಚಾಲ್ತಿಯಲ್ಲಿರುವ ಮಾರ್ಕ್ಸ್‌ವಾದದ ಕೌತ್‌ಸ್ಕಿವಾದಿ "ವ್ಯಾಖ್ಯಾನವು" ಸಂಪೂರ್ಣವಾಗಿ ಉಪೇಕ್ಷಿಸಿದೆಯಷ್ಟೆ ಅಲ್ಲ ತೀವ್ರ ವಾಗಿ ವಿರೂಪಗೊಳಿಸಿದೆ !

ಇನ್ನು 'ಹದಿನೆಂಟನೆಯ ಬ್ರೂಮೇರ್'ಗೆ ಮಾರ್ಕ್ಸ್‌ರವರ ಉಲ್ಲೇಖದ ಬಗೆಗೆ ಹೇಳುವುದಾದರೆ, ನಾವು ಅದರ ಸಂಬಂಧಪಟ್ಟ ಭಾಗವನ್ನು ಮೇಲೆ ಪೂರ್ಣವಾಗಿ ಉದ್ಧರಿಸಿದ್ದೇವೆ.

ಮೇಲೆ ಉದ್ಧರಿಸಿರುವ ಮಾರ್ಕ್ಸ್‌ರವರ ವಾದದಲ್ಲಿ ಎರಡು ಅಂಶಗಳನ್ನು ವಿಶೇಷವಾಗಿ ಗಮನಿಸುವುದು ಸ್ವಾರಸ್ಯಕರ. ಮೊದಲನೆಯದು, ಅವರು ತಮ್ಮ ತೀರ್ಮಾನವನ್ನು ಯೂರೋಪು ಖಂಡಕ್ಕಷ್ಟೆ ಮಿತಿಗೊಳಿಸುತ್ತಾರೆ, ಎಂಬುದು. ಇದು 1871ರಲ್ಲಿ ಅರ್ಥಗ್ರಾಹ್ಯವಾಗಿದ್ದಿತು. ಆಗ ಬ್ರಿಟನ್ ಇನ್ನೂ ಸೈನಿಕಶಾಹಿ ಮತ್ತು ಗಣನೀಯ ಪ್ರಮಾಣದಲ್ಲಿ ಅಧಿಕಾರಶಾಹಿಯೂ ಇಲ್ಲದ ಪರಿಶುದ್ಧ ಬಂಡವಾಳ ಶಾಹಿ ದೇಶವೊಂದರ ಮಾದರಿಯಾಗಿದ್ದಿತು. ಆದ್ದರಿಂದ ಮಾರ್ಕ್ಸ್ ಬ್ರಿಟನ್ನನ್ನು ಹೊರತಾಗಿಸಿದರು. ಅಲ್ಲಿ ಕ್ರಾಂತಿಯು, ಜನತಾ ಕ್ರಾಂತಿಯೂ ಸಹ, ಆಗ ಸಾಧ್ಯವೆಂದು ತೋರಿಬರುತ್ತಿದ್ದಿತು ಮತ್ತು "ಆಗಲೇ ರೂಪುಗೊಂಡಿದ್ದ ರಾಜ್ಯಯಂತ್ರ"ವನ್ನು ನಾಶ ಗೊಳಿಸುವ ಪೂರ್ವಭಾವಿ ಅವಶ್ಯತೆ ಇಲ್ಲದೆಯೇ ಅಂಥ ಕ್ರಾಂತಿ ನಿಜಕ್ಕೂ ಸಾಧ್ಯ ವಿದ್ದಿತು.

ಇಂದು, 1917ರಲ್ಲಿ, ಮೊದಲ ಸಾಮ್ರಾಜ್ಯಶಾಹಿ ಮಹಾ ಯುದ್ಧದ ಕಾಲದಲ್ಲಿ, ಮಾರ್ಕ್ಸ್‌ರವರ ಈ ಪರಿಮಿತಿಯು ಎಷ್ಟು ಮಾತ್ರವೂ ಸರಿಹೋಗುವುದಿಲ್ಲ. ಬ್ರಿಟನ್ ಹಾಗೂ ಅಮೆರಿಕಗಳು ಸೈನಿಕ ಹಾಗೂ ಅಧಿಕಾರಶಾಹಿಯನ್ನು ಹೊಂದಿರದ ಅರ್ಥ ದಲ್ಲಿ ಆಂಗ್ಲೋ-ಸ್ಯಾಕ್ಸನ್ "ಸ್ವಾತಂತ್ರ್ಯ"ಕ್ಕೆ ಇಡೀ ಜಗತ್ತಿನಲ್ಲೇ ಅತ್ಯಂತ ದೊಡ್ಡ ಹಾಗೂ ಕೊನೆಯ ಪ್ರತಿನಿಧಿಗಳಾಗಿದ್ದವು. ಈಗ ಇವೆರಡೂ, ಎಲ್ಲವನ್ನೂ ಹತ್ತಿಕ್ಕುವ ಮತ್ತು ಎಲ್ಲವನ್ನೂ ತಮ್ಮ ಅಧೀನಕ್ಕೊಳಪಡಿಸಿಕೊಳ್ಳುವ ಅಧಿಕಾರಶಾಹಿ-ಸೈನಿಕ ಸಂಸ್ಥೆಗಳ ಅಖಿಲ ಐರೋಪ್ಯ ಹೊಲಸಿನ, ಕ್ರೌರ್ಯದ ಉಸುಬಿನಲ್ಲಿ ಸಂಪೂರ್ಣವಾಗಿ ಮುಳುಗಿವೆ. ಇಂದು ಬ್ರಿಟನ್ ಮತ್ತು ಅಮೆರಿಕಗಳಲ್ಲಿ ಸಹ, "ಪ್ರತಿಯೊಂದು ನಿಜ

ವಾದ ಜನತಾ ಕ್ರಾಂತಿಗೆ ಪೂರ್ವಭಾವಿ ಷರತ್ತೆಂದರೆ" "ಆಗಲೇ ರೂಪುಗೊಂಡಿದ್ದ ರಾಜ್ಯಯಂತ್ರ"ವನ್ನು ನಾಶಪಡಿಸುವುದು, ತೊಡೆದು ಹಾಕುವುದು, ಆಗಿದೆ. (ಆ ದೇಶಗಳಲ್ಲಿ ರಾಜ್ಯಯಂತ್ರವನ್ನು 1914-1917ರ ವರ್ಷಗಳಲ್ಲಿ ಸಿದ್ಧಗೊಳಿಸಿ, "ಐರೋಪ್ಯ" ಸರ್ವಸಾಮಾನ್ಯ ಸಾಮ್ರಾಜ್ಯಶಾಹಿ ಪರಿಪೂರ್ಣತೆಯ ಮಟ್ಟಕ್ಕೆ ತರಲಾಗಿದ್ದಿತು.)

ಎರಡನೆಯದಾಗಿ, ಅಧಿಕಾರಶಾಹಿ-ಸೈನಿಕ ರಾಜ್ಯಯಂತ್ರವನ್ನು ನಾಶಗೊಳಿಸುವುದು "ಪ್ರತಿಯೊಂದು ನಿಜವಾದ ಜನತಾ ಕ್ರಾಂತಿಗೆ ಪೂರ್ವಭಾವಿ ಷರತ್ತು" ಎಂಬ ಮಾರ್ಕ್ಸ್‌ರವರ ಅತ್ಯಂತ ಪ್ರಗಾಢ ಹೇಳಿಕೆಯ ಕಡೆಗೂ ವಿಶೇಷ ಗಮನ ನೀಡಬೇಕು. "ಜನತಾ" ಕ್ರಾಂತಿ ಎಂಬ ವಿಚಾರವು ಮಾರ್ಕ್ಸ್‌ರವರಿಂದ ಬಂದಿರುವುದು ಸ್ಟ್ರೂವೆಯವರ ಅನುಯಾಯಿಗಳಾದ ರಷ್ಯನ್ ಪ್ಲೆಹಾನೊವ್‌ವಾದಿಗಳಿಗೂ ಮೆನ್ಷೆವಿಕರಿಗೂ ವಿಚಿತ್ರವೆಂದು ಕಾಣಬರುತ್ತದೆ. ತಾವು ಮಾರ್ಕ್ಸ್‌ವಾದಿಗಳು ಎಂದು ಭಾವಿಸಲ್ಪಡಬೇಕು ಎಂದು ಬಯಸುವ ಇವರು ಬಹುಶಃ ಅಂಥ ಹೇಳಿಕೆಯನ್ನು ಮಾರ್ಕ್ಸ್‌ರವರು "ಕೈ ತಪ್ಪಿ ಬರೆದಿದ್ದಾರೆ" ಎಂದೇ ಘೋಷಿಸಬಹುದು. ಇವರು ಮಾರ್ಕ್ಸ್‌ವಾದವನ್ನು ಎಂಥ ನೀಚ ಉದಾರವಾದಿ ವಿರೂಪಕ್ಕೆ ಇಳಿಸಿದ್ದಾರೆಂದರೆ ಅವರಿಗೆ ಬೂರ್ಷ್ವಾ ಕ್ರಾಂತಿ ಹಾಗೂ ಶ್ರಮಜೀವಿ ವರ್ಗ ಕ್ರಾಂತಿಗಳ ನಡುವಿನ ಎದುರುಬದುರುತನವನ್ನು ಬಿಟ್ಟು ಬೇರೇನೂ ಕಾಣಬರುವುದಿಲ್ಲ. ಈ ಎದುರುಬದುರುತನವನ್ನೂ ಅವರು ಶುದ್ಧ ನಿರ್ಜೀವವಾದ ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ.

ಇಪ್ಪತ್ತನೆಯ ಶತಮಾನದ ಕ್ರಾಂತಿಗಳನ್ನು ದೃಷ್ಟಾಂತಗಳನ್ನಾಗಿ ತೆಗೆದುಕೊಂಡರೆ, ಪೋರ್ಚುಗೀಸ್ ಹಾಗೂ ಟರ್ಕಿಷ್ ಕ್ರಾಂತಿಗಳೆರಡೂ ಬೂರ್ಷ್ವಾ ಕ್ರಾಂತಿಗಳಾಗಿದ್ದವೆಂದು ನಾವು ಒಪ್ಪಿಕೊಳ್ಳಬೇಕು. ಆದರೆ ಅವುಗಳಲ್ಲಿ ಯಾವೊಂದೂ, "ಜನತಾ" ಕ್ರಾಂತಿಯಲ್ಲ. ಏಕೆಂದರೆ ಅವುಗಳಲ್ಲಿ ಯಾವೊಂದರಲ್ಲೂ ಜನರ ಸಮೂಹವು, ಅವರ ವಿಶಾಲ ಬಹುಮತವು ಎಷ್ಟೇ ಗಮನಾರ್ಹ ಪ್ರಮಾಣದಲ್ಲೂ ತನ್ನ ಸ್ವಂತ ಆರ್ಥಿಕ ಹಾಗೂ ರಾಜಕೀಯ ಕೇಳಿಕೆಗಳನ್ನು ಮುಂದಿಟ್ಟುಕೊಂಡು ಸ್ವತಂತ್ರವಾಗಿ, ಕ್ರಿಯಾಶೀಲವಾಗಿ ಹೊರಬಂದುದಿಲ್ಲ. ಇದಕ್ಕೆ ವೈದೃಶ್ಯವಾಗಿ, 1905-1907ರ ರಷ್ಯನ್ ಬೂರ್ಷ್ವಾ ಕ್ರಾಂತಿಯು ಪೋರ್ಚುಗೀಸ್ ಹಾಗೂ ಟರ್ಕಿಷ್ ಕ್ರಾಂತಿಗಳು[64] ಕೆಲವು ಸಂದರ್ಭಗಳಲ್ಲಿ ಸಾಧಿಸಿದಂಥ "ಉಜ್ವಲ" ಯಶಸ್ಸುಗಳನ್ನೇನೂ ತೋರಿಸದಿದ್ದರೂ, ಅದು ನಿಸ್ಸಂದೇಹವಾಗಿಯೂ "ನಿಜವಾದ ಜನತಾ" ಕ್ರಾಂತಿಯಾಗಿದ್ದಿತು; ಏಕೆಂದರೆ ಮರ್ದನ ಹಾಗೂ ಶೋಷಣೆಯ ತುಳಿತಕ್ಕೊಳಗಾಗಿದ್ದ ಅತ್ಯಂತ ತಳಮಟ್ಟದ ಸಾಮಾಜಿಕ ವೃಂದಗಳು, ಜನರ ಸಮೂಹವು, ಅವರ ವಿಶಾಲ ಬಹುಮತವು ಸ್ವತಂತ್ರವಾಗಿ ಎದ್ದುನಿಂತು ಕ್ರಾಂತಿಯ ಇಡೀ ಮಾರ್ಗದ ಮೇಲೆ ತಮ್ಮ ಸ್ವಂತ ಕೇಳಿಕೆಗಳ ಮುದ್ರೆಯನ್ನು ಒತ್ತಿದವು ಮತ್ತು ನಾಶಗೊಳಿಸಲಾಗುತ್ತಿದ್ದ ಹಳೆಯ ಸಮಾಜದ ಸ್ಥಳದಲ್ಲಿ ತಮ್ಮದೇ ಆದ ರೀತಿಯಲ್ಲಿ ಒಂದು ಹೊಸ ಸಮಾಜವನ್ನು ಸ್ಥಾಪಿಸಲು ತಮ್ಮ ಯತ್ನಗಳ ಮುದ್ರೆಯನ್ನು ಒತ್ತಿದವು.

1871ರಲ್ಲಿ ಯೂರೋಪಿನಲ್ಲಿ ಶ್ರಮಜೀವಿ ವರ್ಗವು ಆ ಖಂಡದ ಯಾವುದೇ ದೇಶದಲ್ಲೂ ಜನತೆಯ ಬಹುಮತವಾಗಿರಲಿಲ್ಲ. ಬಹುಮತದ ಜನರನ್ನು ತನ್ನ ಪ್ರವಾಹದೊಳಕ್ಕೆ ನಿಜಕ್ಕೂ ಸೆಳೆದುಕೊಳ್ಳುವ "ಜನತಾ" ಕ್ರಾಂತಿಯು, ರೈತರು ಹಾಗೂ ಶ್ರಮಜೀವಿ ವರ್ಗ ಇಬ್ಬರನ್ನೂ ಆವರಿಸಿಕೊಂಡರಷ್ಟೆ ಜನತಾ ಕ್ರಾಂತಿಯಾಗ ಬಲ್ಲುದು. ಈ ಎರಡು ವರ್ಗಗಳೇ ಆಗ "ಜನತೆ" ಎನಿಸಿಕೊಂಡಿದ್ದವು. "ಅಧಿಕಾರ ಶಾಹಿ-ಸೈನಿಕ ರಾಜ್ಯಯಂತ್ರ"ವು ಅವನ್ನು ಮರ್ದಿಸುವುದರಿಂದ, ತುಳಿಯುವುದರಿಂದ, ಶೋಷಿಸುವುದರಿಂದ ಈ ಎರಡು ವರ್ಗಗಳೂ ಐಕ್ಯಗೊಂಡಿರುತ್ತವೆ. ಆ ಯಂತ್ರ ವನ್ನು ನಾಶಗೊಳಿಸುವುದು, ಅದನ್ನು ಒಡೆದು ಹಾಕುವುದು, ನಿಜಕ್ಕೂ "ಜನರ" ಹಿತಗಳಿಗೆ, ಅವರ ಬಹುಮತದ ಹಿತಗಳಿಗೆ, ಕಾರ್ಮಿಕರ ಹಾಗೂ ಬಹುಮಟ್ಟಿಗಿನ ರೈತರ ಹಿತಗಳಿಗೆ ಅನುಗುಣವಾಗಿರುತ್ತದೆ, ಬಡ ರೈತರ ಹಾಗೂ ಕಾರ್ಮಿಕರ ಸ್ವತಂತ್ರ ಮೈತ್ರೀಕೂಟಕ್ಕೆ "ಪೂರ್ವಭಾವೀ ಷರತ್ತಾಗಿರುತ್ತದೆ." ಅಂಥ ಮೈತ್ರೀಕೂಟವಿಲ್ಲದೆ ಪ್ರಜಾಪ್ರಭುತ್ವ ಅಸ್ಥಿರವಾಗಿರುತ್ತದೆ ಮತ್ತು ಸಮಾಜವಾದಿ ಪರಿವರ್ತನೆ ಅಸಾಧ್ಯ ವಾಗಿರುತ್ತದೆ.

ಸುವಿದಿತವಾಗಿರುವಂತೆ ಪ್ಯಾರಿಸ್ ಕಮ್ಯೂನ್ ವಾಸ್ತವವಾಗಿ ಅಂಥ ಮೈತ್ರೀ ಕೂಟದತ್ತ ಸಾಗುತ್ತಿದ್ದಿತು. ಆದರೆ ಅನೇಕ ಆಂತರಿಕ ಹಾಗೂ ಬಾಹ್ಯ ಪರಿಸ್ಥಿತಿ ಗಳಿಂದಾಗಿ ಅದು ತನ್ನ ಗುರಿಯನ್ನು ತಲುಪಲಿಲ್ಲ.

ತತ್ಫಲವಾಗಿ "ನಿಜವಾದ ಜನತಾ ಕ್ರಾಂತಿ"ಯ ವಿಷಯ ಹೇಳುವಾಗ ಮಾರ್ಕ್ಸ್‌ರವರು, ಪೆಟಿ ಬೂರ್ಷ್ವಾಸೀಯ ವಿಶೇಷ ಲಕ್ಷಣಗಳನ್ನು ಸ್ವಲ್ಪವೂ ಕಡೆಗಾಣಿಸದೆಯೇ (ಅವರು ಪೆಟಿ ಬೂರ್ಷ್ವಾಸೀಯ ಬಗೆಗೆ ಬೇಕಾದಷ್ಟು ಹೇಳಿದರು, ಮತ್ತೆ ಮತ್ತೆ ಹೇಳಿದರು) 1871ರಲ್ಲಿ ಯೂರೋಪು ಖಂಡದ ಬಹುಮಟ್ಟಿಗಿನ ದೇಶಗಳಲ್ಲಿದ್ದ ವರ್ಗಗಳ ವಾಸ್ತವಿಕ ಬಲಾಬಲಗಳನ್ನು ಕಟ್ಟುನಿಟ್ಟಾಗಿ ಗಣನೆಗೆ ತಂದುಕೊಂಡಿದ್ದರು. ರಾಜ್ಯಯಂತ್ರವನ್ನು "ಒಡೆದುಹಾಕುವುದು" ರೈತರ ಹಾಗೂ ಕಾರ್ಮಿಕರ ಇಬ್ಬರ ಹಿತಗಳಿಗೂ ಅವಶ್ಯವಾದುದು, ಅದೇ ಅವರನ್ನು ಒಂದುಗೂಡಿಸುವುದು, ಮತ್ತು "ಪರೋಪಜೀವಿ"ಯನ್ನು ತೊಡೆದು ಹಾಕಿ ಅದರ ಸ್ಥಳದಲ್ಲಿ ಹೊಸತಾದು ದೊಂದನ್ನು ಸ್ಥಾಪಿಸುವ ಸಾಮಾನ್ಯ ಕಾರ್ಯಭಾರವನ್ನು ಅವರ ಮುಂದಿರಿಸುವುದು, ಎಂದು ಅವರು ಹೇಳಿದರು.

ಅದರ ಸ್ಥಳದಲ್ಲಿ ಸ್ಪಷ್ಟವಾಗಿ ಯಾವುದನ್ನು ಸ್ಥಾಪಿಸುವುದು?

## 2. ಒಡೆದುಹಾಕಿದ ರಾಜ್ಯಯಂತ್ರದ ಸ್ಥಳದಲ್ಲಿ ಯಾವುದನ್ನು ಸ್ಥಾಪಿಸುವುದು?

1847ರಲ್ಲಿ, 'ಕಮ್ಯೂನಿಸ್ಟ್ ಪ್ರಣಾಳಿಕೆ'ಯಲ್ಲಿ ಮೇಲಿನ ಪ್ರಶ್ನೆಗೆ ಮಾರ್ಕ್ಸ್‌ರವರ ಉತ್ತರ ಇನ್ನೂ ಶುದ್ಧ ಅಮೂರ್ತವಾಗಿದ್ದಿತು; ಸರಿಯಾಗಿ ಹೇಳುವುದಾದರೆ,

ಅದು ಕಾರ್ಯಭಾರಗಳನ್ನು ಸೂಚಿಸುವ ಉತ್ತರವಾಗಿದ್ದಿತೇ ಹೊರತು ಆ ಕಾರ್ಯ ಭಾರಗಳನ್ನು ಸಾಧಿಸುವ ರೀತಿನೀತಿಗಳನ್ನು ಸೂಚಿಸುವುದಾಗಿರಲಿಲ್ಲ. ಈ ಯಂತ್ರದ ಸ್ಥಳದಲ್ಲಿ "ಆಳುವ ವರ್ಗವಾಗಿ ಸಂಘಟಿತವಾದ ಶ್ರಮಜೀವಿ ವರ್ಗ" ಸ್ಥಾಪಿತವಾಗ ಬೇಕು, "ಪ್ರಜಾಪ್ರಭುತ್ವಕ್ಕಾಗಿ ಹೋರಾಟದಲ್ಲಿ ವಿಜಯ ಸಾಧಿತವಾಗಬೇಕು" ಎಂಬುದು 'ಕಮ್ಯೂನಿಸ್ಟ್ ಪ್ರಣಾಳಿಕೆ'ಯಲ್ಲಿ ನೀಡಿದ ಉತ್ತರವಾಗಿದ್ದಿತು. [65]

ಮಾರ್ಕ್ಸ್‌ರವರು ಎಂದೂ ಅಸಾಧ್ಯಾದರ್ಶ ಕಲ್ಪನೆಗಳಲ್ಲಿ ತೊಡಗಿರಲಿಲ್ಲ. ಆಳುವ ವರ್ಗವಾಗಿ ಶ್ರಮಜೀವಿ ವರ್ಗದ ಸಂಘಟನೆಯು ಯಾವ ವಿಶಿಷ್ಟ ರೂಪಗಳಲ್ಲಿ ಆಗ ಬೇಕು ಮತ್ತು ಈ ಸಂಘಟನೆಯನ್ನು ಅತ್ಯಂತ ಸಂಪೂರ್ಣವಾದ, ಅತ್ಯಂತ ಸುಸಂಗತ ವಾದ "ಪ್ರಜಾಪ್ರಭುತ್ವಕ್ಕಾಗಿ ಹೋರಾಟದಲ್ಲಿ ವಿಜಯ ಸಾಧಿಸುವುದರೊಂದಿಗೆ" ಯಾವ ಸ್ಪಷ್ಟವಾದ ರೀತಿಯಲ್ಲಿ ಸಂಯೋಜಿಸಬೇಕು, ಎಂಬುದಕ್ಕೆ ಉತ್ತರವನ್ನು ಸಾಮೂಹಿಕ ಚಳವಳಿಯ ಅನುಭವವು ಒದಗಿಸುವುದೆಂದು ಅವರು ನಿರೀಕ್ಷಿಸಿದ್ದರು.

ಕಮ್ಯೂನ್‌ನ ಅನುಭವವು ಅಲ್ಪವೇ ಆಗಿದ್ದರೂ ಅದನ್ನು ಮಾರ್ಕ್ಸ್‌ರವರು ತಮ್ಮ 'ಫ್ರಾನ್ಸಿನಲ್ಲಿ ಅಂತರ್ಯುದ್ಧ' ಕೃತಿಯಲ್ಲಿ ಅತ್ಯಂತ ಎಚ್ಚರಿಕೆಯ ವಿಶ್ಲೇಷಣೆಗೆ ಗುರಿಪಡಿಸಿದರು. ಅವರ ಈ ಕೃತಿಯಿಂದ ಬಹುಮುಖ್ಯ ಭಾಗಗಳನ್ನು ಉದ್ಧರಿ ಸೋಣ:

> ಮಧ್ಯಯುಗದಲ್ಲಿ ಹುಟ್ಟಿಕೊಂಡ "ಸ್ಥಾಯಿಾ ಸೈನ್ಯ, ಪೊಲೀಸು, ಅಧಿ ಕಾರಶಾಹಿ, ಪಾದ್ರಿಗಳು, ನ್ಯಾಯಸ್ಥಾನ ಈ ಸರ್ವಾಂತರ್ಯಾಮಿ ಅಂಗ ಸಂಸ್ಥೆಗಳಿರುವ ಕೇಂದ್ರೀಕೃತ ರಾಜ್ಯ ಅಧಿಕಾರ"ವು ಹತ್ತೊಂಬತ್ತನೆಯ ಶತಮಾನದಲ್ಲಿ ಅಭಿವೃದ್ಧಿಗೊಂಡಿತು. ಬಂಡವಾಳ ಹಾಗೂ ಶ್ರಮಗಳ ನಡುವೆ ವರ್ಗ ವೈರುಧ್ಯಗಳು ಬೆಳೆದ ಹಾಗೂ "ರಾಜ್ಯ ಅಧಿಕಾರವು ಹೆಚ್ಚು ಹೆಚ್ಚಾಗಿ ಕಾರ್ಮಿಕ ವರ್ಗವನ್ನು ಹತ್ತಿಕ್ಕುವ ಸಾರ್ವಜನಿಕ ಶಕ್ತಿಯ ಸ್ವರೂಪ ವನ್ನು ತಳೆಯುತೊಡಗಿತು, ವರ್ಗ ಆಧಿಪತ್ಯದ ಯಂತ್ರವಾಗತೊಡಗಿತು. ಪ್ರತಿಯೊಂದು ಕ್ರಾಂತಿಯೂ ವರ್ಗ ಹೋರಾಟದ ಮುನ್ನಡೆಯನ್ನೇ ಸೂಚಿ ಸುತ್ತದೆ. ಅಂಥ ಪ್ರತಿಯೊಂದೂ ಕ್ರಾಂತಿಯನಂತರ ರಾಜ್ಯ ಅಧಿಕಾರದ ಶುದ್ಧ ಮರ್ದನ ಸ್ವರೂಪವು ಹೆಚ್ಚು ಹೆಚ್ಚು ಸ್ಫುಟವಾಗಿ ಕಾಣಬರುತ್ತದೆ." 1848-1849ರ ಕ್ರಾಂತಿಯನಂತರ ರಾಜ್ಯ ಅಧಿಕಾರವು "ಶ್ರಮದ ವಿರುದ್ಧ ಬಂಡವಾಳದ ರಾಷ್ಟ್ರೀಯ ಯುದ್ಧ ಸಾಧನವಾಗಿ" ಬೆಳೆಯಿತು. ದ್ವಿತೀಯ ಸಾಮ್ರಾಜ್ಯವು ಇದನ್ನು ಸ್ಥಾಯಿಗೊಳಿಸಿತು.
>
> "ಸಾಮ್ರಾಜ್ಯಕ್ಕೆ ನೇರವಾಗಿ ವಿರುದ್ಧವಾಗಿದ್ದಿತು ಕಮ್ಯೂನ್." ಅದು "ವರ್ಗ ಆಧಿಪತ್ಯದ ರಾಜಪ್ರಭುತ್ವ ರೂಪವನ್ನು ತೊಡೆದು ಹಾಕುವು ದಷ್ಟೆ ಅಲ್ಲ, ವರ್ಗ ಆಧಿಪತ್ಯವನ್ನೇ ತೊಡೆದು ಹಾಕುವ ಗಣತಂತ್ರ"ದ "ವಿಶಿಷ್ಟ ರೂಪವಾಗಿದ್ದಿತು...."

ಶ್ರಮಜೀವಿ ವರ್ಗದ ಸಮಾಜವಾದಿ ಗಣತಂತ್ರದ ಈ "ವಿಶಿಷ್ಟ" ರೂಪ ಯಾವುದಾಗಿದ್ದಿತು? ಅದು ಸೃಜಿಸತೊಡಗಿದ ರಾಜ್ಯ ಯಾವುದಾಗಿದ್ದಿತು?

> "....ಕಮ್ಯೂನ್‌ನ ಮೊದಲ ಶಾಸನ ಸ್ಥಾಯಿೀ ಸೈನ್ಯವನ್ನು ನಿರ್ಮೂಲ ಮಾಡಿ ಅದರ ಸ್ಥಳದಲ್ಲಿ ಶಸ್ತ್ರಸಜ್ಜಿತ ಜನತೆಯನ್ನು ಸ್ಥಾಪಿಸುವುದಾಗಿದ್ದಿತು..."

ಈ ಕೇಳಿಕೆಯು ಈಗ ಸಮಾಜವಾದಿ ಎಂದು ಕರೆದುಕೊಳ್ಳಬಯಸುತ್ತಿರುವ ಪ್ರತಿಯೊಂದು ಪಾರ್ಟಿಯ ಕಾರ್ಯಕ್ರಮದಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಅವುಗಳ ಕಾರ್ಯಕ್ರಮಗಳ ನಿಜವಾದ ಯೋಗ್ಯತೆಯನ್ನು ನಮ್ಮ ಸಮಾಜವಾದಿ-ಕ್ರಾಂತಿಕಾರಿಗಳ ಹಾಗೂ ಮೆನ್ಶೆವಿಕರ ವರ್ತನೆ ಅತ್ಯುತ್ತಮವಾಗಿ ತೋರಿಸುತ್ತದೆ. ಅವರು ಫೆಬ್ರುವರಿ 27ರ ಕ್ರಾಂತಿಯಾದ ಕೂಡಲೇ ವಾಸ್ತವವಾಗಿ ಈ ಕೇಳಿಕೆಯನ್ನು ನೆರವೇರಿಸಲು ನಿರಾಕರಿಸಿದರು!

> "ಕಮ್ಯೂನ್‌ಅನ್ನು ಜವಾಬ್ದಾರಿಯುತ ಪೌರ ಸಭಾ ಸದಸ್ಯರುಗಳು ರೂಪಿಸಿದ್ದರು. ಅವರು ಪ್ಯಾರಿಸ್ಸಿನ ನಾನಾ ಕ್ಷೇತ್ರಗಳಿಂದ ಸಾರ್ವತ್ರಿಕ ಮತದಾನದ ಮೂಲಕ ಆಯ್ಕೆಗೊಂಡಿದ್ದರು. ಅವರನ್ನು ಯಾವುದೇ ಕಾಲದಲ್ಲೂ ಹಿಂದಕ್ಕೆ ಕರೆಯಬಹುದಿತ್ತು. ಕಮ್ಯೂನ್‌ನ ಬಹುಮತೀಯ ಸದಸ್ಯರು ಸಹಜವಾಗಿಯೇ ದುಡಿಯುವ ಜನರಾಗಿದ್ದರು, ಅಥವಾ ಕಾರ್ಮಿಕ ವರ್ಗದ ಅಂಗೀಕೃತ ಪ್ರತಿನಿಧಿಗಳಾಗಿದ್ದರು....
>
> "...ಅದುವರೆವಿಗೂ ಸರಕಾರದ ಸಾಧನವಾಗಿದ್ದ ಪೊಲೀಸು ಇಲಾಖೆಯ ಎಲ್ಲ ರಾಜಕೀಯ ವಿಶೇಷಣಗಳನ್ನೂ ಕೂಡಲೇ ಕಿತ್ತು ಹಾಕಲಾಯಿತು. ಅದನ್ನು ಜವಾಬ್ದಾರಿಯುತವಾದ ಮತ್ತು ಯಾವುದೇ ಕಾಲದಲ್ಲೂ ಕಮ್ಯೂನ್ ಹಿಂತೆಗೆದುಕೊಳ್ಳಬಹುದಾದಂಥ ಸಾಧನವನ್ನಾಗಿ ಪರಿವರ್ತಿಸಲಾಯಿತು.... ಆಡಳಿತದ ಇತರ ಎಲ್ಲ ಶಾಖೆಗಳ ಅಧಿಕಾರಿಗಳಿಗೂ ಇದೇ ರೀತಿ ಮಾಡಲಾಯಿತು.... ಕಮ್ಯೂನ್‌ನ ಸದಸ್ಯರಿಂದ ಹಿಡಿದು ಮೇಲಿನಿಂದ ಕೆಳಗಿನವರೆಗೆ ಎಲ್ಲರೂ ಸಾರ್ವಜನಿಕ ಸೇವಾಕಾರ್ಯವನ್ನು ಕಾರ್ಮಿಕರಂತೆ ಅಷ್ಟೇ ವೇತನ ಪಡೆದು ಮಾಡಬೇಕಿದ್ದಿತು. ರಾಜ್ಯದ ಉನ್ನತ ಪ್ರತಿಷ್ಠಿತರ ವಿಶೇಷಾಧಿಕಾರಗಳೂ ಪ್ರತಿನಿಧಿ ಭತ್ಯಗಳೂ ಪ್ರತಿಷ್ಠಿತರೊಂದಿಗೇ ಕಣ್ಮರೆಯಾದವು.... ಹಳೆಯ ಸರಕಾರದ ಭೌತಿಕ ಅಧಿಕಾರ ಶಕ್ತಿ ಸಾಧನಗಳಾದ ಸ್ಥಾಯೀ ಸೈನ್ಯ ಹಾಗೂ ಪೊಲೀಸು ಖಾತೆಯನ್ನು ತೊಡೆದು ಹಾಕಿದನಂತರ ಕಮ್ಯೂನ್ ಕೂಡಲೇ ಪಾದ್ರಿಗಳ ಶಕ್ತಿಯಾದ ಆತ್ಮಿಕ ದಬ್ಬಾಳಿಕೆಯ ಸಾಧನವನ್ನು ಮುರಿಯಲು ಹೊರಟಿತು.... ನ್ಯಾಯಾಂಗದ

ಕಾರ್ಯಕರ್ತರುಗಳು ಸೋಗಿನ ಸ್ವಾತಂತ್ರ್ಯವನ್ನು ಕಳೆದುಕೊಂಡರು... ಅವರು ಅಂದಿನಿಂದಾಚೆಗೆ ಆ ಪದವಿಗಳಿಗೆ ಆಯ್ಕೆಗೊಳ್ಳಬೇಕಾಗಿದ್ದಿತು, ಜವಾಬ್ದಾರರಾಗಬೇಕಿದ್ದಿತು ಮತ್ತು ಹಿಂದಕ್ಕೆ ಕರೆಸಿಕೊಳ್ಳುವುದಕ್ಕೆ ಬದ್ಧ ರಾಗಬೇಕಿದ್ದಿತು.... "[66]

ಆದ್ದರಿಂದ ಕಮ್ಯೂನ್ ತೊಡೆದು ಹಾಕಿದ ರಾಜ್ಯಯಂತ್ರದ ಸ್ಥಳದಲ್ಲಿ "ಕೇವಲ" ಹೆಚ್ಚು ಪೂರ್ಣವಾದ ಪ್ರಜಾಪ್ರಭುತ್ವವನ್ನು – ಸ್ಥಾಯಿಾ ಸೈನ್ಯದ ರದ್ದತಿ; ಎಲ್ಲ ಅಧಿಕಾರಿಗಳೂ ಚುನಾಯಿಸಲ್ಪಡುವ ಮತ್ತು ಹಿಂದಕ್ಕೆ ಕರೆಸಿಕೊಳ್ಳುವುದಕ್ಕೆ ಬದ್ಧ ರಾಗುವ ವ್ಯವಸ್ಥೆ ಇವುಗಳನ್ನು – ಸ್ಥಾಪಿಸಿತೆಂದು ಕಂಡುಬರುತ್ತದೆ. ಆದರೆ ವಾಸ್ತವ ವಾಗಿ ಈ "ಕೇವಲ" ಎಂಬುದು ಕೆಲವು ಸಂಸ್ಥೆಗಳ ಸ್ಥಳದಲ್ಲಿ ಮೂಲಭೂತವಾಗಿ ಭಿನ್ನವಾದ ಮಾದರಿಯ ಇತರ ಸಂಸ್ಥೆಗಳನ್ನು ಸ್ಥಾಪಿಸುವ ಬೃಹತ್‌ಪ್ರಮಾಣದ ಬದಲಾವಣೆಯನ್ನು ಪ್ರತಿನಿಧಿಸುತ್ತದೆ. ಇದು ಸ್ಪಷ್ಟವಾಗಿ "ಪರಿಮಾಣವು ಗುಣವಾಗಿ ಪರಿವರ್ತನೆಯಾಗುವುದಕ್ಕೆ" ಒಂದು ದೃಷ್ಟಾಂತವಾಗಿದೆ. ಗ್ರಹಿಸಲು ಸಾಧ್ಯವಾದಷ್ಟೂ ಪೂರ್ಣವಾಗಿ ಹಾಗೂ ಸುಸಂಗತವಾಗಿ ಜಾರಿಗೆ ತಂದ ಪ್ರಜಾಪ್ರಭುತ್ವವು ಬೂರ್ಷ್ವಾ ಸ್ವರೂಪದಿಂದ ಶ್ರಮಜೀವಿ ವರ್ಗ ಪ್ರಜಾಪ್ರಭುತ್ವವಾಗಿ ಪರಿವರ್ತನೆ ಗೊಂಡಿದೆ; ರಾಜ್ಯವು (ಒಂದು ನಿರ್ದಿಷ್ಟ ವರ್ಗವನ್ನು ಹತ್ತಿಕ್ಕಲು ಬಳಸುವ ವಿಶೇಷ ಶಕ್ತಿಯು) ಇನ್ನೆಷ್ಟು ಮಾತ್ರವೂ ಸಾರತಃ ರಾಜ್ಯವಾಗಿರದ ಏನೋ ಒಂದಾಗಿ ಪರಿ ವರ್ತನೆಗೊಂಡಿದೆ.

ಬೂರ್ಷ್ವಾಸೀಯನ್ನು ಹತ್ತಿಕ್ಕುವುದು, ಅದರ ಪ್ರತಿರೋಧವನ್ನು ಸದೆಬಡಿಯು ವುದು ಇನ್ನೂ ಅವಶ್ಯ. ಕಮ್ಯೂನ್‌ಗೆ ಇದು ವಿಶೇಷವಾಗಿ ಅವಶ್ಯವಾಗಿದ್ದಿತು; ಅದರ ಪರಾಜಯಕ್ಕೆ ಕಾರಣಗಳಲ್ಲೊಂದು ಅದು ಇದನ್ನು ಸಾಕಷ್ಟು ದೃಢನಿರ್ಧಾರ ದೊಂದಿಗೆ ಮಾಡಲಿಲ್ಲ ಎಂಬುದಾಗಿದ್ದಿತು. ಆದರೆ ಇಲ್ಲಿ ದಬ್ಬಾಳಿಕೆಯ ಸಾಧನವು, ಗುಲಾಮಗಿರಿ, ಜೀತದಾಳು ಹಾಗೂ ಕೂಲಿ ಗುಲಾಮಗಿರಿ ಪದ್ಧತಿಗಳಡಿ ಯಾವತ್ತೂ ಇದ್ದಂತೆ ಜನತೆಯು ಅಲ್ಪಸಂಖ್ಯಾತರದಾಗಿರದೆ, ಬಹುಸಂಖ್ಯಾತರದಾಗಿದ್ದಿತು. ಜನ ತೆಯು ಬಹುಮತವೇ ತನ್ನ ಪೀಡಕರನ್ನು ಹತ್ತಿಕ್ಕುವುದರಿಂದ, ಹತ್ತಿಕ್ಕಲು ಒಂದು "ವಿಶೇಷ ಶಕ್ತಿ" ಇನ್ನೆಷ್ಟು ಮಾತ್ರವೂ ಅವಶ್ಯವಿಲ್ಲ! ಈ ಅರ್ಥದಲ್ಲಿ ರಾಜ್ಯ ಕ್ಷಯಿಸಿ ಹೋಗತೊಡಗುತ್ತದೆ. ವಿಶೇಷಾಧಿಕಾರದ ಅಲ್ಪಮತೀಯರ ವಿಶೇಷ ಸಂಸ್ಥೆಗಳ ಬದಲು (ವಿಶೇಷ ಸವಲತ್ತುಳ್ಳ ಅಧಿಕಾರಿಗಳು, ಸ್ಥಾಯಿಾ ಸೈನ್ಯದ ಮುಖ್ಯಸ್ಥರುಗಳು ಇವರ ಬದಲು) ಬಹುಮತೀಯರೇ ನೇರವಾಗಿ ಈ ಕಾರ್ಯಗಳನ್ನೆಲ್ಲ ನೆರವೇರಿಸಬಲ್ಲರು. ರಾಜ್ಯ ಅಧಿಕಾರದ ಕಾರ್ಯಭಾರಗಳನ್ನು ಜನರೇ ಇಡೀಯಾಗಿ ಹೆಚ್ಚು ಹೆಚ್ಚಾಗಿ ನೆರವೇರಿಸತೊಡಗಿದಾಗ ರಾಜ್ಯ ಅಧಿಕಾರದ ಅಸ್ತಿತ್ವದ ಅಗತ್ಯತೆ ಅಷ್ಟೂ ಕಮ್ಮಿ ಯಾಗುತ್ತದೆ.

ಈ ಸಂದರ್ಭದಲ್ಲಿ ಮಾರ್ಕ್ಸ್‌ರವರು ಒತ್ತಿ ಹೇಳಿದ ಕಮ್ಯೂನ್ ಕೈಕೊಂಡ ಈ ಕೆಳಗಿನ ಕ್ರಮಗಳು ವಿಶೇಷವಾಗಿ ಗಮನಾರ್ಹವಾಗಿವೆ: ಅಧಿಕಾರಿಗಳಿಗೆ ನೀಡಲಾಗುತ್ತಿದ್ದ ಎಲ್ಲ ಪ್ರತಿನಿಧಿ ಭತ್ಯಗಳ ಮತ್ತು ಎಲ್ಲ ಹಣಕಾಸು ಸೌಲಭ್ಯಗಳ ರದ್ದತಿ; ರಾಜ್ಯದ ಎಲ್ಲ ಉದ್ಯೋಗಿಗಳ ಸಂಭಾವನೆಯನ್ನೂ "ಕಾರ್ಮಿಕರ ಕೂಲಿ"ಯ ಮಟ್ಟಕ್ಕೆ ಇಳಿಸುವುದು. ಇದು ಬೇರೆ ಯಾವುದಕ್ಕಿಂತ ಹೆಚ್ಚಾಗಿ ಬೂರ್ಷ್ವಾ ಪ್ರಜಾಪ್ರಭುತ್ವದಿಂದ ಶ್ರಮಜೀವಿ ವರ್ಗದ ಪ್ರಜಾಪ್ರಭುತ್ವಕ್ಕೆ, ಪೀಡಕರ ಪ್ರಜಾಪ್ರಭುತ್ವದಿಂದ ಪೀಡಿತ ವರ್ಗಗಳ ಪ್ರಜಾಪ್ರಭುತ್ವಕ್ಕೆ, ಒಂದು ನಿರ್ದಿಷ್ಟ ವರ್ಗವನ್ನು ಹತ್ತಿಕ್ಕಲು "ವಿಶೇಷ ಶಕ್ತಿಯಾಗಿ" ಬಳಸುತ್ತಿದ್ದ ರಾಜ್ಯದಿಂದ ಪೀಡಕರನ್ನು ಹತ್ತಿಕ್ಕಲು ಜನತೆಯ ಬಹುಮತೀಯರ – ಕಾರ್ಮಿಕರ ಹಾಗೂ ರೈತರ – ಸಾರ್ವತ್ರಿಕ ಶಕ್ತಿಯ ಸ್ಥಿತಿಗೆ, ಆದ ತಿರುವನ್ನು ಹೆಚ್ಚು ಸ್ಪಷ್ಟವಾಗಿ ತೋರಿಸಿಕೊಡುತ್ತದೆ. ರಾಜ್ಯದ ವಿಷಯಕ್ಕೆ ಸಂಬಂಧಿಸಿ ಬಹುಶಃ ಬಹುಮುಖ್ಯವಾದ, ವಿಶೇಷವಾಗಿ ಎದ್ದು ಕಾಣುವ ವಿಷಯಕ್ಕೆ ಸಂಬಂಧಿಸಿದ, ಮಾರ್ಕ್ಸ್‌ರವರ ಈ ವಿಚಾರಗಳನ್ನೇ ಅತ್ಯಂತ ಸಂಪೂರ್ಣವಾಗಿ ಉಪೇಕ್ಷಿಸಲಾಗಿರುವುದು ! ಜನರಿಗಾಗಿ ಬರೆದಿರುವ ವ್ಯಾಖ್ಯಾನಗಳಲ್ಲಿ – ಅವುಗಳ ಸಂಖ್ಯೆ ಅಪಾರವೆಂದೇ ಹೇಳಬಹುದು – ಈ ವಿಷಯವನ್ನು ನಮೂದಿಸುವುದೇ ಇಲ್ಲ. ಅವುಗಳಲ್ಲಿ ಏನು ಮಾಡಲಾಗಿದೆ ಎಂದರೆ ಅದು ಹಳೇ ಮಾದರಿಯ "ಅತಿಮುಗ್ಧ" ವಸ್ತುವೇನೋ ಎಂಬಂತೆ ಅದರ ಬಗೆಗೆ ಮೌನದಿಂದಿರಲಾಗಿದೆ – ಕ್ರಿಶ್ಚಿಯನರು ತಮ್ಮ ಧರ್ಮಕ್ಕೆ ರಾಜ್ಯ ಧರ್ಮದ ಸ್ಥಾನಮಾನ ದೊರೆತನಂತರ ಪ್ರಜಾಸತ್ತಾತ್ಮಕ ಕ್ರಾಂತಿಕಾರಿ ಸದ್ಭಾವವಿದ್ದ ಆದಿಕಾಲದ ಕ್ರೈಸ್ತಮತದ "ಅತಿಮುಗ್ಧತೆ"ಯನ್ನು "ಮರೆತಂತೆ."

ಉನ್ನತ ರಾಜ್ಯ ಅಧಿಕಾರಿಗಳ ವೇತನವನ್ನು ಕಮ್ಮಿ ಮಾಡಿದುದು ಮುಗ್ಧ, ಪ್ರಾಕೃತ ಪ್ರಜಾಪ್ರಭುತ್ವದ "ಕೇವಲ" ಒಂದು ಕೇಳಿಕೆಯಾಗಿ ತೋರಿಬರಬಹುದು. ಆಧುನಿಕ ಸಂದರ್ಭಸಾಧಕವಾದದ "ಸಂಸ್ಥಾಪಕರಲ್ಲಿ" ಒಬ್ಬರಾದ ಮಾಜಿ ಸೋಷಲ್ ಡೆಮೊಕ್ರಾಟ್ ಎಡುವಾರ್ಡ್ ಬೆರ್ನ್‌ಷ್ಟೈನ್ "ಪ್ರಾಕೃತ" ಪ್ರಜಾಪಭುತ್ವದ ಬಗೆಗೆ ಕೀಳು ಬೂರ್ಷ್ವಾ ಅಪಹಾಸ್ಯದ ಮಾತುಗಳನ್ನು ಅನೇಕ ಬಾರಿ ಪುನರುಚ್ಚರಿಸಿದ್ದಾರೆ. ಎಲ್ಲ ಸಂದರ್ಭಸಾಧಕವಾದಿಗಳಂತೆ ಮತ್ತು ಇಂದಿನ ಕೌತ್‌ಸ್ಕಿವಾದಿಗಳಂತೆ ಇವರೂ ಒಂದು ವಿಷಯವನ್ನು – ಒಂದಿಷ್ಟು "ಪ್ರಾಕೃತ"ದ ಪ್ರಜಾಪ್ರಭುತ್ವಕ್ಕೆ "ಹಿಂದಿರುಗಿ" ಹೋಗದೆ ಬಂಡವಾಳವಾದದಿಂದ ಸಮಾಜವಾದಕ್ಕೆ ಪರಿವರ್ತನೆ ಸಾಧ್ಯವಿಲ್ಲ (ಏಕೆಂದರೆ, ಬೇರೆ ಯಾವ ರೀತಿಯಲ್ಲಿ ಜನತೆಯ ಬಹುಮತೀಯರು, ಅನಂತರ ಯಾರ ವಿನಾಯಿತಿಯೂ ಇಲ್ಲದೆ ಇಡೀ ಜನತೆ, ರಾಜ್ಯ ಕರ್ತವ್ಯಗಳನ್ನು ನೆರವೇರಿಸಬಲ್ಲರು ?) ಎಂಬುದನ್ನು – ಮೊಟ್ಟಮೊದಲನೆಯದಾಗಿ ಅರ್ಥಮಾಡಿಕೊಳ್ಳಲೇ ಇಲ್ಲ; ಆಮೇಲೆ ಎರಡನೆಯದಾಗಿ, ಬಂಡವಾಳವಾದ ಹಾಗೂ ಬಂಡವಾಳಶಾಹಿ ಸಂಸ್ಕೃತಿಯ ಮೇಲೆ ಆಧರಿಸಿದ "ಪ್ರಾಕೃತ ಪ್ರಜಾಪ್ರಭುತ್ವವು" ಇತಿಹಾಸಪೂರ್ವ ಅಥವಾ ಬಂಡವಾಳಶಾಹಿ ಪೂರ್ವ ಕಾಲಗಳಲ್ಲಿದ್ದ ಪ್ರಾಕೃತ ಪ್ರಜಾಪ್ರಭುತ್ವವಲ್ಲ ಎಂಬುದನ್ನೂ ಅವರು ಅರ್ಥ

ಮಾಡಿಕೊಳ್ಳಲಿಲ್ಲ. ಬಂಡವಾಳಶಾಹಿ ಸಂಸ್ಕೃತಿಯು ಬೃಹತ್ ಪ್ರಮಾಣದ ಉತ್ಪಾದನೆ, ಕಾರ್ಖಾನೆಗಳು, ರೈಲ್ವೇ, ಅಂಚೆ ವ್ಯವಸ್ಥೆ, ಟೆಲಿಫೋನ್ ಇತ್ಯಾದಿಗಳನ್ನು ಸೃಜಿಸಿದೆ. ಈ ಆಧಾರದ ಮೇಲೆ ಹಳೆಯ "ರಾಜ್ಯ ಅಧಿಕಾರದ" ಬಹುಮಟ್ಟಿಗಿನ ಕಾರ್ಯಭಾರಗಳು ಎಷ್ಟು ಸರಳವಾಗಿವೆಯೆಂದರೆ ಮತ್ತು ಅವನ್ನು, ದಾಖಲು ಮಾಡುವ, ಫೈಲು ಮಾಡುವ ಹಾಗೂ ತನಿಖೆ ಮಾಡುವ ಎಂಥ ಅತ್ಯಂತ ಸರಳ ಕಾರ್ಯಾಚರಣೆಗಳಿಗೆ ಇಳಿಸಲು ಸಾಧ್ಯವಿದೆಯೆಂದರೆ, ಪ್ರತಿಯೊಬ್ಬ ಅಕ್ಷರಸ್ಥ ವ್ಯಕ್ತಿಯೂ ಅವನ್ನು ಸುಲಭವಾಗಿ ನೆರವೇರಿಸಲು ಸಾಧ್ಯ, ಸಾಮಾನ್ಯ "ಕಾರ್ಮಿಕರ ಕೂಲಿ" ಪಡೆದೇ ತೀರ ಸುಲಭವಾಗಿ ನೆರವೇರಿಸಲು ಸಾಧ್ಯ. ಈ ಕಾರ್ಯಗಳಿಗೆ ಅಂಟಿಕೊಂಡಿರುವ ಪ್ರತಿಯೊಂದು ವಿಶೇಷಾಧಿಕಾರದ ಛಾಯೆಯನ್ನೂ, "ಅಧಿಕೃತ ಭವ್ಯತೆ"ಯ ಪ್ರತಿಯೊಂದು ತೋರಿಕೆಯನ್ನೂ, ಅವುಗಳಿಂದ ಕಿತ್ತೊಗೆಯಲು ಸಾಧ್ಯ (ಮತ್ತು ಕಿತ್ತೊಗೆಯಬೇಕು).

ಯಾರೊಬ್ಬರ ವಿನಾಯಿತಿಯೂ ಇಲ್ಲದೆ ಎಲ್ಲ ಅಧಿಕಾರಿಗಳೂ ಚುನಾಯಿತರಾಗಬೇಕು, ಯಾವುದೇ ಕಾಲದಲ್ಲೂ ಹಿಂದಕ್ಕೆ ಕರೆಸಿಕೊಳ್ಳುವುದಕ್ಕೆ ಅವರು ಬದ್ಧರಾಗಿರಬೇಕು, ಅವರ ಸಂಬಳಗಳನ್ನು ಸಾಮಾನ್ಯ "ಕಾರ್ಮಿಕರ ಕೂಲಿ"ಯ ಮಟ್ಟಕ್ಕೆ ಇಳಿಸಬೇಕು –ಈ ಸರಳವಾದ ಹಾಗೂ "ಸ್ವಯಂಸ್ಪಷ್ಟ"ವಾದ ಪ್ರಜಾಸತ್ತಾತ್ಮಕ ಕ್ರಮಗಳು, ಕಾರ್ಮಿಕರ ಹಾಗೂ ಬಹುಮತೀಯ ರೈತರ ಹಿತಗಳನ್ನು ಸಂಪೂರ್ಣವಾಗಿ ಒಂದುಗೂಡಿಸುತ್ತವೆ ಮತ್ತು ಅದೇ ಹೊತ್ತಿನಲ್ಲಿ ಬಂಡವಾಳವಾದದಿಂದ ಸಮಾಜವಾದಕ್ಕೆ ಕರೆದೊಯ್ಯುವ ಸೇತುವೆಯಾಗಿಯೂ ನೆರವಾಗುತ್ತವೆ. ಈ ಕ್ರಮಗಳು ರಾಜ್ಯದ ಪುನಸ್ಸಂಘಟನೆಗೆ, ಸಮಾಜದ ಶುದ್ಧ ರಾಜಕೀಯ ಪುನಸ್ಸಂಘಟನೆಗೆ, ಸಂಬಂಧಿಸಿದವಾಗಿವೆ; ಆದರೆ ಅವು, "ಸ್ವತ್ತು ವಶಪಡಿಸಿಕೊಂಡವರಿಂದ ಸ್ವತ್ತು ವಶಪಡಿಸಿಕೊಳ್ಳುವ" ಕಾರ್ಯವನ್ನು ಸಾಧಿಸುವುದಕ್ಕೆ ಅಥವಾ ಅದಕ್ಕಾಗಿ ಸಿದ್ಧತೆ ಮಾಡುವುದಕ್ಕೆ, ಅಂದರೆ, ಉತ್ಪಾದನಾ ಸಾಧನಗಳನ್ನು ಬಂಡವಾಳಶಾಹಿ ಒಡೆತನದಿಂದ ಸಾಮಾಜಿಕ ಒಡೆತನಕ್ಕೆ ಪರಿವರ್ತಿಸುವುದಕ್ಕೆ ಸಂಬಂಧಿಸಿಯಷ್ಟೆ ತಮ್ಮ ಸಂಪೂರ್ಣ ಅರ್ಥ ಹಾಗೂ ಮಹತ್ವವನ್ನು ಪಡೆದುಕೊಳ್ಳುತ್ತವೆನ್ನಿ.

> "ಕಮ್ಯೂನ್ ಎಲ್ಲ ಬೂರ್ಷ್ವಾ ಕ್ರಾಂತಿಗಳ ಗುರಿನುಡಿಯಾದ ಕಮ್ಮಿ ಖರ್ಚಿನ ಸರಕಾರವನ್ನು, ಎರಡು ಅತ್ಯಂತ ಹೆಚ್ಚು ಖರ್ಚಿನ ಮೂಲಗಳಾದ ಸೈನ್ಯ ಹಾಗೂ ಅಧಿಕಾರಶಾಹಿಯನ್ನು ರದ್ದುಗೊಳಿಸುವ ಮೂಲಕ, ವಾಸ್ತವವನ್ನಾಗಿ ಮಾಡಿತು" ಎಂದು ಮಾರ್ಕ್ಸ್ ಬರೆದರು.

ಪೇಟೆ ಬೂರ್ಷ್ವಾಸೀಯ ಇತರ ವಿಭಾಗಗಳಂತೆ ರೈತರ ಮಧ್ಯದಿಂದಲೂ ತೀರ ಕೆಲವೇ ಮಂದಿಯಷ್ಟೆ "ಮೇಲಿನ ಸ್ಥಾನಗಳಿಗೆ ಏರುತ್ತಾರೆ," ಬೂರ್ಷ್ವಾ ಅರ್ಥದಲ್ಲಿ "ಜಗತ್ತಿನಲ್ಲಿ ಏಳಿಗೆ ಪಡೆಯುತ್ತಾರೆ," ಅಂದರೆ, ಶ್ರೀಮಂತ ಬೂರ್ಷ್ವಾಗಳಾಗುತ್ತಾರೆ

ಅಥವಾ ಸುಭದ್ರ ಹಾಗೂ ವಿಶೇಷಾಧಿಕಾರಗಳ ಸ್ಥಾನಗಳನ್ನು ಪಡೆದ ಅಧಿಕಾರಿಗಳಾಗುತ್ತಾರೆ. ರೈತರಿರುವ ಪ್ರತಿಯೊಂದು ಬಂಡವಾಳಶಾಹಿ ದೇಶವಲ್ಲೂ (ಬಹುಮಟ್ಟಿಗಿನ ಬಂಡವಾಳಶಾಹಿ ದೇಶಗಳಲ್ಲಿ ಅವರು ಇದ್ದೇ ಇರುತ್ತಾರೆ), ಅವರ ವಿಶಾಲ ಬಹುಮತೀಯರು ಸರಕಾರದ ಪೀಡನೆಗೊಳಗಾಗಿರುತ್ತಾರೆ, ಸರಕಾರವನ್ನು ಉರುಳಿಸಲು ಮತ್ತು "ಕಮ್ಮಿ ಖರ್ಚಿನ" ಸರಕಾರವನ್ನು ಸ್ಥಾಪಿಸಲು ಹಂಬಲಿಸುತ್ತಿರುತ್ತಾರೆ. ಈ ಕಾರ್ಯವನ್ನು ಶ್ರಮಜೀವಿ ವರ್ಗವಷ್ಟೆ ಸಾಧಿಸಬಲ್ಲುದು. ಅದನ್ನು ಸಾಧಿಸುವ ಮೂಲಕ ಶ್ರಮಜೀವಿ ವರ್ಗವು ಅದೇ ಹೊತ್ತಿನಲ್ಲಿ ರಾಜ್ಯವನ್ನು ಸಮಾಜವಾದಿ ರೀತಿಯಲ್ಲಿ ಪುನಸ್ಸಂಘಟಿಸುವತ್ತ ಒಂದು ಹೆಜ್ಜೆ ಮುಂದೆ ಇಡುತ್ತದೆ.

## 3. ಸಂಸದೀಯವಾದದ ರದ್ದತಿ

"ಕಮ್ಯೂನ್ ಒಂದು ಸಂಸದೀಯವಲ್ಲದ, ಆದರೆ ಕಾರ್ಯನಿರತವಾದ ಸಂಸ್ಥೆಯಾಗಿರಬೇಕಿದ್ದಿತು. ಅದು ಒಂದೇ ಕಾಲದಲ್ಲಿ ಕಾರ್ಯಾಂಗದ ಹಾಗೂ ಶಾಸಕಾಂಗದ ಕಾರ್ಯಗಳನ್ನು ನೆರವೇರಿಸಬೇಕಿದ್ದಿತು..." ಎಂದು ಮಾರ್ಕ್ಸ್ ಬರೆದರು.

"...ಆಧಿಪತ್ಯ ನಡೆಸುವ ವರ್ಗದ ಯಾವ ಸದಸ್ಯನು ಪಾರ್ಲಿಮೆಂಟಿನಲ್ಲಿ ಜನರನ್ನು ಪ್ರತಿನಿಧಿಸಬೇಕು ಮತ್ತು ಜನರ ಮೇಲೆ ದಬ್ಬಾಳಿಕೆ ನಡೆಸಬೇಕು [ver-und zertreten] ಎಂಬುದನ್ನು ಮೂರು ಅಥವಾ ಆರು ವರ್ಷಗಳಿಗೊಮ್ಮೆ ನಿರ್ಧರಿಸುವ ಬದಲು, ಸಾರ್ವತ್ರಿಕ ಮತದಾನವು, ಕಮ್ಯೂನ್‌ಗಳಲ್ಲಿ ವ್ಯವಸ್ಥಿತರಾದ ಜನರ ಸೇವೆ ಸಲ್ಲಿಸುವುದಿದ್ದಿತು, – ಕಾರ್ಮಿಕರಿಗಾಗಿ ಫೋರ್ಮನ್ನರಿಗಾಗಿ ಹಾಗೂ ಲೆಕ್ಕ ಬರೆಯುವವರಿಗಾಗಿ ಶೋಧೆ ನಡೆಸುವ ಪ್ರತಿ ಒಬ್ಬನಲ್ಲ ಒಬ್ಬ ಯಜಮಾನನಿಗೆ ವೈಯಕ್ತಿಕ ಮತದಾನವು ಸಹಕಾರಿಯಾಗಿರುವಂತೆ."

ಸಾಮಾಜಿಕ ಸ್ವದೇಶ ಮೂಢಾಭಿಮಾನ ಹಾಗೂ ಸಂದರ್ಭಸಾಧಕವಾದಗಳು ಈಗ ಮೇಲುಗೈ ಪಡೆದಿರುವುದರಿಂದಾಗಿ 1871ರಲ್ಲಿ ಮಾರ್ಕ್ಸ್‌ರವರು ಸಂಸದೀಯವಾದವನ್ನು ಟೀಕಿಸಿ ಬರೆದ ಈ ಗಮನಾರ್ಹ ಮಾತುಗಳೂ ಈಗ ಮಾರ್ಕ್ಸ್‌ವಾದದ "ಮರೆತ ಮಾತು"ಗಳ ಗುಂಪಿಗೆ ಸೇರಿಬಿಟ್ಟಿವೆ. ವೃತ್ತಿದಾರ ಸಂಪುಟ ಸಚಿವರುಗಳೂ ಸಂಸದೀಯವಾದಿಗಳೂ, ಶ್ರಮಜೀವಿ ವರ್ಗಕ್ಕೆ ದ್ರೋಹ ಬಗೆದವರೂ ಮತ್ತು ನಮ್ಮ ದಿನದ "ವ್ಯಾವಹಾರಿಕ" ಸಮಾಜವಾದಿಗಳೂ ಸಂಸದೀಯವಾದದ ಎಲ್ಲ ಟೀಕೆಯನ್ನೂ ಅರಾಜಕತಾವಾದಿಗಳಿಗೆ ಬಿಟ್ಟುಕೊಟ್ಟಿದ್ದಾರೆ ಮತ್ತು ಈ ಅದ್ಭುತ ವಿಚಾರದ ಆಧಾರದ ಮೇಲೆ ಅವರು ಸಂಸದೀಯವಾದದ ಎಲ್ಲ ಟೀಕೆಯನ್ನೂ "ಅರಾಜಕತಾವಾದ" ಎಂದೇ ಖಂಡಿಸುತ್ತಾರೆ!! "ಮುಂದುವರಿದ" ಸಂಸದೀಯ ವ್ಯವಸ್ಥೆ

ಯುಳ್ಳ ದೇಶಗಳ ಶ್ರಮಜೀವಿ ವರ್ಗವು ಷೈದೆಮನ್‌ಗಳು, ದಾವೀದ್‌ಗಳು, ಲೇಗೀನ್‌ಗಳು, ಸೆಂಬಾಗಳು, ರೆನೊದೇಲ್‌ಗಳು, ಹೆಂಡೆರ್‌ಸನ್‌ಗಳು, ವಾಂದೆರ್‌ವೆಲ್ಡೆಗಳು, ಸ್ಟೌನಿಂಗ್‌ಗಳು, ಬ್ರಾಂಟಿಂಗ್‌ಗಳು, ಬಿಸ್ಸೊಲಾತಿಗಳು ಇವರೇ ಮುಂತಾದ "ಸಮಾಜವಾದಿ"ಗಳ ವರ್ತನೆಯಿಂದ ಬೇಸರಗೊಂಡು ಹೆಚ್ಚು ಹೆಚ್ಚಾಗಿ ತನ್ನ ಸಹಾನುಭೂತಿಯನ್ನು ಅರಾಜಕತಾ-ಸಿಂಡಿಕಲಿಸಂ (anarcho-syndicalism)ಗೆ ನೀಡುತ್ತಿದೆ – ಈ ಸಿಂಡಿಕಲಿಸಂ ಸಂದರ್ಭಸಾಧಕವಾದದ ಅವಳಿಯಷ್ಟೆ ಆಗಿದ್ದರೂ ಸಹ.

ಆದರೆ ಮಾರ್ಕ್ಸ್‌ರವರಿಗೆ ಕ್ರಾಂತಿಕಾರಿ ದ್ವಂದ್ವಾತ್ಮಕತೆಯು ಎಂದೂ ಪ್ಲೆಹಾನೊವ್, ಕೌತ್ಸ್ಕಿ ಮತ್ತಿತರರು ಮಾಡಿರುವಂತೆ ಶುಷ್ಕ ಸೊಗಸುಗಾರಿಕೆಯ ನುಡಿಗಟ್ಟು, ರಟರಟ ಸದ್ದುಮಾಡುವ ಆಟದ ಸಾಮಾನು ಆಗಿರಲಿಲ್ಲ. ಬೂರ್ಷ್ವಾ ಸಂಸದೀಯವಾದವೆಂಬ "ಹಂದಿಯ ರೊಪ್ಪ"ಗಳನ್ನೂ, ಅದರಲ್ಲೂ ಪರಿಸ್ಥಿತಿಯು ಸ್ಪಷ್ಟವಾಗಿಯೇ ಕ್ರಾಂತಿಕಾರಿಯಲ್ಲದಿದ್ದಾಗ, ಉಪಯೋಗಿಸಲು ಅಸಮರ್ಥವಾದಂಥ ಅರಾಜಕತಾವಾದದೊಂದಿಗೆ ಹೇಗೆ ನಿಷ್ಕರುಣೆಯಿಂದ ಸಂಬಂಧ ಕಡಿದು ಹಾಕಿಕೊಳ್ಳಬೇಕೆಂಬುದನ್ನು ಮಾರ್ಕ್ಸ್ ತಿಳಿದಿದ್ದರು. ಆದರೆ ಅದೇ ಹೊತ್ತಿನಲ್ಲಿ ಅವರು ಸಂಸದೀಯವಾದವನ್ನು ಹೇಗೆ ನಿಜಕ್ಕೂ ಕ್ರಾಂತಿಕಾರಿಯಾದ ಶ್ರಮಜೀವಿ ವರ್ಗದ ಟೀಕೆಗೆ ಗುರಿಪಡಿಸಬೇಕೆಂಬುದನ್ನೂ ತಿಳಿದಿದ್ದರು.

ಪ್ರತಿ ಕೆಲವು ವರ್ಷಗಳಿಗೊಮ್ಮೆ ಆಳುವ ವರ್ಗದ ಯಾವ ಸದಸ್ಯನು ಜನರನ್ನು ಪಾರ್ಲಿಮೆಂಟ್ ಮೂಲಕ ತುಳಿಯಬೇಕು, ಅವರ ಮೇಲೆ ದಬ್ಬಾಳಿಕೆ ನಡೆಸಬೇಕು ಎಂಬುದನ್ನು ನಿರ್ಧರಿಸುವುದು – ಇದೇ ಬೂರ್ಷ್ವಾ ಸಂಸದೀಯವಾದದ ನಿಜವಾದ ಸಾರವಾಗಿದೆ, ಸಂಸದೀಯ ಸಂವಿಧಾನಾತ್ಮಕ ರಾಜಪ್ರಭುತ್ವಗಳಲ್ಲಷ್ಟೆ ಅಲ್ಲ, ಅತ್ಯಂತ ಪ್ರಜಾಸತ್ತಾತ್ಮಕವೆನಿಸಿಕೊಂಡ ಗಣತಂತ್ರಗಳಲ್ಲೂ ಸಹ.

ಆದರೆ ನಾವು ರಾಜ್ಯದ ಪ್ರಶ್ನೆಯನ್ನು ಈ ಕ್ಷೇತ್ರದಲ್ಲಿ ಶ್ರಮಜೀವಿ ವರ್ಗದ ಕಾರ್ಯಭಾರಗಳ ದೃಷ್ಟಿಕೋನದಿಂದ ಪರಿಶೀಲಿಸಿದರೆ ಮತ್ತು ಸಂಸದೀಯವಾದವನ್ನು ರಾಜ್ಯದ ಸಂಸ್ಥೆಗಳಲ್ಲೊಂದೆಂದು ಪರಿಗಣಿಸಿದರೆ, ಈ ಸಂಸದೀಯವಾದದಿಂದ ಹೊರಬರುವ ಮಾರ್ಗವಾವುದು? ಇದನ್ನು ಬಿಟ್ಟುಕೊಡುವುದು ಹೇಗೆ?

ಮತ್ತೊಮ್ಮೆ ನಾವು ಈ ಮಾತನ್ನು ಹೇಳಬೇಕು: ಇಂದಿನ "ಸೋಷಲ್ ಡೆಮೊಕ್ರಾಟ್" (ಅಂದರೆ ಇಂದಿನ ಸಮಾಜವಾದದ ದ್ರೋಹಿ) ಕಮ್ಯೂನ್‌ನ ಅಧ್ಯಯನದ ಮೇಲೆ ಆಧರಿಸಿದ ಮಾರ್ಕ್ಸ್‌ರವರ ಬೋಧೆಗಳನ್ನು ಎಷ್ಟು ಸಂಪೂರ್ಣವಾಗಿ ಮರೆತುಬಿಟ್ಟಿದ್ದಾನೆಂದರೆ, ಅವರು ಸಂಸದೀಯವಾದದ ಅರಾಜಕತಾವಾದಿ ಅಥವಾ ಪ್ರತಿಗಾಮಿ ಟೀಕೆಯನ್ನು ಬಿಟ್ಟು ಬೇರಾವ ಟೀಕೆಯನ್ನೂ ನಿಜಕ್ಕೂ ಅರ್ಥ ಮಾಡಿಕೊಳ್ಳಲಾರ.

ಸಂಸದೀಯವಾದದಿಂದ ಹೊರಬರುವ ಮಾರ್ಗವು ಪ್ರಾತಿನಿಧಿಕ ಸಂಸ್ಥೆಗಳನ್ನೂ ಆಯ್ಕೆಯ ಸೂತ್ರವನ್ನೂ ರದ್ದುಗೊಳಿಸುವುದಲ್ಲವೆನ್ನಿ. ಆದರೆ ಈ ಪ್ರಾತಿನಿಧಿಕ

ಸಂಸ್ಥೆಗಳನ್ನು ಕೇವಲ ನಿಷ್ಪ್ರಯೋಜಕ ಮಾತುಗಾರಿಕೆಯ ಸಂಸ್ಥೆಗಳಾಗಿರುವುದರಿಂದ "ಕಾರ್ಯನಿರತ" ಸಂಸ್ಥೆಗಳನ್ನಾಗಿ ಪರಿವರ್ತಿಸುವುದಾಗಿದೆ. "ಕಮ್ಯೂನ್ ಒಂದು ಸಂಸದೀಯವಲ್ಲದ ಆದರೆ ಕಾರ್ಯನಿರತವಾದ ಸಂಸ್ಥೆಯಾಗಿರಬೇಕಿದ್ದಿತು. ಅದು ಒಂದೇ ಕಾಲದಲ್ಲಿ ಕಾರ್ಯಾಂಗದ ಹಾಗೂ ಶಾಸಕಾಂಗದ ಕಾರ್ಯಗಳನ್ನು ನೆರವೇರಿಸಬೇಕಿದ್ದಿತು."

"ಕಾರ್ಯನಿರತವಾದ, ಸಂಸದೀಯವಲ್ಲದ, ಸಂಸ್ಥೆ" – ಇದು ಇಂದಿನ ಸಂಸದೀಯವಾದಿಗಳಿಗೂ ಸೋಷಲ್ ಡೆಮೊಕ್ರಸಿಯ ಸಂಸದೀಯ "ಮುದ್ದು ನಾಯಿ"ಗಳಿಗೂ ನೇರವಾಗಿ ನೀಡಿದ ಪ್ರಹಾರವಾಗಿದೆ! ಅಮೆರಿಕದಿಂದ ಸ್ವಿಟ್ಸರ್ಲೆಂಡ್‌ವರೆಗೆ, ಫ್ರಾನ್ಸಿನಿಂದ ಬ್ರಿಟನ್‌ವರೆಗೆ, ನಾರ್ವೆಯಿಂದ ಬೇರೆ ಇನ್ನಾವುದೇ ದೇಶದವರೆಗೆ ಯಾವುದೇ ಸಂಸದೀಯ ದೇಶವನ್ನಾದರೂ ತೆಗೆದುಕೊಳ್ಳಿ, ಈ ದೇಶಗಳಲ್ಲಿ ನಿಜವಾದ "ರಾಜ್ಯ" ವ್ಯವಹಾರವನ್ನು ಪರದೆಯ ಹಿಂದೆ ವಿವಿಧ ಇಲಾಖೆಗಳೂ ಕಾರ್ಯಾಲಯಗಳೂ ಸೈನ್ಯದ ಕೇಂದ್ರಕಚೇರಿಗಳೂ ನೆರವೇರಿಸುತ್ತವೆ. ಪಾರ್ಲಿಮೆಂಟನ್ನು "ಸಾಮಾನ್ಯ ಜನ"ರನ್ನು ಮೋಸಗೊಳಿಸುವ ವಿಶೇಷ ಉದ್ದೇಶದಿಂದ ಕೇವಲ ಮಾತುಕತೆಗಳಲ್ಲಿ ತೊಡಗಿರಲು ಬಿಟ್ಟುಕೊಡಲಾಗಿರುತ್ತದೆ. ಇದು ಎಷ್ಟು ನಿಜವೆಂದರೆ, ಬೂರ್ಷ್ವಾ ಪ್ರಜಾಸತ್ತಾತ್ಮಕ ಗಣತಂತ್ರವಾದ ರಷ್ಯನ್ ಗಣತಂತ್ರದಲ್ಲೂ ಸಹ ಅದು ನಿಜವಾದ ಪಾರ್ಲಿಮೆಂಟನ್ನು ಸ್ಥಾಪಿಸುವುದರಲ್ಲಿ ಯಶಸ್ವಿಯಾಗುವುದಕ್ಕೆ ಮುನ್ನವೇ ಸಂಸದೀಯವಾದದ ಈ ಎಲ್ಲ ದೋಷಗಳೂ ಒಂದೇ ಬಾರಿಗೆ ಹೊರಬಂದವು. ಸ್ಕೋಬೆಲೆವ್ ಹಾಗೂ ತ್ಸೆರೆತೇಲಿಗಳು, ಚೆರ್ನೋವ್ ಹಾಗೂ ಅವ್‌ಕ್ಸೇಂತ್ಯೆವ್‌ಗಳು ಇವರಂಥ ಕೊಳಕು ಸಂಕುಚಿತಮನಸ್ಕ ವೀರರು ಅತ್ಯಂತ ಅಸಹ್ಯ ಬೂರ್ಷ್ವಾ ಸಂಸದೀಯವಾದಕ್ಕನುಗುಣವಾಗಿ ಸೋವಿಯತ್‌ಗಳನ್ನೂ ಕೇವಲ ಮಾತುಗಾರಿಕೆಯ ಚಾವಡಿಗಳನ್ನಾಗಿ ಪರಿವರ್ತಿಸುವ ಮೂಲಕ ಕಲುಷಿತಗೊಳಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಸೋವಿಯತ್‌ಗಳಲ್ಲಿ "ಸಮಾಜವಾದಿ" ಸಚಿವರುಗಳು ಅತಿನಂಬಿಕೆಯ ಹಳ್ಳಿಗರನ್ನು ವಾಗಾಡಂಬರದಿಂದಲೂ ನಿರ್ಣಯಗಳಿಂದಲೂ ಮೋಸಗೊಳಿಸುತ್ತಿದ್ದಾರೆ. ಸರಕಾರದಲ್ಲೇ ಒಂದು ರೀತಿಯ ಸತತವಾದ ಬದಲಾವಣೆಗಳಾಗುತ್ತಿವೆ. ಇದಕ್ಕೆ ಒಂದು ಕಾರಣ, ಸಾಧ್ಯವಾದಷ್ಟು ಹೆಚ್ಚು ಸಂಖ್ಯೆಯ ಸಮಾಜವಾದಿ-ಕ್ರಾಂತಿಕಾರಿಗಳೂ ಮೆನ್ಷೆವಿಕರೂ ಸರದಿಯಲ್ಲಿ "ಸೀಕಡುಬಿ"ನ ಸಮೀಪ ಹೋಗಲು – ಲಾಭಕರ ಹಾಗೂ ಗೌರವಾರ್ಹ ಹುದ್ದೆಗಳನ್ನು ಪಡೆಯಲು – ಸಾಧ್ಯ ಮಾಡಿಕೊಡುವುದಾದರೆ; ಮತ್ತೊಂದು ಕಾರಣ ಜನರ "ಗಮನ"ವನ್ನು ಸತತವಾಗಿ "ಹಿಡಿದಿರಿಸುವುದು" ಆಗಿದೆ. ಈ ಮಧ್ಯೆ ಕಾರ್ಯಾಲಯಗಳೂ ಸೈನ್ಯದ ಕೇಂದ್ರಕಚೇರಿಗಳೂ "ರಾಜ್ಯ"ದ ವ್ಯವಹಾರಗಳನ್ನು "ನಡೆಸಿಕೊಂಡು" ಹೋಗುತ್ತವೆ.

"ಸಮಾಜವಾದಿಗಳು" (ಈ ಪದಪ್ರಯೋಗಕ್ಕಾಗಿ ಕ್ಷಮಿಸಿ) ಅಧಿಪತಿಗಳಾಗಿರುವ ಸಚಿವಾಲಯಗಳಲ್ಲೂ ಸಹ ಇಡೀ ಅಧಿಕಾರಶಾಹಿ ಯಂತ್ರ ವಾಸ್ತವವಾಗಿ ಬದಲಾ

ಗದೆ ಉಳಿದಿದೆ, ಹಳೆಯ ರೀತಿಯಲ್ಲೇ ಕೆಲಸ ಮಾಡುತ್ತಿದೆ ಮತ್ತು ಕ್ರಾಂತಿಕಾರಿ ಕ್ರಮಗಳನ್ನು ಸಂಪೂರ್ಣವಾಗಿ "ಸ್ವತಂತ್ರ"ವಾಗಿ ಧ್ವಂಸ ಮಾಡುತ್ತಿದೆ, ಎಂದು ಆಳುವ ಸಮಾಜವಾದಿ-ಕ್ರಾಂತಿಕಾರಿ ಪಕ್ಷದ ಮುಖಪತ್ರ 'ದ್ಯೇಲೊ ನರೋದ'[67] ಈಚೆಗೆ ಒಂದು ಪ್ರಮುಖ ಲೇಖನದಲ್ಲಿ, "ಎಲ್ಲರೂ" ರಾಜಕೀಯ ವ್ಯಭಿಚಾರದಲ್ಲಿ ತೊಡಗಿರುವ "ಉತ್ತಮ ಸಮಾಜ"ದ ಜನರಿಗೆ ಸಹಜವಾದಂಥ ಅಸದೃಶ ನಿಸ್ಸಂಕೋಚತೆಯೊಂದಿಗೆ ಒಪ್ಪಿಕೊಂಡು ಬರೆಯಿತು ! ಈ ತಪ್ಪೊಪ್ಪಿಗೆ ಇಲ್ಲದಿದ್ದರೂ, ಸಮಾಜವಾದಿ-ಕ್ರಾಂತಿಕಾರಿಗಳೂ ಮೆನ್ಷೆವಿಕರೂ ಸರಕಾರದಲ್ಲಿ ಭಾಗವಹಿಸುತ್ತಿರುವುದರ ನಿಜವಾದ ಇತಿಹಾಸವೇ ಇದನ್ನು ಸಾಧಿಸುವುದಿಲ್ಲವೇ ? ಕಾಡೆಟ್ಟರ ಸಚಿವ ಸಾಂಗತ್ಯದಲ್ಲಿ, ಚೆರ್ನೋವ್‌ಗಳು, ರುಸಾನೊವ್‌ಗಳು, ಜೆನ್ಜಿನೊವ್‌ಗಳು ಮತ್ತಿತರರ 'ದ್ಯೇಲೊ ನರೋದ' ಪತ್ರಿಕೆಯ ಸಂಪಾದಕರು ಎಷ್ಟು ಸಂಪೂರ್ಣವಾಗಿ ನಾಚಿಕೆಗೆಟ್ಟಿದ್ದಾರೆಂದರೆ, "ತಮ್ಮ" ಸಚಿವಾಲಯಗಳಲ್ಲಿ ಏನೊಂದೂ ಬದಲಾಗಿಲ್ಲವೆಂದು, ಅದೊಂದು ಕೇವಲ ಕ್ಷುಲ್ಲಕ ವಿಷಯವೇನೋ ಎಂಬಂತೆ, ಭಂಡತನದಿಂದ ಸಮರ್ಥಿಸಿ ಹೇಳುತ್ತಿದ್ದಾರೆ ಎಂಬುದು ಗಮನಾರ್ಹ !! ಗ್ರಾಮಾಂತರದ ಸರಳ ಸೈಮನ್ನರುಗಳನ್ನು ಮೋಸಗೊಳಿಸಲು ಕ್ರಾಂತಿಕಾರಿ-ಪ್ರಜಾಸತ್ತಾತ್ಮಕ ನುಡಿಗಟ್ಟುಗಳು, ಬಂಡವಾಳಶಾಹಿಗಳ "ಹೃದಯಗಳನ್ನು ಹಿಗ್ಗಿಸಲು" ಅಧಿಕಾರಶಾಹಿ ಹಾಗೂ ಕೆಂಪುಪಟ್ಟಿ – ಇದೇ "ಸತ್ಯಸಂಧ" ಸಮ್ಮಿಶ್ರ ಸಚಿವಸಂಪುಟದ ಸಾರಸರ್ವಸ್ವ.

ಬೂರ್ಷ್ವಾ ಸಮಾಜದ ಕೊಳೆತ ಲಂಚಕೋರತನದ ಸಂಸದೀಯವಾದದ ಸ್ಥಳದಲ್ಲಿ ಕಮ್ಯೂನ್ ಅಭಿಪ್ರಾಯ ಹಾಗೂ ಚರ್ಚಾ ಸ್ವಾತಂತ್ರ್ಯವು ಮೋಸದ ಸ್ಥಿತಿಗೆ ಅವನತಿಗೊಳ್ಳದಂಥ ಸಂಸ್ಥೆಗಳನ್ನು ಸ್ಥಾಪಿಸುತ್ತದೆ. ಏಕೆಂದರೆ ಇಲ್ಲಿ ಪಾರ್ಲಿಮೆಂಟ್ ಸದಸ್ಯರು ತಾವೇ ಕೆಲಸ ಮಾಡಬೇಕು, ತಾವು ಮಾಡಿದ ಶಾಸನಗಳನ್ನು ತಾವೇ ಜಾರಿಗೆ ತರಬೇಕು, ವಾಸ್ತವವಾಗಿ ಸಾಧಿಸಿದ ಫಲಿತಾಂಶಗಳನ್ನು ತಾವೇ ಪರೀಕ್ಷಿಸಬೇಕು ಮತ್ತು ತಮ್ಮ ಮತದಾರರಿಗೆ ನೇರವಾಗಿ ಜವಾಬ್ದಾರರಾಗಿರಬೇಕು. ಪ್ರಾತಿನಿಧಿಕ ಸಂಸ್ಥೆಗಳು ಉಳಿದುಕೊಂಡಿರುತ್ತವೆ. ಆದರೆ ಇಲ್ಲಿ ಸಂಸದೀಯವಾದವು ಶಾಸಕಾಂಗ ಹಾಗೂ ಕಾರ್ಯಾಂಗದ ನಡುವೆ ಶ್ರಮ ವಿಭಜನೆ ಮಾಡುವ ವಿಶೇಷ ವ್ಯವಸ್ಥೆಯಾಗಿ, ಡೆಪ್ಯೂಟಿಗಳಿಗೆ ವಿಶೇಷಾಧಿಕಾರದ ಸ್ಥಾನ ನೀಡುವ ವ್ಯವಸ್ಥೆಯಾಗಿ, ಇರುವುದಿಲ್ಲ. ಪ್ರಾತಿನಿಧಿಕ ಸಂಸ್ಥೆಗಳಿಲ್ಲದ ಪ್ರಜಾಪ್ರಭುತ್ವವನ್ನು, ಶ್ರಮಜೀವಿ ವರ್ಗದ ಪ್ರಜಾಪ್ರಭುತ್ವವನ್ನೂ ಸಹ, ನಾವು ಕಲ್ಪಿಸಿಕೊಳ್ಳಲಾರೆವು. ಆದರೆ ಬೂರ್ಷ್ವಾ ಸಮಾಜದ ಟೀಕೆಯು ನಮಗೆ ಕೇವಲ ಮಾತುಗಳಷ್ಟೆ ಆಗಿರದಿದ್ದರೆ, ಬೂರ್ಷ್ವಾ ಸೀಯನ್ನು ಉರುಳಿಸುವುದು ಮೆನ್ಷೆವಿಕರ ಹಾಗೂ ಸಮಾಜವಾದಿ-ಕ್ರಾಂತಿಕಾರಿಗಳ, ಷೈದೆಮನ್‌ಗಳ ಮತ್ತು ಲೇಗೀನ್‌ಗಳ, ಸೆಂಬಾಗಳ ಮತ್ತು ವಾಂದೆರ್‌ವೆಲ್ದೆಗಳ ವಿಷಯದಲ್ಲಿ ಇರುವಂತೆ ಕಾರ್ಮಿಕರ ಮತಗಳನ್ನು ಕಸಿಯುವ "ಚುನಾವಣಾ" ಕೂಗಷ್ಟೆ ಆಗಿರದೆ ನಮ್ಮ ಶ್ರದ್ಧಾವಂತ ಹಾಗೂ ಪ್ರಾಮಾಣಿಕ ಬಯಕೆಯಾಗಿದ್ದರೆ, ನಾವು

ಸಂಸದೀಯವಾದವಿಲ್ಲದ ಪ್ರಜಾಪ್ರಭುತ್ವವನ್ನು ಕಲ್ಪಿಸಿಕೊಳ್ಳಬಲ್ಲೆವು ಮತ್ತು ಕಲ್ಪಿಸಿಕೊಳ್ಳಬೇಕು.

ಕಮ್ಯೂನ್‌ಗೂ ಶ್ರಮಜೀವಿ ವರ್ಗದ ಪ್ರಜಾಪ್ರಭುತ್ವಕ್ಕೂ ಅವಶ್ಯರಾದ ಆ ಅಧಿಕಾರಿಗಳ ಕರ್ತವ್ಯಗಳ ಬಗೆಗೆ ಮಾತನಾಡುತ್ತ ಮಾರ್ಕ್ಸ್‌ರವರು ಅವರನ್ನು "ಪ್ರತಿ ಒಬ್ಬನಲ್ಲ ಒಬ್ಬ ಯಜಮಾನ"ನ ಕೆಲಸಗಾರರೊಂದಿಗೆ, ಅಂದರೆ ಸಾಮಾನ್ಯ ಬಂಡವಾಳ ಶಾಹಿ ಉದ್ಯಮದ "ಕಾರ್ಮಿಕರು, ಫೋರ್ಮನ್ನರು ಹಾಗೂ ಲೆಕ್ಕಬರೆಯುವವ ರೊಂದಿಗೆ" ಹೋಲಿಸುತ್ತಾರೆಂಬುದನ್ನು ಗಮನಿಸುವುದು ತುಂಬ ಬೋಧಪ್ರದವಾಗಿದೆ.

ಮಾರ್ಕ್ಸ್‌ರವರು "ಹೊಸ" ಸಮಾಜವನ್ನು ಕಲ್ಪಿಸಿದರು ಅಥವಾ ಆವಿಷ್ಕರಿಸಿ ದರು ಎಂಬ ಅರ್ಥದಲ್ಲಿ ಅವರಲ್ಲಿ ಅಸಾಧ್ಯಾದರ್ಶವಾದದ ಒಂದಿಷ್ಟು ಛಾಯೆಯೂ ಇಲ್ಲ. ಇಲ್ಲ, ಅವರು ಹೊಸ ಸಮಾಜವು ಹಳತರಿಂದ ಹುಟ್ಟಿಕೊಂಡುದನ್ನು ಅಭ್ಯ ಸಿಸಿದರು. ಹಳತರಿಂದ ಹೊಸತಕ್ಕೆ ಪರಿವರ್ತನೆಯ ರೂಪಗಳನ್ನು ಸಹಜ ಚಾರಿತ್ರಿಕ ಪ್ರಕ್ರಿಯೆಯಾಗಿ ಅಭ್ಯಸಿಸಿದರು. ಅವರು ಸಾಮೂಹಿಕ ಶ್ರಮಜೀವಿ ವರ್ಗ ಚಳವಳಿಯ ವಾಸ್ತವಿಕ ಅನುಭವವನ್ನು ಪರೀಕ್ಷಿಸಿದರು ಮತ್ತು ಅದರಿಂದ ವ್ಯಾವಹಾರಿಕ ಪಾಠ ಗಳನ್ನು ಕಲಿಯಲು ಯತ್ನಿಸಿದರು. ಎಲ್ಲ ಮಹಾ ಕ್ರಾಂತಿಕಾರಿ ಚಿಂತನಶೀಲರೂ ಮರ್ದಿತ ವರ್ಗಗಳ ಮಹಾ ಚಳವಳಿಗಳ ಅನುಭವದಿಂದ ಕಲಿತಂತೆ ಮತ್ತು ಎಂದೂ ಅವುಗಳಿಗೆ ಶುಷ್ಕಪಾಂಡಿತ್ಯದ "ನೀತಿ ಬೋಧೆ"ಗಳನ್ನು ("ಅವರು ಶಸ್ತ್ರ ಕೈಕೊಳ್ಳ ಬಾರದಿತ್ತು" ಎಂದು ಪ್ಲೆಹಾನೊವ್‌ರೂ, "ಒಂದು ವರ್ಗವು ತನಗೆ ತಾನೇ ಮಿತಿ ಹಾಕಿಕೊಳ್ಳಬೇಕು" ಎಂದು ತ್ಸೆರೆತೇಲಿಯವರೂ ಹೇಳಿದಂತೆ) ಹೇಳಹೋಗದೆ, ಅವರು ಕಮ್ಯೂನ್‌ನಿಂದ "ಕಲಿತರು."

ಅಧಿಕಾರಶಾಹಿಯನ್ನು ಕೂಡಲೇ ಎಲ್ಲೆಲ್ಲೂ ಮತ್ತು ಸಂಪೂರ್ಣವಾಗಿ ರದ್ದು ಗೊಳಿಸುವುದು ಸಾಧ್ಯವಿಲ್ಲದ ಮಾತು. ಅದೊಂದು ಅಸಾಧ್ಯಾದರ್ಶ. ಆದರೆ ಹಳೆಯ ಅಧಿಕಾರಶಾಹಿ ಯಂತ್ರವನ್ನು ಕೂಡಲೇ ಒಡೆಯುವುದು ಮತ್ತು ಎಲ್ಲ ಅಧಿಕಾರಶಾಹಿ ಯನ್ನೂ ಕ್ರಮೇಣ ರದ್ದುಗೊಳಿಸುವುದನ್ನು ಸಾಧ್ಯಮಾಡಿಕೊಡುವ ಒಂದು ಹೊಸ ಯಂತ್ರವನ್ನು ಕೂಡಲೇ ನಿರ್ಮಿಸತೊಡಗುವುದು – ಇದು ಅಸಾಧ್ಯಾದರ್ಶ ಅಲ್ಲ. ಇದು ಕಮ್ಯೂನ್‌ನ ಅನುಭವ, ಕ್ರಾಂತಿಕಾರಿ ಶ್ರಮಜೀವಿ ವರ್ಗದ ನೇರ ಹಾಗೂ ತಕ್ಷಣದ ಕಾರ್ಯಭಾರ.

ಬಂಡವಾಳವಾದವು "ರಾಜ್ಯ" ಆಡಳಿತದ ಸ್ವಾಭಾವಿಕ ಕ್ರಿಯೆಗಳನ್ನು ಸರಳ ಗೊಳಿಸುತ್ತದೆ; ಅದು "ಯಜಮಾನಿಕೆ ಮಾಡು"ವುದನ್ನು ಪಕ್ಕಕ್ಕೆ ತಳ್ಳಿ ಇಡೀ ವಿಷಯ ವನ್ನು ಶ್ರಮಜೀವಿಗಳನ್ನು (ಆಳುವ ವರ್ಗವಾಗಿ) ಸಂಘಟಿಸುವುದಕ್ಕೆ ಪರಿಮಿತಿ ಗೊಳಿಸಲು ಸಾಧ್ಯ ಮಾಡಿಕೊಡುತ್ತದೆ. ಹೀಗೆ ಸಂಘಟಿತವಾದ ಶ್ರಮಜೀವಿ ವರ್ಗವು ಇಡೀ ಸಮಾಜದ ಹೆಸರಿನಲ್ಲಿ "ಕಾರ್ಮಿಕರನ್ನು, ಫೋರ್ಮನ್ನರನ್ನು ಮತ್ತು ಲೆಕ್ಕ ಬರೆಯುವವರನ್ನು" ವೇತನದ ಮೇಲೆ ನೇಮಕಗೊಳಿಸುತ್ತದೆ.

ನಾವೇನೂ ಅಸಾಧ್ಯಾದರ್ಶವಾದಿಗಳಲ್ಲ. ನಾವು ಎಲ್ಲ ಆಡಳಿತ ವ್ಯವಸ್ಥೆಯನ್ನೂ, ಎಲ್ಲ ಅಧೀನತೆಯನ್ನೂ ಒಮ್ಮೆಗೇ ಬಿಟ್ಟುಕೊಡುವ "ಕನಸು" ಕಾಣುತ್ತಿಲ್ಲ. ಶ್ರಮಜೀವಿ ವರ್ಗದ ಸರ್ವಾಧಿಕಾರತ್ವದ ಕಾರ್ಯಭಾರಗಳನ್ನು ಅರ್ಥಮಾಡಿಕೊಳ್ಳದಿರುವುದರ ಮೇಲೆ ಆಧರಿಸಿದ ಈ ಅರಾಜಕತಾವಾದಿ ಕನಸುಗಳು ಮಾರ್ಕ್ಸ್‌ವಾದಕ್ಕೆ ಸಂಪೂರ್ಣವಾಗಿ ಪರಕೀಯವಾದವು ಮತ್ತು ಅವು ಜನರು ಬದಲಾಗುವವರೆಗೂ ಸಮಾಜವಾದಿ ಕ್ರಾಂತಿಯನ್ನು ಮುಂದೆ ಹಾಕಲಷ್ಟೆ ನೆರವಾಗುತ್ತವೆ. ಇಲ್ಲ, ನಮಗೆ ಸಮಾಜವಾದಿ ಕ್ರಾಂತಿಯು ಜನ ಈಗ ಹೇಗಿದ್ದಾರೋ ಹಾಗೆ ಇರುವಾಗಲೇ, ಅಧೀನತೆ, ಹತೋಟಿ ಹಾಗೂ "ಫೋರ್ಮನ್ ಮತ್ತು ಲೆಕ್ಕ ಬರೆಯುವವರ ನೇಮಕ" ಇವುಗಳನ್ನು ಬಿಟ್ಟುಕೊಡಲಾಗದ ಜನರು ಇರುವಾಗಲೇ, ಬೇಕು.

ಆದರೆ ಅಧೀನತೆಯು ಎಲ್ಲ ಶೋಷಿತ ಹಾಗೂ ದುಡಿಯುವ ಜನರ ಶಸ್ತ್ರ ಸಜ್ಜಿತ ಮುಂಚೂಣಿಗೆ, ಅಂದರೆ ಶ್ರಮಜೀವಿ ವರ್ಗಕ್ಕೆ, ಅಧೀನತೆಯಾಗಿರಬೇಕು. ರಾಜ್ಯ ಅಧಿಕಾರಿಗಳ ವಿಶಿಷ್ಟ "ಯಜಮಾನಿಕೆ"ಯ ಸ್ಥಳದಲ್ಲಿ "ಫೋರ್ಮನ್ ಹಾಗೂ ಲೆಕ್ಕ ಬರೆಯುವವರ" ಸರಳ ಕರ್ತವ್ಯಗಳನ್ನು ಸ್ಥಾಪಿಸುವ ಕಾರ್ಯದ ಆರಂಭವನ್ನು ಒಮ್ಮೆಗೇ ರಾತ್ರೋರಾತ್ರಿ ಮಾಡಲು ಸಾಧ್ಯ ಮತ್ತು ಮಾಡಬೇಕು. ಈ ಕರ್ತವ್ಯಗಳು ಆಗಲೇ ಸಾಮಾನ್ಯ ನಗರವಾಸಿಯ ಸಾಮರ್ಥ್ಯದೊಳಗೇ ಸಂಪೂರ್ಣವಾಗಿ ಇವೆ ಮತ್ತು ಅವನು ಅವನ್ನು "ಕಾರ್ಮಿಕರ ಕೂಲಿ"ಯನ್ನು ಪಡೆದುಕೊಂಡೇ ಮಾಡಬಲ್ಲನು.

ನಾವು, ಕಾರ್ಮಿಕರು, ಬಂಡವಾಳಶಾಹಿಯು ಆಗಲೇ ಸೃಜಿಸಿರುವುದರ ಆಧಾರದ ಮೇಲೆ, ಕಾರ್ಮಿಕರಾಗಿ ನಮ್ಮ ಸ್ವಂತ ಅನುಭವದ ಮೇಲೆ ವಿಶ್ವಾಸವಿರಿಸಿ, ಸಶಸ್ತ್ರ ಕಾರ್ಮಿಕರ ರಾಜ್ಯಾಧಿಕಾರದ ಬೆಂಬಲದೊಂದಿಗೆ ಕಟ್ಟುನಿಟ್ಟಾದ ಉಕ್ಕಿನ ಶಿಸ್ತನ್ನು ಸ್ಥಾಪಿಸಿ, ಬೃಹತ್ ಪ್ರಮಾಣದ ಉತ್ಪಾದನೆಯನ್ನು ಸಂಘಟಿಸುವೆವು. ನಾವು ರಾಜ್ಯ ಅಧಿಕಾರಿಗಳ ಪಾತ್ರವನ್ನು ಜವಾಬ್ದಾರಿಯುತರಾದ, ಹಿಂದಕ್ಕೆ ಕರೆಸಿಕೊಳ್ಳಲು ಸಾಧ್ಯವಿರುವಂಥ, ಸಾಧಾರಣ ಸಂಬಳದ "ಫೋರ್ಮನ್ನರು ಮತ್ತು ಲೆಕ್ಕ ಬರೆಯುವವರಾಗಿ" (ಎಲ್ಲ ರೀತಿಗಳ ಮಾದರಿಗಳ ಹಾಗೂ ಗುಣಮಟ್ಟಗಳ ಯಂತ್ರತಂತ್ರಜ್ಞರ ನೆರವಿನೊಂದಿಗೆ ಎನ್ನಿ) ನಮ್ಮ ಆದೇಶಗಳನ್ನು ಕೇವಲ ನೆರವೇರಿಸುತ್ತ ಹೋಗುವವರ ಮಟ್ಟಕ್ಕೆ ಇಳಿಸುತ್ತೇವೆ. ಇದೇ ನಮ್ಮ ಶ್ರಮಜೀವಿ ವರ್ಗದ ಕಾರ್ಯಭಾರವಾಗಿದೆ. ಶ್ರಮಜೀವಿ ವರ್ಗ ಕ್ರಾಂತಿಯನ್ನು ಸಾಧಿಸುವುದರಲ್ಲಿ ನಾವು ಇದರಿಂದಲೇ ಪ್ರಾರಂಭಿಸಬಲ್ಲೆವು ಮತ್ತು ಪ್ರಾರಂಭಿಸಬೇಕು. ಬೃಹತ್ ಪ್ರಮಾಣದ ಉತ್ಪಾದನೆಯ ಆಧಾರದ ಮೇಲೆ ಅಂಥ ಆರಂಭವು ತಾನೇ, ಎಲ್ಲ ಅಧಿಕಾರಶಾಹಿಯೂ ಕ್ರಮೇಣ "ಕ್ಷಯಿಸಿ ಹೋಗುವುದಕ್ಕೆ," ಒಂದು ವ್ಯವಸ್ಥೆಯನ್ನು, ನಿಜವಾದ ವ್ಯವಸ್ಥೆಯನ್ನು, ವೇತನ ಗುಲಾಮಗಿರಿಯೊಂದಿಗೆ ಯಾವ ಸಾದೃಶ್ಯತೆಯನ್ನೂ ಹೊಂದಿರದಂಥ ವ್ಯವಸ್ಥೆಯನ್ನು, ನಿಯಂತ್ರಣ ಹಾಗೂ ಲೆಕ್ಕ ಬರೆಯುವ ಕರ್ತವ್ಯಗಳು ಹೆಚ್ಚು ಹೆಚ್ಚು ಸರಳವಾಗಿ

ಒಬ್ಬೊಬ್ಬರೂ ಸರದಿಯಲ್ಲಿ ಅವುಗಳನ್ನು ನೆರವೇರಿಸುವಂತಾಗಿ ಅದೊಂದು ಅಭ್ಯಾಸವಾಗಿಬಿಟ್ಟು ಜನರ ವಿಶೇಷ ವಿಭಾಗವೊಂದರ ವಿಶೇಷ ಕರ್ತವ್ಯಗಳಾಗಿ ಅಂತಿಮವಾಗಿ ನಶಿಸಿ ಹೋಗುವ ವ್ಯವಸ್ಥೆಯನ್ನು ಕ್ರಮೇಣ ಸೃಜಿಸುವುದಕ್ಕೆ, ದಾರಿ ಮಾಡಿಕೊಡುತ್ತದೆ.

ಕಳೆದ ಶತಮಾನದ ಎಂಟನೆಯ ದಶಕದಲ್ಲಿ ಸರಸೋಕ್ತಿಯ ಜರ್ಮನ್ ಸೋಷಲ್ ಡೆಮೊಕ್ರಾಟ್ ಒಬ್ಬರು ಅಂಚೆ ವ್ಯವಸ್ಥೆಯನ್ನು ಸಮಾಜವಾದಿ ಆರ್ಥಿಕ ಪದ್ಧತಿಗೆ ದೃಷ್ಟಾಂತವೆಂದು ಕರೆದರು. ಇದು ತುಂಬ ನಿಜ. ಪ್ರಸ್ತುತದಲ್ಲಿ ಅಂಚೆ ವ್ಯವಸ್ಥೆಯು ರಾಜ್ಯ ಬಂಡವಾಳಶಾಹಿ ಏಕಸ್ವಾಮ್ಯ ಮಾರ್ಗಗಳಲ್ಲಿ ಸಂಘಟಿತವಾದ ಒಂದು ವ್ಯವಹಾರವಾಗಿದೆ. ಸಾಮ್ರಾಜ್ಯವಾದವು ಎಲ್ಲ ನ್ಯಾಸಗಳನ್ನೂ ಇದೇ ಮಾದರಿಯ ಸಂಘಟನೆಗಳನ್ನಾಗಿ ಕ್ರಮೇಣ ಪರಿವರ್ತಿಸುತ್ತಿದೆ. ಈ ಸಂಘಟನೆಗಳಲ್ಲಿ ಅತಿ ದುಡಿಮೆಯಿಂದ ಹಾಗೂ ಹಸಿವಿನಿಂದ ಕಂಗಾಲಾದ "ಸಾಮಾನ್ಯ" ಜನರ ಮೇಲೆ ಅದೇ ಬೂರ್ಷ್ವಾ ಅಧಿಕಾರಶಾಹಿ ನಿಂತಿರುತ್ತದೆ. ಆದರೆ ಸಾಮಾಜಿಕ ನಿರ್ವಹಣೆಯ ತಂತ್ರ ಇಲ್ಲಿ ಆಗಲೇ ಹಸ್ತಗತವಾಗಿರುತ್ತದೆ. ನಾವು ಒಮ್ಮೆ ಬಂಡವಾಳಶಾಹಿಗಳನ್ನು ಉರುಳಿಸಿ, ಈ ಶೋಷಕರ ಪ್ರತಿರೋಧವನ್ನು ಸಶಸ್ತ್ರ ಕಾರ್ಮಿಕರ ಬಿಗಿಮುಷ್ಟಿಯಿಂದ ಪುಡಿಗುಟ್ಟಿ, ಆಧುನಿಕ ರಾಜ್ಯದ ಅಧಿಕಾರಶಾಹಿ ಯಂತ್ರವನ್ನು ಮುರಿದು ಹಾಕಿದೆವೆಂದರೆ, ನಮ್ಮ ಬಳಿ "ಪರೋಪಜೀವಿ"ಯಿಂದ ಮುಕ್ತವಾದ ಭವ್ಯವಾಗಿ ಸಜ್ಜುಗೊಂಡ ಯಂತ್ರಸಾಧನವೊಂದು ಇರುತ್ತದೆ. ಈ ಯಂತ್ರಸಾಧನವನ್ನು ಐಕ್ಯಗೊಂಡ ಕಾರ್ಮಿಕರು ತಾವೇ ಚೆನ್ನಾಗಿ ನಡೆಸಬಲ್ಲವರಾಗಿರುತ್ತಾರೆ. ಅವರು ಯಂತ್ರತಂತ್ರಜ್ಞರನ್ನೂ ಫೋರ್ಮನ್ನರನ್ನೂ ಲೆಕ್ಕ ಬರೆಯುವವರನ್ನೂ ಬಾಡಿಗೆಗೆ ಗೊತ್ತು ಮಾಡಿಕೊಳ್ಳುತ್ತಾರೆ ಮತ್ತು ಅವರಿಗೆಲ್ಲ, ಒಟ್ಟಿನಲ್ಲಿ ಎಲ್ಲ "ರಾಜ್ಯ" ಅಧಿಕಾರಿಗಳಿಗೂ, ಕಾರ್ಮಿಕರ ಕೂಲಿಯನ್ನೇ ಕೊಡುತ್ತಾರೆ. ಇಲ್ಲಿ ಒಂದು ಮೂರ್ತ ರೂಪದ ವ್ಯಾವಹಾರಿಕ ಕಾರ್ಯಭಾರವಿದೆ. ಇದನ್ನು ಎಲ್ಲ ನ್ಯಾಸಗಳಿಗೆ ಸಂಬಂಧಿಸಿಯೂ ತಕ್ಷಣವೇ ಪೂರೈಸಲು ಸಾಧ್ಯವಿದೆ. ಈ ಕಾರ್ಯಭಾರವನ್ನು ಪೂರೈಸುವುದು ದುಡಿಯುವ ಜನರನ್ನು ಶೋಷಣೆಯಿಂದ ಮುಕ್ತರನ್ನಾಗಿ ಮಾಡುವುದು. ಇದು ಕಮ್ಯೂನ್ ಆಗಲೇ ಆಚರಣೆಗೆ ತರಲು ಪ್ರಾರಂಭಿಸಿದ್ದುದನ್ನು (ಅದರಲ್ಲೂ ವಿಶೇಷವಾಗಿ ರಾಜ್ಯವನ್ನು ನಿರ್ಮಿಸುವುದರಲ್ಲಿ ಪ್ರಾರಂಭಿಸಿದ್ದುದನ್ನು) ಗಣನೆಗೆ ತಂದುಕೊಂಡಂಥ ಕಾರ್ಯಭಾರವಾಗಿದೆ.

ಯಂತ್ರತಂತ್ರಜ್ಞರೂ, ಫೋರ್ಮನ್ನರೂ ಲೆಕ್ಕ ಬರೆಯುವವರೂ ಮತ್ತು ಎಲ್ಲ ಅಧಿಕಾರಿಗಳೂ "ಒಬ್ಬ ಕಾರ್ಮಿಕನ ಕೂಲಿ"ಗೆ ಹೆಚ್ಚಿಲ್ಲದಂತೆ ಸಂಬಳಗಳನ್ನು ಪಡೆಯುವಂತೆ, ಎಲ್ಲರೂ ಸಶಸ್ತ್ರ ಶ್ರಮಜೀವಿ ವರ್ಗದ ನಿಯಂತ್ರಣ ಹಾಗೂ ನಾಯಕತ್ವದ ಅಡಿ ಇರುವಂತೆ, ಇಡೀ ಆರ್ಥಿಕತೆಯನ್ನು ಅಂಚೆ ವ್ಯವಸ್ಥೆಯ ರೀತಿಯಲ್ಲಿ ಸಂಘಟಿಸುವುದು – ಇದೇ ನಮ್ಮ ತಕ್ಷಣದ ಗುರಿಯಾಗಿದೆ. ನಮಗೆ ಬೇಕಾದುದು ಇದೇ ರಾಜ್ಯ, ಇದೇ ಆರ್ಥಿಕ ಅಡಿಪಾಯ. ಸಂಸದೀಯವಾದದ ರದ್ದತಿ ಮತ್ತು ಪ್ರಾತಿನಿ

ಧಿಕ ಸಂಸ್ಥೆಗಳ ರಕ್ಷಣೆಯನ್ನು ಜಾರಿಗೆ ತರುವುದು ಇದೇ. ಬೂರ್ಷ್ವಾಸೀಯು ಈ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ರೀತಿಯಲ್ಲಿ ದುಡಿಯುವ ವರ್ಗಗಳು ಮಾಡದಂತೆ ಏರ್ಪಡಿಸುವುದು ಇದೇ.

## 4. ರಾಷ್ಟ್ರೀಯ ಐಕ್ಯತೆಯ ಸಂಘಟನೆ

"...ರಾಷ್ಟ್ರೀಯ ಸಂಘಟನೆಯ ಸ್ಥೂಲ ನಿರೂಪಣೆಯಲ್ಲಿ – ಇದನ್ನು ಹೆಚ್ಚು ವಿವರಗಳಿಂದ ಪೂರ್ಣಚಿತ್ರವಾಗಿ ಬೆಳೆಸಲು ಕಮ್ಯೂನ್‌ಗೆ ಕಾಲಾವಕಾಶವಿರಲಿಲ್ಲ – ಅದು, ಕಮ್ಯೂನ್ ಅತ್ಯಂತ ಸಣ್ಣ ಹಳ್ಳಿಯ ರಾಜಕೀಯ ರೂಪವಾಗಿಯೂ ಇರಬೇಕು ಎಂದು ಸುಸ್ಪಷ್ಟವಾಗಿ ತಿಳಿಸುತ್ತದೆ...." ಕಮ್ಯೂನ್‌ಗಳು ಪ್ಯಾರಿಸ್ಸಿನಲ್ಲಿ ಕೂಡಲಿದ್ದ "ರಾಷ್ಟ್ರೀಯ ನಿಯೋಗ"ವನ್ನೂ ಆಯ್ಕೆ ಮಾಡಬೇಕಿದ್ದಿತು.

"....ಕೇಂದ್ರ ಸರಕಾರದಲ್ಲಿ ಉಳಿಯುತ್ತಿದ್ದ ಕೆಲವೇ ಆದರೆ ಮುಖ್ಯವಾದ ಕ್ರಿಯೆಗಳನ್ನು, ರದ್ದುಮಾಡಬೇಕಾಗಿರಲಿಲ್ಲ. ಇಂತಹ ಕೇಳಿಕೆ ಉದ್ದೇಶಪೂರ್ವಕ ವಂಚನೆಯಾಗುತ್ತಿತ್ತು. ಅವನ್ನು ಕಮ್ಯೂನ್‌ಗಳ ಅಧಿಕಾರಿಗಳಿಗೆ, ಅಂದರೆ ಕಟ್ಟುನಿಟ್ಟಾಗಿ ಜವಾಬ್ದಾರಿಯುತರಾದ ಅಧಿಕಾರಿಗಳಿಗೆ, ವರ್ಗಾಯಿಸಬೇಕಿದ್ದಿತು.

"....ರಾಷ್ಟ್ರೀಯ ಐಕ್ಯತೆಯನ್ನು ಭಂಗಗೊಳಿಸಲಾಗುತ್ತಿರಲಿಲ್ಲ, ಆದರೆ ಅದಕ್ಕೆ ಪ್ರತಿಯಾಗಿ, ಕಮ್ಯೂನ್ ಸಂವಿಧಾನದ ಮೂಲಕ ಅದನ್ನು ಸಂಘಟಿಸಬೇಕಿದ್ದಿತು; ತಾನೇ ಅಂಥ ರಾಷ್ಟ್ರೀಯ ಐಕ್ಯತೆಯ ಮೂರ್ತ ಸ್ವರೂಪ ಎಂದು ಸೋಗು ಹಾಕಿಕೊಂಡು, ಆದರೂ ರಾಷ್ಟ್ರದಿಂದ ಸ್ವತಂತ್ರವಾಗಿ, ಅದಕ್ಕೂ ಮೇಲೆ ಇರಬಯಸಿದ್ದ, ರಾಷ್ಟ್ರ ದೇಹದ ಮೇಲೆ ಪರೋಪಜೀವಿ ದುರ್ಮಾಂಸವಾಗಿಯಷ್ಟೆ ಇದ್ದುಕೊಂಡಿದ್ದ, ರಾಜ್ಯಾಧಿಕಾರವನ್ನು ನಾಶಗೊಳಿಸುವ ಮೂಲಕ ರಾಷ್ಟ್ರೀಯ ಐಕ್ಯತೆಯು ವಾಸ್ತವಿಕವಾಗಬೇಕಿದ್ದಿತು...." "ಹಳೆಯ ಸರಕಾರೀ ಅಧಿಕಾರದ ಕೇವಲ ದಬ್ಬಾಳಿಕೆಯ ಉದ್ದೇಶದ ಸಂಸ್ಥೆಗಳನ್ನು ಕೊಯ್ದುಹಾಕಬೇಕಿದ್ದಾಗಲೇ ಅದರ ನ್ಯಾಯಯುತ ಕ್ರಿಯೆಗಳನ್ನು ಸಮಾಜಕ್ಕೂ ಮೇಲೆ ನಿಲ್ಲುವ ಹಕ್ಕು ಸಮರ್ಥನೆ ಮಾಡುತ್ತಿದ್ದ ಅಧಿಕಾರ ಸಂಸ್ಥೆಯಿಂದ ಕಿತ್ತುಕೊಂಡು ಜವಾಬ್ದಾರಿಯುತ ಸಮಾಜ ಸೇವಕರಿಗೆ ಒಪ್ಪಿಸಬೇಕಿದ್ದಿತು."

ಇಂದಿನ ಸೋಷಲ್ ಡೆಮೊಕ್ರಸಿಯ ಸಂದರ್ಭಸಾಧಕವಾದಿಗಳು ಮಾರ್ಕ್ಸ್‌ರವರ ಈ ಅಭಿಪ್ರಾಯೋಕ್ತಿಗಳನ್ನು ಅರ್ಥಮಾಡಿಕೊಳ್ಳಲು ಎಷ್ಟರ ಮಟ್ಟಿಗೆ ವಿಫಲರಾಗಿದ್ದಾರೆ – ಅಥವಾ ನಿರಾಕರಿಸಿದ್ದಾರೆ ಎಂದು ಹೇಳುವುದೇ ಬಹುಶಃ ಹೆಚ್ಚು ನಿಜವಾದೀತು

– ಎಂಬುದನ್ನು ಹೆರೊಸ್ಟ್ರಾಟಿಯಸ್ ಖ್ಯಾತಿಯ ತತ್ವಭ್ರಷ್ಟ ಬೆರ್ನ್‌ಷ್ಟೈನ್‌ರ 'ಸಮಾಜವಾದದ ಪೂರ್ವಾಧಾರಗಳು ಮತ್ತು ಸೋಷಲ್ ಡೆಮೊಕ್ರಾಟರ ಕಾರ್ಯ ಭಾರಗಳು' ಎಂಬ ಕೃತಿ ಅತ್ಯುತ್ತಮವಾಗಿ ತೋರಿಸಿಕೊಡುತ್ತದೆ. ಮೇಲಿನ ಮಾರ್ಕ್ಸ್‌ರವರ ಉದ್ಧೃತ ಭಾಗಕ್ಕೆ ಸಂಬಂಧಿಸಿಯೇ ಬೆರ್ನ್‌ಷ್ಟೈನ್‌ರು ಹೀಗೆ ಬರೆದಿರುವುದು: "ಇದರ ರಾಜಕೀಯ ಸಾರದ ಬಗೆಗೆ ಹೇಳುವುದಾದರೆ" ಈ ಕಾರ್ಯಕ್ರಮವು "ಎಲ್ಲ ಮೂಲ ಲಕ್ಷಣಗಳಲ್ಲೂ ಪ್ರುದೋನ್‌ರ ಸಂಯುಕ್ತರಾಷ್ಟ್ರ ತತ್ವದೊಂದಿಗೆ ತುಂಬ ಸಾದೃಶ್ಯತೆ ಹೊಂದಿದೆ.... ಮಾರ್ಕ್ಸ್ ಮತ್ತು 'ಪೆಟಿ ಬೂರ್ಷ್ವಾ' ಪ್ರುದೋನ್‌ರ (ಬೆರ್ನ್‌ಷ್ಟೈನ್‌ರು 'ಪೆಟಿ ಬೂರ್ಷ್ವಾ' ಎಂಬ ಪದವನ್ನು ಉದ್ಧರಣ ಚಿಹ್ನೆಗಳೊಳಗೆ ವ್ಯಂಗ್ಯವಾಗಿ ಕಾಣುವಂತೆ ಮಾಡಲೋಸುಗ ಇರಿಸಿದ್ದಾರೆ) ನಡುವೆ ಏನೆಲ್ಲ ಇತರ ಭಿನ್ನಾಭಿಪ್ರಾಯಗಳಿದ್ದರೂ ಈ ಅಂಶಗಳಿಗೆ ಸಂಬಂಧಿಸಿ ಅವರ ವಿಚಾರಸರಣಿಗಳು ಎಷ್ಟು ಸಾಧ್ಯವೋ ಅಷ್ಟೂ ನಿಕಟವಾಗಿ ಸಾಗುತ್ತವೆ." ನಗರಸಭೆಗಳ ಪ್ರಾಮುಖ್ಯತೆ ಹೆಚ್ಚುತ್ತಿದೆ ನಿಜ, ಎಂದು ಬೆರ್ನ್‌ಷ್ಟೈನ್ ಮುಂದುವರಿಸುತ್ತಾರೆ, ಆದರೆ "ಪ್ರಜಾ ಪ್ರಭುತ್ವದ ಮೊದಲ ಕಾರ್ಯಭಾರ ಆಧುನಿಕ ರಾಜ್ಯಗಳ ಅಂತಹ ವಿಲಯನವೇ [Auflösung], ಮಾರ್ಕ್ಸ್ ಮತ್ತು ಪ್ರುದೋನ್‌ರು ಕಂಡುಕೊಂಡಂತೆ ಅವುಗಳ ಸಂಘಟನೆಯ ಅಂತಹ ಸಂಪೂರ್ಣ ಪರಿವರ್ತನೆಯೇ [Umwandlung] (ಪ್ರಾಂತೀಯ ಅಥವಾ ಜಿಲ್ಲಾ ಅಸೆಂಬ್ಲಿಗಳ ಪ್ರತಿನಿಧಿಗಳಿಂದ ರಾಷ್ಟ್ರೀಯ ಅಸೆಂಬ್ಲಿಯ ರಚನೆ, ಕಮ್ಯೂನ್‌ಗಳ ಪ್ರತಿನಿಧಿಗಳಿಂದ ಪ್ರಾಂತೀಯ ಅಥವಾ ಜಿಲ್ಲಾ ಅಸೆಂಬ್ಲಿಗಳ ರಚನೆ) ಎಂಬುದು, ಹಾಗಾಗಿ ಹಳೆಯ ರಾಷ್ಟ್ರೀಯ ಪ್ರಾತಿನಿಧ್ಯ ವಿಧಾನ ಕಣ್ಮರೆಯಾಗುತ್ತದೆ ಎಂಬುದು, ನನಗೆ ಸಂದೇಹಾಸ್ಪದವಾಗಿಯೇ ಕಂಡುಬರುತ್ತದೆ." (ಬೆರ್ನ್‌ಷ್ಟೈನ್, 'ಪೂರ್ವಾಧಾರಗಳು,' ಜರ್ಮನ್ ಆವೃತ್ತಿ, 1899, ಪು. 134 ಮತ್ತು 136.)

"ಪರೋಪಜೀವಿ ದುರ್ಮಾಂಸವಾದ ರಾಜ್ಯಾಧಿಕಾರದ ವಿನಾಶ"ದ ಕುರಿತು ಮಾರ್ಕ್ಸ್‌ರವರ ಅಭಿಪ್ರಾಯಗಳನ್ನು ಪ್ರುದೋನ್‌ರ ಸಂಯುಕ್ತ ರಾಷ್ಟ್ರ ತತ್ವದೊಂದಿಗೆ ಗೊಂದಲಗೊಳಿಸುವುದು ನಿಜವಾಗಿಯೂ ಘೋರವಾದುದು ! ಆದರೆ ಇದೇನೂ ಆಕಸ್ಮಿಕವಲ್ಲ. ಏಕೆಂದರೆ ಮಾರ್ಕ್ಸ್‌ರವರು ಇಲ್ಲಿ ಕೇಂದ್ರೀಯತಾವಾದಕ್ಕೆ ವಿರುದ್ಧವಾಗಿ ಸಂಯುಕ್ತರಾಷ್ಟ್ರವಾದದ ಬಗೆಗೆ ಮಾತನಾಡುವುದಿಲ್ಲ, ಆದರೆ ಎಲ್ಲ ಬೂರ್ಷ್ವಾ ದೇಶಗಳಲ್ಲೂ ಇರುವ ಹಳೆಯ ಬೂರ್ಷ್ವಾ ರಾಜ್ಯಯಂತ್ರವನ್ನು ಕುಟ್ಟಿಪುಡಿ ಮಾಡುವ ಬಗೆಗೆ ಮಾತನಾಡುತ್ತಾರೆ, ಎಂಬುದು ಸಂದರ್ಭಸಾಧಕವಾದಿಗೆ ಎಂದೂ ಹೊಳೆಯುವುದೇ ಇಲ್ಲ.

ಸಂದರ್ಭಸಾಧಕವಾದಿಗೆ ಹೊಳೆಯುವ ಒಂದೇ ಒಂದು ವಿಷಯವೆಂದರೆ, ತನ್ನ ಸುತ್ತ ಪೆಟಿ ಬೂರ್ಷ್ವಾ ಸಂಕುಚಿತಮನಸ್ಕತೆಯ ಹಾಗೂ "ಸುಧಾರಣಾವಾದಿ" ಸ್ಥಗಿತತೆಯ ಪರಿಸರದಲ್ಲಿ ಕಾಣಬರುವ ಒಂದೇ ವಿಷಯ. ಅದೆಂದರೆ, ಕೇವಲ "ನಗರ

ಸಭೆಗಳು"! ಸಂದರ್ಭಸಾಧಕವಾದಿಯು ಶ್ರಮಜೀವಿ ವರ್ಗದ ಕ್ರಾಂತಿಯ ಬಗೆಗೆ ಯೋಚಿಸುವ ಅಭ್ಯಾಸವನ್ನೂ ಮರೆತಿದ್ದಾನೆ.

ಇದು ಹಾಸ್ಯಾಸ್ಪದ. ಆದರೆ ವಿಶೇಷವೆಂದರೆ ಯಾರೂ ಬೆರ್ನ್‌ಷ್ಟೈನ್‌ರೊಂದಿಗೆ ಈ ವಿಷಯದ ಬಗೆಗೆ ವಾದಿಸಿಯೇ ಇಲ್ಲ. ಬೆರ್ನ್‌ಷ್ಟೈನ್‌ರ ವಾದವನ್ನು ಅನೇಕರು ತಪ್ಪೆಂದು ಸಮರ್ಥಿಸಿ ತೋರಿಸಿದ್ದಾರೆ, ವಿಶೇಷವಾಗಿ ರಷ್ಯನ್ ಸಾಹಿತ್ಯದಲ್ಲಿ ಪ್ಲೆಹಾನೊವ್ ಹಾಗೂ ಯುರೋಪಿಯನ್ ಸಾಹಿತ್ಯದಲ್ಲಿ ಕೌತ್‌ಸ್ಕಿ. ಆದರೆ ಇವರಲ್ಲಿ ಯಾರೊಬ್ಬರೂ ಬೆರ್ನ್‌ಷ್ಟೈನ್‌ರ ಈ ಮಾರ್ಕ್ಸ್‌ವಾದದ ವಿರೂಪೀಕರಣದ ಬಗೆಗೆ ಏನೂ ಹೇಳಿಲ್ಲ.

ಸಂದರ್ಭಸಾಧಕವಾದಿಯು ಕ್ರಾಂತಿಕಾರಿ ರೀತಿಯಲ್ಲಿ ಹೇಗೆ ಯೋಚಿಸಬೇಕು ಎಂಬುದನ್ನು, ಕ್ರಾಂತಿಯ ವಿಷಯವನ್ನು ಹೇಗೆ ಪರಿಶೀಲಿಸಬೇಕು ಎಂಬುದನ್ನು ಎಷ್ಟೊಂದು ಮರೆತಿದ್ದಾನೆಂದರೆ ಅವನ್ನು ಮಾರ್ಕ್ಸ್‌ರವರಿಗೆ "ಸಂಯುಕ್ತ ರಾಷ್ಟ್ರ ವಾದ"ವನ್ನು ಹಚ್ಚುತ್ತಾನೆ, ಮಾರ್ಕ್ಸ್‌ರವರನ್ನು ಅರಾಜಕತಾವಾದದ ಸಂಸ್ಥಾಪಕ ರಾದ ಪ್ರುದೋನ್‌ರೊಂದಿಗೆ ಗೊಂದಲಗೊಳಿಸುತ್ತಾನೆ. ಇನ್ನು ತಾವು ಶಾಸ್ತ್ರೀಯ ಮಾರ್ಕ್ಸ್‌ವಾದಿಗಳು ಮತ್ತು ಕ್ರಾಂತಿಕಾರಿ ಮಾರ್ಕ್ಸ್‌ವಾದ ಸಿದ್ಧಾಂತದ ಸಂರಕ್ಷ ಕರು ಎಂದು ಹೇಳಿಕೊಳ್ಳುವ ಕೌತ್‌ಸ್ಕಿ ಹಾಗೂ ಪ್ಲೆಹಾನೊವ್‌ರ ಬಗೆಗೆ ಹೇಳುವುದಾ ದರೆ, ಅವರು ಈ ವಿಷಯಕ್ಕೆ ಸಂಬಂಧಿಸಿ ಮೌನದಿಂದಿದ್ದಾರೆ! ಮಾರ್ಕ್ಸ್‌ವಾದ ಮತ್ತು ಅರಾಜಕತಾವಾದಗಳ ನಡುವಿನ ವ್ಯತ್ಯಾಸದ ಬಗೆಗೆ ಅಭಿಪ್ರಾಯಗಳನ್ನು ತೀವ್ರವಾಗಿ ಪ್ರಾಕೃತಗೊಳಿಸಿರುವುದರ ಮೂಲಗಳಲ್ಲೊಂದು ಇಲ್ಲಿದೆ. ಈ ರೀತಿಯ ಪ್ರಾಕೃತೀ ಕರಣವು ಕೌತ್‌ಸ್ಕಿವಾದಿಗಳ ಹಾಗೂ ಸಂದರ್ಭಸಾಧಕವಾದಿಗಳ ವಿಶಿಷ್ಟ ಲಕ್ಷಣವಾಗಿದೆ. ಇದರ ಬಗೆಗೆ ನಾವು ಮತ್ತೆ ಮುಂದೆ ಚರ್ಚಿಸೋಣ.

ಕಮ್ಯೂನ್‌ನ ಅನುಭವದ ಕುರಿತು ಮಾರ್ಕ್ಸ್‌ರವರ ಮೇಲೆ ಉದ್ಧರಿಸಿದ ಅಭಿಪ್ರಾ ಯೋಕ್ತಿಗಳಲ್ಲಿ ಸಂಯುಕ್ತರಾಷ್ಟ್ರವಾದದ ಒಂದು ಛಾಯೆಯೂ ಇಲ್ಲ. ಸಂದರ್ಭ ಸಾಧಕವಾದಿ ಬೆರ್ನ್‌ಷ್ಟೈನ್ ಯಾವ ಅಂಶವನ್ನು ಕಾಣಲಿಲ್ಲವೋ ಆ ಅಂಶಕ್ಕೆ ಸಂಬಂಧಿ ಸಿಯೇ ಮಾರ್ಕ್ಸ್‌ರವರೂ ಪ್ರುದೋನ್‌ರವರೂ ಏಕಾಭಿಪ್ರಾಯ ಹೊಂದಿದ್ದರು. ಬೆರ್ನ್‌ ಷ್ಟೈನ್‌ರು ಎಲ್ಲಿ ಅವರಿಬ್ಬರ ಮಧ್ಯೆ ಸಾದೃಶ್ಯತೆ ಕಂಡುಕೊಂಡರೋ ಆ ಅಂಶಕ್ಕೆ ಸಂಬಂಧಿಸಿಯೇ ಮಾರ್ಕ್ಸ್‌ರವರೂ ಪ್ರುದೋನ್‌ರವರೂ ಭಿನ್ನಾಭಿಪ್ರಾಯ ಹೊಂದಿ ದ್ದರು.

ಮಾರ್ಕ್ಸ್‌ರವರು ಪ್ರುದೋನ್‌ರೊಂದಿಗೆ ಎಲ್ಲಿ ಸಮ್ಮತಿ ಹೊಂದಿದ್ದರೆಂದರೆ, ಅವರಿಬ್ಬರೂ ಆಧುನಿಕ ರಾಜ್ಯಯಂತ್ರವನ್ನು "ಒಡೆದು ಹಾಕುವುದರ" ಪರವಾಗಿ ದ್ದರು. ಮಾರ್ಕ್ಸ್‌ವಾದ ಮತ್ತು (ಪ್ರುದೋನ್ ಹಾಗೂ ಬಕೂನಿನ್ ಇಬ್ಬರ) ಅರಾಜ ಕತಾವಾದದ ಮಧ್ಯೆ ಈ ವಿಷಯಕ್ಕೆ ಸಂಬಂಧಿಸಿ ಅಭಿಪ್ರಾಯ ಸಾದೃಶ್ಯತೆ ಇರುವು ದನ್ನು ಸಂದರ್ಭಸಾಧಕವಾದಿಗಳಾಗಲೀ ಕೌತ್‌ಸ್ಕಿವಾದಿಗಳಾಗಲೀ ಕಾಣಬಯಸುವು

ದಿಲ್ಲ, ಏಕೆಂದರೆ, ಅವರು ಮಾರ್ಕ್ಸ್‌ವಾದದಿಂದ ದೂರಸರಿದಿರುವುದು ಇಲ್ಲಿಯೇ.

ಮಾರ್ಕ್ಸ್‌ರವರು ಪ್ರುದೋನ್ ಹಾಗೂ ಬಕೂನಿನ್ ಇಬ್ಬರೊಂದಿಗೂ ಸ್ಪಷ್ಟವಾಗಿ ಸಂಯುಕ್ತರಾಷ್ಟ್ರವಾದದ ಪ್ರಶ್ನೆಗೆ ಸಂಬಂಧಿಸಿಯೇ ಭಿನ್ನಾಭಿಪ್ರಾಯ ಹೊಂದಿದ್ದುದು (ಶ್ರಮಜೀವಿ ವರ್ಗದ ಸರ್ವಾಧಿಕಾರತ್ವದ ವಿಷಯ ಹೇಳಬೇಕಾಗಿಯೇ ಇಲ್ಲ): ಸಂಯುಕ್ತರಾಷ್ಟ್ರವಾದದ ಸೂತ್ರವು ಅರಾಜಕತಾವಾದದ ಪೆಟಿ ಬೂರ್ಷ್ವಾ ಅಭಿಪ್ರಾಯಗಳಿಂದಲೇ ತಾರ್ಕಿಕವಾಗಿ ಹೊರಬರುತ್ತದೆ. ಮಾರ್ಕ್ಸ್‌ರವರು ಕೇಂದ್ರೀಯತಾವಾದಿಯಾಗಿದ್ದರು. ಮೇಲೆ ಉದ್ಧರಿಸಿರುವ ಅವರ ಅಭಿಪ್ರಾಯೋಕ್ತಿಗಳಲ್ಲಿ ಕೇಂದ್ರೀಯತಾವಾದದಿಂದ ದೂರ ಸರಿದಿರುವ ಯಾವ ಅಂಶವೂ ಇಲ್ಲ. ರಾಜ್ಯದಲ್ಲಿ ಸಂಕುಚಿತಮತಿಗಳ "ಮೂಢ ನಂಬಿಕೆ"ಯಿಂದ ಪೂರಿತರಾಗಿರುವವರಷ್ಟೆ ಬೂರ್ಷ್ವಾ ರಾಜ್ಯಯಂತ್ರದ ವಿನಾಶವನ್ನು ಕೇಂದ್ರೀಯತಾವಾದದ ವಿನಾಶವೆಂದು ತಪ್ಪು ತಿಳಿಯ ಬಲ್ಲರು !

ಈಗ ಶ್ರಮಜೀವಿ ವರ್ಗವೂ ಬಡ ರೈತರೂ ರಾಜ್ಯಾಧಿಕಾರವನ್ನು ತಮ್ಮ ಕೈಗೇ ತೆಗೆದುಕೊಂಡು ಕಮ್ಯೂನ್‌ಗಳಲ್ಲಿ ತಮ್ಮನ್ನು ತಾವೇ ಸಂಪೂರ್ಣವಾಗಿ ಸ್ವತಂತ್ರವಾಗಿ ಸಂಘಟಿಸಿಕೊಂಡರೆ, ಮತ್ತು ಬಂಡವಾಳದ ಮೇಲೆ ಪ್ರಹಾರ ನೀಡಲು, ಬಂಡವಾಳ ಶಾಹಿಗಳ ಪ್ರತಿರೋಧವನ್ನು ಸದೆಬಡಿಯಲು, ಖಾಸಗಿ ಮಾಲೀಕತ್ವದ ರೈಲ್ವೇಗಳು, ಕಾರ್ಖಾನೆಗಳು ಭೂಮಿ ಮತ್ತಿತರ ವಸ್ತುಗಳನ್ನು ಇಡೀ ರಾಷ್ಟ್ರಕ್ಕೆ, ಇಡೀ ಸಮಾಜಕ್ಕೆ, ವರ್ಗಾಯಿಸಲು, ಎಲ್ಲ ಕಮ್ಯೂನ್‌ಗಳ ಕ್ರಿಯೆಯನ್ನೂ ಒಂದುಗೂಡಿಸಿದರೆ, ಅದು ಕೇಂದ್ರೀಯತಾವಾದವಾಗುವುದಿಲ್ಲವೇ ? ಅದು ಅತ್ಯಂತ ಸುಸಂಗತವಾದ ಪ್ರಜಾಸತ್ತಾತ್ಮಕ ಕೇಂದ್ರೀಯತಾವಾದ ಹಾಗೂ ಅದಕ್ಕೂ ಮಿಗಿಲಾಗಿ ಶ್ರಮಜೀವಿ ವರ್ಗದ ಕೇಂದ್ರೀಯತಾವಾದವಾಗುವುದಿಲ್ಲವೇ ?

ಬೆರ್ನ್‌ಷ್ಟೈನ್‌ರು ಸ್ವಯಮೇಚ್ಛೆಯ ಕೇಂದ್ರೀಯತಾವಾದದ ಸಾಧ್ಯತೆಯನ್ನು, ಕಮ್ಯೂನ್‌ಗಳು ತಮಗೆ ತಾವೇ ರಾಷ್ಟ್ರವಾಗಿ ಸಂಯೋಗಗೊಳ್ಳುವ ಸಾಧ್ಯತೆಯನ್ನು, ಬೂರ್ಷ್ವಾ ಆಧಿಪತ್ಯವನ್ನು ಮತ್ತು ಬೂರ್ಷ್ವಾ ರಾಜ್ಯಯಂತ್ರವನ್ನು ನಾಶಗೊಳಿಸುವ ಉದ್ದೇಶದಿಂದ ಶ್ರಮಜೀವಿ ವರ್ಗದ ಕಮ್ಯೂನ್‌ಗಳು ತಮಗೆ ತಾವೇ ಐಕ್ಯಗೊಳ್ಳುವ ಸಾಧ್ಯತೆಯನ್ನು, ಕಲ್ಪಿಸಿಕೊಳ್ಳಲಾರರು ಕೂಡ. ಎಲ್ಲ ಸಂಕುಚಿತಮತಿಗಳಂತೆ ಬೆರ್ನ್‌ಷ್ಟೈನ್‌ರವರೂ ಕೇಂದ್ರೀಯತಾವಾದವನ್ನು ಮೇಲಿನಿಂದಷ್ಟೆ ಮತ್ತು ಅಧಿಕಾರಶಾಹಿ ಹಾಗೂ ಸೈನಿಕಶಾಹಿಯಷ್ಟೆ ಹೊರಿಸಬಹುದಾದ ಮತ್ತು ಉಳಿಸಿಕೊಂಡು ಬರಬಹುದಾದ ವ್ಯವಸ್ಥೆ ಎಂದೇ ಚಿತ್ರಿಸುತ್ತಾರೆ.

ತಮ್ಮ ಅಭಿಪ್ರಾಯಗಳನ್ನು ವಿರೂಪಗೊಳಿಸಬಹುದು ಎಂಬುದನ್ನು ಮುನ್ನವೇ ಕಂಡುಕೊಂಡರೋ ಎಂಬಂತೆ ಮಾರ್ಕ್ಸ್‌ರವರು, ಕಮ್ಯೂನ್ ರಾಷ್ಟ್ರೀಯ ಐಕ್ಯತೆಯನ್ನು ನಾಶಗೊಳಿಸಲು ಕೇಂದ್ರೀಯ ಅಧಿಕಾರವನ್ನು ತೊಡೆದು ಹಾಕಲು ಬಯಸಿದ್ದಿತು ಎಂಬ ಆಪಾದನೆ ಉದ್ದೇಶಪೂರ್ವಕವಾಗಿಯೇ ಮಾಡಿದ ಸುಳ್ಳು ನಿರೂಪಣೆ ಎಂದು

ಸುಸ್ಪಷ್ಟವಾಗಿ ಒತ್ತಿಹೇಳಿದರು. ಮಾರ್ಕ್ಸ್‌ರವರು ಉದ್ದೇಶಪೂರ್ವಕವಾಗಿಯೇ ಈ ಮಾತುಗಳನ್ನು ಬಳಸಿದರು: "ರಾಷ್ಟ್ರೀಯ ಐಕ್ಯತೆಯನ್ನು ಸಂಘಟಿಸಬೇಕಿದ್ದಿತು." ಬುದ್ಧಿಪೂರ್ವಕವಾದ, ಪ್ರಜಾಸತ್ತಾತ್ಮಕವಾದ ಶ್ರಮಜೀವಿ ವರ್ಗ ಕೇಂದ್ರೀಯತಾವಾದವನ್ನು ಬೂರ್ಷ್ವಾ, ಸೈನಿಕ, ಅಧಿಕಾರಶಾಹಿ ಕೇಂದ್ರೀಯತಾವಾದಕ್ಕೆ ಎದುರಾಗಿ ಇರಿಸಲೋಸುಗ ಅವರಿದನ್ನು ಮಾಡಿದರು.

ಆದರೆ ಕೇಳಬಯಸದ ಜನರು ಕಿವುಡರಿಗಿಂತ ಹೆಚ್ಚು ಕಿವುಡರು. ಇಂದಿನ ಸೋಷಲ್ ಡೆಮೊಕ್ರಸಿಯ ಸಂದರ್ಭಸಾಧಕವಾದಿಗಳು ಕೇಳಬಯಸದಂಥ ವಿಷಯವೆಂದರೆ – ರಾಜ್ಯಾಧಿಕಾರವನ್ನು ನಾಶಗೊಳಿಸುವ ವಿಷಯ, ಪರೋಪಜೀವಿ ದುರ್ಮಾಂಸವನ್ನು ಕತ್ತರಿಸಿ ಹಾಕುವ ವಿಷಯ.

## 5. ಪರೋಪಜೀವಿಯಾದ ರಾಜ್ಯವನ್ನು ನಾಶಗೊಳಿಸುವುದು

ಈ ವಿಷಯಕ್ಕೆ ಸಂಬಂಧಿಸಿ ಮಾರ್ಕ್ಸ್‌ರವರ ಮಾತುಗಳನ್ನು ನಾವಾಗಲೇ ಉದ್ಧರಿಸಿದ್ದೇವೆ. ಈಗ ನಾವು ಅವುಗಳಿಗೆ ಇನ್ನಷ್ಟು ಸೇರಿಸಬೇಕು.

> "ಹೊಸ ಐತಿಹಾಸಿಕ ಸೃಷ್ಟಿಗಳು ಹಳೆಯ, ನಶಿಸಿದ ಕೂಡ, ಸಾಮಾಜಿಕ ಜೀವನರೂಪಗಳೊಂದಿಗೆ ಸ್ವಲ್ಪಮಟ್ಟಿಗೆ ಸಾದೃಶ್ಯತೆ ಹೊಂದಿರಬಹುದಾದ ಕಾರಣ ಹೊಸತವು ಹಳೆಯ ರೂಪಗಳ ಪ್ರತಿಕೃತಿಗಳೇ ಎಂದು ತಪ್ಪು ತಿಳಿಯುವಂತಾಗುವುದು ಸಾಮಾನ್ಯವಾಗಿ ಹೊಸ ಐತಿಹಾಸಿಕ ಸೃಷ್ಟಿಗಳ ದುರವಸ್ಥೆಯಾಗಿದೆ. ಹಾಗಾಗಿ ಆಧುನಿಕ ರಾಜ್ಯಾಧಿಕಾರವನ್ನು ಮುರಿಯುವ (bricht) ಈ ಹೊಸ ಕಮ್ಯೂನ್‌ಅನ್ನೂ ಮಧ್ಯಯುಗದ ಕಮ್ಯೂನ್‌ಗಳ ಪುನರುಜ್ಜೀವನವೆಂದೇ... ಸಣ್ಣ ರಾಜ್ಯಗಳ ಸಂಯುಕ್ತರಾಷ್ಟ್ರ ಸಮುದಾಯವೆಂದೇ (ಮೊಂಟೆಸ್ಕ್ಯೂ ಮತ್ತು ಜಿರೋಂಡಿಸ್ಟರು[68] ಕಂಡುಕೊಂಡಂತೆ)... ಅತಿ ಕೇಂದ್ರೀಕರಣದ ವಿರುದ್ಧ ಹಿಂದೆ ನಡೆಸಿದ ಹೋರಾಟದ ಉತ್ಪ್ರೇಕ್ಷಿತ ರೂಪವೆಂದೇ... ಭಾವಿಸಲಾಗಿದೆ.
>
> "ಇದುವರೆವಿಗೂ ಆ ಪರೋಪಜೀವಿ ದುರ್ಮಾಂಸವಾಗಿ ಸಮಾಜದ ಮೇಲೆಯೇ ಆಧಾರವಾಗಿದ್ದುಕೊಂಡು ಸಮಾಜದ ಸ್ವತಂತ್ರ ಚಲನೆಗೆ ಅಡ್ಡಿಯಾಗಿದ್ದ 'ರಾಜ್ಯ'ವು ಪಡೆದುಕೊಂಡಿದ್ದ ಎಲ್ಲ ಶಕ್ತಿಗಳನ್ನೂ ಕಮ್ಯೂನ್ ವ್ಯವಸ್ಥೆಯು ಸಾಮಾಜಿಕ ಸಂಸ್ಥೆಗೆ ವಹಿಸಿಕೊಡುವುದಿದ್ದಿತು. ಈ ಒಂದು ಕಾರ್ಯದಿಂದ ಅದು ಫ್ರಾನ್ಸಿನ ಪುನರುಜ್ಜೀವನಕ್ಕೆ ಉಪಕ್ರಮ ಹಾಕಿಕೊಡುವುದಿದ್ದಿತು....

> "....ಕಮ್ಯೂನ್ ವ್ಯವಸ್ಥೆಯು ಗ್ರಾಮಾಂತರದ ಉತ್ಪಾದಕರನ್ನು ಅವರ ಪ್ರದೇಶಗಳ ಕೇಂದ್ರ ನಗರಗಳ ಬೌದ್ಧಿಕ ನಾಯಕತ್ವದಡಿ ತರುವುದಿದ್ದಿತು ಮತ್ತು ಅಲ್ಲಿ ಅವರಿಗೆ ಅವರ ಹಿತಗಳ ಸಹಜ ರಕ್ಷಕರಾಗಿ ನಗರದ ಕಾರ್ಮಿಕರನ್ನು ಒದಗಿಸಿಕೊಡುವುದಿದ್ದಿತು. ಕಮ್ಯೂನ್‌ನ ಅಸ್ತಿತ್ವವೇ ಸಹಜವಾಗಿಯೇ ಸ್ಥಳೀಯ ಸ್ವಯಮಾಧಿಕಾರದ ಅಂಶವನ್ನು ಒಳಗೊಂಡಿದ್ದಿತು. ಆದರೆ ಅದು ಎಷ್ಟು ಮಾತ್ರವೂ ಈಗ ಅನಾವಶ್ಯಕವಾದ ರಾಜ್ಯಾಧಿಕಾರಕ್ಕೆ ಪ್ರತಿಯಾಗಿ ಇರುತ್ತಿರಲಿಲ್ಲ."

"ಪರೋಪಜೀವಿ ದುರ್ಮಾಂಸ"ವಾಗಿದ್ದ "ರಾಜ್ಯಾಧಿಕಾರವನ್ನು ತೊಡೆದು ಹಾಕುವುದು;" ಅದನ್ನು "ಕತ್ತರಿಸಿ ಹಾಕುವುದು," ಅದನ್ನು "ಕುಟ್ಟಿಪುಡಿಮಾಡುವುದು"; "ರಾಜ್ಯಾಧಿಕಾರವು ಈಗ ಅನಾವಶ್ಯಕವಾಗಿದೆ" – ಕಮ್ಯೂನ್‌ನ ಅನುಭವವನ್ನು ಮೌಲ್ಯನಿರ್ಣಯಿಸಿ ವಿಶ್ಲೇಷಿಸುವಾಗ ಮಾರ್ಕ್ಸ್‌ರವರು ರಾಜ್ಯಕ್ಕೆ ಸಂಬಂಧಿಸಿ ಈ ನುಡಿಗಟ್ಟುಗಳನ್ನೇ ಬಳಸಿದುದು.

ಇವೆಲ್ಲವನ್ನೂ ಅರ್ಧ ಶತಮಾನಕ್ಕೂ ಸ್ವಲ್ಪ ಕಮ್ಮಿ ವರ್ಷಗಳ ಹಿಂದೆ ಬರೆಯಲಾಯಿತು. ಈಗ ವಿರೂಪಗೊಳಿಸದೆ ಇರುವ ಮಾರ್ಕ್ಸ್‌ವಾದವನ್ನು ಜನಸಮೂಹಗಳಿಗೆ ತಿಳಿಯಪಡಿಸಲು ಇವೆಲ್ಲವನ್ನೂ ಅಗೆದು ತೆಗೆಯುವ ಕಾರ್ಯದಲ್ಲಿ ತೊಡಗಬೇಕಾಗಿದೆ. ಮಾರ್ಕ್ಸ್‌ರವರು ಅನುಭವಿಸಿ ಕಂಡ ಕಳೆದ ಮಹಾ ಕ್ರಾಂತಿಯ ಪರಿಶೀಲನೆಯಿಂದ ಬಂದ ತೀರ್ಮಾನಗಳನ್ನು ಬರಲಿರುವ ಶ್ರಮಜೀವಿ ವರ್ಗದ ಮಹಾ ಕ್ರಾಂತಿಯ ಆಸನ್ನ ಕಾಲಕ್ಕೆ ಸರಿಯಾಗಿ ಮರೆಯಲಾಗಿದೆ.

> "...ಕಮ್ಯೂನ್ ಮುನ್ನಿನ ಎಲ್ಲ ಸರಕಾರೀ ರೂಪಗಳೂ ಸಾರಭೂತವಾಗಿ ದಬ್ಬಾಳಿಕೆಯ ಸ್ವರೂಪದ್ದಾಗಿದ್ದಲ್ಲಿ ಕಮ್ಯೂನ್ ಒಂದು ತುಂಬ ಸುನಮ್ಯವಾದ ರಾಜಕೀಯ ರೂಪವಾಗಿದ್ದಿತು, ಎಂದು ಕಮ್ಯೂನಿನ ಬಗೆಗೆ ಮಾಡಲಾಗಿರುವ ಅನೇಕಾನೇಕ ವ್ಯಾಖ್ಯಾನಗಳೂ ಮತ್ತು ಅದರಲ್ಲಿ ವ್ಯಕ್ತಗೊಂಡ ಅನೇಕಾನೇಕ ಹಿತಗಳೂ ತೋರಿಸಿಕೊಡುತ್ತವೆ. ಅದರ ನಿಜವಾದ ರಹಸ್ಯ ಇದಾಗಿದ್ದಿತು: ಅದು ಸಾರಭೂತವಾಗಿ ಒಂದು ಕಾರ್ಮಿಕ ವರ್ಗದ ಸರಕಾರವಾಗಿದ್ದಿತು, ಸ್ವಾಧೀನಪಡಿಸಿಕೊಳ್ಳುವ ವರ್ಗದ ವಿರುದ್ಧ ಉತ್ಪಾದಕ ವರ್ಗವು ನಡೆಸಿದ ಹೋರಾಟದ ಫಲವಾಗಿದ್ದಿತು, ಶ್ರಮದ ಆರ್ಥಿಕ ವಿಮೋಚನೆಯನ್ನು ಸಾಧಿಸಲು ಸಾಧ್ಯವಿರುವಂಥ, ಕೊನೆಗೂ ಕಂಡು ಹಿಡಿಯಲಾದ ರಾಜಕೀಯ ರೂಪವಾಗಿದ್ದಿತು....
>
> "ಈ ಕೊನೆಯ ಉಪಾಧಿ ಇರದೆ ಇದ್ದಿದ್ದರೆ ಕಮ್ಯೂನ್ ವ್ಯವಸ್ಥೆಯು ಅಸಾಧ್ಯವಾಗುತ್ತಿದ್ದಿತು, ಒಂದು ಭ್ರಾಂತಿಯಷ್ಟೆ ಆಗುತ್ತಿದ್ದಿತು...."

ಅಸಾಧ್ಯಾದರ್ಶವಾದಿಗಳು ಸಮಾಜದ ಸಮಾಜವಾದಿ ಪರಿವರ್ತನೆಯನ್ನು ಸಾಧ್ಯ ಮಾಡಿಕೊಡುವಂಥ ರಾಜಕೀಯ ರೂಪಗಳನ್ನು "ಪತ್ತೆಹಚ್ಚುವ" ಕಾರ್ಯದಲ್ಲಿ ನಿರತ ರಾಗಿದ್ದರು. ಅರಾಜಕತಾವಾದಿಗಳು ರಾಜಕೀಯ ರೂಪಗಳ ಪ್ರಶ್ನೆಯನ್ನೇ ಸಂಪೂರ್ಣ ವಾಗಿ ಬಿಟ್ಟುಕೊಟ್ಟರು. ಇಂದಿನ ಸೋಷಲ್ ಡೆಮೊಕ್ರಸಿಯ ಸಂದರ್ಭಸಾಧಕ ವಾದಿಗಳು ಸಂಸದೀಯ ಪ್ರಜಾಸತ್ತಾತ್ಮಕ ರಾಜ್ಯದ ಬೂರ್ಷ್ವಾ ರಾಜಕೀಯ ರೂಪಗಳನ್ನು ಮೀರಿ ಹೋಗಬಾರದಂಥ ಮಿತಿಯನ್ನಾಗಿ ಕಂಡುಕೊಂಡರು; ಆ "ಆದರ್ಶ"ದ ಮುಂದೆ ಪ್ರಾರ್ಥನೆ ಮಾಡುತ್ತ ಅವರು ತಮ್ಮ ಹಣೆ ಚಚ್ಚಿಕೊಂಡರು ಮತ್ತು ಆ ರೂಪಗಳನ್ನು ಮುರಿಯುವ ಪ್ರತಿಯೊಂದು ಬಯಕೆಯನ್ನೂ ಅರಾಜಕತೆ ಯೆಂದು ಖಂಡಿಸಿದರು.

ರಾಜ್ಯವು ಕಣ್ಮರೆಯಾಗುವುದು ಖಂಡಿತ, ಅದು ಕಣ್ಮರೆಯಾಗುವುದರ ಸ್ಥಿತ್ಯಂ ತರ ರೂಪ (ರಾಜ್ಯದಿಂದ ರಾಜ್ಯ ಅಲ್ಲದ ಸ್ಥಿತಿಗೆ ಪರಿವರ್ತನೆ) "ಆಳುವ ವರ್ಗವಾಗಿ ಸಂಘಟಿತವಾದ ಶ್ರಮಜೀವಿ ವರ್ಗ" ಎಂದು ಮಾರ್ಕ್ಸ್‌ರವರು ಸಮಾಜವಾದದ ಮತ್ತು ರಾಜಕೀಯ ಹೋರಾಟದ ಇಡೀ ಇತಿಹಾಸದಿಂದ ತೀರ್ಮಾನಕ್ಕೆ ಬಂದರು. ಆದರೆ ಅವರು ಈ ಭಾವಿ ಘಟ್ಟದ ರಾಜಕೀಯ ರೂಪಗಳನ್ನು ಪತ್ತೆಹಚ್ಚಲು ಹೋಗ ಲಿಲ್ಲ. ಅವರು ಫ್ರೆಂಚ್ ಇತಿಹಾಸವನ್ನು ಜಾಗರೂಕತೆಯಿಂದ ವೀಕ್ಷಿಸುವುದಕ್ಕೆ, ಅದನ್ನು ವಿಶ್ಲೇಷಿಸುವುದಕ್ಕೆ ಮತ್ತು 1851ನೆಯ ವರ್ಷವು ಒಯ್ದ ತೀರ್ಮಾನಕ್ಕೆ ಬರುವು ದಕ್ಕೆ, ಅಂದರೆ ಪರಿಸ್ಥಿತಿ ಬೂರ್ಷ್ವಾ ರಾಜ್ಯಯಂತ್ರವನ್ನು ನಾಶಗೊಳಿಸುವತ್ತ ಮುಂದು ವರಿಯುತ್ತಿದೆ ಎಂಬ ತೀರ್ಮಾನಕ್ಕೆ ಬರುವುದಕ್ಕೆ, ತಮ್ಮನ್ನು ಸೀಮಿತಗೊಳಿಸಿಕೊಂಡರು.

ಶ್ರಮಜೀವಿ ವರ್ಗದ ಸಾಮೂಹಿಕ ಕ್ರಾಂತಿಕಾರಿ ಚಳವಳಿಯು ಪೂರ್ಣ ರಭಸ ದೊಂದಿಗೆ ಹೊರಹೊಮ್ಮಿದಾಗ ಮಾರ್ಕ್ಸ್‌ರವರು, ಅದು ವಿಫಲಗೊಂಡರೂ, ಅದು ಅಲ್ಪಕಾಲವಷ್ಟೆ ಇದ್ದರೂ ಮತ್ತು ಅದರ ನಿಶ್ಶಕ್ತತೆ ಸ್ಪಷ್ಟವಾಗಿದ್ದರೂ, ಅದು ಕಂಡು ಹಿಡಿದಿದ್ದ ರೂಪಗಳನ್ನು ಅಭ್ಯಸಿಸತೊಡಗಿದರು.

ಕಮ್ಯೂನು ಶ್ರಮಜೀವಿ ವರ್ಗ ಕ್ರಾಂತಿಯು "ಕೊನೆಗೆ ಕಂಡುಹಿಡಿದ," ಶ್ರಮದ ಆರ್ಥಿಕ ವಿಮೋಚನೆಯನ್ನು ಸಾಧ್ಯಮಾಡಿಕೊಡುತ್ತಿದ್ದಂಥ, ರೂಪವಾಗಿದ್ದಿತು.

ಕಮ್ಯೂನು ಬೂರ್ಷ್ವಾ ರಾಜ್ಯಯಂತ್ರವನ್ನು ಒಡೆದು ಹಾಕುವ ಶ್ರಮಜೀವಿ ವರ್ಗ ಕ್ರಾಂತಿಯ ಮೊದಲ ಯತ್ನವಾಗಿದ್ದಿತು; ಮತ್ತು ಅದು "ಕೊನೆಗೆ ಕಂಡುಹಿಡಿದ" ರಾಜಕೀಯ ರೂಪವಾಗಿದ್ದಿತು. ಒಡೆದು ಹಾಕಲಾದ ರಾಜ್ಯಯಂತ್ರದ ಸ್ಥಳದಲ್ಲಿ ಅದನ್ನು ಸ್ಥಾಪಿಸಲು ಸಾಧ್ಯವಿದ್ದಿತು ಮತ್ತು ಸ್ಥಾಪಿಸಬೇಕಿದ್ದಿತು.

1905ರ ಹಾಗೂ 1917ರ ರಷ್ಯನ್ ಕ್ರಾಂತಿಗಳು ವಿಭಿನ್ನ ಸಂದರ್ಭಗಳಲ್ಲಿ ಮತ್ತು ವಿಭಿನ್ನ ಪರಿಸ್ಥಿತಿಗಳಲ್ಲಿ ಕಮ್ಯೂನ್‌ನ ಕಾರ್ಯವನ್ನೇ ಮುಂದುವರಿಸಿದವು ಮತ್ತು ಮಾರ್ಕ್ಸ್‌ರವರ ಉಜ್ವಲ ಚಾರಿತ್ರಿಕ ವಿಶ್ಲೇಷಣೆಯನ್ನು ಪುನರ್‌ಸಮರ್ಥಿಸಿ ದವು ಎಂಬುದನ್ನು ನಾವು ಮುಂದೆ ನೋಡೋಣ.

ಅಧ್ಯಾಯ IV

# ಮುಂದುವರಿಕೆ. ಎಂಗೆಲ್ಸ್‌ರಿಂದ ಮತ್ತಷ್ಟು ವಿವರಣೆಗಳು

ಮಾರ್ಕ್ಸ್‌ರವರು ಕಮ್ಯೂನ್‌ನ ಅನುಭವದ ಮಹತ್ವಕ್ಕೆ ಸಂಬಂಧಿಸಿದ ಮೂಲಭೂತ ಅಂಶಗಳನ್ನು ನೀಡಿದರು. ಎಂಗೆಲ್ಸ್‌ರು ಮತ್ತೆ ಪದೇಪದೇ ಅದೇ ವಿಷಯಕ್ಕೆ ಹಿಂದಿರುಗಿ ಮಾರ್ಕ್ಸ್‌ರವರ ವಿಶ್ಲೇಷಣೆಯನ್ನೂ ತೀರ್ಮಾನಗಳನ್ನೂ ವಿವರಿಸಿ ತಿಳಿಸಿದರು. ಕೆಲವೊಮ್ಮೆ ಅವರು ಪ್ರಶ್ನೆಯ ಇತರ ಮುಖಗಳನ್ನು ಎಷ್ಟು ಶಕ್ತಿ ಹಾಗೂ ಸ್ಪಷ್ಟತೆಯೊಂದಿಗೆ ವಿಶದಗೊಳಿಸಿದರೆಂದರೆ, ಅವರು ನೀಡಿದ ವಿವರಣೆಗಳನ್ನು ವಿಶೇಷವಾಗಿ ಪರ್ಯಾಲೋಚಿಸುವುದು ಅವಶ್ಯವಾಗಿದೆ.

## 1. "ವಸತಿ ಪ್ರಶ್ನೆ"

'ವಸತಿ ಪ್ರಶ್ನೆ' (1872) ಎಂಬ ತಮ್ಮ ಕೃತಿ[69]ಯಲ್ಲಿ ಎಂಗೆಲ್ಸ್‌ರು ಆಗಲೇ ಕಮ್ಯೂನ್‌ನ ಅನುಭವವನ್ನು ಗಣನೆಗೆ ತಂದುಕೊಂಡಿದ್ದರು ಮತ್ತು ರಾಜ್ಯಕ್ಕೆ ಸಂಬಂಧಿಸಿ ಕ್ರಾಂತಿಯ ಕಾರ್ಯಭಾರಗಳನ್ನು ಹಲವಾರು ಬಾರಿ ಪರ್ಯಾಲೋಚಿಸಿದ್ದರು. ಈ ವಿಶಿಷ್ಟ ಪ್ರಶ್ನೆಯ ಪರ್ಯಾಲೋಚನೆಯಲ್ಲಿ ಒಂದು ಕಡೆ ಶ್ರಮಜೀವಿ ವರ್ಗ ರಾಜ್ಯ ಹಾಗೂ ಇಂದಿನ ರಾಜ್ಯಗಳ ನಡುವಿನ ಸಾದೃಶ್ಯತೆಯ ಅಂಶಗಳನ್ನು – ಎರಡು ಪ್ರಸಂಗಗಳಲ್ಲೂ ರಾಜ್ಯದ ಬಗೆಗೆ ಮಾತನಾಡಲು ಅವಶ್ಯ ಮಾಡಿದ್ದಂಥ ಅಂಶಗಳನ್ನು – ಮತ್ತು ಮತ್ತೊಂದು ಕಡೆ ಅವುಗಳ ನಡುವಿನ ವ್ಯತ್ಯಾಸದ ಅಂಶಗಳನ್ನು, ಅಥವಾ ರಾಜ್ಯವನ್ನು ನಾಶಗೊಳಿಸುವುದಕ್ಕೆ ಸ್ಥಿತ್ಯಂತರದ ಅಂಶಗಳನ್ನು, ಸ್ಪಷ್ಟವಾಗಿ ಹೊರಗೆಡಹುತ್ತದೆಂಬುದನ್ನು ಗಮನಿಸುವುದು ಸ್ವಾರಸ್ಯಕರವಾದುದು.

> "ಹಾಗಾದರೆ ವಸತಿ ಪ್ರಶ್ನೆಯನ್ನು ಬಗೆಹರಿಸುವುದು ಹೇಗೆ? ಇಂದಿನ ಸಮಾಜದಲ್ಲಿ ಇದನ್ನು ಇತರ ಯಾವುದೇ ಸಾಮಾಜಿಕ ಪ್ರಶ್ನೆಯನ್ನು ಬಗೆಹರಿಸುವಂತೆಯೇ, ಕೇಳಿಕೆ ಹಾಗೂ ಸರಬರಾಜುಗಳನ್ನು ಕ್ರಮೇಣ ಒಂದೇ ಮಟ್ಟಕ್ಕೆ ತರುವ ಮೂಲಕ, ಬಗೆಹರಿಸಲಾಗುತ್ತಿದೆ. ಈ ರೀತಿಯ ಇತ್ಯರ್ಥವು ಇದೇ ಪ್ರಶ್ನೆಯನ್ನೇ ಮತ್ತೆಮತ್ತೆ ಉಂಟುಮಾಡುತ್ತಿರುತ್ತದೆ. ಆದ್ದರಿಂದ ಇದು ಇತ್ಯರ್ಥವೇ ಅಲ್ಲ. ಸಾಮಾಜಿಕ ಕ್ರಾಂತಿಯು ಈ ಪ್ರಶ್ನೆಯನ್ನು ಹೇಗೆ ಬಗೆಹರಿಸುತ್ತದೆ ಎಂಬುದು ಒಂದೊಂದೂ ವಿಶಿಷ್ಟ ಪ್ರಸಂಗದ ಸಂದರ್ಭಗಳ ಮೇಲೆ ಅವಲಂಬಿಸಿರುತ್ತದಷ್ಟೆ ಅಲ್ಲ, ಇನ್ನೂ ಹೆಚ್ಚು ದೂರವ್ಯಾಪಿ ಪ್ರಶ್ನೆಗಳೊಂದಿಗೂ ಸಂಬಂಧಿಸಿರುತ್ತದೆ. ಅವುಗಳಲ್ಲಿ ಅತ್ಯಂತ ಮೂಲ

ಭೂತವಾದುದು ನಗರ ಹಾಗೂ ಗ್ರಾಮಗಳ ನಡುವಿನ ವ್ಯತ್ಯಾಸವನ್ನು ತೊಡೆದು ಹಾಕುವುದು. ಭಾವಿ ಸಮಾಜವನ್ನು ಸಂಘಟಿಸಲು ಅಸಾಧ್ಯಾದರ್ಶದ ಪದ್ಧತಿಗಳನ್ನು ಸೃಷ್ಟಿಮಾಡುವುದು ನಮ್ಮ ಕೆಲಸವಲ್ಲವಾದುದರಿಂದ, ಆ ಪ್ರಶ್ನೆಯನ್ನಿಲ್ಲಿ ಪರಿಶೀಲಿಸಹೋಗುವುದು ನಿಷ್ಪ್ರಯೋಜಕವಾಗಿರುತ್ತದೆ. ಆದರೆ ಒಂದು ವಿಷಯ ಖಚಿತ: ನಿಜವಾದ ಎಲ್ಲ "ವಸತಿ ಕೊರತೆ"ಯನ್ನೂ ಕೂಡಲೇ ನಿವಾರಿಸಲು ಸಾಕಾದಷ್ಟು ಮನೆಗಳು ದೊಡ್ಡ ನಗರಗಳಲ್ಲಿ ಈಗಾಗಲೇ ಇವೆ. ಅವನ್ನು ವಿವೇಕಯುತವಾಗಿ ಬಳಸಬೇಕಷ್ಟೆ. ಈಗಿನ ಮಾಲೀಕರಿಂದ ಮನೆಗಳನ್ನು ವಶಪಡಿಸಿಕೊಂಡು ಅವರ ಮನೆಗಳಲ್ಲಿ ವಸತಿರಹಿತ ಕಾರ್ಮಿಕರನ್ನು ಅಥವಾ ತಮ್ಮ ಇಂದಿನ ಮನೆಗಳಲ್ಲಿ ಗಿಡುಕಿ ತುಂಬಿ ವಾಸಿಸುತ್ತಿರುವ ಕಾರ್ಮಿಕರನ್ನು, ವಾಸಿಸುವಂತೆ ಏರ್ಪಡಿಸುವ ಮೂಲಕವಷ್ಟೆ ವಿವೇಕಯುತ ಬಳಕೆ ಸಹಜವಾಗಿಯೇ ಉಂಟಾಗುತ್ತದೆ. ಶ್ರಮಜೀವಿ ವರ್ಗವು ರಾಜಕೀಯ ಅಧಿಕಾರವನ್ನು ಗಳಿಸಿಕೊಂಡ ಕೂಡಲೇ ಸರ್ವರ ಒಳಿತಿನ ಕಾಳಜಿಯಿಂದ ಪ್ರೇರಿತವಾದ ಅಂಥ ಕ್ರಮವನ್ನು ನೆರವೇರಿಸುವುದು, ಇಂದಿನ ರಾಜ್ಯವು ನೆರವೇರಿಸುತ್ತಿರುವ ಇತರ ರೀತಿಯ ಸ್ವಾಧೀನಪಡಿಸಿಕೊಳ್ಳುವ ಮತ್ತು ಅವುಗಳನ್ನು ಹಂಚುವ ಕ್ರಮಗಳಂತೆಯೇ ಅಷ್ಟೇ ಸುಲಭವಾಗುವುದು." (ಜರ್ಮನ್ ಆವೃತ್ತಿ, 1887, ಪು. 22.)

ಇಲ್ಲಿ ರಾಜ್ಯಾಧಿಕಾರದ ರೂಪದಲ್ಲಿ ಬದಲಾವಣೆಯನ್ನು ಪರಿಶೀಲಿಸಲಾಗಿಲ್ಲ, ಅದರ ಚಟುವಟಿಕೆಯ ತಿರುಳನ್ನಷ್ಟೆ ಪರಿಶೀಲಿಸಲಾಗಿದೆ. ವಸತಿಗಳನ್ನು ಸ್ವಾಧೀನಪಡಿಸಿಕೊಳ್ಳುವುದೂ, ಅವುಗಳ ಹಂಚಿಕೆಯೂ ಇಂದಿನ ರಾಜ್ಯದ ಆಜ್ಞೆಯ ಮೇಲೆಯೂ ಜರುಗುತ್ತಿವೆ. ಬಹಿರಾಚರಣೆಯ ದೃಷ್ಟಿಯಿಂದ ಶ್ರಮಜೀವಿ ವರ್ಗ ರಾಜ್ಯವೂ ವಸತಿ ಮಂದಿರಗಳನ್ನು ಆಕ್ರಮಿಸಿಕೊಳ್ಳುವಂತೆಯೂ ಮನೆಗಳನ್ನು ಸ್ವಾಧೀನಪಡಿಸಿಕೊಳ್ಳುವಂತೆಯೂ "ಆಜ್ಞೆ" ನೀಡುವುದು. ಆದರೆ ಬೂರ್ಷ್ವಾಸೀಯೊಂದಿಗೆ ಸಂಬಂಧ ಹೊಂದಿದ ಹಳೆಯ ಕಾರ್ಯಕಾರಿ ಸಾಧನವು – ಅಧಿಕಾರಶಾಹಿಯು – ಶ್ರಮಜೀವಿ ವರ್ಗ ರಾಜ್ಯದ ಆಜ್ಞೆಗಳನ್ನು ಕಾರ್ಯಗತಗೊಳಿಸಲು ತೀರ ಅಯೋಗ್ಯವಾಗಿರುವುದು ಎಂಬುದು ಸ್ಪಷ್ಟ.

"ಎಲ್ಲ ಶ್ರಮ ಸಲಕರಣೆಗಳನ್ನೂ ವಾಸ್ತವವಾಗಿ ವಶಪಡಿಸಿಕೊಳ್ಳುವುದು, ದುಡಿಯುವ ಜನರು ಇಡೀ ಕೈಗಾರಿಕೆಯನ್ನು ಸ್ವಾಧೀನಪಡಿಸಿಕೊಳ್ಳುವುದು, ಪ್ರುದೋನ್‌ವಾದಿಗಳು ಹೇಳುವ 'ನಷ್ಟ ಪರಿಹಾರ' ಕ್ರಮಕ್ಕೆ ತೀರ ವಿರುದ್ಧವೆಂಬುದನ್ನು ಎತ್ತಿತೋರಿಸಲೇ ಬೇಕು. ಈ ಎರಡನೆಯ ಪ್ರಸಂಗದಲ್ಲಿ ವೈಯಕ್ತಿಕ ಕೆಲಸಗಾರನು ವಾಸದ ಮನೆಯ, ಉಳುಮೆ

ಭೂಮಿಯು, ಶ್ರಮ ಸಲಕರಣೆಗಳ ಮಾಲೀಕನಾಗುತ್ತಾನೆ; ಆದರೆ ಮೊದಲನೆಯ ಪ್ರಸಂಗದಲ್ಲಿ 'ದುಡಿಯುವ ಜನರು' ಮನೆಗಳ, ಕಾರ್ಖಾನೆಗಳ ಹಾಗೂ ಶ್ರಮ ಸಲಕರಣೆಗಳ ಸಾಮೂಹಿಕ ಮಾಲೀಕರಾಗಿ ಇರುತ್ತಾರೆ ಮತ್ತು ಬಿಡಿ ವ್ಯಕ್ತಿಗಳಾಗಲೀ ಸಂಸ್ಥೆಗಳಾಗಲೀ ನಷ್ಟ ಪರಿಹಾರ ನೀಡದೆಯೇ ಅವುಗಳನ್ನು ಬಳಸಲು, ಕೊನೆಯ ಪಕ್ಷ ಸ್ಥಿತ್ಯಂತರ ಕಾಲಾವಧಿಯಲ್ಲಾದರೂ ಸರಿ, ಅವಕಾಶ ನೀಡಲಾಗುವುದಿಲ್ಲ. ಅದೇ ರೀತಿ ಭೂರೂಪದ ಆಸ್ತಿಯನ್ನು ತೊಡೆದು ಹಾಕುವುದು ಎಂದರೆ ಭೂಮಿ ಗೇಣಿಯನ್ನು ತೊಡೆದು ಹಾಕುವುದು ಎಂದಲ್ಲ, ಆದರೆ ಮಾರ್ಪಡಿಸಿದ ರೂಪದಲ್ಲಿ ಸಮಾಜಕ್ಕೆ ಅದರ ವರ್ಗಾವಣೆ. ಆದ್ದರಿಂದ ದುಡಿಯುವ ಜನರು ಎಲ್ಲ ಶ್ರಮ ಸಲಕರಣೆಗಳನ್ನೂ ವಾಸ್ತವವಾಗಿ ವಶಪಡಿಸಿಕೊಳ್ಳುವುದು ಗೇಣಿ ಸಂಬಂಧಗಳನ್ನು ಇರಿಸಿಕೊಂಡೇ ಇರುವುದನ್ನು ಹೊರತಾಗಿಸುವುದಿಲ್ಲ." (ಪು. 68.)

ಈ ಉದ್ಧೃತ ಭಾಗದಲ್ಲಿ ಸೂಚಿತವಾಗಿರುವ ಪ್ರಶ್ನೆಯನ್ನು, ಅಂದರೆ ರಾಜ್ಯವು ಕ್ಷಯಿಸಿಹೋಗುವುದಕ್ಕೆ ಆರ್ಥಿಕ ಆಧಾರದ ಪ್ರಶ್ನೆಯನ್ನು, ನಾವು ಮುಂದಿನ ಅಧ್ಯಾಯದಲ್ಲಿ ಪರಿಶೀಲಿಸುವೆವು. ಎಂಗೆಲ್ಸ್‌ರು ತಮ್ಮ ಅಭಿಪ್ರಾಯಗಳನ್ನು ಅತ್ಯಂತ ಜಾಗರೂಕತೆಯಿಂದ ವ್ಯಕ್ತಪಡಿಸಿದ್ದಾರೆ. ಹಣ ನೀಡದೆಯೇ ಮನೆಗಳ ಬಳಕೆಗೆ ಶ್ರಮಜೀವಿ ವರ್ಗ ರಾಜ್ಯವು "ಎಷ್ಟು ಮಾತ್ರವೂ" ಅವಕಾಶ ನೀಡುವುದಿಲ್ಲ, "ಕೊನೆಯ ಪಕ್ಷ ಸ್ಥಿತ್ಯಂತರ ಕಾಲಾವಧಿಯಲ್ಲಾದರೂ ಸರಿ" ಎಂದು ಹೇಳುತ್ತಾರೆ. ಇಡೀ ಜನರ ಮಾಲೀಕತ್ವದ ಮನೆಗಳನ್ನು ವೈಯಕ್ತಿಕ ಕುಟುಂಬಗಳಿಗೆ ಬಾಡಿಗೆಗೆ ಕೊಡುವುದು, ಬಾಡಿಗೆ ಹಣವನ್ನು ವಸೂಲು ಮಾಡಲಾಗುವುದು, ಒಂದಿಷ್ಟು ಪ್ರಮಾಣದ ನಿಯಂತ್ರಣ ಇರಿಸಲಾಗುವುದು, ಮನೆಗಳನ್ನು ನಿಗದಿಮಾಡಿಕೊಡುವಾಗ ಕೆಲವೊಂದು ಅಳತೆ ಪ್ರಮಾಣವನ್ನು ಅನುಸರಿಸಲಾಗುವುದು ಎಂಬ ಅರ್ಥವನ್ನು ಒಳಗೊಂಡೇ ಇರುತ್ತದೆ. ಇವೆಲ್ಲಕ್ಕೂ ಒಂದು ರೂಪದ ರಾಜ್ಯ ಅವಶ್ಯವಾಗುತ್ತದೆ. ಆದರೆ ಯಾವುದೇ ವಿಶೇಷ ಸೈನಿಕ ಹಾಗೂ ಅಧಿಕಾರಶಾಹಿ ಸಾಧನ, ಅಧಿಕಾರಿಗಳು ವಿಶೇಷವಾಗಿ ಅಧಿಕಾನುಕೂಲತೆಗಳ ಸ್ಥಾನಗಳನ್ನು ಹೊಂದಿರುವ ವ್ಯವಸ್ಥೆ, ಏನೂ ಅವಶ್ಯವಾಗುವುದಿಲ್ಲ. ವಸತಿ ಗೃಹಗಳನ್ನು ಬಾಡಿಗೆ ಇಲ್ಲದೆಯೇ ಒದಗಿಸಲು ಸಾಧ್ಯಮಾಡಿಕೊಡುವ ಪರಿಸ್ಥಿತಿಗೆ ಸ್ಥಿತ್ಯಂತರವು, ರಾಜ್ಯ ಸಂಪೂರ್ಣವಾಗಿ "ಕ್ಷಯಿಸಿಹೋಗುವುದರ" ಮೇಲೆ ಅವಲಂಬಿಸಿರುತ್ತದೆ.

ಕಮ್ಯೂನ್‌ನಂತರ ಮತ್ತು ಅದರ ಅನುಭವದ ಪ್ರಭಾವಕ್ಕೊಳಗಾಗಿ ಬ್ಲಾಂಕಿವಾದಿಗಳು[70] ಮಾರ್ಕ್ಸ್‌ವಾದದ ಮೂಲಭೂತ ನಿಲುವನ್ನೇ ಅಂಗೀಕರಿಸಿದುದರ ಬಗೆಗೆ ಹೇಳುತ್ತ ಎಂಗೆಲ್ಸ್, ಪ್ರಾಸಂಗಿಕವಾಗಿ, ಆ ನಿಲುವನ್ನು ಹೀಗೆ ನಿರೂಪಿಸುತ್ತಾರೆ:

"...ವರ್ಗಗಳ ಮತ್ತು ಅವುಗಳೊಂದಿಗೆ ರಾಜ್ಯದ ರದ್ದತಿಗೆ ಸ್ಥಿತ್ಯಂತರ ವಾಗಿ ಶ್ರಮಜೀವಿ ವರ್ಗದ ಸರ್ವಾಧಿಕಾರತ್ವದ ಆವಶ್ಯಕತೆ ಮತ್ತು ಅದರ ರಾಜಕೀಯ ಕ್ರಿಯೆಯ ಆವಶ್ಯಕತೆ...." (ಪು. 55.)

ಅತಿಸೂಕ್ಷ್ಮ ಟೀಕೆಯ ಜಾಡ್ಯಕ್ಕೊಳಗಾದವರು ಅಥವಾ ಬೂರ್ಷ್ವಾ "ಮಾರ್ಕ್ಸ್‌ವಾದ ನಿರ್ಮೂಲಕರು" ಬಹುಶಃ "ರಾಜ್ಯವನ್ನು ರದ್ದುಗೊಳಿಸುವುದನ್ನು" ಹೀಗೆ ಮನ್ನಿಸಿರುವುದಕ್ಕೂ, 'ಆ್ಯಂಟಿ-ಡ್ಯೂರಿಂಗ್'ನಿಂದ ಉದ್ಧರಿಸಿರುವ ಮೇಲಿನ ಭಾಗದಲ್ಲಿ ಆ ಸೂತ್ರವನ್ನು ಅರಾಜಕತಾವಾದಿಯೆಂದು ನಿರಾಕರಿಸಿರುವುದಕ್ಕೂ ಮಧ್ಯೆ ವಿರೋಧವನ್ನು ಕಾಣಬಹುದು. ಸಂದರ್ಭಸಾಧಕವಾದಿಗಳು ಎಂಗೆಲ್ಸ್‌ರನ್ನು "ಅರಾಜಕತಾವಾದಿ"ಗಳ ಗುಂಪಿಗೆ ಸೇರಿಸಿದರೆ ಆಶ್ಚರ್ಯವೇನಿಲ್ಲ; ಏಕೆಂದರೆ, ಸಾಮಾಜಿಕ ಸ್ವದೇಶ ಮೂಢಾಭಿಮಾನಿಗಳು ಅಂತರರಾಷ್ಟ್ರೀಯತಾವಾದಿಗಳ ಮೇಲೆ ಅರಾಜಕತಾವಾದದ ಆಪಾದನೆ ಹೊರಿಸುವುದು ಹೆಚ್ಚು ಹೆಚ್ಚಾಗಿ ಸಾಮಾನ್ಯವಾಗುತ್ತಿದೆ.

ವರ್ಗಗಳ ರದ್ದತಿಯೊಂದಿಗೆ ರಾಜ್ಯವನ್ನೂ ರದ್ದುಗೊಳಿಸಲಾಗುವುದು, ಎಂದು ಮಾರ್ಕ್ಸ್‌ವಾದ ಯಾವತ್ತೂ ಬೋಧಿಸಿದೆ. "ರಾಜ್ಯವು ಕ್ಷಯಿಸಿಹೋಗುವುದಕ್ಕೆ" ಸಂಬಂಧಿಸಿ 'ಆ್ಯಂಟಿ-ಡ್ಯೂರಿಂಗ್'ನಿಂದ ಮೇಲಿನ ಸುಪ್ರಸಿದ್ಧ ಉದ್ಧೃತ ಭಾಗವು ಅರಾಜಕತಾವಾದಿಗಳನ್ನು ರಾಜ್ಯದ ರದ್ದತಿಯ ಪರವಾಗಿರುವುದಕ್ಕಾಗಿ ಏನೂ ಆಪಾದಿಸುವುದಿಲ್ಲ ಆದರೆ ರಾಜ್ಯವನ್ನು "ರಾತ್ರೋರಾತ್ರಿ" ರದ್ದುಮಾಡಬಹುದು ಎಂದು ಬೋಧಿಸುವುದಕ್ಕಾಗಿ ಆಪಾದಿಸುತ್ತದೆ.

ಈಗ ಚಾಲ್ತಿಯಲ್ಲಿರುವ "ಸೋಷಲ್ ಡೆಮೊಕ್ರಾಟಿಕ್" ಸಿದ್ಧಾಂತವು, ರಾಜ್ಯದ ರದ್ದತಿಯ ಪ್ರಶ್ನೆಗೆ ಸಂಬಂಧಿಸಿ ಮಾರ್ಕ್ಸ್‌ವಾದವು ಅರಾಜಕತಾವಾದಕ್ಕೆ ಹೊಂದಿರುವ ಸಂಬಂಧವನ್ನು ಸಂಪೂರ್ಣವಾಗಿ ವಿರೂಪಗೊಳಿಸಿರುವುದರಿಂದ, ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಅರಾಜಕತಾವಾದಿಗಳ ವಿರುದ್ಧ ನಡೆಸಿದ ಒಂದು ವಿವಾದವನ್ನು ನೆನಪಿಗೆ ತರುವುದು ಉಪಯುಕ್ತವಾದೀತು.

## 2. ಅರಾಜಕತಾವಾದಿಗಳೊಂದಿಗೆ ವಿವಾದ

ಈ ವಿವಾದ 1873ರಲ್ಲಿ ಜರುಗಿತು. ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಪ್ರುದೋನ್‌ವಾದಿಗಳ[71] ವಿರುದ್ಧ, "ಸ್ವಾಯತ್ತತಾವಾದಿಗಳ" ಅಥವಾ "ಅಧಿಕಾರವಾದ ವಿರೋಧಿಗಳ"[72] ವಿರುದ್ಧ ಲೇಖನಗಳನ್ನು ಇಟಲಿಯ ಸಮಾಜವಾದಿ ವಾರ್ಷಿಕವೊಂದಕ್ಕೆ ಬರೆದರು. ಈ ಲೇಖನಗಳು 1913ರಲ್ಲಷ್ಟೆ ಜರ್ಮನ್ ಭಾಷಾಂತರದಲ್ಲಿ *Neue Zeit*ನಲ್ಲಿ ಪ್ರಕಟವಾದವು.[73]

"ಕಾರ್ಮಿಕ ವರ್ಗದ ರಾಜಕೀಯ ಹೋರಾಟವು ಕ್ರಾಂತಿಕಾರಿ ರೂಪಗಳನ್ನು ತಳೆದಲ್ಲಿ, ಕಾರ್ಮಿಕರು ಬೂರ್ಷ್ವಾಸೀಯ ಸರ್ವಾಧಿಕಾರತ್ವದ ಸ್ಥಳದಲ್ಲಿ ತಮ್ಮ ಕ್ರಾಂತಿಕಾರಿ ಸರ್ವಾಧಿಕಾರತ್ವವನ್ನು ಸ್ಥಾಪಿಸಿದಲ್ಲಿ, ಅವರು ಸೂತ್ರಗಳನ್ನು ಉಲ್ಲಂಘಿಸಿದ ಘೋರ ಪಾತಕ ಎಸಗಿದಂತಾಗುತ್ತದೆ, ಏಕೆಂದರೆ ಅವರು ತಮ್ಮ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟು ರಾಜ್ಯವನ್ನು ರದ್ದುಗೊಳಿಸುವ ಬದಲು ತಮ್ಮ ನೀಚ, ಅತಿಸಾಮಾನ್ಯ ದೈನಂದಿನ ಅಗತ್ಯತೆಗಳನ್ನು ತೃಪ್ತಿಗೊಳಿಸಿಕೊಳ್ಳಲೋಸುಗ ಮತ್ತು ಬೂರ್ಷ್ವಾಸೀಯ ಪ್ರತಿರೋಧವನ್ನು ಸದೆಬಡಿಯಲೋಸುಗ ರಾಜ್ಯಕ್ಕೆ ಒಂದು ಕ್ರಾಂತಿಕಾರಿ ಹಾಗೂ ನಶ್ವರ ರೂಪ ನೀಡುತ್ತಾರೆ...." (*Neue Zeit*, ಸಂ. XXXII, 1, 1913-1914, ಪು. 40[74]) ಎಂದು ಮಾರ್ಕ್ಸ್‌ರವರು ಅರಾಜಕತಾವಾದಿಗಳು ರಾಜಕೀಯವನ್ನು ನಿರಾಕರಿಸಿದುದಕ್ಕಾಗಿ ಪರಿಹಾಸ್ಯ ಮಾಡುತ್ತ ಬರೆದರು.

ಅರಾಜಕತಾವಾದಿಗಳನ್ನು ಖಂಡಿಸುತ್ತ ರಾಜ್ಯವನ್ನು ಈ ರೀತಿಯಲ್ಲಿ "ರದ್ದುಗೊಳಿಸುವುದರ" ವಿರುದ್ಧವಷ್ಟೆ ಮಾರ್ಕ್ಸ್‌ರವರು ಹೋರಾಡಿದರು! ವರ್ಗಗಳು ಕಣ್ಮರೆಯಾದಾಗ ರಾಜ್ಯವೂ ಕಣ್ಮರೆಯಾಗುತ್ತದೆ ಎಂಬ ಅಭಿಪ್ರಾಯವನ್ನಾಗಲೀ, ವರ್ಗಗಳನ್ನು ರದ್ದುಗೊಳಿಸಿದಾಗ ಅದನ್ನೂ ರದ್ದುಗೊಳಿಸಲಾಗುವುದು ಎಂಬ ಅಭಿಪ್ರಾಯವನ್ನಾಗಲೀ ಅವರು ವಿರೋಧಿಸಲಿಲ್ಲ. ಅವರು ನಿಜಕ್ಕೂ ವಿರೋಧಿಸಿದುದೆಲ್ಲ– ಕಾರ್ಮಿಕರು ಶಸ್ತ್ರಾಸ್ತ್ರಗಳ ಬಳಕೆಯನ್ನು ಸಂಘಟಿತ ಬಲೋದ್ಬಂಧವನ್ನು, ಅಂದರೆ "ಬೂರ್ಷ್ವಾಸೀಯ ಪ್ರತಿರೋಧವನ್ನು ಹತ್ತಿಕ್ಕಲು" ನೆರವಾಗಬೇಕಿದ್ದ ರಾಜ್ಯವನ್ನು, ಪರಿತ್ಯಜಿಸಬೇಕು, ಎಂಬ ಪ್ರತಿಪಾದನೆಯನ್ನು.

ಅರಾಜಕತಾವಾದದ ವಿರುದ್ಧ ತಮ್ಮ ಹೋರಾಟದ ನಿಜವಾದ ಅರ್ಥವನ್ನು ವಿರೂಪಗೊಳಿಸುವುದನ್ನು ತಪ್ಪಿಸಲೆಂದು ಮಾರ್ಕ್ಸ್‌ರವರು ಶ್ರಮಜೀವಿ ವರ್ಗಕ್ಕೆ ಅವಶ್ಯವಾದ ರಾಜ್ಯದ "ಕ್ರಾಂತಿಕಾರಿ ಹಾಗೂ ನಶ್ವರ ರೂಪ"ವನ್ನು ವಿಶೇಷವಾಗಿ ಒತ್ತಿ ಹೇಳಿದರು. ಶ್ರಮಜೀವಿ ವರ್ಗಕ್ಕೆ ತಾತ್ಕಾಲಿಕವಾಗಿಯಷ್ಟೆ ರಾಜ್ಯ ಅವಶ್ಯ. ರಾಜ್ಯವನ್ನು ರದ್ದುಗೊಳಿಸುವುದು ನಮ್ಮ ಗುರಿ ಎಂಬುದರಲ್ಲಿ ನಮಗೂ ಅರಾಜಕತಾವಾದಿಗಳಿಗೂ ಮಧ್ಯೆ ಏನು ವ್ಯತ್ಯಾಸವೂ ಇಲ್ಲ. ಈ ಗುರಿಯನ್ನು ಸಾಧಿಸಲೋಸುಗ ನಾವು ತಾತ್ಕಾಲಿಕವಾಗಿ ರಾಜ್ಯಾಧಿಕಾರದ ಸಾಧನಗಳನ್ನು ಸಂಪನ್ಮೂಲಗಳನ್ನು ಮತ್ತು ವಿಧಾನಗಳನ್ನು ಶೋಷಕರ ವಿರುದ್ಧ ಉಪಯೋಗಿಸಬೇಕು, ವರ್ಗಗಳ ರದ್ದತಿಗೆ ಮರ್ದಿತ ವರ್ಗದ ತಾತ್ಕಾಲಿಕ ಸರ್ವಾಧಿಕಾರತ್ವವು ಅವಶ್ಯವಾದಂತೆ. ಮಾರ್ಕ್ಸ್‌ರವರು ಅರಾಜಕತಾವಾದಿಗಳ ವಿರುದ್ಧ ತಮ್ಮ ವಾದವನ್ನು ಮುಂದಿಡಲು ಅತ್ಯಂತ ಸ್ಪಷ್ಟವಾದ ಹಾಗೂ ಅತ್ಯಂತ ಸೂಕ್ಷ್ಮವಾದ ಮಾರ್ಗವನ್ನು ಆಯ್ದುಕೊಳ್ಳುತ್ತಾರೆ: ಬಂಡ

ವಾಳಗಾರರ ನೊಗವನ್ನು ಕಿತ್ತೊಗೆದನಂತರ ಕಾರ್ಮಿಕರು "ಶಸ್ತ್ರಾಸ್ತ್ರಗಳನ್ನು ಕೆಳಗಿರಿಸಬೇಕೆ," ಅಥವಾ ಅವನ್ನು ಬಂಡವಾಳಗಾರರ ವಿರುದ್ಧ ಅವರ ಪ್ರತಿರೋಧವನ್ನು ಸದೆಬಡಿಯಲೋಸುಗ ಬಳಸಬೇಕೆ? ಒಂದು ವರ್ಗವು ಇನ್ನೊಂದರ ವಿರುದ್ಧ ವ್ಯವಸ್ಥಾಬದ್ಧವಾಗಿ ಶಸ್ತ್ರಾಸ್ತ್ರಗಳನ್ನು ಬಳಸುವುದು ರಾಜ್ಯದ "ನಶ್ವರ ರೂಪ"ವಲ್ಲದೆ ಇದ್ದರೆ ಬೇರೆ ಏನು?

ಪ್ರತಿಯೊಬ್ಬ ಸೋಷಲ್ ಡೆಮೊಕ್ರಾಟನೂ ಈ ಪ್ರಶ್ನೆಯನ್ನು ಕೇಳಿಕೊಳ್ಳಲಿ: ಅರಾಜಕತಾವಾದಿಗಳೊಂದಿಗೆ ವಿವಾದದಲ್ಲಿ ತಾನು ರಾಜ್ಯದ ಪ್ರಶ್ನೆಯನ್ನು ಹೀಗೆಯೇ ಮುಂದಿಡುತ್ತಿರುವುದು? ದ್ವಿತೀಯ ಇಂಟರ್‌ನ್ಯಾಷನಲ್‌ನ ಅಧಿಕೃತ ಸಮಾಜವಾದಿ ಪಾರ್ಟಿಗಳ ವಿಶಾಲ ಬಹುಮತೀಯರು ಅದನ್ನು ಹೀಗೆಯೇ ಮುಂದಿಡುತ್ತಿರುವುದು?

ಎಂಗೆಲ್ಸ್‌ರು ಇದೇ ವಿಚಾರಗಳನ್ನು ಇನ್ನೂ ಹೆಚ್ಚು ವಿವರಗಳೊಂದಿಗೆ ಮತ್ತು ಇನ್ನೂ ಹೆಚ್ಚು ಸರಳವಾಗಿ ಪ್ರತಿಪಾದಿಸುತ್ತಾರೆ, ಮೊಟ್ಟಮೊದಲನೆಯದಾಗಿ ಅವರು "ಅಧಿಕಾರವಾದ ವಿರೋಧಿಗಳು" ಅಂದರೆ ಎಲ್ಲ ಅಧಿಕಾರವನ್ನು, ಎಲ್ಲ ಅಧೀನತೆಯನ್ನೂ, ಎಲ್ಲ ಆಡಳಿತ ಶಕ್ತಿಯನ್ನೂ ನಿರಾಕರಿಸುವವರು ಎಂದು ಕರೆದುಕೊಂಡ ಪ್ರುದೋನ್‌ವಾದಿಗಳ ಗಲಿಬಿಲಿ ವಿಚಾರಗಳನ್ನು ಪರಿಹಾಸ್ಯ ಮಾಡುತ್ತಾರೆ. ಒಂದು ಕಾರ್ಖಾನೆಯನ್ನು ಒಂದು ರೈಲ್ವೇ ಸಂಸ್ಥೆ, ಸಾಗರದ ಮಧ್ಯದಲ್ಲಿರುವ ಒಂದು ಹಡಗನ್ನೇ ತೆಗೆದುಕೊಳ್ಳಿ, ಎಂದು ಎಂಗೆಲ್ಸ್ ಹೇಳಿದರು. ಯಂತ್ರಗಳ ಬಳಕೆ ಹಾಗೂ ಅನೇಕ ಜನರ ವ್ಯವಸ್ಥಾಬದ್ಧ ಸಹಕಾರಗಳ ಮೇಲೆ ಆಧರಿಸಿರುವ ಈ ಸಂಕೀರ್ಣ ತಾಂತ್ರಿಕ ಸಂಸ್ಥೆಗಳಲ್ಲಿ ಯಾವೊಂದೂ ಒಂದಿಷ್ಟು ಪ್ರಮಾಣದ ಅಧೀನತೆ ಹಾಗೂ ತತ್ಫಲವಾಗಿ ಒಂದಿಷ್ಟು ಪ್ರಮಾಣದ ಅಧಿಕಾರ ಅಥವಾ ಅಧಿಕಾರಶಕ್ತಿ ಇಲ್ಲದೆ ಕ್ರಿಯೆ ಜರುಗಿಸಲಾರದು ಎಂಬುದು ಸ್ಪಷ್ಟವಲ್ಲವೇ?

> "....ಅತ್ಯಂತ ಉಗ್ರ ಅಧಿಕಾರವಾದ ವಿರೋಧಿಗಳನ್ನೂ ನಾನು ಈ ವಾದಗಳಿಂದ ಎದುರಿಸಿದಾಗ ಅವರು ನನಗೆ ನೀಡಬಲ್ಲ ಒಂದೇ ಒಂದು ಉತ್ತರ ಈ ಕೆಳಗಿನದು: 'ಓಹ್, ಅದು ನಿಜ. ಆದರೆ ನಾವು ನಮ್ಮ ಪ್ರತಿನಿಧಿಗಳಿಗೆ ನೀಡುವುದು ಅಧಿಕಾರದ ಪ್ರಶ್ನೆಯಲ್ಲ, ಆದರೆ ಒಂದು ಆಯೋಗದ ಪ್ರಶ್ನೆ!' ಈ ಜನ ಹೆಸರು ಬದಲಿಸುವ ಮೂಲಕ ವಸ್ತುವನ್ನೇ ಬದಲಿಸಬಹುದೆಂದು ಭಾವಿಸುತ್ತಾರೆ...."[75]

ಅಧಿಕಾರ ಹಾಗೂ ಸ್ವಾಯತ್ತತೆ ಸಾಪೇಕ್ಷ ಪದಗಳೆಂದು, ಅವುಗಳ ಅನ್ವಯದ ವಲಯವು ಸಾಮಾಜಿಕ ಬೆಳವಣಿಗೆಯ ವಿವಿಧ ಮಜಲುಗಳೊಂದಿಗೆ ಬದಲಾಗುತ್ತದೆಂದು, ಅವನ್ನು ನಿರಪೇಕ್ಷವಾದವುಗಳೆಂದು ತೆಗೆದುಕೊಳ್ಳುವುದು ಮೂರ್ಖತನವೆಂದು ಹೀಗೆ ತೋರಿಸಿಕೊಟ್ಟನಂತರ ಮತ್ತು ಯಂತ್ರಸಾಧನಗಳ ಅನ್ವಯದ ಹಾಗೂ ವಿಶಾಲ ಪ್ರಮಾಣದ ಉತ್ಪಾದನೆಯ ವಲಯವು ಸತತವಾಗಿ ವಿಸ್ತರಿಸುತ್ತಿದೆ ಎಂದೂ

ತಿಳಿಸಿದನಂತರ ಎಂಗೆಲ್ಸ್‌ರು ಅಧಿಕಾರದ ಬಗೆಗೆ ಸಾಮಾನ್ಯ ಚರ್ಚೆಯಿಂದ ರಾಜ್ಯದ ಪ್ರಶ್ನೆಗೆ ಹೋಗುತ್ತಾರೆ.

> "ಭವಿಷ್ಯತ್ತಿನ ಸಾಮಾಜಿಕ ಸಂಘಟನೆಯು ಉತ್ಪಾದನಾ ಪರಿಸ್ಥಿತಿಗಳು ಅನಿವಾರ್ಯ ಮಾಡಿದಂಥ ಮಿತಿಗಳೊಳಗಷ್ಟೆ ಅಧಿಕಾರವು ಇರಲು ಅವಕಾಶ ನೀಡುವುದು, ಎಂದು ಸ್ವಾಯತ್ತತಾವಾದಿಗಳು ಹೇಳಿಯಷ್ಟೆ ಸುಮ್ಮನಿದ್ದಿದ್ದರೆ, ಅವರೊಂದಿಗೆ ಒಪ್ಪಂದಕ್ಕೆ ಬರಲು ಸಾಧ್ಯವಿರುತ್ತಿದ್ದಿತು" ಎಂದು ಅವರು ಬರೆದರು. "ಆದರೆ ಅವರು ಅಧಿಕಾರವನ್ನು ಅವಶ್ಯವನ್ನಾಗಿ ಮಾಡುವ ಎಲ್ಲ ವಾಸ್ತವಾಂಶಗಳ ಬಗೆಗೂ ಕುರುಡರಾಗಿದ್ದಾರೆ ಮತ್ತು ಆ ಪದದ ವಿರುದ್ಧ ಭಾವಾವೇಶದಿಂದ ಹೋರಾಡುತ್ತಾರೆ.
>
> "ಅಧಿಕಾರವಾದದ ವಿರೋಧಿಗಳು ರಾಜಕೀಯ ಅಧಿಕಾರದ ವಿರುದ್ಧ – ರಾಜ್ಯದ ವಿರುದ್ಧ – ಕೂಗಾಡುವುದಕ್ಕಷ್ಟೆ ತಮ್ಮನ್ನು ಮಿತಿಗೊಳಿಸಿಕೊಳ್ಳುವುದಿಲ್ಲವೇಕೆ? ಬರಲಿರುವ ಸಾಮಾಜಿಕ ಕ್ರಾಂತಿಯ ಫಲವಾಗಿ ರಾಜ್ಯವು, ಅದರೊಂದಿಗೆ ರಾಜಕೀಯ ಅಧಿಕಾರವು ಕಣ್ಮರೆಯಾಗುವುದು, ಅಂದರೆ, ಸಾರ್ವಜನಿಕ ಕ್ರಿಯೆಗಳು ರಾಜಕೀಯ ಸ್ವರೂಪವನ್ನು ಕಳೆದುಕೊಂಡು ಸಾಮಾಜಿಕ ಹಿತಗಳ ಮೇಲೆ ಗಮನವಿಡುವ ಕೇವಲ ಆಡಳಿತ ಕ್ರಿಯೆಗಳಾಗುವುವು ಎಂಬುದನ್ನು ಎಲ್ಲ ಸಮಾಜವಾದಿಗಳೂ ಒಪ್ಪುತ್ತಾರೆ. ಆದರೆ ಅಧಿಕಾರವಾದದ ವಿರೋಧಿಗಳು ರಾಜಕೀಯ ರಾಜ್ಯವನ್ನು ಒಂದೇ ಏಟಿಗೆ, ಅದಕ್ಕೆ ಜನ್ಮವಿತ್ತ ಸಾಮಾಜಿಕ ಸಂಬಂಧಗಳನ್ನು ನಾಶಗೊಳಿಸುವುದಕ್ಕೆ ಮುನ್ನವೇ, ರದ್ದು ಮಾಡಬೇಕೆಂದು ಆಗ್ರಹಿಸುತ್ತಾರೆ. ಅಧಿಕಾರವನ್ನು ತೊಡೆದು ಹಾಕುವುದು ಸಾಮಾಜಿಕ ಕ್ರಾಂತಿಯ ಮೊದಲ ಕ್ರಿಯೆಯಾಗಬೇಕೆಂದು ಅವರು ಆಗ್ರಹಿಸುತ್ತಾರೆ.
>
> "ಈ ಮಹಾಶಯರು ಕ್ರಾಂತಿಯನ್ನು ಎಂದಾದರೂ ಕಂಡಿದ್ದಾರೆಯೆ? ಕ್ರಾಂತಿಯು ಖಂಡಿತವಾಗಿಯೂ ಎಲ್ಲಕ್ಕಿಂತಲೂ ಅತ್ಯಂತ ಅಧಿಕಾರಯುತವಾದುದು; ಅದು ಜನರ ಒಂದು ಭಾಗವು ಇನ್ನೊಂದರ ಮೇಲೆ ತನ್ನ ಸಂಕಲ್ಪವನ್ನು ಬಂದೂಕ, ಬಯೊನೆಟ್ಟು ಹಾಗೂ ಫಿರಂಗಿಗಳ ಮೂಲಕ ಹೊಂದಿಸುವ ಕ್ರಿಯೆ. ಇವೆಲ್ಲ ಅತ್ಯಂತ ಅಧಿಕಾರಯುತವಾದ ಸಾಧನಗಳಾಗಿವೆ. ವಿಜಯಿಯಾದ ಪಾರ್ಟಿಯು ತನ್ನ ಆಳ್ವಿಕೆಯನ್ನು, ತನ್ನ ಶಸ್ತ್ರಾಸ್ತ್ರಗಳು ಪ್ರತಿಗಾಮಿಗಳಲ್ಲಿ ಪ್ರೇರಿಸುವ ಭೀತಿಯ ಮೂಲಕ ಉಳಿಸಿಕೊಳ್ಳಬೇಕು. ಪ್ಯಾರಿಸ್ ಕಮ್ಯೂನ್ ಸಶಸ್ತ್ರ ಜನತೆಯ ಅಧಿಕಾರವನ್ನು ಬೂರ್ಷ್ವಾಸೀಯ ವಿರುದ್ಧ ಬಳಸದೆ ಹೋಗಿದ್ದರೆ ಒಂದು ದಿನಕ್ಕೂ ಹೆಚ್ಚು ಕಾಲ ಉಳಿದಿರುತ್ತಿದ್ದಿತೆ? ಪ್ರತಿಯಾಗಿ, ಅದು ಆ ಅಧಿಕಾರವನ್ನು ಸಾಕಷ್ಟು ಪ್ರಮಾಣದಲ್ಲಿ ಬಳಸ

ಲಿಲ್ಲ ಎಂದೇ ನಾವು ಅದನ್ನು ದೂಷಿಸಬಹುದಲ್ಲವೆ? ಆದ್ದರಿಂದ ಎರಡ ರಲ್ಲಿ ಒಂದು ವಿಷಯ ಸತ್ಯ. ಒಂದೋ, ಅಧಿಕಾರವಾದದ ವಿರೋಧಿಗಳು ತಾವು ಏನು ಮಾತನಾಡುತ್ತಿದ್ದಾರೆಂಬುದನ್ನು ತಾವೇ ಅರಿಯರು. ಇಂಥ ಪ್ರಸಂಗದಲ್ಲಿ ಅವರು ಗೊಂದಲವನ್ನಷ್ಟೆ, ಅಲ್ಲದೆ ಬೇರೇನನ್ನೂ ಉಂಟು ಮಾಡರು. ಇಲ್ಲವೇ ಅವರು ಅರಿತಿದ್ದಾರೆ. ಈ ಪ್ರಸಂಗದಲ್ಲಿ ಅವರು ಶ್ರಮ ಜೀವಿ ವರ್ಗ ಧ್ಯೇಯಕ್ಕೆ ದ್ರೋಹ ಬಗೆಯುತ್ತಾರೆ. ಯಾವುದೇ ಪ್ರಸಂಗ ದಲ್ಲೂ ಅವರು ಪ್ರತಿಗಾಮಿ ಶಕ್ತಿಗಳಿಗಷ್ಟೆ ಸೇವೆ ಸಲ್ಲಿಸುತ್ತಾರೆ." (ಪು. 39.)[76]

ಈ ವಾದವು ರಾಜ್ಯವು ಕ್ಷಯಿಸಿಹೋಗುವ ಸಮಯದಲ್ಲಿ ರಾಜಕೀಯಕ್ಕೂ ಆರ್ಥಿಕತೆಗೂ ನಡುವಿನ ಬಾಂಧವ್ಯಕ್ಕೆ ಸಂಬಂಧಿಸಿ ಪರಿಶೀಲಿಸಬೇಕಾದ ಪ್ರಶ್ನೆಗಳನ್ನು ಸೂಚಿಸುತ್ತದೆ (ಮುಂದಿನ ಅಧ್ಯಾಯ ಇದಕ್ಕೆ ಮೀಸಲಾಗಿದೆ). ಈ ಪ್ರಶ್ನೆಗಳೆಂದರೆ – ಸಾರ್ವಜನಿಕ ಕ್ರಿಯೆಗಳನ್ನು ರಾಜಕೀಯದಿಂದ ಆಡಳಿತದ ಸರಳ ಕ್ರಿಯೆಗಳನ್ನಾಗಿ ಪರಿವರ್ತಿಸುವುದು ಮತ್ತು "ರಾಜಕೀಯ ರಾಜ್ಯ." ತಪ್ಪು ತಿಳಿವಳಿಕೆಯನ್ನು ವಿಶೇಷವಾಗಿ ಉಂಟುಮಾಡಬಹುದಾದಂಥ ಈ "ರಾಜಕೀಯ ರಾಜ್ಯ" ಎಂಬ ಮಾತು ರಾಜ್ಯವು ಕ್ಷಯಿಸಿಹೋಗುವ ಪ್ರಕ್ರಿಯೆಯನ್ನು ಸೂಚಿಸುತ್ತದೆ: ಈ ಪ್ರಕ್ರಿಯೆಯ ಒಂದು ನಿರ್ದಿಷ್ಟ ಘಟ್ಟದಲ್ಲಿ, ಕ್ಷಯಿಸಿಹೋಗುತ್ತಿರುವ ರಾಜ್ಯವನ್ನು ರಾಜಕೀಯ ಅಲ್ಲದ ರಾಜ್ಯ ಎಂದು ಕರೆಯಬಹುದು.

ಇಷ್ಟೇ ಅಲ್ಲದೆ ಎಂಗೆಲ್ಸ್‌ರ ಈ ವಾದದ ಅತ್ಯಂತ ಗಮನಾರ್ಹ ವಿಷಯವೆಂದರೆ ಅವರು ಅರಾಜಕತಾವಾದಿಗಳ ವಿರುದ್ಧ ತಮ್ಮ ವಾದವನ್ನು ಮಂಡಿಸುವ ರೀತಿ. ಎಂಗೆಲ್ಸ್‌ರ ಶಿಷ್ಯರೆಂದು ಹೇಳಿಕೊಳ್ಳುವ ಸೋಷಲ್ ಡೆಮೊಕ್ರಾಟರು ಅರಾಜಕತಾ ವಾದಿಗಳ ವಿರುದ್ಧ ಈ ವಿಷಯಕ್ಕೆ ಸಂಬಂಧಿಸಿ 1873ರಿಂದ ಲಕ್ಷಾಂತರ ಬಾರಿ ವಾದಿಸಿ ದ್ದಾರೆ, ಆದರೆ ಅವರು ಮಾರ್ಕ್ಸ್‌ವಾದಿಗಳು ಮಾಡಬಹುದಾದಂತೆ, ಮಾಡಬೇಕಾ ದಂತೆ ವಾದ ಮಾಡಿಲ್ಲ. ರಾಜ್ಯವನ್ನು ತೊಡೆದು ಹಾಕುವ ಬಗೆಗೆ ಅರಾಜಕತಾವಾದಿಗಳ ವಿಚಾರವು ಗೊಂದಲದಿಂದ ಕೂಡಿದುದು ಹಾಗೂ ಕ್ರಾಂತಿಕಾರಿ ಅಲ್ಲದುದು – ಎಂಗೆಲ್ಸ್‌ರು ಹೇಳಿದುದು ಹೀಗೆಯೇ. ಅರಾಜಕತಾವಾದಿಗಳು ಕಾಣಲು ನಿರಾಕರಿ ಸುವುದು ಸ್ಪಷ್ಟವಾಗಿ ಉದಯಿಸಿ ಬೆಳವಣಿಗೆ ಪಡೆಯುವ ಕ್ರಾಂತಿಯನ್ನು, ರಾಜ್ಯ, ಆಡಳಿತ, ಅಧಿಕಾರ, ಬಲೋದ್ಬಂಧ ಇವುಗಳಿಗೆ ಸಂಬಂಧಿಸಿ ವಿಶಿಷ್ಟ ಕಾರ್ಯಭಾರ ಗಳನ್ನುಳ್ಳ ಕ್ರಾಂತಿಯನ್ನು.

ಇಂದಿನ ಸೋಷಲ್ ಡೆಮೊಕ್ರಾಟರು ಅರಾಜಕತಾವಾದಿಗಳ ವಿರುದ್ಧ ಮಾಡುವ ಸಾಮಾನ್ಯ ಟೀಕೆಯು ಶುದ್ಧ ಸಂಕುಚಿತಮತಿಯ ನಿಸ್ಸಾರತೆಯ ಮಟ್ಟಕ್ಕಿಳಿಯುತ್ತದೆ. "ನಾವು ರಾಜ್ಯವನ್ನು ಮನ್ನಿಸುತ್ತೇವೆ. ಆದರೆ ಅರಾಜಕತಾವಾದಿಗಳು ಮನ್ನಿಸುವುದಿಲ್ಲ !" ಎಂದು ಅವರು ಹೇಳುತ್ತಾರೆ. ಸಹಜವಾಗಿಯೇ ಇಂಥ ನಿಸ್ಸಾರ ಟೀಕೆಯು ವಿಚಾರ

ಶೀಲ ಹಾಗೂ ಕ್ರಾಂತಿಕಾರಿ ಮನಸ್ಕ ಕಾರ್ಮಿಕರನ್ನು ದೂರ ಹೋಗುವಂತೆ ಮಾಡದೆ ಇರದು. ಎಂಗೆಲ್ಸ್‌ರು ಹೇಳುವುದು ತೀರ ಬೇರೆಯಾದುದನ್ನೇ. ಸಮಾಜವಾದಿ ಕ್ರಾಂತಿಯು ಫಲವಾಗಿ ರಾಜ್ಯವು ಕಣ್ಮರೆಯಾಗುವುದೆಂದು ಎಲ್ಲ ಸಮಾಜವಾದಿಗಳೂ ಮನ್ನಿಸುತ್ತಾರೆಂದು ಅವರು ಒತ್ತಿ ತಿಳಿಸುತ್ತಾರೆ. ಅನಂತರ ಅವರು ನಿರ್ದಿಷ್ಟವಾಗಿ ಕ್ರಾಂತಿಯು ಪ್ರಶ್ನೆಯನ್ನು ಪರ್ಯಾಲೋಚಿಸುತ್ತಾರೆ. ಈ ಪ್ರಶ್ನೆಯನ್ನೇ ಸಾಮಾನ್ಯ ವಾಗಿ ಸೋಷಲ್ ಡೆಮೊಕ್ರಾಟರು ಸಂದರ್ಭಸಾಧಕತನದಿಂದಾಗಿ ಪರಿಶೀಲಿಸದೆ ಹೋಗು ವುದು. ಅವರು ಅದನ್ನು ಅರಾಜಕತಾವಾದಿಗಳಿಗೇ "ನಿರೂಪಿಸಲು" ಬಿಟ್ಟುಕೊಟ್ಟಿ ದ್ದಾರೆ. ಈ ಪ್ರಶ್ನೆಯನ್ನು ಪರಿಶೀಲಿಸುವಾಗ ಎಂಗೆಲ್ಸ್‌ರು ಅದರ ಮೂಲವನ್ನೇ ಎತ್ತಿಕೊಳ್ಳುತ್ತಾರೆ. ಅವರು ಕೇಳುತ್ತಾರೆ: ಕಮ್ಯೂನು ರಾಜ್ಯದ, ಅಂದರೆ ಆಳುವ ವರ್ಗವಾಗಿ ಸಂಘಟಿತವಾದ ಮತ್ತು ಶಸ್ತ್ರಸಜ್ಜಿತವಾದ ಶ್ರಮಜೀವಿ ವರ್ಗದ, ಕ್ರಾಂತಿ ಕಾರಿ ಅಧಿಕಾರವನ್ನು ಹೆಚ್ಚಾಗಿ ಬಳಸಬೇಕಾಗಿದ್ದಿತಲ್ಲವೇ ?

ಈಗ ಪ್ರಾಬಲ್ಯಯುತವಾಗಿರುವ ಅಧಿಕೃತ ಸೋಷಲ್ ಡೆಮೊಕ್ರಸಿಯು ಕ್ರಾಂತಿ ಯಲ್ಲಿ ಶ್ರಮಜೀವಿ ವರ್ಗದ ಸ್ಪಷ್ಟ ಕಾರ್ಯಭಾರಗಳ ಪ್ರಶ್ನೆಯನ್ನು ಸಂಕುಚಿತ ಮತಿಯು ಕುಚೋದ್ಯದೊಂದಿಗೆ, ಅಥವಾ ಹೆಚ್ಚೆಂದರೆ ಕುತಾರ್ಕಿಕನ ಜಾರಿಕೆ ಯೊಂದಿಗೆ, ತಳ್ಳಿಹಾಕಿತು. "ಭವಿಷ್ಯತ್ತೇ ತೋರಿಸಿಕೊಡುವುದು" ಎಂದವರು ಜಾರಿಕೆಯ ಮಾತನ್ನಾಡಿದರು. ಅಂಥ ಸೋಷಲ್ ಡೆಮೊಕ್ರಾಟರು ಕಾರ್ಮಿಕರಿಗೆ ಕ್ರಾಂತಿಕಾರಿ ಶಿಕ್ಷಣ ನೀಡುವ ತಮ್ಮ ಕಾರ್ಯಭಾರಕ್ಕೆ ದ್ರೋಹ ಬಗೆದಿದ್ದಾರೆಂದು ಅರಾಜಕತಾವಾದಿ ಗಳು ಹೇಳುವುದು ಸಮರ್ಥನೀಯವೇ ಆಗಿದೆ. ಶ್ರಮಜೀವಿ ವರ್ಗವು ಬ್ಯಾಂಕುಗಳ ಹಾಗೂ ರಾಜ್ಯದ ಪ್ರಶ್ನೆಗಳಿಗೆ ಸಂಬಂಧಿಸಿ ಏನನ್ನು ಮತ್ತು ಯಾವ ರೀತಿಯಲ್ಲಿ ಮಾಡ ಬೇಕು ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ಅಭ್ಯಸಿಸುವ ಉದ್ದೇಶದಿಂದಲೇ ಎಂಗೆಲ್ಸ್‌ರು ಕಳೆದ ಶ್ರಮಜೀವಿ ವರ್ಗ ಕ್ರಾಂತಿಯು ಅನುಭವದಿಂದ ಅಂಶಗಳನ್ನು ಪಡೆದುಕೊಳ್ಳು ತ್ತಾರೆ.

## 3. ಬೆಬಲ್‌ರಿಗೆ ಬರೆದ ಪತ್ರ

ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಕೃತಿಗಳಲ್ಲಿ ರಾಜ್ಯಕ್ಕೆ ಸಂಬಂಧಿಸಿ ಒಂದು ವೀಕ್ಷಣೆ ಯನ್ನು ಅಥವಾ ಅತ್ಯಂತ ಗಮನಾರ್ಹ ವೀಕ್ಷಣೆಗಳಲ್ಲೊಂದನ್ನು ಎಂಗೆಲ್ಸ್‌ರು 1875ರ ಮಾರ್ಚ್ 18-28ರಂದು ಬೆಬಲ್‌ರಿಗೆ ಬರೆದ ಪತ್ರದಲ್ಲಿನ ಈ ಕೆಳಗಿನ ಉದ್ಧೃತ ಭಾಗ ಒಳಗೊಂಡಿದೆ. ಈ ಪತ್ರವನ್ನು ನಮಗೆ ತಿಳಿದಂತೆ ಮೊದಲು ಬೆಬಲ್‌ರು ತಮ್ಮ ಸ್ಮೃತಿಗಳ (*Aus meinem Leben*) ದ್ವಿತೀಯ ಸಂಪುಟದಲ್ಲಿ ಪ್ರಕಟಿಸಿದರು ಎಂದು ನಾವಿಲ್ಲಿ ಪ್ರಕ್ಷೇಪದಲ್ಲಿ ಹೇಳಬಹುದಾಗಿದೆ. ಅದು 1911ರಲ್ಲಿ, ಅಂದರೆ ಕಾಗದವನ್ನು ಬರೆದು ಕಳುಹಿಸಿದ 36 ವರ್ಷಗಳನಂತರ ಕಾಣಿಸಿಕೊಂಡಿತು.

ಮಾರ್ಕ್ಸ್‌ರವರು ಬ್ರಾಕೆಗೆ ಬರೆದ ಸುಪ್ರಸಿದ್ಧ ಪತ್ರ[77]ದಲ್ಲಿ ಟೀಕಿಸಿದ ಅದೇ 'ಗೋಥಾ ಕಾರ್ಯಕ್ರಮ'ದ ಕರಡನ್ನು ಎಂಗೆಲ್ಸ್‌ರು ಬೆಬಲ್‌ರಿಗೆ ಬರೆದ ಪತ್ರದಲ್ಲಿ ಟೀಕಿಸಿದರು. ರಾಜ್ಯದ ಪ್ರಶ್ನೆಗೆ ವಿಶೇಷವಾಗಿ ಉಲ್ಲೇಖಿಸಿ ಎಂಗೆಲ್ಸ್ ಬರೆದರು:

> "ಸ್ವತಂತ್ರ ಜನತಾ ರಾಜ್ಯವನ್ನು ಸ್ವತಂತ್ರ ರಾಜ್ಯವನ್ನಾಗಿ ಪರಿವರ್ತಿಸಲಾಗಿದೆ. ವ್ಯಾಕರಣ ಅರ್ಥದಲ್ಲಿ ತೆಗೆದುಕೊಳ್ಳುವುದಾದರೆ, ಸ್ವತಂತ್ರ ರಾಜ್ಯ ಎಂಬುದು ತನ್ನ ಪ್ರಜೆಗಳಿಗೆ ಸಂಬಂಧಿಸಿ ಸ್ವತಂತ್ರವಾದ ರಾಜ್ಯ, ಅಂದರೆ ನಿರಂಕುಶ ಸರಕಾರವಿರುವ ರಾಜ್ಯವಾಗಿರುತ್ತದೆ. ರಾಜ್ಯದ ಬಗೆಗೆ ಈ ಎಲ್ಲ ಮಾತನ್ನೂ ಬಿಟ್ಟುಕೊಡಬೇಕು, ವಿಶೇಷವಾಗಿ ಕಮ್ಯೂನ್ ನಂತರ. ಕಮ್ಯೂನ್ ರಾಜ್ಯವು ಪದದ ಸರಿಯಾದ ಅರ್ಥದಲ್ಲಿ ಎಷ್ಟು ಮಾತ್ರವೂ ರಾಜ್ಯವಾಗಿರಲಿಲ್ಲ. ಪ್ರುದೋನ್‌ರ ವಿರುದ್ಧ ಮಾರ್ಕ್ಸ್‌ರವರ ಗ್ರಂಥವೂ[78] ಅನಂತರ 'ಕಮ್ಯೂನಿಸ್ಟ್ ಪ್ರಣಾಳಿಕೆ'ಯೂ ಸಮಾಜವಾದಿ ಸಮಾಜ ವ್ಯವಸ್ಥೆ ಜಾರಿಗೆ ಬರುವುದರೊಂದಿಗೆ ರಾಜ್ಯವು ತನ್ನಷ್ಟಕ್ಕೆ ತಾನೆ ವಿಲೀನಗೊಳ್ಳುತ್ತದೆ (sich auflöst) ಮತ್ತು ಕಣ್ಮರೆಯಾಗುತ್ತದೆ ಎಂದು ಸ್ಪಷ್ಟವಾಗಿ ಆಗಲೇ ಹೇಳಿದ್ದರೂ ಅರಾಜಕತಾವಾದಿಗಳು ನಮ್ಮ ಮುಂದೆ 'ಜನತಾ ರಾಜ್ಯ' ಎಂಬ ಮಾತನ್ನು ಬೇಸರ ತರುವವರೆಗೂ ಪದೇಪದೇ ಎಸೆಯುತ್ತಿದ್ದಾರೆ. ರಾಜ್ಯವು ಹೋರಾಟದಲ್ಲಿ, ಕ್ರಾಂತಿಯಲ್ಲಿ, ವೈರಿಗಳನ್ನು ಬಲಾತ್ಕಾರದಿಂದ ಹತ್ತಿಕ್ಕಲು ಬಳಸುವ ಒಂದು ಸ್ಥಿತ್ಯಂತರ ಸಂಸ್ಥೆಯಷ್ಟೆ ಆದುದರಿಂದ 'ಸ್ವತಂತ್ರ ಜನತಾ ರಾಜ್ಯ' ಎಂಬ ಮಾತು ಶುದ್ಧ ಅವಿವೇಕದ್ದಾಗುತ್ತದೆ; ಶ್ರಮಜೀವಿ ವರ್ಗಕ್ಕೆ ಇನ್ನೂ ರಾಜ್ಯ ಎಲ್ಲಿಯವರೆಗೆ ಅವಶ್ಯವಾಗಿರುತ್ತದೋ, ಅಲ್ಲಿಯವರೆಗೆ ಅದಕ್ಕೆ ಸ್ವಾತಂತ್ರ್ಯದ ಹಿತದೃಷ್ಟಿಯಿಂದೇನೂ ಅಲ್ಲ ಆದರೆ ತನ್ನ ಶತ್ರುಗಳನ್ನು ಅದುಮಿ ಹಿಡಿದಿರಲೋಸುಗವಷ್ಟೆ ರಾಜ್ಯವು ಅವಶ್ಯವಾಗಿರುತ್ತದೆ. ಸ್ವಾತಂತ್ರ್ಯದ ಬಗೆಗೆ ಮಾತನಾಡಲು ಸಾಧ್ಯವಾದ ಕೂಡಲೇ ರಾಜ್ಯದ ಅಸ್ತಿತ್ವವು ಕೊನೆಗಾಣುತ್ತದೆ. ಆದ್ದರಿಂದ ನಾವು ರಾಜ್ಯ ಎಂಬ ಪದದ ಸ್ಥಳದಲ್ಲಿ ಎಲ್ಲೆಡೆಗಳಲ್ಲೂ ಗೆಮೈನ್‌ವೆಸೆನ್ (ಸಮುದಾಯ) ಎಂಬ ಪದವನ್ನು ಬಳಸುವ ಸಲಹೆ ಮಾಡುತ್ತೇವೆ. ಇದೊಂದು ಒಳ್ಳೆಯ ಹಳೆಯ ಜರ್ಮನ್ ಪದ. ಇದನ್ನು ಫ್ರೆಂಚ್ ಪದ ಕಮ್ಯೂನ್‌ಗೆ ಬದಲಾಗಿ ಉಪಯುಕ್ತವಾಗಿ ಉಪಯೋಗಿಸಬಹುದು." (ಜರ್ಮನ್ ಮೂಲದ ಪು. 321-322.)

ಈ ಪತ್ರವು ಪಾರ್ಟಿ ಕಾರ್ಯಕ್ರಮಕ್ಕೆ ಉಲ್ಲೇಖಿಸುತ್ತದೆ, ಆ ಕಾರ್ಯಕ್ರಮವನ್ನು ಮಾರ್ಕ್ಸ್‌ರವರು ಮೇಲಿನ ಎಂಗೆಲ್ಸ್‌ರ ಪತ್ರದ ಕೆಲವು ವಾರಗಳನಂತರ ಬರೆದ ಪತ್ರವೊಂದರಲ್ಲಿ (ಮಾರ್ಕ್ಸ್‌ರವರ ಪತ್ರ 1875ರ ಮೇ 5ರ ತೇದಿಯದಾಗಿ

ದ್ದಿತು) ಟೀಕಿಸಿದರು; ಆ ಕಾಲದಲ್ಲಿ ಎಂಗೆಲ್ಸ್‌ರು ಮಾರ್ಕ್ಸ್‌ರವರೊಟ್ಟಿಗೇ ಲಂಡನ್ನಿನಲ್ಲಿ ವಾಸಿಸುತ್ತಿದ್ದರು, ಎಂಬುದನ್ನು ಮನಸ್ಸಿನಲ್ಲಿಟ್ಟಿರಬೇಕು. ಆದ್ದರಿಂದಲೇ ಎಂಗೆಲ್ಸ್‌ರು ತಮ್ಮ ಪತ್ರದ ಕೊನೆಯ ವಾಕ್ಯದಲ್ಲಿ "ನಾವು" ಎಂದು ಹೇಳುವಾಗ ಅವರು ತಮ್ಮ ಸ್ವಂತ ಹಾಗೂ ಮಾರ್ಕ್ಸ್‌ರವರ ಹೆಸರಿನಲ್ಲಿ ಜರ್ಮನ್ ಕಾರ್ಮಿಕರ ಪಾರ್ಟಿಯ ನಾಯಕರಿಗೆ ಪಾರ್ಟಿಯ ಕಾರ್ಯಕ್ರಮದ "ರಾಜ್ಯ" ಎಂಬ ಪದವನ್ನು ಹೊಡೆದುಹಾಕಿ ಅದರ ಜಾಗದಲ್ಲಿ "ಸಮುದಾಯ" ಎಂಬ ಪದವನ್ನು ಬಳಸುವಂತೆ ಸಲಹೆ ಮಾಡಿದರು ಎಂದು ನಿಸ್ಸಂದೇಹವಾಗಿಯೂ ಹೇಳಬಹುದು.

ಇಂದು ಸಂದರ್ಭಸಾಧಕವಾದಿಗಳ ಅನುಕೂಲಕ್ಕಾಗಿ ಮಾರ್ಕ್ಸ್‌ವಾದವನ್ನು ತಪ್ಪಾಗಿ ನಿರೂಪಿಸಲಾಗಿದೆ. ಅಂಥ "ಮಾರ್ಕ್ಸ್‌ವಾದ"ದ ಮುಂದಾಳುಗಳಿಗೆ ಅವರ ಕಾರ್ಯಕ್ರಮದಲ್ಲಿ ಇಂತಹ ತಿದ್ದುಪಾಟು ಮಾಡಬೇಕೆಂದು ಸಲಹೆ ಮಾಡಿದಲ್ಲಿ ಅವರು ಅದು "ಅರಾಜಕತಾವಾದ"ವೆಂದು ಎಷ್ಟೊಂದು ಹುಯಿಲೆಬ್ಬಿಸುವರು !

ಅವರು ಬೇಕಾದರೆ ಹುಯಿಲೆಬ್ಬಿಸಿಕೊಳ್ಳಲಿ. ಅದು ಅವರಿಗೆ ಬೂರ್ಷ್ವಾಸೀಯಿಂದ ಹೊಗಳಿಕೆ ಗಳಿಸಿಕೊಡುತ್ತದೆ.

ನಾವು ನಮ್ಮ ಕಾರ್ಯದೊಂದಿಗೆ ಮುಂದುವರಿಯೋಣ. ನಮ್ಮ ಪಾರ್ಟಿಯ ಕಾರ್ಯಕ್ರಮವನ್ನು ಪರಿಷ್ಕರಿಸುವಾಗ ನಾವು ಸತ್ಯಾಂಶದ ಬಳಿಗೆ ಹೆಚ್ಚು ಹತ್ತಿರ ಹೋಗಲೋಸುಗ, ಮಾರ್ಕ್ಸ್‌ವಾದವನ್ನು ವಿರೂಪಣೆಗಳಿಂದ ಮುಕ್ತಗೊಳಿಸಿ ಪುನರ್‌ಸ್ಥಾಪಿಸಲೋಸುಗ, ಕಾರ್ಮಿಕ ವರ್ಗದ ವಿಮೋಚನಾ ಹೋರಾಟಕ್ಕೆ ಹೆಚ್ಚು ಸರಿಯಾಗಿ ಮಾರ್ಗದರ್ಶನ ನೀಡಲೋಸುಗ ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರ ಬುದ್ಧಿವಾದವನ್ನು ಖಂಡಿತ ಗಣನೆಗೆ ತಂದುಕೊಳ್ಳಬೇಕು. ಬೋಲ್ಷೆವಿಕರ ಮಧ್ಯೆಯಂತೂ ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಬುದ್ಧಿವಾದಕ್ಕೆ ವಿರುದ್ಧವಾಗಿರುವವರು ಒಬ್ಬರೂ ಕಂಡುಬರುವುದಿಲ್ಲವೆಂಬುದು ಖಂಡಿತ. ಬಹುಶಃ ಉದ್ಭವಿಸಬಹುದಾದ ಒಂದೇ ಒಂದು ತೊಂದರೆ ಎಂದರೆ, ಪದ ಬಳಕೆಗೆ ಸಂಬಂಧಿಸಿದುದು. ಜರ್ಮನ್ ಭಾಷೆಯಲ್ಲಿ "ಸಮುದಾಯ" ಎಂದು ಅರ್ಥ ಕೊಡುವ ಎರಡು ಪದಗಳಿವೆ. ಎಂಗೆಲ್ಸ್‌ರು ಬಳಸಿದ ಪದವು ಯಾವುದೇ ಒಂದು ಸಮುದಾಯವನ್ನು ಅಲ್ಲ ಆದರೆ ಅವುಗಳ ಒಟ್ಟು ಮೊತ್ತವನ್ನು, ಸಮುದಾಯಗಳ ಒಂದು ವ್ಯವಸ್ಥೆಯನ್ನು ಸೂಚಿಸುತ್ತದೆ. ರಷ್ಯನ್ ಭಾಷೆಯಲ್ಲಿ ಅಂಥ ಯಾವುದೂ ಪದ ಇಲ್ಲ. ಆದ್ದರಿಂದ ನಾವು ಫ್ರೆಂಚ್ ಪದ "ಕಮ್ಯೂನ್"ಅನ್ನೇ, ಅದರಲ್ಲೂ ನ್ಯೂನತೆಗಳಿದ್ದರೂ ಸಹ, ಆಯ್ದುಕೊಳ್ಳಬೇಕಾಗಬಹುದು.

"ಕಮ್ಯೂನ್ ಎಷ್ಟು ಮಾತ್ರವೂ ಪದದ ಸರಿಯಾದ ಅರ್ಥದಲ್ಲಿ ರಾಜ್ಯವಾಗಿರಲಿಲ್ಲ" – ಇದು ಎಂಗೆಲ್ಸ್‌ರು ಮಾಡಿರುವ ಸೈದ್ಧಾಂತಿಕವಾಗಿ ಅತ್ಯಂತ ಮುಖ್ಯವಾದ ಹೇಳಿಕೆಯಾಗಿದೆ. ಮೇಲೆ ಏನನ್ನು ಹೇಳಲಾಗಿದೆಯೋ ಅದನ್ನು ತಿಳಿದನಂತರ ಈ ಹೇಳಿಕೆ ತುಂಬ ಸ್ಪಷ್ಟವಾಗುತ್ತದೆ. ಕಮ್ಯೂನ್ ರಾಜ್ಯವಾಗಿ ಕೊನೆಗಾಣುತ್ತಲಿದ್ದಿತು, ಏಕೆಂದರೆ ಅದು ಜನತೆಯ ಬಹುಸಂಖ್ಯಾತರನ್ನಲ್ಲ ಆದರೆ ಅಲ್ಪಸಂಖ್ಯಾತರನ್ನು

16*

(ಶೋಷಕರನ್ನು) ಪತ್ತಿಕ್ಕಬೇಕಿದ್ದಿತು. ಅದು ಬೂರ್ಷ್ವಾ ರಾಜ್ಯಯಂತ್ರವನ್ನು ತೊಡೆದು ಹಾಕಿದ್ದಿತು. ಒಂದು ವಿಶೇಷ ಬಲೋದ್ವಂಥದ ಶಕ್ತಿಯ ಸ್ಥಳದಲ್ಲಿ ಜನರೇ ಆ ಕಾರ್ಯ ನಿರ್ವಹಿಸಿದರು. ಇದೆಲ್ಲವೂ ರಾಜ್ಯ ಎಂಬ ಪದದ ಸಾಮಾನ್ಯ ಅರ್ಥದಿಂದ ಬೇರೆಯಾಗಿದ್ದಿತು. ಕಮ್ಯೂನ್ ದೃಢವಾಗಿ ಸ್ಥಾಪಿತವಾಗಿದ್ದಿದ್ದರೆ ರಾಜ್ಯದ ಎಲ್ಲ ಗುರುತುಗಳೂ ತಮಗೆ ತಾವೇ "ಕ್ಷಯಿಸಿಹೋಗುತ್ತಿದ್ದವು;" ಅದು ರಾಜ್ಯದ ಅಂಗಸಂಸ್ಥೆಗಳನ್ನು "ರದ್ದುಗೊಳಿಸ"ಬೇಕಾಗಿಯೇ ಇರುತ್ತಿರಲಿಲ್ಲ – ಮಾಡಲು ಏನೂ ಕೆಲಸವಿಲ್ಲದೆ ಅವು ಕ್ರಿಯಾಶೂನ್ಯವಾಗಿಬಿಡುತ್ತಿದ್ದವು.

" 'ಜನತಾ ರಾಜ್ಯ' ಎಂಬ ಮಾತನ್ನು ಅರಾಜಕತಾವಾದಿಗಳು ನಮ್ಮ ಮುಂದೆ ಎಸೆದಿದ್ದಾರೆ." ಇದನ್ನು ಹೇಳುವಾಗ ಎಂಗೆಲ್ಸ್‌ರು ಎಲ್ಲಕ್ಕೂ ಮಿಗಿಲಾಗಿ ಬಕೂನಿನ್‌ರನ್ನೂ ಜರ್ಮನ್ ಸೋಷಲ್ ಡೆಮೊಕ್ರಾಟರ ವಿರುದ್ಧ ಅವರ ಹೇಳಿಕೆಗಳನ್ನೂ ತಮ್ಮ ಮನಸ್ಸಿನಲ್ಲಿಟ್ಟಿದ್ದಾರೆ. "ಜನತಾ ರಾಜ್ಯ" ಎಂಬುದು "ಸ್ವತಂತ್ರ ಜನತಾ ರಾಜ್ಯ" ಎನ್ನುವಷ್ಟೆ ಅಸಂಬದ್ಧವಾದುದು, ಸಮಾಜವಾದದಿಂದ ಅಡ್ಡ ಮಾರ್ಗವಾದುದು ಎನ್ನುವಷ್ಟರ ಮಟ್ಟಿಗೆ ಬಕೂನಿನ್‌ರ ಹೇಳಿಕೆಗಳು ಸಮರ್ಥನೀಯವಾಗಿದ್ದವು ಎಂದು ಎಂಗೆಲ್ಸ್ ಒಪ್ಪಿಕೊಳ್ಳುತ್ತಾರೆ. ಎಂಗೆಲ್ಸ್‌ರು ಅರಾಜಕತಾವಾದಿಗಳ ವಿರುದ್ಧ ಜರ್ಮನ್ ಸೋಷಲ್ ಡೆಮೊಕ್ರಾಟರ ಹೋರಾಟವನ್ನು ಸರಿಯಾದ ದಾರಿಯಲ್ಲಿರಿಸಲು, ಈ ಹೋರಾಟವು ಸೂತ್ರತಃ ಸರಿಯಾಗಿರುವಂತೆ ಮಾಡಲು, "ರಾಜ್ಯ"ದ ಬಗೆಗೆ ಸಂದರ್ಭಸಾಧಕವಾದಿ ಪೂರ್ವಾಗ್ರಹಗಳಿಂದ ಅದನ್ನು ಮುಕ್ತವನ್ನಾಗಿ ಮಾಡಲು, ಯತ್ನಿಸಿದರು. ದುರದೃಷ್ಟವಶಾತ್, ಎಂಗೆಲ್ಸ್‌ರ ಈ ಪತ್ರವನ್ನು ಮೂವತ್ತಾರು ವರ್ಷಗಳವರೆಗೆ ಗೂಡಿನಲ್ಲಿಟ್ಟುಬಿಡಲಾಗಿದ್ದಿತು. ಈ ಪತ್ರ ಪ್ರಕಟವಾದ ಮೇಲೂ ಕೌತ್‌ಸ್ಕಿಯವರು, ಎಂಗೆಲ್ಸ್‌ರು ಯಾವ ತಪ್ಪುಗಳ ವಿರುದ್ಧ ಎಚ್ಚರಿಕೆ ನೀಡಿದರೋ ಆ ತಪ್ಪುಗಳನ್ನೇ ಮಾಡುತ್ತಲೇ ಹೋದರೆಂಬುದನ್ನು ನಾವು ಮುಂದೆ ನೋಡೋಣ.

ಬೆಬಲ್‌ರು ಎಂಗೆಲ್ಸ್‌ರಿಗೆ 1875ರ ಸೆಪ್ಟೆಂಬರ್ 21ರ ತಮ್ಮ ಪತ್ರದಲ್ಲಿ ಉತ್ತರ ನೀಡಿದರು. ಅದರಲ್ಲಿ ಅವರು ಅನೇಕ ಇತರ ವಿಷಯಗಳ ಜೊತೆಗೆ ತಾವು ಕರಡು ಕಾರ್ಯಕ್ರಮದ ಬಗೆಗೆ ಎಂಗೆಲ್ಸ್‌ರ ಅಭಿಪ್ರಾಯಗಳನ್ನು "ಸಂಪೂರ್ಣವಾಗಿ ಒಪ್ಪುವುದಾಗಿಯೂ," ರಿಯಾಯಿತಿಗಳನ್ನು ನೀಡಲು ಸಿದ್ಧವಿದ್ದ ಲೀಬ್‌ಕ್ನೆಹ್ತ್‌ರನ್ನು ತಾವು ಖಂಡಿಸಿದುದಾಗಿಯೂ, ಬರೆದರು (ಬೆಬಲ್‌ರ ಸ್ಮೃತಿಗಳ ಜರ್ಮನ್ ಆವೃತ್ತಿ, ದ್ವಿತೀಯ ಸಂಪುಟ, ಪು. 334). ಆದರೆ 'ನಮ್ಮ ಗುರಿಗಳು' ಎಂಬ ಬೆಬಲ್‌ರ ಕಿರುಹೊತ್ತಗೆಯನ್ನು ತೆಗೆದುಕೊಂಡರೆ, ಅದರಲ್ಲಿ ರಾಜ್ಯದ ಬಗೆಗೆ ಅವರ ಅಭಿಪ್ರಾಯಗಳು ಸಂಪೂರ್ಣವಾಗಿ ತಪ್ಪಾಗಿರುವುದನ್ನು ನಾವು ಕಾಣುತ್ತೇವೆ.

> "ರಾಜ್ಯವನ್ನು... ವರ್ಗ ಆಧಿಪತ್ಯದ ಮೇಲೆ ಆಧರಿಸಿದ ರಾಜ್ಯದಿಂದ ಜನತಾ ರಾಜ್ಯವನ್ನಾಗಿ ಪರಿವರ್ತಿಸಬೇಕು." (*Unsere Ziele*, ಜರ್ಮನ್ ಆವೃತ್ತಿ, 1886, ಪು. 14.)

ಇದು ಬೆಬಲ್‌ರ ಕಿರುಹೊತ್ತಗೆಯ ಒಂಬತ್ತನೆಯ (ಒಂಬತ್ತನೆಯ !) ಆವೃತ್ತಿಯಲ್ಲಿ ಮುದ್ರಿತವಾಗಿದೆ! ಆದ್ದರಿಂದ ರಾಜ್ಯದ ಬಗೆಗೆ ಹೀಗೆ ಸತತವಾಗಿ ಪುನರುಚ್ಚರಿಸಲಾದ ಸಂದರ್ಭಸಾಧಕವಾದಿ ಅಭಿಪ್ರಾಯಗಳನ್ನು ಜರ್ಮನ್ ಸೋಷಲ್ ಡೆಮೊಕ್ರಾಟರು ಸ್ವೀಕರಿಸಿಕೊಂಡುದರಲ್ಲಿ ಆಶ್ಚರ್ಯವೇನಿಲ್ಲ – ಅದರಲ್ಲೂ ಎಂಗೆಲ್ಸ್‌ರ ಕ್ರಾಂತಿಕಾರಿ ವ್ಯಾಖ್ಯಾನಗಳನ್ನು ಸುರಕ್ಷಿತವಾಗಿ ಗೂಡಿನಲ್ಲಿ ಇರಿಸಲಾಗಿದ್ದುದರಿಂದ ಮತ್ತು ಜೀವನ ಪರಿಸ್ಥಿತಿಗಳೆಲ್ಲ ಅವರನ್ನು ಬಹಳ ಕಾಲದವರೆಗೆ ಕ್ರಾಂತಿಯಿಂದ "ದೂರ ಇರಿಸುವಂಥವೇ" ಆಗಿದ್ದುದರಿಂದ.

## 4. ಎರ್‌ಫುರ್ತ್ ಕಾರ್ಯಕ್ರಮದ ಕರಡಿನ ಬಗೆಗೆ ಟೀಕೆ

ರಾಜ್ಯದ ಕುರಿತು ಮಾರ್ಕ್ಸ್‌ವಾದಿ ಬೋಧೆಗಳನ್ನು ವಿಶ್ಲೇಷಿಸುವಾಗ ಎಂಗೆಲ್ಸ್‌ರು ಕೌತ್‌ಸ್ಕಿಯವರಿಗೆ 1891ರ ಜೂನ್ 29ರಂದು ಕಳುಹಿಸಿದ ಹಾಗೂ ಹತ್ತು ವರ್ಷಗಳನಂತರವಷ್ಟೆ 'ನೋಯೆ ತ್ಸೈತ್'ನಲ್ಲಿ ಪ್ರಕಟವಾದ, ಎರ್‌ಫುರ್ತ್ ಕಾರ್ಯಕ್ರಮ[79]ದ ಕರಡಿನ ಬಗೆಗೆ ಟೀಕೆಯನ್ನು ಕಡೆಗಣಿಸಲಾಗದು; ಏಕೆಂದರೆ ಈ ಟೀಕೆ ಮುಖ್ಯವಾಗಿ ಸಂಬಂಧಿಸಿದುದು ರಾಜ್ಯ ಸಂಘಟನೆಯ ಪ್ರಶ್ನೆಗಳ ಕುರಿತು ಸೋಷಲ್ ಡೆಮೊಕ್ರಾಟರ ಸಂದರ್ಭಸಾಧಕವಾದಿ ಅಭಿಪ್ರಾಯಗಳಿಗೇ.

ಎಂಗೆಲ್ಸ್‌ರವರು ಆರ್ಥಿಕ ಪ್ರಶ್ನೆಗಳಿಗೆ ಸಂಬಂಧಿಸಿಯೂ ಅತ್ಯಮೂಲ್ಯ ಅಭಿಪ್ರಾಯೋಕ್ತಿ ನೀಡಿದ್ದಾರೆಂಬುದನ್ನು ನಾವು ಪ್ರಾಸಂಗಿಕವಾಗಿ ಗಮನಿಸಬಹುದು. ಅವರು ಆಧುನಿಕ ಬಂಡವಾಳಶಾಹಿ ವ್ಯವಸ್ಥೆಯಲ್ಲಾಗುತ್ತಿದ್ದ ನಾನಾ ಬದಲಾವಣೆಗಳನ್ನು ಎಷ್ಟು ಗಮನವಿಟ್ಟು ಹಾಗೂ ವಿಚಾರಪೂರ್ಣವಾಗಿ ಗಮನಿಸಿದರು ಮತ್ತು ಈ ಕಾರಣದಿಂದಾಗಿಯೇ ಅವರು ಹೇಗೆ ನಮ್ಮ ಇಂದಿನ ಸಾಮ್ರಾಜ್ಯಶಾಹಿ ಯುಗದ ಕಾರ್ಯಭಾರಗಳನ್ನು ಸ್ವಲ್ಪಮಟ್ಟಿಗೆ ಮುಂಗಾಣಬಲ್ಲವರಾಗಿದ್ದರು, ಎಂಬುದನ್ನು ಇದು ತೋರಿಸಿಕೊಡುತ್ತದೆ. ಅವರ ಈ ಅಭಿಪ್ರಾಯೋಕ್ತಿ ಹೀಗಿದೆ: ಕರಡು ಕಾರ್ಯಕ್ರಮದಲ್ಲಿ ಬಳಸಿದ "ಯೋಜನಾರಹಿತತೆ" (Planlosigkeit) ಎಂಬ ಪದವು ಬಂಡವಾಳವಾದದ ವಿಶೇಷ ಲಕ್ಷಣವೆಂದು ಉಲ್ಲೇಖಿಸಿ ಎಂಗೆಲ್ಸ್ ಬರೆದರು:

> "ನಾವು ಜಾಯಿಂಟ್ ಸ್ಟಾಕ್ ಕಂಪನಿಗಳಿಂದ ಇಡೀ ಕೈಗಾರಿಕೆಗಳ ಮೇಲೆ ನಿಯಂತ್ರಣ ಪಡೆದುಕೊಳ್ಳುವ ಮತ್ತು ಏಕಸ್ವಾಮ್ಯ ಸ್ಥಾಪಿಸುವ ನ್ಯಾಸಗಳಿಗೆ ಹೋದಾಗ, ಖಾಸಗಿ ಉತ್ಪಾದನೆಯಷ್ಟೆ ಅಲ್ಲ ಯೋಜನಾರಹಿತತೆಯೂ ಇಲ್ಲದಂತಾಗುತ್ತದೆ." ('ನೋಯೆ ತ್ಸೈತ್,' ಸಂ. XX, 1, 1901-1902, ಪು. 8.)

ಇಲ್ಲಿ ನಾವು ಬಂಡವಾಳವಾದದ ಇತ್ತೀಚಿಗಿನ ಮಜಲಿನ, ಅಂದರೆ ಸಾಮ್ರಾಜ್ಯ ವಾದದ, ಸೈದ್ಧಾಂತಿಕ ಮೌಲ್ಯನಿರ್ಣಯದಲ್ಲಿ ಅತ್ಯಗತ್ಯವಾದ ಅಂಶವನ್ನು – ಬಂಡ ವಾಳವಾದವು ಏಕಸ್ವಾಮ್ಯ ಬಂಡವಾಳವಾದವಾಗುತ್ತದೆ ಎಂಬ ಅಂಶವನ್ನು – ಕಾಣು ತ್ತೇವೆ. ಈ ಎರಡನೆಯದನ್ನು ಒತ್ತಿ ತಿಳಿಸಬೇಕು, ಏಕೆಂದರೆ, ಏಕಸ್ವಾಮ್ಯ ಬಂಡವಾಳ ವಾದ ಅಥವಾ ರಾಜ್ಯ ಏಕಸ್ವಾಮ್ಯ ಬಂಡವಾಳವಾದವು ಎಷ್ಟು ಮಾತ್ರವೂ ಬಂಡ ವಾಳವಾದವಲ್ಲ, ಆದರೆ ಈಗ ಅದನ್ನು "ರಾಜ್ಯ ಸಮಾಜವಾದ" ಎಂದು ಕರೆಯ ಬಹುದು, ಎಂಬ ಮುಂತಾದ ತಪ್ಪು ಬೂರ್ಷ್ವಾ ಸುಧಾರಣಾವಾದಿ ಪ್ರತಿಪಾದನೆ ಗಳು ಇದೀಗ ತುಂಬ ಸಾಮಾನ್ಯವಾಗಿಬಿಟ್ಟಿವೆ. ನ್ಯಾಸಗಳು ಎಂದೂ ಸಂಪೂರ್ಣ ಯೋಜನೆ ಯನ್ನು ಒದಗಿಸಿದುದಿಲ್ಲ, ಇಂದೂ ಒದಗಿಸುತ್ತಿಲ್ಲ ಮತ್ತು ಒದಗಿಸಲಾರವು ಕೂಡ, ಎಂಬುದು ನಿಜ. ಅವು ಎಷ್ಟೇ ಯೋಜನೆ ಮಾಡಿದರೂ, ಬಂಡವಾಳಶಾಹಿ ಪ್ರಭುಗಳು ಉತ್ಪಾದನಾ ಪ್ರಮಾಣವನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟ ದಲ್ಲೂ ಸಹ ಮುಂಚಿತವಾಗಿಯೋ ಎಷ್ಟೇ ಲೆಕ್ಕ ಹಾಕಿದರೂ, ಅವರು ಅದನ್ನು ಎಷ್ಟೇ ವ್ಯವಸ್ಥಾತ್ಮಕವಾಗಿ ಕ್ರಮಬದ್ಧಗೊಳಿಸಿದರೂ, ನಾವು ಇನ್ನೂ ಬಂಡವಾಳ ವಾದದ ಅಡಿಯೇ ಇರುತ್ತೇವೆ – ನಿಜ, ಅದರ ಹೊಸ ಘಟ್ಟದಲ್ಲಿ, ಆದರೂ ನಿಸ್ಸಂದೇಹ ವಾಗಿಯೂ ಬಂಡವಾಳವಾದದ ಅಡಿಯೇ ಇರುತ್ತೇವೆ. ಅಂಥ ಬಂಡವಾಳವಾದವು ಸಮಾಜವಾದಕ್ಕೆ "ಸಮೀಪ" ಇರುವುದು ಶ್ರಮಜೀವಿ ವರ್ಗದ ನೈಜ ಪ್ರತಿ ನಿಧಿಗಳಿಗೆ ಸಮಾಜವಾದಿ ಕ್ರಾಂತಿ ಎಷ್ಟು ಹತ್ತಿರ ಬಂದಿದೆ, ಅದಕ್ಕೆ ಎಷ್ಟು ಸೌಲಭ್ಯ ಗಳು ಒದಗಿವೆ, ಅದು ಎಷ್ಟು ಕಾರ್ಯಸಾಧುವಾಗಿದೆ ಮತ್ತು ತುರ್ತಿನದಾಗಿದೆ ಎಂದು ವಾದ ಮಾಡಲು ನೆರವಾಗಬೇಕೇ ಹೊರತು, ಅಂಥ ಕ್ರಾಂತಿಯನ್ನು ಅಲ್ಲಗಳೆಯುವು ದನ್ನು ಮತ್ತು ಎಲ್ಲ ಸುಧಾರಣಾವಾದಿಗಳೂ ಈಗ ಮಾಡಲು ಯತ್ನಿಸುತ್ತಿರುವಂತೆ ಬಂಡವಾಳವಾದವನ್ನು ಹೆಚ್ಚು ಆಕರ್ಷಕವನ್ನಾಗಿ ಮಾಡುವ ಯತ್ನಗಳನ್ನು ಸಹಿಸಿ ಕೊಂಡಿರುವಂತೆ ವಾದ ಮಾಡಲು ಖಂಡಿತ ಅಲ್ಲ.

ಆದರೆ ಈಗ ಮತ್ತೆ ರಾಜ್ಯದ ಪ್ರಶ್ನೆಗೆ ಹಿಂದಿರುಗೋಣ. ಎಂಗೆಲ್ಸ್‌ರು ತಮ್ಮ ಪತ್ರದಲ್ಲಿ ಮೂರು ಅಮೂಲ್ಯ ಸಲಹೆಗಳನ್ನು ಮಾಡುತ್ತಾರೆ: ಮೊದಲನೆಯದು ಗಣತಂತ್ರಕ್ಕೆ ಸಂಬಂಧಿಸಿದುದು; ಎರಡನೆಯದು, ರಾಷ್ಟ್ರೀಯ ಪ್ರಶ್ನೆ ಹಾಗೂ ರಾಜ್ಯ ಸಂಘಟನೆಗಳ ನಡುವಿನ ಸಂಬಂಧ ಕುರಿತಾದುದು; ಮೂರನೆಯದು, ಸ್ಥಳೀಯ ಸ್ವಯಮಾಡಳಿತಕ್ಕೆ ಸಂಬಂಧಿಸಿದುದು.

ಗಣತಂತ್ರಕ್ಕೆ ಸಂಬಂಧಿಸಿ ಹೇಳುವುದಾದರೆ ಎಂಗೆಲ್ಸ್‌ರು ಇದನ್ನೇ ಎರ್‌ಫುರ್ತ್ ಕಾರ್ಯಕ್ರಮದ ಕರಡಿನ ಬಗೆಗೆ ತಮ್ಮ ಟೀಕೆಯ ಕೇಂದ್ರ ಅಂಶವನ್ನಾಗಿ ಮಾಡಿದ್ದರು. ಎರ್‌ಫುರ್ತ್ ಕಾರ್ಯಕ್ರಮವು ಜಗತ್ತಿನ ಎಲ್ಲ ಸೋಷಲ್ ಡೆಮೊಕ್ರಾಟರಿಗೂ ಎಂಥ ಮಹತ್ವದ್ದಾಗಿದ್ದಿತೆಂಬುದನ್ನು ಮತ್ತು ಅದು ಇಡೀ ದ್ವಿತೀಯ ಇಂಟರ್‌ನ್ಯಾಷನಲ್‌ಗೆ ಹೇಗೆ ಮಾದರಿಯಾಗಿ ಆಗಿದ್ದಿತು ಎಂಬುದನ್ನು ನೆನಸಿಕೊಂಡರೆ, ಎಂಗೆಲ್ಸ್‌ರು ಈ

ಕಾರ್ಯಕ್ರಮವನ್ನು ಟೀಕಿಸುವ ಮೂಲಕ ಇಡೀ ದ್ವಿತೀಯ ಇಂಟರ್‌ನ್ಯಾಷನಲ್‌ನ ಸಂದರ್ಭಸಾಧಕವಾದವನ್ನು ಟೀಕಿಸಿದರು ಎಂದೇ ನಾವು ಅತಿಶಯೋಕ್ತಿ ಇಲ್ಲದೆ ಹೇಳಬಹುದು.

> "ಕರಡಿನ ರಾಜಕೀಯ ಕೇಳಿಕೆಯು ಒಂದು ದೊಡ್ಡ ದೋಷವನ್ನು ಹೊಂದಿದೆ" ಎಂದು ಎಂಗೆಲ್ಸ್ ಬರೆದರು. "ಅದು ಯಾವುದನ್ನು ಹೇಳಬೇಕಾಗಿದ್ದಿತೋ ಸ್ಪಷ್ಟವಾಗಿ ಅದೇ ಅದರಲ್ಲಿಲ್ಲ." (ಅಡಿಗೆರೆ ಎಂಗೆಲ್ಸ್‌ರವರದು.)

ಅನಂತರ ಅವರು, ಜರ್ಮನ್ ಸಂವಿಧಾನವು, ಖಚಿತವಾಗಿ ಹೇಳುವುದಾದರೆ, 1850ರ ಅತ್ಯಂತ ಪ್ರತಿಗಾಮಿ ಸಂವಿಧಾನದ ಒಂದು ಪ್ರತಿರೂಪವಾಗಿದೆ, ರೈಹ್‌ಸ್ಟಾಗ್* ವಿಲ್ಹೆಲ್ಮ್ ಲೀಬ್‌ಕ್ನೆಹ್ತ್‌ರವರು ಹೇಳಿದಂತೆ "ನಿರಂಕುಶಪ್ರಭುತ್ವಕ್ಕೆ ಎಲೆಮರೆ"ಯಷ್ಟೆ ಆಗಿದೆ, ಸಣ್ಣಪುಟ್ಟ ರಾಜ್ಯಗಳ ಅಸ್ತಿತ್ವವನ್ನೂ ಅಂಥ ಸಣ್ಣಪುಟ್ಟ ಜರ್ಮನ್ ರಾಜ್ಯಗಳ ಸಂಯುಕ್ತ ರಾಷ್ಟ್ರಕೂಟವನ್ನೂ ಶಾಸನಬದ್ಧಗೊಳಿಸುವಂಥ ಸಂವಿಧಾನದ ಆಧಾರದ ಮೇಲೆ "ಶ್ರಮ ಸಾಧನಗಳೆಲ್ಲವನ್ನು ಸಾಮಾನ್ಯ ಆಸ್ತಿಯನ್ನಾಗಿ ಪರಿವರ್ತಿಸಲು" ಬಯಸುವುದು "ಸ್ವತಸ್ಸಿದ್ಧ ಮೂರ್ಖತನ" ಎಂಬುದನ್ನು ಸ್ಪಷ್ಟಗೊಳಿಸುತ್ತಾರೆ.

ಜರ್ಮನಿಯಲ್ಲಿ ಗಣತಂತ್ರ ಸ್ಥಾಪನೆಯಾಗಬೇಕೆಂಬ ಕೇಳಿಕೆಯನ್ನು ಕಾರ್ಯಕ್ರಮದಲ್ಲಿ ಸೇರಿಸುವುದು ಶಾಸನರೀತ್ಯಾ ಅಸಾಧ್ಯ ಎಂಬುದನ್ನು ಚೆನ್ನಾಗಿ ತಿಳಿದಿದ್ದ ಎಂಗೆಲ್ಸ್‌ರವರು, "ಈ ವಿಷಯವನ್ನು ಪ್ರಸ್ತಾಪಿಸುವುದು ಅಪಾಯಕರ" ಎಂದೂ ಬರೆದರು. ಆದರೆ ಅವರು "ಪ್ರತಿಯೊಬ್ಬರನ್ನೂ" ತೃಪ್ತಿಪಡಿಸಿದಂಥ ಈ ಸ್ವತಸ್ಸಿದ್ಧ ಪರಿಗಣನೆಯನ್ನು ಸುಮ್ಮನೆ ಒಪ್ಪಿಕೊಂಡುಬಿಡಲೂ ನಿರಾಕರಿಸಿದರು. ಮುಂದುವರಿಯುತ್ತ ಅವರು ಬರೆದರು: "ಆದರೂ, ಹೇಗಾದರೂ ಸರಿ, ಈ ವಿಷಯವನ್ನು ಪ್ರಸ್ತಾಪಿಸಲೇ ಬೇಕು. ಇದು ಎಷ್ಟು ಅವಶ್ಯ ಎಂಬುದನ್ನು ಪ್ರಸಕ್ತ ಸಮಯದಲ್ಲಿ ವಿಶಾಲ ವಿಭಾಗದ ಸೋಷಲ್ ಡೆಮೊಕ್ರಾಟಿಕ್ ಪತ್ರಿಕೆಗಳಲ್ಲಿ ತಳ ಊರುತ್ತಿರುವ (einreißende) ಸಂದರ್ಭಸಾಧಕವಾದವು ಸ್ಪಷ್ಟವಾಗಿ ತೋರಿಸಿಕೊಡುತ್ತದೆ. ಸಮಾಜವಾದಿಗಳ ವಿರುದ್ಧ ಶಾಸನವು[80] ಪುನಃ ಊರ್ಜಿತವಾಗಬಹುದೆಂದು ಅಂಜಿ, ಇಲ್ಲವೇ ಆ ಶಾಸನವು ಜಾರಿಯಲ್ಲಿದ್ದಾಗ ಮಾಡಲಾದ ಎಲ್ಲ ರೀತಿಯ ಅತ್ಯಾತುರದ ಹೇಳಿಕೆಗಳನ್ನು ನೆನಪಿಸಿಕೊಂಡು, ಈ ಪತ್ರಿಕೆಗಳು ಈಗ, ಎಲ್ಲ ಪಾರ್ಟಿ ಕೇಳಿಕೆಗಳನ್ನೂ ಶಾಂತಿಯುತವಾಗಿ ಕಾರ್ಯಗತಗೊಳಿಸಲು ಜರ್ಮನಿಯಲ್ಲಿ ಪ್ರಸ್ತುತದಲ್ಲಿರುವ ಶಾಸನ ವ್ಯವಸ್ಥೆಯೇ ಸಾಕೆಂದು ಪಾರ್ಟಿಯು ಕಂಡುಕೊಳ್ಳಬೇಕೆಂದು ಬಯಸುತ್ತಿವೆ..."

---

* ಜರ್ಮನಿಯ ಶಾಸನ ಸಭೆ.

ಜರ್ಮನ್ ಸೋಷಲ್ ಡೆಮೊಕ್ರಾಟರು ಸಮಾಜವಾದಿಗಳ ವಿರೋಧಿ ಶಾಸನವು ಪುನಃ ಊರ್ಜಿತಗೊಳ್ಳುವ ಅಂಜಿಕೆಯಿಂದ ಪ್ರೇರಿತರಾಗಿದ್ದರು ಎಂಬ ಮೂಲಭೂತ ಅಂಶವನ್ನು ಎಂಗೆಲ್ಸ್‌ರು ವಿಶೇಷವಾಗಿ ಒತ್ತಿ ತಿಳಿಸಿದರು ಮತ್ತು ಅದನ್ನು ಸಂದರ್ಭ ಸಾಧಕವಾದವೆಂದು ನಿಸ್ಸಂಶಯವಾಗಿ ಹೇಳಿದರು, ಜರ್ಮನಿಯಲ್ಲಿ ಗಣತಂತ್ರವಾಗಲೀ ಸ್ವಾತಂತ್ರ್ಯವಾಗಲೀ ಇರದಿದ್ದ ಕಾರಣದಿಂದಾಗಿಯೇ "ಶಾಂತಿಯುತ" ಮಾರ್ಗದ ಕನಸುಗಳೆಲ್ಲ ಸಂಪೂರ್ಣವಾಗಿ ಅಸಂಬದ್ಧವಾದವುಗಳೆಂದು ಅವರು ಸಾರಿ ಹೇಳಿದರು. ಎಂಗೆಲ್ಸ್‌ರು ತಮ್ಮ ಕೈಗಳು ಕಟ್ಟಿ ಹೋಗದಿರುವಂತೆ ಎಚ್ಚರಿಕೆಯಿಂದಿದ್ದರು. ಗಣತಂತ್ರ ದೇಶಗಳಲ್ಲಿ ಅಥವಾ ತುಂಬ ಸ್ವತಂತ್ರವಾದ ದೇಶಗಳಲ್ಲಿ ಸಮಾಜವಾದದತ್ತ ಶಾಂತಿ ಯುತ ಬೆಳವಣಿಗೆಯೂ ಸಾಧ್ಯವೆಂದು "ಕಲ್ಪಿಸಿಕೊಳ್ಳಬಹುದು" (ಕೇವಲ "ಕಲ್ಪಿಸಿ ಕೊಳ್ಳಬಹುದು"!) ಎಂದವರು ಒಪ್ಪಿಕೊಂಡರು, ಆದರೆ ಜರ್ಮನಿಯಲ್ಲಿ –

> "...ಸರಕಾರವು ಬಹುಮಟ್ಟಿಗೆ ಸರ್ವಶಕ್ತವಾಗಿರುವ ಮತ್ತು ರೈಹ್‌ಸ್ಟಾಗ್ ಆಗಲೀ ಇತರ ಯಾವುದೇ ಪ್ರಾತಿನಿಧಿಕ ಸಂಸ್ಥೆಗಳೇ ಆಗಲೀ ನಿಜವಾದ ಅಧಿಕಾರ ಹೊಂದಿಲ್ಲದಿರುವ ಜರ್ಮನಿಯಲ್ಲಿ ಅಂಥದನ್ನು ಪ್ರತಿಪಾದಿಸುವುದು, ಹಾಗೆ ಮಾಡಲು ಆವಶ್ಯಕತೆಯೇ ಇರದಂಥ ಜರ್ಮನಿಯಲ್ಲಿ ಅಂಥದನ್ನು ಪ್ರತಿಪಾದಿಸುವುದು, ನಿರಂಕುಶ ಪ್ರಭುತ್ವ ವಾದದಿಂದ ಎಲೆಮರೆಯನ್ನು ತೆಗೆದು ಹಾಕಿ, ಅದರ ನಗ್ನತೆಗೆ ಸ್ವತಃ ತೆರೆ ಮರೆಯಾಗುವ ಅರ್ಥ ನೀಡುತ್ತದೆ," – ಎಂದು ಮತ್ತೆ ಒತ್ತಿತಿಳಿಸಿದರು.

ಎಂಗೆಲ್ಸ್‌ರ ಈ ಹಿತವಚನವನ್ನು ಗೂಡಿನಲ್ಲಿರಿಸಿದ ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯ ಅಧಿಕೃತ ನಾಯಕರ ಅಧಿಕ ಬಹುಮತದವರು ನಿಜಕ್ಕೂ ನಿರಂಕುಶಪ್ರಭುತ್ವಕ್ಕೆ ಸ್ವತಃ ತೆರೆಮರೆಯಾಗಿ ತೋರಿಸಿಕೊಂಡಿದ್ದಾರೆ.

> "...ಕಟ್ಟಕಡೆಯಲ್ಲಿ ಇಂಥ ನೀತಿಯು ಪಾರ್ಟಿಯನ್ನು ತಪ್ಪು ದಾರಿಯಲ್ಲಷ್ಟೆ ಕರೆದೊಯ್ಯಬಲ್ಲುದು. ಇಂಥ ನೀತಿಯನ್ನನುಸರಿಸುವವರು ಸರ್ವ ಸಾಮಾನ್ಯವಾದ ಅಮೂರ್ತ ರಾಜಕೀಯ ಪ್ರಶ್ನೆಗಳನ್ನು ಮುನ್ನೆಲೆಗೆ ತರುತ್ತಾರೆ. ತನ್ಮೂಲಕ, ಮೊದಲ ಮಹೋನ್ನತ ಘಟನೆಗಳ ಕಾಲದಲ್ಲಿ, ಮೊದಲ ರಾಜಕೀಯ ಮುಗ್ಗಟ್ಟಿನ ಸಮಯದಲ್ಲಿ ತಮಗೆ ತಾವೇ ಮುಂದೆ ಬಂದು ನಿಲ್ಲುವಂಥ ತಕ್ಷಣದ ಮೂರ್ತರೂಪದ ಪ್ರಶ್ನೆಗಳನ್ನು ಮರೆಮಾಚುತ್ತಾರೆ. ಇದರಿಂದ, ನಿರ್ಧಾರಕ ಘಳಿಗೆಯಲ್ಲಿ ಪಾರ್ಟಿಯು ಇದ್ದಕ್ಕಿದ್ದಂತೆ ನಿಸ್ಸಹಾಯಕವಾಗಿ ಕಾಣಿಸಿಕೊಳ್ಳುವುದಲ್ಲದೆ, ಅತ್ಯಂತ ನಿರ್ಧಾರಕವಾದ ಪ್ರಶ್ನೆಗಳಿಗೆ ಸಂಬಂಧಿಸಿ ಅವನ್ನು ಎಂದೂ ಚರ್ಚಿಸದೇ ಇದ್ದ ಕಾರಣದಿಂದಾಗಿ, ಅನಿಶ್ಚಯತೆ ಅಸಾಂಗತ್ಯಗಳು ಪಾರ್ಟಿಯಲ್ಲಿ ಆಡಳಿತ ನಡೆಸುವಂತಾಗುವುದಲ್ಲದೆ, ಬೇರಾವ ಪರಿಣಾಮ ಉಂಟಾಗಲು ಸಾಧ್ಯ?...

“ಹೀಗೆ ಇಂದಿನ ಕ್ಷಣಿಕ ಹಿತಗಳಿಗಾಗಿ ಮಹೋನ್ನತವಾದ ಪ್ರಮುಖವಾದ ಪರಿಗಣನೆಗಳನ್ನು ಮರೆಯುವುದು, ಮುಂದಿನ ಪರಿಣಾಮಗಳನ್ನು ಗಮನಕ್ಕೆ ತಂದುಕೊಳ್ಳದೆಯೇ ಈ ಕ್ಷಣದ ಯಶಸ್ಸಿಗಾಗಿ ಪ್ರಯತ್ನಿಸುವುದು ಹೋರಾಡುವುದು, ಚಳವಳಿಯ ಭವಿಷ್ಯತ್ತನ್ನು ಅದರ ವರ್ತಮಾನಕ್ಕಾಗಿ ಬಲಿಕೊಡುವುದು – ಇದನ್ನು ‘ಪ್ರಾಮಾಣಿಕ’ ಉದ್ದೇಶದಿಂದಲೇ ಮಾಡಬಹುದು. ಆದರೂ ಇದು ಸಂದರ್ಭಸಾಧಕವಾದವೇ ಆಗಿರುತ್ತದೆ. ಮತ್ತೆ ಈ ರೀತಿಯ ‘ಪ್ರಾಮಾಣಿಕ’ ಸಂದರ್ಭಸಾಧಕವಾದವು ಬಹುಶಃ ಎಲ್ಲಕ್ಕಿಂತ ಹೆಚ್ಚು ಅಪಾಯಕಾರಿಯಾದುದು....

“ಒಂದು ವಿಷಯ ಖಚಿತವೆನ್ನುವುದಾದರೆ ಅದು, ನಮ್ಮ ಪಾರ್ಟಿಯೂ ಕಾರ್ಮಿಕ ವರ್ಗವೂ ಪ್ರಜಾಸತ್ತಾತ್ಮಕ ಗಣತಂತ್ರದ ರೂಪದಲ್ಲಷ್ಟೆ ಅಧಿಕಾರಕ್ಕೆ ಬರಬಲ್ಲವು. ಫ್ರೆಂಚ್ ಮಹಾಕ್ರಾಂತಿ ಆಗಲೇ ತೋರಿಸಿಕೊಟ್ಟಿರುವಂತೆ ಇದೇ ಶ್ರಮಜೀವಿ ವರ್ಗದ ಸರ್ವಾಧಿಕಾರತ್ವಕ್ಕೆ ದಾರಿಮಾಡಿಕೊಡುವ ನಿರ್ದಿಷ್ಟ ರೂಪವೂ ಆಗಿದೆ....”

ಶ್ರಮಜೀವಿ ವರ್ಗದ ಸರ್ವಾಧಿಕಾರತ್ವಕ್ಕೆ ಪ್ರಜಾಸತ್ತಾತ್ಮಕ ಗಣತಂತ್ರವೇ ಅತ್ಯಂತ ಸಮೀಪದ ಮಾರ್ಗ ಎಂಬ ಮಾರ್ಕ್ಸ್‌ರವರ ಕೃತಿಗಳಲ್ಲೆಲ್ಲ ಹಾಸುಹೊಕ್ಕಾಗಿ ಸೇರಿಕೊಂಡಿರುವ ಮೂಲಭೂತ ವಿಚಾರವನ್ನು ಎಂಗೆಲ್ಸ್‌ರು ಇಲ್ಲಿ ವಿಶೇಷವಾಗಿ ಎದ್ದು ಕಾಣುವ ರೀತಿಯಲ್ಲಿ ಪುನರುಚ್ಚರಿಸಿದ್ದಾರೆ. ಏಕೆಂದರೆ ಅಂಥ ಗಣತಂತ್ರವು ಬಂಡವಾಳದ ಆಧಿಪತ್ಯವನ್ನು ಮತ್ತು ಅದರಿಂದಾಗಿ ಜನಸಮೂಹಗಳ ಮೇಲಿನ ದಬ್ಬಾಳಿಕೆಯನ್ನೂ ವರ್ಗ ಹೋರಾಟವನ್ನೂ, ಸ್ವಲ್ಪವೂ ದೂರಗೊಳಿಸದೆಯೇ, ಈ ಹೋರಾಟವು ವಿಸ್ತಾರಗೊಳ್ಳಲು, ಬೆಳೆಯಲು, ವಿಕಾಸಗೊಳ್ಳಲು ಮತ್ತು ತೀವ್ರಗೊಳ್ಳಲು ಅನಿವಾರ್ಯವಾಗಿ ದಾರಿ ಮಾಡಿಕೊಡುತ್ತದೆ. ಮರ್ದಿತ ಜನಸಮೂಹಗಳ ಮೂಲಭೂತ ಹಿತಗಳನ್ನು ತೃಪ್ತಿಗೊಳಿಸುವುದು ಸಾಧ್ಯವಾದ ಕೂಡಲೇ, ಆ ಸಾಧ್ಯತೆಯನ್ನು ಶ್ರಮಜೀವಿ ವರ್ಗದ ಸರ್ವಾಧಿಕಾರತ್ವದ ಮೂಲಕ, ಆ ಜನಸಮೂಹಗಳಿಗೆ ಶ್ರಮಜೀವಿ ವರ್ಗದ ನಾಯಕತ್ವ ನೀಡುವ ಮೂಲಕ, ಅನಿವಾರ್ಯವಾಗಿ ಮತ್ತು ಪೂರ್ತಿಯಾಗಿ ಈಡೇರಿಸಲಾಗುವುದು. ಇವೂ ಇಡೀ ದ್ವಿತೀಯ ಇಂಟರ್‌ನ್ಯಾಷನಲ್‌ಗೆ ಮಾರ್ಕ್ಸ್‌ವಾದದ “ಮರೆತ ಮಾತುಗಳು.” ಈ ಮಾತುಗಳನ್ನು ಮರೆಯಲಾಗಿದೆ ಎಂಬ ಸತ್ಯಾಂಶವನ್ನು 1917ರ ರಷ್ಯನ್ ಕ್ರಾಂತಿಯ ಮೊದಲ ಆರು ತಿಂಗಳುಗಳಲ್ಲಿ ಮೆನ್ಷೆವಿಕ್ ಪಾರ್ಟಿಯ ಇತಿಹಾಸವು ವಿಶೇಷ ಸ್ಪಷ್ಟತೆಯೊಂದಿಗೆ ತೋರಿಸಿಕೊಟ್ಟಿತು.

ಜನತೆಯ ಜನಾಂಗೀಯ ರಚನೆಗೆ ಸಂಬಂಧಿಸಿ, ಸಂಯುಕ್ತರಾಷ್ಟ್ರ ಗಣತಂತ್ರದ ವಿಷಯದ ಮೇಲೆ ಎಂಗೆಲ್ಸ್ ಹೀಗೆ ಬರೆದರು:

"ಇಂದಿನ ಜರ್ಮನಿಯು" (ಅದರ ಪ್ರತಿಗಾಮಿ ರಾಜಪ್ರಭುತ್ವವಾದಿ ಸಂವಿಧಾನ, ದೇಶವನ್ನು ಸಣ್ಣಪುಟ್ಟ ರಾಜ್ಯಗಳನ್ನಾಗಿ ವಿಭಜಿಸುವ ಅದರ ಅಷ್ಟೇ ಪ್ರತಿಗಾಮಿಯಾದ ಲಕ್ಷಣ, 'ಪ್ರಷ್ಯನ್‌ವಾದ'ದ ವಿಶಿಷ್ಟ ಲಕ್ಷಣಗಳನ್ನೆಲ್ಲ ಇಡೀ ಜರ್ಮನಿಯಲ್ಲಿ ವಿಲೀನಗೊಳಿಸುವ ಬದಲು ಅವನ್ನು ಉಳಿಸಿಕೊಂಡೇ ಹೋಗುವ ವಿಭಜನೆ, ಇವೆಲ್ಲವುಗಳಿರುವ ಜರ್ಮನಿಯು) "ಸ್ಥಳವನ್ನು ಬೇರೆ ಯಾವುದು ತೆಗೆದುಕೊಳ್ಳಬೇಕು? ನನ್ನ ಅಭಿಪ್ರಾಯದಲ್ಲಿ, ಶ್ರಮಜೀವಿ ವರ್ಗವು ಏಕೈಕ ಹಾಗೂ ಅವಿಭಾಜ್ಯ ಗಣತಂತ್ರದ ರೂಪವನ್ನಷ್ಟೆ ಬಳಸಿಕೊಳ್ಳಬಲ್ಲುದು. ಸಂಯುಕ್ತ ಸಂಸ್ಥಾನಗಳ ಬಹುವಿಶಾಲ ಭೂಪ್ರದೇಶದಲ್ಲಿ ಸಂಯುಕ್ತರಾಷ್ಟ್ರ ಗಣತಂತ್ರವೊಂದು ಇನ್ನೂ ಒಟ್ಟಿನ ಮೇಲೆ ಆವಶ್ಯಕತೆಯಾಗಿದೆ – ಪೌರ್ವಾತ್ಯ ಸಂಸ್ಥಾನಗಳಲ್ಲಿ ಅದು ಆಗಲೇ ಒಂದು ಆತಂಕವಾಗತೊಡಗಿದ್ದರೂ. ಎರಡು ದ್ವೀಪಗಳಲ್ಲಿ ನಾಲ್ಕು ಜನಾಂಗಗಳ ಜನರು ವಾಸಿಸುತ್ತಿರುವ ಮತ್ತು ಒಂದೇ ಪಾರ್ಲಿಮೆಂಟ್ ಇದ್ದರೂ ಮೂರು ವಿಭಿನ್ನ ಶಾಸನ ವಿಧಾನಗಳು ಆಗಲೇ ಪಕ್ಕಪಕ್ಕದಲ್ಲಿ ಅಸ್ತಿತ್ವದಲ್ಲಿರುವ ಬ್ರಿಟನ್‌ನಲ್ಲಿ ಅದು ಮುಂದೆ ಇಟ್ಟ ಒಂದು ಹೆಜ್ಜೆಯಾಗುತ್ತಿತ್ತು. ಪುಟ್ಟ ಸ್ವಿಟ್ಸರ್ಲೆಂಡ್‌ನಲ್ಲಿ ಅದು ತುಂಬ ಕಾಲದಿಂದ ಒಂದು ಆತಂಕವಾಗಿ ಇದ್ದುಕೊಂಡು ಬಂದಿದೆ. ಸ್ವಿಟ್ಸರ್ಲೆಂಡು ಐರೋಪ್ಯ ರಾಜ್ಯ ವ್ಯವಸ್ಥೆಯಲ್ಲಿ ಶುದ್ಧ ನಿಷ್ಕ್ರಿಯ ಸದಸ್ಯನಾಗಿರಲಷ್ಟೆ ತೃಪ್ತಿಪಟ್ಟುಕೊಂಡಿರುವ ಕಾರಣದಿಂದಷ್ಟೆ ಅದನ್ನು ಸಹಿಸಿಕೊಂಡಿರಲಾಗಿದೆ, ಜರ್ಮನಿಗೆ ಸ್ವಿಸ್ ಮಾದರಿಯ ಸಂಯುಕ್ತರಾಷ್ಟ್ರ ಪ್ರಭುತ್ವವು ದೊಡ್ಡ ಹೆಜ್ಜೆ ಹಿಂದಿಟ್ಟಂತಾಗುತ್ತಿತ್ತು. ಒಕ್ಕೂಟ ರಾಜ್ಯವನ್ನು ಸಂಪೂರ್ಣವಾಗಿ ಏಕೀಕೃತವಾದ ರಾಜ್ಯದಿಂದ ಎರಡು ಅಂಶಗಳು ಪ್ರತ್ಯೇಕಿಸಿ ತೋರಿಸುತ್ತವೆ: ಮೊದಲನೆಯದು, ಪ್ರತಿಯೊಂದು ಸದಸ್ಯ ರಾಜ್ಯವೂ, ಪ್ರತಿಯೊಂದು ಸಂಸ್ಥಾನವೂ ತನ್ನದೇ ಸಿವಿಲ್ ಹಾಗೂ ಕ್ರಿಮಿನಲ್ ಶಾಸಕಾಂಗ ಹಾಗೂ ನ್ಯಾಯಾಂಗ ಪದ್ಧತಿಯನ್ನು ಹೊಂದಿರುತ್ತದೆ; ಎರಡನೆಯದು, ಜನತಾ ಸದನದ ಜೊತೆಗೆ ಒಂದು ಸಂಯುಕ್ತ ರಾಷ್ಟ್ರ ಸದನವೂ ಇರುತ್ತದೆ. ಅದರಲ್ಲಿ ಪ್ರತಿಯೊಂದು ಸಂಸ್ಥಾನವೂ, ದೊಡ್ಡದಾಗಲೀ ಸಣ್ಣದಾಗಲೀ ಅದಕ್ಕೆ ತಕ್ಕಂತೆ ಮತ ನೀಡುತ್ತದೆ." ಜರ್ಮನಿಯಲ್ಲಿ ಒಕ್ಕೂಟ ರಾಜ್ಯವು ಸಂಪೂರ್ಣವಾಗಿ ಏಕೀಕೃತವಾದ ರಾಜ್ಯಕ್ಕೆ ಸ್ಥಿತ್ಯಂತರ ರೂಪವಾಗಿದೆ ಮತ್ತು 1866 ಹಾಗೂ 1870ರಲ್ಲಿ "ಮೇಲಿನಿಂದ ನಡೆದ ಕ್ರಾಂತಿ"[81]ಯನ್ನು ಹಿಮ್ಮುಖಗೊಳಿಸಬಾರದು, ಆದರೆ "ಕೆಳಗಿನಿಂದ ನಡೆಸುವ ಚಳುವಳಿ"ಯಿಂದ ಪೂರಕಗೊಳಿಸಬೇಕು.

ರಾಜ್ಯದ ರೂಪಗಳ ಬಗೆಗೆ ಎಂಗೆಲ್ಸ್‌ರು ನಿರ್ಲಕ್ಷ್ಯದಿಂದೇನೂ ಇರಲಿಲ್ಲ. ಬದಲು ಅವರು ಪ್ರತಿಯೊಂದೂ ಪ್ರಸಂಗದ ಸ್ಪಷ್ಟ ಚಾರಿತ್ರಿಕ ವೈಚಿತ್ರ್ಯಗಳಿಗನುಗುಣವಾಗಿ ಸ್ಥಿತ್ಯಂತರ ರೂಪಗಳನ್ನು ಅತ್ಯಂತ ಕೂಲಂಕಷತೆಯೊಂದಿಗೆ, ಯಾವುದೇ ಸ್ಥಿತ್ಯಂತರ ರೂಪವು ಯಾವುದರಿಂದ ಯಾವುದಕ್ಕೆ ಹೋಗುತ್ತಿದೆ ಎಂಬುದನ್ನು ಸಿದ್ಧಪಡಿಸಲೋಸುಗ ವಿಶ್ಲೇಷಿಸಲು ಯತ್ನಿಸಿದರು.

ವಿಷಯವನ್ನು ಶ್ರಮಜೀವಿ ವರ್ಗದ ಮತ್ತು ಶ್ರಮಜೀವಿ ವರ್ಗ ಕ್ರಾಂತಿಯ ದೃಷ್ಟಿಯಿಂದ ವಿವೇಚಿಸುತ್ತ ಎಂಗೆಲ್ಸ್‌ರವರು ಮಾರ್ಕ್ಸ್‌ರವರಂತೆ ಪ್ರಜಾಸತ್ತಾತ್ಮಕ ಕೇಂದ್ರೀಯತಾವಾದವನ್ನು, ಏಕೈಕವಾದ ಅವಿಭಾಜ್ಯವಾದ ಗಣತಂತ್ರವನ್ನು, ಎತ್ತಿಹಿಡಿದರು. ಅವರು ಸಂಯುಕ್ತರಾಷ್ಟ್ರ ಗಣತಂತ್ರವನ್ನು ಅಪವಾದವನ್ನಾಗಿ, ಬೆಳವಣಿಗೆಗೆ ಆತಂಕವನ್ನಾಗಿ ಅಥವಾ ರಾಜಪ್ರಭುತ್ವದಿಂದ ಕೇಂದ್ರೀಕೃತ ಗಣತಂತ್ರಕ್ಕೆ ಸ್ಥಿತ್ಯಂತರ ರೂಪವಾಗಿ, ಕೆಲವು ವಿಶೇಷ ಪರಿಸ್ಥಿತಿಗಳಲ್ಲಿ "ಮುಂದೆ ಇಟ್ಟ ಹೆಜ್ಜೆ"ಯನ್ನಾಗಿ ಭಾವಿಸಿದರು. ಈ ವಿಶೇಷ ಪರಿಸ್ಥಿತಿಗಳಲ್ಲಿ ಜನಾಂಗೀಯ ಪ್ರಶ್ನೆಯು ಒಂದೆಂದು ಅವರು ಅದನ್ನು ಮುನ್‌ಸಾಲಿನಲ್ಲಿ ಇರಿಸುತ್ತಾರೆ.

ಸಣ್ಣ ರಾಜ್ಯಗಳ ಪ್ರತಿಗಾಮಿ ಸ್ವಭಾವವನ್ನೂ ಮತ್ತು ಅದನ್ನು ಕೆಲವು ಸ್ಪಷ್ಟ ಪ್ರಸಂಗಗಳಲ್ಲಿ ಜನಾಂಗೀಯ ಪ್ರಶ್ನೆಯಿಂದ ಮರೆಮಾಚುವುದನ್ನೂ ನಿರ್ದಾಕ್ಷಿಣ್ಯವಾಗಿ ಟೀಕಿಸಿದರೂ, ಎಂಗೆಲ್ಸ್‌ರವರು ಹಾಗೂ ಮಾರ್ಕ್ಸ್‌ರವರು, ಜನಾಂಗೀಯ ಪ್ರಶ್ನೆಯನ್ನು ತಳ್ಳಿಹಾಕುವ ಅತ್ಯಲ್ಪ ಬಯಕೆಯನ್ನೂ – ಡಚ್ ಮತ್ತು ಪೋಲಿಷ್ ಮಾರ್ಕ್ಸ್‌ವಾದಿಗಳು "ತಮ್ಮ" ಪುಟ್ಟ ರಾಜ್ಯಗಳ ಅಲ್ಪಬುದ್ಧಿಯ ಸಂಕುಚಿತಮನಸ್ಕ ಜನಾಂಗೀಯತೆಯನ್ನು ಸಂಪೂರ್ಣವಾಗಿ ಸಮರ್ಥನೀಯವಾಗಿಯೇ ವಿರೋಧಿಸುತ್ತ ಆಗಾಗ್ಗೆ ವ್ಯಕ್ತಪಡಿಸುವ ಬಯಕೆಯನ್ನು – ಎಂದೂ ತೋರಲಿಲ್ಲ.

ಬ್ರಿಟನ್‌ಗೆ ಸಂಬಂಧಿಸಿಯೂ – ಭೌಗೋಳಿಕ ಪರಿಸ್ಥಿತಿಗಳೂ, ಒಂದು ಸಾಮಾನ್ಯ ಭಾಷೆಯೂ, ಅನೇಕ ಶತಮಾನಗಳ ಇತಿಹಾಸವೂ ದೇಶದ ನಾನಾ ಸಣ್ಣ ವಿಭಾಗಗಳಲ್ಲಿ ಜನಾಂಗೀಯ ಪ್ರಶ್ನೆಗೆ "ಕೊನೆ ಹಾಕಿ"ದಂತೆ ಕಂಡುಬರುವ ಆ ದೇಶಕ್ಕೆ ಸಂಬಂಧಿಸಿಯೂ – ಎಂಗೆಲ್ಸ್‌ರು ಜನಾಂಗೀಯ ಪ್ರಶ್ನೆಯನ್ನು ಇನ್ನೂ ಗತಕಾಲದ ವಿಷಯವಾಗಿಲ್ಲವೆಂದೇ ಪರಿಗಣಿಸಿದರು ಮತ್ತು ತತ್ಫಲವಾಗಿ ಸಂಯುಕ್ತರಾಷ್ಟ್ರ ಗಣತಂತ್ರದ ಸ್ಥಾಪನೆಯು "ಒಂದು ಹೆಜ್ಜೆ ಮುಂದೆ" ಇಟ್ಟಂತೆಯೇ ಆಗುವುದು ಎಂಬುದನ್ನು ಮನ್ನಿಸಿದರು. ಎಂಗೆಲ್ಸ್‌ರು ಸಂಯುಕ್ತರಾಷ್ಟ್ರ ಗಣತಂತ್ರದ ನ್ಯೂನತೆಗಳನ್ನು ಟೀಕಿಸುವುದನ್ನು ಬಿಟ್ಟುಕೊಡುವ ಅಥವಾ ಏಕೀಕೃತ ಹಾಗೂ ಕೇಂದ್ರೀಕೃತ ಪ್ರಜಾಸತ್ತಾತ್ಮಕ ಗಣತಂತ್ರಕ್ಕಾಗಿ ಅತ್ಯಂತ ನಿರ್ಧಾರಿತ ಪ್ರತಿಪಾದನೆ ಮಾಡುವ ಹಾಗೂ ಹೋರಾಟ ನಡೆಸುವ ವಿಚಾರವನ್ನು ಪರಿತ್ಯಜಿಸುವ ಸೂಚನೆ ಇಲ್ಲಿ ಲವಲೇಶವೂ ಇಲ್ಲವೆನ್ನಿ.

ಆದರೆ ಎಂಗೆಲ್ಸ್‌ರು ಪ್ರಜಾಸತ್ತಾತ್ಮಕ ಕೇಂದ್ರೀಯತಾವಾದದ ವಿಚಾರವನ್ನು ಬೂರ್ಷ್ವಾ ಹಾಗೂ ಅರಾಜಕತಾವಾದಿಗಳನ್ನೂ ಒಳಗೊಂಡ ಪಟಿ ಬೂರ್ಷ್ವಾ

ಸಿದ್ಧಾಂತಿಗಳು ತಿಳಿದುಕೊಳ್ಳುವ ಅಧಿಕಾರಶಾಹಿ ಅರ್ಥದಲ್ಲಿ ಎಷ್ಟು ಮಾತ್ರವೂ ತಿಳಿದುಕೊಳ್ಳಲಿಲ್ಲ. ಅವರ ಕೇಂದ್ರೀಯತಾವಾದದ ವಿಚಾರವು, ರಾಜ್ಯದ ಐಕ್ಯತೆಯನ್ನು "ಕಮ್ಯೂನ್"ಗಳೂ ಜಿಲ್ಲೆಗಳೂ ಸ್ವಯಮೇಚ್ಛೆಯಿಂದ ಸಂರಕ್ಷಿಸುವುದು, ಎಲ್ಲ ಅಧಿಕಾರಶಾಹಿ ಅಭ್ಯಾಸಗಳನ್ನೂ ಎಲ್ಲ ಮೇಲಿನಿಂದ "ಆಜ್ಞೆ" ನೀಡುವುದನ್ನೂ ತೊಡೆದು ಹಾಕುವುದು, ಇವುಗಳನ್ನು ಮೇಲ್ಮೈಸುವಂಥ ವಿಶಾಲ ಸ್ಥಳೀಯ ಸ್ವಯಮಾಡಳಿತ ವ್ಯವಸ್ಥೆಯನ್ನು ಎಷ್ಟು ಮಾತ್ರವೂ ಹೊರತಾಗಿಸಲಿಲ್ಲ. ರಾಜ್ಯದ ಬಗೆಗೆ ಮಾರ್ಕ್ಸ್‌ವಾದದ ಕಾರ್ಯಕ್ರಮಾತ್ಮಕ ಅಭಿಪ್ರಾಯಗಳನ್ನು ಮುಂದಕ್ಕೊಯ್ಯುತ್ತ ಎಂಗೆಲ್ಸ್ ಬರೆಯುತ್ತಾರೆ:

> "ಆದ್ದರಿಂದ ಒಂದು ಏಕೀಕೃತ ಗಣತಂತ್ರ – ಆದರೆ 1798ರಲ್ಲಿ ಸ್ಥಾಪಿತವಾದ ಸಾಮ್ರಾಟನಿಲ್ಲದ ಸಾಮ್ರಾಜ್ಯವಾದ, ಈಗಿನ ಫ್ರೆಂಚ್ ಗಣತಂತ್ರದ ಅರ್ಥದಲ್ಲಲ್ಲ. 1792ರಿಂದ 1798ರವರೆಗೆ ಒಂದೊಂದೂ ಫ್ರೆಂಚ್ ಇಲಾಖೆ, ಒಂದೊಂದೂ ಕಮ್ಯೂನ್ (Gemeinde) ಅಮೆರಿಕನ್ ಮಾದರಿಯಲ್ಲಿ ಸಂಪೂರ್ಣ ಸ್ವಯಮಾಡಳಿತ ಹೊಂದಿದ್ದಿತು. ಇದನ್ನೇ ನಾವೂ ಪಡೆಯಬೇಕು. ಸ್ವಯಮಾಡಳಿತವನ್ನು ಹೇಗೆ ಸಂಘಟಿಸಬೇಕು ಮತ್ತು ಅಧಿಕಾರಶಾಹಿ ಇಲ್ಲದೆ ಹೇಗೆ ನಿರ್ವಹಣೆ ನಡೆಸಬೇಕು ಎಂಬುದನ್ನು ನಮಗೆ ಅಮೆರಿಕ ಮತ್ತು ಮೊದಲ ಫ್ರೆಂಚ್ ಗಣತಂತ್ರ ತೋರಿಸಿಕೊಟ್ಟಿವೆ, ಇಂದಿಗೂ ಆಸ್ಟ್ರೇಲಿಯಾ, ಕೆನಡಾ ಮತ್ತು ಇತರ ಇಂಗ್ಲಿಷ್ ವಸಾಹತುಗಳು ತೋರಿಸಿಕೊಡುತ್ತಿವೆ. ಈ ಮಾದರಿಯ ಪ್ರಾಂತೀಯ (ಪ್ರಾದೇಶಿಕ) ಹಾಗೂ ಕಮ್ಯೂನ್ ಸ್ವಯಮಾಡಳಿತವು ಸ್ವಿಸ್ ಸಂಯುಕ್ತರಾಷ್ಟ್ರ ವ್ಯವಸ್ಥೆಯಲ್ಲಿರುವುದಕ್ಕಿಂತ ಎಷ್ಟೋ ಹೆಚ್ಚು ಸ್ವತಂತ್ರವಾಗಿರುತ್ತದೆ. ನಿಜ, ಸ್ವಿಸ್ ಸಂಯುಕ್ತರಾಷ್ಟ್ರ ವ್ಯವಸ್ಥೆಯಲ್ಲಿ ಸಂಸ್ಥಾನವು, ಬುಂದ್‌ಗೆ (ಅಂದರೆ ಇಡೀ ಸಂಯುಕ್ತರಾಷ್ಟ್ರ ರಾಜ್ಯಕ್ಕೆ) ಸಂಬಂಧಿಸಿ ತುಂಬ ಸ್ವತಂತ್ರವಾಗಿದೆಯಷ್ಟೆ ಅಲ್ಲ, ಜಿಲ್ಲಾ (Bezirk) ಹಾಗೂ ಕಮ್ಯೂನ್‌ಗೆ ಸಂಬಂಧಿಸಿಯೂ ಸ್ವತಂತ್ರವಾಗಿದೆ. ಸಂಸ್ಥಾನ ಸರಕಾರಗಳು ಜಿಲ್ಲಾ ಗವರ್ನರುಗಳನ್ನೂ (Bezirksstatt-halter) ಮುಖ್ಯಾಧಿಕಾರಿಗಳನ್ನೂ ನೇಮಿಸುತ್ತವೆ. ಇದು ಇಂಗ್ಲಿಷ್ ಮಾತನಾಡುವ ದೇಶಗಳಲ್ಲಿ ಕಾಣಬರುವುದಿಲ್ಲ. ಇದನ್ನು ನಾವು ಇಲ್ಲಿ ಭವಿಷ್ಯತ್ತಿನಲ್ಲಿ ಪ್ರಷ್ಯನ್ Landräte ಹಾಗೂ Regierungsräte ಗಳನ್ನು (ಕಮಿಷನರುಗಳು, ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿಗಳು, ಗವರ್ನರುಗಳು ಮತ್ತು ಒಟ್ಟಿನಲ್ಲಿ ಮೇಲಿನಿಂದ ನೇಮಕವಾಗುವ ಎಲ್ಲ ಅಧಿಕಾರಿಗಳನ್ನೂ) ರದ್ದುಗೊಳಿಸುವಷ್ಟೆ ದೃಢತೆಯೊಂದಿಗೆ ರದ್ದುಗೊಳಿಸಬಯಸುತ್ತೇವೆ." ಇದಕ್ಕನುಗುಣವಾಗಿ ಎಂಗೆಲ್ಸ್‌ರವರು ಕಾರ್ಯ

ಕ್ರಮದಲ್ಲಿ ಸ್ವಯಮಾಡಳಿತ ವಿಭಾಗಕ್ಕೆ ಕೆಳಗಿನ ಮಾತುಗಳನ್ನು ಸಲಹೆ ಮಾಡುತ್ತಾರೆ: "ಸಾರ್ವತ್ರಿಕ ಮತದಾನದಿಂದ ಚುನಾಯಿತರಾದ ಅಧಿಕಾರಿಗಳ ಮೂಲಕ ಪ್ರಾಂತಗಳಿಗೆ (ಗುಬರ್ನಿಯಾ ಅಥವಾ ಪ್ರದೇಶಗಳಿಗೆ), ಜಿಲ್ಲೆಗಳಿಗೆ ಹಾಗೂ ಕಮ್ಯೂನ್‌ಗಳಿಗೆ ಸಂಪೂರ್ಣ ಸ್ವಯಮಾಡಳಿತ, ರಾಜ್ಯದಿಂದ ನೇಮಕವಾದ ಎಲ್ಲ ಸ್ಥಳೀಯ ಹಾಗೂ ಪ್ರಾಂತೀಯ ಅಧಿಕಾರಿಗಳ ರದ್ದತಿ."

ಈ ವಿಷಯಕ್ಕೆ ಸಂಬಂಧಿಸಿ (ಈ ಒಂದೇ ವಿಷಯಕ್ಕೆ ಸಂಬಂಧಿಸಿ ಎಂದೇನೂ ಅಲ್ಲವೆನ್ನಿ) ನಮ್ಮ ಕಪಟ ಕ್ರಾಂತಿಕಾರಿ ಕಪಟ ಪ್ರಜಾಪ್ರಭುತ್ವದ ಕಪಟ ಸಮಾಜವಾದಿ ಪ್ರತಿನಿಧಿಗಳು ಹೇಗೆ ಪ್ರಜಾಪ್ರಭುತ್ವದಿಂದ ಎದ್ದುಕಾಣುವಂತೆ ಅಡ್ಡದಾರಿ ಹಿಡಿದಿದ್ದಾರೆಂಬುದನ್ನು ನಾನಾಗಲೇ 'ಪ್ರಾವ್ದ' ಪತ್ರಿಕೆ[82]ಯಲ್ಲಿ (ನಂ. 68, ಮೇ 28, 1917) – ಇದನ್ನು ಕೇರೆನ್‌ಸ್ಕಿ ಮತ್ತಿತರ "ಸಮಾಜವಾದಿ ಸಚಿವರು"ಗಳ ಸರಕಾರವು ದಮನ ಮಾಡಿತು – ಎತ್ತಿ ತೋರಿಸಿದ್ದೇನೆ.* ಸಹಜವಾಗಿಯೇ, ಸಾಮ್ರಾಜ್ಯಶಾಹಿ ಬೂರ್ಷ್ವಾಸೀಯೊಂದಿಗೆ "ಸಮ್ಮಿಶ್ರ ಕೂಟ"ದಲ್ಲಿದ್ದುಕೊಂಡು ತಮ್ಮನ್ನು ಬಂಧಿಸಿಕೊಂಡಿರುವ ಜನರು ಈ ಟೀಕೆಯನ್ನು ಕಿವಿಯ ಮೇಲೆ ಹಾಕಿಕೊಳ್ಳರು.

ಸಂಯುಕ್ತರಾಷ್ಟ್ರ ವ್ಯವಸ್ಥೆಯ ಗಣತಂತ್ರವು ಕೇಂದ್ರೀಕೃತ ಗಣತಂತ್ರಕ್ಕಿಂತ ಅವಶ್ಯವಾಗಿಯೇ ಹೆಚ್ಚಿನ ಪ್ರಮಾಣದ ಸ್ವಾತಂತ್ರ್ಯವನ್ನು ನೀಡುತ್ತದೆ ಎಂಬ ಪೂರ್ವಾಗ್ರಹವು ವಿಶೇಷವಾಗಿ ಪೆಟಿ ಬೂರ್ಷ್ವಾ ಪ್ರಜಾಪ್ರಭುತ್ವವಾದಿಗಳ ಮಧ್ಯೆ ಅತ್ಯಂತ ವ್ಯಾಪಕವಾಗಿ ಬೆಳೆದಿದೆ. ಎಂಗೆಲ್ಸ್‌ರವರು ಸತ್ಯಾಂಶಗಳ ನೆರವಿನೊಂದಿಗೆ ಮತ್ತು ಅತ್ಯಂತ ನಿಷ್ಕೃಷ್ಟ ನಿದರ್ಶನದೊಂದಿಗೆ ಈ ಪೂರ್ವಾಗ್ರಹವನ್ನು ತಪ್ಪೆಂದು ಸಾಧಿಸಿ ತೋರಿದರು ಎಂಬುದನ್ನು ಗಮನಿಸುವುದು ತುಂಬ ಮುಖ್ಯವಾದುದಾಗಿದೆ. ಆ ಪೂರ್ವಾಗ್ರಹ ತಪ್ಪಾದುದು. ಎಂಗೆಲ್ಸ್‌ರು 1792-1798ರ ಕೇಂದ್ರೀಕೃತ ಫ್ರೆಂಚ್ ಗಣತಂತ್ರ ಹಾಗೂ ಸಂಯುಕ್ತರಾಷ್ಟ್ರ ವ್ಯವಸ್ಥೆಯ ಸ್ವಿಸ್ ಗಣತಂತ್ರಗಳಿಗೆ ಸಂಬಂಧಿಸಿ ಉದಾಹರಿಸಿದ ಸತ್ಯಾಂಶಗಳು ಅದನ್ನು ತಪ್ಪೆಂದು ಸಾಧಿಸಿ ತೋರುತ್ತವೆ. ನಿಜಕ್ಕೂ ಪ್ರಜಾಸತ್ತಾತ್ಮಕವಾದ ಕೇಂದ್ರೀಕೃತ ಗಣತಂತ್ರವು ಸಂಯುಕ್ತರಾಷ್ಟ್ರ ಗಣತಂತ್ರಕ್ಕಿಂತ ಹೆಚ್ಚು ಸ್ವಾತಂತ್ರ್ಯವನ್ನು ನೀಡಿತು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಇತಿಹಾಸದಲ್ಲಿ ತಿಳಿದುಬಂದಿರುವಂಥ ಅತ್ಯಂತ ಹೆಚ್ಚಿನ ಪ್ರಮಾಣದ ಸ್ಥಳೀಯ, ಪ್ರಾಂತೀಯ ಮತ್ತಿತರ ಸ್ವಾತಂತ್ರ್ಯವನ್ನು ಕೇಂದ್ರೀಕೃತ ಗಣತಂತ್ರ ನೀಡಿತೇ ಹೊರತು ಸಂಯುಕ್ತರಾಷ್ಟ್ರ ಗಣತಂತ್ರವಲ್ಲ.

---

*ವಿ. ಐ. ಲೆನಿನ್, "ಒಂದು ತಾತ್ವಿಕ ಪ್ರಶ್ನೆ (ಪ್ರಜಾತಂತ್ರವಾದದ 'ಮರೆತ ಮಾತುಗಳು')." – ಸಂ.

ನಮ್ಮ ಪಾರ್ಟಿಯ ಪ್ರಚಾರ ಹಾಗೂ ಪ್ರಕ್ಷೋಭೆಯಲ್ಲಿ ಈ ಸಂಗತಿಗೆ ನೋಡಿದರೆ ಇಡೀ ಸಂಯುಕ್ತರಾಷ್ಟ್ರ ಹಾಗೂ ಕೇಂದ್ರೀಕೃತ ಗಣತಂತ್ರದ ಮತ್ತು ಸ್ಥಳೀಯ ಸ್ವಯಮಾಡಳಿತದ ಪ್ರಶ್ನೆಗೆ, ಸಾಕಷ್ಟು ಗಮನ ನೀಡಲಾಗಿಲ್ಲ.

## 5. ಮಾರ್ಕ್ಸ್‌ರವರ 'ಫ್ರಾನ್ಸಿನಲ್ಲಿ ಅಂತರ್ಯುದ್ಧ' ಗ್ರಂಥಕ್ಕೆ 1891ರ ಮುನ್ನುಡಿ

'ಫ್ರಾನ್ಸಿನಲ್ಲಿ ಅಂತರ್ಯುದ್ಧ' ಗ್ರಂಥದ ಮೂರನೆಯ ಆವೃತ್ತಿಗೆ ಬರೆದ ತಮ್ಮ ಮುನ್ನುಡಿಯಲ್ಲಿ (ಈ ಮುನ್ನುಡಿಯ ತೇದಿ ಮಾರ್ಚ್ 18, 1891, ಇದು ಮೊದಲು 'ನೋಯೆ ತ್ಸೈತ್'ನಲ್ಲಿ ಪ್ರಕಟವಾಗಿದ್ದಿತು) ಎಂಗೆಲ್ಸ್‌ರು, ರಾಜ್ಯದ ಬಗೆಗೆ ಮನೋಧರ್ಮಕ್ಕೆ ಸಂಬಂಧಿಸಿ ಕೆಲವು ಸ್ವಾರಸ್ಯಕರ ವಿಷಯಗಳನ್ನು ಪ್ರಾಸಂಗಿಕವಾಗಿ ಹೇಳಿರುವುದರ ಜೊತೆಗೆ ಕಮ್ಯೂನ್‌ನಿಂದ ಕಲಿತ ಪಾಠಗಳ ಅಸಾಧಾರಣವಾಗಿ ಸ್ಪಷ್ಟವಾದ ಸಾರಾಂಶವನ್ನೂ ನೀಡಿದ್ದಾರೆ.[83] ಕಮ್ಯೂನ್‌ನಂತರದ 20 ವರ್ಷಗಳಲ್ಲಿ ಈ ಗ್ರಂಥಕರ್ತರು ಸಂಗ್ರಹಿಸಿದ ಇಡೀ ಅನುಭವವು ಈ ಸಾರಾಂಶವನ್ನು ಹೆಚ್ಚು ಪ್ರಗಾಢವನ್ನಾಗಿ ಮಾಡಿತು. ಅದು ಜರ್ಮನಿಯಲ್ಲಿ ವಿಶಾಲವಾಗಿ ವ್ಯಾಪಕವಾಗಿದ್ದ "ರಾಜ್ಯ ವಿಷಯದ ಮೂಢನಂಬಿಕೆ"ಗಳ ವಿರುದ್ಧ ಸ್ಪಷ್ಟವಾಗಿ ನಿರ್ದೇಶಿತವಾಗಿದ್ದಿತು. ಇದನ್ನು ಈಗ ಪರಿಗಣಿಸುತ್ತಿರುವ ಪ್ರಶ್ನೆಯ ಕುರಿತು ಮಾರ್ಕ್ಸ್‌ವಾದದ ಕೊನೆಯ ಮಾತು ಎಂದು ನ್ಯಾಯವಾಗಿ ಹೇಳಬಹುದು.

> ಫ್ರಾನ್ಸ್‌ನಲ್ಲಿ ಕಾರ್ಮಿಕರು ಪ್ರತಿಯೊಂದು ಕ್ರಾಂತಿಯನಂತರವೂ ಶಸ್ತ್ರಸಜ್ಜಿತರಾಗಿ ಹೊರಬಂದರು, ಎಂದು ಎಂಗೆಲ್ಸ್ ಬರೆದರು. "ಆದ್ದರಿಂದ ಕಾರ್ಮಿಕರನ್ನು ನಿಶ್ಶಸ್ತ್ರಗೊಳಿಸುವುದು ರಾಜ್ಯದ ಅಧಿಕಾರಸೂತ್ರ ಹಿಡಿದಿದ್ದ ಬೂರ್ಷ್ವಾಸೀಯು ನೆರವೇರಿಸಿದ ಪ್ರಥಮ ಆಜ್ಞೆಯಾಗಿದ್ದಿತು. ಹಾಗಾಗಿಯೇ, ಕಾರ್ಮಿಕರು ಜಯಗಳಿಸಿದ ಪ್ರತಿಯೊಂದು ಕ್ರಾಂತಿಯನಂತರವೂ, ಕಾರ್ಮಿಕರ ಸೋಲಿನಲ್ಲಿ ಕೊನೆಗೊಳ್ಳುವ ಒಂದು ಹೊಸ ಹೋರಾಟವು ಪ್ರಾರಂಭವಾದುದು...."

ಬೂರ್ಷ್ವಾ ಕ್ರಾಂತಿಗಳ ಅನುಭವದ ಈ ಸಾರಾಂಶವು ಎಷ್ಟು ಅಡಕವೋ ಅಷ್ಟೂ ಅರ್ಥಗರ್ಭಿತವಾಗಿದೆ. ವಿಷಯದ ಸಾರವನ್ನು – ಇತರ ವಿಷಯಗಳ ಜೊತೆಗೆ ರಾಜ್ಯದ ಪ್ರಶ್ನೆ ಕುರಿತಾದ ವಿಷಯವನ್ನೂ (ಮರ್ದಿತ ವರ್ಗವು ಶಸ್ತ್ರಾಸ್ತ್ರಗಳನ್ನು ಹೊಂದಿದೆಯೆ?) – ಇಲ್ಲಿ ಅತ್ಯಂತ ಚೆನ್ನಾಗಿ ಗ್ರಹಿಸಲಾಗಿದೆ. ಈ ಸಾರವನ್ನೇ ಬೂರ್ಷ್ವಾ ಸಿದ್ಧಾಂತದ ಪ್ರಭಾವಕ್ಕೊಳಗಾದ ಪ್ರಾಧ್ಯಾಪಕರೂ ಪೆಟಿ ಬೂರ್ಷ್ವಾ

ಪ್ರಜಾಪ್ರಭುತ್ವವಾದಿಗಳೂ ತುಂಬ ಆಗಾಗ್ಗೆ ಗಮನಕ್ಕೆ ತಂದುಕೊಳ್ಳದೆ ಹೋಗುವುದು. 1917ರ ರಷ್ಯನ್ ಕ್ರಾಂತಿಯಲ್ಲಿ ಈ ಬೂರ್ಷ್ವಾ ಕ್ರಾಂತಿಗಳ ರಹಸ್ಯವನ್ನು ಹೊರಗೆಡಹುವ ಗೌರವವು (ಕಾವೆನ್ಯಾಕ್ ಗೌರವವು) ಮೆನ್ಷೆವಿಕ್, ಕಪಟ ಮಾರ್ಕ್ಸ್‌ವಾದಿ ತ್ಸೆರೆತೇಲಿಗೆ ಸಂದಿತು. ಜೂನ್ 11ರ ತಮ್ಮ "ಐತಿಹಾಸಿಕ" ಭಾಷಣದಲ್ಲಿ ತ್ಸೆರೆತೇಲಿ, ಬೂರ್ಷ್ವಾಸೀಯು ಪೆತ್ರೊಗ್ರಾಡ್ ಕಾರ್ಮಿಕರನ್ನು ನಿಶ್ಶಸ್ತ್ರಗೊಳಿಸಲು ದೃಢ ನಿರ್ಧಾರ ಮಾಡಿದೆ ಎಂಬ ಗುಟ್ಟನ್ನು ರಟ್ಟು ಮಾಡಿದರು. ಈ ನಿರ್ಧಾರವು ತಮ್ಮದೇ ಎನ್ನುವಂತೆ, ಸರ್ವೇಸಾಮಾನ್ಯವಾಗಿ "ರಾಜ್ಯ"ಕ್ಕೆ ಆವಶ್ಯಕ ಎನ್ನುವಂತೆ ಮುಂದಿಟ್ಟಿದ್ದರೆನ್ನಿ ![84]

ತ್ಸೆರೆತೇಲಿಯವರ ಜೂನ್ 11ರ ಐತಿಹಾಸಿಕ ಭಾಷಣವು 1917ರ ಕ್ರಾಂತಿಯ ಪ್ರತಿ ಚರಿತ್ರಕಾರನಿಗೂ, ತ್ಸೆರೆತೇಲಿ ನಾಯಕತ್ವದ ಸಮಾಜವಾದಿ-ಕ್ರಾಂತಿಕಾರಿ ಹಾಗೂ ಮೆನ್ಷೆವಿಕ್ ಕೂಟವು ಹೇಗೆ ಕ್ರಾಂತಿಕಾರಿ ಶ್ರಮಜೀವಿ ವರ್ಗದ ವಿರುದ್ಧ ಹೋಗಿ ಬೂರ್ಷ್ವಾಸೀಯನ್ನು ಸೇರಿಕೊಂಡಿತು ಎಂಬುದಕ್ಕೆ ಸ್ಪಷ್ಟ ನಿದರ್ಶನ ಒದಗಿಸುತ್ತದೆ.

ಎಂಗೆಲ್ಸ್‌ರ ಮತ್ತೊಂದು ಪ್ರಾಸಂಗಿಕ ಹೇಳಿಕೆ – ಇದೂ ರಾಜ್ಯದ ಪ್ರಶ್ನೆಗೇ ಸಂಬಂಧಿಸಿದೆ – ಧರ್ಮದ ಪ್ರಶ್ನೆಯನ್ನು ವಿವೇಚಿಸುತ್ತದೆ. ಜರ್ಮನ್ ಸೋಷಲ್ ಡೆಮೊಕ್ರಾಟರು ಅಧಃಪತನಗೊಂಡು ಹೆಚ್ಚು ಹೆಚ್ಚು ಸಂದರ್ಭಸಾಧಕವಾದಿಗಳಾದರು ಹಾಗೂ "ಧರ್ಮವನ್ನು ಖಾಸಗಿ ವಿಷಯವೆಂದು ಘೋಷಿಸಲಾಗುವುದು" ಎಂಬ ಸುವಿಖ್ಯಾತ ಸೂತ್ರವನ್ನು ಸಂಕುಚಿತಮತೀಯ ರೀತಿಯಲ್ಲಿ ಹೆಚ್ಚು ಹೆಚ್ಚಾಗಿ ಅಪಾರ್ಥ ಮಾಡುವ ಸ್ಥಿತಿಗೆ ಜಾರಿದರು ಎಂಬುದು ಸುವಿಖ್ಯಾತವಾಗಿದೆ. ಅಂದರೆ ಅವರು ಈ ಸೂತ್ರವನ್ನು, ಧರ್ಮವು ಕ್ರಾಂತಿಕಾರಿ ಶ್ರಮಜೀವಿ ವರ್ಗದ ಪಾರ್ಟಿಗೂ ಒಂದು ಖಾಸಗಿ ವಿಷಯ ಎಂದು ಅರ್ಥಬರುವಂತೆ, ತಿರುಚಿ ಹೇಳಿದರು ! ! ಶ್ರಮಜೀವಿ ವರ್ಗದ ಕ್ರಾಂತಿಕಾರಿ ಕಾರ್ಯಕ್ರಮಕ್ಕೆ ಈ ರೀತಿ ಸಂಪೂರ್ಣವಾಗಿ ದ್ರೋಹ ಬಗೆದುದರ ವಿರುದ್ಧವೇ ಎಂಗೆಲ್ಸ್‌ರು ತೀವ್ರವಾಗಿ ಪ್ರತಿಭಟಿಸಿದುದು. 1891ರಲ್ಲಿ ಅವರು ತಮ್ಮ ಪಾರ್ಟಿಯಲ್ಲಿ ಸಂದರ್ಭಸಾಧಕವಾದದ ತೀರ ನಿಶ್ಶಕ್ತ ಆರಂಭವನ್ನಷ್ಟೆ ಕಂಡುಕೊಂಡರು. ಆದ್ದರಿಂದಲೇ ಅವರು ಅತ್ಯಂತ ಎಚ್ಚರಿಕೆಯಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು:

> "ಕಮ್ಯೂನ್‌ನಲ್ಲಿ ಬಹುಮಟ್ಟಿಗೆ ಕಾರ್ಮಿಕರಷ್ಟೆ ಅಥವಾ ಮನ್ನಣೆ ಪಡೆದ ಕಾರ್ಮಿಕ ಪ್ರತಿನಿಧಿಗಳಷ್ಟೆ ಕುಳಿತಿದ್ದುದರಿಂದ ಅದರ ನಿರ್ಧಾರಗಳು ನಿರ್ವಿವಾದವಾದ ಶ್ರಮಜೀವಿ ವರ್ಗದ ಲಕ್ಷಣಗಳನ್ನು ಹೊಂದಿದ್ದವು. ಗಣತಂತ್ರೀಯ ಬೂರ್ಷ್ವಾಸೀಯು ಕೇವಲ ಅಂಜುಕುಳಿತನದಿಂದಾಗಿ ಅನುಮೋದಿಸಲು ವಿಫಲಗೊಂಡಿದ್ದಂಥ, ಆದರೆ ಕಾರ್ಮಿಕ ವರ್ಗದ ಸ್ವತಂತ್ರ ಚಟುವಟಿಕೆಗೆ ಅವಶ್ಯ ಆಧಾರ ಒದಗಿಸುತ್ತಿದ್ದಂಥ – ರಾಜ್ಯಕ್ಕೆ ಸಂಬಂಧಿಸಿ

ಧರ್ಮವು ಶುದ್ಧ ಖಾಸಗಿ ವಿಷಯವಾಗಿದೆ ಎಂಬ ಸೂತ್ರವನ್ನು ಕಾರ್ಯಗತಗೊಳಿಸುವಂತಹ – ಸುಧಾರಣೆಗಳನ್ನು ಕಮ್ಯೂನ್ ಶಾಸನಗಳನ್ನಾಗಿ ಮಾಡಿತು; ಇಲ್ಲವೇ, ಅದು ಕಾರ್ಮಿಕ ವರ್ಗದ ನೇರ ಹಿತಗಳಿಗೆ ಅನುಗುಣವಾಗಿದ್ದಂಥ ಹಾಗೂ ಭಾಗಶಃ ಹಳೆಯ ಸಮಾಜ ವ್ಯವಸ್ಥೆಗೆ ಭಾರಿ ಪ್ರಹಾರ ನೀಡುತ್ತಿದ್ದಂಥ ಶಾಸನಗಳನ್ನು ಘೋಷಿಸಿತು.

ಎಂಗೆಲ್ಸ್‌ರು "ರಾಜ್ಯಕ್ಕೆ ಸಂಬಂಧಿಸಿ" ಎಂಬ ಮಾತುಗಳನ್ನು ಜರ್ಮನ್ ಸಂದರ್ಭಸಾಧಕವಾದದತ್ತ ನೇರ ತಿವಿತವಾಗಿ ಉದ್ದೇಶಪೂರ್ವಕವಾಗಿಯೇ ಒತ್ತಿ ತಿಳಿಸಿದರು. ಜರ್ಮನ್ ಸಂದರ್ಭಸಾಧಕವಾದವು ಧರ್ಮವನ್ನು ಪಾರ್ಟಿಗೆ ಸಂಬಂಧಿಸಿ ಖಾಸಗಿ ವಿಷಯವನ್ನಾಗಿ ಘೋಷಿಸಿ ಕ್ರಾಂತಿಕಾರಿ ಶ್ರಮಜೀವಿ ವರ್ಗದ ಪಾರ್ಟಿಯನ್ನು ಅತ್ಯಂತ ಪ್ರಾಕೃತ "ಸ್ವತಂತ್ರ ಚಿಂತನೆ"ಯ ಮಟ್ಟಕ್ಕೆ, ಧಾರ್ಮಿಕ ಪಂಗಡಗಳಿಲ್ಲದ ಸ್ಥಾನಮಾನಕ್ಕೆ ಅವಕಾಶ ನೀಡಲು ಸಿದ್ಧವಿದ್ದು ಆದರೆ ಜನರನ್ನು ಮಂಕುಗೊಳಿಸುತ್ತಿದ್ದ ಧರ್ಮದ ಅಫೀಮಿನ ವಿರುದ್ಧ ಪಾರ್ಟಿ ಹೋರಾಟವನ್ನು ತಿರಸ್ಕರಿಸುತ್ತಿದ್ದ ಸಂಕುಚಿತವಾದದ ಮಟ್ಟಕ್ಕೆ, ಅವನತಿಗೊಳಿಸಿದ್ದಿತು.

ಜರ್ಮನ್ ಸೋಷಲ್ ಡೆಮೊಕ್ರಸಿಯ ಭವಿಷ್ಯತ್ತಿನ ಇತಿಹಾಸಕಾರ 1914ರಲ್ಲಿ ಅದರ ಅವಮಾನಕರವಾದ ದಿವಾಳಿತನದ ಮೂಲಗಳನ್ನು ಗುರುತಿಸುತ್ತ ಈ ಪ್ರಶ್ನೆಗೆ ಸಂಬಂಧಿಸಿ ಪಾರ್ಟಿಯ ಸೈದ್ಧಾಂತಿಕ ನಾಯಕ ಕೌತ್‌ಸ್ಕಿಯವರ ಲೇಖನಗಳಲ್ಲಿನ ಸಂದರ್ಭಸಾಧಕತನಕ್ಕೆ ಬಾಗಿಲನ್ನು ವಿಶಾಲವಾಗಿ ತೆರೆಯುವ ನುಣುಚಿಕೊಳ್ಳುವ ರೂಪದ ಘೋಷಣೆಗಳಿಂದ ಆರಂಭಿಸಿ 1913ರಲ್ಲಿ "Los-von-Kirche-Bewegung"("ಚರ್ಚ್ ಬಿಡಿ ಚಳವಳಿ")[85]ಗೆ ಸಂಬಂಧಿಸಿ ಪಾರ್ಟಿಯ ಮನೋಧರ್ಮದವರೆಗೆ ಸಾಕಷ್ಟು ಪ್ರಮಾಣದ ಸ್ವಾರಸ್ಯಕರ ಸಾಮಗ್ರಿಯನ್ನು ಕಾಣುವುದು ಖಂಡಿತ.

ಆದರೆ ಈಗ ಕಮ್ಯೂನ್‌ನಂತರ 20 ವರ್ಷಗಳಾದ ಮೇಲೆ ಎಂಗೆಲ್ಸ್‌ರು ಅದರ ಪಾಠಗಳನ್ನು ಸಮರಶೀಲ ಶ್ರಮಜೀವಿ ವರ್ಗಕ್ಕಾಗಿ ಹೇಗೆ ಕ್ರೋಡೀಕರಿಸಿ ತಿಳಿಸಿ ಕೊಟ್ಟರೆಂಬುದನ್ನು ನೋಡೋಣ.

ಎಂಗೆಲ್ಸ್‌ರು ಅದರ ಈ ಕೆಳಗಿನ ಪಾಠಗಳಿಗೆ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದರು:

> "...1798ರಲ್ಲಿ ನೆಪೋಲಿಯನ್ ಸೃಜಿಸಿದ ಮತ್ತು ಆನಂತರ ಪ್ರತಿಯೊಂದು ಹೊಸ ಸರಕಾರವೂ ಸ್ವಾಗತಾರ್ಹ ಸಾಧನವನ್ನಾಗಿ ಸ್ವೀಕರಿಸಿ ತನ್ನ ವಿರೋಧಿಗಳ ವಿರುದ್ಧ ಬಳಸಿದ ಮಾಜಿ ಕೇಂದ್ರೀಕೃತ ಸರಕಾರದ ದಬ್ಬಾಳಿಕೆಯ ಶಕ್ತಿ – ಸೈನ್ಯ, ರಾಜಕೀಯ ಪೊಲೀಸ್, ಅಧಿಕಾರಶಾಹಿ ಇವು

ಗಳ ದಬ್ಬಾಳಿಕೆಯ ಶಕ್ತಿ – ಸ್ಪಷ್ಟವಾಗಿ. ಈ ಶಕ್ತಿಯೇ – ಪ್ಯಾರಿಸ್‌ನಲ್ಲಿ ಪತನವಾಗಿದ್ದಂತೆ ಫ್ರಾನ್ಸಿನಾದ್ಯಂತ ಪತನವಾಗಬೇಕಿದ್ದಿತು.

"ಅಧಿಕಾರಕ್ಕೆ ಬಂದ ಮೇಲೆ ಕಾರ್ಮಿಕ ವರ್ಗವು ಹಳೆಯ ರಾಜ್ಯಯಂತ್ರದೊಂದಿಗೇ ಕಾರ್ಯ ನಿರ್ವಹಿಸಿಕೊಂಡು ಹೋಗುವುದು ಸಾಧ್ಯವಿಲ್ಲವೆಂದು ಕಮ್ಯೂನ್ ಆರಂಭದಲ್ಲೇ ತಿಳಿದುಕೊಳ್ಳಬೇಕಿದ್ದಿತು; ಆಗಷ್ಟೆ ಪಡೆದುಕೊಂಡಿದ್ದ ಆಧಿಪತ್ಯವನ್ನು ಪುನಃ ಕಳೆದುಕೊಳ್ಳದಿರಲು ಕಾರ್ಮಿಕ ವರ್ಗವು ಒಂದು ಕಡೆ ಹಿಂದೆ ತನ್ನ ವಿರುದ್ಧ ಉಪಯೋಗಿಸಲಾಗಿದ್ದ ಎಲ್ಲ ಹಳೆಯ ದಬ್ಬಾಳಿಕೆಯ ಯಂತ್ರವನ್ನು ತಾನೇ ನಾಶಮಾಡಬೇಕಿದ್ದಿತಷ್ಟೆ ಅಲ್ಲ, ಮತ್ತೊಂದು ಕಡೆ ತನ್ನ ಸ್ವಂತ ಪ್ರತಿನಿಧಿಗಳನ್ನೂ ಅಧಿಕಾರಿಗಳನ್ನೂ, ಯಾರೊಬ್ಬರ ವಿನಾಯಿತಿಯಿಲ್ಲದೆ ಎಲ್ಲರನ್ನೂ, ಯಾವುದೇ ಕಾಲದಲ್ಲಿ ಹಿಂದಕ್ಕೆ ಕರೆಸಿಕೊಳ್ಳುವ ನಿರ್ಬಂಧಕ್ಕೆ ಗುರಿಪಡಿಸುವ ಮೂಲಕ ಅವರಿಂದ ತನ್ನನ್ನು ತಾನೇ ರಕ್ಷಿಸಿಕೊಳ್ಳಬೇಕಿದ್ದಿತು...."

ರಾಜಪ್ರಭುತ್ವದಲ್ಲಷ್ಟೆ ಅಲ್ಲ ಪ್ರಜಾಸತಾತ್ಮಕ ಗಣತಂತ್ರದಲ್ಲೂ ಸಹ ರಾಜ್ಯವು ರಾಜ್ಯವಾಗಿಯೇ ಉಳಿಯುವುದು, ಅಂದರೆ, ಅದು ಅಧಿಕಾರಿಗಳನ್ನು, "ಸಮಾಜದ ಸೇವಕರನ್ನು," ಅದರ ಅಂಗಸಂಸ್ಥೆಗಳನ್ನು, ಸಮಾಜದ ಪ್ರಭುಗಳನ್ನಾಗಿ ಪರಿವರ್ತಿಸುವ ತನ್ನ ಮೂಲಭೂತ ವಿಶಿಷ್ಟ ಲಕ್ಷಣವನ್ನು ಉಳಿಸಿಕೊಂಡೇ ಇರುವುದು, ಎಂಬುದನ್ನು ಎಂಗೆಲ್ಸ್‌ರು ಮತ್ತೆ ಮತ್ತೆ ಒತ್ತಿ ತಿಳಿಸುತ್ತಾರೆ.

"ರಾಜ್ಯವನ್ನೂ ರಾಜ್ಯದ ಅಂಗಸಂಸ್ಥೆಗಳನ್ನೂ ಹೀಗೆ ಸಮಾಜ ಸೇವಕರ ಸ್ಥಿತಿಯಿಂದ ಸಮಾಜ ಪ್ರಭುಗಳಾಗುವ ಸ್ಥಿತಿಗೆ ಪರಿವರ್ತನೆಯು ಆಗದಿರಲೆಂದು – ಆ ಮುನ್ನಿನ ಎಲ್ಲ ರಾಜ್ಯಗಳಲ್ಲಿಯೂ ಇಂತಹ ಪರಿವರ್ತನೆ ಅನಿವಾರ್ಯವಾಗಿದ್ದಿತು – ಕಮ್ಯೂನ್ ಎರಡು ತಪ್ಪಲಾಗದ ವಿಧಾನಗಳನ್ನು ಬಳಸಿತು. ಮೊದಲನೆಯದಾಗಿ, ಅದು ಎಲ್ಲ ಅಧಿಕಾರ ಸ್ಥಾನಗಳಿಗೂ – ಆಡಳಿತಾಂಗ, ನ್ಯಾಯಾಂಗ ಹಾಗೂ ಶೈಕ್ಷಣಿಕ ಕ್ಷೇತ್ರಗಳ ಅಧಿಕಾರ ಸ್ಥಾನಗಳಿಗೂ – ಸಾರ್ವತ್ರಿಕ ಮತದಾನದ ಆಧಾರದ ಮೇಲೆ ಚುನಾವಣೆಗೊಂಡವರನ್ನು ನೇಮಿಸಿತು. ಅವರೆಲ್ಲರೂ ಯಾವುದೇ ಕಾಲದಲ್ಲಿ ಮತದಾರರಿಂದ ಹಿಂದಕ್ಕೆ ಕರೆಸಿಕೊಳ್ಳುವ ನಿರ್ಬಂಧಕ್ಕೊಳಗಾಗಬೇಕಿದ್ದಿತು. ಎರಡನೆಯದಾಗಿ, ಅದು ಎಲ್ಲ ಅಧಿಕಾರಿಗಳಿಗೂ, ಅವರು ಉನ್ನತಾಧಿಕಾರಿಗಳಾಗಿರಲಿ ಕೆಳಗಿನ ಅಧಿಕಾರಿಗಳಾಗಿರಲಿ ಎಲ್ಲರಿಗೂ, ಇತರ ಕಾರ್ಮಿಕರು ಪಡೆಯುತ್ತಿದ್ದಷ್ಟೆ ಕೂಲಿಯನ್ನು ನೀಡಿತು. ಕಮ್ಯೂನ್ ಯಾರಿಗೇ

ನೀಡಿದ ಅತ್ಯುನ್ನತ ಸಂಬಳವೆಂದರೆ 6,000 ಫ್ರಾಂಕ್* ಆಗಿದ್ದಿತು. ಈ ರೀತಿ ಉನ್ನತ ಪದವಿಗಳಿಗಾಗಿ ಬೇಟೆ ಹಾಗೂ ವೃತ್ತಿಸ್ವಾರ್ಥತೆಗಳ ವಿರುದ್ಧ ನಂಬಲರ್ಹವಾದ ಅಡ್ಡಗಟ್ಟನ್ನು ಸ್ಥಾಪಿಸಲಾಯಿತು. ಇದಲ್ಲದೆ ಪ್ರಾತಿನಿಧಿಕ ಅಂಗಸಂಸ್ಥೆಗಳ ಪ್ರತಿನಿಧಿಗಳ ಮೇಲೆ ಕಡ್ಡಾಯದ ಆಣತಿಗಳನ್ನೂ ಹೊರಿಸಲಾಯಿತು...."

ಎಂಗೆಲ್ಸ್‌ರು ಇಲ್ಲಿ ಒಂದು ಕಡೆ ಸುಸಂಗತ ಪ್ರಜಾಪ್ರಭುತ್ವವು ಸಮಾಜವಾದವಾಗಿ ಪರಿವರ್ತನೆಗೊಳ್ಳುವ ಹಾಗೂ ಮತ್ತೊಂದು ಕಡೆ ಅದು ಸಮಾಜವಾದವನ್ನು ಆಗ್ರಹಿಸಿ ಕೇಳುವ ಸ್ವಾರಸ್ಯಕರ ಗಡಿರೇಖೆಯನ್ನು ತಲುಪಿದ್ದಾರೆ. ಏಕೆಂದರೆ, ರಾಜ್ಯವನ್ನು ರದ್ದುಗೊಳಿಸುವುದಕ್ಕೆ, ಅಧಿಕಾರವರ್ಗದವರ ಕೆಲಸಗಳನ್ನು, ಜನತೆಯ ವಿಶಾಲ ವಿಭಾಗದ, ಮತ್ತು ತದನಂತರ ಪ್ರತಿಯೊಬ್ಬ ವ್ಯಕ್ತಿಯ ವ್ಯಾಪ್ತಿ ಹಾಗೂ ಸಾಮರ್ಥ್ಯದೊಳಗೆ ಬರುವಂತೆ, ನಿಯಂತ್ರಣ ಹಾಗೂ ಲೆಕ್ಕ ಇರಿಸುವ ಸರಳ ಕಾರ್ಯಾಚರಣೆಗಳನ್ನಾಗಿ ಪರಿವರ್ತಿಸುವುದು ಅವಶ್ಯ. ವೃತ್ತಿಸ್ವಾರ್ಥಪರತೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕಾದರೆ, ಎಲ್ಲ ಅತ್ಯಂತ ಸ್ವತಂತ್ರ ಬಂಡವಾಳಶಾಹಿ ದೇಶಗಳಲ್ಲೂ ಯಾವತ್ತೂ ಜರುಗುತ್ತಿರುವಂತೆ, ಅಧಿಕಾರಕ್ಷೇತ್ರದಲ್ಲಿನ ಲಾಭದಾಯಕವಲ್ಲದಿದ್ದರೂ "ಗೌರವಾನ್ವಿತ"ವಾದ ಪದವಿಗಳನ್ನು ಬ್ಯಾಂಕುಗಳಲ್ಲಿ ಅಥವಾ ಜಾಯಿಂಟ್ ಸ್ಟಾಕ್ ಸಂಸ್ಥೆಗಳಲ್ಲಿ ಹೆಚ್ಚು ಲಾಭದಾಯಕವಾದ ಹುದ್ದೆಗಳನ್ನು ಪಡೆಯಲು ಜಿಗಿನೆಲೆಗಳನ್ನಾಗಿ ಬಳಸಿಕೊಳ್ಳುವುದನ್ನು ಅಸಾಧ್ಯವಾದುದನ್ನಾಗಿ ಮಾಡಬೇಕು.

ಆದರೆ ಎಂಗೆಲ್ಸ್‌ರು ರಾಷ್ಟ್ರಗಳ ಸ್ವಯಂನಿರ್ಣಯಾಧಿಕಾರ ಹಕ್ಕಿನ ಪ್ರಶ್ನೆಯನ್ನು ಪರ್ಯಾಲೋಚಿಸುವಾಗ ಕೆಲವು ಮಾರ್ಕ್ಸ್‌ವಾದಿಗಳು ಮಾಡುವಂತೆ, ಅಂಥ ಹಕ್ಕು ಬಂಡವಾಳವಾದದಡಿ ಅಸಾಧ್ಯ ಹಾಗೂ ಸಮಾಜವಾದದಡಿ ಅನವಶ್ಯ ಎಂದು ವಾದ ಮಾಡುವ, ತಪ್ಪು ಮಾಡಲಿಲ್ಲ. ನೋಡುವುದಕ್ಕೆ ಬುದ್ಧಿವಂತವಾದುದೆಂದು ಕಾಣುವ ಆದರೆ ವಾಸ್ತವವಾಗಿ ಸರಿಯಲ್ಲದ ಈ ಹೇಳಿಕೆಯನ್ನು ಯಾವುದೇ ಪ್ರಜಾಸತ್ತಾತ್ಮಕ ಸಂಸ್ಥೆಗೆ ಸಂಬಂಧಿಸಿಯೂ, ಅಧಿಕಾರಿಗಳಿಗೆ ಸಾಮಾನ್ಯ ಸಂಬಳಗಳನ್ನು ನೀಡುವುದಕ್ಕೆ ಸಂಬಂಧಿಸಿಯೂ ಸಹ, ಮಾಡಬಹುದು. ಏಕೆಂದರೆ ಬಂಡವಾಳವಾದದಡಿ ಸಂಪೂರ್ಣ ಸುಸಂಗತ ಪ್ರಜಾಪ್ರಭುತ್ವ ಅಸಾಧ್ಯ ಮತ್ತು ಸಮಾಜವಾದದಡಿ ಎಲ್ಲ ಪ್ರಜಾಪ್ರಭುತ್ವವೂ ಕ್ಷಯಿಸಿಹೋಗುವುದು.

---

* ಸುಮಾರು 2,400 ರೂಬಲ್‌ಗಳು, ಅಥವಾ ಪ್ರಸಕ್ತ ವಿನಿಮಯ ದರದ ಪ್ರಕಾರ ಸುಮಾರು 6,000 ರೂಬಲ್‌ಗಳು. ಆದ್ದರಿಂದ ರಾಜ್ಯದಾದ್ಯಂತ ನಗರ ಸಭಾ ಸದಸ್ಯರಿಗೆ ಪರಮಾವಧಿ 6,000 ರೂಬಲ್‌ಗಳ – ಈ ಹಣ ಸಾಕು ಬೇಕಾದಷ್ಟಾಗಿದೆ – ಬದಲು 9,000 ರೂಬಲ್ ಸಂಬಳ ನೀಡಬೇಕೆಂದು ಸಲಹೆ ಮಾಡಿರುವ ಕೆಲವು ಬೋಲ್ಷೆವಿಕರ ಕ್ರಿಯೆಯು ಅಕ್ಷಮ್ಯವಾಗಿದೆ.[86]

ವ್ಯಕ್ತಿಯೊಬ್ಬನ ಕೂದಲು ಒಂದು ಎಳೆಯಷ್ಟು ಕಮ್ಮಿಯಾದರೆ ಅವನು ಬೋಳಾಗುತ್ತಾನೆ ಎನ್ನುವ ಹಳೆಯ ಹಾಸ್ಯದಂತೆ ಇದು ಒಂದು ಕುತರ್ಕ.

ಪ್ರಜಾಪ್ರಭುತ್ವವನ್ನು ಪರಮಾವಧಿಯವರೆಗೂ ಅಭಿವೃದ್ಧಿಗೊಳಿಸುವುದು, ಈ ಬೆಳವಣಿಗೆಯ ವಿವಿಧ ರೂಪಗಳನ್ನು ಕಂಡುಹಿಡಿಯುವುದು, ಅವುಗಳನ್ನು ಆಚರಣೆಗೆ ತಂದು ಪರೀಕ್ಷಿಸುವುದು ಇತ್ಯಾದಿ – ಇವೆಲ್ಲ ಸಾಮಾಜಿಕ ಕ್ರಾಂತಿಗಾಗಿ ಹೋರಾಟದ ಕಾರ್ಯಭಾರಗಳ ಅಂಗಭಾಗ. ಯಾವ ರೀತಿಯ ಪ್ರಜಾಪ್ರಭುತ್ವವೂ, ಪ್ರತ್ಯೇಕವಾಗಿ ತೆಗೆದುಕೊಂಡರೆ, ಸಮಾಜವಾದವನ್ನು ತರುವುದಿಲ್ಲ. ಆದರೆ ನಿಜ ಜೀವನದಲ್ಲಿ ಪ್ರಜಾಪ್ರಭುತ್ವವನ್ನು ಎಂದೂ "ಪ್ರತ್ಯೇಕವಾಗಿ ತೆಗೆದುಕೊಳ್ಳುವುದಿಲ್ಲ;" ಅದನ್ನು ಇತರ ವಿಷಯಗಳೊಂದಿಗೆ "ಜೊತೆಯಾಗಿ ತೆಗೆದುಕೊಳ್ಳಲಾಗುವುದು." ಅದು ಆರ್ಥಿಕ ಜೀವನದ ಮೇಲೂ ತನ್ನ ಪ್ರಭಾವವನ್ನು ಬೀರುವುದು, ಅದರ ರೂಪ ಪರಿವರ್ತನೆಯನ್ನು ಉತ್ತೇಜಿಸುವುದು ಮತ್ತು ಪ್ರತಿಯಾಗಿ ಆರ್ಥಿಕ ಬೆಳವಣಿಗೆಯ ಪ್ರಭಾವಕ್ಕೂ ಒಳಗಾಗುವುದು, ಇತ್ಯಾದಿ. ಇದು ಜೀವಂತ ಇತಿಹಾಸದ ದ್ವಂದ್ವಾತ್ಮಕತೆ.

ಮುಂದುವರಿಯುತ್ತ ಎಂಗೆಲ್ಸ್ ಹೀಗೆ ಬರೆಯುತ್ತಾರೆ:

> "....ಹೀಗೆ ಹಿಂದಿನ ರಾಜ್ಯಾಧಿಕಾರವನ್ನು ಆಸ್ಫೋಟಿಸಿ ಚೂರು ಚೂರು ಮಾಡುವುದನ್ನೂ (Sprengung), ಅದರ ಸ್ಥಳದಲ್ಲಿ ಒಂದು ಹೊಸ ಹಾಗೂ ನಿಜಕ್ಕೂ ಪ್ರಜಾಸತ್ತಾತ್ಮಕವಾದ ರಾಜ್ಯಾಧಿಕಾರವನ್ನು ಸ್ಥಾಪಿಸುವುದನ್ನೂ 'ಅಂತರ್ಯುದ್ಧ'ದ ಮೂರನೆಯ ವಿಭಾಗದಲ್ಲಿ ವಿವರವಾಗಿ ವರ್ಣಿಸಲಾಗಿದೆ. ಆದರೆ ಅದರ ಕೆಲವು ಲಕ್ಷಣಗಳನ್ನು ಇಲ್ಲಿ ಮತ್ತೊಮ್ಮೆ ಸ್ಥೂಲವಾಗಿ ತಿಳಿಸುವುದು ಅವಶ್ಯವಾಗಿದೆ, ಏಕೆಂದರೆ, ಜರ್ಮನಿಯಲ್ಲಿ ವಿಶೇಷವಾಗಿ ರಾಜ್ಯದಲ್ಲಿನ ಮೂಢನಂಬಿಕೆಯು ತತ್ವಶಾಸ್ತ್ರ ಪುಟಗಳಿಂದ ಬೂರ್ಷ್ವಾಸೀಯ, ಮತ್ತು ಅನೇಕ ಕಾರ್ಮಿಕರ, ಸಾಮಾನ್ಯ ಪ್ರಜ್ಞೆಯೊಳಕ್ಕೆ ಸಾಗಿಹೋಗಿದೆ. ತತ್ವಶಾಸ್ತ್ರದ ಪ್ರಕಾರ ರಾಜ್ಯವು ಒಂದು 'ಭಾವ ಸಾಕ್ಷಾತ್ಕಾರ,' ಅಥವಾ ತತ್ವಶಾಸ್ತ್ರ ಪದಗಳಲ್ಲಿ ಅದು ಭೂಮಿಯ ಮೇಲಿನ ದೇವರ ಸಾಮ್ರಾಜ್ಯದ ವರ್ಣನೆಯಾಗಿದೆ. ಇದು ಶಾಶ್ವತ ಸತ್ಯವನ್ನೂ ನ್ಯಾಯವನ್ನೂ ಸಾಕ್ಷಾತ್ಕರಿಸಲಾಗುವ ಅಥವಾ ಸಾಕ್ಷಾತ್ಕರಿಸಬೇಕಾದ ವಲಯ. ಇದರಿಂದಾಗಿ ರಾಜ್ಯದ ಬಗೆಗೆ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲವುಗಳ ಬಗೆಗೆ ಒಂದು ಮೂಢನಂಬಿಕೆಯ ಗೌರವ ಬೆಳೆದಿದೆ. ಇಡೀ ಸಮಾಜಕ್ಕೆ ಸಾಮಾನ್ಯವಾದ ವ್ಯವಹಾರಗಳನ್ನೂ ಹಿತಗಳನ್ನೂ ಈ ಹಿಂದೆ ನೋಡಿದ ರೀತಿಯಲ್ಲಲ್ಲದೆ, ಅಂದರೆ ರಾಜ್ಯದ ಮತ್ತು ಅದರ ಲಾಭದಾಯಕ ಹುದ್ದೆಗಳಲ್ಲಿರುವ ಅಧಿಕಾರಿಗಳ ಮೂಲಕವಲ್ಲದೆ, ಬೇರಾವ ರೀತಿಯಲ್ಲೂ

ನೋಡುವುದು ಸಾಧ್ಯವಿಲ್ಲ, ಎಂದು ಜನರು ಬಾಲ್ಯದಿಂದಲೂ ಕಲ್ಪಿಸಿಕೊಳ್ಳುವುದಕ್ಕೆ ಒಗ್ಗಿ ಹೋಗಿರುವುದರಿಂದ ಈ ಮೂಢನಂಬಿಕೆಯು ಅವರ ಪ್ರಜ್ಞೆಯಲ್ಲಿ ಹೆಚ್ಚು ಸುಲಭವಾಗಿ ಬೇರು ಬಿಡುತ್ತದೆ. ಜನರು ವಂಶ ಪಾರಂಪರ್ಯವಾಗಿ ಬರುವ ರಾಜಪ್ರಭುತ್ವದಲ್ಲಿನ ನಂಬಿಕೆಯನ್ನು ಬಿಟ್ಟು ಕೊಟ್ಟು ಪ್ರಜಾಸತ್ತಾತ್ಮಕ ಗಣತಂತ್ರದ ಬಗೆಗೆ ಆಗ್ರಹಿಸಿ ಹೇಳತೊಡಗಿದಾಗ ತಾವು ಅತ್ಯಸಾಧಾರಣವಾದ ದಿಟ್ಟತನದ ಒಂದು ಹೆಜ್ಜೆಯನ್ನು ಮುಂದಿಟ್ಟಿದ್ದಾರೆಂದೇ ಭಾವಿಸಿಕೊಳ್ಳುತ್ತಾರೆ. ಆದರೆ ವಾಸ್ತವವಾಗಿ, ರಾಜ್ಯವು ಒಂದು ವರ್ಗವು ಮತ್ತೊಂದನ್ನು ಹತ್ತಿಕ್ಕಲು ಬಳಸುವ ಯಂತ್ರವಲ್ಲದೆ ಬೇರೇನೂ ಅಲ್ಲ. ಇದು ಪ್ರಜಾಸತ್ತಾತ್ಮಕ ಗಣತಂತ್ರದಲ್ಲೂ ರಾಜಪ್ರಭುತ್ವದಲ್ಲಿರುವುದಕ್ಕಿಂತ ಕಮ್ಮಿ ಏನೂ ಅಲ್ಲದೆ ಈ ರೀತಿ ಇರುತ್ತದೆ. ಬಹಳ ಹೆಚ್ಚೆಂದರೆ ಅದು, ಶ್ರಮಜೀವಿ ವರ್ಗವು ತನ್ನ ವರ್ಗದ ಪರಮಾಧಿಕಾರಕ್ಕಾಗಿ ವಿಜಯೀ ಹೋರಾಟ ನಡೆಸಿದನಂತರ ಹಿಂದಿನಿಂದ ಪಡೆದುಕೊಂಡ ಒಂದು ಅನಿಷ್ಟವಾಗಿರುತ್ತದೆ. ವಿಜಯೀ ಶ್ರಮಜೀವಿ ವರ್ಗವು ಅದರ ಕೆಡುಕಿನ ಭಾಗಗಳನ್ನು ಸಾಧ್ಯವಾದಷ್ಟೂ ಬೇಗ ಕತ್ತರಿಸಿ ಹಾಕಬೇಕು. ಕಮ್ಯೂನ್ ಹೀಗೆಯೇ ಮಾಡಬೇಕಿದ್ದಿತು. ಹೊಸ ಸ್ವತಂತ್ರ ಸಾಮಾಜಿಕ ಪರಿಸ್ಥಿತಿಗಳಲ್ಲಿ ಬೆಳೆದ ಪೀಳಿಗೆಯೊಂದು ರಾಜ್ಯದ ಇಡೀ ನಿಷ್ಪ್ರಯೋಜಕ ಕಸದ ರಾಶಿಯನ್ನು ವಿಸರ್ಜಿಸಲು ಸಮರ್ಥವಾಗುವವರೆಗೂ ಈ ಕಾರ್ಯ ಜರುಗಬೇಕು."

ರಾಜಪ್ರಭುತ್ವದ ಸ್ಥಳದಲ್ಲಿ ಗಣತಂತ್ರವನ್ನು ಸ್ಥಾಪಿಸುವಾಗ ಒಟ್ಟಿನಲ್ಲಿ ರಾಜ್ಯದ ಬಗೆಗೆ ಸಮಾಜವಾದದ ಮೂಲಸೂತ್ರಗಳನ್ನು ಮರೆಯಬಾರದೆಂದು ಎಂಗೆಲ್ಸ್ ಜರ್ಮನರಿಗೆ ಎಚ್ಚರಿಕೆ ನೀಡಿದರು. ಅವರ ಎಚ್ಚರಿಕೆಗಳು ಈಗ "ಸಮ್ಮಿಶ್ರತೆ"ಯನ್ನು ಆಚರಣೆಗೆ ತರುವಾಗ ರಾಜ್ಯದಲ್ಲಿ ಮೂಢನಂಬಿಕೆಯನ್ನೂ ರಾಜ್ಯದ ಬಗೆಗೆ ಮೂಢಭಕ್ತಿಯನ್ನೂ ತೋರುತ್ತಿರುವ ತ್ಸೆರೆತೇಲಿಗಳಿಗೆ ಮತ್ತು ಚೆರ್ನೋವ್‌ಗಳಿಗೆ ನೀಡಿದ ಪಾಠಗಳಂತಿವೆ !

ಇನ್ನೆರಡು ಹೇಳಿಕೆಗಳು: 1. ಪ್ರಜಾಸತ್ತಾತ್ಮಕ ಗಣತಂತ್ರದಲ್ಲೂ ರಾಜಪ್ರಭುತ್ವದಲ್ಲಿರುವುದಕ್ಕಿಂತ "ಕಮ್ಮಿ ಏನೂ ಅಲ್ಲದೆ," ರಾಜ್ಯವು "ಒಂದು ವರ್ಗವು ಮತ್ತೊಂದು ವರ್ಗವನ್ನು ಹತ್ತಿಕ್ಕುವ ಯಂತ್ರ"ವಾಗಿಯೇ ಉಳಿದಿರುವುದು, ಎಂಬ ಎಂಗೆಲ್ಸ್‌ರ ಹೇಳಿಕೆಯು, ಕೆಲವು ಅರಾಜಕತಾವಾದಿಗಳು "ಬೋಧಿಸುವಂತೆ," ಶ್ರಮಜೀವಿ ವರ್ಗಕ್ಕೆ ಮರ್ದನ ರೂಪದಲ್ಲಿ ಯಾವ ವ್ಯತ್ಯಾಸವನ್ನೂ ಉಂಟುಮಾಡುವುದಿಲ್ಲವೆಂದು ಎಷ್ಟು ಮಾತ್ರವೂ ಅರ್ಥ ನೀಡುವುದಿಲ್ಲ. ಹೆಚ್ಚು ವಿಸ್ತೃತವಾದ, ಹೆಚ್ಚು ಸ್ವತಂತ್ರವಾದ, ಹೆಚ್ಚು ಬಹಿರಂಗವಾದ ವರ್ಗಹೋರಾಟದ ಹಾಗೂ ವರ್ಗ ದಬ್ಬಾಳಿಕೆಯ ರೂಪವು

ಶ್ರಮಜೀವಿ ವರ್ಗಕ್ಕೆ ಒಟ್ಟಿನಲ್ಲಿ ವರ್ಗಗಳನ್ನು ಅಳಿಸಿಹಾಕುವ ಹೋರಾಟದಲ್ಲಿ ತುಂಬ ಮಟ್ಟಿಗೆ ನೆರವಾಗುತ್ತದೆ.

2. ಹೊಸ ಪೀಳಿಗೆಯೊಂದಷ್ಟೆ ಏಕೆ ರಾಜ್ಯದ ಇಡೀ ನಿಷ್ಪ್ರಯೋಜಕ ಕಸದ ರಾಶಿಯನ್ನು ವಿಸರ್ಜಿಸಲು ಸಮರ್ಥವಾಗುವುದು? ಈ ಪ್ರಶ್ನೆಯು ಪ್ರಜಾಪ್ರಭುತ್ವವನ್ನು ಜಯಿಸುವ ಪ್ರಶ್ನೆಯೊಂದಿಗೆ ಸಂಬಂಧಿತವಾಗಿದೆ. ಇದನ್ನು ನಾವೀಗ ಪರಿಶೀಲಿಸೋಣ.

## 6. ಪ್ರಜಾಪ್ರಭುತ್ವವನ್ನು ಜಯಿಸುವುದರ ಕುರಿತು ಎಂಗೆಲ್ಸ್‌ರ ಅಭಿಪ್ರಾಯ

'ಸೋಷಲ್ ಡೆಮೊಕ್ರಾಟ್' ಎಂಬ ಪದವು ವೈಜ್ಞಾನಿಕವಾಗಿ ತಪ್ಪಾದುದು ಎಂಬುದನ್ನು ಸಮರ್ಥಿಸಿ ತೋರುವಾಗ ಎಂಗೆಲ್ಸ್‌ರು ಈ ವಿಷಯಕ್ಕೆ ಸಂಬಂಧಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ನಾನಾ ವಿಷಯಗಳಿಗೆ, ಬಹುಮಟ್ಟಿಗೆ "ಅಂತರರಾಷ್ಟ್ರೀಯ" ವಿಷಯಗಳಿಗೆ ಸಂಬಂಧಿಸಿ ಕಳೆದ ಶತಮಾನದ ಎಂಟನೆಯ ದಶಕದಲ್ಲಿ ಬರೆದ ತಮ್ಮ ಲೇಖನಗಳ (*Internationales aus dem 'Volksstaat'**) ಆವೃತ್ತಿಯ ಮುನ್ನುಡಿಯಲ್ಲಿ – ಇದರ ತೇದಿ ಜನವರಿ 3, 1894, ಅಂದರೆ ಇದು ಅವರು ನಿಧನರಾಗುವುದಕ್ಕೆ ಒಂದೂವರೆ ವರ್ಷ ಮುಂಚೆ ಬರೆದುದು – ಎಂಗೆಲ್ಸ್‌ರು, ತಾವು ತಮ್ಮ ಎಲ್ಲ ಲೇಖನಗಳಲ್ಲೂ "ಕಮ್ಯೂನಿಸ್ಟ್" ಎಂಬ ಪದವನ್ನು ಬಳಸಿದ್ದಾರೆಯೆ ಹೊರತು "ಸೋಷಲ್ ಡೆಮೊಕ್ರಾಟ್" ಎಂಬ ಪದವನ್ನಲ್ಲ, ಏಕೆಂದರೆ ಆ ಕಾಲದಲ್ಲಿ ಫ್ರಾನ್ಸಿನಲ್ಲಿ ಪ್ರುದೋನ್‌ವಾದಿಗಳೂ ಜರ್ಮನಿಯಲ್ಲಿ ಲಸ್ಸಾಲ್‌ವಾದಿಗಳೂ[88] ತಮ್ಮನ್ನು ಸೋಷಲ್ ಡೆಮೊಕ್ರಾಟರೆಂದೇ ಕರೆದುಕೊಳ್ಳುತ್ತಿದ್ದರು, ಎಂದು ಬರೆರಿದ್ದಾರೆ.

> "ಮಾರ್ಕ್ಸ್‌ರವರ ಮಟ್ಟಿಗೆ ಮತ್ತು ನನ್ನ ಮಟ್ಟಿಗೆ ಹೇಳುವುದಾದರೆ, ನಮ್ಮ ವಿಶೇಷ ದೃಷ್ಟಿಕೋನವನ್ನು ವರ್ಣಿಸಲು ಅಂಥ ಸಡಿಲವಾದ ಪದವನ್ನು ಬಳಸುವುದು ಸಂಪೂರ್ಣವಾಗಿ ಅಸಾಧ್ಯವಾಗಿದ್ದಿತು" ಎಂದು ಎಂಗೆಲ್ಸ್ ಮುಂದುವರಿಯುತ್ತ ಬರೆದಿದ್ದಾರೆ. "ಇಂದು ಪರಿಸ್ಥಿತಿ ಭಿನ್ನವಾಗಿದೆ ಮತ್ತು ಈ ಪದವು ("ಸೋಷಲ್ ಡೆಮೊಕ್ರಾಟ್" ಎಂಬ ಪದವು), ಒಟ್ಟಿನಲ್ಲಿ ಸಮಾಜವಾದವಷ್ಟೆ ಅಲ್ಲ ಶುದ್ಧ ಕಮ್ಯೂನಿಸ್ಟ್ ಆದ ಆರ್ಥಿಕ

---

* "'ಜನತಾ ರಾಜ್ಯ'ದಿಂದ ತೆಗೆದುಕೊಂಡ ಅಂತರರಾಷ್ಟ್ರೀಯ ವಿಷಯಗಳ ಕುರಿತು."[87] – ಸಂ.

ಕಾರ್ಯಕ್ರಮವನ್ನುಳ್ಳ ಇಡೀ ರಾಜ್ಯವನ್ನು ತತ್ಫಲವಾಗಿ ಪ್ರಜಾಪ್ರಭುತ್ವವನ್ನೂ ಸಹ, ಜಯಿಸುವ ಅಂತಿಮ ರಾಜಕೀಯ ಗುರಿಯುಳ್ಳ ಪಾರ್ಟಿಗೆ ಅಸಮರ್ಪಕ(unpassend)ವಾಗಿದ್ದಿತು, ಬಹುಶಃ ತಕ್ಕದ್ದೆಂದು (mag passieren) ಅಂಗೀಕೃತವಾಗಬಹುದು. ಆದರೆ ನಿಜವಾದ (ಅಡಿಗೆರೆ ಎಂಗೆಲ್ಸ್‌ರವರದೇ) ರಾಜಕೀಯ ಪಕ್ಷಗಳ ಹೆಸರುಗಳು ಎಂದಿಗೂ ಇಡೀಯಾಗಿ ತಕ್ಕುದಾಗಿರುವುದಿಲ್ಲ; ಪಾರ್ಟಿಯು ಅಭಿವೃದ್ಧಿಗೊಳ್ಳುತ್ತ ಹೋಗುತ್ತದೆ, ಆದರೆ ಹೆಸರು ಹಾಗೆಯೇ ಉಳಿದಿರುತ್ತದೆ."[89]

ದ್ವಂದ್ವಾತ್ಮಕವಾದಿಯಾದ ಎಂಗೆಲ್ಸ್‌ರವರು ತಮ್ಮ ಅಂತಿಮ ದಿನಗಳವರೆಗೂ ದ್ವಂದ್ವಾತ್ಮಕವಾದಕ್ಕೆ ನಿಷ್ಠರಾಗಿಯೇ ಇದ್ದುಕೊಂಡಿದ್ದರು. ಮಾರ್ಕ್ಸ್‌ರವರು ಮತ್ತು ನಾನು – ಅವರು ಹೇಳುತ್ತಾರೆ – ಪಾರ್ಟಿಗಾಗಿ ಒಂದು ಭವ್ಯವಾದ, ವೈಜ್ಞಾನಿಕವಾಗಿ ನಿಷ್ಕೃಷ್ಟವಾದ ಹೆಸರನ್ನು ಯೋಚಿಸಿದ್ದೆವು, ಆದರೆ ನಿಜವಾದ ಪಾರ್ಟಿ, ಅಂದರೆ ಸಾಮೂಹಿಕ ಶ್ರಮಜೀವಿ ವರ್ಗದ ಪಾರ್ಟಿ, ಇರಲಿಲ್ಲ. ಈಗ (19ನೆಯ ಶತಮಾನದ ಕೊನೆಯ ಭಾಗದಲ್ಲಿ) ನಿಜವಾದ ಪಾರ್ಟಿ ಇದೆ, ಆದರೆ ಅದರ ಹೆಸರು ವೈಜ್ಞಾನಿಕವಾಗಿ ತಪ್ಪಾಗಿದೆ. ಆದರೂ ಚಿಂತೆ ಇಲ್ಲ. ಎಲ್ಲಿಯವರೆಗೆ ಪಾರ್ಟಿ ಬೆಳೆಯುತ್ತಲೇ ಹೋಗುವುದೋ, ಅದರ ಹೆಸರು ವೈಜ್ಞಾನಿಕವಾಗಿ ತಪ್ಪಾಗಿರುವುದು ಎಲ್ಲಿಯವರೆಗೆ ಅದರ ಗಮನದಿಂದ ಮರೆಯಾಗಿರುವುದಿಲ್ಲವೋ ಮತ್ತು ಅದು ಸರಿಯಾದ ದಿಕ್ಕಿನಲ್ಲಿ ಅಭಿವೃದ್ಧಿಗೊಳ್ಳುತ್ತ ಹೋಗುವುದಕ್ಕೆ ಅಡ್ಡಿಯಾಗಿರುವುದಿಲ್ಲವೋ ಅಲ್ಲಿಯವರೆಗೆ ಆ ಹೆಸರೇ "ತಕ್ಕದ್ದೆಂದು ಅಂಗೀಕೃತವಾಗಬಹುದು !"

ಬಹುಶಃ ಯಾರಾದರೂ ವಾಕ್ಚತುರಿ ನಮ್ಮನ್ನೂ – ಬೋಲ್ಷೆವಿಕರನ್ನೂ – ಎಂಗೆಲ್ಸ್‌ರ ರೀತಿಯಲ್ಲಿ ಸಮಾಧಾನಪಡಿಸಲು ಹೋಗಬಹುದು: ನಾವು ನಿಜವಾದ ಪಾರ್ಟಿ ಹೊಂದಿದ್ದೇವೆ, ಅದು ಭವ್ಯವಾಗಿ ಬೆಳೆಯುತ್ತಿದೆ; "ಬೋಲ್ಷೆವಿಕ್" ಎಂಬ ಅರ್ಥರಹಿತವಾದ ಅಸಹ್ಯವಾದ ಪದವೂ, ಅದು 1903ರ ಬ್ರುಸ್ಸೆಲ್ಸ್-ಲಂಡನ್ ಮಹಾಧಿವೇಶನದಲ್ಲಿ ನಾವು ಬಹುಮತದಲ್ಲಿದ್ದೆವು[90] ಎಂಬ ಶುದ್ಧ ಆಕಸ್ಮಿಕ ಸಂಗತಿಯನ್ನಲ್ಲದೆ ಬೇರೇನನ್ನೂ ವ್ಯಕ್ತಪಡಿಸದಿದ್ದರೂ, "ತಕ್ಕದ್ದೆಂದು ಅಂಗೀಕೃತವಾಗಬಹುದು." ಬಹುಶಃ ಈಗ ಗಣತಂತ್ರೀಯವಾದಿಗಳೂ "ಕ್ರಾಂತಿಕಾರಿ" ಪೆಟಿ ಬೂರ್ಷ್ವಾ ಪ್ರಜಾಪ್ರಭುತ್ವವಾದಿಗಳೂ ಜುಲೈ ಮತ್ತು ಆಗಸ್ಟ್‌ಗಳಲ್ಲಿ ನಮ್ಮ ಪಾರ್ಟಿಯನ್ನು ಪೀಡಿಸತೊಡಗಿದುದರಿಂದಾಗಿ "ಬೋಲ್ಷೆವಿಕ್" ಎಂಬ ಪದವು ಸಾರ್ವತ್ರಿಕ ಗೌರವ ದೊರಕಿಸಿಕೊಂಡಿರುವಾಗ, ಇದರ ಜೊತೆಗೆ, ಈ ಪೀಡನೆಯು ನಮ್ಮ ಪಾರ್ಟಿ ತನ್ನ ನಿಜವಾದ ಬೆಳವಣಿಗೆಯಲ್ಲಿ ಪ್ರಚಂಡ ಚಾರಿತ್ರಿಕ ಪ್ರಗತಿ ಸಾಧಿಸಿದೆ ಎಂಬುದನ್ನು ತೋರಿಸಿಕೊಟ್ಟಿರುವಾಗ – ಬಹುಶಃ ಈಗ ನಾನೂ ನಮ್ಮ ಪಾರ್ಟಿಯ ಹೆಸರನ್ನು

ಬದಲಿಸಬೇಕೆಂದು ಏಪ್ರಿಲ್‌ನಲ್ಲಿ ಮಾಡಿದ ಸಲಹೆ*ಯನ್ನು ಒತ್ತಾಯಿಸಲು ಅನುಮಾನಿಸಬಹುದು. ಬಹುಶಃ ನಾನು ನನ್ನ ಸಂಗಾತಿಗಳಿಗೆ ಒಂದು "ರಾಜಿ" ಸೂತ್ರವನ್ನು, ಅಂದರೆ ನಮ್ಮನ್ನು ಕಮ್ಯೂನಿಸ್ಟ್ ಪಾರ್ಟಿ ಎಂದು ಕರೆದುಕೊಳ್ಳುವ, ಆದರೆ "ಬೋಲ್ಷೆವಿಕ್ಸ್" ಎಂಬ ಪದವನ್ನು ಆವರಣ ಚಿಹ್ನೆಗಳಲ್ಲಿ ಉಳಿಸಿಕೊಳ್ಳುವ, ಸಲಹೆ ಮಾಡಬಹುದು.

ಆದರೆ ಪಾರ್ಟಿಯ ಹೆಸರಿನ ಪ್ರಶ್ನೆಯು ರಾಜ್ಯದ ಬಗೆಗೆ ಕ್ರಾಂತಿಕಾರಿ ಶ್ರಮಜೀವಿ ವರ್ಗದ ಮನೋಧರ್ಮದ ಪ್ರಶ್ನೆಗಿಂತ ತೀರ ಅಲ್ಪ ಪ್ರಾಮುಖ್ಯತೆಯದಾಗಿದೆ.

ರಾಜ್ಯದ ಬಗೆಗೆ ಸಾಮಾನ್ಯವಾಗಿ ಮಾಡುವ ವಾದಗಳಲ್ಲೆಲ್ಲ ಒಂದು ತಪ್ಪನ್ನು ಸತತವಾಗಿ ಮಾಡಲಾಗುತ್ತಿರುತ್ತದೆ. ಇಂತಹ ತಪ್ಪಿನ ವಿರುದ್ಧ ಎಂಗೆಲ್ಸ್‌ರು ಎಚ್ಚರಿಕೆ ನೀಡಿದರು. ಅದನ್ನು ನಾವು ಪ್ರಾಸಂಗಿಕವಾಗಿ ಮೇಲೆ ಸೂಚಿಸಿದ್ದೇವೆ. ಅದೆಂದರೆ – ರಾಜ್ಯವನ್ನು ರದ್ದು ಮಾಡುವುದು ಎಂದರೆ ಪ್ರಜಾಪ್ರಭುತ್ವವನ್ನೂ ರದ್ದು ಮಾಡುವುದು ಎಂದು ಅರ್ಥವಾಗುತ್ತದೆ, ರಾಜ್ಯವು ಕ್ಷಯಿಸಿಹೋಗುವುದು ಎಂಬುದು ಪ್ರಜಾಪ್ರಭುತ್ವವೂ ಕ್ಷಯಿಸಿಹೋಗುವುದು ಎಂದು ಅರ್ಥವಾಗುತ್ತದೆ, ಎಂಬುದನ್ನು ಯಾವತ್ತೂ ಮರೆಯುವುದು.

ಮೊದಲ ನೋಟಕ್ಕೆ ಈ ಪ್ರತಿಪಾದನೆ ತುಂಬ ವಿಚಿತ್ರವಾಗಿ ಹಾಗೂ ಅರ್ಥವಾಗದಂತೆ ಕಂಡುಬರುತ್ತದೆ; ನಿಜಕ್ಕೂ, ನಾವು ಎಂಥ ಸಮಾಜ ವ್ಯವಸ್ಥೆ ಬರುವುದನ್ನು ನಿರೀಕ್ಷಿಸುತ್ತೇವೆಂದರೆ ಅದರಲ್ಲಿ ಅಲ್ಪಮತೀಯರು ಬಹುಮತೀಯರ ಅಭಿಪ್ರಾಯಕ್ಕೆ ಅಧೀನರಾಗಿರುವ ಸೂತ್ರವನ್ನು ಪಾಲಿಸಲಾಗುವುದಿಲ್ಲ, ಯಾಕೆಂದರೆ ಪ್ರಜಾಪ್ರಭುತ್ವ ಎಂದರೆ ಈ ಸೂತ್ರದ ಮನ್ನಣೆಯೇ ಆಗಿದೆ – ಎಂದು ಯಾರಾದರೂ ನಮ್ಮ ಬಗೆಗೆ ಸಂದೇಹಿಸಬಹುದು ಕೂಡ.

ಇಲ್ಲ, ಪ್ರಜಾಪ್ರಭುತ್ವವು ಅಲ್ಪಮತವು ಬಹುಮತಕ್ಕೆ ಅಧೀನವಾಗಿರುವುದಕ್ಕೆ ಸರಿಸಮ ಅಲ್ಲ. ಪ್ರಜಾಪ್ರಭುತ್ವವು ಅಲ್ಪಮತವು ಬಹುಮತಕ್ಕೆ ಅಧೀನವಾಗಿರುವುದನ್ನು ಮನ್ನಿಸುವ ಒಂದು ರಾಜ್ಯ ಅಂದರೆ, ಒಂದು ವರ್ಗವು ಇನ್ನೊಂದರ ವಿರುದ್ಧ, ಒಂದು ಜನವಿಭಾಗವು ಮತ್ತೊಂದು ಜನವಿಭಾಗದ ವಿರುದ್ಧ ವ್ಯವಸ್ಥಾಬದ್ಧವಾಗಿ ಬಲಪ್ರಯೋಗ ಮಾಡುವ ಒಂದು ಸಂಘಟನೆ.

---

* ವಿ. ಐ. ಲೆನಿನ್, 'ಏಪ್ರಿಲ್ ಪ್ರಮೇಯಗಳ ಪೂರ್ವಭಾವಿ ರೂಪುರೇಷೆಗಳು,' '1917ರ ಏಪ್ರಿಲ್ 4(17)ರಂದು ನಡೆದ ಅಖಿಲ ರಷ್ಯನ್ ಕಾರ್ಮಿಕ ಮತ್ತು ಸೈನಿಕ ಸೋವಿಯತ್‌ಗಳ ಸಮಾವೇಶದಲ್ಲಿ ಭಾಗವಹಿಸಿದ್ದ ಬೋಲ್ಷೆವಿಕ್ ಡೆಪ್ಯೂಟಿಗಳ ಸಭೆಯಲ್ಲಿ ವರದಿ,' 'ಪ್ರಸಕ್ತ ಕ್ರಾಂತಿಯಲ್ಲಿ ಶ್ರಮಜೀವಿ ವರ್ಗದ ಕಾರ್ಯಭಾರಗಳ ಕುರಿತು.' – ಸಂ.

ರಾಜ್ಯವನ್ನು ರದ್ದುಗೊಳಿಸುವುದನ್ನು, ಅಂದರೆ ಎಲ್ಲ ಸಂಘಟಿತ ಹಾಗೂ ವ್ಯವಸ್ಥಾಬದ್ಧ ಬಲೋದ್ಬಂಧವನ್ನು, ಒಟ್ಟಿನಲ್ಲಿ ಜನರ ವಿರುದ್ಧ ಎಲ್ಲ ರೀತಿಯ ಬಲಪ್ರಯೋಗವನ್ನು, ರದ್ದುಗೊಳಿಸುವುದನ್ನು, ನಮ್ಮ ಅಂತಿಮ ಗುರಿಯನ್ನಾಗಿ ಇಟ್ಟುಕೊಂಡಿದ್ದೇವೆ. ಅಲ್ಪಮತವು ಬಹುಮತಕ್ಕೆ ಅಧೀನವಾಗಿರುವ ಸೂತ್ರವನ್ನು ಪಾಲಿಸದಂಥ ಸಮಾಜವ್ಯವಸ್ಥೆ ಬರುವುದನ್ನು ನಾವು ನಿರೀಕ್ಷಿಸುತ್ತಿಲ್ಲ. ಆದರೆ ಸಮಾಜವಾದ ಸ್ಥಾಪನೆಗಾಗಿ ಪ್ರಯತ್ನಿಸುತ್ತಲೇ ನಾವು ಅದು ಕಮ್ಯೂನಿಸಂ ಆಗಿ ಅಭಿವೃದ್ಧಿಗೊಳ್ಳುವುದು, ಆದ್ದರಿಂದ ಒಟ್ಟಿನಲ್ಲಿ ಜನರ ವಿರುದ್ಧ ಬಲಪ್ರಯೋಗದ ಅಗತ್ಯತೆಯು, ಒಬ್ಬ ವ್ಯಕ್ತಿ ಮತ್ತೊಬ್ಬನಿಗೆ, ಒಂದು ಜನವಿಭಾಗವು ಮತ್ತೊಂದು ಜನವಿಭಾಗಕ್ಕೆ ಅಧೀನವಾಗಿರುವ ಅಗತ್ಯತೆಯು ಸಂಪೂರ್ಣವಾಗಿ ಕಣ್ಮರೆಯಾಗುವುದು, ಏಕೆಂದರೆ, ಜನರು ಸಾಮೂಹಿಕ ಜೀವನದ ಪ್ರಾಥಮಿಕ ಉಪಾಧಿಗಳನ್ನು ಬಲಪ್ರಯೋಗವಿಲ್ಲದೆಯೇ ಹಾಗೂ ಅಧೀನತೆಯಿಲ್ಲದೆಯೇ ಪಾಲಿಸುವುದಕ್ಕೆ ಒಗ್ಗಿಹೋಗಿರಲಿರುವರು, ಎಂಬ ದೃಢ ನಂಬಿಕೆಯನ್ನು ಹೊಂದಿದ್ದೇವೆ.

ಅಭ್ಯಾಸಬಲದ ಈ ಅಂಶವನ್ನು ಒತ್ತಿ ತಿಳಿಸಲೋಸುಗ ಎಂಗೆಲ್ಸ್‌ರು "ಹೊಸ ಸ್ವತಂತ್ರ ಸಾಮಾಜಿಕ ಪರಿಸ್ಥಿತಿಗಳಲ್ಲಿ ಬೆಳೆದ" ಒಂದು ಹೊಸ ಪೀಳಿಗೆಯ ಬಗೆಗೆ ಹೇಳುತ್ತಾರೆ. ಅದು "ರಾಜ್ಯದ ಇಡೀ ನಿಷ್ಪ್ರಯೋಜಕ ಕಸದ ರಾಶಿಯನ್ನು ವಿಸರ್ಜಿಸಲು" ಸಮರ್ಥವಾಗುವುದು – ಪ್ರಜಾಸತ್ತಾತ್ಮಕ-ಗಣತಂತ್ರೀಯ ರಾಜ್ಯವನ್ನೂ ಒಳಗೊಂಡು ಯಾವುದೇ ರಾಜ್ಯದ ಕಸದ ರಾಶಿಯನ್ನು ವಿಸರ್ಜಿಸಲು ಸಮರ್ಥವಾಗುವುದು.

ಇದನ್ನು ವಿವರಿಸಲು ರಾಜ್ಯವು ಕ್ಷಯಿಸಿಹೋಗುವುದರ ಆರ್ಥಿಕ ಬುನಾದಿಯನ್ನು ವಿಶ್ಲೇಷಿಸಿ ನೋಡುವುದು ಅವಶ್ಯ.

ಅಧ್ಯಾಯ V

# ರಾಜ್ಯವು ಕ್ಷಯಿಸಿಹೋಗುವುದರ ಆರ್ಥಿಕ ಬುನಾದಿ

ಮಾರ್ಕ್ಸ್‌ರವರು ಈ ಪ್ರಶ್ನೆಯನ್ನು ತುಂಬ ಕೂಲಂಕಷವಾಗಿ ತಮ್ಮ 'ಗೋಥಾ ಕಾರ್ಯಕ್ರಮದ ಟೀಕೆ'ಯಲ್ಲಿ ವಿವರಿಸಿದ್ದಾರೆ (ಬ್ರಾಕೆಗೆ ಬರೆದ, 1875ರ ಮೇ 5ರ ಪತ್ರ, ಇದು 1891ರವರೆಗೂ ಪ್ರಕಟವಾಗಲಿಲ್ಲ, ಆಗಷ್ಟೆ ಇದು *Neue Zeit*, ಸಂ. IX, 1ರಲ್ಲಿ ಮುದ್ರಿತವಾಯಿತು, ಇದು ರಷ್ಯನ್ ಭಾಷೆಯಲ್ಲಿ ಒಂದು ವಿಶೇಷ ಆವೃತ್ತಿಯಲ್ಲಿ ಕಾಣಿಸಿಕೊಂಡಿದೆ). ಲಸ್ಸಾಲ್‌ವಾದದ ಟೀಕೆಯನ್ನು ಒಳಗೊಂಡಿರುವ

ಈ ಅಸಾಧಾರಣ ಕೃತಿಯು ವಾದಪ್ರತಿವಾದಗಳ ಭಾಗವು, ಕೃತಿಯ ಧನಾತ್ಮಕ ಭಾಗವನ್ನು, ಅಂದರೆ ಕಮ್ಯೂನಿಸಂನ ಬೆಳವಣಿಗೆ ಹಾಗೂ ರಾಜ್ಯ ಕ್ಷಯಿಸಿಹೋಗುವುದರ ನಡುವಿನ ಸಂಬಂಧದ ವಿಶ್ಲೇಷಣೆಯನ್ನು, ಮರೆಯಾಗಿಸಿಬಿಟ್ಟಿದೆ, ಎಂದು ಹೇಳಬಹುದು.

## 1. ಮಾರ್ಕ್ಸ್‌ರವರು ಪ್ರಶ್ನೆಯನ್ನು ನಿರೂಪಿಸಿದ ರೀತಿ

1875ರ ಮೇ 5ರಂದು ಮಾರ್ಕ್ಸ್‌ರವರು ಬ್ರಾಕೆಗೆ ಬರೆದ ಪತ್ರವನ್ನೂ, 1875ರ ಮೇ 28ರಂದು ಎಂಗೆಲ್ಸ್‌ರು ಬೆಬಲ್‌ರಿಗೆ ಬರೆದ, ನಾವು ಮೇಲೆ ಪರಿಶೀಲಿಸಿರುವ ಪತ್ರವನ್ನೂ[91] ಸ್ಥೂಲವಾಗಿ ಹೋಲಿಸಿ ನೋಡಿದರೆ, ಮಾರ್ಕ್ಸ್‌ರವರು ಎಂಗೆಲ್ಸ್‌ರವರಿಗಿಂತ ಹೆಚ್ಚಾಗಿ "ರಾಜ್ಯದ ಪ್ರತಿಪಾದಕರಾಗಿದ್ದರು" ಮತ್ತು ರಾಜ್ಯದ ಪ್ರಶ್ನೆಗೆ ಸಂಬಂಧಿಸಿ ಈ ಇಬ್ಬರು ಲೇಖಕರ ನಡುವಿನ ಭಿನ್ನಾಭಿಪ್ರಾಯ ತುಂಬ ಗಣನೀಯವಾಗಿದ್ದಿತು, ಎಂದು ತೋರಬಹುದು.

ರಾಜ್ಯದ ಬಗೆಗೆ ಎಲ್ಲ ಹರಟೆಮಾತುಗಳನ್ನೂ ಸಂಪೂರ್ಣವಾಗಿ ಬಿಟ್ಟುಕೊಡಬೇಕು, ಕಾರ್ಯಕ್ರಮದಲ್ಲಿ "ರಾಜ್ಯ" ಎಂಬ ಪದವನ್ನು ಸಂಪೂರ್ಣವಾಗಿ ಬಿಟ್ಟುಕೊಡಬೇಕು, ಅದರ ಸ್ಥಳದಲ್ಲಿ "ಕಮ್ಯೂನಿಟಿ" (ಸಮುದಾಯ) ಎಂಬ ಪದವನ್ನು ಬಳಸಬೇಕು, ಎಂದು ಎಂಗೆಲ್ಸ್‌ರು ಬೆಬಲ್‌ರಿಗೆ ಸಲಹೆ ಮಾಡಿದ್ದರು. ಕಮ್ಯೂನು ರಾಜ್ಯ ಎಂಬ ಪದದ ನಿಜಾರ್ಥದಲ್ಲಿ ಎಷ್ಟು ಮಾತ್ರವೂ ಒಂದು ರಾಜ್ಯವಾಗಿರಲಿಲ್ಲ ಎಂದೂ ಎಂಗೆಲ್ಸ್ ಘೋಷಿಸಿದರು. ಆದರೆ ಮಾರ್ಕ್ಸ್‌ರವರು "ಕಮ್ಯೂನಿಸ್ಟ್ ಸಮಾಜದಲ್ಲಿ ಭವಿಷ್ಯತ್ತಿನ ರಾಜ್ಯ"ದ ಬಗೆಗೂ ಮಾತನಾಡುತ್ತಾರೆ, ಅಂದರೆ ಕಮ್ಯೂನಿಸಂನ ಅಡಿಯಲ್ಲೂ ರಾಜ್ಯದ ಆವಶ್ಯಕತೆಯನ್ನು ಅವರು ಮನ್ನಿಸುತ್ತಾರೆಂದು ಕಂಡುಬರುತ್ತದೆ.

ಆದರೆ ಹೀಗೆ ಭಿನ್ನತೆ ಕಾಣುವ ಯತ್ನವು ಮೂಲಭೂತವಾಗಿ ತಪ್ಪಾಗುವುದು. ರಾಜ್ಯದ ಬಗೆಗೆ ಮತ್ತು ಅದು ಕ್ಷಯಿಸಿಹೋಗುವುದರ ಬಗೆಗೆ ಮಾರ್ಕ್ಸ್‌ರವರ ಹಾಗೂ ಎಂಗೆಲ್ಸ್‌ರವರ ಅಭಿಪ್ರಾಯಗಳು ಸಂಪೂರ್ಣವಾಗಿ ಒಂದೇ ಆಗಿದ್ದವು, ಮತ್ತು ಮೇಲೆ ಉದ್ಧರಿಸಿರುವ ಮಾರ್ಕ್ಸ್‌ರವರ ಮಾತುಗಳು ಕ್ಷಯಿಸಿಹೋಗಲು ತೊಡಗಿರುವ ರಾಜ್ಯಕ್ಕೆ ಸಂಬಂಧಿಸಿದವಾಗಿವೆ. ಎಂದು ಹೆಚ್ಚು ನಿಕಟವಾಗಿ ಪರಿಶೀಲಿಸಿದಾಗ ಕಂಡುಬರುತ್ತದೆ.

ಭವಿಷ್ಯತ್ತಿನಲ್ಲಿ "ಕ್ಷಯಿಸಿಹೋಗುವ" ಪ್ರಕ್ರಿಯೆಯು ಯಾವ ಘಳಿಗೆಯಲ್ಲಾಗುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆನ್ನಿ. ಅದು ಹೆಚ್ಚು ಅಸಂಭವ, ಏಕೆಂದರೆ ಸ್ಪಷ್ಟವಾಗಿಯೇ ಅದೊಂದು ಸುದೀರ್ಘವಾದ

ಪ್ರಕ್ರಿಯೆಯಾಗಿರುತ್ತದೆ. ಮಾರ್ಕ್ಸ್‌ ಮತ್ತು ಎಂಗೆಲ್ಸ್‌ರ ಮಧ್ಯೆ ಹೊರ ನೋಟಕ್ಕೆ ಕಾಣುವ ಅಭಿಪ್ರಾಯ ವ್ಯತ್ಯಾಸಕ್ಕೆ, ಅವರು ಬೇರೆಬೇರೆ ವಿಷಯಗಳನ್ನು ಪರ್ಯಾಲೋಚಿಸುತ್ತಿದ್ದರು ಮತ್ತು ಬೇರೆಬೇರೆ ಗುರಿಗಳನ್ನು ಅನುಸರಿಸುತ್ತಿದ್ದರು, ಎಂಬುದು ಕಾರಣವಾಗಿದ್ದಿತು. ಪ್ರಸ್ತುತದಲ್ಲಿ ರಾಜ್ಯಕ್ಕೆ ಸಂಬಂಧಿಸಿ ಇರುವ ಮೂಢನಂಬಿಕೆಗಳ (ಲಸ್ಸಾಲ್‌ರು ಬಹುಮಟ್ಟಿಗೆ ಅಂಥವೇ ಮೂಢನಂಬಿಕೆಗಳನ್ನು ಹೊಂದಿದ್ದಾರೆ) ಶುದ್ಧ ಅಸಂಬದ್ಧತೆಯನ್ನು ಎಂಗೆಲ್ಸ್‌ರು ಬೆಬಲ್‌ರಿಗೆ ಕಣ್ಣಿಗೆ ಕಟ್ಟುವಂತೆ ಸ್ಪಷ್ಟವಾಗಿ ಮತ್ತು ಸ್ಥೂಲ ರೂಪುರೇಷೆಗಳೊಂದಿಗೆ ತೋರಿಸಿಕೊಟ್ಟರು. ಮಾರ್ಕ್ಸ್‌ರವರು ಬೇರೊಂದು ವಿಷಯದಲ್ಲಿ, ಅಂದರೆ ಕಮ್ಯೂನಿಸ್ಟ್ ಸಮಾಜದ ಬೆಳವಣಿಗೆಯ ವಿಷಯದಲ್ಲಿ, ಆಸಕ್ತರಾಗಿದ್ದುದರಿಂದ ಈ ಪ್ರಶ್ನೆಯನ್ನು ಪ್ರಾಸಂಗಿಕವಾಗಷ್ಟೆ ಪರ್ಯಾಲೋಚಿಸಿದರು.

ಮಾರ್ಕ್ಸ್‌ರವರ ಇಡೀ ಸಿದ್ಧಾಂತವೆಂದರೆ, ಬೆಳವಣಿಗೆಯ ಸಿದ್ಧಾಂತವನ್ನು, ಅದರ ಅತ್ಯಂತ ಸುಸಂಗತ, ಸಂಪೂರ್ಣ, ಪರ್ಯಾಲೋಚಿತ ಹಾಗೂ ಸೂತ್ರಪ್ರಾಯವಾದ ರೂಪದಲ್ಲಿ, ಆಧುನಿಕ ಬಂಡವಾಳವಾದಕ್ಕೆ ಅನ್ವಯಿಸುವುದಾಗಿದೆ. ಸಹಜವಾಗಿಯೇ ಮಾರ್ಕ್ಸ್‌ರವರ ಮುಂದೆ, ಈ ಸಿದ್ಧಾಂತವನ್ನು ಬರಲಿರುವ ಬಂಡವಾಳವಾದದ ಪತನಕ್ಕಷ್ಟೆ ಅಲ್ಲ, ಭಾವಿ ಕಮ್ಯೂನಿಸಂನ ಭಾವಿ ಬೆಳವಣಿಗೆಗೂ ಸಹ ಅನ್ವಯಿಸುವ ಸಮಸ್ಯೆಯು ಎದ್ದುನಿಂತಿದ್ದಿತು.

ಹಾಗಾದರೆ ಭಾವಿ ಕಮ್ಯೂನಿಸಂನ ಭಾವಿ ಬೆಳವಣಿಗೆಯ ಪ್ರಶ್ನೆಯನ್ನು ಯಾವ ಸತ್ಯಸಂಗತಿಗಳ ಆಧಾರದ ಮೇಲೆ ಪರ್ಯಾಲೋಚಿಸಲು ಸಾಧ್ಯ?

ಭಾವಿ ಕಮ್ಯೂನಿಸಂ ಬಂಡವಾಳವಾದದಲ್ಲೇ ತನ್ನ ಉಗಮವನ್ನು ಹೊಂದಿದೆ, ಅದು ಚಾರಿತ್ರಿಕವಾಗಿ ಬಂಡವಾಳವಾದದಿಂದ ಅಭಿವೃದ್ಧಿಗೊಳ್ಳುತ್ತದೆ, ಅದು ಬಂಡವಾಳವಾದವೇ ಜನ್ಮ ನೀಡಿದಂಥ ಸಾಮಾಜಿಕ ಶಕ್ತಿಯ ಕ್ರಿಯೆಯ ಪರಿಣಾಮವಾಗಿದೆ, ಎಂಬ ಸತ್ಯಸಂಗತಿಯ ಆಧಾರದ ಮೇಲೆ. ಮಾರ್ಕ್ಸ್‌ರವರು ಅಸಾಧ್ಯಾದರ್ಶ ಕಲ್ಪನೆಗಳನ್ನು ಸೃಜಿಸುವ, ಯಾವುದನ್ನು ತಿಳಿಯಲಾಗುವುದಿಲ್ಲವೋ ಅದರ ಬಗೆಗೆ ನಿರರ್ಥಕ ಊಹೆಗಳಲ್ಲಿ ತೊಡಗುವ ಯತ್ನ ಮಾಡಿದ ಛಾಯೆಯೂ ಇಲ್ಲ. ಮಾರ್ಕ್ಸ್‌ರವರು ಕಮ್ಯೂನಿಸಂನ ಪ್ರಶ್ನೆಯನ್ನು ಪ್ರಕೃತಿಶಾಸ್ತ್ರಜ್ಞನೊಬ್ಬ ಒಂದು ಹೊಸ ಜೈವ ವೈಜ್ಞಾನಿಕ ಮಾದರಿಯೊಂದರ ಬೆಳವಣಿಗೆಯ ಪ್ರಶ್ನೆಯನ್ನು ಅದು ಇಂಥ ಇಂಥ ರೀತಿಯಲ್ಲಿ ಹುಟ್ಟಿದೆ ಮತ್ತು ಇಂಥ ಇಂಥ ನಿರ್ದಿಷ್ಟ ದಿಕ್ಕಿನಲ್ಲಿ ಮಾರ್ಪಾಟು ಹೊಂದುತ್ತಿದೆ ಎಂಬುದನ್ನು ತಿಳಿದನಂತರ ಪರ್ಯಾಲೋಚಿಸುವ ರೀತಿಯಲ್ಲೇ ಪರ್ಯಾಲೋಚಿಸಿದರು.

ಆರಂಭದಲ್ಲಿ ಮಾರ್ಕ್ಸ್‌ರವರು ಗೋಥಾ ಕಾರ್ಯಕ್ರಮವು ರಾಜ್ಯ ಹಾಗೂ ಸಮಾಜದ ನಡುವಿನ ಸಂಬಂಧದ ಪ್ರಶ್ನೆಯ ಬಗೆಗೆ ಉಂಟುಮಾಡಿದ್ದ ಗೊಂದಲವನ್ನು ತಳ್ಳಿ ಹಾಕಿದರು. ಅವರು ಬರೆದರು:

"ಇಂದಿನ ಸಮಾಜವು ಬಂಡವಾಳಶಾಹಿ ಸಮಾಜವಾಗಿದೆ. ಇದು ಎಲ್ಲ ನಾಗರಿಕ ದೇಶಗಳಲ್ಲೂ ಅಸ್ತಿತ್ವದಲ್ಲಿದೆ, ಮಧ್ಯಯುಗದ ಕಲಬೆರಕೆಯಿಂದ ಹೆಚ್ಚು ಕಮ್ಮಿ ಮುಕ್ತವಾಗಿದೆ, ಒಂದೊಂದೂ ದೇಶದ ನಿರ್ದಿಷ್ಟ ಚಾರಿತ್ರಿಕ ಬೆಳವಣಿಗೆಯಿಂದ ಹೆಚ್ಚು ಕಮ್ಮಿ ಮಾರ್ಪಡಿಸಲ್ಪಟ್ಟಿದೆ, ಹೆಚ್ಚು ಕಮ್ಮಿ ಅಭಿವೃದ್ಧಿಗೊಂಡಿದೆ. ಬೇರೊಂದು ಕಡೆ, 'ಇಂದಿನ ರಾಜ್ಯ'ವು ದೇಶದ ಗಡಿಯೊಂದಿಗೆ ಬದಲಾಗುತ್ತ ಹೋಗುತ್ತದೆ. ಅದು ಪ್ರುಸ್ಸೊ-ಜರ್ಮನ್ ಸಾಮ್ರಾಜ್ಯದಲ್ಲಿ ಸ್ವಿಟ್ಸರ್ಲೆಂಡಿನಲ್ಲಿರುವುದಕ್ಕಿಂತ ಭಿನ್ನವಾಗಿದೆ, ಇಂಗ್ಲೆಂಡಿನಲ್ಲಿ ಅಮೆರಿಕದಲ್ಲಿರುವುದಕ್ಕಿಂತ ಭಿನ್ನವಾಗಿದೆ. ಆದ್ದರಿಂದ 'ಇಂದಿನ ರಾಜ್ಯ' ಎಂಬುದು ಒಂದು ಮಿಥ್ಯವಷ್ಟೆ.

"ಆದಾಗ್ಯೂ, ವಿಭಿನ್ನ ನಾಗರಿಕ ದೇಶಗಳಲ್ಲಿ ವಿಭಿನ್ನ ರಾಜ್ಯಗಳು, ಭಿನ್ನ ವಿಭಿನ್ನ ರೂಪ ಹೊಂದಿದ್ದರೂ, ಅವೆಲ್ಲ ಒಂದು ಸಾಮಾನ್ಯ ಅಂಶವನ್ನು ಹೊಂದಿರುತ್ತವೆ. ಅದೆಂದರೆ, ಅವು ಆಧುನಿಕ ಬೂರ್ಷ್ವಾ ಸಮಾಜದ ಮೇಲೆ ಆಧರಿಸಿವೆ, ಬಂಡವಾಳವಾದವು ಒಂದರಲ್ಲಿ ಹೆಚ್ಚು, ಒಂದರಲ್ಲಿ ಕಮ್ಮಿ ಬೆಳವಣಿಗೆ ಪಡೆದಿರಬಹುದಷ್ಟೆ. ಆದ್ದರಿಂದ ಅವು ಕೆಲವು ಸಾರಭೂತ ಲಕ್ಷಣಗಳನ್ನು ಸರ್ವಸಾಮಾನ್ಯವಾಗಿ ಹೊಂದಿರುತ್ತವೆ. ಈ ಅರ್ಥದಲ್ಲಿ 'ಇಂದಿನ ರಾಜ್ಯ' ಎಂಬುದರ ಬಗೆಗೆ, ಭವಿಷ್ಯತ್ತಿನದಕ್ಕೆ ವೈದೃಶ್ಯವಾಗಿ ಮಾತನಾಡಲು ಸಾಧ್ಯವಿದೆ. ಆ ಭವಿಷ್ಯತ್ತಿನದರಲ್ಲಿ ಅದರ ಇಂದಿನ ಬೇರು, ಬೂರ್ಷ್ವಾ ಸಮಾಜವು, ಒಣಗಿ ಹೋಗಿರುತ್ತದೆ.

"ಈಗ ಈ ಪ್ರಶ್ನೆ ಉದ್ಭವಿಸುತ್ತದೆ: ಕಮ್ಯೂನಿಸ್ಟ್ ಸಮಾಜದಲ್ಲಿ ರಾಜ್ಯವು ಯಾವ ಪರಿವರ್ತನೆಯನ್ನು ಹೊಂದುವುದು? ಬೇರೆ ಮಾತುಗಳಲ್ಲಿ, ಅಲ್ಲಿ ಇಂದಿನ ರಾಜ್ಯದ ಕ್ರಿಯೆಗಳಿಗೆ ಸಾದೃಶ್ಯವಾಗಿರುವಂಥ ಯಾವ ಸಾಮಾಜಿಕ ಕ್ರಿಯೆಗಳು ಅಸ್ತಿತ್ವದಲ್ಲಿ ಇರಲಿರುವುವು? ಈ ಪ್ರಶ್ನೆಗೆ ವೈಜ್ಞಾನಿಕವಾಗಿಯಷ್ಟೆ ಉತ್ತರ ನೀಡಲು ಸಾಧ್ಯ. 'ಜನತೆ' ಎಂಬ ಪದವನ್ನು 'ರಾಜ್ಯ' ಎಂಬ ಪದದೊಂದಿಗೆ ಸಾವಿರಾರು ರೀತಿಗಳ ಕೂಡಿಕೆಗಳನ್ನು ಮಾಡುವುದರಿಂದ ಸಮಸ್ಯೆಯ ಪರಿಹಾರಕ್ಕೆ ಎಷ್ಟು ಹತ್ತಿರವೂ ಹೋದಂತಾಗುವುದಿಲ್ಲ."[92]

ಹೀಗೆ "ಜನತಾ ರಾಜ್ಯ"ದ ಬಗೆಗೆ ಎಲ್ಲ ಮಾತುಗಳನ್ನೂ ಪರಿಹಾಸ್ಯಕ್ಕೊಳಪಡಿಸಿದನಂತರ ಮಾರ್ಕ್ಸ್‌ರವರು, ಪ್ರಶ್ನೆಯನ್ನು ನಿರೂಪಿಸಿ ಅದಕ್ಕೆ ವೈಜ್ಞಾನಿಕ ಉತ್ತರವನ್ನು ಕಂಡುಹಿಡಿಯಲು ಬಯಸುವವರು ದೃಢವಾಗಿ ಸಮರ್ಥಿಸಲ್ಪಟ್ಟಿರುವ ವೈಜ್ಞಾನಿಕ ಮಾಹಿತಿಗಳನ್ನಷ್ಟೆ ಬಳಸಬೇಕು ಎಂದು ಎಚ್ಚರಿಕೆಯನ್ನು ನೀಡುವ ಹಾಗೆ ಹೇಳಿದರು:

ಬೆಳವಣಿಗೆಯ ಇಡೀ ಸಿದ್ಧಾಂತವು, ಒಟ್ಟಿನ ಮೇಲೆ ವಿಜ್ಞಾನವು ಅತ್ಯಂತ ಕರಾರು ವಾಕ್ಕಾಗಿ ಸಮರ್ಥಿಸಿರುವ ಮೊದಲ ಸತ್ಯಸಂಗತಿ ಎಂದರೆ – ಅಸಾಧ್ಯಾದರ್ಶವಾದಿಗಳು ಉಪೇಕ್ಷಿಸಿದ ಮತ್ತು ಸಮಾಜವಾದಿ ಕ್ರಾಂತಿಗೆ ಅಂಜುವ ಇಂದಿನ ಸಂದರ್ಭಸಾಧಕ ವಾದಿಗಳು ಉಪೇಕ್ಷಿಸುತ್ತಿರುವ ಆ ಸತ್ಯಸಂಗತಿ ಎಂದರೆ – ಚಾರಿತ್ರಿಕವಾಗಿ ಬಂಡವಾಳ ವಾದದಿಂದ ಕಮ್ಯೂನಿಸಂಗೆ ಪರಿವರ್ತನೆಯ ಒಂದು ವಿಶೇಷ ಘಟ್ಟವು ಅಥವಾ ಒಂದು ವಿಶೇಷ ಮಜಲು, ನಿಸ್ಸಂದೇಹವಾಗಿಯೂ ಇರಬೇಕು, ಎಂಬುದಾಗಿದೆ.

## 2. ಬಂಡವಾಳವಾದದಿಂದ ಕಮ್ಯೂನಿಸಂಗೆ ಪರಿವರ್ತನೆ

ಮುಂದುವರಿಯುತ್ತ ಮಾರ್ಕ್ಸ್ ಹೀಗೆ ಬರೆಯುತ್ತಾರೆ,

> "ಬಂಡವಾಳವಾದಿ ಸಮಾಜಕ್ಕೂ ಕಮ್ಯೂನಿಸ್ಟ್ ಸಮಾಜಕ್ಕೂ ನಡುವೆ ಒಂದು ಇನ್ನೊಂದಕ್ಕೆ ಕ್ರಾಂತಿಕಾರಿಯಾಗಿ ಪರಿವರ್ತನೆಗೊಳ್ಳುವ ಕಾಲಾವಧಿ ಇರುತ್ತದೆ. ಇದಕ್ಕನುಗುಣವಾಗಿ ರಾಜಕೀಯ ಪರಿವರ್ತನೆಯ ಕಾಲಾವಧಿಯೂ ಇರುತ್ತದೆ. ಆಗ ರಾಜ್ಯವು ಶ್ರಮಜೀವಿ ವರ್ಗದ ಕ್ರಾಂತಿಕಾರಿ ಸರ್ವಾಧಿಕಾರತ್ವವಲ್ಲದೆ ಬೇರೇನೂ ಆಗಿರಲಾರದು."

ಆಧುನಿಕ ಬಂಡವಾಳಶಾಹಿ ಸಮಾಜದಲ್ಲಿ ಶ್ರಮಜೀವಿ ವರ್ಗವು ನಿರ್ವಹಿಸು ತ್ತಿರುವ ಪಾತ್ರದ ಮೇಲೆ, ಈ ಸಮಾಜವು ಬೆಳವಣಿಗೆಯಾಗುತ್ತಿರುವುದಕ್ಕೆ ಸಂಬಂಧಿ ಸಿದ ಅಂಕಿಅಂಶಗಳ ಮೇಲೆ ಮತ್ತು ಶ್ರಮಜೀವಿ ವರ್ಗದ ಹಾಗೂ ಬೂರ್ಷ್ವಾ ಸೀಯ ಪರಸ್ಪರ ವಿರುದ್ಧ ಹಿತಗಳ ಅಸಾಂಗತ್ಯದ ಮೇಲೆ ಆಧರಿಸಿ ಮಾರ್ಕ್ಸ್‌ರವರು ಈ ತೀರ್ಮಾನಕ್ಕೆ ಬಂದರು.

ಈ ಮುನ್ನ ವಿಷಯವನ್ನು ಹೀಗೆ ಹೇಳಲಾಗುತ್ತಿದ್ದಿತು: ತನ್ನ ವಿಮೋಚನೆಯನ್ನು ಸಾಧಿಸಿಕೊಳ್ಳಲೋಸುಗ ಶ್ರಮಜೀವಿ ವರ್ಗವು ಬೂರ್ಷ್ವಾಸೀಯನ್ನು ಉರುಳಿಸ ಬೇಕು, ರಾಜಕೀಯ ಅಧಿಕಾರವನ್ನು ಸಂಪಾದಿಸಿಕೊಳ್ಳಬೇಕು ಮತ್ತು ತನ್ನ ಕ್ರಾಂತಿ ಕಾರಿ ಸರ್ವಾಧಿಕಾರತ್ವವನ್ನು ಸ್ಥಾಪಿಸಬೇಕು.

ಈಗ ವಿಷಯವನ್ನು ಸ್ವಲ್ಪ ಬೇರೆ ರೀತಿಯಲ್ಲಿ ಹೇಳಲಾಗುತ್ತಿದೆ: ಬಂಡವಾಳ ಶಾಹಿ ಸಮಾಜದಿಂದ – ಇದು ಕಮ್ಯೂನಿಸಂನತ್ತ ಅಭಿವೃದ್ಧಿಗೊಳ್ಳುತ್ತಿದೆ – ಕಮ್ಯೂ ನಿಸ್ಟ್ ಸಮಾಜಕ್ಕೆ ಪರಿವರ್ತನೆಯು "ರಾಜಕೀಯ ಪರಿವರ್ತನೆಯ ಕಾಲಾವಧಿ" ಯೊಂದು ಇಲ್ಲದೆ ಸಾಧ್ಯವಿಲ್ಲ ಮತ್ತು ಈ ಕಾಲಾವಧಿಯಲ್ಲಿ ರಾಜ್ಯವೂ ಶ್ರಮಜೀವಿ ವರ್ಗದ ಕ್ರಾಂತಿಕಾರಿ ಸರ್ವಾಧಿಕಾರತ್ವವಷ್ಟೆ ಆಗಿರಬಲ್ಲುದು.

ಹಾಗಾದರೆ ಪ್ರಜಾಪ್ರಭುತ್ವದೊಂದಿಗೆ ಈ ಸರ್ವಾಧಿಕಾರತ್ವದ ಸಂಬಂಧ ಏನಾಗಿ ರುತ್ತದೆ?

'ಕಮ್ಯೂನಿಸ್ಟ್ ಪ್ರಣಾಳಿಕೆ'ಯು ಎರಡು ಪ್ರಕಲ್ಪನೆಗಳನ್ನು ಸುಮ್ಮನೆ ಒಂದರ ಪಕ್ಕದಲ್ಲಿ ಇನ್ನೊಂದನ್ನು ಇರಿಸುತ್ತದೆಂಬುದನ್ನು ನಾವು ಕಂಡಿದ್ದೇವೆ: "ಶ್ರಮಜೀವಿ ವರ್ಗವು ಆಳುವ ವರ್ಗದ ಸ್ಥಾನಕ್ಕೆ ಬರುವುದು" ಮತ್ತು "ಪ್ರಜಾಪ್ರಭುತ್ವವನ್ನು ಗೆದ್ದುಕೊಳ್ಳುವುದು".[93] ಬಂಡವಾಳವಾದದಿಂದ ಕಮ್ಯೂನಿಸಂಗೆ ಪರಿವರ್ತನೆಯ ಕಾಲಾವಧಿಯಲ್ಲಿ ಪ್ರಜಾಪ್ರಭುತ್ವವು ಹೇಗೆ ಬದಲಾಗುತ್ತದೆಂಬುದನ್ನು ಮೇಲೆ ಹೇಳಿದ ಎಲ್ಲ ವಿಷಯಗಳ ಆಧಾರದ ಮೇಲೆ ಹೆಚ್ಚು ನಿಷ್ಕೃಷ್ಟವಾಗಿ ನಿರ್ಧರಿಸಲು ಸಾಧ್ಯ ಇದೆ.

ಬಂಡವಾಳಶಾಹಿ ಸಮಾಜದಲ್ಲಿ, ಈ ಸಮಾಜವು ಅತ್ಯಂತ ಅನುಕೂಲ ಪರಿಸ್ಥಿತಿಗಳಲ್ಲಿ ಬೆಳೆಯುತ್ತಿರುವುದಾದರೆ, ಪ್ರಜಾಸತ್ತಾತ್ಮಕ ಗಣತಂತ್ರವು ಹೆಚ್ಚು ಕಮ್ಮಿ ಸಂಪೂರ್ಣ ಪ್ರಜಾಪ್ರಭುತ್ವವಾಗಿರುವುದನ್ನು ಕಾಣುತ್ತೇವೆ. ಆದರೆ ಈ ಪ್ರಜಾಪ್ರಭುತ್ವದ ಸುತ್ತ ಬಂಡವಾಳಶಾಹಿ ಶೋಷಣೆ ಹಾಕಿದ ಸಂಕುಚಿತ ಮೇರೆಗಳ ಮುಳ್ಳು ಬೇಲಿ ಇರುವುದನ್ನೂ ಯಾವತ್ತೂ ಕಾಣುತ್ತೇವೆ. ತತ್ಫಲವಾಗಿ ಅದು ಯಾವತ್ತೂ ಪರಿಣಾಮದಲ್ಲಿ ಅಲ್ಪಮತಕ್ಕಷ್ಟೆ, ಆಸ್ತಿವಂತ ವರ್ಗಗಳಿಗಷ್ಟೆ, ಶ್ರೀಮಂತರಿಗಷ್ಟೆ, ಪ್ರಜಾಪ್ರಭುತ್ವವಾಗಿ ಇರುತ್ತದೆ. ಬಂಡವಾಳಶಾಹಿ ಸಮಾಜದಲ್ಲಿ ಸ್ವಾತಂತ್ರ್ಯವು ಬಹು ಮಟ್ಟಿಗೆ ಪುರಾತನ ಗ್ರೀಕ್ ಗಣತಂತ್ರಗಳಲ್ಲಿದ್ದಷ್ಟೆ ಯಾವತ್ತೂ ಇರುತ್ತದೆ: ಗುಲಾಮರ ಒಡೆಯರಿಗಷ್ಟೆ ಸ್ವಾತಂತ್ರ್ಯವಾಗಿರುತ್ತದೆ. ಬಂಡವಾಳಶಾಹಿ ಶೋಷಣೆಯ ಪರಿಸ್ಥಿತಿಗಳಿಂದಾಗಿ ಆಧುನಿಕ ಕೂಲಿ ಗುಲಾಮರು ಅಭಾವ ಮತ್ತು ಬಡತನಗಳಿಂದ ಎಷ್ಟು ನಜ್ಜುಗುಜ್ಜಾಗಿರುತ್ತಾರೆಂದರೆ ಅವರಿಗೆ "ಪ್ರಜಾಪ್ರಭುತ್ವದ ಗೊಡವೆ ಬೇಕಾಗಿಯೇ ಇರುವುದಿಲ್ಲ," "ರಾಜಕಾರಣದ ಗೊಡವೆ ಬೇಕಾಗಿಯೇ ಇರುವುದಿಲ್ಲ;" ಘಟನೆಗಳು ಸಾಮಾನ್ಯವಾಗಿ ಶಾಂತಿಯುತವಾಗಿ ಜರುಗುತ್ತಿರುವ ಕಾಲದಲ್ಲಿ ಜನಸಂಖ್ಯೆಯ ಬಹುಮತವು ಸಾರ್ವಜನಿಕ ಹಾಗೂ ರಾಜಕೀಯ ಜೀವನದಲ್ಲಿ ಭಾಗ ವಹಿಸದಿರುವಂತೆ ತಡೆ ಹಾಕಿರಲಾಗುತ್ತದೆ.

ಈ ಹೇಳಿಕೆಯ ಸಮರ್ಪಕತೆಯನ್ನು ಜರ್ಮನಿಯು ಬಹುಶಃ ಅತ್ಯಂತ ಸ್ಪಷ್ಟವಾಗಿ ಸಮರ್ಥಿಸಿ ತೋರಿಸುತ್ತದೆ; ಏಕೆಂದರೆ, ಸಂವಿಧಾನಾತ್ಮಕ ಶಾಸನಬದ್ಧತೆಯು ಅಲ್ಲಿ ತುಂಬ ದೀರ್ಘಕಾಲದವರೆಗೆ – ಸುಮಾರು ಅರ್ಧ ಶತಮಾನ(1871-1914)ದವರೆಗೆ – ಇದ್ದಿತು ಮತ್ತು ಈ ಕಾಲಾವಧಿಯಲ್ಲಿ ಸೋಷಲ್ ಡೆಮೊಕ್ರಾಟರು "ಶಾಸನಬದ್ಧತೆಯನ್ನು ಉಪಯೋಗಿಸಿಕೊಳ್ಳು"ವುದರಲ್ಲಿ ಬೇರಾವ ದೇಶಕ್ಕಿಂತ ಹೆಚ್ಚು ಸಮರ್ಥರಾದರು, ಜಗತ್ತಿನಲ್ಲಿ ಬೇರೆಲ್ಲಿಗಿಂತ ಹೆಚ್ಚು ಪ್ರಮಾಣದಲ್ಲಿ ಅವರು ಕಾರ್ಮಿಕರನ್ನು ರಾಜಕೀಯ ಪಕ್ಷವನ್ನಾಗಿ ಸಂಘಟಿಸಿದರು.

ಬಂಡವಾಳಶಾಹಿ ಸಮಾಜದಲ್ಲಿ ಇದುವರೆವಿಗೂ ದಾಖಲಾಗಿರುವ, ರಾಜಕೀಯ ಜಾಗೃತಿ ಪಡೆದ ಹಾಗೂ ಕ್ರಿಯಾಶೀಲರಾದ ಕೂಲಿ ಗುಲಾಮರ, ಈ ಅತ್ಯಂತ ವಿಶಾಲ ಪ್ರಮಾಣ ಯಾವುದು? ಒಂದು ಕೋಟಿ 50 ಲಕ್ಷ ಕೂಲಿ ಕೆಲಸಗಾರರಲ್ಲಿ

ಹತ್ತು ಲಕ್ಷ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿ ಸದಸ್ಯರು ! ಒಂದು ಕೋಟಿ 50 ಲಕ್ಷ ಮಂದಿಯಲ್ಲಿ 30 ಲಕ್ಷ ಮಂದಿ ಟ್ರೇಡ್ ಯೂನಿಯನ್‌ಗಳಲ್ಲಿ ಸಂಘಟಿತರಾದವರು !

ಅತ್ಯಂತ ನಿಕೃಷ್ಟ ಅಲ್ಪಮತಕ್ಕೆ ಪ್ರಜಾಪ್ರಭುತ್ವ, ಶ್ರೀಮಂತರಿಗೆ ಪ್ರಜಾಪ್ರಭುತ್ವ – ಇದೇ ಬಂಡವಾಳಶಾಹಿ ಸಮಾಜದ ಪ್ರಜಾಪ್ರಭುತ್ವ. ಬಂಡವಾಳಶಾಹಿ ಪ್ರಜಾಪ್ರಭುತ್ವದ ಯಂತ್ರವನ್ನು ನಾವು ಹೆಚ್ಚು ನಿಕಟವಾಗಿ ನೋಡಿದರೆ ನಾವು ಎಲ್ಲೆಲ್ಲೂ, ಮತದಾನದ "ಅಲ್ಪ" – ಅಲ್ಪವೆಂದು ಭಾವಿಸಲಾದ – ವಿವರಗಳಲ್ಲಿ (ಸ್ಥಿರ ವಾಸದ ಅರ್ಹತೆ, ಮಹಿಳೆಯರನ್ನು ಹೊರತಾಗಿಸಿದ್ದುದು, ಇತ್ಯಾದಿ), ಪ್ರಾತಿನಿಧಿಕ ಸಂಸ್ಥೆಗಳ ಕಾರ್ಯತಂತ್ರದಲ್ಲಿ, ಸಭೆ ಕೂಡುವ ಹಕ್ಕಿಗಿದ್ದ ನಿಜವಾದ ಅಡ್ಡಿ ಆತಂಕಗಳಲ್ಲಿ (ಸಾರ್ವಜನಿಕ ಸೌಧಗಳು "ದರಿದ್ರ"ರಿಗೆ ಸಲ್ಲ !), ದಿನ ಪತ್ರಿಕೆಗಳ ಶುದ್ಧ ಬಂಡವಾಳಶಾಹಿ ಸಂಘಟನೆಯಲ್ಲಿ, ಇತ್ಯಾದಿ, ಇತ್ಯಾದಿಗಳಲ್ಲೆಲ್ಲ ನಾವು ಪ್ರಜಾಪ್ರಭುತ್ವಕ್ಕೆ ಒಂದಾದ ಮೇಲೊಂದರಂತೆ ನಿರ್ಬಂಧಗಳನ್ನು ಕಾಣುತ್ತೇವೆ. ಬಡವರ ಮೇಲೆ ಹೊರಿಸಲಾದ ಈ ನಿರ್ಬಂಧಗಳು, ಪ್ರತಿಷೇಧಗಳು, ಬಹಿಷ್ಕಾರಗಳು ಹಾಗೂ ಅಡ್ಡಿ ಆತಂಕಗಳು, ತಾವೇ ಕೊರತೆಯನ್ನೆಂದೂ ಕಂಡರಿಯದ ಮತ್ತು ಮರ್ದಿತ ವರ್ಗಗಳ ಜನರ ಸಾಮೂಹಿಕ ಜೀವನದೊಂದಿಗೆ ಎಂದೂ ನಿಕಟ ಸಂಬಂಧ ಹೊಂದಿರದ ಜನರ ದೃಷ್ಟಿಯಲ್ಲಿ ವಿಶೇಷವಾಗಿ (ಬೂರ್ಷ್ವಾ ಬರಹಗಾರರು ಹಾಗೂ ರಾಜಕಾರಣಿಗಳಲ್ಲಿ ನೂರರಲ್ಲಿ ತೊಂಬತ್ತೊಂಬತ್ತು ಮಂದಿಯಲ್ಲದಿದ್ದರೆ ಹತ್ತರಲ್ಲಿ ಒಂಬತ್ತು ಮಂದಿಯಾದರೂ ಈ ಗುಂಪಿನಲ್ಲಿ ಬರುತ್ತಾರೆ) ನಿಕೃಷ್ಟವೆಂದು ಕಂಡುಬರುತ್ತವೆ; ಆದರೆ ಒಟ್ಟಾರೆ ಪರಿಣಾಮದಲ್ಲಿ ಈ ನಿರ್ಬಂಧಗಳು ಬಡಜನರನ್ನು ರಾಜಕಾರಣದಿಂದ, ಪ್ರಜಾಪ್ರಭುತ್ವದಲ್ಲಿ ಕ್ರಿಯಾಶೀಲವಾಗಿ ಭಾಗವಹಿಸುವುದರಿಂದ, ಬಹಿಷ್ಕರಿಸುತ್ತವೆ, ಅವರನ್ನು ಹಿಂಡಿ ಹೊರಹಾಕುತ್ತವೆ.

ಮರ್ದಕ ವರ್ಗದ ಯಾವ ವಿಶಿಷ್ಟ ಪ್ರತಿನಿಧಿಗಳು ತಮ್ಮನ್ನು ಪಾರ್ಲಿಮೆಂಟಿನಲ್ಲಿ ಪ್ರತಿನಿಧಿಸಬೇಕು ಮತ್ತು ತಮ್ಮ ಮೇಲೆ ದಬ್ಬಾಳಿಕೆ ನಡೆಸಬೇಕು ಎಂಬುದನ್ನು ನಿರ್ಧರಿಸಲು ಮರ್ದಿತ ವರ್ಗಗಳ ಜನರಿಗೆ ಪ್ರತಿ ಕೆಲವು ವರ್ಷಗಳಿಗೊಮ್ಮೆ ಅವಕಾಶ ನೀಡಲಾಗುತ್ತದೆ, ಎಂದು ಮಾರ್ಕ್ಸ್‌ರವರು ಕಮ್ಯೂನ್‌ನ ಅನುಭವವನ್ನು ವಿಶ್ಲೇಷಿಸುವುದರಲ್ಲಿ ಹೇಳಿದಾಗ, ಬಂಡವಾಳಶಾಹಿ ಪ್ರಜಾಪ್ರಭುತ್ವದ ಈ ಸಾರವನ್ನು ಅಮೋಘವಾಗಿ ವ್ಯಕ್ತಪಡಿಸಿದರು.[94]

ಆದರೆ ಅನಿವಾರ್ಯವಾಗಿ ಸಂಕುಚಿತವಾದ, ಬಡವರನ್ನು ಮೋಸದಿಂದ ಪಕ್ಕಕ್ಕೆ ತಳ್ಳುವ, ಆದ್ದರಿಂದಲೇ ಆಮೂಲಾಗ್ರವಾಗಿ ಬೂಟಾಟಿಕೆ ಹಾಗೂ ಸುಳ್ಳಿನದಾಗಿರುವ ಈ ಬಂಡವಾಳಶಾಹಿ ಪ್ರಜಾಪ್ರಭುತ್ವದಿಂದ ಮುಂದಿನ ಬೆಳವಣಿಗೆಯು, ಉದಾರವಾದಿ ಪ್ರಾಧ್ಯಾಪಕರೂ ಪೆಟಿ ಬೂರ್ಷ್ವಾ ಸಂದರ್ಭಸಾಧಕವಾದಿಗಳೂ ನಮಗೆ ನಂಬುವ ಹಾಗೆ ಹೇಳುತ್ತಿರುವಂತೆ, "ಹೆಚ್ಚು ಹೆಚ್ಚಿನ ಪ್ರಜಾಪ್ರಭುತ್ವ"ದತ್ತ ಸರಳವಾಗಿ, ನೇರವಾಗಿ ಹಾಗೂ ಸುಗಮವಾಗಿ ಏನೂ ಸಾಗಿ ಹೋಗುವುದಿಲ್ಲ. ಇಲ್ಲ,

ಮುಂದಿನ ಬೆಳವಣಿಗೆಯು, ಅಂದರೆ ಕಮ್ಯೂನಿಸಂನತ್ತ ಬೆಳವಣಿಗೆಯು, ಶ್ರಮ ಜೀವಿ ವರ್ಗದ ಸರ್ವಾಧಿಕಾರತ್ವದ ಮೂಲಕ ಮುಂದುವರಿಯುತ್ತದೆ. ಹಾಗಿಲ್ಲದೆ ಬೇರೆ ಇರಲು ಸಾಧ್ಯವೇ ಇಲ್ಲ, ಏಕೆಂದರೆ, ಬಂಡವಾಳಶಾಹಿ ಶೋಷಕರ ಪ್ರತಿರೋಧವನ್ನು ಬೇರೆ ಯಾರೂ ಬೇರೆ ಯಾವುದೇ ಮಾರ್ಗದಲ್ಲಿ ಮುರಿಯಲು ಸಾಧ್ಯವಿಲ್ಲ.

ಮತ್ತೆ, ಶ್ರಮಜೀವಿ ವರ್ಗದ ಸರ್ವಾಧಿಕಾರತ್ವವು, ಅಂದರೆ ಮರ್ದಿತ ಜನರ ಮುಂಚೂಣಿಯು ಮರ್ದಕರನ್ನು ಸದೆಬಡಿಯುವ ಉದ್ದೇಶದಿಂದ ಆಳುವ ವರ್ಗ ವಾಗಿ ಸಂಘಟಿತಗೊಳ್ಳುವುದು, ಪ್ರಜಾಪ್ರಭುತ್ವವನ್ನು ವಿಸ್ತಾರಗೊಳಿಸುವುದರಲ್ಲಷ್ಟೆ ಪರಿಣಾಮಗೊಳ್ಳದು. ಪ್ರಜಾಪ್ರಭುತ್ವವನ್ನು ಅಪಾರವಾಗಿ ವಿಸ್ತಾರಗೊಳಿಸುವುದರ ಜೊತೆಗೇ – ಅದು ಪ್ರಪ್ರಥಮ ಬಾರಿಗೆ ಹಣವಂತರಿಗೆ ಅಲ್ಲ, ಆದರೆ ಬಡವರಿಗೆ ಪ್ರಜಾ ಪ್ರಭುತ್ವವಾಗಿ, ಜನರಿಗೆ ಪ್ರಜಾಪ್ರಭುತ್ವವಾಗಿ ಬೆಳೆಯುತ್ತದೆ, – ಶ್ರಮಜೀವಿ ವರ್ಗದ ಸರ್ವಾಧಿಕಾರತ್ವವು ಮರ್ದಕರ, ಶೋಷಕರ ಹಾಗೂ ಬಂಡವಾಳಶಾಹಿಗಳ ಸ್ವಾತಂತ್ರ್ಯದ ಮೇಲೆ ಅನೇಕಾನೇಕ ನಿರ್ಬಂಧಗಳನ್ನು ಹಾಕುತ್ತದೆ. ಮಾನವಕುಲವನ್ನು ಕೂಲಿ ದಾಸ್ಯದಿಂದ ಮುಕ್ತಗೊಳಿಸಲು ನಾವು ಬಂಡವಾಳಶಾಹಿಗಳನ್ನು ಸದೆಬಡಿಯ ಬೇಕು, ಅವರ ಪ್ರತಿರೋಧವನ್ನು ಬಲಪ್ರಯೋಗದಿಂದ ಕುಟ್ಟಿಪುಡಿಮಾಡಬೇಕು; ಹೀಗೆ ಹತ್ತಿಕ್ಕುವಿಕೆ ಹಾಗೂ ಹಿಂಸಾಚರಣೆ ಇರುವೆಡೆ ಸ್ವಾತಂತ್ರ್ಯ ಇರಲಾರದು, ಪ್ರಜಾಪ್ರಭುತ್ವ ಇರಲಾರದು ಎಂಬುದು ಸ್ಪಷ್ಟ.

ಎಂಗೆಲ್ಸ್‌ರು ಈ ವಿಚಾರವನ್ನು ಬೆಬಲ್‌ರಿಗೆ ಬರೆದ ಪತ್ರದಲ್ಲಿ ಸೊಗಸಾಗಿ ವ್ಯಕ್ತಪಡಿಸಿದ್ದಾರೆ. "ಶ್ರಮಜೀವಿ ವರ್ಗಕ್ಕೆ ರಾಜ್ಯವು ಸ್ವಾತಂತ್ರ್ಯದ ಹಿತರಕ್ಷಣೆಗಾಗಿ ಯಲ್ಲ, ಆದರೆ ತನ್ನ ಶತ್ರುಗಳನ್ನು ಅದುಮಿ ಹಿಡಿದಿರಿಸಲು ಬೇಕು. ಸ್ವಾತಂತ್ರ್ಯದ ಬಗೆಗೆ ಮಾತನಾಡಲು ಸಾಧ್ಯವಾದ ಕೂಡಲೇ ರಾಜ್ಯವು ರಾಜ್ಯವಾಗಿ ಅಸ್ತಿತ್ವದಲ್ಲಿ ರುವುದಿಲ್ಲ"[95] ಎಂದು ಅವರು ಬರೆದರೆಂಬುದನ್ನು ಓದುಗರು ನೆನಪಿನಲ್ಲಿಟ್ಟಿರಬಹುದು.

ಜನರ ವಿಶಾಲ ಬಹುಮತದವರಿಗೆ ಪ್ರಜಾಪ್ರಭುತ್ವ ಮತ್ತು ಜನರ ಶೋಷ ಕರನ್ನು ಹಾಗೂ ಮರ್ದಕರನ್ನು ಬಲಪ್ರಯೋಗದಿಂದ ಹತ್ತಿಕ್ಕುವುದು, ಅಂದರೆ ಪ್ರಜಾ ಪ್ರಭುತ್ವದಿಂದ ಅವರನ್ನು ಹೊರಗಿರಿಸುವುದು – ಬಂಡವಾಳವಾದದಿಂದ ಕಮ್ಯೂ ನಿಸಂಗೆ ಪರಿವರ್ತನೆಯ ಸಮಯದಲ್ಲಿ ಪ್ರಜಾಪ್ರಭುತ್ವವು ಈ ಬದಲಾವಣೆಗೇ ಒಳ ಗಾಗುವುದು.

ಕಮ್ಯೂನಿಸ್ಟ್ ಸಮಾಜದಲ್ಲಷ್ಟೆ, ಬಂಡವಾಳಶಾಹಿಗಳ ಪ್ರತಿರೋಧವನ್ನು ಸಂಪೂರ್ಣ ವಾಗಿ ಸದೆಬಡಿಯಲಾಗಿರುವಾಗ, ಬಂಡವಾಳಶಾಹಿಗಳು ಕಣ್ಮರೆಯಾಗಿರುವಾಗ, ವರ್ಗಗಳು ಇಲ್ಲದಿರುವಾಗ (ಅಂದರೆ, ಸಾಮಾಜಿಕ ಉತ್ಪಾದನಾ ಸಾಧನಗಳೊಂದಿಗೆ ಸಂಬಂಧಕ್ಕೆ ತಕ್ಕಂತೆ ಸಮಾಜದ ಸದಸ್ಯರ ನಡುವೆ ವ್ಯತ್ಯಾಸ ಇಲ್ಲದೆ ಇರುವಾಗ), ಆಗಲಷ್ಟೆ "ರಾಜ್ಯವು ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ ಮತ್ತು ಸ್ವಾತಂತ್ರ್ಯದ ಬಗೆಗೆ ಮಾತನಾಡಲು ಸಾಧ್ಯವಾಗುತ್ತದೆ". ಆಗಲಷ್ಟೆ ನಿಜಕ್ಕೂ ಸಂಪೂರ್ಣವಾದ ಪ್ರಜಾ

ಪ್ರಭುತ್ವವು ಸಾಧ್ಯವಾಗುತ್ತದೆ ಮತ್ತು ಅದನ್ನು ಸಾಧಿಸಲಾಗುತ್ತದೆ. ಅದು ಯಾವುದೇ ರೀತಿಯ ವಿನಾಯಿತಿಗಳಿಲ್ಲದ ಪ್ರಜಾಪ್ರಭುತ್ವವಾಗುತ್ತದೆ. ಆಗಲಷ್ಟೆ ಪ್ರಜಾಪ್ರಭುತ್ವವು ಕ್ಷಯಿಸಿಹೋಗತೊಡಗುವುದು. ಬಂಡವಾಳವಾದಿ ಗುಲಾಮಗಿರಿಯಿಂದ, ಬಂಡವಾಳಶಾಹಿ ಶೋಷಣೆಯ ಹೇಳಲಾಗದ ಭೀಕರತೆ, ಮೃಗೀಯತೆ, ಅಸಂಬದ್ಧತೆ ಹಾಗೂ ನೀಚಕೃತ್ಯಗಳಿಂದ, ಮುಕ್ತರಾದ ಜನರು ಶತಮಾನಗಳಿಂದ ತಿಳಿದು ಬಂದಿರುವ ಮತ್ತು ಸಹಸ್ರಾರು ವರ್ಷಗಳಿಂದ ಎಲ್ಲ ಜನಜನಿತ ನೀತಿವಚನಗಳಲ್ಲೂ ಪದೇಪದೇ ಹೇಳಲಾಗಿರುವ ಸಾಮೂಹಿಕ ಜೀವನದ ಪ್ರಾಥಮಿಕ ನಿಯಮಗಳನ್ನು ಪಾಲಿಸುವುದಕ್ಕೆ ಕ್ರಮೇಣ ಒಗ್ಗಿಹೋಗಿ ಬಿಡುವರು. ಅವರು ಅವುಗಳನ್ನು ಬಲಪ್ರಯೋಗವಿಲ್ಲದೆಯೇ, ಬಲೋದ್ಬಂಧವಿಲ್ಲದೆಯೇ, ಅಧೀನತೆ ಇಲ್ಲದೆಯೇ, ರಾಜ್ಯವೆಂಬ ಬಲಾತ್ಕಾರದ ವಿಶೇಷ ಸಾಧನವಿಲ್ಲದೆಯೇ ಪಾಲಿಸುವುದಕ್ಕೆ ಒಗ್ಗಿ ಹೋಗಿ ಬಿಟ್ಟಿರುತ್ತಾರೆ.

"ರಾಜ್ಯವು ಕ್ಷಯಿಸಿಹೋಗುತ್ತದೆ" ಎಂಬ ಮಾತನ್ನು ತುಂಬ ಚೆನ್ನಾಗಿ ಆಯ್ಕೆ ಮಾಡಲಾಗಿದೆ, ಏಕೆಂದರೆ ಅದು ಈ ಪ್ರಕ್ರಿಯೆ ಕ್ರಮಕ್ರಮವಾಗಿ ಜರುಗುವ ಹಾಗೂ ತನ್ನಷ್ಟಕ್ಕೆ ತಾನೇ ಆಗುವ ಎರಡು ಸ್ವರೂಪಗಳನ್ನೂ ಸೂಚಿಸುತ್ತದೆ. ಅಭ್ಯಾಸವಷ್ಟೆ ಅಂಥ ಪರಿಣಾಮವನ್ನು ಉಂಟುಮಾಡಬಲ್ಲುದು ಮತ್ತು ನಿಸ್ಸಂದೇಹವಾಗಿಯೂ ಉಂಟುಮಾಡುವುದು; ಏಕೆಂದರೆ, ಶೋಷಣೆ ಇಲ್ಲದಾಗ, ಕೋಪವನ್ನು ಕೆರಳಿಸುವ ಪ್ರತಿಭಟನೆ ಹಾಗೂ ಬಂಡಾಯವನ್ನು ಪ್ರೇರಿಸುವ, ಹತ್ತಿಕ್ಕುವ ಅಗತ್ಯತೆಯನ್ನು ಉಂಟುಮಾಡುವ ಏನೂ ಇಲ್ಲದಿರುವಾಗ ಜನರು ಸಾಮಾಜಿಕ ವ್ಯವಹಾರಗಳ ಅವಶ್ಯ ನಿಯಮಗಳನ್ನು ಪಾಲಿಸಲು ಎಷ್ಟು ಮನಃಪೂರ್ವಕವಾಗಿ ಒಗ್ಗಿಹೋಗಿ ಬಿಡುತ್ತಾರೆಂಬುದನ್ನು ನಾವು ನಮ್ಮ ಸುತ್ತಮುತ್ತ ಲಕ್ಷಾಂತರ ಸಂದರ್ಭಗಳಲ್ಲಿ ಕಾಣುತ್ತೇವೆ.

ಆದ್ದರಿಂದ ಬಂಡವಾಳಶಾಹಿ ಸಮಾಜದಲ್ಲಿ ನಾವು ಕುಂಠಿತವಾದ, ತುಚ್ಛವಾದ, ಮಿಥ್ಯವಾದ ಪ್ರಜಾಪ್ರಭುತ್ವವನ್ನು, ಶ್ರೀಮಂತರಿಗಷ್ಟೆ, ಅಲ್ಪಮತದವರಿಗಷ್ಟೆ ಪ್ರಜಾಪ್ರಭುತ್ವವನ್ನು, ಹೊಂದಿರುತ್ತೇವೆ. ಕಮ್ಯೂನಿಸಂಗೆ ಪರಿವರ್ತನೆಯ ಕಾಲಾವಧಿಯಾದ ಶ್ರಮಜೀವಿ ವರ್ಗದ ಸರ್ವಾಧಿಕಾರತ್ವವು ಪ್ರಪ್ರಥಮ ಬಾರಿಗೆ ಜನತೆಗೆ ಬಹುಮತದವರಿಗೆ ಪ್ರಜಾಪ್ರಭುತ್ವವನ್ನು ಉಂಟುಮಾಡಿಕೊಡುತ್ತದೆ, ಅದರ ಜೊತೆಗೇ ಶೋಷಕರನ್ನು, ಅಲ್ಪಮತದವರನ್ನು, ಅವಶ್ಯವಾಗಿ ಹತ್ತಿಕ್ಕುವುದನ್ನೂ ಜಾರಿಗೆ ತರುತ್ತದೆ. ಕಮ್ಯೂನಿಸಂ ಅಷ್ಟೆ ನಿಜಕ್ಕೂ ಸಂಪೂರ್ಣವಾದ ಪ್ರಜಾಪ್ರಭುತ್ವವನ್ನು ಒದಗಿಸಬಲ್ಲ ಸಾಮರ್ಥ್ಯ ಹೊಂದಿರುತ್ತದೆ. ಈ ಪ್ರಜಾಪ್ರಭುತ್ವವು ಎಷ್ಟು ಹೆಚ್ಚು ಸಂಪೂರ್ಣವಾಗುತ್ತದೋ ಅಷ್ಟೂ ಬೇಗ ಅದು ಅನಾವಶ್ಯಕವಾಗುತ್ತದೆ ಮತ್ತು ತನ್ನಷ್ಟಕ್ಕೆ ತಾನೆ ಕ್ಷಯಿಸಿಹೋಗುತ್ತದೆ.

ಬೇರೆ ಮಾತುಗಳಲ್ಲಿ ಹೇಳುವುದಾದರೆ, ಬಂಡವಾಳವಾದದಡಿ ನಾವು ರಾಜ್ಯ ಎಂಬುದನ್ನು ಆ ಪದದ ನಿಜಾರ್ಥದಲ್ಲಿ ಹೊಂದಿರುತ್ತೇವೆ. ಅಂದರೆ ಒಂದು ವರ್ಗವು

ಮತ್ತೊಂದನ್ನು, ಅದಕ್ಕೂ ಹೆಚ್ಚಾಗಿ ಅಲ್ಪಮತದವರು ಬಹುಮತದವರನ್ನು ಹತ್ತಿಕ್ಕುವ ವಿಶೇಷ ಯಂತ್ರವನ್ನು ಹೊಂದಿರುತ್ತೇವೆ. ಸ್ವಾಭಾವಿಕವಾಗಿಯೇ ಯಶಸ್ವಿಯಾಗಬೇಕಾಗಿದ್ದಲ್ಲಿ, ಶೋಷಕ ಅಲ್ಪಮತವು ಶೋಷಿತ ಬಹುಮತವನ್ನು ವ್ಯವಸ್ಥಾಬದ್ಧವಾಗಿ ಹತ್ತಿಕ್ಕುವಂಥ ಕಾರ್ಯವು ಹಾಗೆ ಹತ್ತಿಕ್ಕುವ ವಿಷಯದಲ್ಲಿ ಅತ್ಯಂತ ಹೆಚ್ಚಿನ ಉಗ್ರತೆ ಹಾಗೂ ಮೃಗೀಯತೆಯನ್ನು ತೋರುವಂತೆ ಮಾಡುತ್ತದೆ; ಅದು ರಕ್ತದ ಮಡುಗಳನ್ನು ನಿರ್ಮಿಸುವಂತೆ ಮಾಡುತ್ತದೆ. ಈ ಮಡುಗಳ ಮೂಲಕವೇ ಮಾನವಕುಲವು ವಾಸ್ತವವಾಗಿ ದಾಸ್ಯತನದ ಮಧ್ಯೆ, ಜೀತದಾಳುತನದ ಮಧ್ಯೆ ಮತ್ತು ಕೂಲಿ ಗುಲಾಮಗಿರಿಯ ಮಧ್ಯೆ ಮಾರ್ಗ ಮಾಡಿಕೊಂಡು ಮುಂದುವರಿಯುತ್ತಿದೆ.

ಇಷ್ಟೇ ಅಲ್ಲದೆ ಬಂಡವಾಳವಾದದಿಂದ ಕಮ್ಯೂನಿಸಂಗೆ ಪರಿವರ್ತನೆಯ ಸಮಯದಲ್ಲೂ ಹತ್ತಿಕ್ಕುವುದು ಇನ್ನೂ ಅವಶ್ಯವಾಗಿರುತ್ತದೆ, ಆದರೆ ಈಗದು ಶೋಷಕ ಅಲ್ಪಮತವನ್ನು ಶೋಷಿತ ಬಹುಮತವು ಹತ್ತಿಕ್ಕುವುದಾಗಿರುತ್ತದೆ. ಒಂದು ವಿಶೇಷ ಸಾಧನವಾಗಿ, ಹತ್ತಿಕ್ಕುವ ಒಂದು ವಿಶೇಷ ಯಂತ್ರವಾಗಿ "ರಾಜ್ಯ"ವು ಇನ್ನೂ ಅವಶ್ಯವಾಗಿರುತ್ತದೆ, ಆದರೆ ಇದು ಈಗ ಸ್ಥಿತ್ಯಂತರದ ರಾಜ್ಯವಾಗಿರುತ್ತದೆ. ಇದು ರಾಜ್ಯ ಎಂಬ ಪದ ಸಾಮಾನ್ಯವಾಗಿ ಅರ್ಥ ನೀಡುವಂಥ ಅರ್ಥದಲ್ಲಿ ಇನ್ನೆಷ್ಟು ಮಾತ್ರವೂ ರಾಜ್ಯವಾಗಿರುವುದಿಲ್ಲ; ಏಕೆಂದರೆ ಶೋಷಕರ ಅಲ್ಪಮತವನ್ನು ನಿನ್ನಿನ ಕೂಲಿ ಗುಲಾಮರ ಬಹುಮತವು ಹತ್ತಿಕ್ಕುವುದು ತುಲನಾತ್ಮಕವಾಗಿ ಎಷ್ಟು ಸುಲಭ, ಸರಳ ಹಾಗೂ ಸಹಜ ಕಾರ್ಯಭಾರವಾಗಿರುತ್ತದೆಂದರೆ, ಅದರಲ್ಲಿ ಗುಲಾಮರ, ಜೀತದಾಳುಗಳ ಅಥವಾ ಕೂಲಿ ಶ್ರಮಿಕರ ಬಂಡಾಯಗಳನ್ನು ಹತ್ತಿಕ್ಕುವಾಗ ಆದುದಕ್ಕಿಂತ ಎಷ್ಟೋ ಕಮ್ಮಿ ರಕ್ತಪಾತವಾಗುತ್ತದೆ, ಅದರಿಂದ ಮಾನವಕುಲಕ್ಕೆ ಆಗುವ ಹಾನಿಯೂ ಎಷ್ಟೋ ಕಮ್ಮಿ. ಅದು ಜನರ ಎಷ್ಟು ಅತ್ಯಂತ ವಿಶಾಲ ಬಹುಮತಕ್ಕೆ ಲಭಿಸುವಂತೆ ಪ್ರಜಾಪ್ರಭುತ್ವವನ್ನು ವಿಸ್ತರಿಸುವುದಕ್ಕೆ ಅನುವಾಗುತ್ತದೆಂದರೆ, ಹತ್ತಿಕ್ಕುವುದಕ್ಕೇ ಒಂದು ವಿಶೇಷ ಯಂತ್ರದ ಆವಶ್ಯಕತೆ ಕಣ್ಮರೆಯಾಗತೊಡಗುತ್ತದೆ. ಸ್ವಾಭಾವಿಕವಾಗಿಯೇ, ಶೋಷಕರು ಜನರನ್ನು ಅತ್ಯಂತ ಜಟಿಲವಾದ ಮರ್ದನ ಯಂತ್ರವಿಲ್ಲದೆ ಹತ್ತಿಕ್ಕಲಾರರು. ಆದರೆ ಜನರು ಶೋಷಕರನ್ನು ತುಂಬ ಸರಳ "ಯಂತ್ರ"ದೊಂದಿಗೇ, ಬಹುಮಟ್ಟಿಗೆ "ಯಂತ್ರ"ವಿಲ್ಲದೆಯೇ, ಒಂದು ವಿಶೇಷ ಸಾಧನವಿಲ್ಲದೆಯೇ ಸಶಸ್ತ್ರ ಜನರ ಸರಳ ಸಂಘಟನೆಯಿಂದಷ್ಟೆ (ಕಾರ್ಮಿಕರ ಹಾಗೂ ಸೈನಿಕರ ಡೆಪ್ಯೂಟಿಗಳ ಸೋವಿಯತ್ತುಗಳಂಥವು ಎಂದು ನಾವು ಮುಂದೋಡಿ ಸಲಹೆ ಮಾಡುತ್ತೇವೆ) ಹತ್ತಿಕ್ಕಬಲ್ಲರು.

ಕೊನೆಯದಾಗಿ, ಕಮ್ಯೂನಿಸಂ ಅಷ್ಟೆ ರಾಜ್ಯವನ್ನು ನಿರುಪಾಧಿಕವಾಗಿ ಅನವಶ್ಯವನ್ನಾಗಿ ಮಾಡುತ್ತದೆ, ಏಕೆಂದರೆ, ಆಗ ಹತ್ತಿಕ್ಕಲ್ಪಡಬೇಕಾದವರು ಯಾರೂ ಇರುವುದಿಲ್ಲ – "ಯಾರೂ" ಅಂದರೆ ಒಂದು ವರ್ಗದ ಅರ್ಥದಲ್ಲಿ, ಜನತೆಯ ಒಂದು ನಿರ್ದಿಷ್ಟ ವಿಭಾಗದ ವಿರುದ್ಧ ಕ್ರಮಬದ್ಧ ಹೋರಾಟ ನಡೆಸುವ ಅರ್ಥದಲ್ಲಿ. ನಾವೇನೂ

ಅಸಾಧ್ಯಾದರ್ಶವಾದಿಗಳಲ್ಲ. ಬಿಡಿ ವ್ಯಕ್ತಿಗಳ ಅತ್ಯಾಚಾರಗಳ ಸಾಧ್ಯತೆ ಹಾಗೂ ಅನಿವಾರ್ಯತೆಯನ್ನು, ಅಥವಾ ಅಂಥ ಅತ್ಯಾಚಾರಗಳನ್ನು ನಿಲ್ಲಿಸುವ ಅಗತ್ಯತೆಯನ್ನು ನಾವು ಸ್ವಲ್ಪವೂ ಅಲ್ಲಗಳೆಯುವುದಿಲ್ಲ. ಆದರೆ, ಮೊದಲನೆಯದಾಗಿ, ಇದಕ್ಕೆ ಯಾವ ವಿಶೇಷ ಹತ್ತಿಕ್ಕುವ ಸಾಧನದ, ಯಾವ ವಿಶೇಷ ಯಂತ್ರದ, ಆವಶ್ಯಕತೆ ಇಲ್ಲ. ಇದನ್ನು ಸಶಸ್ತ್ರ ಜನರು ತಾವೇ ನಡೆಸುವರು, ಆಧುನಿಕ ಸಮಾಜದಲ್ಲೂ ಯಾವುದೇ ನಾಗರಿಕ ಜನರ ವೃಂದವು ಜಗಳವನ್ನು ನಿಲ್ಲಿಸಲು, ಅಥವಾ ಹೆಂಗಸೊಬ್ಬಳ ಮೇಲೆ ನಡೆಯಬಹುದಾದ ಅತ್ಯಾಚಾರವನ್ನು ತಪ್ಪಿಸಲು ಎಷ್ಟು ಸರಳವಾಗಿ ಹಾಗೂ ಸಿದ್ಧವಾಗಿ ಮಧ್ಯೆ ಪ್ರವೇಶಿಸುತ್ತದೋ ಅಷ್ಟೇ ಸರಳವಾಗಿ ಹಾಗೂ ಸಿದ್ಧವಾಗಿ ನಡೆಸುವರು. ಎರಡನೆಯದಾಗಿ, ಈ ಅತ್ಯಾಚಾರಗಳು ಸಾಮಾಜಿಕ ವ್ಯವಹಾರಗಳ ನಿಯಮಗಳ ಉಲ್ಲಂಘನೆಯಲ್ಲಿ ವ್ಯಕ್ತಗೊಳ್ಳುತ್ತವೆ, ಇಂಥ ಅತ್ಯಾಚಾರಗಳ ಮೂಲಭೂತ ಸಾಮಾಜಿಕ ಕಾರಣ ಜನರ ಶೋಷಣೆಯಾಗಿದೆ, ಅವರು ಅನುಭವಿಸುವ ಕೊರತೆ ಹಾಗೂ ಬಡತನವಾಗಿದೆ, ಎಂಬುದನ್ನು ನಾವು ಬಲ್ಲೆವು. ಈ ಮುಖ್ಯ ಕಾರಣವನ್ನು ನಿವಾರಿಸುವುದರೊಂದಿಗೆ ಅತ್ಯಾಚಾರಗಳೂ ಅನಿವಾರ್ಯವಾಗಿಯೇ "ಕ್ಷಯಿಸಿಹೋಗ"ತೊಡಗುತ್ತವೆ. ಎಷ್ಟು ಬೇಗ ಹಾಗೂ ಎಂಥ ಅನುಕ್ರಮದಲ್ಲಿ ಎಂಬುದು ನಮಗೆ ತಿಳಿಯದು, ಆದರೆ ಅವು ಕ್ಷಯಿಸಿಹೋಗುತ್ತವೆ ಎಂಬುದನ್ನಂತೂ ನಾವು ಬಲ್ಲೆವು. ಅವುಗಳು ಕ್ಷಯಿಸಿಹೋಗುವುದರೊಂದಿಗೆ ರಾಜ್ಯವೂ ಕ್ಷಯಿಸಿಹೋಗುವುದು.

ಈ ಭವಿಷ್ಯತ್ತಿನ ಬಗೆಗೆ, ಅಂದರೆ ಕಮ್ಯೂನಿಸ್ಟ್ ಸಮಾಜದ ಕೆಳಗಿನ ಹಾಗೂ ಮೇಲಿನ ಮಜಲುಗಳ (ಮಟ್ಟಗಳ, ಘಟ್ಟಗಳ) ನಡುವಿನ ವ್ಯತ್ಯಾಸದ ಬಗೆಗೆ, ಈಗ ಏನನ್ನು ನಿರೂಪಿಸಲು ಸಾಧ್ಯ ಎಂಬುದನ್ನು ಮಾರ್ಕ್ಸ್‌ರವರು ಅಸಾಧ್ಯಾದರ್ಶಗಳನ್ನು ನಿರ್ಮಿಸ ಹೋಗದೆಯೇ ಪೂರ್ಣವಾಗಿ ನಿರೂಪಿಸಿದರು.

## 3. ಕಮ್ಯೂನಿಸ್ಟ್ ಸಮಾಜದ ಮೊದಲನೆಯ ಮಜಲು

ಸಮಾಜವಾದದಡಿ ಕಾರ್ಮಿಕನು "ತನ್ನ ಶ್ರಮದ ಪೂರ್ಣ ಉತ್ಪನ್ನವನ್ನು" ಅಥವಾ "ಕಡಿತ ಮಾಡಿರದಿದ್ದ" ಉತ್ಪನ್ನವನ್ನು ಪಡೆಯುತ್ತಾನೆ ಎಂಬ ಲಸ್ಸಾಲ್‌ರ ವಿಚಾರವನ್ನು ತಪ್ಪೆಂದು ಸಾಧಿಸಲು ಮಾರ್ಕ್ಸ್‌ರವರು 'ಗೋಥಾ ಕಾರ್ಯಕ್ರಮದ ಟೀಕೆ'ಯಲ್ಲಿ ಆ ವಿಷಯವನ್ನು ಸವಿವರವಾಗಿ ಪರಿಶೀಲಿಸಿದ್ದಾರೆ. ಸಮಾಜದ ಇಡೀ ಸಾಮಾಜಿಕ ಶ್ರಮದಿಂದ ಮೀಸಲು (ರಿಸರ್ವ್) ನಿಧಿಗಾಗಿ, ಉತ್ಪಾದನೆಯ ವಿಸ್ತರಣಾ ನಿಧಿಗಾಗಿ, "ಸವೆದು ಹೋದ" ಯಂತ್ರಸಾಮಗ್ರಿಗಳ ಸ್ಥಳದಲ್ಲಿ ಹೊಸತವನ್ನು ಸ್ಥಾಪಿಸಲು ನಿಧಿಗಾಗಿ, ಇತ್ಯಾದಿಗಳಿಗಾಗಿ ಒಂದಿಷ್ಟನ್ನು ಕಳೆಯಬೇಕು ಎಂದು ಮಾರ್ಕ್ಸ್ ತೋರಿಸಿಕೊಡುತ್ತಾರೆ. ಆಮೇಲೆ, ಬಳಕೆಯ ಸಾಧನಗಳಿಂದ ಆಡಳಿತದ ಖರ್ಚು

ಗಳು, ಶಾಲೆಗಳು, ಆಸ್ಪತ್ರೆಗಳು, ವೃದ್ಧರ ವಸತಿಗೃಹಗಳು ಇತ್ಯಾದಿಗಳಿಗಾಗಿ ಬಳಸಲು ಒಂದಿಷ್ಟು ನಿಧಿಯನ್ನು ಕಳೆಯಬೇಕು.

ಲಸ್ಸಾಲ್‌ರ ಮಸುಕಾದ ಅಸ್ಪಷ್ಟವಾದ ಸಾಮಾನ್ಯ ನುಡಿಕಟ್ಟಿನ ("ಕಾರ್ಮಿಕನಿಗೆ ಆತನ ಶ್ರಮದ ಪೂರ್ಣ ಉತ್ಪನ್ನವನ್ನು" ಎಂದು ಮುಂತಾದ ನುಡಿಕಟ್ಟಿನ) ಸ್ಥಳದಲ್ಲಿ ಮಾರ್ಕ್ಸ್‌ರವರು, ಸಮಾಜವಾದಿ ಸಮಾಜವು ಸ್ಪಷ್ಟವಾಗಿ ಹೇಗೆ ತನ್ನ ವ್ಯವಹಾರಗಳನ್ನು ನಿರ್ವಹಿಸಬೇಕು ಎಂಬುದರ ಹಿತಮಿತದ ಅಂದಾಜು ನೀಡುತ್ತಾರೆ. ಅನಂತರ ಮಾರ್ಕ್ಸ್‌ರವರು ಬಂಡವಾಳವಾದವಿಲ್ಲದ ಸಮಾಜದ ಜೀವನ ಪರಿಸ್ಥಿತಿಗಳ ಮೂರ್ತರೂಪದ ವಿಶ್ಲೇಷಣೆ ಮಾಡುತ್ತ ಹೀಗೆ ಹೇಳುತ್ತಾರೆ:

> "ನಾವು ಇಲ್ಲಿ ವ್ಯವಹರಿಸಬೇಕಾದುದು" (ಕಾರ್ಮಿಕರ ಪಾರ್ಟಿಯ ಕಾರ್ಯಕ್ರಮವನ್ನು ವಿಶ್ಲೇಷಿಸುವಾಗ) "ಕಮ್ಯೂನಿಸ್ಟ್ ಸಮಾಜದೊಂದಿಗೆ, ತನ್ನ ಸ್ವಂತ ಅಡಿಪಾಯಗಳ ಮೇಲೆ ಅಭಿವೃದ್ಧಿಗೊಂಡಂತಹುದಲ್ಲ, ಆದರೆ ಅದಕ್ಕೆ ಪ್ರತಿಯಾಗಿ ಬಂಡವಾಳಶಾಹಿ ಸಮಾಜದಿಂದ ಆಗಷ್ಟೆ ಉದಯಿಸುತ್ತಿರುವಂತಹ, ಕಮ್ಯೂನಿಸ್ಟ್ ಸಮಾಜದೊಂದಿಗೆ; ಆದ್ದರಿಂದ ಅದು ಪ್ರತಿ ರೀತಿಯಲ್ಲೂ, ಆರ್ಥಿಕವಾಗಿಯೂ ನೈತಿಕವಾಗಿಯೂ ಬೌದ್ಧಿಕವಾಗಿಯೂ ಇನ್ನೂ ತಾನು ಯಾವುದರ ಗರ್ಭದಿಂದ ಹೊರಬಂದಿತೋ ಆ ಹಳೆಯ ಸಮಾಜದ ಹುಟ್ಟು ಗುರುತುಗಳನ್ನು ಹೊಂದಿರುತ್ತದೆ."

ಈ ಕಮ್ಯೂನಿಸ್ಟ್ ಸಮಾಜವನ್ನೇ, ಬಂಡವಾಳಶಾಹಿ ಸಮಾಜದ ಗರ್ಭದಿಂದ ಅದೇ ತಾನೆ ಉದಯಿಸಿದ, ಹಳೆಯ ಸಮಾಜದ ಹುಟ್ಟು ಗುರುತುಗಳನ್ನು ಇನ್ನೂ ಪ್ರತಿ ರೀತಿಯಲ್ಲೂ ಹೊಂದಿರುವ ಸಮಾಜವನ್ನೇ ಮಾರ್ಕ್ಸ್‌ರವರು ಕಮ್ಯೂನಿಸ್ಟ್ ಸಮಾಜದ "ಮೊದಲ" ಅಥವಾ ಕೆಳಗಿನ ಮಜಲು ಎನ್ನುವುದು.

ಇದರಲ್ಲಿ ಉತ್ಪಾದನಾ ಸಾಧನಗಳು ವ್ಯಕ್ತಿಗಳ ಖಾಸಗಿ ಆಸ್ತಿಯಾಗಿರುವುದು ಕೊನೆಗಂಡಿರುತ್ತದೆ. ಅವು ಇಡೀ ಸಮಾಜಕ್ಕೆ ಸೇರಿರುತ್ತವೆ. ಸಮಾಜದ ಪ್ರತಿಯೊಬ್ಬ ಸದಸ್ಯನೂ ಸಾಮಾಜಿಕವಾಗಿ ಅವಶ್ಯವಾದ ಒಂದು ನಿರ್ದಿಷ್ಟ ಭಾಗದ ಕೆಲಸ ಮಾಡುತ್ತ, ಅವನು ಒಂದಿಷ್ಟು ಪ್ರಮಾಣದ ಕೆಲಸ ಮಾಡಿದ್ದಾನೆಂದು ಸಮಾಜದಿಂದ ಒಂದು ಪ್ರಮಾಣಪತ್ರವನ್ನು ಪಡೆಯುತ್ತಾನೆ. ಈ ಪ್ರಮಾಣಪತ್ರದಿಂದ ಅವನು ಬಳಕೆಯ ವಸ್ತುಗಳ ಸಾರ್ವಜನಿಕ ಮಳಿಗೆಯಿಂದ ಅನುಗುಣವಾದಷ್ಟು ಪ್ರಮಾಣದಲ್ಲಿ ಉತ್ಪನ್ನಗಳನ್ನು ಪಡೆಯುತ್ತಾನೆ. ಆದ್ದರಿಂದ ಸಾರ್ವಜನಿಕ ನಿಧಿಗೆ ಹೋಗಲು ಶ್ರಮದ ಒಟ್ಟು ಮೊತ್ತದಲ್ಲಿ ಒಂದಿಷ್ಟು ಪ್ರಮಾಣವನ್ನು ಪಡೆದನಂತರ ಪ್ರತಿಯೊಬ್ಬ ಕಾರ್ಮಿಕನೂ ತಾನು ಎಷ್ಟು ಕೊಟ್ಟಿದ್ದನೋ ಅಷ್ಟನ್ನೇ ಸಮಾಜದಿಂದ ಪಡೆದುಕೊಳ್ಳುತ್ತಾನೆ.

"ಸಮಾನತೆ"ಯು ಸರ್ವೋಚ್ಚ ಆಧಿಪತ್ಯ ನಡೆಸುತ್ತಿರುವಂತೆ ತೋರುತ್ತದೆ.

18*

ಆದರೆ ಅಂಥ ಸಾಮಾಜಿಕ ವ್ಯವಸ್ಥೆಯನ್ನು (ಸಾಮಾನ್ಯವಾಗಿ ಸಮಾಜವಾದ ಎಂದು ಕರೆಯಲಾದ, ಮಾರ್ಕ್ಸ್‌ರವರು ಕಮ್ಯೂನಿಸಂನ ಮೊದಲ ಮಜಲು ಎಂದು ಕರೆದ ಸಾಮಾಜಿಕ ವ್ಯವಸ್ಥೆಯನ್ನು) ಗಮನದಲ್ಲಿಟ್ಟುಕೊಂಡು, ಲಸ್ಸಾಲ್‌ರು ಇದು "ಸಮಾನ ಪ್ರಮಾಣದ ವಿತರಣೆ, ಇದು "ಎಲ್ಲರೂ ತಮ್ಮ ಶ್ರಮಕ್ಕೆ ಸಮನಾಗಿ ಉತ್ಪನ್ನ ಪಡೆಯುವ ಎಲ್ಲರ ನೀತಿ ಸಮ್ಮತ ಹಕ್ಕು" ಎಂದು ಕರೆದಾಗ ತಪ್ಪು ಮಾಡಿದರು ಮತ್ತು ಮಾರ್ಕ್ಸ್‌ರವರು ಈ ತಪ್ಪನ್ನು ಬಯಲುಮಾಡುತ್ತಾರೆ.

"ಸಮಾನ ಹಕ್ಕು" ಖಂಡಿತ ಇಲ್ಲಿ ಇರುತ್ತದೆ, ಎಂದು ಮಾರ್ಕ್ಸ್ ಹೇಳುತ್ತಾರೆ. ಆದರೆ ಅದು ಇನ್ನೂ "ಬೂರ್ಷ್ವಾ ಹಕ್ಕಾ"ಗಿಯೇ ಇರುತ್ತದೆ. ಅದು ಇತರ ಪ್ರತಿಯೊಂದು ಹಕ್ಕಿನಂತೆಯೇ ಅಸಮಾನತೆಯ ಅರ್ಥವನ್ನು ಒಳಗೊಂಡಿರುತ್ತದೆ. ಯಾವುದೇ ಹಕ್ಕೂ, ವಾಸ್ತವವಾಗಿ ಒಬ್ಬರಿನ್ನೊಬ್ಬರಂತಿರದ ಮತ್ತು ಒಬ್ಬರಿನ್ನೊಬ್ಬರಿಗೆ ಸಮನಾಗಿರದ, ಭಿನ್ನಭಿನ್ನರಾದ ಜನರಿಗೆ ಸಮಾನ ಕ್ರಮವೊಂದನ್ನು ಅನ್ವಯಿಸುವುದೇ ಆಗಿದೆ. ಆದ್ದರಿಂದಲೇ "ಸಮಾನ ಹಕ್ಕು" ಎಂಬುದು ಸಮಾನತೆಯ ಉಲ್ಲಂಘನೆಯಾಗಿದೆ, ಅನ್ಯಾಯವಾಗಿದೆ. ವಾಸ್ತವವಾಗಿ ಪ್ರತಿಯೊಬ್ಬರೂ ಮತ್ತೊಬ್ಬರಷ್ಟೇ ಸಾಮಾಜಿಕ ಶ್ರಮ ನಿರ್ವಹಿಸಿ, ಸಾಮಾಜಿಕ ಉತ್ಪನ್ನದಲ್ಲಿ ಸಮಾನ ಭಾಗವನ್ನು ಪಡೆಯುತ್ತಾರೆ. (ಮೇಲೆ ತಿಳಿಸಿದ ಕಳಿಕೆಗಳನಂತರ.)

ಆದರೆ ಜನರು ಎಲ್ಲರೂ ಒಂದೇ ರೀತಿ ಇರುವುದಿಲ್ಲ: ಒಬ್ಬರು ಬಲಶಾಲಿಯಾಗಿದ್ದರೆ ಇನ್ನೊಬ್ಬರು ಬಲಹೀನರಾಗಿರುತ್ತಾರೆ; ಒಬ್ಬರಿಗೆ ವಿವಾಹ ಆಗಿದ್ದರೆ ಇನ್ನೊಬ್ಬರಿಗೆ ಆಗಿರುವುದಿಲ್ಲ; ಒಬ್ಬರಿಗೆ ಹೆಚ್ಚು ಮಕ್ಕಳಿದ್ದರೆ ಇನ್ನೊಬ್ಬರಿಗೆ ಕಮ್ಮಿ ಇರುತ್ತಾರೆ. ಹೀಗೆಯೇ ಭಿನ್ನತೆಗಳಿರುತ್ತವೆ. ಆದ್ದರಿಂದ ಮಾರ್ಕ್ಸ್ ಈ ತೀರ್ಮಾನಕ್ಕೆ ಬರುತ್ತಾರೆ:

> "ಶ್ರಮವನ್ನು ಒಂದೇ ಪ್ರಮಾಣದಲ್ಲಿ ನಿರ್ವಹಿಸಿ, ತತ್ಫಲವಾಗಿ ಸಾಮಾಜಿಕ ಬಳಕೆಯ ನಿಧಿಗೆ ಸಮಾನ ಪಾಲು ಸಲ್ಲಿಸಿ, ಒಬ್ಬರು ವಾಸ್ತವವಾಗಿ ಇನ್ನೊಬ್ಬರಿಗಿಂತ ಹೆಚ್ಚು ಪಡೆಯುತ್ತಾರೆ, ಒಬ್ಬರು ಇನ್ನೊಬ್ಬರಿಗಿಂತ ಹೆಚ್ಚು ಸಿರಿವಂತರಾಗುತ್ತಾರೆ, ಇತ್ಯಾದಿ. ಈ ಎಲ್ಲ ನ್ಯೂನತೆಗಳನ್ನೂ ನಿವಾರಿಸಲು ಹಕ್ಕು ಸಮಾನವಾಗಿ ಅಲ್ಲ, ಅಸಮಾನವಾಗಿ ಇರಬೇಕಾಗುತ್ತದೆ."

ಆದ್ದರಿಂದ ಕಮ್ಯೂನಿಸಂನ ಮೊದಲ ಮಜಲು ಇನ್ನೂ ಸಮಾನತೆ ಹಾಗೂ ನ್ಯಾಯವನ್ನು ದೊರಕಿಸಿಕೊಡಲಾರದು: ಆಸ್ತಿಯಲ್ಲಿ ವ್ಯತ್ಯಾಸಗಳು, ನ್ಯಾಯ ಸಮ್ಮತವಲ್ಲದ ವ್ಯತ್ಯಾಸಗಳು ಕೂಡ, ಇನ್ನೂ ಇದ್ದೇ ಇರುತ್ತವೆ. ಆದರೆ ಮಾನವನಿಂದ ಮಾನವನ ಶೋಷಣೆ ಅಸಾಧ್ಯವಾಗಿರುತ್ತದೆ, ಏಕೆಂದರೆ, ಉತ್ಪಾದನಾ ಸಾಧನಗಳನ್ನು – ಕಾರ್ಖಾನೆಗಳು, ಯಂತ್ರಗಳು, ಭೂಮಿ, ಇತ್ಯಾದಿಗಳನ್ನು – ವಶಪಡಿಸಿಕೊಂಡು ಅವನ್ನು

ಖಾಸಗಿ ಆಸ್ತಿಯನ್ನಾಗಿ ಮಾಡಿಕೊಳ್ಳುವುದು ಅಸಾಧ್ಯವಾಗಿರುತ್ತದೆ. ಒಟ್ಟಿನಲ್ಲಿ "ಸಮಾನತೆ" ಹಾಗೂ "ನ್ಯಾಯ"ದ ಬಗೆಗೆ ಲಸ್ಸಾಲ್‌ರ ಪೆಟಿ ಬೂರ್ಷ್ವಾ ಅಸ್ಪಷ್ಟ ನುಡಿಗಳನ್ನು ಖಂಡಿಸುತ್ತ ಮಾರ್ಕ್ಸ್‌ರವರು ಕಮ್ಯೂನಿಸ್ಟ್ ಸಮಾಜದ ಬೆಳವಣಿಗೆಯ ಮಾರ್ಗವನ್ನು ತೋರಿಸಿಕೊಡುತ್ತಾರೆ. ಕಮ್ಯೂನಿಸ್ಟ್ ಸಮಾಜವು ಮೊದಲು ಉತ್ಪಾದನಾ ಸಾಧನಗಳನ್ನು ವ್ಯಕ್ತಿಗಳು ವಶಪಡಿಸಿಕೊಳ್ಳುವ "ಅನ್ಯಾಯ"ವನ್ನಷ್ಟೆ ರದ್ದು ಮಾಡುವ ಒತ್ತಾಯಕ್ಕೊಳಗಾಗುವುದು, ಆದರೆ "ನೆರವೇರಿಸಿದ ಶ್ರಮದ ಪ್ರಮಾಣಕ್ಕನುಗುಣವಾಗಿ" (ಆವಶ್ಯಕತೆಗಳಿಗೆ ಅನುಗುಣವಾಗಿ ಅಲ್ಲ) ಬಳಕೆಯ ಪದಾರ್ಥಗಳ ಹಂಚಿಕೆಯಲ್ಲಿನ ಇತರ ಅನ್ಯಾಯಗಳನ್ನು ಕೂಡಲೇ ನಿವಾರಿಸಲು ಅಸಮರ್ಥವಾಗಿರುವುದು, ಎಂದು ತೋರಿಸಿಕೊಡುತ್ತಾರೆ.

ಜನರು ಅಸಮಾನರಾಗಿರುತ್ತಾರೆ, ಆದ್ದರಿಂದ ಈ ಅಸಮಾನತೆಯನ್ನು ತೊಡೆದು ಹಾಕುವುದು "ಕನಸಷ್ಟೆ" ಎಂಬುದನ್ನು ಸಮಾಜವಾದಿಗಳು ಮರೆಯುತ್ತಾರೆಂದು ಪ್ರಾಕೃತ ಅರ್ಥಶಾಸ್ತ್ರಜ್ಞರು, ಬೂರ್ಷ್ವಾ ಪ್ರಾಧ್ಯಾಪಕರು ಮತ್ತು "ನಮ್ಮ" ತುಗಾನ್ ಸಹ, ಸತತವಾಗಿ ಸಮಾಜವಾದಿಗಳನ್ನು ನಿಂದಿಸುತ್ತಾರೆ. ಇಂಥ ನಿಂದನೆಯು, ನಾವು ಕಾಣುವಂತೆಯೇ, ಮಾನ್ಯ ಬೂರ್ಷ್ವಾ ವಿಚಾರಧಾರಾವಾದಿಗಳ ಮಿತಿಮೀರಿದ ಅಜ್ಞಾನವನ್ನಷ್ಟೆ ರುಜುವಾತು ಮಾಡುತ್ತದೆ.

ಮಾರ್ಕ್ಸ್‌ರವರು ಜನರ ಅನಿವಾರ್ಯ ಅಸಮಾನತೆಯನ್ನು ಅತ್ಯಂತ ನಿಷ್ಠೆಯಿಂದ ಗಮನಕ್ಕೆ ತಂದುಕೊಳ್ಳುತ್ತಾರಷ್ಟೆ ಅಲ್ಲ, ಉತ್ಪಾದನಾ ಸಾಧನಗಳನ್ನು ಇಡೀ ಸಮಾಜದ ಸಾಮಾನ್ಯ ಆಸ್ತಿಯನ್ನಾಗಿ ಪರಿವರ್ತಿಸುವುದಷ್ಟೆ (ಇದನ್ನು ಸಾಮಾನ್ಯವಾಗಿ "ಸಮಾಜವಾದ" ಎಂದು ಕರೆಯಲಾಗುತ್ತದೆ) ಹಂಚಿಕೆಯ ನ್ಯೂನತೆಗಳನ್ನು ಹಾಗೂ "ಬೂರ್ಷ್ವಾ ಹಕ್ಕಿ"ನ ಅಸಮಾನತೆಯನ್ನು ನಿವಾರಿಸುವುದಿಲ್ಲ, ಉತ್ಪನ್ನಗಳನ್ನು "ನೆರವೇರಿಸಿದ ಶ್ರಮದ ಪ್ರಮಾಣಕ್ಕನುಗುಣವಾಗಿ" ಎಲ್ಲಿಯವರೆಗೆ ಹಂಚಲಾಗುತ್ತದೆಯೋ ಅಲ್ಲಿಯವರೆಗೆ ಅಂಥ ಅಸಮಾನತೆಯು ಇದ್ದುಕೊಂಡೇ ಹೋಗುವುದು, ಎಂಬ ಸತ್ಯಾಂಶವನ್ನೂ ಗಣನೆಗೆ ತಂದುಕೊಳ್ಳುತ್ತಾರೆ. ಮುಂದುವರಿಯುತ್ತ, ಮಾರ್ಕ್ಸ್ ಹೇಳುತ್ತಾರೆ:

> "ಆದರೆ ಕಮ್ಯೂನಿಸ್ಟ್ ಸಮಾಜದ ಮೊದಲ ಮಜಲಿನಲ್ಲಿ ಈ ನ್ಯೂನತೆಗಳು ಅನಿವಾರ್ಯ, ಏಕೆಂದರೆ ಆಗಷ್ಟೆ ಈ ಸಮಾಜವು ಬಂಡವಾಳಶಾಹಿ ಸಮಾಜದಿಂದ, ದೀರ್ಘಕಾಲದ ಪ್ರಸವವೇದನೆಯನಂತರ, ಉದಯಿಸಿರುತ್ತದೆ. ಹಕ್ಕು ಎನ್ನುವುದು ಸಮಾಜದ ಆರ್ಥಿಕ ರಚನೆಗಿಂತ ಮತ್ತು ಅದರಿಂದ ನಿರ್ಧರಿತವಾದ ಅದರ ಸಾಂಸ್ಕೃತಿಕ ಬೆಳವಣಿಗೆಗಿಂತ ಎಂದೂ ಹೆಚ್ಚು ಉನ್ನತವಾಗಿರಲಾರದು."

ಆದ್ದರಿಂದ ಕಮ್ಯೂನಿಸ್ಟ್ ಸಮಾಜದ ಮೊದಲ ಮಜಲಿನಲ್ಲಿ (ಸಾಮಾನ್ಯವಾಗಿ

ಸಮಾಜವಾದ ಎಂದು ಕರೆಯುವ ಮಜಲಿನಲ್ಲಿ) "ಬೂರ್ಷ್ವಾ ಹಕ್ಕ"ನ್ನು ಇಡೀಯಾಗಿ ಅಲ್ಲ ಆದರೆ ಭಾಗಶಃವಾಗಿ ಅಷ್ಟೆ, ಸಾಧಿಸಲಾದ ಆರ್ಥಿಕ ಕ್ರಾಂತಿಯ ಪ್ರಮಾಣಕ್ಕನುಗುಣವಾಗಿ, ಅಂದರೆ ಉತ್ಪಾದನಾ ಸಾಧನಗಳಿಗೆ ಸಂಬಂಧಿಸಿಯಷ್ಟೆ, ರದ್ದುಗೊಳಿಸಲಾಗುವುದು. "ಬೂರ್ಷ್ವಾ ಹಕ್ಕು" ಉತ್ಪಾದನಾ ಸಾಧನಗಳನ್ನು ವ್ಯಕ್ತಿಗಳ ಖಾಸಗಿ ಆಸ್ತಿಯನ್ನಾಗಿ ಮನ್ನಿಸುತ್ತದೆ. ಸಮಾಜವಾದವು ಅವನ್ನು ಸಾಮುದಾಯಿಕ ಆಸ್ತಿಯನ್ನಾಗಿ ಪರಿವರ್ತಿಸುತ್ತದೆ. ಆ ಮಟ್ಟಿಗೆ–ಮತ್ತು ಆ ಮಟ್ಟಿಗಷ್ಟೆ– "ಬೂರ್ಷ್ವಾ ಹಕ್ಕು" ಕಣ್ಮರೆಯಾಗುತ್ತದೆ.

ಆದರೆ ಅದರ ಇತರ ಭಾಗಕ್ಕೆ ಸಂಬಂಧಿಸಿದಂತೆ ಅದು ಉಳಿದುಕೊಂಡೇ ಇರುತ್ತದೆ; ಅದು ಸಮಾಜದ ಸದಸ್ಯರ ಮಧ್ಯೆ ಶ್ರಮವನ್ನು ಗೊತ್ತುಪಡಿಸುವ ಮತ್ತು ಉತ್ಪನ್ನಗಳನ್ನು ಹಂಚುವ ನಿಯಂತ್ರಕನಾಗಿ (ನಿರ್ಧರಿಸುವ ಅಂಶವಾಗಿ) ಉಳಿದುಕೊಂಡೇ ಇರುತ್ತದೆ. "ದುಡಿಯದವನು ತಿನ್ನಕೂಡದು" ಎಂಬ ಸಮಾಜವಾದಿ ಸೂತ್ರವನ್ನು ಆಗಲೇ ಈಡೇರಿಸಿರಲಾಗುತ್ತದೆ; "ಸಮಾನ ಪ್ರಮಾಣದ ಶ್ರಮಕ್ಕೆ ಸಮಾನ ಪ್ರಮಾಣದ ಉತ್ಪನ್ನಗಳು" ಎಂಬ ಇನ್ನೊಂದು ಸಮಾಜವಾದಿ ಸೂತ್ರವನ್ನೂ ಆಗಲೇ ಈಡೇರಿಸಿರಲಾಗುತ್ತದೆ. ಆದರೆ ಇದಿನ್ನೂ ಕಮ್ಯೂನಿಸಂ ಆಗಿರುವುದಿಲ್ಲ, ಇದಿನ್ನೂ ಸಮಾನರಲ್ಲದ ವ್ಯಕ್ತಿಗಳಿಗೆ ಸಮಾನವಲ್ಲದ (ನಿಜಕ್ಕೂ ಅಸಮಾನವಾದ) ಶ್ರಮ ಪ್ರಮಾಣಗಳಿಗೆ ಪ್ರತಿಯಾಗಿ ಸಮಾನ ಪ್ರಮಾಣಗಳ ಉತ್ಪನ್ನಗಳನ್ನು ನೀಡುವ "ಬೂರ್ಷ್ವಾ ಹಕ್ಕ"ನ್ನು ರದ್ದುಗೊಳಿಸಿರುವುದಿಲ್ಲ.

ಇದೊಂದು "ನ್ಯೂನತೆ," ಆದರೆ ಕಮ್ಯೂನಿಸಂನ ಮೊದಲ ಮಜಲಿನಲ್ಲಿ ಇದು ಅನಿವಾರ್ಯ, ಎಂದು ಮಾರ್ಕ್ಸ್ ಹೇಳುತ್ತಾರೆ; ಏಕೆಂದರೆ, ನಾವು ಅಸಾಧ್ಯಾದರ್ಶವಾದದಲ್ಲಿ ತೊಡಗುವುದಿಲ್ಲವಾದರೆ, ಬಂಡವಾಳವಾದವನ್ನು ಉರುಳಿಸಿದನಂತರ ಜನರು ಯಾವುದೇ ಹಕ್ಕು ಇಲ್ಲದೆಯೇ ಕೂಡಲೇ ಸಮಾಜಕ್ಕಾಗಿ ಕೆಲಸ ಮಾಡುವುದನ್ನು ಕಲಿಯುತ್ತಾರೆ ಎಂದು ಯೋಚಿಸಬಾರದು, ಇದಲ್ಲದೆ ಬಂಡವಾಳವಾದದ ನಿರ್ಮೂಲನವು ಅಂಥ ಬದಲಾವಣೆಗೆ ಅವಶ್ಯವಾದ ಆರ್ಥಿಕ ಪೂರ್ವಾವಶ್ಯಕತೆಗಳನ್ನೇನೂ ತಕ್ಷಣವೇ ಸೃಷ್ಟಿಸುವುದಿಲ್ಲ.

ಆದರೆ "ಬೂರ್ಷ್ವಾ ಹಕ್ಕು" ಬಿಟ್ಟು ಬೇರಾವ ಹಕ್ಕೂ ಇಲ್ಲ. ಆದ್ದರಿಂದ ಈ ಮಟ್ಟಿಗೆ ರಾಜ್ಯದ ಆವಶ್ಯಕತೆ ಇನ್ನೂ ಉಳಿದಿರುತ್ತದೆ. ರಾಜ್ಯವು ಉತ್ಪಾದನಾ ಸಾಧನಗಳ ಸಾರ್ವಜನಿಕ ಒಡೆತನವನ್ನು ಸಂರಕ್ಷಿಸುವಾಗಲೇ ಶ್ರಮದಲ್ಲೂ ಉತ್ಪನ್ನಗಳ ವಿತರಣೆಯಲ್ಲೂ ಸಮಾನತೆಯನ್ನು ಸಂರಕ್ಷಿಸುತ್ತದೆ.

ಯಾವುದೇ ಬಂಡವಾಳಗಾರರು, ಯಾವುದೇ ವರ್ಗಗಳು ಎಷ್ಟು ಮಾತ್ರವೂ ಇಲ್ಲದಿರುವಾಗ ಮತ್ತು ತತ್ಫಲವಾಗಿ ಯಾವುದೇ ವರ್ಗವನ್ನು ಹತ್ತಿಕ್ಕಬೇಕಾಗುವ ಅವಶ್ಯತೆ ಇಲ್ಲದೆ ಇರುವಾಗ, ರಾಜ್ಯವು ಕ್ಷಯಿಸಿಹೋಗುತ್ತದೆ.

ಆದರೆ ರಾಜ್ಯವು ಇನ್ನೂ ಸಂಪೂರ್ಣವಾಗಿ ಕ್ಷಯಿಸಿಹೋಗಿಲ್ಲ, ಏಕೆಂದರೆ, ವಾಸ್ತ

ವವಾದ ಅಸಮತೆಯನ್ನು ಪವಿತ್ರಗೊಳಿಸುವ "ಬೂರ್ಷ್ವಾ ಹಕ್ಕಿ"ನ ಸಂರಕ್ಷಣೆ ಇನ್ನೂ ಉಳಿದಿದೆ. ರಾಜ್ಯವು ಸಂಪೂರ್ಣವಾಗಿ ಕ್ಷಯಿಸಿಹೋಗುವುದಕ್ಕೆ ಸಂಪೂರ್ಣವಾದ ಕಮ್ಯೂನಿಸಂ ಅವಶ್ಯ.

## 4. ಕಮ್ಯೂನಿಸ್ಟ್ ಸಮಾಜದ ಉನ್ನತ ಮಜಲು

ಮುಂದುವರಿಯುತ್ತ ಮಾರ್ಕ್ಸ್ ಬರೆಯುತ್ತಾರೆ:

> "ಕಮ್ಯೂನಿಸ್ಟ್ ಸಮಾಜದ ಉನ್ನತ ಮಜಲಿನಲ್ಲಿ, ವ್ಯಕ್ತಿಯನ್ನು ಶ್ರಮ ವಿಭಜನೆಗೆ ದಾಸನನ್ನಾಗಿ ಮಾಡುವ ಪರಾಧೀನತೆಯೂ ಅದರೊಂದಿಗೇ ಮಾನಸಿಕ ಹಾಗೂ ಶಾರೀರಿಕ ಶ್ರಮದ ನಡುವಿನ ಕಡುಭೇದವೂ ಕಣ್ಮರೆಯಾದನಂತರ, ಶ್ರಮವು ಜೀವನೋಪಾಯವಷ್ಟೆ ಅಲ್ಲ, ಜೀವನದ ಪ್ರಧಾನ ಅಗತ್ಯತೆಯಾದನಂತರ, ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಯೊಂದಿಗೆ ಉತ್ಪಾದಕ ಶಕ್ತಿಗಳು ಹೆಚ್ಚಿದನಂತರ ಮತ್ತು ಎಲ್ಲ ಸಾರ್ವಜನಿಕ ಸಂಪತ್ತಿನ ಹೊಳೆಗಳೂ ಹೆಚ್ಚು ಸಮೃದ್ಧವಾಗಿ ಹರಿಯತೊಡಗಿದಾಗ – ಆಗಷ್ಟೆ ಬೂರ್ಷ್ವಾ ಹಕ್ಕಿನ ಸಂಕುಚಿತ ಪರಿಧಿಯನ್ನು ಇಡೀಯಾಗಿ ದಾಟಿ ಹೋಗಲು ಸಾಧ್ಯ ಮತ್ತು ಸಮಾಜವು ತನ್ನ ಪತಾಕೆಯ ಮೇಲೆ 'ಪ್ರತಿಯೊಬ್ಬರಿಂದಲೂ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ, ಪ್ರತಿಯೊಬ್ಬರಿಗೂ ಅವರವರ ಆವಶ್ಯಕತೆಗಳಿಗೆ ಅನುಗುಣವಾಗಿ !' ಎಂಬ ಘೋಷಣೆಯನ್ನು ಅಂಕಿತಗೊಳಿಸಲು ಸಾಧ್ಯ."

"ಸ್ವಾತಂತ್ರ್ಯ" ಮತ್ತು "ರಾಜ್ಯ" ಪದಗಳನ್ನು ಜೊತೆಕೂಡಿಸುವ ಅಸಂಬದ್ಧತೆಯನ್ನು ನಿರ್ದಾಕ್ಷಿಣ್ಯದಿಂದ ಪರಿಹಾಸ್ಯಗಯ್ಯುತ್ತ ಎಂಗೆಲ್ಸ್‌ರು ಹೇಳಿದ ಮಾತುಗಳ ಸಮರ್ಪಕತೆಯನ್ನು ನಾವು ಈಗಷ್ಟೆ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬಲ್ಲೆವು. ರಾಜ್ಯವು ಎಲ್ಲಿಯವರೆಗೆ ಅಸ್ತಿತ್ವದಲ್ಲಿರುವುದೋ ಅಲ್ಲಿಯವರೆಗೆ ಸ್ವಾತಂತ್ರ್ಯವು ಇರುವುದಿಲ್ಲ. ಸ್ವಾತಂತ್ರ್ಯವಿರುವಾಗ, ರಾಜ್ಯವಿರುವುದಿಲ್ಲ.

ರಾಜ್ಯವು ಸಂಪೂರ್ಣವಾಗಿ ಕ್ಷಯಿಸಿಹೋಗುವುದಕ್ಕೆ ಆರ್ಥಿಕ ಬುನಾದಿ ಎಂದರೆ ಕಮ್ಯೂನಿಸಂನ ಉನ್ನತ ಮಟ್ಟದ ಬೆಳವಣಿಗೆ. ಈ ಮಟ್ಟದಲ್ಲಿ ಮಾನಸಿಕ ಹಾಗೂ ಶಾರೀರಿಕ ಶ್ರಮದ ನಡುವಿನ ಕಡುಭೇದವು ಕಣ್ಮರೆಯಾಗುತ್ತದೆ, ತತ್ಫಲವಾಗಿ ಆಧುನಿಕ ಸಾಮಾಜಿಕ ಅಸಮಾನತೆಯ ಪ್ರಧಾನ ಮೂಲಗಳಲ್ಲೊಂದು – ಉತ್ಪಾದನಾ ಸಾಧನಗಳನ್ನು ಸಾರ್ವಜನಿಕ ಆಸ್ತಿಯನ್ನಾಗಿ ಪರಿವರ್ತಿಸುವುದರಿಂದಷ್ಟೆ, ಬಂಡವಾಳಶಾಹಿಗಳಿಂದ ಸ್ವತ್ತನ್ನು ವಶಪಡಿಸಿಕೊಳ್ಳುವುದರಿಂದಷ್ಟೆ, ತಕ್ಷಣವೇ ಯಾವುದೇ ರೀತಿಯಲ್ಲೂ ತೊಡೆದು ಹಾಕಲಾಗದಂಥ ಮೂಲವು – ಕಣ್ಮರೆಯಾಗುತ್ತದೆ.

ಬಂಡವಾಳವಾದಿಗಳಿಂದ ಸ್ವತ್ತನ್ನು ವಶಪಡಿಸಿಕೊಳ್ಳುವುದು ಉತ್ಪಾದನಾ ಶಕ್ತಿಗಳು ಪ್ರಚಂಡ ಪ್ರಮಾಣದಲ್ಲಿ ಅಭಿವೃದ್ಧಿಗೊಳ್ಳುವುದಕ್ಕೆ ಸಾಧ್ಯಮಾಡಿಕೊಡುತ್ತದೆ. ಬಂಡವಾಳವಾದವು ಹೇಗೆ ನಂಬಲಾಗದಂಥ ರೀತಿಯಲ್ಲಿ ಈ ಬೆಳವಣಿಗೆಯನ್ನು ಈಗಾಗಲೇ ವಿಲಂಬ ಮಾಡುತ್ತಿದೆ ಎಂಬುದನ್ನು ನಾವು ಕಂಡಾಗ, ಈಗಾಗಲೇ ಸಾಧಿಸಿರುವ ಯಂತ್ರಕಲೆಯ ಮಟ್ಟದ ಆಧಾರದ ಮೇಲೆ ಎಷ್ಟೊಂದು ಪ್ರಗತಿಯನ್ನು ಸಾಧಿಸಲು ಸಾಧ್ಯ ಎಂಬುದನ್ನು ನಾವು ಕಂಡಾಗ, ಬಂಡವಾಳಶಾಹಿಗಳಿಂದ ಸ್ವತ್ತನ್ನು ವಶಪಡಿಸಿಕೊಳ್ಳುವುದು ಮಾನವ ಸಮಾಜದ ಉತ್ಪಾದಕ ಶಕ್ತಿಗಳ ಪ್ರಚಂಡ ಬೆಳವಣಿಗೆಯಲ್ಲಿ ಅನಿವಾರ್ಯವಾಗಿಯೇ ಪರಿಣಾಮಗೊಳ್ಳುವುದು ಎಂದು ನಾವು ಸಂಪೂರ್ಣ ವಿಶ್ವಾಸದೊಂದಿಗೆ ಹೇಳುವ ಅರ್ಹತೆಯನ್ನು ಪಡೆಯುತ್ತೇವೆ. ಆದರೆ ಈ ಬೆಳವಣಿಗೆಯು ಎಷ್ಟು ಶೀಘ್ರವಾಗಿ ಮುಂದುವರಿಯುತ್ತದೆ, ಎಷ್ಟು ಬೇಗ ಅದು ಶ್ರಮ ವಿಭಜನೆಯಿಂದ ಬೇರ್ಪಟ್ಟು ದೂರ ಸರಿಯುವ, ಮಾನಸಿಕ ಹಾಗೂ ಶಾರೀರಿಕ ಶ್ರಮದ ನಡುವಿನ ಕಡುಭೇದವನ್ನು ಇಲ್ಲವಂತಾಗಿಸುವ, ಶ್ರಮವನ್ನು "ಜೀವನದ ಪ್ರಧಾನ ಅಗತ್ಯತೆ"ಯನ್ನಾಗಿ ಪರಿವರ್ತಿಸುವ, ಮಟ್ಟ ಮುಟ್ಟುತ್ತದೆ – ನಾವು ಇದನ್ನು ತಿಳಿಯೆವು, ತಿಳಿಯಲಾರೆವು.

ಆದ್ದರಿಂದಲೇ ನಾವು ರಾಜ್ಯ ಕ್ಷಯಿಸಿಹೋಗುವುದರ ಅನಿವಾರ್ಯತೆಯ ಬಗೆಗಷ್ಟೆ ಮಾತನಾಡುವ ಅರ್ಹತೆ ಹೊಂದಿದ್ದೇವೆ. ಈ ಪ್ರಕ್ರಿಯೆಯು ಸುದೀರ್ಘ ಸ್ವಭಾವದ್ದು, ಅದು ಕಮ್ಯೂನಿಸಂನ ಉನ್ನತ ಮಜಲಿನ ಬೆಳವಣಿಗೆಯ ಶೀಘ್ರತೆಯ ಮೇಲೆ ಅವಲಂಬಿಸಿರುತ್ತದೆ ಎಂದಷ್ಟೆ ಒತ್ತಿ ಹೇಳಬಲ್ಲೆವು. ರಾಜ್ಯವು ಕ್ಷಯಿಸಿಹೋಗಲು ತೆಗೆದುಕೊಳ್ಳುವ ಕಾಲದ ಪ್ರಶ್ನೆಯನ್ನು ಅಥವಾ ಅದು ತಳೆಯುವ ಸ್ಪಷ್ಟ ರೂಪಗಳ ಪ್ರಶ್ನೆಯನ್ನು ಉತ್ತರಿಸದೆ ಹಾಗೆಯೇ ಬಿಟ್ಟಿರುತ್ತೇವೆ, ಏಕೆಂದರೆ ಈ ಪ್ರಶ್ನೆಗಳಿಗೆ ಉತ್ತರಿಸಲು ಅವಶ್ಯವಾದ ಸಾಮಗ್ರಿ ಯಾವುದೂ ಇಲ್ಲ.

ಸಮಾಜವು "ಪ್ರತಿಯೊಬ್ಬರಿಂದಲೂ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ, ಪ್ರತಿಯೊಬ್ಬರಿಗೂ ಅವರವರ ಆವಶ್ಯಕತೆಗಳಿಗೆ ಅನುಗುಣವಾಗಿ" ಎಂಬ ನಿಯಮವನ್ನು ಅಂಗೀಕರಿಸಿದಾಗ, ಅಂದರೆ ಜನರು ಸಾಮಾಜಿಕ ವ್ಯವಹಾರದ ಮೂಲಭೂತ ನಿಯಮಗಳನ್ನು ಪಾಲಿಸುವುದಕ್ಕೆ ಎಷ್ಟು ಒಗ್ಗಿ ಹೋಗಿ ಬಿಡುವರೆಂದರೆ ಅವರ ಶ್ರಮವು ಎಷ್ಟು ಉತ್ಪಾದಕವಾಗುವುದೆಂದರೆ ಅವರು ಸ್ವಯಮೇಚ್ಛೆಯಿಂದಲೇ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಕೆಲಸ ಮಾಡುವಂತಾಗುತ್ತಾರೆ, ಆಗ ರಾಜ್ಯವು ಸಂಪೂರ್ಣವಾಗಿ ಕ್ಷಯಿಸಿಹೋಗುವುದು ಸಾಧ್ಯವಾಗುತ್ತದೆ. ಯಾರೋ ಒಬ್ಬ ಇನ್ನೊಬ್ಬನಿಗಿಂತ ಅರ್ಧ ಗಂಟೆ ಹೆಚ್ಚಾಗಿ ಕೆಲಸ ಮಾಡಿಲ್ಲವೇ, ಯಾರೋ ಒಬ್ಬ ಇನ್ನೊಬ್ಬನಿಗಿಂತ ಕಮ್ಮಿ ಸಂಬಳ ಪಡೆಯುತ್ತಿಲ್ಲವೇ ಎಂದು ಷೈಲಾಕನಂತೆ ನಿಷ್ಕರುಣೆಯಿಂದ ಲೆಕ್ಕ ಹಾಕುವ ಬಲಾತ್ಕಾರಕ್ಕೊಳಪಡಿಸುವ "ಬೂರ್ಷ್ವಾ ಹಕ್ಕಿನ ಸಂಕುಚಿತ ವ್ಯಾಪ್ತಿ"ಯನ್ನು – ಈ ಸಂಕುಚಿತ ಪರಿಧಿಯನ್ನು – ಆಗ ದಾಟಿ ಹೋಗಲಾಗುವುದು. ಆಗ ಉತ್ಪನ್ನ

ಗಳನ್ನು ಹಂಚುವುದರಲ್ಲಿ ಸಮಾಜಕ್ಕೆ ಪ್ರತಿಯೊಬ್ಬರೂ ಪಡೆಯಬೇಕಾದ ಪ್ರಮಾಣವನ್ನು ನಿಯಂತ್ರಿಸುವ ಆವಶ್ಯಕತೆ ಇರುವುದಿಲ್ಲ; ಪ್ರತಿಯೊಬ್ಬರೂ ಸ್ವತಂತ್ರವಾಗಿ "ತಮ್ಮ ಆವಶ್ಯಕತೆಗಳಿಗೆ ಅನುಗುಣವಾಗಿ" ತೆಗೆದುಕೊಳ್ಳುವರು.

ಅಂತಹ ಸಾಮಾಜಿಕ ವ್ಯವಸ್ಥೆಯು "ಶುದ್ಧ ಅಸಾಧ್ಯಾದರ್ಶವಾದುದು" ಎಂದು ಘೋಷಿಸುವುದು, ಒಬ್ಬೊಬ್ಬ ಪ್ರಜೆಯ ಶ್ರಮದ ಮೇಲೆಯೂ ಹತೋಟಿ ಹೊಂದಿಲ್ಲದೆಯೇ ಎಷ್ಟೋ ಪ್ರಮಾಣದ ಅತ್ಯುತ್ತಮ ತಿನಿಸುಗಳನ್ನು, ಕಾರುಗಳನ್ನು, ಪಿಯಾನೋ ಇತ್ಯಾದಿಗಳನ್ನು ಸಮಾಜದಿಂದ ಪಡೆಯುವ ಹಕ್ಕನ್ನು ಪ್ರತಿಯೊಬ್ಬರಿಗೂ ವಾಗ್ದಾನ ಮಾಡುತ್ತಾರೆಂದು ಸಮಾಜವಾದಿಗಳನ್ನು ಜರಿಯುವುದು, ಬೂರ್ಷ್ವಾ ದೃಷ್ಟಿಕೋನದಿಂದ ಸುಲಭ. ಇಂದಿಗೂ ಬಹುಮಟ್ಟಿಗಿನ ಬೂರ್ಷ್ವಾ "ಪಂಡಿತ"ರು ಈ ರೀತಿ ಜರಿಯುವುದನ್ನೇ ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ, ತನ್ಮೂಲಕ ತಮ್ಮ ತಿಳಿಗೇಡಿತನವನ್ನೂ, ಬಂಡವಾಳವಾದವನ್ನು ಸ್ವಾರ್ಥತೆಯಿಂದ ಬೆಂಬಲಿಸುವುದನ್ನೂ, ತೋರ್ಪಡಿಸಿಕೊಳ್ಳುತ್ತಿದ್ದಾರೆ.

ತಿಳಿಗೇಡಿತನ – ಏಕೆಂದರೆ ಕಮ್ಯೂನಿಸಂನ ಬೆಳವಣಿಗೆಯ ಉನ್ನತ ಮಜಲು ಬರಲಿರುವುದೆಂದು "ವಾಗ್ದಾನ" ಮಾಡುವ ಆಲೋಚನೆಯು ಯಾವುದೇ ಸಮಾಜವಾದಿಯ ತಲೆಯನ್ನೂ ಎಂದೂ ಹೊಕ್ಕೇ ಇಲ್ಲ; ಇನ್ನು ಅದು ಬರಲಿರುವುದು ಎಂಬ ಸಮಾಜವಾದಿಗಳ ಮಹಾ ಭವಿಷ್ಯವಾಣಿಯ ಬಗೆಗೆ ಹೇಳುವುದಾದರೆ, ಅದಕ್ಕೆ ಬೇಕಾಗಿರುವುದು ಇಂದಿನ ಶ್ರಮ ಉತ್ಪಾದಕತೆಯಲ್ಲ ಮತ್ತು ಇಂದಿನ ಸಂಕುಚಿತಮತಿಗಳೂ ಅಲ್ಲ. ಇವರು ಪೊಮ್ಯಲೋವ್‌ಸ್ಕಿಯವರ ಪುಸ್ತಕದಲ್ಲಿನ ಬೂರ್‌ಸಾಕ್‌ಗಳಂತೆ* "ತಮಾಷೆಗಾಗಿ" ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ನಾಶಗೊಳಿಸಬಲ್ಲವರಾಗಿದ್ದಾರೆ, ಅಸಾಧ್ಯವಾದುದನ್ನು ಕೇಳಬಲ್ಲವರಾಗಿದ್ದಾರೆ.

ಕಮ್ಯೂನಿಸಂನ "ಉನ್ನತ" ಮಜಲು ಬರುವವರೆಗೂ ಸಮಾಜವು ಹಾಗೂ ರಾಜ್ಯವು ಶ್ರಮದ ಪ್ರಮಾಣ ಹಾಗೂ ಬಳಕೆಯ ಪ್ರಮಾಣಗಳ ಮೇಲೆ ಅತ್ಯಂತ ಕಟ್ಟುನಿಟ್ಟಾದ ನಿಯಂತ್ರಣವನ್ನು ಹೊಂದಿರಬೇಕೆಂದು ಸಮಾಜವಾದಿಗಳು ಕೇಳುತ್ತಾರೆ; ಆದರೆ ಈ ನಿಯಂತ್ರಣವು ಬಂಡವಾಳಶಾಹಿಗಳಿಂದ ಸ್ವತ್ತನ್ನು ವಶಪಡಿಸಿಕೊಳ್ಳುವುದರಿಂದ, ಬಂಡವಾಳಶಾಹಿಗಳ ಮೇಲೆ ಕಾರ್ಮಿಕರು ನಿಯಂತ್ರಣ ಸ್ಥಾಪಿಸುವುದರಿಂದ ಆರಂಭವಾಗಬೇಕು ಮತ್ತು ಈ ನಿಯಂತ್ರಣವನ್ನು ಅಧಿಕಾರಶಾಹಿಗಳ ರಾಜ್ಯವಲ್ಲ ಆದರೆ ಸಶಸ್ತ್ರ ಕಾರ್ಮಿಕರ ರಾಜ್ಯವು ಚಲಾಯಿಸಬೇಕು.

---

*ಬೂರ್‌ಸಾಕ್‌ಗಳು – ಹಳೆಯ ರಷ್ಯದಲ್ಲಿದ್ದ ಧಾರ್ಮಿಕಶಾಲೆ(ಬೂರ್ಸ)ಗಳ ವಿದ್ಯಾರ್ಥಿಗಳು. 'ಬೂರ್ಸದ ಜೀವನ ಚಿತ್ರಗಳು' ಎಂಬ ತಮ್ಮ ಪುಸ್ತಕದಲ್ಲಿ ರಷ್ಯನ್ ಲೇಖಕ ಎನ್. ಜಿ. ಪೊಮ್ಯಲೋವ್‌ಸ್ಕಿ ಇವರ ಜೀವನವನ್ನು ವರ್ಣಿಸಿದ್ದಾರೆ. – ಸಂ.

ಬೂರ್ಷ್ವಾ ವಿಚಾರಧಾರಾವಾದಿಗಳು (ಮತ್ತು ತ್ಸೆರೆತೇಲಿಗಳು, ಚೆರ್ನೋವ್‌ಗಳು ಮತ್ತಿತರರಂಥ ಅವರ ಅನುಯಾಯಿಗಳು) ಸ್ವಾರ್ಥತೆಯಿಂದ ಬಂಡವಾಳವಾದವನ್ನು ಬೆಂಬಲಿಸುವುದಕ್ಕೆ ಕಾರಣ ಅವರು ಇಂದಿನ ರಾಜಕಾರಣದ ಪ್ರಮುಖ ಹಾಗೂ ತುರ್ತಿನ ಪ್ರಶ್ನೆಯು ಬದಲು ಅದರ ಸ್ಥಳದಲ್ಲಿ ದೂರ ಭವಿಷ್ಯತ್ತಿನ ಬಗೆಗೆ ವಾದಿಸುವುದನ್ನು ಮತ್ತು ಮಾತನಾಡುವುದನ್ನು ಇರಿಸುವುದಾಗಿದೆ. ಇಂದಿನ ತುರ್ತಿನ ಪ್ರಶ್ನೆ ಬಂಡವಾಳವಾದಿಗಳಿಂದ ಸ್ವತ್ತನ್ನು ವಶಪಡಿಸಿಕೊಳ್ಳುವುದಾಗಿದೆ, ಎಲ್ಲ ಪ್ರಜೆಗಳನ್ನೂ ಒಂದು ಭಾರಿ ಸಿಂಡಿಕೇಟ್‌ನ – ಇಡೀ ರಾಜ್ಯದ – ಕಾರ್ಮಿಕರನ್ನಾಗಿ ಹಾಗೂ ನೌಕರರನ್ನಾಗಿ ಪರಿವರ್ತಿಸುವುದಾಗಿದೆ, ಈ ಸಿಂಡಿಕೇಟ್‌ನ ಇಡೀ ಕಾರ್ಯವನ್ನು ನಿಜಕ್ಕೂ ಪ್ರಜಾಸತ್ತಾತ್ಮಕವಾದ ರಾಜ್ಯಕ್ಕೆ, ಕಾರ್ಮಿಕರ ಹಾಗೂ ಸೈನಿಕ ಡೆಪ್ಯೂಟಿಗಳ ಸೋವಿಯತ್‌ಗಳ ರಾಜ್ಯಕ್ಕೆ, ಸಂಪೂರ್ಣವಾಗಿ ಅಧೀನಗೊಳಿಸುವುದಾಗಿದೆ.

ವಾಸ್ತವವಾಗಿ, ಪಂಡಿತ ಪ್ರಾಧ್ಯಾಪಕರೊಬ್ಬರು, ಅವರ ಹಿಂದೆಯೇ ಸಂಕುಚಿತ ಮತಿಯು, ಅವನನ್ನನುಸರಿಸಿ ತ್ಸೆರೆತೇಲಿಗಳೂ ಚೆರ್ನೋವ್‌ಗಳೂ, ಹುಚ್ಚು ಅಸಾಧ್ಯಾದರ್ಶಗಳ ಬಗೆಗೆ, ಬೋಲ್ಶೆವಿಕರ ಉದ್ರೇಕಪೂರಿತ ವಾಗ್ದಾನಗಳ ಬಗೆಗೆ, ಸಮಾಜವಾದವನ್ನು "ಜಾರಿಗೆ ತರುವ" ಅಸಾಧ್ಯತೆಯ ಬಗೆಗೆ, ಮಾತನಾಡುವಾಗ ಅವರು ಮನಸ್ಸಿನಲ್ಲಿಟ್ಟಿರುವುದು ಕಮ್ಯೂನಿಸಂನ ಉನ್ನತ ಘಟ್ಟ ಅಥವಾ ಮಜಲನ್ನು. ಇದನ್ನು ಯಾರೂ ಎಂದೂ ಏರ್ಪಡಿಸುವ ವಾಗ್ದಾನ ನೀಡಿಲ್ಲ, ಅಥವಾ ಅದನ್ನು "ಜಾರಿಗೆ ತರುವ" ಆಲೋಚನೆಯನ್ನೂ ಮಾಡಿಲ್ಲ; ಏಕೆಂದರೆ, ಸಾಮಾನ್ಯವಾಗಿ ಹೇಳುವುದಾದರೆ, ಅದನ್ನು "ಜಾರಿಗೆ ತರುವುದು" ಸಾಧ್ಯವಿಲ್ಲ.

ಇದು ನಮ್ಮನ್ನು ಸಮಾಜವಾದ ಹಾಗೂ ಕಮ್ಯೂನಿಸಂಗಳ ನಡುವಿನ ವೈಜ್ಞಾನಿಕ ವ್ಯತ್ಯಾಸದ ಪ್ರಶ್ನೆಯ ಬಳಿಗೆ ಕರೆದೊಯ್ಯುತ್ತದೆ. ಮೇಲೆ ಉದ್ಧರಿಸಿದ ವಾದದಲ್ಲಿ ಎಂಗೆಲ್ಸ್‌ರು "ಸೋಷಲ್ ಡೆಮೊಕ್ರಾಟ್" ಎಂಬ ಹೆಸರಿನ ಅಸಮರ್ಪಕತೆಯ ಬಗೆಗೆ ಹೇಳುವಾಗ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ರಾಜಕೀಯವಾಗಿ ಕಮ್ಯೂನಿಸಂನ ಮೊದಲ ಅಥವಾ ಕೆಳಗಿನ ಹಾಗೂ ಉನ್ನತ ಮಜಲಿನ ನಡವೆ ವ್ಯತ್ಯಾಸವು ಮುಂದೆ ಬಹುಶಃ ಬಹುಭಾರಿಯದಾಗಬಹುದು. ಆದರೆ ಈ ವ್ಯತ್ಯಾಸವನ್ನು ಈಗ, ಬಂಡವಾಳವಾದದಡಿ, ಗುರುತಿಸ ಹೋಗುವುದು ಹಾಸ್ಯಾಸ್ಪದವಾಗುತ್ತದೆ. ಎಲ್ಲೋ ಒಬ್ಬೊಬ್ಬರು ಅರಾಜಕತಾವಾದಿಗಳಷ್ಟೆ ಬಹುಶಃ ಅದಕ್ಕೆ ಪ್ರಾಥಮಿಕ ಪ್ರಾಮುಖ್ಯತೆ ನೀಡಬಲ್ಲರು (ಕ್ರೊಪೋತ್ಕಿನ್‌ಗಳು, ಗ್ರಾವ್, ಕೊರ್ನೆಲಿಸ್ಸೆನ್ ಮತ್ತಿತರ ಅರಾಜಕತಾವಾದದ "ಹಿರಿಮಣಿ"ಗಳು ಸಾಮಾಜಿಕ ಸ್ವದೇಶ ಮೂಢಾಭಿಮಾನಿಗಳಾಗಿ ಅಥವಾ "ಅರಾಜಕ-ಕಂದಕ ಸೈನಿಕರುಗಳಾಗಿ" – ಆತ್ಮಗೌರವ ಹಾಗೂ ಆತ್ಮಸಾಕ್ಷಿಯ ಭಾವನೆಯನ್ನು ಇನ್ನೂ ಉಳಿಸಿಕೊಂಡಿರುವ ಕೆಲವೇ ಅರಾಜಕತಾವಾದಿಗಳಲ್ಲೊಬ್ಬರಾದ ಗೇರವರು ಹೀಗೆಯೇ ಹೇಳುವುದು – "ಪ್ಲೆಹಾನೊವ್‌ರಂತೆ" ಮಾರ್ಪಾಟಾಗುವು

ದರಿಂದ ಏನನ್ನೂ ಕಲಿಯದಿರುವಂಥ ಜನ ಅರಾಜಕತಾವಾದಿಗಳ ಮಧ್ಯೆ ಇನ್ನೂ ಯಾರಾದರೂ ಇದ್ದರೆ).

ಆದರೆ ಸಮಾಜವಾದ ಹಾಗೂ ಕಮ್ಯೂನಿಸಂಗಳ ನಡುವಿನ ವೈಜ್ಞಾನಿಕ ವ್ಯತ್ಯಾಸವು ಸ್ಪಷ್ಟವಾಗಿದೆ. ಸಾಮಾನ್ಯವಾಗಿ ಸಮಾಜವಾದ ಎಂದು ಕರೆಯಲಾಗುವುದನ್ನು ಮಾರ್ಕ್ಸ್‌ರವರು ಕಮ್ಯೂನಿಸ್ಟ್ ಸಮಾಜದ "ಮೊದಲ" ಅಥವಾ ಕೆಳಗಿನ ಮಜಲು ಎಂದು ಕರೆದರು. ಉತ್ಪಾದನಾ ಸಾಧನಗಳು ಸಾರ್ವಜನಿಕ ಆಸ್ತಿಯಾಗುವ ಮಟ್ಟಿಗೆ "ಕಮ್ಯೂನಿಸಂ" ಎಂಬ ಪದವು ಇಲ್ಲಿಯೂ ಅನ್ವಯವಾಗುತ್ತದೆ, ಆದರೆ ಇದು ಸಂಪೂರ್ಣ ಕಮ್ಯೂನಿಸಂ ಅಲ್ಲ ಎಂಬುದನ್ನು ನಾವು ಮರೆಯಬಾರದು. ಮಾರ್ಕ್ಸ್‌ರವರ ವಿವರಣೆಗಳಲ್ಲಿನ ಮಹಾ ಪ್ರಾಮುಖ್ಯತೆ ಏನೆಂದರೆ, ಇಲ್ಲೂ ಅವರು ಸುಸಂಗತವಾಗಿ ಭೌತಿಕವಾದಿ ದ್ವಂದ್ವಾತ್ಮಕತೆಯನ್ನು, ಬೆಳವಣಿಗೆಯ ಸಿದ್ಧಾಂತವನ್ನು, ಅನ್ವಯಿಸುತ್ತ ಕಮ್ಯೂನಿಸಂಅನ್ನು ಬಂಡವಾಳವಾದದಿಂದ ಬೆಳೆದು ಬರುವ ವ್ಯವಸ್ಥೆಯನ್ನಾಗಿ ಭಾವಿಸುವುದಾಗಿದೆ. ಅತಿಸೂಕ್ಷ್ಮ ಪಾಂಡಿತ್ಯದಿಂದ "ಸೃಷ್ಟಿ"ಸಿದ ನಿರೂಪಣೆಗಳ ಹಾಗೂ ಪದಗಳ ಬಗೆಗೆ ನಿರರ್ಥಕ ವಿವಾದಗಳ (ಸಮಾಜವಾದ ಎಂದರೇನು? ಕಮ್ಯೂನಿಸಂ ಎಂದರೇನು? ಎಂಬಂಥ ವಿವಾದಗಳ) ಬದಲು ಮಾರ್ಕ್ಸ್‌ರವರು ಕಮ್ಯೂನಿಸಂನ ಆರ್ಥಿಕ ಪರಿಪಕ್ವತೆಯ ಘಟ್ಟಗಳು ಎಂದು ಕರೆಯಬಹುದಾದಂತಹುದರ ವಿಶ್ಲೇಷಣೆಯನ್ನು ನೀಡುತ್ತಾರೆ.

ಮೊದಲ ಮಜಲಿನಲ್ಲಿ ಅಥವಾ ಮೊದಲ ಘಟ್ಟದಲ್ಲಿ ಕಮ್ಯೂನಿಸಂ ಇನ್ನೂ ಆರ್ಥಿಕವಾಗಿ ಸಂಪೂರ್ಣವಾಗಿ ಪರಿಪಕ್ವವಾಗಿರಲಾರದು, ಬಂಡವಾಳವಾದದ ಪರಂಪರೆಗಳಿಂದ ಅಥವಾ ಅವಶೇಷಗಳಿಂದ ಸಂಪೂರ್ಣವಾಗಿ ಮುಕ್ತವಾಗಿರಲಾರದು. ಆದ್ದರಿಂದಲೇ ಕಮ್ಯೂನಿಸಂ ತನ್ನ ಮೊದಲ ಮಜಲಿನಲ್ಲಿ "ಬೂರ್ಷ್ವಾ ಹಕ್ಕಿನ ಸಂಕುಚಿತ ವ್ಯಾಪ್ತಿ"ಯನ್ನು ಉಳಿಸಿಕೊಂಡಿರುವ ಸ್ವಾರಸ್ಯಕರ ಪರಿಸ್ಥಿತಿ. ಬಳಕೆ ಪದಾರ್ಥಗಳ ವಿತರಣೆಗೆ ಸಂಬಂಧಿಸಿ ಬೂರ್ಷ್ವಾ ಹಕ್ಕು ಎಂದ ಮೇಲೆ ಬೂರ್ಷ್ವಾ ರಾಜ್ಯದ ಅಸ್ತಿತ್ವ ಪೂರ್ವಸಿದ್ಧವಾಗಿರುತ್ತದೆನ್ನಿ, ಏಕೆಂದರೆ ಹಕ್ಕು ಪಾಲಿಸುವುದನ್ನು ನಿರ್ಬಂಧಿಸಬಲ್ಲ ಸಾಧನವಿಲ್ಲದೆ ಹಕ್ಕು ವ್ಯರ್ಥ.

ಆದ್ದರಿಂದ ಕಮ್ಯೂನಿಸಂನ ಅಡಿಯಲ್ಲೂ ಸ್ವಲ್ಪ ಕಾಲದವರೆಗೆ ಬೂರ್ಷ್ವಾ ಹಕ್ಕಷ್ಟೆ ಅಲ್ಲ ಬೂರ್ಷ್ವಾ ರಾಜ್ಯವೂ ಇರುತ್ತದೆ, ಆದರೆ ಬೂರ್ಷ್ವಾಸೀ ಇರುವುದಿಲ್ಲ!

ಇದು ವಿರೋಧಾಭಾಸವಾಗಿ, ಅಥವಾ ಕೇವಲ ದ್ವಂದ್ವಾತ್ಮಕ ಒಗಟಾಗಿ ಕಾಣಬಹುದು. ಮಾರ್ಕ್ಸ್‌ವಾದದ ಅತ್ಯಸಾಧಾರಣವಾದಷ್ಟು ಪ್ರಗಾಢವಾದ ಸಾರವನ್ನು ಅಭ್ಯಸಿಸಲು ಎಳ್ಳಷ್ಟೂ ತೊಂದರೆ ತೆಗೆದುಕೊಳ್ಳದ ಜನ ಆಗಾಗ್ಗೆ ಮಾರ್ಕ್ಸ್‌ವಾದದ ಮೇಲೆ ಈ ಆಪಾದನೆ ಹೊರಿಸುತ್ತಾರೆ.

ಆದರೆ ವಾಸ್ತವವಾಗಿ ನಿಸರ್ಗದಲ್ಲೂ ಸಮಾಜದಲ್ಲೂ ಹಳತರ ಅವಶೇಷಗಳು ಹೊಸತರಲ್ಲಿ ಇನ್ನೂ ಉಳಿದುಕೊಂಡಿರುವುದನ್ನು ನಾವು ಜೀವನದ ಪ್ರತಿ ಹೆಜ್ಜೆಯಲ್ಲೂ

ಕಾಣುತ್ತೇವೆ. ಮಾರ್ಕ್ಸ್‌ರವರು "ಬೂರ್ಷ್ವಾ" ಹಕ್ಕಿನ ತೇಪೆಯನ್ನು ಕಮ್ಯೂನಿಸಂನೊಳಕ್ಕೆ ಸ್ವೇಚ್ಛಾನುಸಾರ ಸೇರಿಸಲಿಲ್ಲ. ಆದರೆ ಬಂಡವಾಳವಾದದ ಗರ್ಭದಿಂದ ಉದಯಿಸುವ ಸಮಾಜದಲ್ಲಿ ಆರ್ಥಿಕವಾಗಿಯೂ ರಾಜಕೀಯವಾಗಿಯೂ ಯಾವುದು ಅನಿವಾರ್ಯವೋ ಅದನ್ನು ಸೂಚಿಸಿದರು.

ಬಂಡವಾಳಶಾಹಿಗಳ ವಿರುದ್ಧ ವಿಮೋಚನಾ ಹೋರಾಟದಲ್ಲಿ ಕಾರ್ಮಿಕ ವರ್ಗಕ್ಕೆ ಪ್ರಜಾಪ್ರಭುತ್ವವು ಅಪಾರ ಪ್ರಾಮುಖ್ಯತೆಯದಾಗಿದೆ. ಆದರೆ ಪ್ರಜಾಪ್ರಭುತ್ವವು ಮೀರಿ ಹೋಗಬಾರದಂಥ ಮೇರೆ ಏನೂ ಅಲ್ಲ; ಅದು ಸಾಮಂತವಾದದಿಂದ ಬಂಡವಾಳವಾದಕ್ಕೆ, ಬಂಡವಾಳವಾದದಿಂದ ಕಮ್ಯೂನಿಸಂಗೆ ಹೋಗುವ ಮಾರ್ಗದಲ್ಲಿ ವಿವಿಧ ಘಟ್ಟಗಳಲ್ಲೊಂದಷ್ಟೆ.

ಪ್ರಜಾಪ್ರಭುತ್ವ ಎಂದರೆ ಸಮಾನತೆ ಎಂದರ್ಥ. ಈ ಸಮಾನತೆಯನ್ನು ನಾವು ವರ್ಗಗಳ ನಿರ್ಮೂಲನ ಎಂದು ಸರಿಯಾಗಿ ವ್ಯಾಖ್ಯಾನಿಸಿದರಷ್ಟೆ, ಸಮಾನತೆ ಎಂಬ ಘೋಷಣೆಯ ಭಾರಿ ಪ್ರಾಮುಖ್ಯತೆಯೂ, ಸಮಾನತೆಗಾಗಿ ಶ್ರಮಜೀವಿ ವರ್ಗದ ಹೋರಾಟದ ಭಾರಿ ಪ್ರಾಮುಖ್ಯತೆಯೂ, ನಮಗೆ ಸ್ಪಷ್ಟವಾಗುವುದು. ಆದರೆ ಪ್ರಜಾಪ್ರಭುತ್ವ ಎಂದರೆ ಔಪಚಾರಿಕ ಸಮಾನತೆ ಎಂದಷ್ಟೆ ಅರ್ಥ. ಉತ್ಪಾದನಾ ಸಾಧನಗಳ ಮಾಲೀಕತ್ವಕ್ಕೆ ಸಂಬಂಧಿಸಿ ಸಮಾಜದ ಎಲ್ಲ ಸದಸ್ಯರಿಗೂ ಸಮಾನತೆಯನ್ನು, ಅಂದರೆ ಶ್ರಮ ಹಾಗೂ ಕೂಲಿಗಳ ಸಮಾನತೆಯನ್ನು, ಸಾಧಿಸಿದ ಕೂಡಲೇ ಮಾನವಕುಲದ ಮುಂದೆ ಮತ್ತಷ್ಟು ಮುಂದುವರಿಯುವ ಪ್ರಶ್ನೆ ಅನಿವಾರ್ಯವಾಗಿಯೇ ಎದ್ದು ನಿಲ್ಲುತ್ತದೆ. ಔಪಚಾರಿಕ ಸಮಾನತೆಯಿಂದ ನಿಜವಾದ ಸಮಾನತೆಗೆ, ಅಂದರೆ, "ಪ್ರತಿಯೊಬ್ಬರಿಂದಲೂ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ, ಪ್ರತಿಯೊಬ್ಬರಿಗೂ ಅವರವರ ಆವಶ್ಯಕತೆಗಳಿಗೆ ಅನುಗುಣವಾಗಿ" ಎಂಬ ನಿಯಮವನ್ನು ಆಚರಣೆಗೆ ತರುವುದಕ್ಕೆ, ಹೋಗುವ ಪ್ರಶ್ನೆ ಎದ್ದು ನಿಲ್ಲುತ್ತದೆ. ಮಾನವಕುಲವು ಈ ಸರ್ವೋಚ್ಚ ಗುರಿ ಸಾಧನೆಯತ್ತ ಯಾವ ಘಟ್ಟಗಳಲ್ಲಿ ಮತ್ತು ಯಾವ ಪ್ರಾಯೋಗಿಕ ಕ್ರಮಗಳ ಮೂಲಕ ಮುಂದುವರಿಯುತ್ತದೆ ಎಂಬುದನ್ನು ನಾವು ತಿಳಿಯೆವು ಮತ್ತು ತಿಳಿಯಲಾರೆವು. ಆದರೆ ಸಮಾಜವಾದವು ನಿರ್ಜೀವವಾದ, ಗಡುಸಾದ, ಸದಾ ಕಾಲಕ್ಕೂ ಸ್ಥಿರಪಡಿಸಿದ ವ್ಯವಸ್ಥೆ ಎಂಬ ಸಾಮಾನ್ಯ ಬೂರ್ಷ್ವಾ ಕಲ್ಪನೆಯು ಎಷ್ಟು ಭಾರಿ ಅಸಂಬದ್ಧವಾದುದು ಎಂಬುದನ್ನು ಮನಗಾಣುವುದು ಮುಖ್ಯ. ವಾಸ್ತವವಾಗಿ ಸಮಾಜವಾದವಷ್ಟೆ ಒಂದು ಶೀಘ್ರವಾದ, ನೈಜವಾದ, ನಿಜಕ್ಕೂ ಸಾಮೂಹಿಕವಾದ ಮುಂಚಲನೆಗೆ ಆರಂಭವಾಗುವುದು. ಅದು ಮೊದಲು ಬಹುಸಂಖ್ಯಾತರನ್ನು, ಅನಂತರ ಎಲ್ಲ ಸಾರ್ವಜನಿಕ ಹಾಗೂ ಖಾಸಗಿ ಜೀವನ ವಲಯಗಳಲ್ಲೂ ಇಡೀ ಜನತೆಯನ್ನು, ತನ್ನಲ್ಲಿ ಕೂಡಿಸಿಕೊಳ್ಳುವುದು.

ಪ್ರಜಾಪ್ರಭುತ್ವವು ರಾಜ್ಯದ ಒಂದು ರೂಪ, ಅದರ ವಿವಿಧ ರೂಪಗಳಲ್ಲೊಂದು. ತತ್ಫಲವಾಗಿ ಅದು ಪ್ರತಿಯೊಂದೂ ರಾಜ್ಯದಂತೆಯೇ ಒಂದು ಕಡೆ ವ್ಯಕ್ತಿಗಳ ವಿರುದ್ಧ

ಸುಸಂಘಟಿತ ಕ್ರಮಬದ್ಧ ಬಲಪ್ರಯೋಗದ ಪ್ರತೀಕವಾಗಿರುತ್ತದೆ; ಮತ್ತೊಂದು ಕಡೆ ಅದು ಪ್ರಜೆಗಳ ಸಮಾನತೆಗೆ, ರಾಜ್ಯದ ರಚನೆಯನ್ನು ನಿರ್ಧರಿಸುವ ಮತ್ತು ಅಧಿಕಾರ ನಡೆಸುವ ಎಲ್ಲರ ಸಮಾನ ಹಕ್ಕಿಗೆ ಔಪಚಾರಿಕ ಮನ್ನಣೆಯ ಅರ್ಥ ನೀಡುತ್ತದೆ. ಇದರ ಫಲವಾಗಿ ಪ್ರಜಾಪ್ರಭುತ್ವದ ಬೆಳವಣಿಗೆಯು ಒಂದು ನಿರ್ದಿಷ್ಟ ಘಟ್ಟದಲ್ಲಿ ಅದು ಮೊದಲು ಬಂಡವಾಳವಾದದ ವಿರುದ್ಧ ಕ್ರಾಂತಿಕಾರಿ ಹೋರಾಟ ಹೂಡುವ ಶ್ರಮಜೀವಿ ವರ್ಗವನ್ನು ಒಂದಾಗಿ ಬೆಸೆಯುತ್ತದೆ ಮತ್ತು ಬೂರ್ಷ್ವಾ ಹಾಗೂ ಗಣತಂತ್ರೀಯ-ಬೂರ್ಷ್ವಾ ರಾಜ್ಯಯಂತ್ರವನ್ನು, ಸ್ಥಾಯಿ ಸೈನ್ಯವನ್ನು, ಪೋಲೀಸ್ ಹಾಗೂ ಅಧಿಕಾರಶಾಹಿಯನ್ನು ಕುಟ್ಟಿಪುಡಿಮಾಡಲು, ಕಣಕಣವಾಗಿ ಒಡೆದು ಹಾಕಲು, ಇಳೆಯ ಮೇಲಿನಿಂದ ಗುರುತೂ ಇಲ್ಲದಂತೆ ಕೊಚ್ಚಿ ಹಾಕಲು ಶ್ರಮಜೀವಿ ವರ್ಗಕ್ಕೆ ಸಾಧ್ಯಮಾಡಿಕೊಡುತ್ತದೆ. ಆ ರಾಜ್ಯಯಂತ್ರದ ಸ್ಥಳದಲ್ಲಿ ಶ್ರಮಜೀವಿ ವರ್ಗವು ಹೆಚ್ಚು ಪ್ರಜಾಸತ್ತಾತ್ಮಕವಾದ ರಾಜ್ಯಯಂತ್ರವನ್ನು ಸ್ಥಾಪಿಸುತ್ತದೆ. ಹೆಚ್ಚು ಪ್ರಜಾಸತ್ತಾತ್ಮಕವಾದರೂ ಅದು ರಾಜ್ಯಯಂತ್ರವಂತೂ ಆಗಿರುತ್ತದೆ. ಅದು ಇಡೀ ಜನತೆಯನ್ನು ಒಳಗೊಂಡಿರುವ ಮಿಲಿಷಿಯವನ್ನು ರೂಪಿಸಲು ಮುಂದುವರಿಯುವ ಸಶಸ್ತ್ರ ಕಾರ್ಮಿಕರ ರೂಪದಲ್ಲಿರುತ್ತದೆ.

ಇಲ್ಲಿ "ಪರಿಮಾಣವು ಗುಣವಾಗಿ ಪರಿವರ್ತನೆಯಾಗುತ್ತದೆ:" ಪ್ರಜಾಪ್ರಭುತ್ವವು ಎಂಥ ಮಟ್ಟ ಮುಟ್ಟುತ್ತದೆಂದರೆ ಅದು ಬೂರ್ಷ್ವಾ ಸಮಾಜದ ಮೇರೆಗಳನ್ನು ಮೀರಿ ಸಮಾಜವಾದಿ ಪುನಸ್ಸಂಘಟನೆಯನ್ನು ಪ್ರಾರಂಭಿಸುತ್ತದೆಂಬ ಅರ್ಥವನ್ನು ಒಳಗೊಂಡಿರುತ್ತದೆ. ರಾಜ್ಯದ ಆಡಳಿತದಲ್ಲಿ ಎಲ್ಲರೂ ನಿಜಕ್ಕೂ ಭಾಗವಹಿಸುವುದಾದರೆ ಬಂಡವಾಳವಾದವು ತನ್ನ ಹಿಡಿತವನ್ನು ಉಳಿಸಿಕೊಂಡಿರಲು ಸಾಧ್ಯವಾಗುವುದಿಲ್ಲ. ಬಂಡವಾಳವಾದದ ಬೆಳವಣಿಗೆಯು, ತನ್ನ ಸರದಿಯಲ್ಲಿ, ರಾಜ್ಯದ ಆಡಳಿತದಲ್ಲಿ ನಿಜಕ್ಕೂ "ಎಲ್ಲರೂ" ಭಾಗವಹಿಸುವುದನ್ನು ಸಾಧ್ಯ ಮಾಡಿಕೊಡುವ ಪೂರ್ವಾವಶ್ಯಕತೆಗಳನ್ನು ಉಂಟುಮಾಡುತ್ತದೆ. ಈ ಪೂರ್ವಾವಶ್ಯಕತೆಗಳಲ್ಲಿ ಕೆಳಗಿನವು ಕೆಲವಾಗಿವೆ: ಸಾರ್ವತ್ರಿಕ ಸಾಕ್ಷರತೆ. ಇದನ್ನು ಆಗಲೇ ಅತ್ಯಂತ ಮುಂದುವರಿದ ಅನೇಕ ಬಂಡವಾಳಶಾಹಿ ದೇಶಗಳಲ್ಲಿ ಸಾಧಿಸಲಾಗಿದೆ; ಆಮೇಲೆ ಅಂಚೆ ವ್ಯವಸ್ಥೆ, ರೈಲ್ವೇಗಳು, ವಿಶಾಲ ಪ್ರಮಾಣದ ವಾಣಿಜ್ಯ, ಬ್ಯಾಂಕ್ ವ್ಯವಸ್ಥೆ ಇತ್ಯಾದಿ ಇತ್ಯಾದಿಗಳ ಭಾರಿ ಸಂಕೀರ್ಣ ಹಾಗೂ ಸಮಾಜೀಕೃತ ಸಾಧನವು ಒದಗಿಸುತ್ತಿರುವ ಲಕ್ಷಾಂತರ ಕಾರ್ಮಿಕರ "ತರಬೇತು ಹಾಗೂ ಶಿಸ್ತು."

ಈ ಆರ್ಥಿಕ ಪೂರ್ವಾವಶ್ಯಕತೆಗಳಿದ್ದಲ್ಲಿ, ಬಂಡವಾಳಶಾಹಿಗಳನ್ನೂ ಅಧಿಕಾರಶಾಹಿಗಳನ್ನೂ ಉರುಳಿಸಿದನಂತರ ತಕ್ಷಣವೇ, ರಾತ್ರೋರಾತ್ರಿ, ಉತ್ಪಾದನೆ ಹಾಗೂ ವಿತರಣೆಯ ಮೇಲೆ ನಿಯಂತ್ರಣದಲ್ಲಿ, ಶ್ರಮ ಹಾಗೂ ಉತ್ಪನ್ನಗಳ ಲೆಕ್ಕ ಇಡುವ ಕಾರ್ಯದಲ್ಲಿ, ಅವರ ಸ್ಥಳದಲ್ಲಿ ಸಶಸ್ತ್ರ ಕಾರ್ಮಿಕರನ್ನು, ಇಡೀ ಸಶಸ್ತ್ರ ಜನತೆಯನ್ನು ಸ್ಥಾಪಿಸುವುದಕ್ಕೆ ಮುಂದುವರಿಯಲು ಸಂಪೂರ್ಣವಾಗಿ ಸಾಧ್ಯವಾಗುತ್ತದೆ (ನಿಯಂತ್ರಣ

ಹಾಗೂ ಲೆಕ್ಕ ಇಡುವ ಪ್ರಶ್ನೆಯನ್ನು ಎಂಜಿನಿಯರುಗಳು, ಅರ್ಥಶಾಸ್ತ್ರಜ್ಞರು ಮುಂತಾದ ವೈಜ್ಞಾನಿಕವಾಗಿ ತರಬೇತುಗೊಂಡ ನೌಕರರ ಪ್ರಶ್ನೆಯೊಂದಿಗೆ ಗೊಂದಲ ಗೊಳಿಸಬಾರದು. ಈ ನೌಕರರು ಇಂದು ಬಂಡವಾಳಶಾಹಿಗಳ ಇಚ್ಛೆಗೆ ವಿಧೇಯರಾಗಿ ಕೆಲಸ ಮಾಡುತ್ತಿದ್ದಾರೆ ಮತ್ತು ನಾಳೆ ಸಶಸ್ತ್ರ ಕಾರ್ಮಿಕರ ಇಚ್ಛೆಗೆ ವಿಧೇಯರಾಗಿ ಇನ್ನೂ ಹೆಚ್ಚು ಉತ್ತಮವಾಗಿ ಕೆಲಸ ಮಾಡುವರು).

ಲೆಕ್ಕ ಇಡುವುದು ಮತ್ತು ನಿಯಂತ್ರಣ – ಇದೇ ಕಮ್ಯೂನಿಸ್ಟ್ ಸಮಾಜದ ಮೊದಲ ಮಜಲಿನ "ಸರಾಗ ಕ್ರಿಯೆಗೆ," ಸೂಕ್ತ ಕಾರ್ಯಾಚರಣೆಗೆ ಮುಖ್ಯವಾಗಿ ಅವಶ್ಯವಾದುದು. ಎಲ್ಲ ಪ್ರಜೆಗಳೂ ಸಶಸ್ತ್ರ ಕಾರ್ಮಿಕರಿಂದ ಏರ್ಪಟ್ಟ ರಾಜ್ಯದ ಬಾಡಿಗೆ ನೌಕರರಾಗಿ ಮಾರ್ಪಡುತ್ತಾರೆ. ಎಲ್ಲ ಪ್ರಜೆಗಳೂ ಏಕೈಕ ದೇಶವ್ಯಾಪಿ ರಾಜ್ಯ "ಸಿಂಡಿಕೇಟ್"ನ ನೌಕರರಾಗುತ್ತಾರೆ, ಕಾರ್ಮಿಕರಾಗುತ್ತಾರೆ. ಅವರಿಂದ ಅಪೇಕ್ಷಿಸಲಾಗು ವುದೆಲ್ಲ, ಅವರು ಸಮಾನವಾಗಿ ಕೆಲಸ ಮಾಡಬೇಕು, ತಮ್ಮ ಪಾಲಿನ ಕಾರ್ಯವನ್ನು ಸೂಕ್ತವಾಗಿ ನೆರವೇರಿಸಬೇಕು ಮತ್ತು ಸಮಾನ ವೇತನ ಪಡೆಯಬೇಕು, ಎಂಬುದಷ್ಟೆ. ಇದಕ್ಕೆ ಅವಶ್ಯವಾದ ಲೆಕ್ಕ ಇಡುವಿಕೆ ಹಾಗೂ ನಿಯಂತ್ರಣ ಕಾರ್ಯಗಳನ್ನು ಬಂಡ ವಾಳವಾದ ವ್ಯವಸ್ಥೆಯೇ ಅತ್ಯಂತವಾಗಿ ಸರಳಗೊಳಿಸಿರುತ್ತದೆ. ಅವನ್ನು ಅತ್ಯಸಾಧಾ ರಣವಾಗಿ ಸರಳವಾದ ಕಾರ್ಯಾಚರಣೆಗಳಿಗೆ – ಮೇಲ್ವಿಚಾರಣೆ ನಡೆಸುವ, ದಾಖಲು ಮಾಡುವ, ಅಂಕಗಣಿತದ ನಾಲ್ಕು ಕ್ರಿಯೆಗಳನ್ನು ಅನ್ವಯಿಸುವ ಹಾಗೂ ಸೂಕ್ತ ರಸೀತಿ ಗಳನ್ನು ನೀಡುವ ಕಾರ್ಯಾಚರಣೆಗಳಿಗೆ * – ಇಳಿಸಿರುತ್ತದೆ. ಇವನ್ನು ಯಾವುದೇ ಸಾಕ್ಷರಸ್ಥ ವ್ಯಕ್ತಿಯೂ ನೆರವೇರಿಸಬಲ್ಲವನಾಗಿರುತ್ತಾನೆ.

ಜನತೆಯ ಬಹುಮತವು ಸ್ವತಂತ್ರವಾಗಿಯೂ ಮತ್ತು ಎಲ್ಲೆಲ್ಲೂ ಅಂಥ ಲೆಕ್ಕ ವನ್ನಿಡಲು ಮತ್ತು ಬಂಡವಾಳಶಾಹಿಗಳ (ಈಗ ನೌಕರರಾಗಿ ಪರಿವರ್ತಿತರಾದವರ) ಮೇಲೂ ಬಂಡವಾಳಶಾಹಿ ಅಭ್ಯಾಸಗಳನ್ನು ಉಳಿಸಿಕೊಂಡಿರುವ ಬುದ್ಧಿಜೀವಿಗಳ ಮೇಲೂ ಅಂಥ ನಿಯಂತ್ರಣವಿರಿಸಲು ಪ್ರಾರಂಭಿಸಿದಾಗ, ಈ ನಿಯಂತ್ರಣವು ನಿಜಕ್ಕೂ ಸಾರ್ವತ್ರಿಕವಾಗುವುದು, ಸಾಮಾನ್ಯವಾಗುವುದು, ಸಾರ್ವಜನಿಕವಾಗುವುದು; ಅದ ರಿಂದ ತಪ್ಪಿಸಿಕೊಂಡು ಹೋಗಲು ಆಗುವುದಿಲ್ಲ, "ಅದರಿಂದ ದೂರ ಸರಿಯಲು ಯಾವುದೇ ಮಾರ್ಗ ಇರುವುದಿಲ್ಲ."

---

* ರಾಜ್ಯದ ಹೆಚ್ಚು ಮುಖ್ಯವಾದ ಕ್ರಿಯೆಗಳನ್ನು ಕಾರ್ಮಿಕರೇ ಸ್ವತಃ ಲೆಕ್ಕ ಇಡುವ ಹಾಗೂ ನಿಯಂತ್ರಿಸುವ ಇಂಥ ಸ್ಥಿತಿಗೆ ತಂದಾಗ, ಅದು "ರಾಜಕೀಯ ರಾಜ್ಯ" ವಾಗಿರುವುದು ನಿಂತು ಹೋಗುತ್ತದೆ, "ಸಾರ್ವಜನಿಕ ಕ್ರಿಯೆಗಳು ತಮ್ಮ ರಾಜಕೀಯ ಲಕ್ಷಣಗಳನ್ನು ಕಳೆದುಕೊಂಡು ಕೇವಲ ಆಡಳಿತ ಕ್ರಿಯೆಗಳಾಗುತ್ತವೆ" (ಮೇಲೆ ನಾಲ್ಕನೇ ಅಧ್ಯಾಯ, 2ನೇ ವಿಭಾಗ, 'ಅರಾಜಕತಾವಾದಿಗಳೊಂದಿಗೆ ಎಂಗೆಲ್ಸ್‌ರ ವಿವಾದ,' ನೋಡಿ).

ಇಡೀ ಸಮಾಜವು ಸಮಾನ ಶ್ರಮ ಹಾಗೂ ಸಮಾನ ವೇತನದೊಂದಿಗೆ ಒಂದೇ ಕಾರ್ಯಾಲಯ ಹಾಗೂ ಒಂದೇ ಕಾರ್ಖಾನೆಯಾಗಿ ಪರಿಣಮಿಸುವುದು.

ಆದರೆ ಬಂಡವಾಳಶಾಹಿಗಳನ್ನು ಪರಾಜಯಗೊಳಿಸಿದನಂತರ, ಶೋಷಕರನ್ನು ಉರುಳಿಸಿದನಂತರ ಶ್ರಮಜೀವಿ ವರ್ಗವು ಇಡೀ ಸಮಾಜಕ್ಕೆ ವಿಸ್ತರಿಸಲಿರುವ ಈ "ಕಾರ್ಖಾನೆ" ಶಿಸ್ತೇ ನಮ್ಮ ಆದರ್ಶವಲ್ಲ, ನಮ್ಮ ಅಂತಿಮ ಗುರಿಯಲ್ಲ. ಬಂಡವಾಳಶಾಹಿ ಶೋಷಣೆಯ ಯಾವುದೇ ಹೇಯ ಕೃತ್ಯಗಳೂ ನೀಚ ಪದ್ಧತಿಗಳೂ ಇಲ್ಲದಂತೆ ಸಮಾಜವನ್ನು ಚೆನ್ನಾಗಿ ಶುದ್ಧಗೊಳಿಸಲು ಮತ್ತು ಮತ್ತಷ್ಟು ಪ್ರಗತಿ ಸಾಧಿಸಲು ಅವಶ್ಯವಾದ ಹೆಜ್ಜೆಯಷ್ಟೆ ಇದು.

ಸಮಾಜದ ಎಲ್ಲ ಸದಸ್ಯರೂ, ಅಥವಾ ಕೊನೆಯ ಪಕ್ಷ ವಿಶಾಲ ಬಹುಮತದವರು ರಾಜ್ಯವನ್ನು ತಾವೇ ನಿರ್ವಹಿಸುವುದನ್ನು ಕಲಿತ, ಈ ಕಾರ್ಯವನ್ನು ತಮ್ಮ ಕೈಗೇ ತೆಗೆದುಕೊಂಡ, ನಿಕೃಷ್ಟ ಬಂಡವಾಳಶಾಹಿ ಅಲ್ಪಮತದವರ ಮೇಲೆ ಬಂಡವಾಳಶಾಹಿ ಅಭ್ಯಾಸಗಳನ್ನು ಉಳಿಸಿಕೊಂಡು ಬರಲು ಬಯಸುವ ಕುಲೀನರ ಮೇಲೆ ಮತ್ತು ಬಂಡವಾಳವಾದದಿಂದ ಸಂಪೂರ್ಣವಾಗಿ ಭ್ರಷ್ಟಗೊಂಡ ಕಾರ್ಮಿಕರ ಮೇಲೆ ಸಂಘಟಿತ ನಿಯಂತ್ರಣ ಏರ್ಪಡಿಸಿಕೊಂಡ, ಘಳಿಗೆಯಿಂದ – ಈ ಘಳಿಗೆಯಿಂದ ಯಾವುದೇ ರೀತಿಯ ಸರಕಾರದ ಆವಶ್ಯಕತೆಯೂ ಪೂರ್ತಿಯಾಗಿ ಕಣ್ಮರೆಯಾಗತೊಡಗುತ್ತದೆ. ಪ್ರಜಾಪ್ರಭುತ್ವವು ಎಷ್ಟು ಹೆಚ್ಚು ಪೂರ್ಣವಾಗಿದ್ದಷ್ಟೂ ಅದು ಅನವಶ್ಯವಾಗುವ ಘಳಿಗೆಯು ಅಷ್ಟೂ ಹತ್ತಿರವಾಗುತ್ತದೆ. ಸಶಸ್ತ್ರ ಕಾರ್ಮಿಕರಿಂದ ಏರ್ಪಟ್ಟ ಹಾಗೂ "ಸರಿಯಾದ ಅರ್ಥದಲ್ಲಿ ಎಷ್ಟು ಮಾತ್ರವೂ ರಾಜ್ಯವಾಗಿರದ" "ರಾಜ್ಯ"ವು ಎಷ್ಟು ಹೆಚ್ಚು ಪ್ರಜಾಸತ್ತಾತ್ಮಕವಾದರೆ ರಾಜ್ಯದ ಪ್ರತಿಯೊಂದು ರೂಪವೂ ಅಷ್ಟೂ ಶೀಘ್ರವಾಗಿ ಕ್ಷಯಿಸಿಹೋಗತೊಡಗುತ್ತದೆ.

ಏಕೆಂದರೆ, ಎಲ್ಲರೂ ಸಾಮಾಜಿಕ ಉತ್ಪಾದನೆಯನ್ನು ನಿರ್ವಹಿಸುವುದನ್ನು ಕಲಿತಾಗ ಮತ್ತು ವಾಸ್ತವವಾಗಿ ಸ್ವತಂತ್ರವಾಗಿ ನಿರ್ವಹಿಸತೊಡಗಿದಾಗ, ಸ್ವತಂತ್ರವಾಗಿ ಲೆಕ್ಕ ಇಟ್ಟುಕೊಂಡು ಪರೋಪಜೀವಿಗಳ ಮೇಲೆ, ಶ್ರೀಮಂತರ ಮಕ್ಕಳ ಮೇಲೆ, ವಂಚಕರ ಹಾಗೂ ಇತರ "ಬಂಡವಾಳಶಾಹಿ ಪರಂಪರೆಗಳ ಸಂರಕ್ಷಕರ" ಮೇಲೆ ನಿಯಂತ್ರಣ ಇರಿಸತೊಡಗಿದಾಗ ಈ ರೀತಿಯ ಲೆಕ್ಕ ಇಡುವಿಕೆ ಹಾಗೂ ನಿಯಂತ್ರಣದಿಂದ ತಪ್ಪಿಸಿಕೊಳ್ಳುವುದು ಅನಿವಾರ್ಯವಾಗಿಯೇ ಎಷ್ಟು ನಂಬಲಾಗದಷ್ಟು ಕಷ್ಟವಾಗುವುದೆಂದರೆ, ಎಷ್ಟು ಅಪರೂಪದ ಅಪವಾದವಾಗುವುದೆಂದರೆ, ಬಹುಶಃ ಎಷ್ಟು ತ್ವರಿತ ಹಾಗೂ ಉಗ್ರ ಶಿಕ್ಷೆಗೆ ಒಳಗಾಗುವುದೆಂದರೆ (ಏಕೆಂದರೆ ಸಶಸ್ತ್ರ ಕಾರ್ಮಿಕರು ವ್ಯಾವಹಾರಿಕ ಜನರಾಗಿರುತ್ತಾರೆ, ಅತಿಭಾವುಕತೆಯ ಬುದ್ಧಿಜೀವಿಗಳಾಗಿರುವುದಿಲ್ಲ, ಯಾರೇ ಆಗಲಿ ತಮ್ಮೊಂದಿಗೆ ಲಘುವಾಗಿ ವರ್ತಿಸುವುದಕ್ಕೆ ಅವರು ಸ್ವಲ್ಪವೂ ಆಸ್ಪದ ಕೊಡುವುದಿಲ್ಲ), ಸಮುದಾಯದ ಸರಳ ಹಾಗೂ ಮೂಲಭೂತ ನಿಯಮಗಳನ್ನು ಪಾಲಿಸುವ ಆವಶ್ಯಕತೆಯು ಬಹು ಬೇಗನೆಯೇ ಒಂದು ಅಭ್ಯಾಸವಾಗಿ ಬಿಡುವುದು.

ಅನಂತರ ಕಮ್ಯೂನಿಸ್ಟ್ ಸಮಾಜದ ಮೊದಲ ಮಜಲಿನಿಂದ ಅದರ ಉನ್ನತ ಮಜಲಿಗೆ ಪರಿವರ್ತನೆಗೊಳ್ಳುವುದಕ್ಕೆ ಮತ್ತು ಅದರೊಂದಿಗೇ ರಾಜ್ಯವು ಸಂಪೂರ್ಣವಾಗಿ ಕ್ಷಯಿಸಿಹೋಗುವುದಕ್ಕೆ, ಬಾಗಿಲು ವಿಶಾಲವಾಗಿ ತೆರೆಯುವುದು.

ಅಧ್ಯಾಯ VI

# ಸಂದರ್ಭಸಾಧಕವಾದಿಗಳಿಂದ ಮಾರ್ಕ್ಸ್‌ವಾದದ ಪ್ರಾಕೃತೀಕರಣ

ದ್ವಿತೀಯ ಇಂಟರ್‌ನ್ಯಾಷನಲ್(1889-1914)ನ ಪ್ರಮುಖ ವಿಚಾರಧಾರಾವಾದಿಗಳೂ ಪತ್ರಿಕಾ ಲೇಖಕರೂ ಸಾಮಾಜಿಕ ಕ್ರಾಂತಿಯೊಂದಿಗೆ ರಾಜ್ಯದ ಸಂಬಂಧ ಹಾಗೂ ರಾಜ್ಯದೊಂದಿಗೆ ಸಾಮಾಜಿಕ ಕ್ರಾಂತಿಯ ಸಂಬಂಧ ಈ ಪ್ರಶ್ನೆಯ ಕಡೆಗೆ, ಒಟ್ಟಿನ ಮೇಲೆ ಕ್ರಾಂತಿಯ ಪ್ರಶ್ನೆಯ ಕಡೆಗೇ, ಅತ್ಯಲ್ಪ ಗಮನ ನೀಡಿದರು. ಆದರೆ 1914ರಲ್ಲಿ ದ್ವಿತೀಯ ಇಂಟರ್‌ನ್ಯಾಷನಲ್‌ನ ಪತನಕ್ಕೆ ದಾರಿ ಮಾಡಿಕೊಟ್ಟ ಸಂದರ್ಭಸಾಧಕವಾದದ ಕ್ರಮೇಣ ಬೆಳವಣಿಗೆಯ ಪ್ರಕ್ರಿಯೆಗೆ ಸಂಬಂಧಿಸಿದ ಅತ್ಯಂತ ವೈಶಿಷ್ಟ್ಯಪೂರ್ಣ ವಿಷಯವೆಂದರೆ, ಈ ಜನರ ಮುಂದೆ ಪ್ರಶ್ನೆಯು ಸ್ಪಷ್ಟವಾಗಿ ಎದ್ದು ನಿಂತಾಗಲೂ ಅವರು ಅದನ್ನು ತಪ್ಪಿಸಲು ಯತ್ನಿಸಿದರು ಅಥವಾ ಉಪೇಕ್ಷಿಸಿದರು ಎಂಬುದಾಗಿದೆ.

ಒಟ್ಟಿನಲ್ಲಿ ರಾಜ್ಯದ ಬಗೆಗೆ ಶ್ರಮಜೀವಿ ವರ್ಗ ಕ್ರಾಂತಿಯ ಸಂಬಂಧದ ಬಗೆಗೆ ಪ್ರಶ್ನೆಯನ್ನು ಹೀಗೆ ತಪ್ಪಿಸಲು ಯತ್ನಿಸುವುದು – ಸಂದರ್ಭಸಾಧಕವಾದಕ್ಕೆ ಲಾಭದಾಯಕವಾದ ಮತ್ತು ಅದಕ್ಕೆ ಪ್ರೋತ್ಸಾಹ ನೀಡಿದ ಈ ತಪ್ಪಿಸುವಿಕೆಯು – ಮಾರ್ಕ್ಸ್‌ವಾದವನ್ನು ವಿರೂಪಗೊಳಿಸುವುದಕ್ಕೆ ಮತ್ತು ಸಂಪೂರ್ಣವಾಗಿ ಪ್ರಾಕೃತಗೊಳಿಸುವುದಕ್ಕೆ ದಾರಿ ಮಾಡಿಕೊಟ್ಟಿತು.

ಈ ಶೋಚನೀಯವಾದ ಪ್ರಕ್ರಿಯೆಯನ್ನು ಸ್ಥೂಲವಾಗಿಯಾದರೂ ಗುಣನಿರ್ಣಯ ಮಾಡಲು ನಾವು ಮಾರ್ಕ್ಸ್‌ವಾದದ ಅತ್ಯಂತ ಪ್ರಮುಖ ತತ್ವಪ್ರತಿಪಾದಕರಾದ ಪ್ಲೆಹಾನೊವ್ ಹಾಗೂ ಕೌತ್‌ಸ್ಕಿಯವರನ್ನು ತೆಗೆದುಕೊಳ್ಳೋಣ.

## 1. ಅರಾಜಕತಾವಾದಿಗಳೊಂದಿಗೆ ಪ್ಲೆಹಾನೊವ್‌ರ ವಿವಾದ

ಪ್ಲೆಹಾನೊವ್‌ರು ಸಮಾಜವಾದದೊಂದಿಗೆ ಅರಾಜಕತಾವಾದದ ಸಂಬಂಧದ ಕುರಿತು 'ಅರಾಜಕತಾವಾದ ಹಾಗೂ ಸಮಾಜವಾದ' ಎಂಬ ಶೀರ್ಷಿಕೆಯ ಒಂದು

ವಿಶೇಷ ಕಿರುಹೊತ್ತಗೆಯನ್ನು ಬರೆದರು. ಇದನ್ನು 1894ರಲ್ಲಿ ಜರ್ಮನ್ ಭಾಷೆಯಲ್ಲಿ ಪ್ರಕಟಿಸಲಾಯಿತು.

ಈ ವಿಷಯವನ್ನು ಪರ್ಯಾಲೋಚಿಸುವಾಗ ಪ್ಲೆಹಾನೊವ್‌ರು ಅರಾಜಕತಾವಾದದ ವಿರುದ್ಧ ಹೋರಾಟದಲ್ಲಿ ಅತ್ಯಂತ ತುರ್ತಿನ, ತೀಕ್ಷ್ಣವಾದ ಹಾಗೂ ರಾಜಕೀಯವಾಗಿ ಅತ್ಯಗತ್ಯವಾದ ಪ್ರಶ್ನೆಯನ್ನೂ, ಅಂದರೆ ರಾಜ್ಯದೊಂದಿಗೆ ಕ್ರಾಂತಿಯ ಸಂಬಂಧದ ಮತ್ತು ಒಟ್ಟಿನಲ್ಲಿ ರಾಜ್ಯದ ಪ್ರಶ್ನೆಯನ್ನು, ಸಂಪೂರ್ಣವಾಗಿ ತಪ್ಪಿಸಲು ಯತ್ನಿಸಿದರು ! ಅವರ ಕಿರುಹೊತ್ತಗೆಯಲ್ಲಿ ಎರಡು ಪ್ರತ್ಯೇಕ ಭಾಗಗಳಿವೆ: ಒಂದು ಐತಿಹಾಸಿಕವಾದುದು ಮತ್ತು ಸಾಹಿತ್ಯಿಕವಾದುದು. ಷ್ಟಿರ್‌ನೆರ್, ಪ್ರುದೋನ್ ಮತ್ತಿತರ ಭಾವನೆಗಳ ಇತಿಹಾಸದ ಬಗೆಗೆ ಅಮೂಲ್ಯ ಸಾಮಗ್ರಿಯನ್ನು ಇದು ಒಳಗೊಂಡಿದೆ; ಇನ್ನೊಂದು ಸಂಕುಚಿತಮತಿಯದು, ಅರಾಜಕತಾವಾದಿಯನ್ನು ಡಕಾಯತನಿಂದ ಪ್ರತ್ಯೇಕಿಸಿ ತೋರಿಸುವುದು ಸಾಧ್ಯವಿಲ್ಲ ಎಂಬ ವಿಷಯದ ಬಗೆಗೆ ಒಡ್ಡೊಡ್ಡಾದ ವ್ಯಾಖ್ಯಾನವನ್ನು ಒಳಗೊಂಡಿದೆ.

ಇದು ಅತ್ಯಂತ ವಿನೋದಕರವಾದ ವಿಷಯಗಳ ಜೋಡಣೆಯಾಗಿದೆ, ರಷ್ಯದಲ್ಲಿ ಕ್ರಾಂತಿಯ ಮುನ್ನ ಮತ್ತು ಕ್ರಾಂತಿಯ ಕಾಲದಲ್ಲಿ ಪ್ಲೆಹಾನೊವ್‌ರ ಇಡೀ ಚಟುವಟಿಕೆಯ ವಿಲಕ್ಷಣತೆಗೆ ಅತ್ಯಂತ ಸ್ಪಷ್ಟ ಸೂಚಿಯಾಗಿದೆ. ವಾಸ್ತವವಾಗಿ 1905ರಿಂದ 1917ರ ಒಳಗಿನ ವರ್ಷಗಳಲ್ಲಿ ಪ್ಲೆಹಾನೊವ್‌ರು ಅರೆ ಶುಷ್ಕ ತಾತ್ವಿಕರಾಗಿ ಹಾಗೂ ಅರೆ ಸಂಕುಚಿತಮತಿಯಾಗಿ, ರಾಜಕಾರಣದಲ್ಲಿ ಬೂರ್ಷ್ವಾಸೀಯು ಬೆಳಗಿದ ಮಾರ್ಗಾನುಗಾಮಿಗಳಾಗಿ ತೋರ್ಪಡಿಸಿಕೊಂಡರು.

ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ರಾಜ್ಯದೊಂದಿಗೆ ಕ್ರಾಂತಿಯ ಸಂಬಂಧದ ಬಗೆಗೆ ತಮ್ಮ ಅಭಿಪ್ರಾಯಗಳನ್ನು, ಅರಾಜಕತಾವಾದಿಗಳೊಂದಿಗೆ ನಡೆಸಿದ ವಿವಾದದಲ್ಲಿ ಹೇಗೆ ಅತ್ಯಂತ ಕೂಲಂಕಷವಾಗಿ ವಿವರಿಸಿದರೆಂಬುದನ್ನು ನಾವು ಕಂಡಿದ್ದೇವೆ. 1891ರಲ್ಲಿ ಮಾರ್ಕ್ಸ್‌ರವರ 'ಗೋಥಾ ಕಾರ್ಯಕ್ರಮದ ಟೀಕೆ'ಗೆ ಬರೆದ ಮುನ್ನುಡಿಯಲ್ಲಿ ಎಂಗೆಲ್ಸ್‌ರವರು, "ನಾವು" – ಅಂದರೆ ಎಂಗೆಲ್ಸ್ ಮತ್ತು ಮಾರ್ಕ್ಸ್ – "ಆ ಕಾಲದಲ್ಲಿ, (ಪ್ರಥಮ) ಇಂಟರ್‌ನ್ಯಾಷನಲ್‌ನ ಹೇಗ್ ಮಹಾಧಿವೇಶನದನಂತರ ಇನ್ನೂ ಎರಡು ವರ್ಷಗಳೂ ಆಗಿರದಿದ್ದಾಗ, ಬಕೂನಿನ್‌ರ ವಿರುದ್ಧವೂ ಅವರ ಅರಾಜಕತಾವಾದಿಗಳ ವಿರುದ್ಧವೂ ಅತ್ಯಂತ ಉಗ್ರ ಹೋರಾಟದಲ್ಲಿ ತೊಡಗಿದ್ದೆವು" ಎಂದು ಬರೆದರು.[96]

ಅರಾಜಕತಾವಾದಿಗಳು ಪ್ಯಾರಿಸ್ ಕಮ್ಯೂನ್‌ಅನ್ನು ತಮ್ಮ "ಸ್ವಂತ"ದ್ದನ್ನಾಗಿ, ಅಂದರೆ ತಮ್ಮ ಸಿದ್ಧಾಂತಕ್ಕೆ ಸಮರ್ಥನೆ ಎನ್ನುವಂತೆ, ಹಕ್ಕು ಪ್ರತಿಪಾದಿಸಲು ಯತ್ನಿಸಿದ್ದರು; ಅವರು ಅದರ ಪಾಠಗಳನ್ನೂ ಈ ಪಾಠಗಳಿಗೆ ಸಂಬಂಧಿಸಿ ಮಾರ್ಕ್ಸ್‌ರವರ ವಿಶ್ಲೇಷಣೆಯನ್ನೂ ಸಂಪೂರ್ಣವಾಗಿ ತಪ್ಪಾಗಿ ಅರ್ಥಮಾಡಿಕೊಂಡಿದ್ದರು. ಅರಾಜಕತಾವಾದವು ನಿರ್ದಿಷ್ಟ ರಾಜಕೀಯ ಪ್ರಶ್ನೆಗಳಿಗೆ – ಹಳೆಯ ರಾಜ್ಯಯಂತ್ರವನ್ನು

ತೊಡೆದು ಹಾಕಬೇಕೆ? ಮತ್ತೆ ಅದರ ಜಾಗದಲ್ಲಿ ಯಾವುದನ್ನು ಇರಿಸಬೇಕು? ಎಂಬ ಪ್ರಶ್ನೆಗಳಿಗೆ – ಯಾವ ಉತ್ತರವನ್ನೂ, ಸರಿಸುಮಾರು ನಿಜವಾದ ಉತ್ತರಗಳನ್ನಾದರೂ, ನೀಡಿಲ್ಲ.

ಆದರೆ, ರಾಜ್ಯದ ಪ್ರಶ್ನೆಗೆ ಉತ್ತರ ನೀಡದೆ ಸಂಪೂರ್ಣವಾಗಿ ನುಣುಚಿಕೊಂಡು, ಕಮ್ಯೂನ್‌ನ ಮುನ್ನ ಮತ್ತು ಆನಂತರ ಮಾರ್ಕ್ಸ್‌ವಾದದ ಇಡೀ ಬೆಳವಣಿಗೆಯನ್ನು ಉಪೇಕ್ಷಿಸಿ, "ಅರಾಜಕತಾವಾದ ಹಾಗೂ ಸಮಾಜವಾದ"ದ ಬಗೆಗೆ ಮಾತನಾಡುವುದು, ಸಂದರ್ಭಸಾಧಕವಾದಕ್ಕೆ ಅನಿವಾರ್ಯವಾಗಿಯೇ ಜಾರಿ ಹೋದ ಅರ್ಥ ನೀಡುತ್ತದೆ. ಏಕೆಂದರೆ ಸಂದರ್ಭಸಾಧಕವಾದಕ್ಕೆ ತುಂಬ ಹೆಚ್ಚಾಗಿ ಬೇಕಾದುದೆಲ್ಲ, ಇದೇ ತಾನೆ ಮೇಲೆ ನಮೂದಿಸಿದ ಎರಡು ಪ್ರಶ್ನೆಗಳನ್ನೂ ಎತ್ತಲೇ ಬಾರದು ಎಂಬುದೇ ಆಗಿದೆ. ಅವುಗಳನ್ನು ಎತ್ತದಿರುವುದೇ, ಅದೇ, ಸಂದರ್ಭಸಾಧಕವಾದಕ್ಕೆ ಒಂದು ವಿಜಯ.

## 2. ಸಂದರ್ಭಸಾಧಕವಾದಿಗಳೊಂದಿಗೆ ಕೌತ್‌ಸ್ಕಿಯವರ ವಿವಾದ

ಕೌತ್‌ಸ್ಕಿಯವರ ಅತ್ಯಂತ ಹೆಚ್ಚಿನ ಕೃತಿಗಳು ಬೇರಾವ ಭಾಷೆಗಿಂತ ಹೆಚ್ಚಾಗಿ ರಷ್ಯನ್ ಭಾಷೆಗೆ ಅನುವಾದಿತವಾಗಿವೆ ಎಂಬುದರಲ್ಲಿ ಸಂದೇಹವಿಲ್ಲ. ಕೌತ್‌ಸ್ಕಿಯವರ ಕೃತಿಗಳನ್ನು ಜರ್ಮನಿಗಿಂತ ರಷ್ಯದಲ್ಲೇ ಹೆಚ್ಚಾಗಿ ಓದಲಾಗುತ್ತಿರುವುದು ಎಂದು ಕೆಲವು ಜರ್ಮನ್ ಸೋಷಲ್ ಡೆಮೊಕ್ರಾಟರು ತಮಾಷೆ ಮಾಡುವುದರಲ್ಲಿ ಕಾರಣವಿಲ್ಲದಿಲ್ಲ (ಈ ತಮಾಷೆಯ ಮಾತಿನ ಹಿಂದೆ, ಆ ಮಾತನ್ನು ಆಡಿದವರು ಕಲ್ಪಿಸಿದ್ದುದಕ್ಕಿಂತ ಹೆಚ್ಚು ಆಳವಾದ ಚಾರಿತ್ರಿಕ ಅರ್ಥ ಇದೆ ಎಂಬುದನ್ನು ನಾವಿಲ್ಲಿ ಆವರಣದಲ್ಲಿ ಹೇಳಬೇಕಾಗಿದೆ. ರಷ್ಯನ್ ಕಾರ್ಮಿಕರು 1905ರಲ್ಲಿ ಜಗತ್ತಿನಲ್ಲೇ ಅತ್ಯುತ್ತಮವಾದ ಸೋಷಲ್ ಡೆಮೊಕ್ರಾಟಿಕ್ ಸಾಹಿತ್ಯದ ಅತ್ಯುತ್ತಮ ಕೃತಿಗಳಿಗಾಗಿ ಅಸಾಮಾನ್ಯವಾಗಿ ಹೆಚ್ಚಾದ ಅಭೂತಪೂರ್ವವಾದ ಕೇಳಿಕೆಯನ್ನು ಸಲ್ಲಿಸಿ, ಬೇರೆ ದೇಶಗಳಲ್ಲಿ ಕೇಳರಿಯದಷ್ಟು ಪರಿಮಾಣಗಳಲ್ಲಿ ಈ ಕೃತಿಗಳ ಭಾಷಾಂತರಗಳನ್ನೂ ಆವೃತ್ತಿಗಳನ್ನೂ ತರಿಸಿಕೊಂಡು, ನೆರೆಯ ಹೆಚ್ಚು ಮುಂದುವರಿದ ದೇಶದ ಅಪಾರ ಅನುಭವವನ್ನು ನಮ್ಮ ಶ್ರಮಜೀವಿ ವರ್ಗ ಚಳವಳಿಯ ಎಳೆಯ ನೆಲದಲ್ಲಿ ಶೀಘ್ರವಾಗಿ ನೆಲೆಗೊಳಿಸಿದರೆಂದು ಹೇಳಬಹುದು).

ಕೌತ್‌ಸ್ಕಿಯವರು ಮಾರ್ಕ್ಸ್‌ವಾದವನ್ನು ಸರಳ ಭಾಷೆಯಲ್ಲಿ ವಿವರಿಸಿದರೆಂದಷ್ಟೆ ಅಲ್ಲ, ಬೆರ್ನ್‌ಷ್ಟೈನ್‌ರ ನಾಯಕತ್ವದ ಸಂದರ್ಭಸಾಧಕವಾದಿಗಳೊಂದಿಗೆ ನಡೆಸಿದ ವಿವಾದದಿಂದಾಗಿಯೂ ನಮ್ಮ ದೇಶದಲ್ಲಿ ವಿಶೇಷವಾಗಿ ಶೃತನಾಮರಾಗಿದ್ದಾರೆ. ಆದರೆ ಒಂದು ಅಂಶವು ಕೆಲವರಿಗಷ್ಟೆ ತಿಳಿದಿದೆ. 1914-1915ರ ಭಾರಿ ಮುಗ್ಗಟ್ಟಿನ ಸಮಯದಲ್ಲಿ ಕೌತ್‌ಸ್ಕಿಯವರು ಹೇಗೆ ಸಾಮಾಜಿಕ ಸ್ವದೇಶ ಮೂಢಾಭಿಮಾನವನ್ನು

ಸಮರ್ಥಿಸುವ ನಂಬಲಾಗದಂಥ ಅವಮಾನಕರವಾದ ಗೊಂದಲದ ಕೊಚ್ಚೆ ಗುಂಡಿಯೊಳಕ್ಕೆ ಮಾರ್ಗ ತಪ್ಪಿಹೋದರು ಎಂಬುದನ್ನು ನಾವು ಪರಿಶೀಲಿಸಬೇಕೆಂದು ನಿರ್ಧರಿಸಿದರೆ ಈ ಅಂಶವನ್ನು ಉಪೇಕ್ಷಿಸಲಾಗದು. ಈ ಅಂಶವು ಕೆಳಗಿನಂತಿದೆ: ಸಂದರ್ಭಸಾಧಕವಾದದ ಅತ್ಯಂತ ಪ್ರಮುಖ ಪ್ರತಿನಿಧಿಗಳಾಗಿದ್ದ ಫ್ರಾನ್ಸಿನ ಮಿಲ್ಲೆರಾನ್ ಹಾಗೂ ಜೊರೇಸ್ ಮತ್ತು ಜರ್ಮನಿಯ ಬೆರ್ನ್‌ಷ್ಟೈನ್‌ರ ವಿರುದ್ಧ ಹೋರಾಟ ಹೂಡುವುದಕ್ಕೆ ಮುನ್ನ ಕೌತ್‌ಸ್ಕಿಯವರು ತುಂಬ ಗಣನೀಯವಾದಷ್ಟು ಡೋಲಾಯಮಾನವನ್ನು ತೋರಿದರು. 1901-1902ರಲ್ಲಿ ಷ್ಟುಟ್‌ಗರ್ಟ್‌ನಲ್ಲಿ ಪ್ರಕಟವಾಗುತ್ತಿದ್ದ, ಕ್ರಾಂತಿಕಾರಿ ಶ್ರಮಜೀವಿ ವರ್ಗದ ಅಭಿಪ್ರಾಯಗಳನ್ನು ಪ್ರತಿಪಾದಿಸುತ್ತಿದ್ದ ಮಾರ್ಕ್ಸ್‌ವಾದಿ 'ಸರ್ಯಾ' ಪತ್ರಿಕೆಯು[97] ಕೌತ್‌ಸ್ಕಿಯವರೊಂದಿಗೆ ವಿವಾದ ನಡೆಸುವ ಬಲಾತ್ಕಾರಕ್ಕೊಳಗಾಗಿ, 1900ರಲ್ಲಿ ಪ್ಯಾರಿಸ್‌ನಲ್ಲಿ ಅಂತರರಾಷ್ಟ್ರೀಯ ಸಮಾಜವಾದಿ ಮಹಾಧಿವೇಶನ[98]ದಲ್ಲಿ ಅವರು ಮುಂದಿಟ್ಟ, ಸಂದರ್ಭಸಾಧಕವಾದಿಗಳ ಕುರಿತಾದ, ರಾಜಿ ಮನೋಭಾವ ತೋರುವ ಅರೆಮನಸ್ಸಿನ ಜಾರಿಕೆಯ ನಿರ್ಣಯವನ್ನು "ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳುವ" ನಿರ್ಣಯವೆಂದು ವಿವರಿಸಿತು. ಬೆರ್ನ್‌ಷ್ಟೈನ್‌ರ ವಿರುದ್ಧ ಪ್ರತಿವಾದ ಪ್ರಾರಂಭಿಸುವ ಮುನ್ನವೂ ಕೌತ್‌ಸ್ಕಿಯವರು ಕಮ್ಮಿ ಏನೂ ಅನಿಶ್ಚಯತೆ ತೋರಲಿಲ್ಲವೆಂದು ಜರ್ಮನಿಯಲ್ಲಿ ಪ್ರಕಟವಾದ ಕೌತ್‌ಸ್ಕಿಯವರ ಪತ್ರಗಳೂ ತೋರಿಸುತ್ತವೆ.

ಆದರೆ ಅಗಣಿತವಾಗಿ ಹೆಚ್ಚಿನ ಮಹತ್ವದ ಸಂಗತಿಯೆಂದರೆ, ಸಂದರ್ಭಸಾಧಕವಾದಿಗಳೊಂದಿಗೆ ನಡೆಸಿದ ವಿವಾದದಲ್ಲೇ, ಪ್ರಶ್ನೆಯನ್ನು ನಿರೂಪಿಸಿ ಅದನ್ನು ಪರಿಶೀಲಿಸುವ ರೀತಿಯಲ್ಲೇ, ಅವರು ರಾಜ್ಯದ ಪ್ರಶ್ನೆಗೆ ಸಂಬಂಧಿಸಿಯೇ ಸಂದರ್ಭಸಾಧಕವಾದದತ್ತ ಕ್ರಮಬದ್ಧವಾಗಿ ದಿಕ್ಚ್ಯುತಿಗೊಂಡುದನ್ನು ಈಗ ನಾವು ಮಾರ್ಕ್ಸ್‌ವಾದಕ್ಕೆ ಕೌತ್‌ಸ್ಕಿಯವರ ಇತ್ತೀಚೆಗಿನ ದ್ರೋಹದ ಇತಿಹಾಸವನ್ನು ಅಧ್ಯಯನ ಮಾಡುವಾಗ, ಕಾಣಬಲ್ಲವಾಗಿದ್ದೇವೆ, ಎಂಬುದಾಗಿದೆ.

ಸಂದರ್ಭಸಾಧಕವಾದದ ವಿರುದ್ಧ ಕೌತ್‌ಸ್ಕಿಯವರ ಮೊದಲ ಮುಖ್ಯ ಕೃತಿ 'ಬೆರ್ನ್‌ಷ್ಟೈನ್ ಮತ್ತು ಸೋಷಲ್ ಡೆಮೊಕ್ರಾಟಿಕ್ ಕಾರ್ಯಕ್ರಮ'ವನ್ನು ತೆಗೆದುಕೊಳ್ಳೋಣ. ಕೌತ್‌ಸ್ಕಿಯವರು ಬೆರ್ನ್‌ಷ್ಟೈನ್‌ರ ವಾದವನ್ನು ವಿವರವಾಗಿ ತಪ್ಪೆಂದು ಸಾಧಿಸಿ ತೋರುತ್ತಾರೆ. ಆದರೆ ಇಲ್ಲಿದೆ ಒಂದು ವಿಶಿಷ್ಟವಾದ ಸಂಗತಿ.

ಬೆರ್ನ್‌ಷ್ಟೈನ್‌ರು ಹೆರೊಸ್ಟ್ರಾಟಿಯನ್ ಖ್ಯಾತಿಯ ತಮ್ಮ 'ಸಮಾಜವಾದದ ಪೂರ್ವಾಧಾರಗಳು' ಎಂಬ ಕೃತಿಯಲ್ಲಿ ಮಾರ್ಕ್ಸ್‌ವಾದದ ಮೇಲೆ "ಬ್ಲಾಂಕಿವಾದ"ದ ಆಪಾದನೆ ಹೊರಿಸುತ್ತಾರೆ (ಈ ಆಪಾದನೆಯನ್ನು ಅಂದಿನಿಂದ ಸಹಸ್ರಾರು ಬಾರಿ ರಷ್ಯದಲ್ಲಿ ಸಂದರ್ಭಸಾಧಕವಾದಿಗಳೂ ಉದಾರವಾದಿ ಬೂರ್ಷ್ವಾಸೀಯೂ ಕ್ರಾಂತಿಕಾರಿ ಮಾರ್ಕ್ಸ್‌ವಾದಿಗಳಾದ ಬೋಲ್ಷೆವಿಕರ ಮೇಲೆ ಪದೇಪದೇ ಹೊರಿಸಿದ್ದಾರೆ). ಈ ಸಂದರ್ಭದಲ್ಲಿ ಬೆರ್ನ್‌ಷ್ಟೈನ್‌ರು ವಿಶೇಷವಾಗಿ ಮಾರ್ಕ್ಸ್‌ರವರ 'ಫ್ರಾನ್ಸಿನಲ್ಲಿ ಅಂತ

19*

ಯುದ್ಧ' ಗ್ರಂಥವನ್ನು ಪರಿಶೀಲಿಸಿ, ಕಮ್ಯೂನ್‌ನ ಪಾಠಗಳ ಕುರಿತ ಮಾರ್ಕ್ಸ್‌ರವರ ಅಭಿಪ್ರಾಯಗಳೂ ಪ್ರುದೋನ್‌ರ ಅಭಿಪ್ರಾಯಗಳೂ ಒಂದೇ ಎಂದು ಸಾಬೀತು ಮಾಡಲು, ನಾವು ಮೇಲೆ ನೋಡಿರುವಂತೆ ಅಯಶಸ್ವಿಯಾಗಿ, ಯತ್ನಿಸುತ್ತಾರೆ. "ಕಾರ್ಮಿಕ ವರ್ಗವು, ಸಿದ್ಧವಾಗಿರುವ ರಾಜ್ಯಯಂತ್ರವನ್ನು ಸುಮ್ಮನೆ ತನ್ನ ಕೈಗೆ ತೆಗೆದುಕೊಂಡು ಅದನ್ನು ತನ್ನ ಸ್ವಂತ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳಲಾರದು" ಎಂದು ಮಾರ್ಕ್ಸ್‌ರವರು 'ಕಮ್ಯೂನಿಸ್ಟ್ ಪ್ರಣಾಳಿಕೆ'ಯ 1872ರ ಆವೃತ್ತಿಗೆ ಬರೆದ ಮುನ್ನುಡಿ[99]ಯಲ್ಲಿ ಒತ್ತಿತಿಳಿಸಿರುವ ತೀರ್ಮಾನದ ಕಡೆಗೆ ಬೆರ್ನ್‌ಷ್ಟೈನ್ ವಿಶೇಷ ಗಮನ ನೀಡುತ್ತಾರೆ.

ಈ ಹೇಳಿಕೆಯು ಬೆರ್ನ್‌ಷ್ಟೈನ್‌ರಿಗೆ ಎಷ್ಟು "ಇಷ್ಟವಾಯಿತೆಂ"ದರೆ ಅವರು ಇದನ್ನು ಕೊನೆಯ ಪಕ್ಷ ಮೂರು ಬಾರಿ ತಮ್ಮ ಪುಸ್ತಕದಲ್ಲಿ ಬಳಸಿದ್ದಾರೆ, ಆದರೆ ಅದನ್ನು ಅತ್ಯಂತ ವಿರೂಪಗೊಳಿಸಿ ಸಂದರ್ಭಸಾಧಕ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

ನಾವು ಕಂಡಂತೆ, ಮಾರ್ಕ್ಸ್‌ರವರು ಕಾರ್ಮಿಕ ವರ್ಗವು ಇಡೀ ರಾಜ್ಯಯಂತ್ರವನ್ನು ತೊಡೆದು ಹಾಕಬೇಕು, ಮುರಿಯಬೇಕು, ಚೂರುಚೂರು ಮಾಡಬೇಕು (Sprengung – ಆಸ್ಫೋಟನೆ – ಎಂಗೆಲ್ಸ್‌ರು ಬಳಸಿದ ಪದ) ಎಂದು ಅಭಿಪ್ರಾಯ ಪಟ್ಟಿದ್ದರು. ಆದರೆ ಬೆರ್ನ್‌ಷ್ಟೈನ್‌ರ ಪ್ರಕಾರ, ಮಾರ್ಕ್ಸ್‌ರವರು ಈ ಮಾತುಗಳನ್ನು ಹೇಳುವಾಗ ಕಾರ್ಮಿಕ ವರ್ಗಕ್ಕೆ ಅಧಿಕಾರವನ್ನು ವಶಪಡಿಸಿಕೊಳ್ಳುವಾಗ ಅತಿಕ್ರಾಂತಿಕಾರಿ ಉತ್ಸಾಹ ತೋರುವುದರ ವಿರುದ್ಧ ಎಚ್ಚರಿಕೆ ನೀಡಿದರೆಂದು ಕಂಡುಬರುತ್ತದೆ.

ಮಾರ್ಕ್ಸ್‌ರವರ ವಿಚಾರವನ್ನು ಇದಕ್ಕೂ ಹೆಚ್ಚು ಘೋರವಾಗಿ, ಹೆಚ್ಚು ಒರಟಾಗಿ ವಿರೂಪಗೊಳಿಸುವುದನ್ನು ಊಹಿಸುವುದೂ ಸಾಧ್ಯವಿಲ್ಲ.

ಹಾಗಾದರೆ ಕೌತ್ಸ್ಕಿಯವರು ಬೆರ್ನ್‌ಷ್ಟೈನ್‌ವಾದವನ್ನು ಅತ್ಯಂತ ವಿವರವಾಗಿ ಪರಾಮರ್ಶಿಸಿ ಅದನ್ನು ತಪ್ಪೆಂದು ಸಿದ್ಧಮಾಡಿಕೊಡುವುದರಲ್ಲಿ ಹೇಗೆ ಮುಂದುವರಿದಿದ್ದಾರೆ?

ಅವರು ಸಂದರ್ಭಸಾಧಕವಾದವು ಈ ವಿಷಯಕ್ಕೆ ಸಂಬಂಧಿಸಿ ಮಾರ್ಕ್ಸ್‌ವಾದವನ್ನು ಸಂಪೂರ್ಣವಾಗಿ ವಿರೂಪಗೊಳಿಸಿರುವುದನ್ನು ವಿಶ್ಲೇಷಿಸಲು ಹೋಗಿಲ್ಲ. ಅವರು ಮಾರ್ಕ್ಸ್‌ರವರ 'ಅಂತರ್ಯುದ್ಧ' ಎಂಬ ಕೃತಿಗೆ ಎಂಗೆಲ್ಸ್‌ರು ಬರೆದ ಮುನ್ನುಡಿಯಿಂದ ಮೇಲೆ ಉದ್ಧರಿಸಿದ ಭಾಗವನ್ನು ಉಲ್ಲೇಖಿಸಿ, ಮಾರ್ಕ್ಸ್‌ರವರ ಪ್ರಕಾರ ಕಾರ್ಮಿಕ ವರ್ಗವು ಸಿದ್ಧವಾಗಿರುವ ರಾಜ್ಯಯಂತ್ರವನ್ನು ಸುಮ್ಮನೆ ತನ್ನ ಕೈಗೆ ತೆಗೆದುಕೊಳ್ಳಲಾರದು, ಆದರೆ ಒಟ್ಟಿನಲ್ಲಿ ಹೇಳುವುದಾದರೆ, ತೆಗೆದುಕೊಳ್ಳಬಲ್ಲುದು, ಎಂದು ಹೇಳಿದ್ದಾರೆ. ಮತ್ತೆ ಅಷ್ಟೆ. ಮಾರ್ಕ್ಸ್‌ರವರು 1852ರಿಂದ ಶ್ರಮಜೀವಿ ವರ್ಗ ಕ್ರಾಂತಿಯ ಕಾರ್ಯಭಾರವು ರಾಜ್ಯಯಂತ್ರವನ್ನು "ತೊಡೆದು ಹಾಕುವುದು" ಎಂದು ಪ್ರತಿಪಾದಿಸಿದ್ದರು,[100] ಮಾರ್ಕ್ಸ್‌ರವರ ಈ ನಿಜವಾದ ವಿಚಾರಕ್ಕೆ ತೀರ ವಿರುದ್ಧವಾದು

ದನ್ನು ಬೆರ್ನ್‌ಷ್ಟೈನ್‌ರು ಮಾರ್ಕ್ಸ್‌ರವರಿಗೆ ಆರೋಪಿಸಿದ್ದಾರೆ, ಎಂಬ ಸತ್ಯಸಂಗತಿಯ ಬಗೆಗೆ ಕೌತ್‌ಸ್ಕಿ ಒಂದು ಮಾತನ್ನೂ ಹೇಳಲಿಲ್ಲ.

ಇದರ ಪರಿಣಾಮವೆಂದರೆ ಶ್ರಮಜೀವಿ ವರ್ಗ ಕ್ರಾಂತಿಯ ಕಾರ್ಯಭಾರಗಳ ವಿಷಯಕ್ಕೆ ಸಂಬಂಧಿಸಿ ಮಾರ್ಕ್ಸ್‌ವಾದ ಮತ್ತು ಸಂದರ್ಭಸಾಧಕವಾದಗಳ ನಡುವಿನ ಅತ್ಯಂತ ಸಾರಭೂತ ಭಿನ್ನತೆಯನ್ನು ಕೌತ್‌ಸ್ಕಿ ತೇಲಿಸಿಬಿಟ್ಟಿದ್ದಾರೆ!

> "ಶ್ರಮಜೀವಿ ವರ್ಗ ಸರ್ವಾಧಿಕಾರತ್ವದ ಸಮಸ್ಯೆಯ ಪರಿಹಾರವನ್ನು ನಾವು ಸುರಕ್ಷಿತವಾಗಿ ಭವಿಷ್ಯತ್ತಿಗೆ ಬಿಟ್ಟುಬಿಡಬಹುದು" ಎಂದು ಕೌತ್‌ಸ್ಕಿ ಬೆರ್ನ್‌ಷ್ಟೈನ್‌ರ "ವಿರುದ್ಧ" ಬರೆಯುತ್ತ ಹೇಳಿದರು. (ಪು. 172, ಜರ್ಮನ್ ಆವೃತ್ತಿ.)

ಇದು ಬೆರ್ನ್‌ಷ್ಟೈನ್ ವಿರುದ್ಧ ವಾದವಲ್ಲ, ಆದರೆ, ಸಾರತಃ ಅವರಿಗೆ ನೀಡಿದ ಒಂದು ರಿಯಾಯಿತಿಯಾಗಿದೆ, ಸಂದರ್ಭಸಾಧಕವಾದಕ್ಕೆ ಶರಣಾಗತಿಯಾಗಿದೆ; ಏಕೆಂದರೆ ಪ್ರಸ್ತುತದಲ್ಲಿ ಸಂದರ್ಭಸಾಧಕವಾದಿಗಳು ಶ್ರಮಜೀವಿ ವರ್ಗ ಕ್ರಾಂತಿಯ ಕಾರ್ಯಭಾರಗಳ ಮೂಲಭೂತ ಪ್ರಶ್ನೆಗಳನ್ನೆಲ್ಲ "ತುಂಬ ಸುರಕ್ಷಿತವಾಗಿ ಭವಿಷ್ಯತ್ತಿಗೆ ಬಿಟ್ಟುಬಿಡುವುದ"ಕ್ಕಿಂತ ಹೆಚ್ಚು ಉತ್ತಮವಾದ ಬೇರೇನನ್ನೂ ಕೇಳುತ್ತಿಲ್ಲ.

ಮಾರ್ಕ್ಸ್ ಮತ್ತು ಎಂಗೆಲ್ಸ್‌ರು 1852ರಿಂದ 1891ರವರೆಗೆ, ನಲವತ್ತು ವರ್ಷ ಕಾಲ, ಶ್ರಮಜೀವಿ ವರ್ಗಕ್ಕೆ ಅದು ರಾಜ್ಯಯಂತ್ರವನ್ನು ತೊಡೆದು ಹಾಕಬೇಕು ಎಂದು ಬೋಧಿಸಿದರು. ಆದರೂ 1899ರಲ್ಲಿ ಕೌತ್‌ಸ್ಕಿಯವರು ಈ ವಿಷಯಕ್ಕೆ ಸಂಬಂಧಿಸಿ ಸಂದರ್ಭಸಾಧಕವಾದಿಗಳು ಮಾರ್ಕ್ಸ್‌ವಾದಕ್ಕೆ ಸಂಪೂರ್ಣವಾಗಿ ದ್ರೋಹ ಬಗೆದುದನ್ನು ಎದುರಿಸುವಾಗ, ಈ ಯಂತ್ರವನ್ನು ತೊಡೆದು ಹಾಕುವುದು ಅವಶ್ಯವೇ ಎಂಬ ಪ್ರಶ್ನೆಯ ಸ್ಥಳದಲ್ಲಿ ಅದನ್ನು ಯಾವ ಸುಸ್ಪಷ್ಟ ರೂಪಗಳಲ್ಲಿ ತೊಡೆದು ಹಾಕಬೇಕು ಎಂಬ ಪ್ರಶ್ನೆಯನ್ನು ಮೋಸದಿಂದ ಬದಲು ಪ್ರಯೋಗಿಸಿ, ಅನಂತರ ಈ ಸುಸ್ಪಷ್ಟ ರೂಪಗಳನ್ನು ಮುಂಚಿತವಾಗಿಯೇ ತಿಳಿಯುವುದು ಸಾಧ್ಯವಿಲ್ಲ ಎಂಬ "ನಿರ್ವಿವಾದವಾದ" (ಮತ್ತು ಬರಡಾದ) ಸಂಕುಚಿತವಾದಿ ಸತ್ಯದ ಹಿಂದೆ ರಕ್ಷಣೆ ಕಂಡುಕೊಂಡರು!!

ಕಾರ್ಮಿಕ ವರ್ಗವನ್ನು ಕ್ರಾಂತಿಗಾಗಿ ತರಬೇತುಗೊಳಿಸುವುದರಲ್ಲಿ ಶ್ರಮಜೀವಿ ವರ್ಗದ ಪಾರ್ಟಿಯ ಕಾರ್ಯಭಾರಕ್ಕೆ ಸಂಬಂಧಿಸಿ ಮಾರ್ಕ್ಸ್ ಮತ್ತು ಕೌತ್‌ಸ್ಕಿಯವರ ಮಧ್ಯೆ ಅಜಗಜಾಂತರವಿದೆ.

ಕೌತ್‌ಸ್ಕಿಯವರ ಮುಂದಿನ, ಹೆಚ್ಚು ಪರಿಪಕ್ವವಾದ ಕೃತಿಯನ್ನು ತೆಗೆದುಕೊಳ್ಳೋಣ. ಇದೂ ಸಂದರ್ಭಸಾಧಕವಾದಿ ತಪ್ಪುಗಳನ್ನು ವಿರೋಧಿಸುವುದಕ್ಕೇ ಬಹುಮಟ್ಟಿಗೆ ಮೀಸಲಾಗಿದ್ದಿತು. ಇದೇ ಅವರ 'ಸಾಮಾಜಿಕ ಕ್ರಾಂತಿ' ಎಂಬ ಕಿರುಹೊತ್ತಗೆ. ಈ ಕಿರುಹೊತ್ತಗೆಯಲ್ಲಿ ಗ್ರಂಥಕರ್ತೃ "ಶ್ರಮಜೀವಿ ವರ್ಗ ಕ್ರಾಂತಿ" ಹಾಗೂ "ಶ್ರಮ

ಜೀವಿ ವರ್ಗ ಆಳ್ವಿಕೆ" ಪ್ರಶ್ನೆಯನ್ನು ತಮ್ಮ ವಿಶೇಷ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಅವರು ಅತ್ಯಂತ ಅಮೂಲ್ಯವಾದ ಅನೇಕ ಸಂಗತಿಗಳನ್ನು ತಿಳಿಸಿದ್ದಾರೆ, ಆದರೆ ರಾಜ್ಯದ ಪ್ರಶ್ನೆಯನ್ನು ಮಾತ್ರ ತಪ್ಪಿಸಿದ್ದಾರೆ. ಕೃತಿಯಾದ್ಯಂತ ಕರ್ತೃ ರಾಜ್ಯಾಧಿಕಾರವನ್ನು ಗೆಲ್ಲುವ ಬಗೆಗೆ ಮಾತನಾಡುತ್ತಾರೆ – ಅದಕ್ಕೂ ಹೆಚ್ಚಿಗೆ ಏನೂ ಇಲ್ಲ; ಅಂದರೆ ಅವರು ರಾಜ್ಯಯಂತ್ರವನ್ನು ನಾಶಗೊಳಿಸದೆಯೇ ಅಧಿಕಾರವನ್ನು ವಶಪಡಿಸಿಕೊಳ್ಳುವ ಸಾಧ್ಯತೆಯನ್ನು ಒಪ್ಪಿಕೊಳ್ಳುವ ಮಟ್ಟಿಗೆ ಸಂದರ್ಭಸಾಧಕವಾದಿಗಳಿಗೆ ರಿಯಾಯಿತಿ ತೋರುವ ಸೂತ್ರವೊಂದನ್ನು ಆಯ್ಕೆ ಮಾಡಿಕೊಂಡಿದ್ದಾರೆ. 1872ರಲ್ಲಿ ಮಾರ್ಕ್ಸ್‌ರವರು 'ಕಮ್ಯೂನಿಸ್ಟ್ ಪ್ರಣಾಳಿಕೆ'ಯ ಕಾರ್ಯಕ್ರಮದಲ್ಲಿ "ಹಳತಾದುದು" ಎಂದು ಘೋಷಿಸಿದ ವಿಷಯ[101]ವನ್ನೇ ಕೌತ್‌ಸ್ಕಿ 1902ರಲ್ಲಿ ಪುನರುಜ್ಜೀವನಗೊಳಿಸಿದ್ದಾರೆ.

ಈ ಕಿರುಹೊತ್ತಗೆಯಲ್ಲಿ ಒಂದು ವಿಶೇಷ ವಿಭಾಗವು "ಸಾಮಾಜಿಕ ಕ್ರಾಂತಿಯ ರೂಪಗಳು ಮತ್ತು ಆಯುಧಗಳು" ಎಂಬ ವಿಷಯಕ್ಕೆ ಮೀಸಲಾಗಿದೆ. ಇಲ್ಲಿ ಕೌತ್‌ಸ್ಕಿಯವರು ಸಾಮೂಹಿಕ ರಾಜಕೀಯ ಮುಷ್ಕರ, ಅಂತರ್ಯುದ್ಧ, "ಆಧುನಿಕ ವಿಶಾಲ ರಾಜ್ಯದ ಶಕ್ತಿಯ ಉಪಕರಣಗಳಾದ ಅಧಿಕಾರಶಾಹಿ ಹಾಗೂ ಸೈನ್ಯ" ಇವೆಲ್ಲವುಗಳ ಬಗೆಗೆ ಹೇಳುತ್ತಾರೆ; ಆದರೆ ಅವರು ಕಮ್ಯೂನ್ ಆಗಲೇ ಕಾರ್ಮಿಕರಿಗೆ ಏನು ಬೋಧಿಸಿದೆಯೋ ಅದರ ಬಗೆಗೆ ಒಂದು ಮಾತನ್ನೂ ಹೇಳುವುದಿಲ್ಲ. ರಾಜ್ಯದ ಬಗೆಗೆ "ಅಂಧ ಶ್ರದ್ಧೆಯ ಗೌರವ" ಹೊಂದಿರುವುದರ ವಿರುದ್ಧ ಎಂಗೆಲ್ಸ್‌ರು ವಿಶೇಷವಾಗಿ ಜರ್ಮನ್ ಸಮಾಜವಾದಿಗಳಿಗೆ ಎಚ್ಚರಿಕೆ ನೀಡಿದುದಕ್ಕೆ ಕಾರಣವಿಲ್ಲದಿಲ್ಲ ಎಂಬುದು ಸ್ಪಷ್ಟ.

ಕೌತ್‌ಸ್ಕಿಯವರು ವಿಷಯವನ್ನು ಕೆಳಗಿನಂತೆ ಪರ್ಯಾಲೋಚಿಸುತ್ತಾರೆ: ವಿಜಯಿಯಾದ ಶ್ರಮಜೀವಿ ವರ್ಗವು "ಪ್ರಜಾಸತ್ತಾತ್ಮಕ ಕಾರ್ಯಕ್ರಮವನ್ನು ನೆರವೇರಿಸುವುದು" ಎಂದು ಹೇಳಿ ಅವರು ಅದರ ಉಪವಿಧಿಗಳನ್ನು ನಿರೂಪಿಸಲು ಹೋಗುತ್ತಾರೆ. ಆದರೆ ಬೂರ್ಷ್ವಾ ಪ್ರಜಾಪ್ರಭುತ್ವದ ಸ್ಥಳದಲ್ಲಿ ಶ್ರಮಜೀವಿ ವರ್ಗದ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ವಿಷಯಕ್ಕೆ ಸಂಬಂಧಿಸಿ 1871ನೆಯ ಸಂವತ್ಸರವು ಒದಗಿಸಿದ ಹೊಸ ಸಾಮಗ್ರಿಯ ಬಗೆಗೆ ಒಂದು ಮಾತನ್ನೂ ಹೇಳುವುದಿಲ್ಲ. ಕೌತ್‌ಸ್ಕಿಯವರು ಈ ಕೆಳಗಿನಂಥ "ಶಬ್ದಾಡಂಬರದ" ನಿಸ್ಸಾರ ನುಡಿಗಳನ್ನು ಬಳಸಿ ಪ್ರಶ್ನೆಯನ್ನು ಮುಗಿಸಿಬಿಡುತ್ತಾರೆ:

> "ಆದರೂ ಇಂದಿನ ಪರಿಸ್ಥಿತಿಗಳಲ್ಲಿ ನಾವು ಸರ್ವೋಚ್ಚತೆಯನ್ನು ಸಾಧಿಸಲಾರೆವೆಂದು ಬೇರೆ ಹೇಳಬೇಕಾಗಿಲ್ಲ. ಕ್ರಾಂತಿಯೆಂದರೆ ಸುದೀರ್ಘವಾದ ಹಾಗೂ ಗಾಢ ಪ್ರವೃತ್ತಿಯ ಹೋರಾಟಗಳು ಎಂಬ ಅರ್ಥ ಇದ್ದೇ ಇರುತ್ತದೆ. ಈ ಹೋರಾಟಗಳು ತಾವೇ ತಾವಾಗಿ ನಮ್ಮ ಇಂದಿನ ರಾಜಕೀಯ ಹಾಗೂ ಸಾಮಾಜಿಕ ರಚನೆಯನ್ನು ಬದಲಿಸುವುವು."

ಕುದುರೆಯು ಹುರುಳಿಯನ್ನು ತಿನ್ನುತ್ತದೆ, ವೋಲ್ಗಾ ನದಿಯು ಕ್ಯಾಸ್ಪಿಯನ್ ಸಮುದ್ರವನ್ನು ಸೇರುತ್ತದೆ, ಎಂಬ ಅಂಶಗಳಂತೆಯೇ ಇದನ್ನೂ ನಿಸ್ಸಂಶಯವಾಗಿಯೂ "ಹೇಳಬೇಕಾಗಿಯೇ ಇಲ್ಲ." ಖೇದದ ಸಂಗತಿ ಎಂದರೆ, ಕ್ರಾಂತಿಕಾರಿ ಶ್ರಮಜೀವಿ ವರ್ಗಕ್ಕೆ ಅತ್ಯಂತ ಮುಖ್ಯವಾದ ಪ್ರಶ್ನೆಯನ್ನು ತಪ್ಪಿಸಲೋಸುಗ "ಗಾಢ ಪ್ರವೃತ್ತಿ"ಯ ಹೋರಾಟಗಳ ಬಗೆಗೆ ಖಾಲಿಯಾದ ಹಾಗೂ ಆಡಂಬರದ ನುಡಿಕಟ್ಟನ್ನು ಬಳಸ ಲಾಗಿದೆ. ಈ ಮುನ್ನಿನ ಶ್ರಮಜೀವಿ ವರ್ಗದ್ದಲ್ಲದ ಕ್ರಾಂತಿಗಳಿಂದ ಭಿನ್ನವಾಗಿ, ರಾಜ್ಯಕ್ಕೆ ಸಂಬಂಧಿಸಿ ಮತ್ತು ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿ ಶ್ರಮಜೀವಿ ವರ್ಗದ ಕ್ರಾಂತಿಯನ್ನು ಯಾವುದು "ಗಾಢ ಪ್ರವೃತ್ತಿಯದನ್ನಾಗಿ" ಮಾಡುತ್ತದೆ, ಎಂಬುದೇ ಆ ಪ್ರಶ್ನೆ ಯಾಗಿದೆ.

ಈ ಪ್ರಶ್ನೆಯನ್ನು ತಪ್ಪಿಸುವ ಮೂಲಕ ಕೌತ್‌ಸ್ಕಿಯವರು ಆಚರಣೆಯಲ್ಲಿ ಈ ಅತ್ಯಂತ ಸಾರಭೂತ ವಿಷಯಕ್ಕೆ ಸಂಬಂಧಿಸಿ ಸಂದರ್ಭಸಾಧಕವಾದಕ್ಕೆ ರಿಯಾಯಿತಿ ನೀಡುತ್ತಾರೆ. ಆದರೆ ಮಾತಿನಲ್ಲಿ ಅವರು ಸಂದರ್ಭಸಾಧಕವಾದದ ವಿರುದ್ಧ ನಿಷ್ಠುರ ಯುದ್ಧ ಘೋಷಿಸುತ್ತಾರೆ, "ಕ್ರಾಂತಿ ವಿಚಾರ"ದ ಪ್ರಾಮುಖ್ಯತೆಯನ್ನು ಒತ್ತಿ ತಿಳಿಸು ತ್ತಾರೆ (ಕ್ರಾಂತಿಯ ಸ್ಪಷ್ಟ ಪಾಠಗಳನ್ನು ಕಾರ್ಮಿಕರಿಗೆ ಬೋಧಿಸಲು ಅಂಜುವಾಗ ಈ "ವಿಚಾರ"ದ ಯೋಗ್ಯತೆ ಎಷ್ಟಾಗುತ್ತದೆ?) ಅಥವಾ "ಬೇರೆ ಎಲ್ಲಕ್ಕಿಂತ ಮುನ್ನ ಕ್ರಾಂತಿಕಾರಿ ಆದರ್ಶ" ಎಂದು ಹೇಳುತ್ತಾರೆ, ಅಥವಾ ಇಂಗ್ಲಿಷ್ ಕಾರ್ಮಿಕರು ಈಗ "ಪೆಟಿ ಬೂರ್ಷ್ವಾಗಿಂತ ಏನೂ ಹೆಚ್ಚು ಉತ್ತಮರಾಗಿಲ್ಲ" ಎಂದು ಪ್ರಕಟಿಸು ತ್ತಾರೆ.

> "ಅತ್ಯಂತ ವೈವಿಧ್ಯಪೂರ್ಣ ರೂಪಗಳ ಸಂಸ್ಥೆಗಳು – ಅಧಿಕಾರ ಶಾಹಿ (??), ಟ್ರೇಡ್ ಯೂನಿಯನ್, ಸಹಕಾರಿ, ಖಾಸಗಿ ಈ ಎಲ್ಲ ಸಂಸ್ಥೆಗಳು – ಸಮಾಜವಾದಿ ಸಮಾಜದಲ್ಲಿ ಪಕ್ಕಪಕ್ಕದಲ್ಲೇ ಇರಬಲ್ಲವು"... ಎಂದು ಕೌತ್‌ಸ್ಕಿ ಬರೆಯುತ್ತಾರೆ. "ಉದಾಹರಣೆಗೆ ರೈಲ್ವೇಗಳಂಥ ಅಧಿ ಕಾರಶಾಹಿ (??) ಸಂಘಟನೆಯಿಲ್ಲದೆಯೇ ಕೆಲಸವೇ ಸಾಗದಂಥ, ಸಂಸ್ಥೆ ಗಳಿರುತ್ತವೆ. ಇಲ್ಲಿ ಪ್ರಜಾಸತ್ತಾತ್ಮಕ ಸಂಘಟನೆಯು ಕೆಳಗಿನ ರೂಪವನ್ನು ತಳೆಯಬಹುದು: ಕಾರ್ಮಿಕರು ಪ್ರತಿನಿಧಿಗಳನ್ನು ಚುನಾಯಿಸುತ್ತಾರೆ, ಈ ಪ್ರತಿನಿಧಿಗಳು ಒಂದು ರೀತಿಯ ಪಾರ್ಲಿಮೆಂಟನ್ನು ರೂಪಿಸುತ್ತಾರೆ, ಈ ಪಾರ್ಲಿಮೆಂಟು ಕಾರ್ಯ ನಿಯಮಗಳನ್ನು ಗೊತ್ತುಪಡಿಸುತ್ತದೆ, ಅಧಿ ಕಾರಶಾಹಿ ಸಾಧನದ ನಿರ್ವಹಣೆಯ ಮೇಲೆ ಉಸ್ತುವಾರಿ ಇರಿಸುತ್ತದೆ. ಇತರ ಸಂಸ್ಥೆಗಳ ನಿರ್ವಹಣೆಯನ್ನು ಟ್ರೇಡ್ ಯೂನಿಯನ್‌ಗಳಿಗೆ ವರ್ಗಾ ಯಿಸಬಹುದು, ಇನ್ನೂ ಉಳಿದವು ಸಹಕಾರಿ ಸಂಸ್ಥೆಗಳಾಗಿ ಆಗಬಹುದು."

ಈ ವಾದವು ತಪ್ಪಾದುದು: ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಎಂಟನೆಯ

ದಶಕದಲ್ಲಿ ಕಮ್ಯೂನ್‌ನ ಪಾಠಗಳನ್ನು ನಿದರ್ಶನವನ್ನಾಗಿ ಬಳಸಿಕೊಂಡು ನೀಡಿದ ವಿವರಣೆಗಳಿಗೆ ಹೋಲಿಸಿದಂತೆ ಇದು ಒಂದು ಹೆಜ್ಜೆ ಹಿಂದೆ ಇಟ್ಟಂತಾಗುತ್ತದೆ.

ಇನ್ನೂ ಅವಶ್ಯವೆಂದು ಭಾವಿಸಲಾದಂಥ "ಅಧಿಕಾರಶಾಹಿ" ಸಂಘಟನೆಯ ಬಗೆಗೆ ಹೇಳುವುದಾದರೆ, ರೈಲ್ವೇಗೂ ವಿಶಾಲ ಪ್ರಮಾಣದ ಯಂತ್ರ ಕೈಗಾರಿಕೆಯಲ್ಲಿನ ಇತರ ಯಾವುದೇ ಸಂಸ್ಥೆಗೂ, ಯಾವುದೇ ಕಾರ್ಖಾನೆಗೂ, ಬೃಹತ್ ಕರ್ಮಶಾಲೆ ಅಥವಾ ವಿಶಾಲ ಪ್ರಮಾಣದ ಬಂಡವಾಳಶಾಹಿ ಕೃಷಿ ಯಂತ್ರಸಂಸ್ಥೆಗೂ ಮಧ್ಯೆ ಯಾವ ವ್ಯತ್ಯಾಸವೂ ಇಲ್ಲ. ಈ ಎಲ್ಲ ಸಂಸ್ಥೆಗಳಲ್ಲೂ ಅವುಗಳಲ್ಲಿನ ಕಾರ್ಯತಂತ್ರದ ಫಲವಾಗಿ, ಪ್ರತಿಯೊಬ್ಬರೂ ತಮಗೆ ಗೊತ್ತುಮಾಡಲಾದ ಕಾರ್ಯಭಾರವನ್ನು ನಿರ್ವಹಿಸುವುದರಲ್ಲಿ ಅತ್ಯಂತ ಕಟ್ಟುನಿಟ್ಟಾದ ಶಿಸ್ತು ಮತ್ತು ಅತ್ಯಂತ ಹೆಚ್ಚಿನ ನಿಷ್ಕೃಷ್ಟತೆಯನ್ನು ಪಾಲಿಸುವುದು ಅತ್ಯವಶ್ಯವಾಗಿರುತ್ತದೆ. ಏಕೆಂದರೆ, ಅದಿಲ್ಲದಿದ್ದರೆ ಸಂಸ್ಥೆಯ ಇಡೀ ಕಾರ್ಯವೇ ಸ್ಥಗಿತಗೊಳ್ಳಬಹುದು, ಅಥವಾ ಯಂತ್ರಗಳಿಗೆ ಇಲ್ಲವೇ ಸಿದ್ಧಗೊಂಡ ಉತ್ಪನ್ನಗಳಿಗೆ ಹಾನಿ ಉಂಟಾಗಬಹುದು. ಈ ಎಲ್ಲ ಸಂಸ್ಥೆಗಳಲ್ಲೂ ಕಾರ್ಮಿಕರು ಸಹಜವಾಗಿಯೇ "ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ ಮತ್ತು ಅವರು ಒಂದು ರೀತಿಯ ಪಾರ್ಲಿಮೆಂಟನ್ನು" ರೂಪಿಸುತ್ತಾರೆ.

ಆದರೆ ಮುಖ್ಯ ಸಂಗತಿ ಎಂದರೆ, ಈ "ರೀತಿಯ ಪಾರ್ಲಿಮೆಂಟು" ಬೂರ್ಷ್ವಾ ಸಂಸದೀಯ ಸಂಸ್ಥೆಯ ಅರ್ಥದಲ್ಲಿ ಪಾರ್ಲಿಮೆಂಟ್ ಆಗಿರುವುದಿಲ್ಲ. ಮುಖ್ಯ ಸಂಗತಿ ಎಂದರೆ ಈ "ರೀತಿಯ ಪಾರ್ಲಿಮೆಂಟು," ಬೂರ್ಷ್ವಾ ಸಂಸದೀಯವಾದದ ಮೇರೆಗಳನ್ನು ಮೀರದಂತೆ ಆಲೋಚನೆ ಮಾಡುವ ಕೌತ್‌ಸ್ಕಿಯವರು ಕಲ್ಪಿಸಿಕೊಳ್ಳುವಂತೆ, "ಕಾರ್ಯ ನಿಯಮಗಳನ್ನು ಗೊತ್ತುಪಡಿಸುತ್ತದೆ ಮತ್ತು ಅಧಿಕಾರಶಾಹಿ ಸಾಧನದ ನಿರ್ವಹಣೆಯ ಮೇಲೆ ಉಸ್ತುವಾರಿ ಇರಿಸುತ್ತದೆ"ಯಷ್ಟೆ ಅಲ್ಲ. ಸಮಾಜವಾದಿ ಸಮಾಜದಲ್ಲಿ ಕಾರ್ಮಿಕರ ಡೆಪ್ಯೂಟಿಗಳನ್ನೊಳಗೊಂಡ "ಒಂದು ರೀತಿಯ ಪಾರ್ಲಿಮೆಂಟು" "ಕಾರ್ಯ ನಿಯಮಗಳನ್ನು ಗೊತ್ತುಪಡಿಸುತ್ತದೆ ಮತ್ತು... ಸಾಧನದ ನಿರ್ವಹಣೆಯ ಮೇಲೆ ಉಸ್ತುವಾರಿ ಇರಿಸುತ್ತದೆ" ನಿಜ; ಆದರೆ ಈ ಸಾಧನವು "ಅಧಿಕಾರಶಾಹಿ" ಆಗಿರುವುದಿಲ್ಲ. ಕಾರ್ಮಿಕರು ರಾಜಕೀಯ ಅಧಿಕಾರವನ್ನು ಗಳಿಸಿಕೊಂಡನಂತರ ಹಳೆಯ ಅಧಿಕಾರಶಾಹಿ ಸಾಧನವನ್ನು ತೊಡೆದು ಹಾಕುತ್ತಾರೆ, ಅದನ್ನು ಅಡಿಪಾಯದವರೆಗೂ ಚೂರುಚೂರು ಮಾಡುತ್ತಾರೆ, ಅದನ್ನು ನೆಲಸಮ ಮಾಡುತ್ತಾರೆ; ಅದರ ಸ್ಥಳದಲ್ಲಿ ಅವರು ಹೊಸತೊಂದನ್ನು ಸ್ಥಾಪಿಸುತ್ತಾರೆ. ಅದರಲ್ಲಿ ಅದೇ ಕಾರ್ಮಿಕರೇ, ನೌಕರರೇ ಇರುತ್ತಾರೆ, ಆದರೆ ಅವರು ಅಧಿಕಾರಶಾಹಿಗಳಾಗಿ ಪರಿವರ್ತನೆಯಾಗುವುದರ ವಿರುದ್ಧ ಕ್ರಮಗಳನ್ನು ಕೂಡಲೇ ಕೈಗೊಳ್ಳಲಾಗುವುದು. ಈ ಕ್ರಮಗಳನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ವಿವರವಾಗಿ ತಪಸೀಲು ಮಾಡಿ ತಿಳಿಸಿದ್ದಾರೆ: (1) ಚುನಾವಣೆಗಳಷ್ಟೆ ಅಲ್ಲ, ಯಾವ ಸಮಯದಲ್ಲಾದರೂ ಹಿಂದಕ್ಕೆ ಕರೆಯಬಹುದಾದ ವ್ಯವಸ್ಥೆ; (2) ಕಾರ್ಮಿಕನ ಸಂಬಳಕ್ಕಿಂತ ಹೆಚ್ಚಿಲ್ಲದಷ್ಟು ಸಂಬಳ; (3) ಎಲ್ಲರೂ ನಿಯಂತ್ರಣ

ಹಾಗೂ ಮೇಲುಸ್ತುವಾರಿ ನಡೆಸುವ ವ್ಯವಸ್ಥೆಯನ್ನು ತಕ್ಷಣವೇ ಜಾರಿಗೆ ತರುವುದು. ಹಾಗಾಗಿ ಎಲ್ಲರೂ ಸ್ವಲ್ಪಕಾಲದವರೆಗೆ "ಅಧಿಕಾರಶಾಹಿ"ಗಳಾಗುತ್ತಾರೆ ಮತ್ತು ಆದುದರಿಂದಲೇ ಯಾರೂ "ಅಧಿಕಾರಶಾಹಿ"ಯಾಗಲು ಸಾಧ್ಯವಾಗುವುದಿಲ್ಲ.

ಕೌತ್‌ಸ್ಕಿಯವರು ಮಾರ್ಕ್ಸ್‌ರವರ "ಕಮ್ಯೂನು ಸಂಸದೀಯ ಸಂಸ್ಥೆಯಲ್ಲ, ಆದರೆ ಕಾರ್ಯನಿರ್ವಾಹಕ ಸಂಸ್ಥೆಯಾಗಿದ್ದಿತು, ಅದು ಒಂದೇ ಕಾಲದಲ್ಲಿ ಕಾರ್ಯಾಂಗದ ಹಾಗೂ ಶಾಸಕಾಂಗದ ಕಾರ್ಯಗಳನ್ನು ನಿರ್ವಹಿಸುತ್ತಿದ್ದಿತು"[102] ಎಂಬ ಮಾತುಗಳ ಬಗೆಗೆ ಚಿಂತನೆಯನ್ನೇ ಮಾಡಿಲ್ಲ.

ಕೌತ್‌ಸ್ಕಿಯವರು ಪ್ರಜಾಪ್ರಭುತ್ವ(ಜನತೆಗಾಗಿ ಅಲ್ಲ)ವನ್ನು ಅಧಿಕಾರಶಾಹಿ(ಜನತೆಯ ವಿರುದ್ಧ)ಯೊಂದಿಗೆ ಜೊತೆಕೂಡಿಸುವ ಬೂರ್ಷ್ವಾ ಸಂಸದೀಯವಾದಕ್ಕೂ, ಅಧಿಕಾರಶಾಹಿಯನ್ನು ಬುಡಮಟ್ಟ ಕತ್ತರಿಸಿ ಹಾಕಲು ತಕ್ಷಣದ ಕ್ರಮಗಳನ್ನು ಕೈಗೊಳ್ಳುವ, ಈ ಕ್ರಮಗಳನ್ನು ಕೊನೆಯವರೆಗೂ, ಅಧಿಕಾರಶಾಹಿಯನ್ನು ಸಂಪೂರ್ಣವಾಗಿ ನಿರ್ಮೂಲಗೊಳಿಸುವವರೆಗೂ ಜನತೆಗಾಗಿ ಸಂಪೂರ್ಣ ಪ್ರಜಾಪ್ರಭುತ್ವವನ್ನು ಜಾರಿಗೆ ತರುವವರೆಗೂ, ನೆರವೇರಿಸುವ ಸಾಮರ್ಥ್ಯ ಇರುವ ಶ್ರಮಜೀವಿ ವರ್ಗದ ಪ್ರಜಾಪ್ರಭುತ್ವಕ್ಕೂ ಮಧ್ಯೆ ಇರುವ ವ್ಯತ್ಯಾಸವನ್ನು ಅರ್ಥ ಮಾಡಿಕೊಂಡೇ ಇಲ್ಲ.

ಕೌತ್‌ಸ್ಕಿಯವರು ಇಲ್ಲಿ ರಾಜ್ಯದ ಬಗೆಗೆ ಅದೇ ಹಳೆಯ "ಅಂಧಶ್ರದ್ಧೆಯ ಗೌರವ"ವನ್ನು ತೋರುತ್ತಾರೆ, ಅಧಿಕಾರಶಾಹಿಯಲ್ಲಿ "ಅಂಧಶ್ರದ್ಧೆಯ ನಂಬಿಕೆ" ತೋರುತ್ತಾರೆ.

ಈಗ ಸಂದರ್ಭಸಾಧಕವಾದಿಗಳ ವಿರುದ್ಧ ಕೌತ್‌ಸ್ಕಿಯವರ ಕೊನೆಯ ಹಾಗೂ ಅತ್ಯುತ್ತಮವೆನ್ನಲಾದ 'ಅಧಿಕಾರಕ್ಕೆ ದಾರಿ' ಎಂಬ ಕೃತಿಯನ್ನು ಪರಿಶೀಲಿಸೋಣ (ಈ ಕೃತಿಯನ್ನು ರಷ್ಯನ್ ಭಾಷೆಯಲ್ಲಿ ಪ್ರಕಟಿಸಲಾಗಿಲ್ಲ ಎಂದು ನನ್ನ ನಂಬಿಕೆ, ಏಕೆಂದರೆ, ಇದು 1909ರಲ್ಲಿ, ನಮ್ಮ ದೇಶದಲ್ಲಿ ಪ್ರತಿಗಾಮಿತ್ವವು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ, ಕಾಣಿಸಿಕೊಂಡಿತು). ಈ ಕಿರುಹೊತ್ತಗೆಯು ಒಂದು ದೊಡ್ಡ ಮುನ್ಹೆಜ್ಜೆಯಾಗಿದೆ; ಏಕೆಂದರೆ ಇದು, ಬೆರ್ನ್‌ಷ್ಟೈನ್‌ರ ವಿರುದ್ಧ 1899ರಲ್ಲಿ ಬರೆದ ಕೃತಿಯು ಮಾಡಿದಂತೆ, ಒಟ್ಟಿನಲ್ಲಿ ಕ್ರಾಂತಿಕಾರಿ ಕಾರ್ಯಕ್ರಮವನ್ನು ಪರ್ಯಾಲೋಚಿಸುವುದಿಲ್ಲ, ಅಥವಾ 1902ರ 'ಸಾಮಾಜಿಕ ಕ್ರಾಂತಿ' ಎಂಬ ಕಿರುಹೊತ್ತಗೆ ಮಾಡಿದಂತೆ, ಸಾಮಾಜಿಕ ಕ್ರಾಂತಿ ಆಗುವ ಕಾಲದ ಪರಿಗಣನೆಯಿಲ್ಲದೆ ಅದರ ಕಾರ್ಯಭಾರಗಳನ್ನು ಪರ್ಯಾಲೋಚಿಸಲು ಹೋಗುವುದಿಲ್ಲ. "ಕ್ರಾಂತಿಗಳ ಯುಗ" ಪ್ರಾರಂಭವಾಗಿದೆ ಎಂಬುದನ್ನು ಮನ್ನಿಸುವಂತೆ ನಮ್ಮನ್ನು ಬಲಾತ್ಕರಿಸುವ ಸುಸ್ಪಷ್ಟ ಪರಿಸ್ಥಿತಿಗಳನ್ನು ಇದು ಪರ್ಯಾಲೋಚಿಸುತ್ತದೆ.

ಗ್ರಂಥಕರ್ತರು ಒಟ್ಟಿನಲ್ಲಿ ವರ್ಗ ವೈರುಧ್ಯಗಳು ಉಲ್ಬಣಗೊಳ್ಳುತ್ತಿರುವುದನ್ನು ಮತ್ತು ಈ ನಿಟ್ಟಿನಲ್ಲಿ ಸಾಮ್ರಾಜ್ಯವಾದ ನಿರ್ವಹಿಸುವ ವಿಶೇಷ ಪ್ರಮುಖ ಪಾತ್ರ

ವನ್ನು ಸ್ಪಷ್ಟವಾಗಿ ಎತ್ತಿ ತೋರಿಸುತ್ತಾರೆ. ಪಶ್ಚಿಮ ಯೂರೋಪಿನಲ್ಲಿ "1789-1871ರ ಕ್ರಾಂತಿಕಾರಿ ಕಾಲಾವಧಿ"ಯನಂತರ ಪೂರ್ವದಲ್ಲಿ 1905ರಲ್ಲಿ ಅಂಥದೇ ಕಾಲಾವಧಿ ಪ್ರಾರಂಭವಾಯಿತು, ಎಂದು ಅವರು ಹೇಳುತ್ತಾರೆ. ಜಾಗತಿಕ ಯುದ್ಧವೊಂದು ಭೀತಿ ಹುಟ್ಟಿಸುವಷ್ಟು ಶೀಘ್ರತೆಯೊಂದಿಗೆ ಸಮೀಪಿಸುತ್ತಿದೆ. "ಅದು (ಶ್ರಮಜೀವಿ ವರ್ಗ) ಇನ್ನೆಷ್ಟು ಮಾತ್ರವೂ ಅಕಾಲಿಕ ಕ್ರಾಂತಿಯ ಬಗೆಗೆ ಮಾತನಾಡಲಾಗದು." "ನಾವು ಕ್ರಾಂತಿಕಾರಿ ಕಾಲಾವಧಿಯನ್ನು ಪ್ರವೇಶಿಸಿದ್ದೇವೆ." "ಕ್ರಾಂತಿಕಾರಿ ಯುಗವು ಆರಂಭವಾಗುತ್ತಿದೆ."

ಈ ಹೇಳಿಕೆಗಳೆಲ್ಲ ಸಂಪೂರ್ಣವಾಗಿ ಸ್ಪಷ್ಟವಾಗಿವೆ. ಸಾಮ್ರಾಜ್ಯಶಾಹಿ ಯುದ್ಧಕ್ಕೆ ಮುನ್ನ ಜರ್ಮನ್ ಸೋಷಲ್ ಡೆಮೊಕ್ರಾಟರು ತಾವು ಏನಾಗುವುದಾಗಿ ಹೇಳಿಕೊಂಡಿದ್ದರು ಮತ್ತು ಯುದ್ಧ ಪ್ರಾರಂಭವಾದಾಗ ಕೌತ್‌ಸ್ಕಿಯವರನ್ನೂ ಒಳಗೊಂಡು ಅವರು ಎಂಥ ಅಧಃಪತನದ ಆಳಕ್ಕೆ ಮುಳುಗಿದರು ಎಂಬುದನ್ನು ಹೋಲಿಸಿ ತಿಳಿಯಲು ಕೌತ್‌ಸ್ಕಿಯವರ ಈ ಕಿರುಹೊತ್ತಗೆಯು ನೆರವಾಗುತ್ತದೆ. "ಇಂದಿನ ಪರಿಸ್ಥಿತಿಯು ಒಂದು ಅಪಾಯವನ್ನು ಒಳಗೊಂಡಿದೆ. ನಾವು (ಅಂದರೆ, ಜರ್ಮನ್ ಸೋಷಲ್ ಡೆಮೊಕ್ರಾಟರು) ನಿಜವಾಗಿಯೂ ಇರುವುದಕ್ಕಿಂತ ಹೆಚ್ಚು 'ಮಿತವಾದಿ'ಗಳೆಂದು ಸುಲಭವಾಗಿ ಕಂಡುಬರಬಹುದಾಗಿದೆ" ಎಂದು ಕೌತ್‌ಸ್ಕಿ ನಾವೀಗ ಪರಾಮರ್ಶಿಸುತ್ತಿರುವ ಕಿರುಹೊತ್ತಗೆಯಲ್ಲಿ ಬರೆದರು. ವಾಸ್ತವವಾಗಿ ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯು ಅದು ಕಾಣಿಸಿಕೊಂಡಿದ್ದುದಕ್ಕಿಂತ ಹೆಚ್ಚು ಮಿತವಾದಿಯೂ ಸಂದರ್ಭಸಾಧಕವಾದಿಯೂ ಆಗಿದ್ದಿತೆಂದೇ ಕಂಡುಬಂದಿತು !

ಆದ್ದರಿಂದ ಕೌತ್‌ಸ್ಕಿಯವರು ತುಂಬ ಸ್ಪಷ್ಟವಾಗಿಯೇ ಕ್ರಾಂತಿಗಳ ಯುಗ ಆಗಲೇ ಪ್ರಾರಂಭವಾಗಿದೆ ಎಂದು ಘೋಷಿಸಿದರೂ, "ರಾಜಕೀಯ ಕ್ರಾಂತಿ"ಯ ವಿಶ್ಲೇಷಣೆಗೆ ಮೀಸಲಾದುದೆಂದು ಅವರೇ ವರ್ಣಿಸಿದಂಥ ಕಿರುಹೊತ್ತಗೆಯಲ್ಲಿ, ಅವರು ಮತ್ತೆ ರಾಜ್ಯದ ಪ್ರಶ್ನೆಯನ್ನು ಸಂಪೂರ್ಣವಾಗಿ ತಪ್ಪಿಸಿರುವುದು, ಇನ್ನೂ ಹೆಚ್ಚು ವೈಶಿಷ್ಟ್ಯಪೂರ್ಣವೇ ಆಗಿದೆ.

ಪ್ರಶ್ನೆಯನ್ನು ಹೀಗೆ ಜಾರಿಸಿರುವುದು, ಈ ಲೋಪಗಳು ಮತ್ತು ಹೊರಳು ಮಾತುಗಳು ಎಲ್ಲವೂ ಕೂಡಿ ಅವರು ಕೊನೆಯಲ್ಲಿ ಸಂಪೂರ್ಣವಾಗಿ ಸಂದರ್ಭಸಾಧಕವಾದಕ್ಕೆ ಹಾರಿ ಹೋಗುವುದನ್ನು ಅನಿವಾರ್ಯವನ್ನಾಗಿ ಮಾಡಿದವು. ಇದನ್ನೇ ನಾವೀಗ ಪರ್ಯಾಲೋಚಿಸಬೇಕಾಗಿದೆ.

ಜರ್ಮನ್ ಸೋಷಲ್ ಡೆಮೊಕ್ರಾಟರ ವಕ್ತಾರ ಕೌತ್‌ಸ್ಕಿಯವರು ಹೀಗೆ ಘೋಷಿಸಿರುವಂತೆ ಕಾಣುತ್ತದೆ: ನಾನು ಕ್ರಾಂತಿಕಾರಿ ಅಭಿಪ್ರಾಯಗಳಿಗೆ ಬದ್ಧನಾಗಿದ್ದೇನೆ (1899). ನಾನು ಎಲ್ಲಕ್ಕಿಂತ ಮಿಗಿಲಾಗಿ ಶ್ರಮಜೀವಿ ವರ್ಗದ ಸಾಮಾಜಿಕ ಕ್ರಾಂತಿಯ ಅನಿವಾರ್ಯತೆಯನ್ನು ಮನ್ನಿಸುತ್ತೇನೆ (1902). ಕ್ರಾಂತಿಗಳ ಒಂದು ಹೊಸ ಯುಗವು ಉದಯವಾಗಿರುವುದನ್ನು ನಾನು ಮನ್ನಿಸುತ್ತೇನೆ (1909). ಆದರೂ ರಾಜ್ಯಕ್ಕೆ

ಸಂಬಂಧಿಸಿ ಶ್ರಮಜೀವಿ ವರ್ಗ ಕ್ರಾಂತಿಯ ಕಾರ್ಯಭಾರಗಳ ಪ್ರಶ್ನೆಯನ್ನು ಎತ್ತುತ್ತಿರುವುದರಿಂದಾಗಿ (1912) ನಾನು ಮಾರ್ಕ್ಸ್‌ರವರು 1852ರಷ್ಟು ಹಿಂದೆ ಏನು ಹೇಳಿದರೋ ಅದನ್ನು ಒಪ್ಪುತ್ತಿಲ್ಲ.

ಕೌತ್‌ಸ್ಕಿಯವರು ಪಾನ್ನೆಕೂಕ್‌ರೊಂದಿಗೆ ನಡೆಸಿದ ವಿವಾದದಲ್ಲಿ ಪ್ರಶ್ನೆಯನ್ನು ಈ ಮುಚ್ಚುಮರೆ ಇಲ್ಲದ ರೀತಿಯಲ್ಲೇ ಮುಂದಿಟ್ಟಿರುವುದು.

## 3. ಪಾನ್ನೆಕೂಕ್‌ರೊಂದಿಗೆ ಕೌತ್‌ಸ್ಕಿಯವರ ವಿವಾದ

ರೋಸಾ ಲುಕ್ಸೆಂಬುರ್ಗ್, ಕಾರ್ಲ್ ರಾದೆಕ್ ಮತ್ತಿತರರನ್ನು ಒಳಗೊಂಡ "ಎಡ ಉಗ್ರವಾದಿ" ಪ್ರವೃತ್ತಿಯ ಪ್ರತಿನಿಧಿಗಳಲ್ಲೊಬ್ಬರಾಗಿ ಪಾನ್ನೆಕೂಕ್‌ರವರು ಕೌತ್‌ಸ್ಕಿಯವರನ್ನು ವಿರೋಧಿಸಿದರು. ಕ್ರಾಂತಿಕಾರಿ ತಂತ್ರಗಳನ್ನು ಪ್ರತಿಪಾದಿಸುತ್ತ ಅವರೆಲ್ಲ, ಕೌತ್‌ಸ್ಕಿಯವರು ಮಾರ್ಕ್ಸ್‌ವಾದ ಮತ್ತು ಸಂದರ್ಭಸಾಧಕವಾದಗಳ ನಡುವೆ ತತ್ವರಹಿತವಾಗಿ ಡೋಲಾಯಮಾನವಾಗಿದ್ದ "ಮಧ್ಯಮಾರ್ಗ"ಕ್ಕೆ ಸಾಗಿ ಹೋಗುತ್ತಿದ್ದರೆಂಬ ಒಮ್ಮತದ ನಂಬಿಕೆ ಹೊಂದಿದ್ದರು. ಯುದ್ಧವು ಈ ಅಭಿಪ್ರಾಯವನ್ನು ಸಂಪೂರ್ಣವಾಗಿ ಸರಿಯೆಂದು ಸಾಬೀತು ಮಾಡಿತು. ಆ ಸಮಯದಲ್ಲಿ ಈ "ಮಧ್ಯಮಾರ್ಗಿ" (ಮಾರ್ಕ್ಸ್‌ವಾದಿ ಎಂದು ತಪ್ಪಾಗಿ ಕರೆದ) ಪ್ರವೃತ್ತಿಯು, ಅಥವಾ ಕೌತ್‌ಸ್ಕಿವಾದವು, ತನ್ನೆಲ್ಲ ಹೇಸಿಕೆಯ ತುಚ್ಛತನದೊಂದಿಗೆ ಕಾಣಿಸಿಕೊಂಡಿತು.

"ಸಾಮೂಹಿಕ ಕ್ರಿಯೆ ಮತ್ತು ಕ್ರಾಂತಿ" ('ನೋಯೆ ತ್ಸೈತ್.' 1912, ಸಂ. XXX, 2) ಎಂಬ ಶೀರ್ಷಿಕೆಯ, ರಾಜ್ಯದ ಪ್ರಶ್ನೆಯನ್ನು ಪರಿಶೀಲಿಸುವ, ಲೇಖನವೊಂದರಲ್ಲಿ ಪಾನ್ನೆಕೂಕ್‌ರವರು ಕೌತ್‌ಸ್ಕಿಯವರ ಮನೋಧರ್ಮವನ್ನು "ನಿಷ್ಕ್ರಿಯ ರ್‍ಯಾಡಿಕಲಿಸಂ" ಎಂದು, "ನಿಷ್ಕ್ರಿಯಾತ್ಮಕ ನಿರೀಕ್ಷಣಾ ಸಿದ್ಧಾಂತ" ಎಂದು ವರ್ಣಿಸಿದರು. "ಕೌತ್‌ಸ್ಕಿಯವರು ಕ್ರಾಂತಿಯ ಪ್ರಕ್ರಿಯೆಯನ್ನು ಕಾಣಲು ನಿರಾಕರಿಸುತ್ತಾರೆ" ಎಂದು ಪಾನ್ನೆಕೂಕ್ ಬರೆದರು (ಪು. 616). ಪ್ರಶ್ನೆಯನ್ನು ಈ ರೀತಿ ಮುಂದಿಡುತ್ತ ಪಾನ್ನೆಕೂಕ್‌ರವರು ನಮಗೆ ಆಸಕ್ತಿಕರವಾದ ವಿಷಯವನ್ನು ಅಂದರೆ ರಾಜ್ಯಕ್ಕೆ ಸಂಬಂಧಿಸಿ ಶ್ರಮಜೀವಿ ವರ್ಗ ಕ್ರಾಂತಿಯ ಕಾರ್ಯಭಾರಗಳ ವಿಷಯವನ್ನು ಪರಿಶೀಲಿಸುವ ಸಮೀಪ ಬಂದರು.

> "ಶ್ರಮಜೀವಿ ವರ್ಗದ ಹೋರಾಟವು ರಾಜ್ಯಾಧಿಕಾರಕ್ಕಾಗಿ ಬೂರ್ಷ್ವಾಸೀಯ ವಿರುದ್ಧ ಹೋರಾಟವಷ್ಟೆ ಅಲ್ಲ, ರಾಜ್ಯಾಧಿಕಾರದ ವಿರುದ್ಧವೇ ಹೋರಾಟವಾಗಿದೆ...." ಎಂದು ಅವರು ಬರೆದರು. "ಈ (ಶ್ರಮಜೀವಿ ವರ್ಗ) ಕ್ರಾಂತಿಯ ತಿರುಳು ಶ್ರಮಜೀವಿ ವರ್ಗ ಶಕ್ತಿಯ ಉಪಕರಣಗಳ ಸಹಾಯದಿಂದ ರಾಜ್ಯ ಶಕ್ತಿಯ ಉಪಕರಣಗಳನ್ನು ನಾಶಗೊಳಿಸುವು

ದಾಗಿದೆ, ವಿಲೀನಗೊಳಿಸುವು(Auflösung)ದಾಗಿದೆ (ಪು. 544). ಇದರ ಫಲವಾಗಿ ರಾಜ್ಯ ಸಂಘಟನೆಯು ಸಂಪೂರ್ಣವಾಗಿ ನಾಶಗೊಂಡಾಗಲಷ್ಟೆ ಹೋರಾಟ ನಿಲ್ಲುವುದು. ಆಗ ಬಹುಮತದ ಜನತೆಯ ಸಂಘಟನೆಯು ಆಳುವ ಅಲ್ಪಮತದ ಜನರ ಸಂಘಟನೆಯನ್ನು ನಾಶಗೊಳಿಸುವ ಮೂಲಕ ತನ್ನ ಉಚ್ಚತೆಯನ್ನು ಪ್ರದರ್ಶಿಸುವುದು." (ಪು. 548.)

ಪಾನ್ನೆಕೂಕ್‌ರವರು ತಮ್ಮ ವಿಚಾರಗಳನ್ನು ವಿಶದಗೊಳಿಸಿರುವ ಈ ನಿರೂಪಣೆಯು ಗಹನವಾದ ನ್ಯೂನತೆಗಳನ್ನು ಒಳಗೊಂಡಿದೆ. ಆದರೂ ಅದರ ಅರ್ಥ ಸ್ಪಷ್ಟವಾಗಿದೆ. ಕೌತ್‌ಸ್ಕಿಯವರು ಅದರ ವಿರುದ್ಧ ಹೇಗೆ ಹೋರಾಟ ನಡೆಸಿದರು ಎಂಬುದನ್ನು ಗಮನಿಸುವುದು ಸ್ವಾರಸ್ಯಕರವಾಗಿದೆ.

"ಇದುವರೆವಿಗೂ ಸೋಷಲ್ ಡೆಮೊಕ್ರಾಟರ ಮತ್ತು ಅರಾಜಕತಾವಾದಿಗಳ ನಡುವಿನ ವೈರುಧ್ಯವೆಂದರೆ, ಸೋಷಲ್ ಡೆಮೊಕ್ರಾಟರು ರಾಜ್ಯಾಧಿಕಾರವನ್ನು ಗಳಿಸಬಯಸಿದರೆ ಅರಾಜಕತಾವಾದಿಗಳು ಅದನ್ನು ಅಳಿಸ ಬಯಸುತ್ತಾರೆ ಎಂಬುದಾಗಿದೆ. ಪಾನ್ನೆಕೂಕ್‌ರು ಎರಡನ್ನೂ ಮಾಡಬಯಸುತ್ತಾರೆ" ಎಂದವರು ಬರೆದರು. (ಪು. 724.)

ಪಾನ್ನೆಕೂಕ್‌ರ ನಿರೂಪಣೆಯು ನಿಷ್ಕೃಷ್ಟತೆ ಹಾಗೂ ಸ್ಪಷ್ಟತೆಯನ್ನು ಹೊಂದಿಲ್ಲದಿದ್ದರೂ – ಅವರ ಲೇಖನದ ಇತರ ಕೊರತೆಗಳ ಬಗೆಗೆ ಹೇಳಬೇಕಾಗಿಲ್ಲ, ಅವು ಈಗಿನ ವಿಷಯಕ್ಕೆ ಅಪ್ರಸ್ತುತ – ಕೌತ್‌ಸ್ಕಿಯವರು ಪಾನ್ನೆಕೂಕ್‌ರು ಎತ್ತಿದ ವಿಷಯದ ಮುಖ್ಯಾಂಶವನ್ನೇ ಹಿಡಿದುಕೊಂಡರು ಮತ್ತು ಮೂಲಭೂತ ತಾತ್ವಿಕ ಪ್ರಶ್ನೆಗೆ ಸಂಬಂಧಿಸಿ ಕೌತ್‌ಸ್ಕಿಯವರು ಸಂಪೂರ್ಣವಾಗಿ ಮಾರ್ಕ್ಸ್‌ವಾದಿ ನಿಲುವನ್ನು ತೊರೆದು ಇಡೀಯಾಗಿ ಸಂದರ್ಭಸಾಧಕವಾದಕ್ಕೆ ಹೋಗಿಬಿಟ್ಟರು. ಸೋಷಲ್ ಡೆಮೊಕ್ರಾಟರ ಮತ್ತು ಅರಾಜಕತಾವಾದಿಗಳ ನಡುವಿನ ವ್ಯತ್ಯಾಸದ ಬಗೆಗೆ ಅವರ ನಿರೂಪಣೆಯು ಶುದ್ಧ ತಪ್ಪಾದುದಾಗಿದೆ; ಅವರು ಮಾರ್ಕ್ಸ್‌ವಾದವನ್ನು ಸಂಪೂರ್ಣವಾಗಿ ಪ್ರಾಕೃತಗೊಳಿಸಿದ್ದಾರೆ ಮತ್ತು ವಿರೂಪಗೊಳಿಸಿದ್ದಾರೆ.

ಮಾರ್ಕ್ಸ್‌ವಾದಿಗಳ ಮತ್ತು ಅರಾಜಕತಾವಾದಿಗಳ ನಡುವಿನ ವ್ಯತ್ಯಾಸವು ಈ ಕೆಳಗಿನದಾಗಿದೆ: (1) ಮಾರ್ಕ್ಸ್‌ವಾದಿಗಳು ರಾಜ್ಯವನ್ನು ಸಂಪೂರ್ಣವಾಗಿ ನಿರ್ಮೂಲಗೊಳಿಸುವುದನ್ನು ತಮ್ಮ ಗುರಿಯನ್ನಾಗಿ ಇಟ್ಟುಕೊಂಡಿರುವಾಗಲೇ, ಈ ಗುರಿಯನ್ನು ಸಮಾಜವಾದಿ ಕ್ರಾಂತಿಯು ವರ್ಗಗಳನ್ನು ನಿರ್ಮೂಲ ಮಾಡಿದನಂತರವಷ್ಟೆ ಸಾಧಿಸಲು ಸಾಧ್ಯ ಎಂಬುದನ್ನು ಮನ್ನಿಸುತ್ತಾರೆ. ಈ ಕ್ರಾಂತಿಯ ಫಲವಾಗಿ ಸಮಾಜವಾದದ ಸ್ಥಾಪನೆಯಾಗುತ್ತದೆ ಮತ್ತು ಅದು ರಾಜ್ಯವು ಕ್ಷಯಿಸಿಹೋಗುವುದಕ್ಕೆ ದಾರಿ ಮಾಡಿಕೊಡುತ್ತದೆ, ಎಂದವರು ಹೇಳುತ್ತಾರೆ. ಅರಾಜಕತಾವಾದಿಗಳು ರಾಜ್ಯವನ್ನು ಯಾವ ಪರಿಸ್ಥಿತಿಗಳಲ್ಲಿ ನಿರ್ಮೂಲಗೊಳಿಸಲು ಸಾಧ್ಯ ಎಂಬುದನ್ನು ಅರ್ಥಮಾಡಿ

ಕೊಳ್ಳದೆಯೇ ಅದನ್ನು ರಾತ್ರೋರಾತ್ರಿ ನಿರ್ಮೂಲಗೊಳಿಸಲು ಬಯಸುತ್ತಾರೆ. (2) ಮಾರ್ಕ್ಸ್‌ವಾದಿಗಳು ಶ್ರಮಜೀವಿ ವರ್ಗವು ರಾಜಕೀಯ ಅಧಿಕಾರವನ್ನು ಗಳಿಸಿ ಕೊಂಡನಂತರ ಹಳೆಯ ರಾಜ್ಯಯಂತ್ರವನ್ನು ಸಂಪೂರ್ಣವಾಗಿ ನಾಶಗೊಳಿಸಬೇಕು ಮತ್ತು ಅದರ ಸ್ಥಳದಲ್ಲಿ ಕಮ್ಯೂನ್ ಮಾದರಿಯ ಸಶಸ್ತ್ರ ಕಾರ್ಮಿಕರ ಸಂಘಟನೆ ಯಾಗಿರುವ ಹೊಸ ರಾಜ್ಯಯಂತ್ರವನ್ನು ಸ್ಥಾಪಿಸಬೇಕು ಎಂಬುದನ್ನು ಮನ್ನಿಸುತ್ತಾರೆ. ಅರಾಜಕತಾವಾದಿಗಳು ರಾಜ್ಯಯಂತ್ರವನ್ನು ನಾಶಗೊಳಿಸಬೇಕೆಂದು ಒತ್ತಿ ಹೇಳು ವಾಗಲೇ ಅದರ ಸ್ಥಳದಲ್ಲಿ ಶ್ರಮಜೀವಿ ವರ್ಗವು ಏನನ್ನು ಇರಿಸುತ್ತದೆ ಮತ್ತು ತನ್ನ ಕ್ರಾಂತಿಕಾರಿ ಅಧಿಕಾರವನ್ನು ಹೇಗೆ ಬಳಸುವುದು ಎಂಬ ಬಗೆಗೆ ತುಂಬ ಅಸ್ಪಷ್ಟ ಭಾವನೆಯನ್ನಷ್ಟೆ ಹೊಂದಿರುತ್ತಾರೆ. ಕ್ರಾಂತಿಕಾರಿ ಶ್ರಮಜೀವಿ ವರ್ಗವು ರಾಜ್ಯಾಧಿ ಕಾರವನ್ನು ಬಳಸಬೇಕು ಎಂಬುದನ್ನೂ ಅರಾಜಕತಾವಾದಿಗಳು ಅಲ್ಲಗಳೆಯುತ್ತಾರೆ, ಅವರು ಶ್ರಮಜೀವಿ ವರ್ಗದ ಕ್ರಾಂತಿಕಾರಿ ಸರ್ವಾಧಿಕಾರತ್ವವನ್ನು ತಿರಸ್ಕರಿಸುತ್ತಾರೆ. (3) ಮಾರ್ಕ್ಸ್‌ವಾದಿಗಳು ಪ್ರಸಕ್ತ ರಾಜ್ಯವನ್ನು ಬಳಸಿಕೊಂಡೇ ಶ್ರಮಜೀವಿ ವರ್ಗ ವನ್ನು ಕ್ರಾಂತಿಗಾಗಿ ತರಬೇತುಗೊಳಿಸಬೇಕು ಎಂದು ಕೇಳುತ್ತಾರೆ. ಅರಾಜಕತಾ ವಾದಿಗಳು ಇದನ್ನು ತಿರಸ್ಕರಿಸುತ್ತಾರೆ.

ಈ ವಿವಾದದಲ್ಲಿ ಮಾರ್ಕ್ಸ್‌ವಾದವನ್ನು ಪ್ರತಿನಿಧಿಸುವವರು ಕೌತ್‌ಸ್ಕಿಯವರಲ್ಲ ಆದರೆ ಪಾನ್ನೆಕೂಕ್‌ರು. ಏಕೆಂದರೆ ಹಳೆಯ ರಾಜ್ಯ ಸಾಧನವು ಹೊಸ ಕೈಗಳಿಗೆ ಹೋಗುತ್ತದೆ ಎಂಬ ಅರ್ಥದಲ್ಲಿ ಶ್ರಮಜೀವಿ ವರ್ಗವು ಸುಮ್ಮನೆ ರಾಜ್ಯಾಧಿಕಾರ ವನ್ನು ಗಳಿಸಿಕೊಳ್ಳಲಾರದು, ಆದರೆ ಆ ಸಾಧನವನ್ನು ತೊಡೆದು ಹಾಕಬೇಕು, ಅದನ್ನು ಇಲ್ಲದಂತೆ ಮಾಡಬೇಕು, ಅದರ ಸ್ಥಳದಲ್ಲಿ ಒಂದು ಹೊಸತನ್ನು ಸ್ಥಾಪಿಸಬೇಕು, ಎಂದು ಬೋಧಿಸಿದವರು ಮಾರ್ಕ್ಸ್‌ರವರೇ.

ಕೌತ್‌ಸ್ಕಿಯವರು ಮಾರ್ಕ್ಸ್‌ವಾದವನ್ನು ಬಿಟ್ಟುಕೊಟ್ಟು ಸಂದರ್ಭಸಾಧಕವಾದಿ ಶಿಬಿರ ಸೇರಿಕೊಳ್ಳುತ್ತಾರೆ, ಏಕೆಂದರೆ ರಾಜ್ಯಯಂತ್ರವನ್ನು ನಾಶಗೊಳಿಸುವ, ಸಂದರ್ಭ ಸಾಧಕವಾದಿಗಳಿಗೆ ಸಂಪೂರ್ಣವಾಗಿ ಅನಂಗೀಕೃತವಾದ, ಈ ವಿಚಾರವು ಅವರ ವಾದ ದಿಂದ ಸಂಪೂರ್ಣವಾಗಿ ಕಣ್ಮರೆಯಾಗುತ್ತದೆ. ಅಲ್ಲದೆ "ಗೆಲ್ಲುವುದು" ಎಂಬ ಪದವನ್ನು ಕೇವಲ ಬಹುಮತ ಗಳಿಸುವುದು ಎಂದು ವ್ಯಾಖ್ಯಾನ ಮಾಡಬಹುದು ಎಂದು ಹೇಳುವ ಮೂಲಕ ಅವರು ಸಂದರ್ಭಸಾಧಕವಾದಿಗಳಿಗೆ ತಪ್ಪಿಸಿಕೊಳ್ಳುವ ಉಪಾಯ ವನ್ನು ಬೇರೆ ಒದಗಿಸಿಕೊಟ್ಟಿದ್ದಾರೆ.

ಮಾರ್ಕ್ಸ್‌ವಾದವನ್ನು ಹೀಗೆ ವಿರೂಪಗೊಳಿಸಿರುವುದನ್ನು ಮರೆಮಾಚಲೋಸುಗ ಕೌತ್‌ಸ್ಕಿಯವರು ಶುಷ್ಕಪಂಡಿತರಂತೆ ವರ್ತಿಸುತ್ತಾರೆ: ಅವರು ಮಾರ್ಕ್ಸ್‌ರವರಿಂದಲೇ ಒಂದು "ಉದ್ಧರಣ"ವನ್ನು ನೀಡುತ್ತಾರೆ. 1850ರಲ್ಲಿ ಮಾರ್ಕ್ಸ್‌ರವರು "ರಾಜ್ಯಾಧಿ ಕಾರದ ಕೈಗಳಲ್ಲಿ ದೃಢ ಶಕ್ತಿ ಕೇಂದ್ರೀಕರಣ" ಅಗತ್ಯ ಎಂದು ಬರೆದರು.[103] ಇದನ್ನು

ಉದ್ಧರಿಸಿ ಕೌತ್‌ಸ್ಕಿ ವಿಜಯಾಟ್ಟಹಾಸದಿಂದ ಕೇಳುತ್ತಾರೆ: ಪಾನ್ನೆಕೂಕ್‌ರವರು "ಕೇಂದ್ರೀಕರಣ"ವನ್ನು ನಾಶಗೊಳಿಸಲು ಬಯಸುತ್ತಾರೆಯೆ?

ಇದು ಕೇವಲ ಒಂದು ಕುತಂತ್ರ – ಕೇಂದ್ರೀಕೃತ ವ್ಯವಸ್ಥೆಗೆ ವ್ಯತಿರೇಕವಾದ ಫೆಡರಲಿಸಂ (ಸಂಯುಕ್ತರಾಷ್ಟ್ರತತ್ವ) ಕುರಿತು ಮಾರ್ಕ್ಸ್‌ವಾದದ ಅಭಿಪ್ರಾಯಗಳನ್ನೂ ಪ್ರುದೋನ್‌ವಾದದ ಅಭಿಪ್ರಾಯಗಳನ್ನೂ ಬೆರ್ನ್‌ಷ್ಟೈನ್‌ರವರು ಒಂದೇ ಆಗಿ ನೋಡುವಂತೆ.

ಕೌತ್‌ಸ್ಕಿಯವರ "ಉದ್ಧರಣ"ವು ಸರ್ವಥಾ ಸಲ್ಲ. ಕೇಂದ್ರೀಕರಣವು ಹಳೆಯ ಹಾಗೂ ಹೊಸ ರಾಜ್ಯಯಂತ್ರಗಳೆರಡರಲ್ಲೂ ಸಾಧ್ಯ. ಕಾರ್ಮಿಕರು ಸ್ವಯಮೇಚ್ಛೆಯಿಂದ ತಮ್ಮ ಸಶಸ್ತ್ರ ಶಕ್ತಿಗಳನ್ನು ಒಂದುಗೂಡಿಸಿದರೆ ಅದು ಕೇಂದ್ರೀಕರಣವಾಗುವುದು. ಆದರೆ ಅದು ಕೇಂದ್ರೀಕೃತ ರಾಜ್ಯಯಂತ್ರವನ್ನು – ಸ್ಥಾಯಿಯಾ ಸೈನ್ಯ, ಪೊಲೀಸು ಹಾಗೂ ಅಧಿಕಾರಶಾಹಿಯನ್ನು – "ಸಂಪೂರ್ಣವಾಗಿ ನಾಶಗೊಳಿಸುವುದರ" ಮೇಲೆ ಆಧರಿಸಿರುತ್ತದೆ. ಕೌತ್‌ಸ್ಕಿಯವರು ಕಮ್ಯೂನ್‌ನ ಬಗೆಗೆ ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಹೇಳಿರುವ ಸುವಿದಿತ ವಾದಗಳನ್ನು ತಪ್ಪಿಸಿ, ಚರ್ಚಿಸುತ್ತಿರುವ ವಿಷಯಕ್ಕೆ ಎಷ್ಟು ಮಾತ್ರವೂ ಸಂಬಂಧವಿರದ ಒಂದು ಉದ್ಧರಣವನ್ನು ಕಿತ್ತು ನೀಡಿ, ಶುದ್ಧ ವಂಚಕರಂತೆ ವರ್ತಿಸಿದ್ದಾರೆ.

> "ಬಹುಶಃ ಅವರು (ಪಾನ್ನೆಕೂಕ್‌ರು) ಅಧಿಕಾರಿಗಳ ರಾಜ್ಯ ಕ್ರಿಯೆಗಳನ್ನು ನಿರ್ಮೂಲಗೊಳಿಸ ಬಯಸುತ್ತಾರೆಯೆ?" ಎಂದು ಕೌತ್‌ಸ್ಕಿ ಮುಂದುವರಿಯುತ್ತ ಬರೆಯುತ್ತಾರೆ. "ಆದರೆ ರಾಜ್ಯ ಆಡಳಿತಾಂಗ ಹೋಗಲಿ ಪಾರ್ಟಿ ಮತ್ತು ಟ್ರೇಡ್ ಯೂನಿಯನ್‌ಗಳಲ್ಲೂ ಸಹ ನಾವು ಅಧಿಕಾರಿಗಳಿಲ್ಲದೆ ಕೆಲಸ ಮಾಡಲಾರೆವು. ಮತ್ತೆ ನಮ್ಮ ಕಾರ್ಯಕ್ರಮವೂ ರಾಜ್ಯ ಅಧಿಕಾರಿಗಳನ್ನು ನಿರ್ಮೂಲ ಮಾಡಬೇಕು ಎಂದೇನೂ ಹೇಳುವುದಿಲ್ಲ. ಅವರು ಜನರಿಂದ ಆಯ್ಕೆಗೊಳ್ಳಬೇಕು, ಎಂದಷ್ಟೆ ಹೇಳುತ್ತದೆ.... ನಾವಿಲ್ಲಿ ಚರ್ಚಿಸುತ್ತಿರುವುದು 'ಭವಿಷ್ಯತ್ತಿನ ರಾಜ್ಯ'ದ ಆಡಳಿತಾಂಗ ಸಾಧನವು ಯಾವ ರೂಪ ತಳೆಯುವುದು ಎಂಬ ವಿಷಯವನ್ನಲ್ಲ. ಆದರೆ ನಮ್ಮ ರಾಜಕೀಯ ಹೋರಾಟವು ರಾಜ್ಯಾಧಿಕಾರವನ್ನು ನಾವು ಅದನ್ನು ವಶಪಡಿಸಿಕೊಳ್ಳುವ ಮುನ್ನವೇ ನಿರ್ಮೂಲಗೊಳಿಸುತ್ತದೆಯೆ (ಅಕ್ಷರಶಃ ವಿಲೀನಗೊಳಿಸುತ್ತದೆಯೇ – auflöst) ಎಂಬುದನ್ನು (ಅಡಿಗೆರೆ ಕೌತ್‌ಸ್ಕಿಯವರದೇ). ಯಾವ ಸಚಿವಾಲಯವನ್ನು ಅದರ ಅಧಿಕಾರಿಗಳೊಂದಿಗೆ ನಿರ್ಮೂಲಗೊಳಿಸಲು ಸಾಧ್ಯ?" ಅನಂತರ ಕೌತ್‌ಸ್ಕಿಯವರು ಶಿಕ್ಷಣ, ಕಾನೂನು, ಹಣಕಾಸು ಹಾಗೂ ಯುದ್ಧ ಸಚಿವಾಲಯಗಳ ಪಟ್ಟಿ ನೀಡಿದ್ದಾರೆ. "ಇಲ್ಲ, ಇಂದಿನ ಸಚಿವಾಲಯಗಳಲ್ಲಿ ಯಾವುದೊಂದನ್ನೂ ಸರ

ಕಾರದ ವಿರುದ್ಧ ನಾವು ನಡೆಸುವ ರಾಜಕೀಯ ಹೋರಾಟವು ತೆಗೆದು ಹಾಕುವುದಿಲ್ಲ.... ತಪ್ಪು ತಿಳಿವಳಿಕೆಯನ್ನು ತಪ್ಪಿಸಲೋಸುಗ ನಾನು ಮತ್ತೆ ಹೇಳುತ್ತೇನೆ: ನಾವಿಲ್ಲಿ ಚರ್ಚಿಸುತ್ತಿರುವುದು ವಿಜಯಿಯಾದ ಸೋಷಲ್ ಡೆಮೊಕ್ರಾಟರು 'ಭವಿಷ್ಯತ್ತಿನ ರಾಜ್ಯ'ಕ್ಕೆ ಯಾವ ರೂಪ ಕೊಡುತ್ತಾರೆ ಎಂಬುದನ್ನಲ್ಲ, ಆದರೆ ನಾವು ವಿರೋಧ ಪಕ್ಷವಾಗಿರುವುದರಿಂದ ಇಂದಿನ ರಾಜ್ಯವು ಹೇಗೆ ಬದಲುತ್ತದೆ ಎಂಬುದನ್ನು." (ಪು. 725.)

ಇದೊಂದು ಕುತಂತ್ರ ಎಂಬುದು ಸ್ವತಃಸಿದ್ಧ. ಪಾನ್ನೆಕೂಕ್‌ರು ಕ್ರಾಂತಿಯ ಪ್ರಶ್ನೆಯನ್ನು ಎತ್ತಿದರು. ಅವರ ಲೇಖನದ ಶೀರ್ಷಿಕೆಯೂ ಮೇಲೆ ಉದ್ಧರಿಸಿದ ಲೇಖನವಿಭಾಗಗಳೂ ಇದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. "ವಿರೋಧ ಪಕ್ಷ"ದ ಪ್ರಶ್ನೆಗೆ ದಾಟಿ ಹೋಗುತ್ತ ಕೌತ್‌ಸ್ಕಿಯವರು ಕ್ರಾಂತಿಕಾರಿ ದೃಷ್ಟಿಕೋನದ ಸ್ಥಳದಲ್ಲಿ ಸಂದರ್ಭ ಸಾಧಕವಾದಿ ದೃಷ್ಟಿಕೋನವನ್ನು ಇರಿಸುತ್ತಾರೆ. ಅವರು ಹೇಳುವುದರ ಅರ್ಥ ಹೀಗಿದೆ: ಇದೀಗ ನಾವು ವಿರೋಧ ಪಕ್ಷದಲ್ಲಿದ್ದೇವೆ; ಅಧಿಕಾರವನ್ನು ವಶಪಡಿಸಿಕೊಂಡನಂತರ ನಾವು ಏನಾಗುತ್ತೇವೆ ಅದನ್ನು ಮುಂದೆ ನೋಡೋಣ. ಕ್ರಾಂತಿ ಕಣ್ಮರೆಯಾಗಿದೆ! ಮತ್ತೆ ಸಂದರ್ಭಸಾಧಕವಾದಿಗಳಿಗೆ ಬೇಕಾದುದು ಸ್ಪಷ್ಟವಾಗಿ ಇದೇ ತಾನೆ.

ವಿವಾದದ ವಿಷಯ ವಿರೋಧ ಪಕ್ಷವೂ ಅಲ್ಲ, ಒಟ್ಟಿನಲ್ಲಿ ರಾಜಕೀಯ ಹೋರಾಟವೂ ಅಲ್ಲ, ಆದರೆ ಕ್ರಾಂತಿಯ ವಿಷಯ. ಕ್ರಾಂತಿ ಎಂದರೆ ಶ್ರಮಜೀವಿ ವರ್ಗವು "ಆಡಳಿತಾಂಗದ ಸಾಧನ"ವನ್ನು ಮತ್ತು ಇಡೀ ರಾಜ್ಯಯಂತ್ರವನ್ನು ನಾಶಗೊಳಿಸಬೇಕಾಗುತ್ತದೆ ಮತ್ತು ಅದರ ಸ್ಥಳದಲ್ಲಿ ಸಶಸ್ತ್ರ ಕಾರ್ಮಿಕರಿಂದ ರೂಪಿತವಾದ ಹೊಸ ತೊಂದನ್ನು ಸ್ಥಾಪಿಸಬೇಕಾಗುತ್ತದೆ. ಕೌತ್‌ಸ್ಕಿಯವರು "ಸಚಿವಾಲಯ"ಗಳಿಗೆ ಸಂಬಂಧಿಸಿ "ಅಂಧಶ್ರದ್ಧೆಯ ಗೌರವ" ತೋರುತ್ತಾರೆ; ಆದರೆ ಅವುಗಳ ಸ್ಥಳದಲ್ಲಿ ಪೂರ್ಣ ಹಾಗೂ ಸರ್ವ ಅಧಿಕಾರವುಳ್ಳ ಕಾರ್ಮಿಕ ಹಾಗೂ ಸೈನಿಕ ಡೆಪ್ಯೂಟಿಗಳ ಸೋವಿಯತ್‌ಗಳ ಅಡಿಯಲ್ಲಿ ಕೆಲಸ ಮಾಡುವ ತಜ್ಞರ ಸಮಿತಿಗಳನ್ನು ಏಕೆ ಸ್ಥಾಪಿಸಲು ಸಾಧ್ಯವಿಲ್ಲ?

ಮುಖ್ಯ ವಿಷಯ, "ಸಚಿವಾಲಯಗಳು" ಉಳಿಯುವುವೇ ಅಥವಾ ಅವುಗಳ ಸ್ಥಳದಲ್ಲಿ "ತಜ್ಞರ ಸಮಿತಿಗಳು" ಅಥವಾ ಮತ್ತಾವುದೇ ಸಂಸ್ಥೆಗಳು ಸ್ಥಾಪಿಸಲ್ಪಡುವುವೇ, ಎಂಬುದಲ್ಲವೇ ಅಲ್ಲ; ಅದು ತೀರ ಕ್ಷುಲ್ಲಕ. ಮುಖ್ಯ ವಿಷಯ, ಹಳೆಯ ರಾಜ್ಯಯಂತ್ರ (ಸಹಸ್ರಾರು ತಂತುಗಳಿಂದ ಬೂರ್ಷ್ವಾಸೀಗೆ ಹೆಣೆದುಕೊಂಡಿರುವ ಮತ್ತು ನಿತ್ಯಗಟ್ಟಳೆಯ ಕಾರ್ಯದಿಂದಲೂ ಜಡತ್ವದಿಂದಲೂ ಪರಿಪೂರಿತವಾಗಿರುವ ರಾಜ್ಯಯಂತ್ರ) ಉಳಿದುಕೊಂಡೇ ಇರಬೇಕೆ ಅಥವಾ ನಾಶಗೊಳಿಸಲ್ಪಟ್ಟು ಅದರ ಸ್ಥಳದಲ್ಲಿ ಒಂದು ಹೊಸತು ಸ್ಥಾಪಿತವಾಗಬೇಕೆ, ಎಂಬುದು. ಕ್ರಾಂತಿ ಇರುವುದು ಹೊಸ ವರ್ಗವು ಹಳೆಯ ರಾಜ್ಯಯಂತ್ರದ ನೆರವಿನಿಂದ ಅಧಿಕಾರ ಚಲಾಯಿಸುವುದರಲ್ಲಲ್ಲ, ಆಡಳಿತ ನಡೆಸುವುದರಲ್ಲಲ್ಲ, ಆದರೆ ಈ ವರ್ಗವು ಈ ಯಂತ್ರವನ್ನು

ತೊಡೆದು ಹಾಕಿ ಒಂದು ಹೊಸ ಯಂತ್ರದ ಸಹಾಯದಿಂದ ಅಧಿಕಾರ ಚಲಾಯಿಸುವುದರಲ್ಲಿ, ಆಡಳಿತ ನಡೆಸುವುದರಲ್ಲಿ. ಕೌತ್‌ಸ್ಕಿಯವರು ಮಾರ್ಕ್ಸ್‌ವಾದದ ಈ ಮೂಲ ವಿಚಾರವನ್ನು ತೇಲಿಸಿಬಿಡುತ್ತಾರೆ, ಅಥವಾ ಅವರು ಇದನ್ನು ಅರ್ಥಮಾಡಿಕೊಂಡೇ ಇಲ್ಲ.

ಅಧಿಕಾರಿಗಳ ಬಗೆಗೆ ಅವರ ಪ್ರಶ್ನೆಯು ಅವರು ಕಮ್ಯೂನ್‌ನ ಪಾಠಗಳನ್ನಾಗಲೀ ಮಾರ್ಕ್ಸ್‌ರವರ ಬೋಧನೆಗಳನ್ನಾಗಲೀ ಅರ್ಥಮಾಡಿಕೊಂಡಿಲ್ಲ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. "ಪಾರ್ಟಿ ಮತ್ತು ಟ್ರೇಡ್ ಯೂನಿಯನ್‌ಗಳಲ್ಲೂ ಸಹ ನಾವು ಅಧಿಕಾರಿಗಳಿಲ್ಲದೆ ಕೆಲಸ ಮಾಡಲಾರೆವು...."

ನಾವು ಬಂಡವಾಳವಾದದಡಿ, ಬೂರ್ಷ್ವಾಸೀಯ ಆಳ್ವಿಕೆಯಡಿ ಅಧಿಕಾರಿಗಳಿಲ್ಲದೆ ಕೆಲಸ ಮಾಡಲಾರೆವು. ಬಂಡವಾಳಶಾಹಿಯಿಂದ ಶ್ರಮಜೀವಿ ವರ್ಗವು ಮರ್ದನಕ್ಕೊಳಗಾಗಿರುತ್ತದೆ, ದುಡಿಯುವ ಜನರು ಗುಲಾಮಗಿರಿಗೊಳಗಾಗಿರುತ್ತಾರೆ. ಬಂಡವಾಳವಾದದಡಿ ಪ್ರಜಾಪ್ರಭುತ್ವವು ಕೂಲಿ ಗುಲಾಮಗಿರಿಯ ಎಲ್ಲ ಪರಿಸ್ಥಿತಿಗಳಿಂದಲೂ ಜನರ ಬಡತನ ಹಾಗೂ ಸಂಕಟಗಳಿಂದಲೂ ಪರಿಮಿತವಾಗಿರುತ್ತದೆ, ಸಂಕುಚಿತವಾಗಿರುತ್ತದೆ, ಕುಂಠಿತವಾಗಿರುತ್ತದೆ ಮತ್ತು ಭಂಗಗೊಂಡಿರುತ್ತದೆ. ನಮ್ಮ ರಾಜಕೀಯ ಸಂಘಟನೆಗಳ ಹಾಗೂ ಟ್ರೇಡ್ ಯೂನಿಯನ್‌ಗಳ ಕಾರ್ಯಕರ್ತರು ಬಂಡವಾಳವಾದದ ಪರಿಸ್ಥಿತಿಗಳಿಂದ ನೀತಿಭ್ರಷ್ಟರಾಗಿರುವುದಕ್ಕೆ – ಅಥವಾ ನೀತಿಭ್ರಷ್ಟರಾಗುವ ಒಲವು ತೋರುವುದಕ್ಕೆ – ಮತ್ತು ಅಧಿಕಾರಶಾಹಿಗಳಾಗುವ, ಅಂದರೆ ಜನರಿಂದ ಬೇರ್ಪಟ್ಟ ಹಾಗೂ ಜನರಿಗೂ ಮೇಲೆ ನಿಂತ ವಿಶೇಷಾಧಿಕಾರದ ವ್ಯಕ್ತಿಗಳಾಗುವ ಪ್ರವೃತ್ತಿಯನ್ನು ತೋರುವುದಕ್ಕೆ ಇದು, ಮತ್ತು ಇದೇ ಕಾರಣವಾಗಿದೆ.

ಅದೇ ಅಧಿಕಾರಶಾಹಿಯ ಸಾರವಾಗಿದೆ; ಬಂಡವಾಳಶಾಹಿಗಳಿಂದ ಆಸ್ತಿಯನ್ನು ವಶಪಡಿಸಿಕೊಳ್ಳುವವರೆಗೆ ಮತ್ತು ಬೂರ್ಷ್ವಾಸೀಯನ್ನು ಉರುಳಿಸುವವರೆಗೆ ಶ್ರಮಜೀವಿ ವರ್ಗದ ಕಾರ್ಯಕರ್ತರೂ ಸಹ ಅನಿವಾರ್ಯವಾಗಿ ಸ್ವಲ್ಪಮಟ್ಟಿಗೆ "ಅಧಿಕಾರಶಾಹೀಕೃತ"ಗೊಂಡಿರುತ್ತಾರೆ.

ಕೌತ್‌ಸ್ಕಿಯವರ ಪ್ರಕಾರ, ಚುನಾಯಿತ ಕಾರ್ಯಕರ್ತರು ಸಮಾಜವಾದದಡಿ ಉಳಿದುಕೊಂಡಿರುತ್ತಾರೆ, ಅಂತೆಯೇ ಅಧಿಕಾರಿಗಳೂ, ಅಂತೆಯೇ ಅಧಿಕಾರಶಾಹಿಯೂ ! ಇಲ್ಲೇ ಅವರು ತಪ್ಪು ಮಾಡಿರುವುದು. ಮಾರ್ಕ್ಸ್‌ರವರು ಕಮ್ಯೂನ್‌ನ ನಿದರ್ಶನಕ್ಕೆ ಉಲ್ಲೇಖ ಮಾಡುತ್ತ, ಸಮಾಜವಾದದಡಿ ಕಾರ್ಯಕರ್ತರು "ಅಧಿಕಾರಶಾಹಿಗಳಾಗಿ" ಇರುವುದಿಲ್ಲ, "ಅಧಿಕಾರಿಗಳಾಗಿ" ಇರುವುದಿಲ್ಲ. ಅಧಿಕಾರಿಗಳು ಚುನಾವಣೆಗೊಳ್ಳಬೇಕು ಎಂಬ ಸೂತ್ರದ ಜೊತೆಗೆ ಯಾವುದೇ ಕಾಲದಲ್ಲಿ ಅವರನ್ನು ಹಿಂದಕ್ಕೆ ಕರೆಯುವ ಸೂತ್ರವನ್ನೂ ಸಹ ಯಾವ ಪ್ರಮಾಣದಲ್ಲಿ ಜಾರಿಗೆ ತರಲಾಗುವುದೋ, ಸಂಬಳಗಳನ್ನು ಸರಾಸರಿ ಕಾರ್ಮಿಕ ಕೂಲಿ ಮಟ್ಟಕ್ಕೆ ಯಾವ ಪ್ರಮಾಣದಲ್ಲಿ ತಗ್ಗಿಸಲಾಗುವುದೋ ಮತ್ತು ಸಂಸದೀಯ ಸಂಸ್ಥೆಗಳ ಸ್ಥಳದಲ್ಲಿ "ಒಂದೇ ಕಾಲದಲ್ಲಿ ಕಾರ್ಯಾಂಗವೂ ಶಾಸ

ಕಾಂಗವೂ ಆದ ಕಾರ್ಯನಿರತ ಸಂಸ್ಥೆಗಳನ್ನು ಯಾವ ಪ್ರಮಾಣದಲ್ಲಿ ಸ್ಥಾಪಿಸಲಾಗುವುದೋ, ಆ ಪ್ರಮಾಣದಲ್ಲಿ ಕಾರ್ಯಕರ್ತರು "ಅಧಿಕಾರಶಾಹಿಗಳಾಗು"ವುದು, "ಅಧಿಕಾರಿಗಳಾಗು"ವುದು ನಿಲ್ಲುತ್ತದೆ.[104]

ವಾಸ್ತವವಾಗಿ ಪಾನ್ನೆಕೂಕ್‌ರ ವಿರುದ್ಧ ಕೌತ್‌ಸ್ಕಿಯವರ ಇಡೀ ವಾದವು, ಅದರಲ್ಲೂ ವಿಶೇಷವಾಗಿ ನಾವು ನಮ್ಮ ಪಾರ್ಟಿ ಹಾಗೂ ಟ್ರೇಡ್ ಯೂನಿಯನ್ ಸಂಘಟನೆಗಳಲ್ಲೂ ಅಧಿಕಾರಿಗಳಿಲ್ಲದೆ ಕೆಲಸ ಮಾಡಲಾರೆವು ಎಂಬ ಕೌತ್‌ಸ್ಕಿಯವರ ಅದ್ಭುತ ವಿಚಾರವು, ಒಟ್ಟಿನಲ್ಲಿ ಮಾರ್ಕ್ಸ್‌ವಾದದ ವಿರುದ್ಧ ಬೆರ್ನ್‌ಷ್ಟೈನ್‌ರ ಹಳೆಯ "ವಾದಗಳ" ಪುನರಾವೃತ್ತಿಯೇ ಆಗಿದೆ. 'ಸಮಾಜವಾದದ ಪೂರ್ವಾಧಾರಗಳು' ಎಂಬ ತತ್ವಭ್ರಷ್ಟ ಕೃತಿಯಲ್ಲಿ ಬೆರ್ನ್‌ಷ್ಟೈನ್‌ರು "ಪ್ರಾಕೃತ" ಪ್ರಜಾಪ್ರಭುತ್ವದ ವಿಚಾರಗಳ ವಿರುದ್ಧ ಹೋರಾಟ ನಡೆಸುತ್ತಾರೆ, ವಿಶಿಷ್ಟವಾದ ಅಧಿಕಾರಪತ್ರಗಳು, ಸಂಬಳವಿಲ್ಲದ ಅಧಿಕಾರಿಗಳು, ಅಸಮರ್ಥ ಕೇಂದ್ರ ಪ್ರಾತಿನಿಧಿಕ ಸಂಸ್ಥೆಗಳು ಇತ್ಯಾದಿಗಳನ್ನೊಳಗೊಂಡ "ನಿತ್ಯಸೈದ್ಧಾಂತಿಕ ಪ್ರಜಾತಂತ್ರವಾದ" ಎಂದು ಅವರು ಯಾವುದನ್ನು ಕರೆಯುತ್ತಾರೋ ಅದರ ವಿರುದ್ಧ ಹೋರಾಟ ನಡೆಸುತ್ತಾರೆ. ಈ "ಪ್ರಾಕೃತ" ಪ್ರಜಾಪ್ರಭುತ್ವವು ಯುಕ್ತವಲ್ಲದುದು ಎಂದು ಸಾಧಿಸಲು ಬೆರ್ನ್‌ಷ್ಟೈನ್‌ರು ವೆಬ್ ದಂಪತಿಗಳು ವ್ಯಾಖ್ಯಾನಿಸಿರುವಂತೆ ಬ್ರಿಟಿಷ್ ಟ್ರೇಡ್ ಯೂನಿಯನ್‌ಗಳ ಅನುಭವವನ್ನು ಉಲ್ಲೇಖಿಸುತ್ತಾರೆ.[105] "ಸಂಪೂರ್ಣ ಸ್ವಾತಂತ್ರ್ಯ"ದಲ್ಲಿ ಜರುಗಿದ ಎಪ್ಪತ್ತು ವರ್ಷಗಳ ಬೆಳವಣಿಗೆಯು ಟ್ರೇಡ್ ಯೂನಿಯನ್‌ಗಳಿಗೆ ಪ್ರಾಕೃತ ಪ್ರಜಾಪ್ರಭುತ್ವವು ನಿಷ್ಪ್ರಯೋಜಕವಾದುದು ಎಂದು ಮನವರಿಕೆ ಮಾಡಿಕೊಟ್ಟಿತು ಮತ್ತು ಅವು ಅದರ ಸ್ಥಳದಲ್ಲಿ ಸಾಮಾನ್ಯ ಪ್ರಜಾಪ್ರಭುತ್ವವನ್ನು, ಅಂದರೆ ಅಧಿಕಾರಶಾಹಿಯೊಂದಿಗೆ ಕೂಡಿದ ಸಂಸದೀಯತೆಯನ್ನು, ಸ್ಥಾಪಿಸಿದವು, ಎಂದು ಅವರು ಹೇಳುತ್ತಾರೆ (ಪು. 137, ಜರ್ಮನ್ ಆವೃತ್ತಿ).

ವಾಸ್ತವವಾಗಿ ಟ್ರೇಡ್ ಯೂನಿಯನ್‌ಗಳು "ಸಂಪೂರ್ಣ ಸ್ವಾತಂತ್ರ್ಯ"ದಲ್ಲಿ ಬೆಳೆಯಲಿಲ್ಲ, ಆದರೆ ಸಂಪೂರ್ಣ ಬಂಡವಾಳಶಾಹಿ ಗುಲಾಮಗಿರಿಯಲ್ಲಿ ಬೆಳೆದವು. ಇದರಡಿಯಲ್ಲಿ ಚಾಲ್ತಿಯಲ್ಲಿರುವ ಕೇಡು, ಹಿಂಸೆ, ಕಪಟ, ಬಡವರನ್ನು "ಉನ್ನತ" ಆಡಳಿತದ ವ್ಯವಹಾರಗಳಿಂದ ಹೊರಗಿರಿಸುವುದು, ಇವುಗಳಿಗೆ ಅನೇಕ ರಿಯಾಯಿತಿಗಳನ್ನು "ನೀಡದೆ ವಿಧಿಯೇ ಇಲ್ಲ" ಎಂದು ಬೇರೆ ಹೇಳಬೇಕಾಗಿಲ್ಲ. ಸಮಾಜವಾದದಡಿ "ಪ್ರಾಕೃತ" ಪ್ರಜಾಪ್ರಭುತ್ವದ ಬಹ್ವಂಶಗಳನ್ನು ಅನಿವಾರ್ಯವಾಗಿ ಪುನರುಜ್ಜೀವನಗೊಳಿಸಲಾಗುವುದು; ಏಕೆಂದರೆ, ನಾಗರಿಕ ಸಮಾಜದ ಇತಿಹಾಸದಲ್ಲೇ ಮೊದಲ ಬಾರಿಗೆ ಜನ ಸಮೂಹವು ಮತನೀಡಿಕೆಯಲ್ಲಿ ಮತ್ತು ಚುನಾವಣೆಗಳಲ್ಲಷ್ಟೆ ಅಲ್ಲ ರಾಜ್ಯದ ದೈನಂದಿನ ಕಾರ್ಯನಿರ್ವಹಣೆಯಲ್ಲೂ ಸಹ ಸ್ವತಂತ್ರ ಪಾತ್ರ ನಿರ್ವಹಿಸುವ ಮಟ್ಟಕ್ಕೆ ಏರಲಿರುವುದು. ಸಮಾಜವಾದದಡಿ ಎಲ್ಲರೂ ಸರದಿಯಲ್ಲಿ ಅಧಿಕಾರ

ನಡೆಸುವರು ಮತ್ತು ಯಾರೂ ಅಧಿಕಾರ ನಡೆಸದೆ ಇರುವ ಸ್ಥಿತಿಗೆ ಬೇಗನೆಯೇ ಒಗ್ಗಿ ಹೋಗುವರು.

ಮಾರ್ಕ್ಸ್‌ರವರ ವಿಮರ್ಶಕ-ವಿಶ್ಲೇಷಕ ಪ್ರತಿಭೆಯು ಕಮ್ಯೂನ್‌ನ ಪ್ರಾಯೋಗಿಕ ಕ್ರಮಗಳಲ್ಲಿ ಒಂದು ತಿರುವನ್ನು ಕಂಡುಕೊಂಡಿತು. ಸಂದರ್ಭಸಾಧಕವಾದಿಗಳು ತಮ್ಮ ಅಂಜುಕುಳಿತನದಿಂದಾಗಿ ಈ ತಿರುವನ್ನು ಮನ್ನಿಸಲು ಹೆದರುತ್ತಾರೆ ಮತ್ತು ಮನ್ನಿಸ ಬಯಸುವುದಿಲ್ಲ, ಏಕೆಂದರೆ, ಅವರು ಬೂರ್ಷ್ವಾಸೀಯೊಂದಿಗೆ ಸಂಪೂರ್ಣವಾಗಿ ಸಂಬಂಧ ಕಡಿದುಕೊಳ್ಳಲು ಇಚ್ಛಿಸುವುದಿಲ್ಲ. ಅರಾಜಕತಾವಾದಿಗಳೂ ಈ ತಿರುವನ್ನು ಕಾಣಬಯಸುವುದಿಲ್ಲ, ಏಕೆಂದರೆ ಅವರು ಅವಸರದಲ್ಲಿರುತ್ತಾರೆ, ಇಲ್ಲವೇ ಭಾರಿ ಸಾಮಾಜಿಕ ಬದಲಾವಣೆಗಳ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳರು. "ನಾವು ಹಳೆಯ ರಾಜ್ಯಯಂತ್ರವನ್ನು ನಾಶಗೊಳಿಸಬೇಕೆಂದು ಯೋಚನೆಯನ್ನೂ ಮಾಡಕೂಡದು; ಸಚಿವಾಲಯಗಳೂ ಅಧಿಕಾರಿಗಳೂ ಇಲ್ಲದೆ ನಾವು ಹೇಗೆ ಕೆಲಸ ಮಾಡಲು ಸಾಧ್ಯ?" ಎಂದು ಸಂದರ್ಭಸಾಧಕವಾದಿಯು ವಾದಿಸುತ್ತಾನೆ. ಇವನು ಸಂಕುಚಿತವಾದದಿಂದ ಪರಿಪೂರಿತವಾಗಿದ್ದಾನೆ. ಇವನು ಹೃದಯದಾಳದಲ್ಲಿ ಕ್ರಾಂತಿಯನ್ನು, ಕ್ರಾಂತಿಯ ಸೃಜನಾತ್ಮಕ ಶಕ್ತಿಯನ್ನು ನಂಬುವುದಿಲ್ಲವಷ್ಟೆ ಅಲ್ಲ, ಅದರ ಬಗೆಗೆ ಅತ್ಯಂತ ಭೀತಿಯನ್ನು ಹೊಂದಿರುತ್ತಾನೆ (ನಮ್ಮ ಮೆನ್ಷೆವಿಕರು ಮತ್ತು ಸಮಾಜವಾದಿ-ಕ್ರಾಂತಿಕಾರಿಗಳಂತೆ).

"ಹಳೆಯ ರಾಜ್ಯಯಂತ್ರವನ್ನು ನಾಶ ಮಾಡುವ ಬಗೆಗಷ್ಟೆ ನಾವು ಯೋಚಿಸ ಬೇಕು; ಈ ಮುನ್ನಿನ ಶ್ರಮಜೀವಿ ವರ್ಗ ಕ್ರಾಂತಿಗಳ ನಿರ್ದಿಷ್ಟ ಪಾಠಗಳನ್ನು ಒಳ ಹೊಕ್ಕು ಶೋಧಿಸುವುದರಲ್ಲಿ ಮತ್ತು ನಾಶಗೊಳಿಸಲಾದುದರ ಸ್ಥಳದಲ್ಲಿ ಏನನ್ನು ಇರಿಸಬೇಕು, ಹೇಗೆ ಇರಿಸಬೇಕು ಎಂದು ವಿಶ್ಲೇಷಿಸುವುದರಲ್ಲಿ ಪ್ರಯೋಜನವಿಲ್ಲ" ಎಂದು ಅರಾಜಕತಾವಾದಿ (ಅರಾಜಕತಾವಾದಿಗಳಲ್ಲಿ ಅತ್ಯುತ್ತಮನೆನ್ನಿ, ಕ್ರೊಪೋಟ್ಕಿನ್ ಮತ್ತು ಸಂಗಡಿಗರನ್ನು ಅನುಸರಿಸುತ್ತ ಬೂರ್ಷ್ವಾಸೀಯ ಬಾಲ ಹಿಡಿದು ಹೊರ ಟಿರುವವನಲ್ಲ) ವಾದಿಸುತ್ತಾನೆ. ತತ್ಫಲವಾಗಿ, ಸಾಮೂಹಿಕ ಚಳವಳಿಯ ಪ್ರಾಯೋ ಗಿಕ ಪರಿಸ್ಥಿತಿಗಳನ್ನು ಗಣನೆಗೆ ತಂದುಕೊಳ್ಳುವಾಗಲೇ ನಿರ್ದಿಷ್ಟ ಸಮಸ್ಯೆಗಳನ್ನು ಪರಿಹರಿಸಲು ನಿರ್ದಾಕ್ಷಿಣ್ಯದ ದಿಟ್ಟತನದ ಕ್ರಾಂತಿಕಾರಿ ಯತ್ನ ಮಾಡುವ ಬದಲು ಅರಾಜಕತಾವಾದಿಯ ತಂತ್ರಗಳು ಹತಾಶೆಯ ತಂತ್ರಗಳಾಗುತ್ತವೆ.

ಈ ಎರಡು ತಪ್ಪುಗಳನ್ನೂ ಮಾಡದಿರುವಂತೆ ಮಾರ್ಕ್ಸ್ ನಮಗೆ ಬೋಧಿ ಸುತ್ತಾರೆ; ಹಳೆಯ ಇಡೀ ರಾಜ್ಯಯಂತ್ರವನ್ನು ನಾಶಗೊಳಿಸುವುದರಲ್ಲಿ ಅತ್ಯಂತ ಹೆಚ್ಚಿನ ದಿಟ್ಟತನದೊಂದಿಗೆ ವರ್ತಿಸಬೇಕೆಂದು ಅವರು ನಮಗೆ ಬೋಧಿಸುತ್ತಾರೆ ಮತ್ತು ಅದೇ ಹೊತ್ತಿನಲ್ಲಿ ವಿಷಯವನ್ನು ಸ್ಪಷ್ಟವಾಗಿ ಹೇಗೆ ಪರಿಶೀಲಿಸಬೇಕೆಂದು ಬೋಧಿಸುತ್ತಾರೆ: ಕಮ್ಯೂನ್ ಕೆಲವೇ ವಾರಗಳ ಅವಧಿಯಲ್ಲಿ ಹೆಚ್ಚು ವಿಸ್ತೃತವಾದ ಪ್ರಜಾಪ್ರಭುತ್ವವನ್ನು ಒದಗಿಸಲು ಮತ್ತು ಅಧಿಕಾರಶಾಹಿಯನ್ನು ಮೂಲೋತ್ಪಾ ಟನ ಮಾಡಲು ಇಂಥ ಇಂಥ ಕ್ರಮಗಳನ್ನು ಜಾರಿಗೆ ತರುವ ಮೂಲಕ ಒಂದು ಹೊಸ

ಶ್ರಮಜೀವಿ ವರ್ಗ ರಾಜ್ಯಯಂತ್ರದ ನಿರ್ಮೂಲನವನ್ನು ಪ್ರಾರಂಭಿಸಲು ಸಮರ್ಥವಾಯಿತು. ಕಮ್ಯೂನಾರ್ಡರಿಂದ ಕ್ರಾಂತಿಕಾರಿ ದಿಟ್ಟತನವನ್ನು ಕಲಿಯೋಣ; ಅವರ ಪ್ರಾಯೋಗಿಕ ಕ್ರಮಗಳಲ್ಲಿ ನಿಜಕ್ಕೂ ತುರ್ತಿನ ಹಾಗೂ ತಕ್ಷಣ ಸಾಧ್ಯವಾದ ಕ್ರಮಗಳ ರೂಪುರೇಷೆಗಳನ್ನು ಕಂಡುಕೊಳ್ಳೋಣ; ಅನಂತರ ಈ ಮಾರ್ಗವನ್ನು ಅನುಸರಿಸುತ್ತ ನಾವು ಅಧಿಕಾರಶಾಹಿಯ ಸಂಪೂರ್ಣವಿನಾಶವನ್ನು ಸಾಧಿಸೋಣ.

ಸಮಾಜವಾದವು ಕೆಲಸದ ದಿನವನ್ನು ಕಿರಿದು ಮಾಡುವುದು, ಜನರನ್ನು ನವ ಬಾಳಿಗೆ ಏರಿಸುವುದು, ಯಾರೊಬ್ಬರ ವಿನಾಯಿತಿಯೂ ಇಲ್ಲದೆ ಎಲ್ಲರೂ "ರಾಜ್ಯ ಕಾರ್ಯ"ಗಳನ್ನು ನೆರವೇರಿಸುವಂಥ ಪರಿಸ್ಥಿತಿಗಳನ್ನು ಜನತೆಯ ಬಹುಮತದವರಿಗೆ ಸೃಜಿಸಿಕೊಡುವುದು ಮತ್ತು ಇದು ಒಟ್ಟಿನಲ್ಲಿ ರಾಜ್ಯದ ಪ್ರತಿಯೊಂದೂ ರೂಪವು ಸಂಪೂರ್ಣವಾಗಿ ಕ್ಷಯಿಸಿಹೋಗುವುದಕ್ಕೆ ದಾರಿಮಾಡಿಕೊಡುವುದು, ಎಂಬ ಸತ್ಯ ಸಂಗತಿಯು ಈ ವಿನಾಶದ ಸಾಧ್ಯತೆಗೆ ಖಾಚಿತ್ಯ ನೀಡುತ್ತದೆ.

> "ಸಾಮೂಹಿಕ ಮುಷ್ಕರದ ಗುರಿಯು ರಾಜ್ಯಾಧಿಕಾರವನ್ನು ನಾಶಗೊಳಿಸುವುದು ಆಗಿರಲಾರದು" ಎಂದು ಕೌತ್ಸ್ಕಿ ಮುಂದುವರಿಯುತ್ತ ಬರೆಯುತ್ತಾರೆ. "ಅದರ ಒಂದೇ ಗುರಿ ಕೆಲವು ವಿಶಿಷ್ಟ ವಿಷಯಗಳಿಗೆ ಸಂಬಂಧಿಸಿ ಸರಕಾರವನ್ನು ಒಪ್ಪಿಕೊಳ್ಳುವಂತೆ ಮಾಡುವುದಾಗಿರಬಲ್ಲುದು, ಅಥವಾ ಶ್ರಮಜೀವಿ ವರ್ಗಕ್ಕೆ ಶತ್ರುವಾದ ಸರಕಾರದ ಸ್ಥಳದಲ್ಲಿ ಅದರೊಂದಿಗೆ ಒಪ್ಪಂದಕ್ಕೆ ಬರಲು ಸಿದ್ಧವಿರುವಂಥ (entgegenkommende) ಸರಕಾರವನ್ನು ಸ್ಥಾಪಿಸುವುದು ಆಗಿರಬಲ್ಲುದು.... ಆದರೆ ಎಂದೂ, ಯಾವ ಪರಿಸ್ಥಿತಿಗಳಲ್ಲೇ ಆಗಲಿ, ಅದು (ಅಂದರೆ ಶತ್ರು ಸರಕಾರದ ಮೇಲೆ ಶ್ರಮಜೀವಿ ವರ್ಗದ ವಿಜಯವು) ರಾಜ್ಯಾಧಿಕಾರ ಯಂತ್ರವನ್ನು ನಾಶಗೊಳಿಸುವುದಕ್ಕೆ ದಾರಿ ಮಾಡಿಕೊಡಲಾರದು; ಅದು ಆ ಯಂತ್ರದೊಳಗೆ ಶಕ್ತಿಗಳ ಬಲಾಬಲದಲ್ಲಿ ಒಂದಿಷ್ಟು ವರ್ಗಾವಣೆಗೆ (Verschiebung) ಅಷ್ಟೆ ದಾರಿ ಮಾಡಿಕೊಡಬಲ್ಲುದು.... ನಮ್ಮ ರಾಜಕೀಯ ಹೋರಾಟದ ಗುರಿ ಹಿಂದಿದ್ದಂತೆಯೇ ಪಾರ್ಲಿಮೆಂಟಿನಲ್ಲಿ ಬಹುಮತ ಗಳಿಸುವ ಮೂಲಕ ಮತ್ತು ಪಾರ್ಲಿಮೆಂಟನ್ನು ಸರಕಾರದ ಒಡೆಯನ ಮಟ್ಟಕ್ಕೆ ಏರಿಸುವ ಮೂಲಕ ರಾಜ್ಯಾಧಿಕಾರವನ್ನು ಗೆಲ್ಲುವುದಾಗಿಯೇ ಇದ್ದುಕೊಂಡಿರುವುದು." (ಪು. 726, 727, 732.)

ಇದು ಶುದ್ಧಾಂಗ ಹಾಗೂ ಅತ್ಯಂತ ಪ್ರಾಕೃತ ಸಂದರ್ಭಸಾಧಕವಾದವಲ್ಲದೆ ಬೇರೇನೂ ಅಲ್ಲ: ಕ್ರಾಂತಿಯನ್ನು ಆಚರಣೆಯಲ್ಲಿ ತಿರಸ್ಕರಿಸಿ ಮಾತಿನಲ್ಲಿ ಮನ್ನಿಸುವುದು. ಕೌತ್ಸ್ಕಿಯವರ ಆಲೋಚನೆಗಳು "ಶ್ರಮಜೀವಿ ವರ್ಗದೊಂದಿಗೆ ಒಪ್ಪಂದಕ್ಕೆ ಬರಲು ಸಿದ್ಧವಿರುವ... ಸರಕಾರ"ಕ್ಕಿಂತ ಹೆಚ್ಚು ದೂರ ಹೋಗುವುದಿಲ್ಲ. "ಆಳುವ

ವರ್ಗವಾಗಿ ಶ್ರಮಜೀವಿ ವರ್ಗವನ್ನು ಸಂಘಟಿಸುವುದು" ಎಂದು 1847ರಲ್ಲಿ 'ಕಮ್ಯೂನಿಸ್ಟ್ ಪ್ರಣಾಳಿಕೆ' ಘೋಷಿಸಿದು[106]ದಕ್ಕೆ ಹೋಲಿಸಿದಂತೆ ಇದು ಸಂಕುಚಿತವಾದಕ್ಕೆ ಒಂದು ಹೆಜ್ಜೆ ಹಿಂದೆ ಆಗಿದೆ.

ಕೌತ್‌ಸ್ಕಿಯವರು ತಮ್ಮ ಪ್ರೀತಿಪಾತ್ರವಾದ "ಐಕ್ಯತೆ"ಯನ್ನು ಷೈದೆಮನ್‌ಗಳು, ಪ್ಲೆಹಾನೊವ್‌ಗಳು ಮತ್ತು ವಾಂದೆರ್‌ವೆಲ್ದ್‌ಗಳೊಂದಿಗೆ ಸಾಧಿಸಿಕೊಳ್ಳಬೇಕಾಗಿದೆ. ಇವರೆಲ್ಲರೂ "ಶ್ರಮಜೀವಿ ವರ್ಗದೊಂದಿಗೆ ಒಪ್ಪಂದಕ್ಕೆ ಬರಲು ಸಿದ್ಧವಿರುವ" ಸರಕಾರಕ್ಕಾಗಿ ಹೋರಾಡಲು ಒಪ್ಪುವವರೇ ಆಗಿದ್ದಾರೆ.

ಆದರೆ ನಾವು ಸಮಾಜವಾದಕ್ಕೆ ದ್ರೋಹ ಬಗೆಯುವ ಈ ಜನರೊಂದಿಗೆ ಸಂಬಂಧ ಕಡಿದುಕೊಳ್ಳುವೆವು. ನಾವು ಹಳೆಯ ರಾಜ್ಯಯಂತ್ರದ ಸಂಪೂರ್ಣ ವಿನಾಶಕ್ಕಾಗಿ, ಸಶಸ್ತ್ರ ಶ್ರಮಜೀವಿ ವರ್ಗವೇ ಸರಕಾರವಾಗಿ ಆಗಲೆಂದು, ಹೋರಾಡುವೆವು. ಇವೆರಡೂ ತುಂಬ ಭಿನ್ನವಾದ ವಿಷಯಗಳಾಗಿವೆ.

ಕೌತ್‌ಸ್ಕಿಯವರು ಲೇಗೀನ್‌ಗಳ ಹಾಗೂ ದಾವೀದ್‌ಗಳ, ಪ್ಲೆಹಾನೊವ್‌ಗಳ, ಪೊತ್ರೇಸೊವ್‌ಗಳ, ತ್ಸೆರೆತೇಲಿಗಳ ಹಾಗೂ ಚೆರ್ನೋವ್‌ಗಳ ಸಂತಸದ ಸಾಂಗತ್ಯವನ್ನು ಆನಂದಿಸಬೇಕಷ್ಟೆ. ಇವರೆಲ್ಲರೂ "ರಾಜ್ಯಾಧಿಕಾರ ಯಂತ್ರದೊಳಗೆ ಶಕ್ತಿಗಳ ಬಲಾಬಲವನ್ನು ವರ್ಗಾಯಿಸುವುದಕ್ಕಾಗಿ," "ಪಾರ್ಲಿಮೆಂಟಿನಲ್ಲಿ ಬಹುಮತ ಗಳಿಸುವುದಕ್ಕಾಗಿ" ಮತ್ತು "ಪಾರ್ಲಿಮೆಂಟನ್ನು ಸರಕಾರದ ಒಡೆಯನ ಮಟ್ಟಕ್ಕೆ ಏರಿಸುವುದಕ್ಕಾಗಿ" ಶ್ರಮಿಸಲು ತುಂಬ ಸಿದ್ಧವಾಗಿದ್ದಾರೆ. ಇದೊಂದು ಅತ್ಯಂತ ಯೋಗ್ಯವಾದ ಗುರಿಯೇ, ಸಂದರ್ಭಸಾಧಕವಾದಿಗಳಿಗೆ ಸಂಪೂರ್ಣವಾಗಿ ಅಂಗೀಕಾರಾರ್ಹವಾದ ಗುರಿ, ಎಲ್ಲವನ್ನೂ ಬೂರ್ಷ್ವಾ ಸಂಸದೀಯ ಗಣತಂತ್ರದ ಮಿತಿಗಳೊಳಗೇ ಇರಿಸುವಂತಹ ಗುರಿ.

ಆದರೆ ನಾವು ಈ ಸಂದರ್ಭಸಾಧಕವಾದಿಗಳೊಂದಿಗೆ ಸಂಬಂಧ ಕಡಿದುಕೊಳ್ಳುವೆವು; ಮತ್ತೆ ಹೋರಾಟದಲ್ಲಿ ಇಡೀ ವರ್ಗಜಾಗೃತ ಶ್ರಮಜೀವಿ ವರ್ಗವು ನಮ್ಮೊಂದಿಗಿರುವುದು. ಈ ಹೋರಾಟವು "ಶಕ್ತಿಗಳ ಬಲಾಬಲವನ್ನು ವರ್ಗಾಯಿಸುವ" ಹೋರಾಟವಾಗಿರುವುದಿಲ್ಲ, ಆದರೆ ಬೂರ್ಷ್ವಾಸೀಯನ್ನು ಉರುಳಿಸುವ, ಬೂರ್ಷ್ವಾ ಸಂಸತ್ ವ್ಯವಸ್ಥೆಯನ್ನು ನಾಶಗೊಳಿಸುವ, ಕಮ್ಯೂನ್ ಮಾದರಿಯ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಅಥವಾ ಕಾರ್ಮಿಕರ ಹಾಗೂ ಸೈನಿಕರ ಡೆಪ್ಯೂಟಿಗಳ ಸೋವಿಯತ್‌ಗಳ ಗಣತಂತ್ರವನ್ನು ಸ್ಥಾಪಿಸುವ, ಶ್ರಮಜೀವಿ ವರ್ಗದ ಕ್ರಾಂತಿಕಾರಿ ಸರ್ವಾಧಿಕಾರತ್ವವನ್ನು ಸ್ಥಾಪಿಸುವ, ಹೋರಾಟವಾಗಿರುವುದು.

* * *

ಅಂತರರಾಷ್ಟ್ರೀಯ ಸಮಾಜವಾದದಲ್ಲಿ ಕೌತ್‌ಸ್ಕಿಯವರಿಗಿಂತ ಹೆಚ್ಚು ಬಲಪಂಥದಲ್ಲಿ ಈ ಕೆಳಗಿನಂಥ ಪ್ರವೃತ್ತಿಗಳಿವೆ: ಜರ್ಮನಿಯಲ್ಲಿನ 'ಸಮಾಜವಾದಿ ಮಾಸ

ಪತ್ರಿಕೆ'[107] (ಸ್ಕಾಂಡಿನೇವಿಯನ್ನರಾದ ಸ್ಟೌನಿಂಗ್ ಹಾಗೂ ಬ್ರಾಂಟಿಂಗ್‌ರನ್ನೊಳಗೊಂಡ, ಲೇಗೀನ್, ದಾವೀದ್, ಕೊಲ್ಬ್ ಮತ್ತಿತರರ ಗುಂಪು); ಫ್ರಾನ್ಸ್ ಮತ್ತು ಬೆಲ್ಜಿಯಂಗಳಲ್ಲಿ ಜೊರೇಸ್‌ವಾದಿಗಳು[108] ಮತ್ತು ವಾಂದೆರ್‌ವೆಲ್ದೆ, ಇಟಾಲಿಯನ್ ಪಾರ್ಟಿಯ ತುರಾತಿ, ತ್ರೆವೆಸ್ ಮತ್ತಿತರ ಬಲಪಂಥದವರು; ಬ್ರಿಟನ್‌ನಲ್ಲಿ ಫೇಬಿಯನ್ನರು[109] ಮತ್ತು "ಸ್ವತಂತ್ರರು" (ಇಂಡಿಪೆಂಡೆಂಟ್ ಲೇಬರ್ ಪಾರ್ಟಿ[110]; ಇದು ವಾಸ್ತವವಾಗಿ ಯಾವತ್ತೂ ಉದಾರವಾದಿಗಳ ಮೇಲೆ ಅವಲಂಬಿಸಿಕೊಂಡಿದೆ), ಇಂಥವೇ ಜನರು ಸಂಸದೀಯ ಕಾರ್ಯದಲ್ಲೂ ತಮ್ಮ ಪಾರ್ಟಿಗಳ ಪತ್ರಿಕಾ ಕ್ಷೇತ್ರದಲ್ಲೂ ಪ್ರಚಂಡವಾದ ಮತ್ತು ತುಂಬ ಆಗಾಗ್ಗೆ ಪ್ರಧಾನವಾದ ಪಾತ್ರ ನಿರ್ವಹಿಸುವ ಈ ಎಲ್ಲ ಸಭ್ಯರೂ ಶ್ರಮಜೀವಿ ವರ್ಗದ ಸರ್ವಾಧಿಕಾರತ್ವವನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಾರೆ ಮತ್ತು ಮುಚ್ಚುಮರೆ ಇಲ್ಲದ ಸಂದರ್ಭ ಸಾಧಕವಾದದ ನೀತಿಯನ್ನು ಅನುಸರಿಸುತ್ತಾರೆ. ಈ ಸಭ್ಯರ ದೃಷ್ಟಿಯಲ್ಲಿ ಶ್ರಮಜೀವಿ ವರ್ಗದ "ಸರ್ವಾಧಿಕಾರತ್ವ"ವು ಪ್ರಜಾಪ್ರಭುತ್ವಕ್ಕೆ "ವಿರುದ್ಧ"ವಾಗಿರುತ್ತದೆ!! ಇವರಿಗೂ ಪೆಟಿ ಬೂರ್ಷ್ವಾ ಪ್ರಜಾಪ್ರಭುತ್ವವಾದಿಗಳಿಗೂ ಮಧ್ಯೆ ಯಾವ ಸಾರಭೂತ ವ್ಯತ್ಯಾಸವೂ ಇಲ್ಲ.

ಈ ಸಂದರ್ಭವನ್ನು ಗಣನೆಗೆ ತಂದುಕೊಂಡು ನಾವು ದ್ವಿತೀಯ ಇಂಟರ್‌ನ್ಯಾಷನಲ್, ಅಂದರೆ ಅದರ ಅಧಿಕೃತ ಪ್ರತಿನಿಧಿಗಳಲ್ಲಿ ಅತಿಹೆಚ್ಚಿನ ಬಹುಮತದವರು, ಸಂಪೂರ್ಣವಾಗಿ ಸಂದರ್ಭಸಾಧಕವಾದದಲ್ಲಿ ಮುಳುಗಿದ್ದಾರೆ ಎಂಬ ತೀರ್ಮಾನಕ್ಕೆ ಬರುವುದು ಸಮರ್ಥನೀಯವಾಗಿದೆ. ಕಮ್ಯೂನ್‌ನ ಅನುಭವವನ್ನು ಉಪೇಕ್ಷಿಸಲಾಗಿದೆಯಷ್ಟೆ ಅಲ್ಲ, ಅದನ್ನು ವಿರೂಪಗೊಳಿಸಲಾಗಿದೆ. ಹಳೆಯ ರಾಜ್ಯಯಂತ್ರವನ್ನು ತೊಡೆದು ಹಾಕಿ ಅದರ ಸ್ಥಳದಲ್ಲಿ ಹೊಸತೊಂದನ್ನು ಸ್ಥಾಪಿಸಿ ಆ ರೀತಿ ತಮ್ಮ ರಾಜಕೀಯ ಆಳ್ವಿಕೆಯನ್ನು ಸಮಾಜದ ಸಮಾಜವಾದೀ ಪುನಸ್ಸಂಘಟನೆಗೆ ಅಡಿಪಾಯವನ್ನಾಗಿ ಮಾಡುವ ಕಾಲ ಸನ್ನಿಹಿತವಾಗಿದೆ ಎಂಬ ವಿಚಾರವನ್ನು ಕಾರ್ಮಿಕರ ಮನಸ್ಸಿನಲ್ಲಿ ತುಂಬುವುದನ್ನು ಬಿಟ್ಟು ಅವರು ವಾಸ್ತವವಾಗಿ ಜನಸಮೂಹಗಳಿಗೆ ಇದಕ್ಕೆ ತೀರ ವಿರುದ್ಧವಾದುದನ್ನು ಬೋಧಿಸಿದ್ದಾರೆ ಮತ್ತು "ಅಧಿಕಾರವನ್ನು ಗೆದ್ದುಕೊಳ್ಳುವುದನ್ನು" ಯಾವ ರೀತಿಯಲ್ಲಿ ವರ್ಣಿಸಿದ್ದಾರೆಂದರೆ ಅದು ಸಂದರ್ಭಸಾಧಕವಾದಕ್ಕೆ ಸಹಸ್ರಾರು ಅವಕಾಶಗಳನ್ನು ಒದಗಿಸಿಕೊಟ್ಟಿದೆ.

ಸಾಮ್ರಾಜ್ಯಶಾಹಿ ಪೈಪೋಟಿಯ ಫಲವಾಗಿ ವಿಸ್ತಾರಗೊಂಡ ಸೈನಿಕ ಸಾಧನವನ್ನು ಹೊಂದಿರುವ ರಾಜ್ಯಗಳು ಸೈನಿಕ ದೈತ್ಯಶಕ್ತಿಗಳಾಗಿ ಬೆಳೆದು, ಜಗತ್ತನ್ನು ಬ್ರಿಟನ್ನೋ ಅಥವಾ ಜರ್ಮನಿಯೋ – ಯಾವ ಹಣಕಾಸಿನ ಬಂಡವಾಳವು – ಆಳಬೇಕು ಎಂಬ ಪ್ರಶ್ನೆಯನ್ನು ತೀರ್ಮಾನಿಸಲೋಸುಗ ಮಿಲಿಯಾಂತರ ಜನರನ್ನು ನಾಶಗೊಳಿಸುತ್ತಿರುವ ಸಮಯದಲ್ಲಿ, ಶ್ರಮಜೀವಿ ವರ್ಗದ ಕ್ರಾಂತಿಯು ರಾಜ್ಯ

ದೊಂದಿಗೆ ಹೊಂದಿರುವ ಸಂಬಂಧದ ಪ್ರಶ್ನೆಯನ್ನು ವಿರೂಪಗೊಳಿಸುವುದು ಮತ್ತು ಮರೆಮಾಚುವುದು, ಭಾರಿ ಪಾತ್ರ ನಿರ್ವಹಿಸದೆ ಇರಲಾರದು.*

## ಮೊದಲನೆಯ ಆವೃತ್ತಿಗೆ ಬರೆದ ಉಪಸಂಹಾರ

ಈ ಕಿರುಹೊತ್ತಗೆಯನ್ನು 1917ರ ಆಗಸ್ಟ್ ಹಾಗೂ ಸೆಪ್ಟೆಂಬರ್‌ಗಳಲ್ಲಿ ಬರೆಯಲಾಯಿತು. ನಾನಾಗಲೇ ಮುಂದಿನ, ಏಳನೆಯ, ಅಧ್ಯಾಯಕ್ಕೆ, '1905 ಹಾಗೂ 1917ರ ರಷ್ಯನ್ ಕ್ರಾಂತಿಗಳ ಅನುಭವ' ಎಂಬ ಅಧ್ಯಾಯಕ್ಕೆ, ಯೋಜನೆಯನ್ನು ರಚಿಸಿದ್ದೆ. ಆದರೆ ಶೀರ್ಷಿಕೆ ಬಿಟ್ಟು ಬೇರೇನನ್ನೂ ಬರೆಯಲು ನನಗೆ ಸಮಯವೇ ಸಿಗಲಿಲ್ಲ; ರಾಜಕೀಯ ಮುಗ್ಗಟ್ಟೊಂದು – 1917ರ ಅಕ್ಟೋಬರ್ ಕ್ರಾಂತಿಯ ಮುನ್ನಿನ ಸಂದರ್ಭ – ನನಗೆ "ಅಡ್ಡ ಬಂದಿತು." ಅಂಥ "ಅಡಚಣೆಯು" ಸ್ವಾಗತಾರ್ಹವೇ. ಆದರೆ ಈ ಕಿರುಹೊತ್ತಗೆಯ ದ್ವಿತೀಯ ಭಾಗವನ್ನು ('1905 ಹಾಗೂ 1917ರ ರಷ್ಯನ್ ಕ್ರಾಂತಿಗಳ ಅನುಭವ'ವನ್ನು) ಬರೆಯುವುದನ್ನು ಬಹುಶಃ ತುಂಬ ಕಾಲದವರೆಗೆ ಮುಂದೆ ಹಾಕಬೇಕಾಗುತ್ತದೆ. "ಕ್ರಾಂತಿಯ ಅನುಭವ"ದ ಮೂಲಕ ಸ್ವತಃ ಸಾಗಿ ಹೋಗುವುದು ಅದರ ಬಗೆಗೆ ಬರೆಯುವುದಕ್ಕಿಂತ ಹೆಚ್ಚು ಸಂತಸಕರವೂ ಉಪಯುಕ್ತವೂ ಆಗಿರುತ್ತದೆ.

ಗ್ರಂಥಕರ್ತೃ

ಪೆತ್ರೊಗ್ರಾದ್.
ನವೆಂಬರ್ 30, 1917

---

* ಹಸ್ತಪ್ರತಿ ಹೀಗೆ ಮುಂದುವರಿಯುತ್ತದೆ:

ಅಧ್ಯಾಯ VII

1905 ಹಾಗೂ 1917ರ ರಷ್ಯನ್
ಕ್ರಾಂತಿಗಳ ಅನುಭವ

ಈ ಅಧ್ಯಾಯದ ಶೀರ್ಷಿಕೆಯು ಸೂಚಿಸುವ ವಿಷಯವು ಎಷ್ಟು ವಿಶಾಲವಾದುದೆಂದರೆ ಅದರ ಬಗೆಗೆ ಅನೇಕ ಸಂಪುಟಗಳನ್ನೇ ಬರೆಯಲು ಸಾಧ್ಯ ಮತ್ತು ಬರೆಯಬೇಕಾಗುತ್ತದೆ. ಈ ಕಿರುಹೊತ್ತಗೆಯಲ್ಲಿ ನಾವು ಸಹಜವಾಗಿಯೇ ಅನುಭವ ಒದಗಿಸಿದ ಅತ್ಯಂತ ಮುಖ್ಯ ಪಾಠಗಳಿಗಷ್ಟೆ, ರಾಜ್ಯಾಧಿಕಾರಕ್ಕೆ ಸಂಬಂಧಿಸಿ ಕ್ರಾಂತಿಯಲ್ಲಿ ಶ್ರಮಜೀವಿ ವರ್ಗದ ಕಾರ್ಯಭಾರಗಳೊಂದಿಗೆ ನೇರ ಸಂಪರ್ಕ ಹೊಂದಿದವುಗಳಿಗಷ್ಟೆ, ಸೀಮಿತಗೊಳಿಸಿಕೊಳ್ಳಬೇಕಾಗುತ್ತದೆ (ಇಲ್ಲಿ ಹಸ್ತಪ್ರತಿ ನಿಂತು ಹೋಗುತ್ತದೆ). – ಸಂ.

# ಟಿಪ್ಪಣಿಗಳು

1 ಈ ಕೃತಿಯನ್ನು ಲೆನಿನರು 1916ರ ಜನವರಿ-ಜೂನ್ ತಿಂಗಳ ಅವಧಿಯಲ್ಲಿ ಜ್ಯೂರಿಕ್‌ನಲ್ಲಿ ರಚಿಸಿದರು.

ಬಂಡವಾಳವಾದದ ಬೆಳವಣಿಗೆಯಲ್ಲಿನ ಹೊಸ ಅಂಶಗಳನ್ನು ಲೆನಿನರು ಮೊದಲ ಜಾಗತಿಕ ಯುದ್ಧದ ಆರಂಭಕ್ಕೆ (1914-1918) ಬಹಳ ಮುನ್ನವೇ ಗಮನಿಸಿದ್ದರು. ಹಲವಾರು ಕೃತಿಗಳಲ್ಲಿ ಲೆನಿನರು ಸಾಮ್ರಾಜ್ಯಶಾಹಿ ಯುಗಕ್ಕೆ ವಿಶಿಷ್ಟವಾದ, ಪ್ರತ್ಯೇಕವಾದ ಅಂಶಗಳನ್ನು – ಉತ್ಪಾದನೆಯ ಕೇಂದ್ರೀಕರಣ ಹಾಗೂ ಏಕಸ್ವಾಮ್ಯದ ಬೆಳವಣಿಗೆ, ಬಂಡವಾಳದ ರಫ್ತು, ಹೊಸ ಮಾರುಕಟ್ಟೆಗಳನ್ನೂ ಪ್ರಭಾವ ವಲಯಗಳನ್ನೂ ಪಡೆದುಕೊಳ್ಳಲು ಹೋರಾಟ, ಆರ್ಥಿಕ ಸಂಬಂಧಗಳ ಅಂತರರಾಷ್ಟ್ರೀಕರಣ, ಬಂಡವಾಳವಾದದ ಪರೋಪಜೀವಿ ಸ್ವಭಾವ ಹಾಗೂ ಕ್ಷಯಿಸುವಿಕೆ, ಶ್ರಮ ಹಾಗೂ ಬಂಡವಾಳಗಳ ನಡುವಣ ವೈರುಧ್ಯಗಳ ಹೆಚ್ಚಳ, ವರ್ಗ ಹೋರಾಟದ ಉಲ್ಬಣತೆ, ಸಮಾಜವಾದಕ್ಕೆ ಪರಿವರ್ತನೆಗಾಗಿ ಉಪಾಧಿಗಳ ರಚನೆ ಇವೇ ಮುಂತಾದ ಅಂಶಗಳನ್ನು ಬೆಳಕಿಗೆ ತಂದು ಕೂಲಂಕಷವಾಗಿ ಪರಿಶೀಲಿಸಿದರು. ಸುಲಿಗೆಶೀಲ ವಸಾಹತುವಾದಿ ನೀತಿಯನ್ನು, ಜಗತ್ತಿನ ಹಂಚಿಕೆ ವಿಭಜನೆಗಾಗಿ ಹೋರಾಟವನ್ನು, ಸಾಮ್ರಾಜ್ಯವಾದಿ ಆಕ್ರಮಣಶೀಲ ಯುದ್ಧಗಳಿಗೆ ಸಿದ್ಧತೆಯನ್ನು ಬಯಲು ಮಾಡುವುದಕ್ಕೆ ಲೆನಿನರು ವಿಶೇಷ ಗಮನ ನೀಡಿದರು.

ಮೊದಲ ಜಾಗತಿಕ ಯುದ್ಧದ ಆರಂಭದಿಂದ ಹಿಡಿದು ಬಂಡವಾಳವಾದದ ಬೆಳವಣಿಗೆಯ ಏಕಸ್ವಾಮ್ಯ ಮಜಲಿನ ಸರ್ವತೋಮುಖ ಸಂಶೋಧನೆಯಲ್ಲಿ ಲೆನಿನ್ ತೊಡಗಿದರು. ರಷ್ಯ ಹಾಗೂ ಇತರ ಬಂಡವಾಳಶಾಹಿ ದೇಶಗಳ ಕಾರ್ಮಿಕ ವರ್ಗದ ಕ್ರಾಂತಿಕಾರಿ ಹೋರಾಟದ ಹಿತದೃಷ್ಟಿಯಿಂದ ಇಂತಹ ಸಂಶೋಧನೆ ಅಗತ್ಯವಾಗಿದ್ದಿತು. ಕ್ರಾಂತಿಕಾರಿ ಚಳವಳಿಗೆ ಸರಿಯಾದ ಮಾರ್ಗದರ್ಶನ ನೀಡಲು ಹಾಗೂ ಸಾಮ್ರಾಜ್ಯಶಾಹಿ ಪ್ರತಿಗಾಮಿಗಳ ಸಿದ್ಧಾಂತದ ವಿರುದ್ಧವೂ ಸಾಮ್ರಾಜ್ಯವಾದಿಗಳೊಡನೆ ರಾಜಿಮಾಡಿಕೊಳ್ಳುವವರ ಸುಧಾರಣಾವಾದಿ

ನೀತಿಯ ವಿರುದ್ಧವೂ ಯಶಸ್ವಿಯಾಗಿ ಹೋರಾಡಲು "ಮೂಲಭೂತ ಆರ್ಥಿಕ ಪ್ರಶ್ನೆಯನ್ನು, ಅಂದರೆ ಸಾಮ್ರಾಜ್ಯವಾದದ ಆರ್ಥಿಕ ಸಾರ ಏನು ಎಂಬ ಪ್ರಶ್ನೆಯನ್ನು, ಅರ್ಥಮಾಡಿಕೊಳ್ಳುವುದು" ಅವಶ್ಯವಾಗಿದ್ದಿತು. ಏಕೆಂದರೆ, "ಈ ಪ್ರಶ್ನೆಯ ಅಧ್ಯಯನ ಮಾಡದೆ ಆಧುನಿಕ ಯುದ್ಧ ಹಾಗೂ ಆಧುನಿಕ ರಾಜಕಾರಣವನ್ನು ಅರ್ಥಮಾಡಿಕೊಳ್ಳುವುದು, ಮೌಲ್ಯ ನಿರ್ಣಯಿಸುವುದು, ಅಸಾಧ್ಯವಾಗಿದ್ದಿತು."

ಸ್ವಿಟ್ಸರ್ಲೆಂಡ್‌ನ ಬೆರ್ನ್‌ನಲ್ಲಿದ್ದಾಗ 1915ರ ಮಧ್ಯಕಾಲದಿಂದ ಲೆನಿನರು ಸಾಮ್ರಾಜ್ಯವಾದ ಕುರಿತ ಸಾಹಿತ್ಯದ ಅಧ್ಯಯನವನ್ನು ಗಾಢವಾಗಿ ನಡೆಸಿದರು ಎಂಬುದು ಸ್ಪಷ್ಟ; ಆಗಲೇ ಅವರು ಇದಕ್ಕೆ ಸಂಬಂಧಿಸಿದ ಗ್ರಂಥಸೂಚಿ ಸಂಕಲಿಸಿ, ಯೋಜನೆಯನ್ನು ರೂಪಿಸಿ, ಅಗತ್ಯ ಟೀಕೆಟಿಪ್ಪಣಿಗಳನ್ನು ಮಾಡಿಕೊಂಡು ಕೃತಿ ರಚನೆಯಲ್ಲಿ ತೊಡಗಿದ್ದರು. ಈ ಕೃತಿಯ ರಚನೆಗೆ ಸಂಬಂಧಿಸಿದ ಸಿದ್ಧತಾ ಸಾಮಗ್ರಿ ('ಸಾಮ್ರಾಜ್ಯವಾದ ಕುರಿತ ನೋಟುಪುಸ್ತಕಗಳು') ಸುಮಾರು 800 ಮುದ್ರಿತ ಪುಟಗಳಷ್ಟಾಗಿದ್ದಿತು. ಇದರಲ್ಲಿ 148 ಪುಸ್ತಕಗಳಿಂದ (ಇವುಗಳಲ್ಲಿ 106 ಜರ್ಮನ್, 23 ಫ್ರೆಂಚ್, 17 ಇಂಗ್ಲಿಷ್ ಹಾಗೂ 2 ರಷ್ಯನ್‌ಗೆ ಅನುವಾದಿಸಿದ ಕೃತಿಗಳಿದ್ದವು), 232 ಲೇಖನಗಳಿಂದ (ಇವುಗಳಲ್ಲಿ 206 ಜರ್ಮನ್, 13 ಫ್ರೆಂಚ್ ಹಾಗೂ 13 ಇಂಗ್ಲಿಷ್ ಲೇಖನಗಳಿದ್ದವು) ತೆಗೆದುಕೊಂಡ ವಿಷಯಗಳಿದ್ದವು. 34 ಜರ್ಮನ್, 7 ಫ್ರೆಂಚ್ ಹಾಗೂ 8 ಇಂಗ್ಲಿಷ್ ನಿಯತ ಕಾಲಿಕಗಳಿಂದ ಈ ಲೇಖನಗಳನ್ನು ಪಡೆಯಲಾಗಿತ್ತು.

1916ರ ಜನವರಿ ತಿಂಗಳ ಆರಂಭದಲ್ಲಿ ಲೆನಿನರು 'ಪಾರುಸ್' ('ಹಾಯಿ') ಎಂಬ ನ್ಯಾಯಬದ್ಧ ಪ್ರಕಾಶನ ಸಂಸ್ಥೆಗಾಗಿ (ಪೆತ್ರೊಗ್ರಾದ್‌ನಲ್ಲಿ 1915ರ ಡಿಸೆಂಬರ್‌ನಲ್ಲಿ ಇದನ್ನು ಆರಂಭಿಸಲಾಗಿತ್ತು) ಸಾಮ್ರಾಜ್ಯವಾದ ಕುರಿತು ಪುಸ್ತಕ ಬರೆಯುವುದಾಗಿ ಒಪ್ಪಿಕೊಂಡರು.

1916ರ ಫೆಬ್ರುವರಿ ತಿಂಗಳ ಆದಿಭಾಗದಲ್ಲಿ ಲೆನಿನರು ಬೆರ್ನ್‌ನಿಂದ ಜ್ಯೂರಿಕ್‌ಗ ಬಂದರು. ಅಲ್ಲಿಯೂ ಅವರು ಸಾಮ್ರಾಜ್ಯವಾದ ಕುರಿತು ಮಾಹಿತಿಗಳ ಸಂಗ್ರಹಣ ಮತ್ತು ಪರಿಶೀಲನ ಕಾರ್ಯವನ್ನು ಮುಂದುವರಿಸಿದರು.

ಪ್ರಕಾಶನ ಸಂಸ್ಥೆಯ ನಾಯಕ ವೃಂದದಲ್ಲಿದ್ದ ಮೆನ್ಷೆವಿಕರು ಲೆನಿನರ ಹಸ್ತ ಪ್ರತಿಯಲ್ಲಿ ಕೌತ್‌ಸ್ಕಿ ಮತ್ತು ಮಾರ್ತೊವ್‌ರ ವಿಚಾರಗಳ ವಿರುದ್ಧ ಇದ್ದ ಉಗ್ರ ಟೀಕೆಯನ್ನು ತೆಗೆದುಹಾಕಿ ಲೆನಿನರ ವಿಶಿಷ್ಟ ಶೈಲಿಯನ್ನು ಬದಲಿಸಿದರು ಮತ್ತು ಅಪಾರ್ಥ ಬರುವಂತಹ ತಿದ್ದುಪಡಿಗಳನ್ನು ಸೇರಿಸಿದರು. ಬಂಡವಾಳವಾದವು ಸಾಮ್ರಾಜ್ಯವಾದವಾಗಿ "ಬೆಳೆಯುತ್ತದೆ" ಎಂದು ಲೆನಿನರು ಬರೆದಿದ್ದುದನ್ನು ಮೆನ್ಷೆವಿಕರು "ಪರಿವರ್ತನೆಗೊಳ್ಳುತ್ತದೆ" ಎಂದು ಬದಲಿಸಿದರು. ಅತೀತ-ಸಾಮ್ರಾಜ್ಯವಾದದ "ಪ್ರತಿಗಾಮಿ ಸ್ವರೂಪ" ಎಂಬುದನ್ನು "ಹಿಂದುಳಿದ ಸ್ವರೂಪ" ಇತ್ಯಾದಿಯಾಗಿ ಬದಲಿಸಿದರು. 1917ರ ಮಧ್ಯಭಾಗದಲ್ಲಿ 'ಸಾಮ್ರಾಜ್ಯ

ವಾದ – ಬಂಡವಾಳವಾದದ ಇತ್ತೀಚೆಗಿನ ಮಜಲು (ಜನಪ್ರಿಯ ಹೊತ್ತಗೆ)' ಎಂಬ ಶೀರ್ಷಿಕೆಯಲ್ಲಿ 1917ರ ಏಪ್ರಿಲ್ 26ರ, ಲೆನಿನರ ಮುನ್ನುಡಿಯೊಂದಿಗೆ, ಇದು ಪ್ರಕಟವಾಯಿತು.

ಪುಟ 7.

2 ಪ್ರಸಕ್ತ ಮುನ್ನುಡಿ ಪ್ರಪ್ರಥಮವಾಗಿ 1921ರ ಅಕ್ಟೋಬರ್‌ನಲ್ಲಿ 'ಸಾಮ್ರಾಜ್ಯ ವಾದ ಮತ್ತು ಬಂಡವಾಳವಾದ' ಎಂಬ ಶೀರ್ಷಿಕೆಯೊಂದಿಗೆ 'ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್' ನಿಯತಕಾಲಿಕದಲ್ಲಿ ಪ್ರಕಟವಾಯಿತು.

ಪುಟ 11.

3 ಬ್ರೆಸ್ತ್-ಲಿತೋವ್‌ಸ್ಕ್ ಶಾಂತಿ ಒಡಂಬಡಿಕೆ – 1918ರ ಮಾರ್ಚ್ ತಿಂಗಳ 3ರಂದು ಬ್ರೆಸ್ತ್-ಲಿತೋವ್‌ಸ್ಕ್‌ನಲ್ಲಿ ಸೋವಿಯತ್ ರಷ್ಯ ಹಾಗೂ ಜರ್ಮನ್ ಕೂಟದ (ಜರ್ಮನಿ, ಆಸ್ಟ್ರೊ-ಹಂಗೆರಿ, ಬಲ್ಗೇರಿಯ ಮತ್ತು ಟರ್ಕಿ) ದೇಶಗಳ ನಡುವೆ ಈ ಒಡಂಬಡಿಕೆ ಸಹಿಗೊಂಡಿತು ಮತ್ತು ಮಾರ್ಚ್ 15ರಂದು ಸೋವಿಯತ್‌ಗಳ ನಾಲ್ಕನೇ ತುರ್ತು ಅಖಿಲ ರಷ್ಯನ್ ಸಮ್ಮೇಳನವು ಇದನ್ನು ಸ್ಥಿರೀಕರಿಸಿತು. ರಾಜಪ್ರಭುತ್ವವನ್ನು ಪದಚ್ಯುತಿಗೊಳಿಸಿದ ಜರ್ಮನ್ ಕ್ರಾಂತಿಯ ನಂತರ 1918ರ ನವಂಬರ್ 13ರಂದು ಅಖಿಲ ಒಕ್ಕೂಟ ಕೇಂದ್ರ ಕಾರ್ಯಕಾರಿ ಸಮಿತಿ ಈ ದರೋಡೆಕಾರಿಯಾದ ನ್ಯಾಯಯುತವಲ್ಲದ ಬ್ರೆಸ್ತ್-ಲಿತೋವ್‌ಸ್ಕ್ ಒಡಂಬಡಿಕೆಯ ರದ್ದತಿಯನ್ನು ಘೋಷಿಸಿತು.

ಪುಟ 13.

4 ವೆರ್ಸೈಲ್ಸ್ ಶಾಂತಿ ಒಡಂಬಡಿಕೆ – ಸಾಮ್ರಾಜ್ಯಶಾಹಿ ಒಡಂಬಡಿಕೆ. 'ಅಂಟಾಂಟ್' ದೇಶಗಳು (ಇಂಗ್ಲೆಂಡ್, ಫ್ರಾನ್ಸ್, ಅಮೆರಿಕ, ಮತ್ತಿತರ ದೇಶಗಳು) 1914-1918ರ ಪ್ರಥಮ ಜಾಗತಿಕ ಯುದ್ಧದಲ್ಲಿ ಪರಾಜಯ ಅನುಭವಿಸಿದ ಜರ್ಮನಿಯ ಮೇಲೆ ಒತ್ತಾಯದಿಂದ ಹೇರಿದ ಒಡಂಬಡಿಕೆ. ಇದು 1919ರ ಜೂನ್ 28ರಂದು ವೆರ್ಸೈಲ್ಸ್‌ನಲ್ಲಿ ಸಹಿಗೊಂಡಿತು.

ಪುಟ 14.

5 "ವಿಲ್ಸನ್‌ವಾದ" – 1913-1921ರಲ್ಲಿ ಅಮೆರಿಕದ ಅಧ್ಯಕ್ಷರಾಗಿದ್ದ ವುಡ್ರೊ ವಿಲ್ಸನ್‌ರವರ ಹೆಸರಿನಿಂದ ಉಂಟಾದುದು. ತಮ್ಮ ಅಧ್ಯಕ್ಷ ಅಧಿಕಾರ ಅವಧಿಯ ಮೊದಲ ವರ್ಷದಲ್ಲಿ ವಿಲ್ಸನ್ ಹಲವು ಕಾಯಿದೆಗಳನ್ನು (ವೃದ್ಧಿಶೀಲ ವರಮಾನ ತೆರಿಗೆ ಕಾಯಿದೆ, ಟ್ರಸ್ಟುಗಳ ವಿರುದ್ಧದ ಕಾಯಿದೆ ಇತ್ಯಾದಿ) ಜಾರಿಗೆ

ತಂದರು. ಈ ಕಾಯಿದೆಗಳನ್ನು ಅವರು ಮಂದಿನಾಯಕನ ವರ್ತನೆಗನುಗುಣ ವಾಗಿ "ಹೊಸ ಸ್ವಾತಂತ್ರ್ಯ" ಯುಗ ಎಂದು ಹೆಸರಿಸಿದರು. ಅಮೆರಿಕನ್ ಸಾಮ್ರಾಜ್ಯವಾದದ ಸುಲಿಗೆಶೀಲ ವಿದೇಶಾಂಗ ನೀತಿಯನ್ನು ವಿಲ್ಸನ್ ಹಾಗೂ ಅವರ ಸಂಗಡಿಗರು "ಪ್ರಜಾಪ್ರಭುತ್ವ" ಹಾಗೂ "ಜನತೆಗಳ ಒಕ್ಕೂಟ" ಎಂಬ ಶಬ್ದಾಡಂಬರದ ನುಡಿಗಳಲ್ಲಿ ಹಾಗೂ ಘೋಷಣೆಗಳಲ್ಲಿ ಮರೆಮಾಚಿದರು.

ಸೋವಿಯತ್ ಅಧಿಕಾರ ಅಸ್ತಿತ್ವಕ್ಕೆ ಬಂದ ಮೊದಲ ದಿನಗಳಿಂದಲೂ ವಿಲ್ಸನ್ ಸೋವಿಯತ್ ರಷ್ಯದ ವಿರುದ್ಧ ಹಸ್ತಕ್ಷೇಪವನ್ನು ಪ್ರಚೋದಿಸಿದವರಲ್ಲಿ ಹಾಗೂ ಸಂಘಟಿಸಿದವರಲ್ಲಿ ಒಬ್ಬರಾಗಿದ್ದರು. ಜಗತ್ತಿನ ಎಲ್ಲ ಜನಸಮೂಹಗಳ ಮೇಲೆ ಸೋವಿಯತ್ ಸರ್ಕಾರದ ಶಾಂತಿಯುತ ವಿದೇಶಾಂಗ ನೀತಿ ಬೀರುತ್ತಿದ್ದ ಗಾಢ ಪ್ರಭಾವವನ್ನು ವಿರೋಧಿಸುವ ಗುರಿಯನ್ನು ಹೊಂದಿ ವಿಲ್ಸನ್ ಮಂದಿ ನಾಯಕ ವರ್ತನೆಗನುಗುಣವಾಗಿ "14 ಅಂಶ"ಗಳ "ಶಾಂತಿ ಕಾರ್ಯಕ್ರಮ" ವನ್ನು ಮಂಡಿಸಿದರು. ಇದು ಅಮೆರಿಕದ ಆಕ್ರಮಣಶೀಲ ನೀತಿಯನ್ನು ಮರೆ ಮಾಚುವ ಹೊರಕವಚವಾಗಿತ್ತು. ಅಮೆರಿಕದ ಪ್ರಚಾರಯಂತ್ರ ಹಾಗೂ ಐರೋಪ್ಯ ಬೂರ್ಷ್ವಾ ಪತ್ರಿಕೆಗಳು ವಿಲ್ಸನ್‌ರನ್ನು ಶಾಂತಿ ಯೋಧನೆಂದು ಹೊಗಳಿದವು. ಆದಾಗ್ಯೂ ದೇಶದ ಒಳಗಿನ ಪ್ರತಿಗಾಮಿ ಕಾರ್ಮಿಕ ವಿರೋಧಿ ನೀತಿಯೂ ಅಮೆ ರಿಕದ ಆಕ್ರಮಣಶೀಲ ವಿದೇಶಾಂಗ ನೀತಿಯೂ ವಿಲ್ಸನ್‌ರ ಹಾಗೂ "ವಿಲ್ಸನ್ ವಾದಿಗಳ" ಪೆಟಿ ಬೂರ್ಷ್ವಾ ಬೂಟಾಟಿಕೆಯ ನುಡಿಗಟ್ಟುಗಳ ನಿಜ ಸ್ವರೂಪ ವನ್ನು ಬಯಲಿಗೆಳೆದವು.

ಪುಟ 14.

6 ದ್ವಿತೀಯ ಇಂಟರ್‌ನ್ಯಾಷನಲ್ – 1889ರಲ್ಲಿ ಸ್ಥಾಪಿಸಲಾದ ಸಮಾಜವಾದಿ ಪಾರ್ಟಿಗಳ ಒಂದು ಅಂತರರಾಷ್ಟ್ರೀಯ ಒಕ್ಕೂಟ. ಪ್ರಥಮ ಜಾಗತಿಕ ಯುದ್ಧ (1914-1918) ಪ್ರಾರಂಭವಾದಾಗ ದ್ವಿತೀಯ ಇಂಟರ್‌ನ್ಯಾಷನಲ್‌ನ ನಾಯ ಕರು ಸಮಾಜವಾದದ ಧ್ಯೇಯಕ್ಕೆ ದ್ರೋಹ ಬಗೆದು ತಮ್ಮ ಸಾಮ್ರಾಜ್ಯಶಾಹಿ ಸರ್ಕಾರಗಳ ಪಕ್ಷ ವಹಿಸಿದರು ಮತ್ತು ದ್ವಿತೀಯ ಇಂಟರ್‌ನ್ಯಾಷನಲ್ ವಿಭಜನೆ ಗೊಂಡಿತು. ಹಿಂದೆ ದ್ವಿತೀಯ ಇಂಟರ್‌ನ್ಯಾಷನಲ್‌ನಲ್ಲಿದ್ದ ವಾಮ ಪಾರ್ಟಿಗಳು ಮತ್ತು ವೃಂದಗಳು 1919ರಲ್ಲಿ ಮಾಸ್ಕೋದಲ್ಲಿ ಸ್ಥಾಪನೆಗೊಂಡಿದ್ದ ಕಮ್ಯೂ ನಿಸ್ಟ್ ಇಂಟರ್‌ನ್ಯಾಷನಲ್‌ಗೆ (ತೃತೀಯ ಇಂಟರ್‌ನ್ಯಾಷನಲ್‌ಗೆ) ಸೇರಿಕೊಂಡವು. ಅದೇ 1919ರಲ್ಲಿ ಬೆರ್ನ್‌ನಲ್ಲಿ ನಡೆದ ಸಮಾವೇಶದಲ್ಲಿ ದ್ವಿತೀಯ ಇಂಟರ್ ನ್ಯಾಷನಲ್‌ಅನ್ನು ಪುನರ್‌ಸ್ಥಾಪಿಸಲಾಯಿತು; ಸಮಾಜವಾದಿ ಚಳವಳಿಯ ಬಲ ಸಂದರ್ಭಸಾಧಕ ವೃಂದವನ್ನು ಪ್ರತಿನಿಧಿಸುತ್ತಿದ್ದ ಪಾರ್ಟಿಗಳು ಮಾತ್ರ ಈ ಇಂಟರ್ ನ್ಯಾಷನಲ್‌ಗೆ ಸೇರಿದವು.

ಪುಟ 14.

[7] ಬಾಸೆಲ್ ಪ್ರಣಾಳಿಕೆ – ಸ್ವಿಟ್ಸರ್ಲೆಂಡ್‌ನ ಬಾಸೆಲ್‌ನಲ್ಲಿ 1912ರ ನವಂಬರ್ 24-25ರಂದು ನಡೆದ ದ್ವಿತೀಯ ಇಂಟರ್‌ನ್ಯಾಷನಲ್‌ನ ತುರ್ತು ಮಹಾಧಿವೇಶನ ಅಂಗೀಕರಿಸಿದ ಯುದ್ಧ ಕುರಿತಾದ ಪ್ರಣಾಳಿಕೆ. ಇದು ಸಾಮ್ರಾಜ್ಯಶಾಹಿಗಳು ನಡೆಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದ ಯುದ್ಧದ ಸುಲಿಗೆಶೀಲ ಗುರಿಗಳನ್ನು ಬಯಲಿಗೆಳೆದು ಎಲ್ಲ ದೇಶಗಳ ಕಾರ್ಮಿಕರೂ ಯುದ್ಧ ಭೀತಿಯ ವಿರುದ್ಧ ಶಾಂತಿಗಾಗಿ ನಿರ್ಧಾರಕ ಹೋರಾಟ ನಡೆಸಬೇಕೆಂದು ಕರೆ ನೀಡಿತು. ಯುದ್ಧವು ಆರಂಭವಾದ ಪಕ್ಷದಲ್ಲಿ ಆಗ ಉಂಟಾಗುವ ಆರ್ಥಿಕ ಮತ್ತು ರಾಜಕೀಯ ಮುಗ್ಗಟ್ಟನ್ನು ಸಮಾಜವಾದಿಗಳು ಸಮಾಜವಾದಿ ಕ್ರಾಂತಿಗಾಗಿ ಹೋರಾಟಕ್ಕೆ ಬಳಸಿಕೊಳ್ಳಬೇಕೆಂದು ಪ್ರಣಾಳಿಕೆ ಸೂಚಿಸಿತ್ತು. ದ್ವಿತೀಯ ಇಂಟರ್‌ನ್ಯಾಷನಲ್‌ನ ನಾಯಕರು (ಕೌತ್‌ಸ್ಕಿ, ವಾಂದೆರ್‌ವೆಲ್ಡೆ ಇತ್ಯಾದಿ) ಈ ಮಹಾಧಿವೇಶನದಲ್ಲಿ ಯುದ್ಧವಿರೋಧಿ ಪ್ರಣಾಳಿಕೆಯ ಪರವಾಗಿಯೇನೋ ಮತ ನೀಡಿದರು. ಆದರೆ ಜಾಗತಿಕ ಸಾಮ್ರಾಜ್ಯಶಾಹಿ ಯುದ್ಧ ಆರಂಭವಾದಾಗ ಇವರು ಬಾಸೆಲ್ ಪ್ರಣಾಳಿಕೆಯನ್ನು ಮರೆತು ತಂತಮ್ಮ ಸಾಮ್ರಾಜ್ಯಶಾಹಿ ಸರಕಾರಗಳ ಪಕ್ಷ ವಹಿಸಿದರು.

ಪುಟ 14.

[8] ಬಾಸೆಲ್ ಪ್ರಣಾಳಿಕೆಯ ಪಾಠವನ್ನು ಪ್ರಸಕ್ತ ಆವೃತ್ತಿಯಲ್ಲಿ ಮುದ್ರಿಸಲಾಗಿಲ್ಲ.

ಪುಟ 14.

[9] 1919ರ ಫೆಬ್ರುವರಿಯಲ್ಲಿ ಬೆರ್ನ್‌ನಲ್ಲಿ ಸಮಾಜವಾದಿ ಪಾರ್ಟಿಗಳ ಸಮಾವೇಶದಲ್ಲಿ ಪಶ್ಚಿಮ ಯೂರೋಪಿನ ಸಮಾಜವಾದಿ ಪಾರ್ಟಿಗಳ ನಾಯಕರು ಮೊದಲ ಜಾಗತಿಕ ಯುದ್ಧದನಂತರ ನಿಷ್ಕ್ರಿಯವಾಗಿದ್ದ ದ್ವಿತೀಯ ಇಂಟರ್‌ನ್ಯಾಷನಲ್‌ನ ಬದಲು ಸ್ಥಾಪಿಸಿದ್ದ ದ್ವಿತೀಯ (ಬೆರ್ನ್) ಇಂಟರ್‌ನ್ಯಾಷನಲ್‌ಗೆ ಲೆನಿನರು ಉಲ್ಲೇಖಿಸುತ್ತಾರೆ. ಬೆರ್ನ್ ಇಂಟರ್‌ನ್ಯಾಷನಲ್ ವಾಸ್ತವವಾಗಿ ಅಂತರರಾಷ್ಟ್ರೀಯ ಬೂರ್ಷ್ವಾಸೀಗೆ ಸೇವೆಸಲ್ಲಿಸುವ ಪಾತ್ರ ನಿರ್ವಹಿಸಿತು.

ಪುಟ 15.

[10] ಜರ್ಮನಿಯ ಸ್ವತಂತ್ರ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿ – 1917ರ ಏಪ್ರಿಲ್‌ನಲ್ಲಿ ಗೋಥಾದಲ್ಲಿ ನಡೆದ ಸಂವಿಧಾನಾತ್ಮಕ ಸಮ್ಮೇಳನದಲ್ಲಿ ರಚನೆಗೊಂಡ ಮಧ್ಯಮಾರ್ಗದ ಪಾರ್ಟಿ. ಕ್ರಾಂತಿಕಾರಿ ಉತ್ಥಾನದ ವಾತಾವರಣದಲ್ಲಿ – 1917ರಲ್ಲಿ ರಷ್ಯದಲ್ಲಿ ನಡೆದ ಫೆಬ್ರುವರಿ ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿ ಇದರ ಬಲವರ್ಧನೆಯ ಮೇಲೆ ಭಾರಿ ಪ್ರಭಾವ ಬೀರಿತು – ಜರ್ಮನಿಯ ಸೋಷಲ್

ಡೆಮೊಕ್ರಾಟಿಕ್ ಪಾರ್ಟಿಯ ಸಂದರ್ಭಸಾಧಕವಾದಿ ನಾಯಕತ್ವವು ಪಾರ್ಟಿಯ ಸಾಮಾನ್ಯ ಸದಸ್ಯರ ನಂಬಿಕೆ ಕಳೆದುಕೊಂಡಿತು. ಜನಸಾಮಾನ್ಯರ ಅತೃಪ್ತಿಯನ್ನು ಮೃದುಗೊಳಿಸಿ ಅವರ ಗಮನವನ್ನು ಕ್ರಾಂತಿಕಾರಿ ಹೋರಾಟದಿಂದ ದೂರ ಸೆಳೆದು ಕಾರ್ಮಿಕ ವರ್ಗದ ಕ್ರಾಂತಿಕಾರಿ ಪಾರ್ಟಿಯ ರಚನೆ ತಪ್ಪಿಸುವುದು ಹೊಸತಾಗಿ ಸ್ಥಾಪಿಸಿದ ಪಾರ್ಟಿಯ ಗುರಿಯಾಗಿತು. "ಸ್ವತಂತ್ರವಾದಿಗಳು" ಮಧ್ಯ ಮಾರ್ಗೀಯ ನುಡಿಗಟ್ಟುಗಳ ಬಳಕೆ ಮಾಡುತ್ತ, ಸಾಮಾಜಿಕ ಸ್ವದೇಶ ಮೂಢಾಭಿ ಮಾನಿಗಳೊಡನೆ "ಒಂದಾಗಬೇಕೆಂದು" ಪ್ರತಿಪಾದಿಸುತ್ತ ವರ್ಗ ಹೋರಾಟವನ್ನು ನಿರಾಕರಿಸುವತ್ತ ಸಾಗುತ್ತಿದ್ದರು. 'ಶ್ರಮಿಕ ಒಕ್ಕೂಟ' ಎಂಬ ಕೌತ್‌ಸ್ಕಿವಾದಿ ಸಂಘಟನೆ ಈ ಪಾರ್ಟಿಯ ಪ್ರಧಾನ ಅಂಗಭಾಗವಾಗಿತ್ತು.

'ಸ್ಪಾರ್ಟಾಕಸ್' ವೃಂದ ತನ್ನ ಸಂಘಟನಾತ್ಮಕ ಹಾಗೂ ರಾಜಕೀಯ ಸ್ವಾತಂತ್ರ್ಯ ವನ್ನು ಉಳಿಸಿಕೊಂಡೇ ಸ್ವಲ್ಪ ಕಾಲ ಈ ಪಾರ್ಟಿಯಲ್ಲಿ ಸೇರಿತ್ತು. ಈ ವೃಂದವು ಜನಸಮೂಹಗಳನ್ನು ಮಧ್ಯಮಾರ್ಗೀಯ ನಾಯಕರ ಪ್ರಭಾವದಿಂದ ಮುಕ್ತ ಮಾಡಲು ಶ್ರಮಿಸಿತು. 1918ರಲ್ಲಿ 'ಸ್ಪಾರ್ಟಾಕಸ್ ಕೂಟ'ವು ಜರ್ಮನಿಯ ಸ್ವತಂತ್ರ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯಿಂದ ಹೊರಬಂದಿತು. ಈ ವೃಂದದ ಆಧಾರದ ಮೇಲೆ ಜರ್ಮನ್ ಕಮ್ಯೂನಿಸ್ಟ್ ಪಾರ್ಟಿಯನ್ನು ರಚಿಸ ಲಾಯಿತು.

1920ರ ಅಕ್ಟೋಬರ್‌ನಲ್ಲಿ ಈ ಪಾರ್ಟಿಯು ಹಾಲ್‌ನಲ್ಲಿ ಜರುಗಿದ ಮಹಾಧಿವೇಶನದಲ್ಲಿ ಒಡೆಯಿತು. ದೊಡ್ಡ ಭಾಗವು 1920ರ ಡಿಸೆಂಬರ್‌ನಲ್ಲಿ ಜರ್ಮನಿಯ ಕಮ್ಯೂನಿಸ್ಟ್ ಪಾರ್ಟಿಯೊಂದಿಗೆ ಕೂಡಿಕೊಂಡಿತು. ಬಲಪಂಥೀ ಯರು ಪ್ರತ್ಯೇಕ ಪಾರ್ಟಿಯನ್ನು ರಚಿಸಿ ಹಳೆಯ ಸ್ವತಂತ್ರ ಸೋಷಲ್ ಡೆಮೊ ಕ್ರಾಟಿಕ್ ಪಾರ್ಟಿ ಎಂಬ ಹಳೆಯ ಹೆಸರನ್ನೇ ಉಳಿಸಿಕೊಂಡರು. 1922ರ ವರೆಗೂ ಈ ಪಾರ್ಟಿ ಅಸ್ತಿತ್ವದಲ್ಲಿದ್ದಿತು.

ಪುಟ 16.

11 ತೃತೀಯ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್ – ಮಾಸ್ಕೋದಲ್ಲಿ 1919ರ ಮಾರ್ಚ್ 2ರಿಂದ 6ರವರೆಗೆ ನಡೆದ ಪ್ರಥಮ ಕೊಮಿಂಟರ್ನ್‌ನ ಸಂವಿಧಾನಾ ತ್ಮಕ ಅಧಿವೇಶನದಲ್ಲಿ ಇದನ್ನು ರಚಿಸಲಾಯಿತು. ಕೊಮಿಂಟರ್ನ್‌ನ ಗುರಿ ಸೂತ್ರ ಗಳು ಹೀಗಿದ್ದವು: ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಗೆ ಬದಲಾಗಿ ಕಮ್ಯೂ ನಿಸ್ಟ್ ಸಾಮಾಜಿಕ ವ್ಯವಸ್ಥೆ ಬರುವುದು ಅನಿವಾರ್ಯ, ಬೂರ್ಷ್ವಾ ಸರಕಾರ ಗಳನ್ನು ಉರುಳಿಸುವುದಕ್ಕಾಗಿ ಬೂರ್ಷ್ವಾ ರಾಜ್ಯ ನಾಶಗೊಳಿಸಿ ಹೊಸ ಮಾದರಿಯ ರಾಜ್ಯ – ಕಮ್ಯೂನಿಸ್ಟ್ ಸಮಾಜಕ್ಕೆ ಸಂಕ್ರಮಣವನ್ನು ಖಚಿತಪಡಿಸು ವಂತಹ ಸೋವಿಯತ್‌ಗಳ ಮಾದರಿಯ ಶ್ರಮಜೀವಿ ವರ್ಗ ರಾಜ್ಯ – ರಚಿಸು

ವುದಕ್ಕಾಗಿ ಶ್ರಮಜೀವಿ ವರ್ಗದ ಕ್ರಾಂತಿಕಾರಿ ಹೋರಾಟ ಅನಿವಾರ್ಯ.

ಕೊಮಿಂಟರ್ನ್‌ಅನ್ನು ಸ್ಥಾಪಿಸಿದುದು ಕಾರ್ಮಿಕ ಚಳವಳಿಯಲ್ಲಿ ಸಂದರ್ಭ ಸಾಧಕವಾದವನ್ನು ಬಯಲಿಗೆಳೆಯುವುದರಲ್ಲಿ, ವಿವಿಧ ದೇಶಗಳ ಶ್ರಮಿಕರ ನಡುವೆ ಸಂಬಂಧಗಳ ಪುನರ್‌ಸ್ಥಾಪನೆಯಲ್ಲಿ, ಜಗತ್ತಿನ ಕಮ್ಯೂನಿಸ್ಟ್ ಪಾರ್ಟಿಗಳ ರಚನೆ ಮತ್ತು ದೃಢೀಕರಣದಲ್ಲಿ ಮಹತ್ತರ ಪಾತ್ರ ನಿರ್ವಹಿಸಿತು.

ಪುಟ 16.

12 ಮೆನ್ಷೆವಿಕರು – ರಷ್ಯನ್ ಸೋಷಲ್ ಡೆಮೊಕ್ರಾಟಿಕ್ ಚಳವಳಿಯಲ್ಲಿ ಒಂದು ಸಂದರ್ಭಸಾಧಕ ಪ್ರವೃತ್ತಿಯ ಪ್ರತಿನಿಧಿಗಳು.

1903ರಲ್ಲಿ ದ್ವಿತೀಯ ಆರ್‌ಎಸ್‌ಡಿಎಲ್‌ಪಿ ಮಹಾಧಿವೇಶನದಲ್ಲಿ ಲೆನಿನರ ನಾಯಕತ್ವದಲ್ಲಿದ್ದ ಕ್ರಾಂತಿಕಾರಿ ಸೋಷಲ್ ಡೆಮೊಕ್ರಾಟರು ಬಹುಮತ ಗಳಿಸಿದರು (ರಷ್ಯನ್ ಭಾಷೆಯಲ್ಲಿ ಬಹುಮತ ಎನ್ನುವುದಕ್ಕೆ "ಬೊಲ್ಷಿನ್‌ಸ್ತ್ವೊ" ಎನ್ನಲಾಗುತ್ತದೆ. ಇದರಿಂದ "ಬೋಲ್ಷೆವಿಕರು" ಎನ್ನುವ ಹೆಸರು) ಮತ್ತು ಸಂದರ್ಭಸಾಧಕರು ಅಲ್ಪಮತೀಯರಾದರು (ರಷ್ಯನ್ ಭಾಷೆಯಲ್ಲಿ ಅಲ್ಪಮತ ಎನ್ನುವುದಕ್ಕೆ "ಮೆನ್ಷಿನ್‌ಸ್ತ್ವೊ" ಎನ್ನಲಾಗುತ್ತದೆ. ಇದರಿಂದ "ಮೆನ್ಷೆವಿಕರು" ಎನ್ನುವ ಹೆಸರು).

1905-1907ರ ಕ್ರಾಂತಿಯಲ್ಲಿ ಮೆನ್ಷೆವಿಕರು ಕಾರ್ಮಿಕ ವರ್ಗದ ಅಧಿನಾಯಕತ್ವವನ್ನು, ಕಾರ್ಮಿಕ ವರ್ಗ ಹಾಗೂ ರೈತಾಪಿ ಜನರ ಮೈತ್ರೀಕೂಟವನ್ನು ವಿರೋಧಿಸಿದರು ಮತ್ತು ಉದಾರವಾದಿ ಬೂರ್ಷ್ವಾಸೀಯೊಂದಿಗೆ ಸಹಕಾರ ಏರ್ಪಡಿಸಿಕೊಳ್ಳಬೇಕೆಂದು ಒತ್ತಾಯಿಸಿದರು. ಅವರ ಅಭಿಪ್ರಾಯದಲ್ಲಿ ಉದಾರವಾದಿ ಬೂರ್ಷ್ವಾಸೀ ಕ್ರಾಂತಿಯ ನಾಯಕತ್ವದಲ್ಲಿರಬೇಕಿದ್ದಿತು. 1905-1907ರ ಕ್ರಾಂತಿ ವಿಫಲಗೊಂಡು ಪ್ರತಿಗಾಮಿಗಳು ಮೇಲುಗೈ ಪಡೆದ ವರ್ಷಗಳಲ್ಲಿ ಮೆನ್ಷೆವಿಕರಲ್ಲಿ ಬಹುಮಂದಿ ವಿಸರ್ಜನವಾದಿಗಳಾದರು. ನ್ಯಾಯಬಾಹಿರಗೊಳಿಸಲಾಗಿದ್ದ ಕ್ರಾಂತಿಕಾರಿ ಪಾರ್ಟಿಯನ್ನು ಅಳಿಸಿಹಾಕಬೇಕೆಂದು ಅವರು ಒತ್ತಾಯಿಸಿದರು. 1917ರ ಫೆಬ್ರುವರಿಯಲ್ಲಿ ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿ ಜಯಗಳಿಸಿದನಂತರ ಮೆನ್ಷೆವಿಕರು ಬೂರ್ಷ್ವಾ ತಾತ್ಕಾಲಿಕ ಸರಕಾರ ಸೇರಿದರು, ಅದರ ಸಾಮ್ರಾಜ್ಯಶಾಹಿ ನೀತಿಗೆ ಬೆಂಬಲ ನೀಡಿದರು ಮತ್ತು ಆಗ ಸಿದ್ಧತೆಗೊಳ್ಳುತ್ತಿದ್ದ ಸಮಾಜವಾದಿ ಕ್ರಾಂತಿಯ ವಿರುದ್ಧ ಹೋರಾಟ ಹೂಡಿದರು.

ಅಕ್ಟೋಬರ್ ಸಮಾಜವಾದಿ ಕ್ರಾಂತಿಯನಂತರ ಮೆನ್ಷೆವಿಕರು ಬಹಿರಂಗ ಪ್ರತಿಕ್ರಾಂತಿಕಾರಿ ಪಾರ್ಟಿಯಾಗಿ ಪರಿವರ್ತನೆಗೊಂಡರು. ಈ ಪಾರ್ಟಿಯು ಸೋವಿಯತ್ ಪ್ರಭುತ್ವವನ್ನು ಉರುಳಿಸುವ ಉದ್ದೇಶದಿಂದ ಒಳಸಂಚು ಪಿತೂರಿಗಳನ್ನು ಸಂಘಟಿಸಿತು, ಅವುಗಳಲ್ಲಿ ಭಾಗವಹಿಸಿತು.

ಪುಟ 16.

13 ಸಮಾಜವಾದಿ-ಕ್ರಾಂತಿಕಾರಿಗಳು (ಎಸ್ಸಾರ್‌ಗಳು) – ರಷ್ಯದಲ್ಲಿದ್ದ ಒಂದು ಪೆಟಿ ಬೂರ್ಷ್ವಾ ಪಾರ್ಟಿ. 1901ರ ಕೊನೆಯಲ್ಲಿ ಹಾಗೂ 1902ರ ಆದಿಭಾಗದಲ್ಲಿ ನಾನಾ ನರೋದ್ನಿಕ್ ವೃಂದಗಳ ಹಾಗೂ ವೃತ್ತಗಳ ವಿಲೀನದ ಫಲವಾಗಿ ಇದು ಅಸ್ತಿತ್ವಕ್ಕೆ ಬಂದಿತು. ಸಮಾಜವಾದಿ-ಕ್ರಾಂತಿಕಾರಿಗಳು ತಮ್ಮನ್ನು ಸಮಾಜವಾದಿಗಳೆಂದು ಕರೆದುಕೊಂಡರು. ಆದರೆ ಅವರ ಸಮಾಜವಾದವು ವೈಜ್ಞಾನಿಕ ಸಮಾಜವಾದದೊಂದಿಗೆ – ಮಾರ್ಕ್ಸ್‌ವಾದದೊಂದಿಗೆ – ಯಾವ ಸಂಬಂಧವನ್ನೂ ಹೊಂದಿರಲಿಲ್ಲ. ಅದೊಂದು ಪೆಟಿ ಬೂರ್ಷ್ವಾ ಅಸಾಧ್ಯಾದರ್ಶವಾದಿ ಸಮಾಜವಾದವಾಗಿದ್ದಿತು.

ಸಮಾಜವಾದಿ-ಕ್ರಾಂತಿಕಾರಿಗಳು ಶ್ರಮಜೀವಿಗಳಿಗೂ ರೈತಾಪಿ ಜನರಿಗೂ ಮಧ್ಯೆ ವರ್ಗ ವ್ಯತ್ಯಾಸಗಳನ್ನು ಕಾಣಲಿಲ್ಲ, ರೈತಾಪಿ ಜನರ ಮಧ್ಯದಲ್ಲೇ ವರ್ಗ ವಿಭಜನೆಯನ್ನೂ ವರ್ಗ ವೈಪರೀತ್ಯಗಳನ್ನೂ – ದುಡಿಯುವ ರೈತರ ಮತ್ತು ಶ್ರೀಮಂತ ರೈತರ ಮಧ್ಯೆ – ಗಮನಿಸದೆ ತೇಲಿಸಿಬಿಟ್ಟರು ಮತ್ತು ಕ್ರಾಂತಿಯಲ್ಲಿ ಶ್ರಮಜೀವಿ ವರ್ಗದ ಅಗ್ರಗಾಮಿ ಪಾತ್ರವನ್ನು ನಿರಾಕರಿಸಿದರು. ತ್ಸಾರ್‌ಶಾಹಿಯ ವಿರುದ್ಧ ಹೋರಾಟದಲ್ಲಿ ಅವರ ಮುಖ್ಯ ವಿಧಾನ ವೈಯಕ್ತಿಕ ಭಯೋತ್ಪಾದಕ ಚರ್ಯೆಗಳನ್ನು ನಡೆಸುವುದಾಗಿದ್ದಿತು.

1905-1907ರ ಪ್ರಥಮ ರಷ್ಯನ್ ಕ್ರಾಂತಿಯು ಪರಾಭವಗೊಂಡ ನಂತರ ಸಮಾಜವಾದಿ-ಕ್ರಾಂತಿಕಾರಿಗಳ ಪಾರ್ಟಿ ಮುಗ್ಗಟ್ಟಿಗೊಳಗಾಯಿತು. ಇದರ ಫಲಿತಾಂಶವಾಗಿ ಪಾರ್ಟಿಯ ನಾಯಕತ್ವವು ವಾಸ್ತವವಾಗಿ ತ್ಸಾರ್‌ಶಾಹಿಯ ವಿರುದ್ಧ ಕ್ರಾಂತಿಕಾರಿ ಹೋರಾಟವನ್ನು ತ್ಯಜಿಸಿತು. ಪ್ರಥಮ ಜಾಗತಿಕ ಯುದ್ಧ ಕಾಲದಲ್ಲಿ (1914-1918) ಬಹುತೇಕ ಎಸ್ಸಾರ್‌ಗಳು ಸಾಮಾಜಿಕ ಸ್ವದೇಶ ಮೂಢಾಭಿಮಾನದ ನಿಲುವು ತಳೆದರು. 1917ರ ಫೆಬ್ರುವರಿಯ ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿಯ ವಿಜಯದನಂತರ ಸಮಾಜವಾದಿ-ಕ್ರಾಂತಿಕಾರಿ ಪಾರ್ಟಿಯ ನಾಯಕರು ಬೂರ್ಷ್ವಾ ತಾತ್ಕಾಲಿಕ ಸರಕಾರದ ಸದಸ್ಯರೂ ಆಗಿದ್ದರು, ಸಮಾಜವಾದಿ ಕ್ರಾಂತಿಯನ್ನು ಸಿದ್ಧಗೊಳಿಸುತ್ತಿದ್ದ ಕಾರ್ಮಿಕ ವರ್ಗದ ವಿರುದ್ಧ ಹೋರಾಟ ನಡೆಸಿದರು, 1917ರ ಬೇಸಿಗೆಯಲ್ಲಿ ರೈತ ಚಳವಳಿಯನ್ನು, ಹತ್ತಿಕ್ಕುವುದರಲ್ಲಿ ಭಾಗವಹಿಸಿದರು. ಅಕ್ಟೋಬರ್ ಕ್ರಾಂತಿಯನಂತರ ಸಮಾಜವಾದಿ-ಕ್ರಾಂತಿಕಾರಿ ಪಾರ್ಟಿಯು ಸೋವಿಯತ್ ಪ್ರಭುತ್ವದ ವಿರುದ್ಧ ಕ್ರಿಯಾಶೀಲ ಹೋರಾಟ ನಡೆಸಿತು.

ಪುಟ 16.

14 ಸ್ಪಾರ್ಟಾಕಿಸ್ಟರು – ಪ್ರಥಮ ಜಾಗತಿಕ ಯುದ್ಧದ ಆರಂಭದಲ್ಲಿ ಕಾರ್ಲ್ ಲೀಬ್‌ಕ್ನೆಹ್ಟ್, ರೋಸಾ ಲುಕ್ಸೆಂಬುರ್ಗ್, ಫ್ರಾನ್ಸ್ ಮೇರಿಂಗ್, ಕ್ಲಾರಾ ತ್ಸೆಟ್ಕಿನ್,

ಮತ್ತಿತರರು ಸ್ಥಾಪಿಸಿದ ಜರ್ಮನ್ ಎಡ ಸೋಷಲ್ ಡೆಮೊಕ್ರಾಟರ ಕ್ರಾಂತಿಕಾರಿ ಸಂಘಟನೆಯಾದ ಸ್ಪಾರ್ಟಾಕಸ್ ಲೀಗ್‌ನ ಸದಸ್ಯರು. ಇವರು ಜನಸಮೂಹಗಳ ಮಧ್ಯೆ ಕ್ರಾಂತಿಕಾರಿ ಪ್ರಚಾರ ಮಾಡಿದರು, ಯುದ್ಧ ವಿರೋಧಿ ಸಾಮೂಹಿಕ ಪ್ರದರ್ಶನಗಳನ್ನು ಸಂಘಟಿಸಿದರು, ಮುಷ್ಕರಗಳಿಗೆ ನಾಯಕತ್ವ ನೀಡಿದರು, ಪ್ರಥಮ ಜಾಗತಿಕ ಯುದ್ಧ(1914-1918)ದ ಸಾಮ್ರಾಜ್ಯಶಾಹಿ ಸ್ವರೂಪವನ್ನೂ ಸಂದರ್ಭಸಾಧಕರಾದ ಸೋಷಲ್ ಡೆಮೊಕ್ರಾಟಿಕ್ ನಾಯಕರ ದ್ರೋಹವನ್ನೂ ಬಯಲಿಗೆಳೆದರು. ಆದರೂ ಅನೇಕ ಸೈದ್ಧಾಂತಿಕ ಹಾಗೂ ತಾಂತ್ರಿಕ ಪ್ರಶ್ನೆಗಳಿಗೆ ಸಂಬಂಧಿಸಿ ಅವರು ತಪ್ಪು ಭಾವನೆಗಳನ್ನು ಹೊಂದಿದ್ದರು: ಸಾಮ್ರಾಜ್ಯಶಾಹಿಯ ಯುಗದಲ್ಲಿ ರಾಷ್ಟ್ರೀಯ-ವಿಮೋಚನಾ ಯುದ್ಧಗಳ ಸಾಧ್ಯತೆಯನ್ನು ಅಲ್ಲಗಳೆಯುತ್ತಿದ್ದರು, ಸಾಮ್ರಾಜ್ಯಶಾಹಿ ಯುದ್ಧವನ್ನು ಅಂತರ್ಯುದ್ಧವನ್ನಾಗಿ ಪರಿವರ್ತಿಸಬೇಕೆಂಬ ಘೋಷಣೆಯ ಬಗೆಗೆ ಸುಸಂಗತ ನಿಲುವು ತಳೆದಿರಲಿಲ್ಲ, ಕಾರ್ಮಿಕ ವರ್ಗದ ಮುಂಚೂಣಿ ಶಕ್ತಿಯಾಗಿ ಶ್ರಮಜೀವಿ ವರ್ಗದ ಪಾರ್ಟಿಯ, ಶ್ರಮಜೀವಿ ವರ್ಗದ ಸಂಗಾತಿಯಾಗಿ ರೈತಾಪಿ ವರ್ಗದ ಪಾತ್ರದ ಸರಿಯಾದ ಮೌಲ್ಯಾಂಕನ ಮಾಡಲಿಲ್ಲ, ಸಂದರ್ಭಸಾಧಕವಾದಿಗಳಿಂದ ನಿರ್ಧಾರಕವಾಗಿ ದೂರಸರಿಯಲು ಅಂಜುತ್ತಿದ್ದರು.

1917ರ ಏಪ್ರಿಲ್‌ನಲ್ಲಿ ಸ್ಪಾರ್ಟಾಕಸ್ ಲೀಗ್ ಜರ್ಮನಿಯ ಮಧ್ಯಮಾರ್ಗಿ 'ಸ್ವತಂತ್ರ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿ'ಯೊಂದಿಗೆ ಸೇರಿಕೊಂಡಿತು. ಆದರೂ ತನ್ನ ಸಂಘಟನೆಯನ್ನು ಸ್ವತಂತ್ರವನ್ನಾಗಿಯೇ ಉಳಿಸಿಕೊಂಡಿದ್ದಿತು. ಜರ್ಮನಿಯ 1918ರ ನವಂಬರ್ ಕ್ರಾಂತಿಯನಂತರ ಸ್ಪಾರ್ಟಾಕಸ್ ಲೀಗ್ "ಸ್ವತಂತ್ರ"ರೊಂದಿಗೆ ಸಂಬಂಧ ಕಡಿದುಕೊಂಡು 1918ರ ಡಿಸೆಂಬರ್‌ನಲ್ಲಿ ಜರ್ಮನಿಯ ಕಮ್ಯೂನಿಸ್ಟ್ ಪಾರ್ಟಿಯನ್ನು ಸೇರಿಕೊಂಡಿತು.

ಪುಟ 16.

15 "ವೆರ್ಸೈಲ್ಸ್" ಬೆಂಬಲಿಗರು. 1871ರ ಪ್ಯಾರಿಸ್ ಕಮ್ಯೂನ್‌ನ ಬದ್ಧ ವೈರಿಗಳು; ಕಮ್ಯೂನ್‌ನ ವಿಜಯದ ನಂತರ ವೆರ್ಸೈಲ್ಸ್‌ನಲ್ಲಿ ನೆಲೆಗೊಂಡ ಎ. ತ್ಯೇರ್‌ನ ನಾಯಕತ್ವದ ಫ್ರೆಂಚ್ ಪ್ರತಿಕ್ರಾಂತಿಕಾರಿ ಬೂರ್ಜ್ವಾ ಸರಕಾರದ ಬೆಂಬಲಿಗರು. ಇವರು ಕಮ್ಯೂನ್‌ನ ಸದಸ್ಯರನ್ನು ಅಮಾನುಷ ಕ್ರೂರತನದಿಂದ ಹತ್ತಿಕ್ಕಿದರು. 1871ರ ನಂತರ "ವೆರ್ಸೈಲ್ಸ್ ಬೆಂಬಲಿಗರು" ಎಂಬ ಪದವು ಮೃಗೀಯ ಪ್ರತಿಕ್ರಾಂತಿಕಾರಿ ಎಂಬ ಪದದ ಅರ್ಥಕ್ಕೆ ಸಮನಾಗಿದೆ.

ಪುಟ 17.

16 ಸ್ಪಾನಿಷ್-ಅಮೆರಿಕನ್ ಯುದ್ಧ (1898) – ಸ್ಪಾನಿಷ್ ವಸಾಹತುಗಳನ್ನು ಆಕ್ರಮಿಸಿಕೊಳ್ಳುವ ಗುರಿಯನ್ನು ಹೊಂದಿ ಅಮೆರಿಕವು ಸ್ಪೈನ್ ವಿರುದ್ಧ ನಡೆ

ಸಿದ ಸಾಮ್ರಾಜ್ಯಶಾಹಿ ಯುದ್ಧ. ಹಲವಾರು ಕದನಗಳ ನಂತರ ಸ್ಪೈನ್ ಸೋಲನ್ನು ಒಪ್ಪಿಕೊಂಡಿತು. ಶಾಂತಿ ಒಡಂಬಡಿಕೆ ಪ್ರಕಾರ ಪೋರ್ಟೋ-ರೀಕೊ, ಗುವಾಮ್ ಹಾಗೂ ಫಿಲಿಪೀನ್ಸ್ ಅಮೆರಿಕದ ವಸಾಹತುಗಳಾದವು. ಕ್ಯೂಬಕ್ಕೆ ಔಪಚಾರಿಕ ವಾಗಿ ಸ್ವಾತಂತ್ರ್ಯ ಮನ್ನಿಸಲಾಗಿತ್ತು. ಆದರೆ ಈ ದೇಶದ ಆಂತರಿಕ ವ್ಯವ ಹಾರಗಳಲ್ಲಿ ಸಶಸ್ತ್ರ ಹಸ್ತಕ್ಷೇಪ ನಡೆಸಲು ಅಮೆರಿಕಕ್ಕೆ ಹಕ್ಕು ನೀಡುವಂತಹ ವಿಧಿಯನ್ನು ಕ್ಯೂಬದ ಸಂವಿಧಾನದಲ್ಲಿ ಸೇರಿಸಲಾಗಿತ್ತು. ಅಮೆರಿಕದ ಏಕಸ್ವಾಮ್ಯ ಸಂಸ್ಥೆಗಳೂ ಅಮೆರಿಕದ ಸರಕಾರವೂ ವಾಸ್ತವವಾಗಿ ಕ್ಯೂಬದ ಮೇಲೆ ಒಡೆತನ ಹೊಂದಿದ್ದವು.

ಪುಟ 18.

17 ಆಂಗ್ಲೋ-ಬೋಯರ್ ಯುದ್ಧ (1899ರ ಅಕ್ಟೋಬರ್-ಮೇ 1902) – ದಕ್ಷಿಣ ಆಫ್ರಿಕ ಗಣತಂತ್ರಗಳಾದ ಟ್ರಾನ್ಸ್‌ವಾಲ್ ಹಾಗೂ ಆರೆಂಜ್ ವಿರುದ್ಧ ಇಂಗ್ಲೆಂಡ್‌ನ ವಸಾಹತು ಆಕ್ರಮಣಶೀಲ ಯುದ್ಧ. ಇದರ ಫಲವಾಗಿ ಈ ಎರಡೂ ಗಣತಂತ್ರ ಗಳು ಸ್ವಾತಂತ್ರ್ಯ ಕಳೆದುಕೊಂಡು ಬ್ರಿಟನ್ನಿನ ವಸಾಹತುಗಳಾದವು.

ಪುಟ 18.

18 ಸಾಮ್ರಾಜ್ಯವಾದ ಹಾಗೂ ಯುದ್ಧದ ಬಗೆಗೆ ಸಮಾಜವಾದಿಗಳ ಮನೋಧರ್ಮ ಕುರಿತು ಜರ್ಮನಿಯ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯ ಹೆಮ್ನಿಟ್ಸ್ ಮಹಾಧಿವೇಶನದ ಗೊತ್ತುವಳಿಯನ್ನು 1912ರ ಸೆಪ್ಟೆಂಬರ್ 20ರಂದು ಅಂಗೀ ಕರಿಸಲಾಯಿತು. ಈ ಗೊತ್ತುವಳಿಯಲ್ಲಿ ಸಾಮ್ರಾಜ್ಯವಾದಿ ನೀತಿಯನ್ನು ಖಂಡಿಸಿ ಶಾಂತಿ ಹೋರಾಟದ ಪ್ರಾಮುಖ್ಯವನ್ನು ಒತ್ತಿಹೇಳಲಾಯಿತು.

ಪುಟ 19.

19 ಪ್ರಸಕ್ತ ಆವೃತ್ತಿಯಲ್ಲಿನ ಪುಟಗಳಿಗೆ ಉಲ್ಲೇಖಿಸಲಾಗಿದೆ.

ಪುಟ 19.

20 *Die Bank* ('ದಿ ಬ್ಯಾಂಕ್') – ಜರ್ಮನ್ ಧನಾಧಿಪತಿಗಳ ನಿಯತಕಾಲಿಕ. 1908ರಿಂದ 1943ರವರೆಗೆ ಬರ್ಲಿನ್‌ನಲ್ಲಿ ಪ್ರಕಟವಾಗುತ್ತಿತ್ತು. ಲೆನಿನರು ತಮ್ಮ ಪ್ರಸಕ್ತ ಕೃತಿ ರಚನೆಯ ಸಿದ್ಧತೆಯ ಕಾಲದಲ್ಲಿ ಈ ನಿಯತಕಾಲಿಕದ ಲೇಖನ ಗಳನ್ನೂ, ಮಾಹಿತಿಗಳನ್ನೂ ಅನೇಕ ಬಾರಿ ವಿಶ್ಲೇಷಣೆಗೆ ಗುರಿಪಡಿಸಿದ್ದಾರೆ.

ಪುಟ 36.

21 ನೋಡಿ: ಕೆ. ಮಾರ್ಕ್ಸ್ ಹಾಗೂ ಎಫ್. ಎಂಗೆಲ್ಸ್, ಸಂಕಲಿತ ಕೃತಿಗಳು, ಸಂ. 25, ಭಾಗ 2, ಪು. 156 (ಕೆ. ಮಾರ್ಕ್ಸ್, 'ಬಂಡವಾಳ,' ಸಂ. 3).

ಪುಟ 47.

22 1873ರ ಪೂರ್ವಾರ್ಧದಲ್ಲಿ ಸ್ಟಾಕ್ ಎಕ್ಸ್‌ಚೇಂಜ್ ಕುಸಿತ ಮೊದಲು ಆಸ್ಟ್ರಿಯ-ಹಂಗೆರಿ, ನಂತರ ಜರ್ಮನಿ ಮತ್ತಿತರ ದೇಶಗಳಲ್ಲಿ ಉಂಟಾಯಿತು. 1870ರ ವರ್ಷಗಳ ಆರಂಭದಲ್ಲಿ ಸಾಲ ನೀಡಿಕೆ ವ್ಯವಸ್ಥೆಯ ವಿಸ್ತರಣೆ, ಸಂಸ್ಥಾಪನ ಚಳವಳಿ, ಸ್ಟಾಕ್ ಎಕ್ಸ್‌ಚೇಂಜ್ ವ್ಯವಹಾರ ಹಿಂದೆಂದೂ ಕಾಣದಷ್ಟು ಪ್ರಮಾಣಕ್ಕೇರಿದವು. ಕೈಗಾರಿಕೆ ಮತ್ತು ವಾಣಿಜ್ಯಗಳು ಹೆಚ್ಚುತ್ತಿದ್ದ, ಜಾಗತಿಕ ಆರ್ಥಿಕ ಮುಗ್ಗಟ್ಟಿನ ಸ್ಪಷ್ಟ ಕುರುಹುಗಳನ್ನು ಅನುಭವಿಸುತ್ತಿದ್ದ ಕಾಲದಲ್ಲೇ ಸ್ಟಾಕ್ ಎಕ್ಸ್‌ಚೇಂಜ್ ಸಟ್ಟಾವ್ಯಾಪಾರ ಬೆಳೆಯುತ್ತಾ ಹೋಯಿತು. 1873ರ ಮೇ 9ರಿಂದ ವಿಯೆನ್ನಾದ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ 24 ಗಂಟೆಗಳ ಅವಧಿಯಲ್ಲಿ ಷೇರುಗಳು ನೂರಾರು ಮಿಲಿಯಗಳಷ್ಟು ಪ್ರಮಾಣದಲ್ಲಿ ಅಪಮೌಲ್ಯಗೊಂಡವು. ದಿವಾಳಿಯೆದ್ದವರ ಸಂಖ್ಯೆ ಅಪಾರವಾಗಿತ್ತು. ಸ್ಟಾಕ್ ಎಕ್ಸ್‌ಚೇಂಜ್ ಕುಸಿತ ಬೇಗನೆಯೇ ಜರ್ಮನಿಗೂ ಹಬ್ಬಿತು.

ಪುಟ 50.

23 ಗ್ರುನ್‌ದರ್ (ಸಂಸ್ಥಾಪನೆ ಎಂಬ ಅರ್ಥ ನೀಡುವ "ಗ್ರುನ್‌ದರ್" ಎಂಬ ಜರ್ಮನ್ ಪದದಿಂದ) ಗುಲ್ಲುಗಳು – ಜರ್ಮನಿಯಲ್ಲಿ ಕಳೆದ ಶತಮಾನದ 8ನೆಯ ದಶಕದ ಆರಂಭದಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳ ಸಂಸ್ಥಾಪನಾ ಕಾರ್ಯ ತೀವ್ರವಾಗಿ ಬೆಳೆದಾಗ ಉಂಟಾದ ಗಲಾಟೆಗಳು. ಇಂತಹ ಸಂಸ್ಥಾಪನಾ ಕಾರ್ಯ ಹೆಚ್ಚಿದಾಗ ಭೂಮಿಯ ಬೆಲೆಯೂ ಸಟ್ಟಾ ಮಾರುಕಟ್ಟೆಯಲ್ಲಿ ಸೆಕ್ಯುರಿಟಿ ಪತ್ರಗಳ ಬೆಲೆಗಳೂ ಏರುವುದಕ್ಕೆ ಮತ್ತು ಶ್ರೀಮಂತರಾದ ಬೂರ್ಷ್ವಾ ವ್ಯವಹಾರ ಚತುರರ ಮೋಸ ಚರ್ಯೆಗಳಿಗೆ ದಾರಿಯಾಯಿತು.

ಪುಟ 50.

24 *Frankfurter Zeitung* ('ಫ್ರಾಂಕ್‌ಫುರ್ಟರ್ ತ್ಸೈತುಂಗ್' – 'ಫ್ರಾಂಕ್‌ಫುರ್ಟ್ ಪತ್ರಿಕೆ') – ಜರ್ಮನಿಯ ಭಾರಿ ಸಟ್ಟಾ ಉದ್ಯಮಿಗಳ ಮುಖವಾಣಿಯಾದ ಈ ದಿನಪತ್ರಿಕೆ 1856ರಿಂದ 1943ರವರೆಗೆ ಫ್ರಾಂಕ್‌ಫುರ್ಟ್-ಆನ್-ಮೈನ್‌ನಲ್ಲಿ ಪ್ರಕಟವಾಗುತ್ತಿತ್ತು. ಮತ್ತೆ 1949ರಲ್ಲಿ ಇದು 'ಫ್ರಾಂಕ್‌ಫುರ್ಟ್ ಸಾರ್ವತ್ರಿಕ ಪತ್ರಿಕೆ' ಎಂಬ ಹೆಸರಿನಲ್ಲಿ ಪ್ರಕಟವಾಗತೊಡಗಿತು.

ಪುಟ 52.

25 "ಸಂಘಟಿತ ಬಂಡವಾಳವಾದ" ಸಿದ್ಧಾಂತ. ಈ ಸಿದ್ಧಾಂತದ ಬೂರ್ಷ್ವಾ ಸಮರ್ಥನ ಸ್ವರೂಪವನ್ನೂ ಅವೈಜ್ಞಾನಿಕತೆಯನ್ನೂ ಲೆನಿನರು ತಮ್ಮ 'ಸಾಮ್ರಾಜ್ಯವಾದ – ಬಂಡವಾಳವಾದದ ಅತ್ಯುನ್ನತ ಘಟ್ಟ' ಹಾಗೂ 'ಸಾಮ್ರಾಜ್ಯವಾದ ಕುರಿತ ನೋಟುಪುಸ್ತಕಗಳು' ಎಂಬ ಕೃತಿಗಳಲ್ಲಿ ಬಯಲಿಗೆಳೆದಿದ್ದಾರೆ. ಈ ಸಿದ್ಧಾಂತವು

ಸಾಮ್ರಾಜ್ಯವಾದವನ್ನು ಸ್ಪರ್ಧೆಯೂ ಉತ್ಪಾದನಾ ಅರಾಜಕತೆಯೂ ಇಲ್ಲದ, ಆರ್ಥಿಕ ಮುಗ್ಗಟ್ಟುಗಳಿಲ್ಲದ, ಜನತಾ ಆರ್ಥಿಕತೆಯು ಯೋಜಿತ ರೀತಿಯಲ್ಲಿ ಬೆಳೆಯುವ ವಿಶಿಷ್ಟವಾದ ಸುಧಾರಿತ ಬಂಡವಾಳವಾದವನ್ನಾಗಿ ಚಿತ್ರಿಸುತ್ತದೆ. ಜೊಂಬಾರ್ಟ್, ಲೀಫ್‌ಮನ್ ಮತ್ತಿತರ ಏಕಸ್ವಾಮ್ಯ ಬಂಡವಾಳವಾದದ ಸಿದ್ಧಾಂತಿಗಳು ಪ್ರತಿಪಾದಿಸಿದ ಈ "ಸಂಘಟಿತ" ಬಂಡವಾಳವಾದ ಸಿದ್ಧಾಂತವನ್ನೇ ಕೌತ್‌ಸ್ಕಿ, ಹಿಲ್ಫೆರ್ಡಿಂಗ್ ಮತ್ತಿತರ ದ್ವಿತೀಯ ಇಂಟರ್‌ನ್ಯಾಷನಲ್‌ನ ಸುಧಾರಣಾವಾದಿ ಸಿದ್ಧಾಂತಿಗಳು ಅನುಕರಿಸಿದರು.

ಪುಟ 59.

26 ಸಾಮ್ರಾಜ್ಯವಾದಕ್ಕೆ ಮೆರುಗುಕೊಟ್ಟು ಏಕಸ್ವಾಮ್ಯಗಳ ಪ್ರಾಬಲ್ಯವನ್ನು ಮರೆಮಾಚುವ ಗುರಿಯೊಂದಿಗೆ "ಬಂಡವಾಳವನ್ನು ಪ್ರಜಾಪ್ರಭುತ್ವೀಕರಿಸುವುದ"ಕ್ಕೆ ಸಂಬಂಧಿಸಿ ಅನೇಕ ಬೂರ್ಷ್ವಾ-ಸುಧಾರಣಾವಾದಿ ಸಿದ್ಧಾಂತಗಳು ಹುಟ್ಟಿಕೊಂಡವು. ಜನರನ್ನು ಮೋಸಗೊಳಿಸಲು, ಶೋಷಣೆಯನ್ನು ಹೆಚ್ಚಿಸಲು, ಬಂಡವಾಳವುಳ್ಳ ವ್ಯಕ್ತಿಗಳನ್ನು ಮತ್ತಷ್ಟು ಶ್ರೀಮಂತಗೊಳಿಸಲು, ಕಡಮೆ ಮೌಲ್ಯದ ಷೇರುಗಳ ಮಾರಾಟವನ್ನು ಬಳಸಿಕೊಳ್ಳಲಾಯಿತು. ಆದರೆ ಕಾರ್ಮಿಕರನ್ನು ಉದ್ಯಮಗಳ ಒಡೆಯರನ್ನಾಗಿ ಮಾಡಲಾಗುವುದು, ಬಂಡವಾಳಗಾರರ ಮತ್ತು ಕಾರ್ಮಿಕರ ವರಮಾನಗಳನ್ನು "ಏಕ ಮಟ್ಟಕ್ಕೆ" ತರಲಾಗುವುದು ಎಂಬಂತಹ ವಿಚಾರಗಳನ್ನು ಸಮರ್ಥಿಸುವ ಈ ಸಿದ್ಧಾಂತವನ್ನು ವಾಸ್ತವಿಕ ಪರಿಸ್ಥಿತಿಯು ಬುಡಮೇಲು ಮಾಡಿತು. ವಾಸ್ತವವಾಗಿ ಶ್ರಮ ಹಾಗೂ ಬಂಡವಾಳಗಳ ನಡುವಣ, ಜನತೆ ಹಾಗೂ ಏಕಸ್ವಾಮ್ಯಗಳ ನಡುವಣ ಬಿರುಕನ್ನು ವಿಸ್ತಾರಗೊಳಿಸುವುದೇ ಬಂಡವಾಳವಾದದ ವಿಶಿಷ್ಟ ಲಕ್ಷಣವಾಗಿದೆ.

ಪುಟ 62.

27 ಲೆನಿನರು ಜಿ. ವಿ. ಪ್ಲೆಹಾನೊವ್‌ರಿಗೆ ಇಲ್ಲಿ ಉಲ್ಲೇಖಿಸುತ್ತಾರೆ. ಸಾಮ್ರಾಜ್ಯವಾದ ಕುರಿತ ಪ್ರಶ್ನೆಗೆ ಸಂಬಂಧಿಸಿದಂತೆ ಪ್ಲೆಹಾನೊವ್‌ರ ಹೇಳಿಕೆಗಳು ಪೆತ್ರೊಗ್ರಾದ್‌ನಲ್ಲಿ ಮೊದಲ ಜಾಗತಿಕ ಯುದ್ಧದ (1914-1918) ಕಾಲದಲ್ಲಿ ಪ್ರಕಟವಾದ ಅವರ 'ಯುದ್ಧದ ಬಗೆಗೆ' ಎಂಬ ಕೃತಿಯಲ್ಲಿ ಕಾಣಬರುತ್ತವೆ.

ಪುಟ 63.

28 ಫ್ರೆಂಚ್ ಪನಾಮಾ – 1892-1893ರಲ್ಲಿ ಪನಾಮಾ ಕಾಲುವೆಯನ್ನು ನಿರ್ಮಿಸುತ್ತಿದ್ದ ಫ್ರೆಂಚ್ ಕಂಪನಿಯಿಂದ ಸರ್ಕಾರಿ ಮತ್ತು ರಾಜಕೀಯ ವ್ಯಕ್ತಿಗಳು, ಅಧಿಕಾರಿಗಳು, ಪತ್ರಿಕೋದ್ಯಮಿಗಳು ಲಂಚ ಪಡೆದು ಅಧಿಕಾರ ದುರುಪಯೋಗ

ಪಡಿಸಿಕೊಂಡದ್ದು ಬಯಲಿಗೆ ಬಂದಿತು. ಇಲ್ಲಿ "ಫ್ರೆಂಚ್ ಪನಾಮಾ" ಎಂಬ ನುಡಿಗಟ್ಟನ್ನು ಭ್ರಷ್ಟಾಚಾರದ ಅರ್ಥದಲ್ಲಿ ಬಳಸಲಾಗಿದೆ.

ಪುಟ 75.

29 ನರೋದ್ನಿಕರು – ಹತ್ತೊಂಬತ್ತನೆಯ ಶತಮಾನದ 8ನೆಯ ದಶಕದಲ್ಲಿ ರಷ್ಯದಲ್ಲಿ ಕಾಣಿಸಿಕೊಂಡಿದ್ದ ಸೈದ್ಧಾಂತಿಕ ಹಾಗೂ ರಾಜಕೀಯ ಪ್ರವೃತ್ತಿಯೊಂದರ ಪ್ರತಿನಿಧಿಗಳು. ನರೋದ್ನಿಕರು ನಿರಂಕುಶಾಧಿಕಾರದ ವಿರುದ್ಧ ಹೋರಾಡುತ್ತಿದ್ದರು, ಭೂಮಾಲೀಕರ ಜಮೀನುಗಳನ್ನು ರೈತಾಪಿ ಜನರಿಗೆ ವರ್ಗಾಯಿಸಬೇಕೆಂದು ಒತ್ತಾಯಿಸುತ್ತಿದ್ದರು. ರಷ್ಯದಲ್ಲಿ ಬಂಡವಾಳವಾದಿ ಸಂಬಂಧಗಳ ಬೆಳವಣಿಗೆಯ ನಿಯಮಬದ್ಧತೆಯನ್ನು ಅಲ್ಲಗಳೆಯುತ್ತ ನರೋದ್ನಿಕರು ಶ್ರಮಜೀವಿ ವರ್ಗವನ್ನಲ್ಲ ಆದರೆ ರೈತಾಪಿ ವರ್ಗವನ್ನು ಪ್ರಧಾನ ಕ್ರಾಂತಿಕಾರಿ ಶಕ್ತಿಯನ್ನಾಗಿ ಭಾವಿಸಿದ್ದರು, ಗ್ರಾಮೀಣ ಸಮುದಾಯಗಳಲ್ಲಿ ಸಮಾಜವಾದದ ಮೊಳಕೆಯನ್ನು ಕಾಣುತ್ತಿದ್ದರು. ನಿರಂಕುಶಾಧಿಕಾರದ ವಿರುದ್ಧ ಹೋರಾಟಕ್ಕೆ ರೈತರನ್ನು ಎತ್ತಿ ಕಟ್ಟಲು ನರೋದ್ನಿಕರು ಗ್ರಾಮಾಂತರಕ್ಕೆ, "ನರೋದ್"ನ (ಜನರ) ಮಧ್ಯೆ ಹೋದರು. ಆದ್ದರಿಂದ ಇವರಿಗೆ ನರೋದ್ನಿಕರು (ಜನಾನುವರ್ತಿಗಳು) ಎಂಬ ಹೆಸರು ಬಂದಿದೆ.

ಹತ್ತೊಂಬತ್ತನೆಯ ಶತಮಾನದ 9-10ನೇ ದಶಕಗಳಲ್ಲಿ ನರೋದ್ನಿಕರು ತ್ಸಾರ್‌ಶಾಹಿಯೊಂದಿಗೆ ಹೊಂದಿಕೊಂಡು ಹೋಗುವ ಮಾರ್ಗ ಹಿಡಿದರು, ಶ್ರೀಮಂತ ರೈತರ ಹಿತಗಳನ್ನು ಸಮರ್ಥಿಸಿದರು, ಮಾರ್ಕ್ಸ್‌ವಾದದ ವಿರುದ್ಧ ಉಗ್ರವಾಗಿ ಹೋರಾಡಿದರು.

ಪುಟ 120.

30 ವಿಸರ್ಜನವಾದ – ಪ್ರಥಮ ರಷ್ಯನ್ ಕ್ರಾಂತಿಯ (1905-1907) ಪರಾಜಯದ ನಂತರ ರಷ್ಯನ್ ಸೋಷಲ್ ಡೆಮೊಕ್ರಾಟಿಕ್ ಲೇಬರ್ ಪಾರ್ಟಿಯ ಮೆನ್ಷೆವಿಕರ ನಡುವೆ ಉದವಿಸಿದ ತೀವ್ರಗಾಮಿ ಬಲಪಂಥೀಯ ಸಂದರ್ಭಸಾಧಕ ಪ್ರವೃತ್ತಿ. ಈ ವಿಸರ್ಜನವಾದಿಗಳು ಮಾರ್ಕ್ಸ್‌ವಾದಿ ಪಾರ್ಟಿಯ ಕಾರ್ಯಕ್ರಮ ಮತ್ತು ತಂತ್ರಗಳನ್ನು ನಿರಾಕರಿಸಿ ಶ್ರಮಜೀವಿ ವರ್ಗದ ಕ್ರಾಂತಿಕಾರಿ ಪಾರ್ಟಿಯನ್ನು ವಿಸರ್ಜನಗೊಳಿಸಿ ತಮ್ಮದೇ ಆದ ಸುಧಾರಣಾವಾದಿ ಪಾರ್ಟಿಯನ್ನು ರಚಿಸಲು ಹವಣಿಸಿದರು, ಇಂತಹ ಪಾರ್ಟಿಯ ಚಟುವಟಿಕೆಯನ್ನು ತ್ಸಾರನ ಆಡಳಿತದ ಪರಿಸ್ಥಿತಿಗಳಿಗೆ ಸರಿಹೊಂದಿಸಲು ಯತ್ನಿಸಿದರು.

ಪುಟ 140.

31 ಫೇಬಿಯನ್ ಸೊಸೈಟಿ – ಬ್ರಿಟನ್ನಿನಲ್ಲಿ ಬೂರ್ಷ್ವಾ ಬುದ್ಧಿಜೀವಿಗಳ ಗುಂಪೊಂದು 1884ರಲ್ಲಿ ಸಂಸ್ಥಾಪಿಸಿದ ಒಂದು ಸುಧಾರಣಾವಾದಿ ಸಂಸ್ಥೆ. ತಡ

ಮಾಡುವ ತಂತ್ರಗಳಿಗೆ ಖ್ಯಾತನಾಗಿದ್ದ ರೋಮನ್ ಜನರಲ್ ಫೇಬಿಯ ಕುಂಕ್ಟೇಟರ್‌ನ ಹೆಸರಿನಿಂದ ಈ ಸಂಸ್ಥೆಯನ್ನು ಕರೆಯಲಾಯಿತು. ಫೇಬಿಯನ್ನರು ವರ್ಗ ಹೋರಾಟವನ್ನು ಬಿಟ್ಟುಕೊಟ್ಟು ಬೂರ್ಷ್ವಾಸೀಯೊಳಕ್ಕೆ "ಸಮಾಜವಾದಿ" ವಿಚಾರಗಳನ್ನು "ತುಂಬುವ" ಕಾರ್ಯಭಾರವನ್ನು ತಮ್ಮ ಮುಂದಿರಿಸಿಕೊಂಡರು. ಸಣ್ಣಪುಟ್ಟ ಸುಧಾರಣೆಗಳ ಮೂಲಕವೇ ಸಮಾಜವಾದಕ್ಕೆ ಸಾಗಿ ಹೋಗುವುದು ಸಾಧ್ಯವೆಂದು ಅವರು ಪ್ರತಿಪಾದಿಸಿದರು.

ಪುಟ 141.

32 1899-1901ರ ಬಾಕ್ಸರ್ ಬಂಡಾಯವನ್ನು ಅಡಗಿಸಿದ್ದರ ಫಲಿತಾಂಶವಾಗಿ 1901ರ ಸೆಪ್ಟೆಂಬರ್ 7ರಂದು ಸಾಮ್ರಾಜ್ಯಶಾಹಿ ದೇಶಗಳಿಗೂ (ಇಂಗ್ಲೆಂಡ್, ಆಸ್ಟ್ರಿಯ-ಹಂಗೆರಿ, ಬೆಲ್ಜಿಯಂ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ರಷ್ಯ, ನೆದರ್‌ಲ್ಯಾಂಡ್ಸ್, ಸ್ಪೈನ್ ಹಾಗೂ ಅಮೆರಿಕ) ಮತ್ತು ಚೀಣಾಕ್ಕೂ ನಡುವೆ ಆದ "ಅಂತಿಮ ಒಡಂಬಡಿಕೆ" ಎಂದು ಹೇಳಲಾದ ಒಪ್ಪಂದಕ್ಕೆ ಲೆನಿನರು ಉಲ್ಲೇಖಿಸುತ್ತಾರೆ. ಇದರ ಫಲವಾಗಿ ವಿದೇಶೀ ಬಂಡವಾಳವು ಚೀಣಾವನ್ನು ಶೋಷಿಸಿ ಸುಲಿಗೆ ಮಾಡಲು ಹೊಸ ಸಾಧ್ಯತೆಗಳನ್ನು ಪಡೆದುಕೊಂಡಿತು.

ಪುಟ 153.

33 ಬಾಕ್ಸರ್ ಬಂಡಾಯ – 'ಇ-ಹೆ-ತುಆನ್' (ನ್ಯಾಯ ನೆಮ್ಮದಿಗಳಿಗಾಗಿ ಮುಷ್ಟಿ ಕಾಳಗ) ಎಂಬ ಕೂಟವು ಚೀಣಾದಲ್ಲೂ 1899-1901ರಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ನಡೆಸಿದ ಜನತಾ ಬಂಡಾಯ. ಜರ್ಮನಿಯ ಜನರಲ್ ವಾಲ್ಡೆರ್‌ಸೀ ನಾಯಕತ್ವದಲ್ಲಿ ಸಾಮ್ರಾಜ್ಯಶಾಹಿ ದೇಶಗಳ ಸಂಯುಕ್ತ ದಂಡನಾ ದಳವು ಈ ಬಂಡಾಯವನ್ನು ಕ್ರೂರವಾಗಿ ಅಡಗಿಸಿತು. ಜರ್ಮನಿ, ಜಪಾನ್, ಇಂಗ್ಲೆಂಡ್, ಅಮೆರಿಕ ಹಾಗೂ ರಷ್ಯನ್ ಸಾಮ್ರಾಜ್ಯವಾದಿಗಳು ಈ ಬಂಡಾಯವನ್ನು ಅಡಗಿಸುವುದರಲ್ಲಿ ಭಾಗವಹಿಸಿದರು. 1901ರಲ್ಲಿ ಚೀಣಾವು 'ಅಂತಿಮ ಒಡಂಬಡಿಕೆ' ಎಂಬ ಹೆಸರು ಪಡೆದ ದಸ್ತಾವೇಜಿಗೆ ಸಹಿ ಹಾಕುವ ಬಲಾತ್ಕಾರಕ್ಕೆ ಒಳಗಾಯಿತು. ಇದರ ಪ್ರಕಾರ ಚೀಣಾವು ವಿದೇಶೀ ಸಾಮ್ರಾಜ್ಯಶಾಹಿಯ ಅರೆವಸಾಹತು ಆಯಿತು.

ಪುಟ 154.

34 ಫಷೋದಾ – ಪೂರ್ವ ಸುಡಾನ್‌ನಲ್ಲಿನ ಒಂದು ಜನವಸತಿ ಕೇಂದ್ರ (ಚಿಕ್ಕ ಪಟ್ಟಣ). ಇಲ್ಲಿ 1898ರ ಸೆಪ್ಟೆಂಬರ್‌ನಲ್ಲಿ ಆಂಗ್ಲ ಹಾಗೂ ಫ್ರೆಂಚ್ ವಸಾಹತು ದಳಗಳು ಪರಸ್ಪರ ಘರ್ಷಣೆ ನಡೆಸಿದವು. ಇದರಿಂದಾಗಿ ಅಂತರ

ರಾಷ್ಟ್ರೀಯ ಸಂಬಂಧಗಳಲ್ಲಿ ತೀವ್ರ ಬಿಕ್ಕಟ್ಟು ಉಂಟಾಯಿತು. ಈ ಬಿಕ್ಕಟ್ಟು ಸುಡಾನ್‌ನಲ್ಲಿ ಪ್ರಾಬಲ್ಯಕ್ಕಾಗಿ ಮತ್ತು ಆಫ್ರಿಕದ ವಿಭಜನೆಯ ಮುಕ್ತಾಯಕ್ಕಾಗಿ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ನಡುವಣ ಹೋರಾಟದ ಪ್ರತಿಫಲನವಾಗಿದ್ದಿತು. ಪುಟ 155.

35 'ರಾಜ್ಯ ಹಾಗೂ ಕ್ರಾಂತಿ' ಕೃತಿಯನ್ನು ಲೆನಿನರು 1917ರ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ರಚಿಸಿದರು.

1916ರ ಅಂತ್ಯ ಹಾಗೂ 1917ರ ಆರಂಭ ಕಾಲದಲ್ಲಿ ಲೆನಿನರು ಜ್ಯೂರಿಚ್‌ನಲ್ಲಿ ವಾಸಿಸುತ್ತ ರಾಜ್ಯದ ಕುರಿತ ಪ್ರಶ್ನೆಗೆ ಸಂಬಂಧಿಸಿ ಕೆ. ಮಾರ್ಕ್ಸ್ ಮತ್ತು ಎಫ್. ಎಂಗೆಲ್ಸ್‌ರ ಕೃತಿಗಳನ್ನು ಕೂಲಂಕಷವಾಗಿ ಅಧ್ಯಯಿಸಿದರು. 'ರಾಜ್ಯದ ಬಗೆಗೆ ಮಾರ್ಕ್ಸ್‌ವಾದ' ಎಂಬ ಶೀರ್ಷಿಕೆ ಇದ್ದ ನೀಲಿ ರಟ್ಟಿನ ನೋಟ್‌ಪುಸ್ತಕವೊಂದರಲ್ಲಿ ಸಣ್ಣ ಅಕ್ಷರಗಳಲ್ಲಿ ಹತ್ತಿರ ಹತ್ತಿರವಾಗಿ ಟಿಪ್ಪಣಿಗಳನ್ನು ಬರೆದಿದ್ದರು. ಅದರಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಕೃತಿಗಳಿಂದ ಉದ್ಧರಣಗಳೂ, ಕೌತ್‌ಸ್ಕಿ ಪಾನ್ನೆಕೂಕ್ ಹಾಗೂ ಬೆರ್ನ್‌ಷ್ಟೈನ್‌ರ ಕೃತಿಗಳಿಂದ ಉದ್ಧೃತ ಭಾಗಗಳೂ ಇದ್ದವು. ಅವರ ಕೃತಿಗಳ ಬಗೆಗೆ ಲೆನಿನರು ವಿಮರ್ಶಾತ್ಮಕ ವ್ಯಾಖ್ಯಾನಗಳನ್ನು ಮಾಡಿದ್ದರು, ತಮ್ಮದೇ ತೀರ್ಮಾನಗಳನ್ನೂ ಸಾಮಾನ್ಯೀಕರಣಗಳನ್ನೂ ನೀಡಿದ್ದರು.

ಲೆನಿನರ ಯೋಜನೆಯ ಪ್ರಕಾರ 'ರಾಜ್ಯ ಹಾಗೂ ಕ್ರಾಂತಿ' ಗ್ರಂಥವು ಏಳು ಅಧ್ಯಾಯಗಳನ್ನು ಒಳಗೊಂಡಿರಬೇಕಿದ್ದಿತು. ಆದರೆ ಕೊನೆಯ, ಏಳನೆಯ '1905 ಹಾಗೂ 1917ರ ರಷ್ಯನ್ ಕ್ರಾಂತಿಗಳ ಅನುಭವ' ಎಂಬ ಅಧ್ಯಾಯವನ್ನು ಬರೆಯಲೇ ಇಲ್ಲ; ಅದಕ್ಕಾಗಿ ಲೆನಿನರು ರಚಿಸಿದ್ದ ವಿವರವಾದ ಯೋಜನೆಯಷ್ಟೆ ಇರುವುದು. ತಾವು "ಈ ಏಳನೆಯ ಅಧ್ಯಾಯವನ್ನು ಬರೆದು ಮುಗಿಸುವುದರಲ್ಲಿ ತುಂಬ ನಿಧಾನವಾದರೆ, ಅಥವಾ ಅದು ತುಂಬ ದೊಡ್ಡದಾಗಿ ಬೆಳೆದು ಬಿಟ್ಟರೆ, ಮೊದಲ ಆರು ಅಧ್ಯಾಯಗಳನ್ನೇ ಮೊದಲ ಭಾಗವಾಗಿ ಪ್ರತ್ಯೇಕವಾಗಿ ಪ್ರಕಟಿಸಬೇಕು"... ಎಂದು ಲೆನಿನ್ ಪ್ರಕಟಣಕಾರರಿಗೆ ಬರೆದ ಚೀಟಿಯೊಂದರಲ್ಲಿ ತಿಳಿಸಿದ್ದರು.

ಹಸ್ತಪ್ರತಿಯ ಮೊದಲ ಪುಟದಲ್ಲಿ ಗ್ರಂಥಕರ್ತೃವಿನ ಹೆಸರು ಎಫ್. ಎಫ್. ಇವನೋವ್‌ಸ್ಕಿ ಎಂಬ ಕೃತಕನಾಮದೊಂದಿಗೆ ಕಾಣಿಸಿಕೊಂಡಿದೆ. ಲೆನಿನರು ಈ ಕೃತಕನಾಮ ಬಳಸುವ ಯೋಚನೆ ಮಾಡಿದರೇಕೆಂದರೆ, ಹಾಗೆ ಮಾಡದಿದ್ದರೆ ತಾತ್ಕಾಲಿಕ ಸರಕಾರವು ಪುಸ್ತಕಕ್ಕೆ ಮುಟ್ಟುಗೋಲು ಹಾಕುತ್ತಿದ್ದಿತು. ಆದರೆ ಗ್ರಂಥ 1918ರವರೆಗೂ ಪ್ರಕಟವಾಗಲಿಲ್ಲ. ಆಗ ಕೃತಕನಾಮದ ಆವಶ್ಯಕತೆ ಇರಲಿಲ್ಲ. ಎರಡನೆಯ ಅಧ್ಯಾಯಕ್ಕೆ '1852ರಲ್ಲಿ ಮಾರ್ಕ್ಸ್‌ರವರು ಈ ಪ್ರಶ್ನೆಯನ್ನು ಮುಂದಿಟ್ಟ ರೀತಿ' ಎಂಬ ಹೊಸ ವಿಭಾಗವನ್ನು ಸೇರಿಸಿದ ಗ್ರಂಥದ

ದ್ವಿತೀಯ ಆವೃತ್ತಿಯು 1919ರಲ್ಲಿ ಕಾಣಿಸಿಕೊಂಡಿತು. ಲೆನಿನರ 'ರಾಜ್ಯ ಹಾಗೂ ಕ್ರಾಂತಿ' ಎಂಬ ಈ ಪುಸ್ತಕ ಸೋವಿಯತ್ ಒಕ್ಕೂಟ ಹಾಗೂ ವಿದೇಶಗಳಲ್ಲಿ ಬಹಳ ಪ್ರಚಲಿತವಾಗಿದೆ.

ಪುಟ 167.

36 1905-1907ರಲ್ಲಿ ನಡೆದ ಪ್ರಥಮ ರಷ್ಯನ್ ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿ – ಇದು 1905ರ ಜನವರಿ 9ರ ಘಟನೆಗಳಿಂದ ಪ್ರಾರಂಭವಾಯಿತು. ಆ ದಿನದಂದು ಪೀಟರ್ಸ್‌ಬರ್ಗ್‌ನಲ್ಲಿ ತ್ಸಾರನ ಆಜ್ಞೆಯ ಮೇರೆಗೆ ಕಾರ್ಮಿಕರ ಶಾಂತಿಯುತ ಮೆರವಣಿಗೆಯ ಮೇಲೆ ಗುಂಡು ಹಾರಿಸಲಾಯಿತು.

ಇದಕ್ಕೆ ಪ್ರತ್ಯುತ್ತರವಾಗಿ ದೇಶದಾದ್ಯಂತ ಮುಷ್ಕರಗಳ, ಸಶಸ್ತ್ರ ಬಂಡಾಯ ಕಾರ್ಯಾಚರಣೆಗಳ ಅಲೆಯೆದ್ದಿತು. ನಿರಂಕುಶಾಧಿಕಾರವನ್ನು ಉರುಳಿಸಿ ಪ್ರಜಾ ಸತ್ತಾತ್ಮಕ ಗಣತಂತ್ರವನ್ನು ರಚಿಸುವುದಕ್ಕಾಗಿ, ಜಮೀನ್ದಾರಿ ಭೂಒಡೆತನಗಳ ನಿರ್ಮೂಲನಕ್ಕಾಗಿ, ಎಂಟು ಗಂಟೆಗಳ ಕೆಲಸ ದಿನದ ಜಾರಿಗಾಗಿ ರಷ್ಯದ ಶ್ರಮಿಕರು ಹೋರಾಟ ನಡೆಸಿದರು. 1905ರ ಬೇಸಿಗೆಯಲ್ಲಿ ಇವಾನವೊ-ವಜ್ನೆಸೇನ್‌ಸ್ಕ್‌ನ ಕಾರ್ಮಿಕರು ಅದೇ ಮೊದಲ ಬಾರಿಗೆ ಕಾರ್ಮಿಕ ಡೆಪ್ಯೂಟಿಗಳ ಸೋವಿಯತ್‌ಗಳನ್ನು ರಚಿಸಿದರು, ಇತರ ಕೈಗಾರಿಕಾ ಕೇಂದ್ರಗಳ ಕಾರ್ಮಿಕರೂ ಇವರ ಮೇಲ್ಪಂಕ್ತಿ ಅನುಸರಿಸಿದರು.

ರೈತಾಪಿ ಜನರೂ ತ್ಸಾರ್‌ಶಾಹಿ-ಭೂಮಾಲೀಕ ವ್ಯವಸ್ಥೆಯ ವಿರುದ್ಧ ಹೋರಾಟದಲ್ಲಿ ತೊಡಗಿದರು. ಇವರು ಭೂಮಾಲೀಕರ ಜಮೀನುಗಳನ್ನು ಜನರಿಗೆ ಕೊಡಬೇಕೆಂದು ಒತ್ತಾಯಿಸಿದರು.

ಅದೇ ವರ್ಷದ ಅಕ್ಟೋಬರ್‌ನಲ್ಲಿ ಅಖಿಲ ರಷ್ಯನ್ ರಾಜಕೀಯ ಮುಷ್ಕರವನ್ನು ಘೋಷಿಸಲಾಯಿತು. ದೇಶದಾದ್ಯಂತ ಎಲ್ಲ ಕಾರ್ಖಾನೆಗಳೂ ಫ್ಯಾಕ್ಟರಿಗಳೂ ಕೆಲಸ ಸ್ತಬ್ಧಗೊಳಿಸಿದವು, ರೈಲ್ವೆ ಸಾರಿಗೆ ಸ್ತಬ್ಧಗೊಂಡಿತು. ಸಾರ್ವತ್ರಿಕ ಮುಷ್ಕರವು ಕಾರ್ಮಿಕ ವರ್ಗದ ಭಾರಿ ಶಕ್ತಿಯನ್ನು ಪ್ರದರ್ಶಿಸಿತು. ರಷ್ಯದಲ್ಲಿ ಸಂವಿಧಾನವನ್ನು ಜಾರಿಗೆ ತಂದು ವಾಕ್‌ಸ್ವಾತಂತ್ರ್ಯ, ಸಭೆ ನಡೆಸುವ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ ಇತ್ಯಾದಿಗಳನ್ನು "ದಯಪಾಲಿಸುವುದಾಗಿ" ಆಶ್ವಾಸನೆ ಕೊಟ್ಟ ತ್ಸಾರನ ಮ್ಯಾನಿಫೆಸ್ಟ್ ಅಕ್ಟೋಬರ್ 17ರಂದು ಪ್ರಕಟವಾಯಿತು. ನಿರೀಕ್ಷಿಸಿದಂತೆ ತ್ಸಾರನ ಆಶ್ವಾಸನೆಗಳನ್ನು ಈಡೇರಿಸಲಾಗಲಿಲ್ಲ.

1905ರ ಡಿಸೆಂಬರ್‌ನಲ್ಲಿ ಮಾಸ್ಕೋದಲ್ಲಿ ಸಶಸ್ತ್ರ ಬಂಡಾಯ ಆರಂಭವಾಯಿತು. ಒಂಬತ್ತು ದಿನಗಳ ಕಾಲ ಕಾರ್ಮಿಕರು ಸೋಷಲ್ ಡೆಮೊಕ್ರಾಟರ – ಬೋಲ್ಷೆವಿಕರ – ನಾಯಕತ್ವದಲ್ಲಿ ಫಿರಂಗಿಗಳಿಂದ ಸಜ್ಜಿತವಾದ ತ್ಸಾರ್‌ಶಾಹಿ

ಸೈನ್ಯದಳಗಳ ವಿರುದ್ಧ ಆಳ್ವೇರಿಗಳನ್ನು ನಿರ್ಮಿಸಿ ವೀರಾವೇಶದಿಂದ ಹೋರಾಡಿದರು.

1906ರಲ್ಲಿ ನಡೆದ ಮುಷ್ಕರಗಳಲ್ಲಿ ಒಂದು ಮಿಲಿಯನ್‌ಗೂ ಹೆಚ್ಚು ಮಂದಿ ಕಾರ್ಮಿಕರು ಭಾಗವಹಿಸಿದರು. 1906ರ ಪ್ರಥಮಾರ್ಧದಲ್ಲಿ ರೈತ ಆಂದೋಳನವು ಅರ್ಧಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಹೆಚ್ಚಿತು.

ಪ್ರಥಮ ರಷ್ಯನ್ ಕ್ರಾಂತಿ ಸೋಲನ್ನನುಭವಿಸಿತು. ಆದರೆ ಇದು ಭಾರಿ ಐತಿಹಾಸಿಕ ಪ್ರಾಮುಖ್ಯತೆ ಪಡೆಯಿತು. ಲೆನಿನರ ಮಾತುಗಳಲ್ಲಿ ಹೇಳುವುದಾದರೆ 1905-1907ರಲ್ಲಿ ನಡೆದ ಕ್ರಾಂತಿಯು ತ್ಸಾರ್‌ಶಾಹಿ ರಷ್ಯದ ಜನಸಮೂಹಗಳಿಗೆ 1917ರ ಅಕ್ಟೋಬರ್ ಕ್ರಾಂತಿಯ 'ಡ್ರೆಸ್ ರಿಹರ್ಸಲ್' ಆಗಿತ್ತು. ಅದಿಲ್ಲದಿದ್ದರೆ ಕಾರ್ಮಿಕ ವರ್ಗ ಈ ಕ್ರಾಂತಿಯಲ್ಲಿ ಜಯ ಗಳಿಸುವುದು ಅಸಾಧ್ಯವಾಗುತ್ತಿತ್ತು. 1905-1907ರ ರಷ್ಯನ್ ಕ್ರಾಂತಿಯು ಏಷ್ಯದಲ್ಲಿ ಕ್ರಾಂತಿಕಾರಿ ಚಳವಳಿಯ ಬೆಳವಣಿಗೆಯ ಮೇಲೆ ಭಾರಿ ಪ್ರಭಾವ ಬೀರಿತು.

ಪುಟ 170.

37 ಲೆನಿನರು 1917ರ ಫೆಬ್ರುವರಿ 27ರಂದು (ಮಾರ್ಚ್ 12) ರಷ್ಯದಲ್ಲಿ ನಡೆದ ಬೂರ್ಷ್ವಾ-ಪ್ರಜಾಸತ್ತಾತ್ಮಕ ಕ್ರಾಂತಿಗೆ ಉಲ್ಲೇಖಿಸಿದ್ದಾರೆ. ಈ ಕ್ರಾಂತಿಯ ಫಲಿತಾಂಶವಾಗಿ ನಿರಂಕುಶಾಧಿಕಾರವನ್ನು ತೊಡೆದು ಹಾಕಿ ತಾತ್ಕಾಲಿಕ ಬೂರ್ಷ್ವಾ ಸರ್ಕಾರ ರಚಿಸಲಾಯಿತು.

ಪುಟ 170.

38 ನೋಡಿ: ಎಫ್. ಎಂಗೆಲ್ಸ್, 'ಕುಟುಂಬ, ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ' – ಅಧ್ಯಾಯ IX. 'ಅನಾಗರಿಕತೆ ಹಾಗೂ ನಾಗರಿಕತೆ.'

ಪುಟ 174.

39 ಬಣ ಅಥವಾ ಬುಡಕಟ್ಟು ವ್ಯವಸ್ಥೆ. ಇದು ಆದಿಕಾಲದ ಸಾಮುದಾಯಿಕ ಸಮಾಜ ವ್ಯವಸ್ಥೆ ಅಥವಾ ಇತಿಹಾಸದಲ್ಲೇ ಪ್ರಪ್ರಥಮವಾದ ಸಾಮಾಜಿಕ-ಆರ್ಥಿಕ ವ್ಯವಸ್ಥೆ. ಇದರಲ್ಲಿ ರಕ್ತ ಸಂಬಂಧಿಗಳು ಆರ್ಥಿಕ ಹಾಗೂ ಸಾಮಾಜಿಕ ಬಂಧನಗಳಿಂದ ಒಂದುಗೂಡಿದ್ದರು. ಈ ಕುಲ ಅಥವಾ ಬಣ ವ್ಯವಸ್ಥೆಯು ಮಾತೃಪ್ರಧಾನ ಹಾಗೂ ಪಿತೃಪ್ರಧಾನ ಪದ್ಧತಿಗಳ ಮೂಲಕ ಹಾದು ಬಂದಿತು. ಆದಿ ಸಮಾಜ ವ್ಯವಸ್ಥೆಯು ವರ್ಗ ಸಮಾಜವಾಗುವುದರೊಂದಿಗೆ ಮತ್ತು ರಾಜ್ಯದ ಉದಯದೊಂದಿಗೆ, ಅಂತ್ಯಗೊಂಡಿತು. ಆದಿ ಕಾಲದ ಸಾಮುದಾಯಿಕ ಸಮಾಜ ವ್ಯವಸ್ಥೆಯಲ್ಲಿ ಉತ್ಪಾದನಾ ಸಂಬಂಧಗಳು, ಉತ್ಪಾದನಾ ಸಾಧನಗಳ ಸಾಮಾಜಿಕ

ಮಾಲೀಕತ್ವ ಹಾಗೂ ಎಲ್ಲ ಉತ್ಪನ್ನಗಳ ಸರಿಸಮಾನ ಹಂಚಿಕೆಗಳ ಮೇಲೆ ಆಧರಿಸಿದ್ದವು. ಇದು ಆ ಕಾಲದಲ್ಲಿದ್ದ ಉತ್ಪಾದಕ ಶಕ್ತಿಗಳ ಕೆಳಮಟ್ಟ ಹಾಗೂ ಅವುಗಳ ಸ್ವಭಾವಕ್ಕೆ ಅನುಗುಣವಾಗಿದ್ದಿತು.

ಪುಟ 176.

40 ನೋಡಿ: ಎಫ್. ಎಂಗೆಲ್ಸ್. 'ಆದಿ ಕಾಲದ ಕುಟುಂಬದ ಇತಿಹಾಸ ಕುರಿತು' (ಬಾಹೋಫೆನ್, ಮ್ಯಾಕ್‌ಲೆನ್ನನ್, ಮಾರ್ಗನ್). 'ಕುಟುಂಬ, ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ'ದ ನಾಲ್ಕನೆಯ ಜರ್ಮನ್ ಆವೃತ್ತಿಗೆ ಮುನ್ನುಡಿ.

ಪುಟ 179.

41 1871ರ ಪ್ಯಾರಿಸ್ ಕಮ್ಯೂನ್‌ಗೆ ಉಲ್ಲೇಖ. ಶ್ರಮಜೀವಿ ವರ್ಗದ ಸರ್ವಾಧಿಕಾರತ್ವ ರಚನೆಯಲ್ಲಿ ಇತಿಹಾಸದಲ್ಲೇ ಮೊದಲ ಅನುಭವ. ಪ್ಯಾರಿಸ್‌ನಲ್ಲಿ ಶ್ರಮಜೀವಿ ವರ್ಗ ಕ್ರಾಂತಿ ರಚಿಸಿದ ಕಾರ್ಮಿಕ ವರ್ಗದ ಕ್ರಾಂತಿಕಾರಿ ಸರ್ಕಾರ 1871ರ ಮಾರ್ಚ್ 18ರಿಂದ ಮೇ 28ರ ವರೆಗೆ ಅಸ್ತಿತ್ವದಲ್ಲಿತ್ತು.

ಪ್ಯಾರಿಸ್ ಕಮ್ಯೂನ್ ಚರ್ಚನ್ನು ರಾಜ್ಯದಿಂದ, ಶಾಲೆಯನ್ನು ಚರ್ಚಿನಿಂದ ಬೇರ್ಪಡಿಸಿತು, ನಿಯತ ಸೈನ್ಯದ ಬದಲಿಗೆ ಎಲ್ಲ ಜನರಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸಿತು, ನ್ಯಾಯಾಧೀಶರನ್ನೂ ಅಧಿಕಾರಿಗಳನ್ನೂ ಜನರು ಚುನಾಯಿಸಬೇಕೆಂಬ ಸೂತ್ರ ಜಾರಿಗೆ ತಂದಿತು, ಅಧಿಕಾರಿಗಳ ವೇತನಗಳು ಕಾರ್ಮಿಕರ ವೇತನಗಳಿಗಿಂತ ಮಿಗಿಲಾಗಿರಬಾರದು ಎಂದು ನಿಗದಿಮಾಡಿ ಕಾರ್ಮಿಕರ ಹಾಗೂ ನಗರ ಬಡ ಜನರ ಆರ್ಥಿಕ ಪರಿಸ್ಥಿತಿಯ ಉತ್ತಮೀಕರಣಕ್ಕೆ ಹಲವಾರು ಕ್ರಮಗಳನ್ನು ಜಾರಿಗೆ ತಂದಿತು.

1871ರ ಮೇ 21ರಂದು ತ್ಯೇರ್‌ನ ಪ್ರತಿಕ್ರಾಂತಿಕಾರಿ ಸರ್ಕಾರದ ಸೈನಿಕರು ಪ್ಯಾರಿಸ್‌ಗೆ ನುಗ್ಗಿ ಪ್ಯಾರಿಸ್‌ನ ಕಾರ್ಮಿಕರನ್ನು ಕ್ರೂರವಾಗಿ ಹತ್ತಿಕ್ಕಿದರು: ಸುಮಾರು 30 ಸಾವಿರ ಜನರ ಹತ್ಯೆ ನಡೆಯಿತು, 50 ಸಾವಿರ ಮಂದಿ ಬಂಧನಕ್ಕೊಳಗಾದರು, ಅನೇಕರನ್ನು ಕಠಿಣ ಸಜೆ ಅನುಭವಿಸಲು ಅಟ್ಟಲಾಯಿತು.

ಪುಟ 181.

42 ಬೊನಾಪಾರ್ಟ್‌ವಾದ (ಫ್ರಾನ್ಸ್‌ನ ಇಬ್ಬರು ಚಕ್ರವರ್ತಿಗಳ ಹೆಸರಿನಿಂದ) ವರ್ಗಗಳ ತೀರ ಜಟಿಲ ಹೋರಾಟವನ್ನು ಉಪಯೋಗಿಸಿಕೊಂಡು ಕುಯುಕ್ತಿ ರಾಜನೀತಿ ಪಾಲಿಸುವ ಸರ್ಕಾರವನ್ನುಳ್ಳ ಭಾರಿ ಬೂರ್ಷ್ವಾ ಸರ್ವಾಧಿಕಾರತ್ವದ ರೂಪವನ್ನು ಹೀಗೆ ಕರೆಯಲಾಗುತ್ತಿದೆ. ಕಾರ್ಯತಃ ಬಂಡವಾಳವಾದಕ್ಕೆ ಸೇವೆ

ಸಲ್ಲಿಸುತ್ತ ಇಂತಹ ಸರ್ಕಾರ ನಾನಾ ಆಶ್ವಾಸನೆಗಳಿಂದ ಹಾಗೂ ಸಣ್ಣಪುಟ್ಟ ದಾನಗಳನ್ನು ಕೊಡುತ್ತ ಕಾರ್ಮಿಕರನ್ನು ವಂಚಿಸುತ್ತದೆ.

ಪುಟ 181.

43 ನೋಡಿ: ಎಫ್. ಎಂಗೆಲ್ಸ್, 'ಆ್ಯಂಟಿ ಡ್ಯೂರಿಂಗ್. ವಿಜ್ಞಾನದಲ್ಲಿ ಮಾನ್ಯ ಎವ್ಗೇನಿ ಡ್ಯೂರಿಂಗ್ ಸಾಧಿಸಿದ ಕ್ರಾಂತಿ,' ಮೂರನೆಯ ಭಾಗ, 'ಸಮಾಜವಾದ,' 'II. ಸಿದ್ಧಾಂತದ ಸ್ಥೂಲ ಚಿತ್ರ.'

ಪುಟ 186.

44 ಕೆ. ಮಾರ್ಕ್ಸ್‌ರವರ 'ಗೋಥಾ ಕಾರ್ಯಕ್ರಮದ ಟೀಕೆ' (ಭಾಗ IV) ಮತ್ತು ಎಫ್. ಎಂಗೆಲ್ಸ್‌ರ 'ಆ್ಯಂಟಿ ಡ್ಯೂರಿಂಗ್. ವಿಜ್ಞಾನದಲ್ಲಿ ಮಾನ್ಯ ಎವ್ಗೇನಿ ಡ್ಯೂರಿಂಗ್ ಸಾಧಿಸಿದ ಕ್ರಾಂತಿ,' ಮೂರನೆಯ ಭಾಗ, 'ಸಮಾಜವಾದ,' 'II. ಸಿದ್ಧಾಂತದ ಸ್ಥೂಲ ಚಿತ್ರ' ಎಂಬ ಕೃತಿಗಳಿಗೂ ಎಫ್. ಎಂಗೆಲ್ಸ್‌ರು 1875ರ ಮಾರ್ಚ್ 18 ಹಾಗೂ 28ರಂದು ಎ. ಬೆಬಲ್‌ರಿಗೆ ಬರೆದ ಪತ್ರಕ್ಕೂ ಉಲ್ಲೇಖ.

ಪುಟ 190.

45 ಕೆ. ಮಾರ್ಕ್ಸ್, 'ಬಂಡವಾಳ,' ಸಂ. 1, ಏಳನೆಯ ಭಾಗ, 'ಬಂಡವಾಳದ ಸಂಚಯ,' ಅಧ್ಯಾಯ XXIV. 'ಆದಿ ಸಂಚಯ ಎನ್ನುವಂತಹುದು,' 6. 'ಕೈಗಾರಿಕಾ ಬಂಡವಾಳವಾದದ ಉಗಮ.'

ಪುಟ 190.

46 ಮೂವತ್ತು ವರ್ಷಗಳ ಯುದ್ಧ (1618-1648) – ವಿವಿಧ ಯೂರೋಪಿಯನ್ ರಾಜ್ಯ ವೃಂದಗಳ ಮಧ್ಯೆ ವೈರುಧ್ಯಗಳು ಉಲ್ಬಣಗೊಂಡುದರಿಂದಾಗಿ ಉಂಟಾದ ಮೊದಲ ಯೂರೋಪಿಯನ್ ಯುದ್ಧ. ಈ ವೈರುಧ್ಯಗಳು ಪ್ರಾಟೆಸ್ಟೆಂಟರಿಗೂ ಕ್ಯಾಥೊಲಿಕ್ಕರಿಗೂ ಮಧ್ಯೆ ಹೋರಾಟದ ರೂಪ ತಳೆಯಿತು. ಜರ್ಮನಿಯು ಈ ಹೋರಾಟದ ಮುಖ್ಯ ಕ್ಷೇತ್ರವಾಯಿತು, ಮಿಲಿಟರಿ ಸೂರೆಗೂ ದರೋಡೆಕೋರ ಹಕ್ಕು ಪ್ರತಿಪಾದನೆಗೂ ಗುರಿಯಾಯಿತು. ಈ ಯುದ್ಧವು ವೆಸ್ಟ್‌ಫಾಲಿಯಾ ಶಾಂತಿ ಒಡಂಬಡಿಕೆ(1648)ಯೊಂದಿಗೆ ಮುಕ್ತಾಯವಾಯಿತು. ಈ ಒಡಂಬಡಿಕೆಯು ಜರ್ಮನಿಯ ರಾಜಕೀಯ ವಿಚ್ಛಿದ್ರತೆಯನ್ನು ಪೂರ್ಣಗೊಳಿಸಿತು.

ಪುಟ 190.

47 ನೋಡಿ: ಎಫ್. ಎಂಗೆಲ್ಸ್, 'ಆ್ಯಂಟಿ ಡ್ಯೂರಿಂಗ್. ವಿಜ್ಞಾನದಲ್ಲಿ ಮಾನ್ಯ ಎವ್ಗೇನಿ ಡ್ಯೂರಿಂಗ್ ಸಾಧಿಸಿದ ಕ್ರಾಂತಿ,' ಭಾಗ ಎರಡು, 'ರಾಜಕೀಯ ಅರ್ಥಶಾಸ್ತ್ರ,' 'IV. ಹಿಂಸಾಚಾರದ ಸಿದ್ಧಾಂತ (ಮುಕ್ತಾಯ).'

ಪುಟ 191.

48 ನೋಡಿ: ಕೆ. ಮಾರ್ಕ್ಸ್ ಮತ್ತು ಎಫ್. ಎಂಗೆಲ್ಸ್, 'ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ,' 'IV. ವಿವಿಧ ವಿರೋಧ ಪಕ್ಷಗಳಿಗೆ ಸಂಬಂಧಿಸಿ ಕಮ್ಯೂನಿಸ್ಟರ ಮನೋಧರ್ಮ.'

ಪುಟ 192.

49 ಗೋಥಾ ಕಾರ್ಯಕ್ರಮ – 1875ರಲ್ಲಿ ಜರ್ಮನ್ ಸಮಾಜವಾದಿ ಕಾರ್ಮಿಕ ಪಾರ್ಟಿಯು ಗೋಥಾದಲ್ಲಿ ನಡೆದ ಮಹಾಧಿವೇಶನದಲ್ಲಿ ಅಂಗೀಕರಿಸಿದ ಕಾರ್ಯಕ್ರಮ. ಅದುವರೆವಿಗೂ ಇದ್ದ ಎರಡು ಜರ್ಮನ್ ಸಮಾಜವಾದಿ ಪಾರ್ಟಿಗಳು ಆ ಮಹಾಧಿವೇಶನದಲ್ಲಿ ಒಂದುಗೂಡಿದವು. ಐಸೆನಾಖ್‌ನ ಪಾರ್ಟಿ (ಆವ್‌ಗುಸ್ತ್ ಬೆಬಲ್ ಹಾಗೂ ವಿಲ್‌ಹೆಲ್ಮ್ ಲೀಬ್‌ಕ್ನೆಹ್ತ್‌ರವರ ನಾಯಕತ್ವದಲ್ಲಿದ್ದು ಸೈದ್ಧಾಂತಿಕವಾಗಿ ಮಾರ್ಕ್ಸ್ ಮತ್ತು ಎಂಗೆಲ್ಸ್‌ರಿಂದ ಪ್ರಭಾವಿತರಾದವರು) ಮತ್ತು ಲಸ್ಸಾಲ್ ಅನುಯಾಯಿಗಳ ಪಾರ್ಟಿ, ಇವೇ ಆ ಎರಡು ಪಾರ್ಟಿಗಳಾಗಿದ್ದವು. ಸಾರಸಂಗ್ರಹವಾದದ ಲೋಪದಿಂದ ಕೂಡಿದ್ದ ಗೋಥಾ ಕಾರ್ಯಕ್ರಮವು ಸಂದರ್ಭಸಾಧಕವಾದಿಯಾಗಿದ್ದಿತು. ಏಕೆಂದರೆ ಐಸೆನಾಖ್‌ನ ಪಾರ್ಟಿಯವರು ಮುಖ್ಯ ವಿಷಯಗಳಿಗೆ ಸಂಬಂಧಿಸಿ ಲಸ್ಸಾಲಿಯನ್ನರಿಗೆ ರಿಯಾಯಿತಿ ತೋರಿದರು ಮತ್ತು ಲಸ್ಸಾಲಿಯನ್ನರ ಸೂತ್ರಗಳನ್ನು ಒಪ್ಪಿಕೊಂಡರು. ಮಾರ್ಕ್ಸ್‌ರವರು 'ಗೋಥಾ ಕಾರ್ಯಕ್ರಮದ ಟೀಕೆ'ಯಲ್ಲೂ, ಎಂಗೆಲ್ಸ್‌ರವರು 1875ರ ಮಾರ್ಚ್ 18-28ರಲ್ಲಿ ಬೆಬಲ್‌ರಿಗೆ ಬರೆದ ಪತ್ರದಲ್ಲೂ, ಗೋಥಾ ಕಾರ್ಯಕ್ರಮವನ್ನು ಖಂಡತುಂಡವಾಗಿ ಟೀಕಿಸಿ, 1869ರ ಐಸೆನಾಖ್‌ನ ಪಾರ್ಟಿಯವರ ಕಾರ್ಯಕ್ರಮಕ್ಕೆ ಹೋಲಿಸಿದಂತೆ ಅದು ಗಹನವಾಗಿ ಒಂದು ಹೆಜ್ಜೆ ಹಿಂದಿಟ್ಟಂತೆ ಆಗಿದ್ದಿತೆಂದು ಅಭಿಪ್ರಾಯಪಟ್ಟರು.

ಪುಟ 192.

50 ಕೆ. ಮಾರ್ಕ್ಸ್, "'ತತ್ವಶಾಸ್ತ್ರದ ದಾರಿದ್ರ್ಯ.' ಮಾನ್ಯ ಪ್ರುದೋನ್‌ರ 'ದಾರಿದ್ರ್ಯದ ತತ್ವಶಾಸ್ತ್ರ' ಎಂಬ ಪ್ರಬಂಧಕ್ಕೆ ಉತ್ತರ."

ಪುಟ 193.

51 ಕೆ. ಮಾರ್ಕ್ಸ್ ಮತ್ತು ಎಫ್. ಎಂಗೆಲ್ಸ್, 'ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ.' 'I. ಬೂರ್ಷ್ವಾಸೀ ಹಾಗೂ ಶ್ರಮಜೀವಿಗಳು,' 'II. ಶ್ರಮಜೀವಿಗಳು ಮತ್ತು ಕಮ್ಯೂನಿಸ್ಟರು.'

ಪುಟ 194.

52 19ನೆಯ ಶತಮಾನದ ಅಂತ್ಯ ಹಾಗೂ 20ನೆಯ ಶತಮಾನದ ಆದಿಭಾಗದಲ್ಲಿ ಅನೇಕ ದೇಶಗಳಲ್ಲಿ ಬೂರ್ಷ್ವಾಸೀಯ ಆಳುವ ವೃತ್ತಗಳು ಕಾರ್ಮಿಕ ವರ್ಗ ಚಳವಳಿಯನ್ನು ವಿಭಜಿಸಲು ಮತ್ತು ಸಣ್ಣ ಪುಟ್ಟ ರಿಯಾಯಿತಿಗಳನ್ನು ನೀಡುವ ಮೂಲಕ ಶ್ರಮಜೀವಿ ವರ್ಗವನ್ನು ಕ್ರಾಂತಿಕಾರಿ ಹೋರಾಟದಿಂದ ದಿಕ್ಚ್ಯುತಿಗೊಳಿಸಲು ಯತ್ನಿಸಿದವು. ಈ ಗುರಿಸಾಧನೆಗಾಗಿ ಅವು ಪ್ರತಿಗಾಮಿ ಬೂರ್ಷ್ವಾ ಸರಕಾರಗಳಲ್ಲಿ ಸಮಾಜವಾದಿ ಪಾರ್ಟಿಗಳ ಕೆಲವು ಸುಧಾರಣಾವಾದಿ ನಾಯಕರಿಗೆ ಪದವಿ ನೀಡುವ ಹಂಚಿಕೆ ಹೂಡಿದವು. ಹೀಗೆ 1892ರಲ್ಲಿ ಇಂಗ್ಲೆಂಡಿನಲ್ಲಿ ಜೋನ್ ಬರ್ನ್ಸ್ ಪಾರ್ಲಿಮೆಂಟಿಗೆ ಆಯ್ಕೆಗೊಂಡರು. 1899ರಲ್ಲಿ ಫ್ರಾನ್ಸಿನಲ್ಲಿ ಸಮಾಜವಾದಿ ಅಲೆಕ್ಸಾಂದರ್ ಎತ್ಯೆನ್ ಮಿಲ್ಯೆರಾನ್‌ರವರು ಆರ್. ವಾಲ್ದೆಕ್-ರೂಸೋರವರ ಬೂರ್ಷ್ವಾ ಸರಕಾರವನ್ನು ಸೇರಿ, ಬೂರ್ಷ್ವಾಸೀಯು ತನ್ನ ನೀತಿಯನ್ನು ನಡೆಸಿಕೊಂಡು ಹೋಗಲು ನೆರವಾದರು. ಮಿಲ್ಯೆರಾನ್‌ರವರು ಪ್ರತಿಗಾಮಿ ಬೂರ್ಷ್ವಾ ಸರಕಾರದಲ್ಲಿ ಭಾಗವಹಿಸಿದುದು ಫ್ರೆಂಚ್ ಕಾರ್ಮಿಕ ವರ್ಗ ಚಳವಳಿಗೆ ತುಂಬ ಹಾನಿ ಉಂಟುಮಾಡಿತು. ಲೆನಿನರು ಮಿಲ್ಯೆರಾನ್‌ವಾದವನ್ನು ತತ್ತ್ವಭ್ರಷ್ಟ ಹಾಗೂ ಪುನರ್‌ಪರಿಶೀಲನಾವಾದ ಎಂದು ವರ್ಣಿಸಿದರು. ಇಟಲಿಯಲ್ಲಿ 20ನೆಯ ಶತಮಾನದ ಆದಿಭಾಗದಲ್ಲಿ ಸರಕಾರದೊಂದಿಗೆ ಸಹಕರಿಸುವುದನ್ನು ಲಿಯೊನೀದ ಬಿಸ್ಸೊಲಾತಿ, ಐ. ಬೊನಾಮಿ ಮತ್ತಿತರ ಸಮಾಜವಾದಿಗಳೇ ಹೆಚ್ಚಾಗಿ ಬೆಂಬಲಿಸಿದುದು. ಇವರನ್ನು 1912ರಲ್ಲಿ ಸಮಾಜವಾದಿ ಪಕ್ಷದಿಂದ ಹೊರಹಾಕಲಾಯಿತು.

ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಅನೇಕ ದೇಶಗಳ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಗಳ ಸಂದರ್ಭಸಾಧಕವಾದಿ ಬಲಪಂಥದ ನಾಯಕರು ಬಹಿರಂಗ ಸಾಮಾಜಿಕ ಸ್ವದೇಶ ಮೂಢಾಭಿಮಾನಿಗಳಾದರು, ತಮ್ಮ ದೇಶಗಳ ಬೂರ್ಷ್ವಾ ಸರಕಾರಗಳನ್ನು ಸೇರಿದರು, ಅವುಗಳ ನೀತಿಗೆ ಬೆಂಬಲ ನೀಡಿದರು.

ಪುಟ 196.

53 ಲೆಜಿಟಿಮಿಸ್ಟ್ ರಾಜಪ್ರಭುತ್ವ – ಫ್ರಾನ್ಸ್‌ನಲ್ಲಿ ಬುರ್ಬೋನ್ ವಂಶೀಯರ ಆಳ್ವಿಕೆಯ ಕಾಲ (1815-1830). ಐರೋಪ್ಯ ಪ್ರಭುತ್ವಗಳ ಸಮ್ಮಿಶ್ರ ಕೂಟ ಈ ಆಳ್ವಿಕೆಯನ್ನು ಪುನರುಜ್ಜೀವನಗೊಳಿಸಿತು.

ಜುಲೈ ರಾಜಪ್ರಭುತ್ವ – ಜುಲೈ ಕ್ರಾಂತಿಯ (1830) ನಂತರ ಅಧಿಕಾರಕ್ಕೆ ಬಂದ ಫ್ರೆಂಚ್ ದೊರೆ ಲೂಯಿ ಫಿಲಿಪ್‌ನ ಆಳ್ವಿಕೆಯ ಕಾಲಾವಧಿ; ಫ್ರಾನ್ಸ್‌ನಲ್ಲಿ ಗಣರಾಜ್ಯ ಸ್ಥಾಪಿಸಿದ 1848ರ ಫೆಬ್ರವರಿ ಕ್ರಾಂತಿಯ ವರೆಗೆ ಮುಂದುವರಿಯಿತು.

ಪುಟ 199.

54 ಕೆ. ಮಾರ್ಕ್ಸ್, 'ಲೂಯಿ ಬೊನಾಪಾರ್ಟೆಯ ಹದಿನೆಂಟನೆಯ ಬ್ರೂಮೇರ್.' VII.

ಪುಟ 199.

55 ಕಾಳಶತಕರು – ಕ್ರಾಂತಿಕಾರಿ ಚಳವಳಿಯ ವಿರುದ್ಧ ಹೋರಾಡಲು ತ್ಸಾರಿಸ್ಟ್ ಪೊಲೀಸರು ಸ್ಥಾಪಿಸಿದ್ದ ರಾಜಪ್ರಭುತ್ವವಾದಿ ಪಟಾಲಂಗಳು. ಇವರು ಕ್ರಾಂತಿಕಾರಿಗಳನ್ನು ಕೊಲೆಮಾಡಿದರು, ಪ್ರಗತಿಶೀಲ ಬುದ್ಧಿಜೀವಿಗಳ ಮೇಲೆ ದಾಳಿ ಮಾಡಿದರು ಮತ್ತು ಯಹೂದಿಗಳ ಕಗ್ಗೊಲೆ ನಡೆಸಿದರು.

ಪುಟ 202.

56 ಕಾಡೆಟ್ಟರು (ಕಾನ್‌ಸ್ಟಿಟ್ಯೂಷನಲ್ ಡೆಮೊಕ್ರಾಟರು) – ರಷ್ಯದಲ್ಲಿ ಉದಾರ-ರಾಜಪ್ರಭುತ್ವವಾದಿ ಬೂರ್ಷ್ವಾಸೀಯ ಪ್ರಮುಖ ಪಾರ್ಟಿಯಾದ ಸಂವಿಧಾನಾತ್ಮಕ-ಪ್ರಜಾಪ್ರಭುತ್ವವಾದಿ ಪಾರ್ಟಿಯ ಸದಸ್ಯರು. 1905ರ ಅಕ್ಟೋಬರ್‌ನಲ್ಲಿ ಸ್ಥಾಪಿತವಾದ ಈ ಪಾರ್ಟಿಯು ಬೂರ್ಷ್ವಾಸೀಯು, ಭೂಮಾಲೀಕರ ಮತ್ತು ಬೂರ್ಷ್ವಾ ಬುದ್ಧಿಜೀವಿಗಳ ಪ್ರತಿನಿಧಿಗಳನ್ನು ಒಂದುಗೂಡಿಸಿದ್ದಿತು. ಶ್ರಮಿಕ ಜನರನ್ನು ಮೋಸಗೊಳಿಸುವುದಕ್ಕಾಗಿ ಕಾಡೆಟ್ಟರು ತಮ್ಮ ಪಾರ್ಟಿಗೆ 'ಜನತಾ ಸ್ವಾತಂತ್ರ್ಯದ ಪಾರ್ಟಿ' ಎಂಬ ಸುಳ್ಳು ಹೆಸರು ಇರಿಸಿಕೊಂಡಿದ್ದರು, ವಾಸ್ತವಿಕವಾಗಿ ಇವರು ಸಂವಿಧಾನಾತ್ಮಕ ರಾಜಪ್ರಭುತ್ವದ ಬೇಡಿಕೆಗಿಂತ ಮುಂದೆ ಹೋಗಲಿಲ್ಲ.

ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ವಿಜಯದನಂತರ ಕಾಡೆಟ್ಟರು ಸೋವಿಯತ್ ಆಡಳಿತದ ಬದ್ಧ ಶತ್ರುಗಳಾಗಿ ನಿಂತರು, ಹಸ್ತಕ್ಷೇಪಕರ ಎಲ್ಲ ಸಶಸ್ತ್ರ ಪ್ರತಿಕ್ರಾಂತಿಕಾರಿ ಚರ್ಯೆಗಳಲ್ಲೂ ದಾಳಿಗಳಲ್ಲೂ ಭಾಗವಹಿಸಿದರು. ವಿದೇಶಿ ದಾಳಿಕಾರರೂ ಶ್ವೇತದಳದವರೂ ಪರಾಭವಗೊಂಡನಂತರ ಕಾಡೆಟ್ಟರು ದೇಶವನ್ನು ಬಿಟ್ಟು ಹೊರಗೋಡಿದರು, ದೇಶಾಂತರವಾಸಿಗಳಾಗಿ ಹೊರಗಡೆಯಿಂದಲೇ ತಮ್ಮ ಸೋವಿಯತ್ ವಿರೋಧಿ ಪ್ರತಿಕ್ರಾಂತಿಕಾರಿ ಚಟುವಟಿಕೆಗಳನ್ನು ಮುಂದುವರಿಸಿದರು.

ಪುಟ 202.

57 *Die Neue Zeit* ('ಹೊಸ ಕಾಲ') – ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯ ಸೈದ್ಧಾಂತಿಕ ಪತ್ರಿಕೆ. ಷ್ಟುಟ್‌ಗರ್ಟ್‌ನಿಂದ 1883ರಿಂದ 1923ರವರೆಗೆ ಪ್ರಕಟವಾಗುತ್ತಿದ್ದಿತು. 1917ರ ಅಕ್ಟೋಬರ್‌ವರೆಗೂ ಅದಕ್ಕೆ ಕಾರ್ಲ್ ಕೌತ್ಸ್ಕಿ ಸಂಪಾದಕರಾಗಿದ್ದರು. ಅನಂತರ ಹೈನ್‌ರಿಹ್ ಕೂನೊವ್ ಅದರ ಸಂಪಾದಕರಾದರು. 'ನೋಯೆ ತ್ಸೈತ್' ಮೊಟ್ಟಮೊದಲ ಬಾರಿಗೆ ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಕೆಲವು ಬರಹಗಳನ್ನು ಪ್ರಕಟಿಸಿತು. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ (1914-1918) ಈ ಪತ್ರಿಕೆಯು ವಾಸ್ತವವಾಗಿ ಸಾಮಾಜಿಕ ಸ್ವದೇಶ ಮೂಢಾಭಿಮಾನಿಗಳಿಗೆ ಬೆಂಬಲ ನೀಡಿತು.

ಪುಟ 205.

58 ಶ್ರಮಜೀವಿ ವರ್ಗದ ಸರ್ವಾಧಿಕಾರತ್ವದ ವಿವಿಧ ರೂಪಗಳ ಬಗೆಗೆ ಪ್ರತಿಪಾದನೆಯನ್ನು ಮೊದಲ ಬಾರಿಗೆ ಲೆನಿನರು ಇನ್ನೂ 1916ರಲ್ಲೇ "ಮಾರ್ಕ್ಸ್‌ವಾದದ ವ್ಯಂಗ್ಯಚಿತ್ರ ಹಾಗೂ 'ಸಾಮ್ರಾಜ್ಯಶಾಹಿ ಅರ್ಥವಾದ' ಕುರಿತು" ಎಂಬ ಲೇಖನದಲ್ಲಿ ವ್ಯಕ್ತಪಡಿಸಿದ್ದರು. ಸಾಮ್ರಾಜ್ಯವಾದದ ಪರಿಸ್ಥಿತಿಗಳಲ್ಲಿ ಐತಿಹಾಸಿಕ ಬೆಳವಣಿಗೆಯ ಗತಿಯನ್ನು ವಿಶ್ಲೇಷಿಸುತ್ತ ಲೆನಿನರು ಹೀಗೆ ಬರೆದರು: "ಎಲ್ಲ ಜನತೆಗಳೂ ಸಮಾಜವಾದದೆಡೆಗೆ ಬರುತ್ತಾರೆ, ಇದು ಅನಿವಾರ್ಯ; ಆದರೆ ಎಲ್ಲ ಜನತೆಗಳೂ ಏಕತೆರದಲ್ಲೇನೂ ಬರುವುದಿಲ್ಲ. ಪ್ರತಿಯೊಂದೂ ಜನತೆ ಪ್ರಜಾತಂತ್ರದ ಒಂದಲ್ಲ ಮತ್ತೊಂದು ರೂಪಕ್ಕೆ ಶ್ರಮಜೀವಿ ವರ್ಗದ ಸರ್ವಾಧಿಕಾರತ್ವದ ಒಂದಲ್ಲ ಮತ್ತೊಂದು ಪ್ರಭೇದಕ್ಕೆ ಸಾಮಾಜಿಕ ಜೀವನದ ವಿವಿಧ ಮುಖಗಳ ಸಮಾಜವಾದಿ ಸುಧಾರಣೆಗಳ ವೇಗದ ಒಂದಲ್ಲ ಮತ್ತೊಂದು ರೂಪಕ್ಕೆ ತನ್ನದೇ ಸ್ವಂತಿಕೆಯನ್ನು ತರುತ್ತದೆ."

ಲೆನಿನರ ಈ ಅಸಾಧಾರಣ ಮುನ್ಸೂಚನೆಯನ್ನು ಇತಿಹಾಸದ ಗತಿ ಸಂಪೂರ್ಣವಾಗಿ ಪುಷ್ಟೀಕರಿಸಿದೆ.

ಪುಟ 208.

59 ಫ್ರಾಂಕೋ-ಪ್ರಷ್ಯನ್ ಯುದ್ಧದ ಕುರಿತು ಕಾರ್ಮಿಕರ ಅಂತರರಾಷ್ಟ್ರೀಯ ಸಂಘದ ಪ್ರಧಾನ ಮಂಡಳಿಯು ಯೂರೋಪು ಮತ್ತು ಅಮೆರಿಕದ ಸಂಯುಕ್ತ ಸಂಸ್ಥಾನಗಳ ಅಂತರರಾಷ್ಟ್ರೀಯ ಕಾರ್ಮಿಕರ ಸಂಘದ ಸದಸ್ಯರಿಗೆ ನೀಡಿದ ದ್ವಿತೀಯ ಮನವಿಗೆ ಉಲ್ಲೇಖ. 1870ರ ಸೆಪ್ಟೆಂಬರ್ 6ರಿಂದ 9ರ ಕಾಲಾವಧಿಯಲ್ಲಿ ಮಾರ್ಕ್ಸ್‌ರವರು ಲಂಡನ್ನಿನಲ್ಲಿ ಇದನ್ನು ಬರೆದರು.

ಪುಟ 208.

60 ಜಿ. ವಿ. ಪ್ಲೆಹಾನೊವ್‌ರವರು 'ನಮ್ಮ ಪರಿಸ್ಥಿತಿ' ಹಾಗೂ 'ಇನ್ನೊಮ್ಮೆ ನಮ್ಮ ಪರಿಸ್ಥಿತಿ ಕುರಿತು ("..." ಸಂಗಾತಿಗೆ ಪತ್ರ)' ಎಂಬ ಲೇಖನಗಳಲ್ಲಿ ನೀಡಿದ ಹೇಳಿಕೆಗಳಿಗೆ ಉಲ್ಲೇಖ. 1905ರ ನವಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ 'ಸೋಷಲ್ ಡೆಮೊಕ್ರಾಟನ ದಿನಚರಿ'ಯಲ್ಲಿ ಈ ಲೇಖನಗಳು ಪ್ರಕಟವಾದವು.

ಪುಟ 209.

61 ನೋಡಿ: 1871ರ ಏಪ್ರಿಲ್ 12ರಂದು ಕೆ. ಮಾರ್ಕ್ಸ್‌ರವರು ಎಲ್. ಕೂಗೆಲ್ ಮನ್‌ರಿಗೆ ಬರೆದ ಪತ್ರ.

ಪುಟ 209.

62 ನೋಡಿ: ಕೆ. ಮಾರ್ಕ್ಸ್, 'ಫ್ರಾನ್ಸಿನಲ್ಲಿ ಅಂತರ್ಯುದ್ಧ. ಅಂತರರಾಷ್ಟ್ರೀಯ ಕಾರ್ಮಿಕರ ಸಂಘದ ಪ್ರಧಾನ ಮಂಡಳಿಯ ಮನವಿ.' III.

ಪುಟ 210.

63 61ನೇ ಟಿಪ್ಪಣಿ ನೋಡಿ.

ಪುಟ 211.

64 ರಾಜಪ್ರಭುತ್ವವನ್ನು ಉರುಳಿಸಿ 1910ರ ಅಕ್ಟೋಬರ್ 5ರಂದು ಗಣತಂತ್ರವನ್ನು ಘೋಷಿಸಿದ ಪೋರ್ಚುಗಲ್‌ನಲ್ಲಿ 1910ರಲ್ಲಿ ನಡೆದ ಕ್ರಾಂತಿಗೆ ಮತ್ತು 1876ರ ಸಂವಿಧಾನವನ್ನು ಪುನರುಜ್ಜೀವನಗೊಳಿಸಿದ 1908ರ ಟರ್ಕಿಷ್ ಕ್ರಾಂತಿಗೆ ಉಲ್ಲೇಖ.

ಪುಟ 212.

65 ನೋಡಿ: ಕೆ. ಮಾರ್ಕ್ಸ್ ಮತ್ತು ಎಫ್. ಎಂಗೆಲ್ಸ್, 'ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ,' 'II. ಶ್ರಮಜೀವಿಗಳು ಮತ್ತು ಕಮ್ಯೂನಿಸ್ಟರು.'

ಪುಟ 214.

66 ನೋಡಿ: ಕೆ. ಮಾರ್ಕ್ಸ್, 'ಫ್ರಾನ್ಸಿನಲ್ಲಿ ಅಂತರ್ಯುದ್ಧ. ಅಂತರರಾಷ್ಟ್ರೀಯ ಕಾರ್ಮಿಕರ ಸಂಘದ ಪ್ರಧಾನ ಮಂಡಳಿಯ ಮನವಿ. III'.

ಪುಟ 216.

67 'ದ್ಯೆಲೊ ನರೋದ' ('ಜನತಾ ಕಾರ್ಯ') – ಸಮಾಜವಾದಿ ಕ್ರಾಂತಿಕಾರಿಗಳ ದಿನಪತ್ರಿಕೆ – 1917ರ ಮಾರ್ಚ್‌ನಿಂದ 1918ರ ಜುಲೈ ತನಕ ಪೆತ್ರೊಗ್ರಾದ್

ನಲ್ಲಿ ಪ್ರಕಟವಾಗುತ್ತಿತ್ತು. ಇದು ರಕ್ಷಣಾತ್ಮಕ ರಾಜಿ ಮನೋಭಾವದ ನಿಲುವನ್ನು ಅನುಸರಿಸುತ್ತಿದ್ದಿತು, ಬೂರ್ಷ್ವಾ ತಾತ್ಕಾಲಿಕ ಸರಕಾರಕ್ಕೆ ಬೆಂಬಲ ನೀಡುತ್ತಿತ್ತು.

ಪುಟ 222.

68 ಜಿರೋಂಡಿಸ್ಟರು – ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ ನಡೆದ ಫ್ರೆಂಚ್ ಬೂರ್ಷ್ವಾ ಕ್ರಾಂತಿಯ ಸಮಯದಲ್ಲಿದ್ದ ಒಂದು ರಾಜಕೀಯ ಬೂರ್ಷ್ವಾ ಗುಂಪಿನ ಜನ. ಇವರು ಮಿತವಾದಿ ಬೂರ್ಷ್ವಾಸೀಯ ಹಿತಗಳನ್ನು ವ್ಯಕ್ತಪಡಿಸುತ್ತಿದ್ದರು, ಕ್ರಾಂತಿ ಮತ್ತು ಪ್ರತಿಕ್ರಾಂತಿಗಳ ನಡುವೆ ಡೋಲಾಯಮಾನದಿಂದಿದ್ದರು, ರಾಜಪ್ರಭುತ್ವದೊಂದಿಗೆ ರಾಜಿ ಮಾಡಿಕೊಳ್ಳುವ ಮಾರ್ಗ ಹಿಡಿದು ಹೊರಟರು.

ಪುಟ 230.

69 ನೋಡಿ: ಎಫ್. ಎಂಗೆಲ್ಸ್, 'ವಸತಿ ಪ್ರಶ್ನೆ ಕುರಿತು.'

ಪುಟ 233.

70 'ಬ್ಲಾಂಕಿವಾದಿಗಳು – ಫ್ರೆಂಚ್ ಸಮಾಜವಾದಿ ಚಳವಳಿಯಲ್ಲಿ ಒಂದು ಪ್ರವೃತ್ತಿಯ ಬೆಂಬಲಿಗರು. ಫ್ರಾನ್ಸ್‌ನಲ್ಲಿ ಅಸಾಧ್ಯಾದರ್ಶ ಕಮ್ಯೂನಿಸಂನ ಪ್ರತಿನಿಧಿಯೂ ಪ್ರಮುಖ ಕ್ರಾಂತಿಕಾರಿಯೂ ಆಗಿದ್ದ ಲೂಯಿ ಒಗ್ಯೂಸ್ಟ್ ಬ್ಲಾಂಕಿ (1805-1881) ಅವರ ನಾಯಕರಾಗಿದ್ದರು. ಬ್ಲಾಂಕಿವಾದಿಗಳು, ಲೆನಿನರ ಮಾತುಗಳಲ್ಲಿ ಹೇಳುವುದಾದರೆ, "ಮಾನವಕುಲವನ್ನು ಕೂಲಿ ಗುಲಾಮಗಿರಿಯಿಂದ ವಿಮೋಚನೆಗೊಳಿಸುವುದು ಶ್ರಮಜೀವಿಗಳ ವರ್ಗ ಹೋರಾಟದಿಂದಲ್ಲ ಆದರೆ ಬುದ್ಧಿಜೀವಿಗಳ ಅಲ್ಪವೃಂದದ ಪಿತೂರಿಯ ಮೂಲಕ ಸಾಧ್ಯ" ಎಂದು ನಿರೀಕ್ಷಿಸಿದ್ದರು. ಅವರು ಬಂಡಾಯ ವಿಜಯಗೊಳ್ಳುವುದಕ್ಕೆ ಅವಶ್ಯವಾದ ನಿರ್ದಿಷ್ಟ ಪರಿಸ್ಥಿತಿಗಳು ಯಾವುವು ಎಂಬುದನ್ನು ಗಣನೆಗೆ ತಂದುಕೊಳ್ಳಲು ವಿಫಲರಾದರು, ಜನಸಮೂಹಗಳೊಂದಿಗೆ ಸಂಪರ್ಕವನ್ನು ಕಡೆಗಾಣಿಸಿದರು. ಕ್ರಾಂತಿಕಾರಿ ಪಾರ್ಟಿಗೆ ಯೋಗ್ಯವಾದ ಯತ್ನಗಳನ್ನು ಮಾಡುವ ಬದಲು ಅವುಗಳ ಸ್ಥಳದಲ್ಲಿ ಪಿತೂರಿಗಾರರ ರಹಸ್ಯ ದಳವೊಂದು ತೊಡಗಬಹುದಾದಂತಹ ಚರ್ಯೆಗಳಲ್ಲಿ ತೊಡಗಿದರು.

ಪುಟ 235.

71 ಪ್ರುದೋನ್‌ವಾದಿಗಳು – ಪೆಟಿ ಬೂರ್ಷ್ವಾ ಸಮಾಜವಾದದ ಒಂದು ಅವೈಜ್ಞಾನಿಕ ಪ್ರವೃತ್ತಿಯ ಬೆಂಬಲಿಗರು. ಇವರು ಮಾರ್ಕ್ಸ್‌ವಾದಕ್ಕೆ ವಿರೋಧಿ

ಗಳಾಗಿದ್ದರು. ಇವರ ವಿಚಾರಧಾರೆಯ ಪ್ರತಿಪಾದಕ ಫ್ರೆಂಚ್ ಅರಾಜಕತಾವಾದಿ ಪ್ರುದೋನ್‌ರಿಂದಾಗಿ ಇವರಿಗೆ ಈ ಹೆಸರು ಬಂದಿತು. ಭಾರಿ ಬಂಡವಾಳಶಾಹಿ ಮಾಲೀಕತ್ವವನ್ನು ಪೆಟಿ ಬೂರ್ಷ್ವಾ ದೃಷ್ಟಿಕೋನದಿಂದ ಟೀಕಿಸುತ್ತ ಪ್ರುದೋನ್ ಪುಟ್ಟ ಖಾಸಗಿ ಮಾಲೀಕತ್ವವನ್ನು ಶಾಶ್ವತವನ್ನಾಗಿಸಲು ಹವಣಿಸಿದರು. "ಜನತಾ" ಹಾಗೂ "ವಿನಿಮಯ" ಬ್ಯಾಂಕುಗಳನ್ನು ಸ್ಥಾಪಿಸುವ ಸಲಹೆ ಮಾಡಿ, ಅವುಗಳ ಸಹಾಯದಿಂದ ಕಾರ್ಮಿಕರು ಉತ್ಪಾದನಾ ಸಾಧನಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ, ಅವರು ಕೈಗೆಲಸಗಾರರಾಗಲು ಮತ್ತು ತಮ್ಮ ಉತ್ಪನ್ನ ಗಳು "ನ್ಯಾಯಯುತ" ಬೆಲೆಗಳಲ್ಲಿ ಮಾರಾಟವಾಗುವುದನ್ನು ಖಚಿತಪಡಿಸಿ ಕೊಳ್ಳಲು ಸಾಧ್ಯವಾಗುತ್ತದೆ, ಎಂದು ಪ್ರತಿಪಾದಿಸಿದರು. ಪ್ರುದೋನ್‌ರವರು ಶ್ರಮಜೀವಿ ವರ್ಗದ ಚಾರಿತ್ರಿಕ ಪಾತ್ರವನ್ನು ಅರ್ಥಮಾಡಿಕೊಳ್ಳಲು ವಿಫಲ ರಾದರು, ವರ್ಗ ಹೋರಾಟವನ್ನೂ ಶ್ರಮಜೀವಿ ವರ್ಗ ಕ್ರಾಂತಿಯನ್ನೂ ಶ್ರಮಜೀವಿ ವರ್ಗ ಸರ್ವಾಧಿಕಾರತ್ವವನ್ನೂ ತಿರಸ್ಕರಿಸಿದರು; ಅರಾಜಕತಾ ವಾದಿಯಾದ ಅವರು ರಾಜ್ಯದ ಆವಶ್ಯಕತೆಯೇ ಇಲ್ಲವೆಂದು ಪ್ರತಿಪಾದಿಸಿದರು. ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಪ್ರಥಮ ಇಂಟರ್‌ನ್ಯಾಷನಲ್ ಮೇಲೆ ತಮ್ಮ ಅಭಿಪ್ರಾಯಗಳನ್ನು ಹೊರಿಸಲು ಯತ್ನಿಸಿದ ಪ್ರುದೋನ್‌ವಾದಿಗಳ ವಿರುದ್ಧ ನಿರಂತರ ಹೋರಾಟ ನಡೆಸಿದರು. ಮಾರ್ಕ್ಸ್‌ರವರು ತಮ್ಮ 'ತತ್ವಶಾಸ್ತ್ರದ ದಾರಿದ್ರ್ಯ' ಎಂಬ ಕೃತಿಯಲ್ಲಿ ಪ್ರುದೋನ್‌ವಾದವನ್ನು ಉಗ್ರವಾಗಿ ಖಂಡಿಸಿದರು. ಬೂರ್ಷ್ವಾ "ಸಿದ್ಧಾಂತಿಗಳು" ವರ್ಗ ಸಹಕಾರವನ್ನು ಪ್ರತಿಪಾದಿಸುವುದಕ್ಕಾಗಿ ಪ್ರುದೋನ್‌ವಾದವನ್ನು ವ್ಯಾಪಕವಾಗಿ ಬಳಸಿಕೊಂಡರು.

ಪುಟ 236.

72 ಪ್ರಸಕ್ತ ಸಂಪುಟದ 238-240ನೇ ಪುಟಗಳನ್ನು ನೋಡಿ.

73 ಲೆನಿನರು ಇಲ್ಲಿ ಮಾರ್ಕ್ಸ್‌ರವರ 'ರಾಜಕೀಯ ಔದಾಸೀನ್ಯ' ಎಂಬ ಲೇಖನಕ್ಕೂ, ಎಂಗೆಲ್ಸ್‌ರವರ 'ಅಧಿಕಾರಶಕ್ತಿಯ ಕುರಿತು' ಎಂಬ ಲೇಖನಕ್ಕೂ ಉಲ್ಲೇಖಿ ಸುತ್ತಾರೆ.

ಪುಟ 236.

74 ಕಾರ್ಲ್ ಮಾರ್ಕ್ಸ್‌ರವರ 'ರಾಜಕೀಯ ಔದಾಸೀನ್ಯ' ಎಂಬ ಲೇಖನಕ್ಕೆ ಉಲ್ಲೇಖ.

ಪುಟ 237.

75 ಎಫ್. ಎಂಗೆಲ್ಸ್‌ರ 'ಅಧಿಕಾರಶಕ್ತಿಯ ಕುರಿತು' ಎಂಬ ಲೇಖನಕ್ಕೆ ಉಲ್ಲೇಖ.

ಪುಟ 238.

76 ಎಫ್. ಎಂಗೆಲ್ಸ್‌ರ 'ಅಧಿಕಾರಶಕ್ತಿಯ ಕುರಿತು' ಎಂಬ ಲೇಖನಕ್ಕೆ ಉಲ್ಲೇಖ.

ಪುಟ 240.

77 ನೋಡಿ: ಕೆ. ಮಾರ್ಕ್ಸ್, 'ಗೋಥಾ ಕಾರ್ಯಕ್ರಮದ ಟೀಕೆ.'

ಪುಟ 242.

78 ಕೆ. ಮಾರ್ಕ್ಸ್‌ರ 'ತತ್ವಶಾಸ್ತ್ರದ ದಾರಿದ್ರ್ಯ' ಎಂಬ ಕೃತಿಗೆ ಉಲ್ಲೇಖ.

ಪುಟ 242.

79 ನೋಡಿ: ಎಫ್. ಎಂಗೆಲ್ಸ್, '1891ರ ಸೋಷಲ್ ಡೆಮೊಕ್ರಾಟಿಕ್ ಕರಡು ಕಾರ್ಯಕ್ರಮದ ಟೀಕೆ.'

ಎರ್‌ಫುರ್ತ್ ಕಾರ್ಯಕ್ರಮ – ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯು 1891ರ ಅಕ್ಟೋಬರ್‌ನಲ್ಲಿ ಎರ್‌ಫುರ್ತ್‌ನಲ್ಲಿ ಜರುಗಿದ ತನ್ನ ಮಹಾಧಿವೇಶನದಲ್ಲಿ ಅಂಗೀಕರಿಸಿದ ಕಾರ್ಯಕ್ರಮ. ಗೋಥಾ ಕಾರ್ಯಕ್ರಮ (1875)ಕ್ಕೆ ಹೋಲಿಸಿದಂತೆ ಒಂದು ಹೆಜ್ಜೆ ಮುಂದೆ ಇದ್ದ ಈ ಕಾರ್ಯಕ್ರಮವು ಬಂಡವಾಳಶಾಹಿ ಉತ್ಪಾದನಾ ವಿಧಾನ ಪತನವಾಗಿ ಅದರ ಸ್ಥಳದಲ್ಲಿ ಸಮಾಜ ವಾದಿ ಉತ್ಪಾದನಾ ವಿಧಾನ ಸ್ಥಾಪನೆಗೊಳ್ಳುವುದು ಅನಿವಾರ್ಯ ಎಂಬ ಮಾರ್ಕ್ಸ್‌ರವರ ಸಿದ್ಧಾಂತದ ಮೇಲೆ ಆಧರಿಸಿದ್ದಿತು. ಕಾರ್ಮಿಕ ವರ್ಗವು ರಾಜ ಕೀಯ ಹೋರಾಟ ನಡೆಸುವುದು ಅವಶ್ಯ ಎಂಬುದನ್ನು ಒತ್ತಿ ಹೇಳಿ ಅದು, ಆ ಹೋರಾಟದಲ್ಲಿ ಪಾರ್ಟಿಯು ಅಗ್ರ ಪಾತ್ರ ವಹಿಸಬೇಕು ಎಂದು ಮುಂತಾದ ಅಂಶಗಳನ್ನು ಎತ್ತಿ ತೋರಿಸಿತು. ಆದರೆ ಅದು ಸಂದರ್ಭಸಾಧಕವಾದಕ್ಕೂ ತುಂಬ ರಿಯಾಯಿತಿಗಳನ್ನು ತೋರಿಸಿತು. ಎಂಗೆಲ್ಸ್‌ರು '1891ರ ಸೋಷಲ್ ಡೆಮೊ ಕ್ರಾಟಿಕ್ ಕರಡು ಕಾರ್ಯಕ್ರಮದ ಟೀಕೆ' ಎಂಬ ತಮ್ಮ ಕೃತಿಯಲ್ಲಿ ಕಾರ್ಯ ಕ್ರಮದ ಮೂಲ ಕರಡನ್ನು ವಿವರ ವಿವರವಾಗಿ ಟೀಕಿಸಿದರು. ಅದು ವಾಸ್ತವವಾಗಿ ಇಡೀ ದ್ವಿತೀಯ ಇಂಟರ್‌ನ್ಯಾಷನಲ್‌ನ ಸಂದರ್ಭಸಾಧಕವಾದದ ಟೀಕೆಯೇ ಆಗಿದ್ದಿತು. ಆದರೆ ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ನಾಯಕರು ಎಂಗೆಲ್ಸ್‌ರ ಈ ಟೀಕೆಯನ್ನು ಸಾಮಾನ್ಯ ಸದಸ್ಯರಿಂದ ಮುಚ್ಚಿಟ್ಟು ಕಾರ್ಯಕ್ರಮದ ಅಂತಿಮ ಪಾಠವನ್ನು ರಚಿಸುವಾಗ ಎಂಗೆಲ್ಸ್‌ರ ಅತ್ಯಂತ ಮುಖ್ಯ ವ್ಯಾಖ್ಯಾನಗಳನ್ನು ನಿರ್ಲಕ್ಷಿಸಿದರು. ಎರ್‌ಫುರ್ತ್ ಕಾರ್ಯಕ್ರಮವು ಶ್ರಮಜೀವಿ ವರ್ಗದ ಸರ್ವಾಧಿ ಕಾರತ್ವದ ಬಗೆಗೆ ಏನೂ ಹೇಳದಿದ್ದುದು ಅದರ ಮುಖ್ಯ ನ್ಯೂನತೆಯಾಗಿದ್ದಿತು, ಅದು ಸಂದರ್ಭಸಾಧಕವಾದಕ್ಕೆ ನೀಡಿದ ಹೇಡಿತನದ ರಿಯಾಯಿತಿಯಾಗಿದ್ದಿತು, ಎಂದು ಲೆನಿನ್ ಪರಿಗಣಿಸಿದ್ದರು.

ಪುಟ 245.

80 ಸಮಾಜವಾದಿಗಳ ವಿರುದ್ಧ ಶಾಸನ – ಈ ಶಾಸನವನ್ನು ಜರ್ಮನಿಯಲ್ಲಿ ಬೀಸ್ಮಾರ್ಕ್ ಆಡಳಿತವು 1878ರಲ್ಲಿ ಕಾರ್ಮಿಕ ವರ್ಗ ಹಾಗೂ ಸಮಾಜವಾದಿ ಚಳವಳಿಯ ವಿರುದ್ಧ ಹೋರಾಟ ನಡೆಸಲೋಸುಗ ಜಾರಿಗೆ ತಂದಿತು. ಈ ಶಾಸನದ ಪ್ರಕಾರ ಎಲ್ಲ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿ ಸಂಘಟನೆಗಳನ್ನೂ, ಕಾರ್ಮಿಕರ ಎಲ್ಲ ಸಾಮೂಹಿಕ ಸಂಘಟನೆಗಳನ್ನೂ ಕಾರ್ಮಿಕ ವರ್ಗದ ಪತ್ರಿಕೆಗಳನ್ನೂ ನಿಷೇಧಿಸಲಾಯಿತು. ಸಮಾಜವಾದಿ ಸಾಹಿತ್ಯವನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು, ಸೋಷಲ್ ಡೆಮೊಕ್ರಾಟರನ್ನು ದೇಶದಿಂದ ಹೊರಹಾಕುವಷ್ಟರವರೆಗೂ ಹಿಂಸಿಸಲಾಯಿತು. ಆದರೆ ಈ ದಬ್ಬಾಳಿಕೆಯ ಕ್ರಮಗಳು ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯನ್ನು ನಾಶಮಾಡದಾದವು. ಪಾರ್ಟಿಯು ಶಾಸನಬಾಹಿರ ಪರಿಸ್ಥಿತಿಗಳಿಗೆ ಸರಿಹೊಂದಿಸಿಕೊಂಡಿತು. ಪಾರ್ಟಿಯ ಕೇಂದ್ರ ಮುಖಪತ್ರವಾದ 'ದೆರ್ ಸೊತ್ಸಿಯಾಲ್ ಡೆಮೊಕ್ರಾಟ್' ಪತ್ರಿಕೆಯನ್ನು ಹೊರದೇಶಗಳಿಂದ ಪ್ರಕಟಿಸಲಾಯಿತು; ಪಾರ್ಟಿ ಮಹಾಧಿವೇಶನಗಳನ್ನು ಕ್ರಮಬದ್ಧವಾದ ಅಂತರಗಳಲ್ಲಿ (1880, 1883 ಹಾಗೂ 1887ರಲ್ಲಿ) ಜರುಗಿಸಲಾಯಿತು. ಜರ್ಮನಿಯೊಳಗೇ ಸೋಷಲ್ ಡೆಮೊಕ್ರಾಟಿಕ್ ಸಂಘಟನೆಗಳೂ ವೃಂದಗಳೂ ಭೂಗತವಾಗಿಯೇ ಶೀಘ್ರವಾಗಿ ಹುಟ್ಟಿಕೊಳ್ಳತೊಡಗಿದವು. ಶಾಸನಬಾಹಿರವಾಗಿದ್ದ ಕೇಂದ್ರ ಸಮಿತಿಯೊಂದು ಅವುಗಳ ಚಟುವಟಿಕೆಗಳಿಗೆ ನಾಯಕತ್ವ ನೀಡುತ್ತಿದ್ದಿತು. ಇದಲ್ಲದೆ ಪಾರ್ಟಿಯು ದುಡಿಯುವ ಜನರೊಂದಿಗೆ ಹೆಚ್ಚು ನಿಕಟ ಸಂಪರ್ಕ ಬೆಳೆಸಿಕೊಳ್ಳಲು ಶಾಸನಬದ್ಧ ಅವಕಾಶಗಳನ್ನೆಲ್ಲ ವಿಸ್ತೃತವಾಗಿ ಬಳಸಿಕೊಳ್ಳುತ್ತಿದ್ದಿತು. ಅದರ ಪ್ರಭಾವವು ಸತತವಾಗಿ ಬೆಳೆಯುತ್ತಿದ್ದಿತು. 1890ರಲ್ಲಿ ರೈಹ್‌ಸ್ತಾಗ್ ಚುನಾವಣೆಗಳಲ್ಲಿ ಸೋಷಲ್ ಡೆಮೊಕ್ರಾಟರು, 1878ರಲ್ಲಿ ಪಡೆದಿದ್ದುದಕ್ಕಿಂತ ಮೂರುಪಟ್ಟು ಹೆಚ್ಚು ಮತಗಳನ್ನು ಪಡೆದರು. ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಜರ್ಮನ್ ಸೋಷಲ್ ಡೆಮೊಕ್ರಾಟರಿಗೆ ತುಂಬ ನೆರವು ನೀಡಿದರು. 1890ರಲ್ಲಿ ಜನರಿಂದ ಬಂದ ಒತ್ತಡದ ಫಲವಾಗಿಯೂ ಕಾರ್ಮಿಕ ವರ್ಗ ಚಳವಳಿ ಬೆಳೆಯುತ್ತಿದ್ದುದರ ಫಲವಾಗಿಯೂ ಈ ಸಮಾಜವಾದಿಗಳ ವಿರುದ್ಧ ಶಾಸನ ರದ್ದಾಗಬೇಕಾಯಿತು.

ಪುಟ 247.

81 1866ರ ಆಸ್ಟ್ರಿಯ-ಪ್ರಷ್ಯ ಮತ್ತು 1870-1871ರ ಫ್ರಾಂಕೊ-ಪ್ರಷ್ಯನ್ ಯುದ್ಧಗಳಿಗೆ ಉಲ್ಲೇಖ, ಈ ಯುದ್ಧಗಳ ಫಲವಾಗಿ ಜರ್ಮನಿಯು ಪ್ರಷ್ಯನ್ ಮಿಲಿಟರಿ ಯಂತ್ರದ ಅಧಿನಾಯಕತ್ವದಡಿ ಒಂದುಗೂಡಿತು.

ಪುಟ 250.

82 'ಪ್ರಾವ್ದ' ('ಸತ್ಯ') – ಬೋಲ್ಷೆವಿಕ್‌ರ ಶಾಸನಬದ್ಧ ದೈನಂದಿಕ ವೃತ್ತಪತ್ರಿಕೆ. ಇದರ ಮೊದಲ ಸಂಚಿಕೆ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಏಪ್ರಿಲ್ 22 (ಮೇ 5) 1912 ರಂದು ಪ್ರಕಟವಾಯಿತು. ಕಾರ್ಮಿಕರು ಸಂಗ್ರಹಿಸಿದ ಹಣದಿಂದ ಈ ಪತ್ರಿಕೆ ಪ್ರಕಟವಾಗುತ್ತಿತ್ತು; 40 ಸಾವಿರ ಪ್ರತಿಗಳನ್ನು ವಿತರಿಸಲಾಗುತ್ತಿತ್ತು, ಕೆಲವು ಸಂಚಿಕೆಗಳು 60 ಸಾವಿರ ಪ್ರತಿಗಳಲ್ಲಿ ವಿತರಿಸಲ್ಪಡುತ್ತಿದ್ದವು. ಕಾರ್ಮಿಕರ ದೈನಂದಿನ ಪತ್ರಿಕೆಯ ಪ್ರಕಟಣೆಯನ್ನು ಲೆನಿನರು ಪೀಟರ್ಸ್‌ಬರ್ಗ್‌ನ ಕಾರ್ಮಿಕರ ಭಾರಿ ಐತಿಹಾಸಿಕ ಕಾರ್ಯ ಎಂದು ವರ್ಣಿಸಿದರು. 'ಪ್ರಾವ್ದ' ಪತ್ರಿಕೆ ಪ್ರತಿದಿನ ಪಾರ್ಟಿಯನ್ನು ವಿಶಾಲ ಜನಸಮೂಹಗಳೊಂದಿಗೆ ಸಂಪರ್ಕಿಸುತ್ತಿತ್ತು. ಪತ್ರಿಕೆಗೆ ಅಸಂಖ್ಯಾತ ಕಾರ್ಮಿಕ ಬಾತ್ಮೀದಾರರಿದ್ದರು.

'ಪ್ರಾವ್ದ' ಪತ್ರಿಕೆಗೆ ಸೈದ್ಧಾಂತಿಕ ಮಾರ್ಗದರ್ಶನ ನೀಡುತ್ತಿದ್ದ ಲೆನಿನರು ಬಹುಮಟ್ಟಿಗೆ ಪ್ರತಿ ದಿನವೂ ಅದಕ್ಕಾಗಿ ಲೇಖನ ಬರೆಯುತ್ತಿದ್ದರು. ಅದನ್ನು ಒಂದು ಸಮರಶೀಲ ಕ್ರಾಂತಿಕಾರಿ ಪತ್ರಿಕೆಯನ್ನಾಗಿ ಮಾಡಲೋಸುಗ ಅವರು ಅದರ ಸಂಪಾದಕರಿಗೆ ಸಲಹೆಗಳನ್ನು ನೀಡುತ್ತಿದ್ದರು.

ಪಾರ್ಟಿಯ ಹೆಚ್ಚಿನ ಸಂಘಟನಾತ್ಮಕ ಕಾರ್ಯವನ್ನು 'ಪ್ರಾವ್ದ' ಮೂಲಕ ನಡೆಸಲಾಗುತ್ತಿದ್ದಿತು. ಸ್ಥಳೀಯ ಪಾರ್ಟಿ ಮೂಲ ಘಟಕಗಳ ಪ್ರತಿನಿಧಿಗಳೊಂದಿಗೆ ಸಮ್ಮೇಳನಗಳನ್ನು 'ಪ್ರಾವ್ದ' ಕಾರ್ಯಾಲಯದಲ್ಲೇ ನಡೆಸಲಾಗುತ್ತಿದ್ದಿತು. ಪತ್ರಿಕೆಯು ಕಾರ್ಖಾನೆಗಳಲ್ಲಿ ಪಾರ್ಟಿ ಕಾರ್ಯದ ಬಗೆಗೆ ಸುದ್ದಿ ಪಡೆದುಕೊಂಡು, ಪಾರ್ಟಿಯ ಕೇಂದ್ರ ಹಾಗೂ ಪೀಟರ್ಸ್‌ಬರ್ಗ್ ಕಮಿಟಿಗಳ ನಿರ್ದೇಶಗಳನ್ನು ಪಾರ್ಟಿ ಕಾರ್ಯಕರ್ತರಿಗೆ ತಿಳಿಸಿಕೊಡುತ್ತಿದ್ದಿತು.

ಪೊಲೀಸರು 'ಪ್ರಾವ್ದ' ಪತ್ರಿಕೆಯನ್ನು ಸತತವಾಗಿ ಪೀಡನೆಗೆ ಒಳಪಡಿಸುತ್ತಿದ್ದರು. ಪತ್ರಿಕೆಯನ್ನು ಜುಲೈ 8(21) 1914ರಂದು ಮುಚ್ಚಲಾಯಿತು. ಅದು ಪುನಃ 1917ರ ಫೆಬ್ರುವರಿ ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿಯ ವರೆಗೂ ಪ್ರಕಟಣೆ ಪ್ರಾರಂಭಿಸಲಿಲ್ಲ. ಮಾರ್ಚ್ 5(18) 1917ರಿಂದಾಚೆಗೆ ಅದನ್ನು ಆರ್‌ಎಸ್‌ಡಿಎಲ್‌ಪಿಯ ಕೇಂದ್ರ ಹಾಗೂ ಪೆತ್ರೊಗ್ರಾದ್ ಸಮಿತಿಗಳ ಮುಖಪತ್ರವನ್ನಾಗಿ ಪ್ರಕಟಿಸಲಾಯಿತು.

ಪೆತ್ರೊಗ್ರಾದ್‌ಗೆ ಆಗಮಿಸಿದ ಕೂಡಲೇ ಲೆನಿನರು 'ಪ್ರಾವ್ದ' ಪತ್ರಿಕೆಯ ಸಂಪಾದಕೀಯ ಮಂಡಳಿಯ ಸದಸ್ಯರಾದರು. ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಸಮಾಜವಾದಿ ಕ್ರಾಂತಿಯನ್ನಾಗಿ ಬೆಳೆಸಲು ಲೆನಿನರು ಹಾಕಿಕೊಟ್ಟ ಯೋಜನೆಗೆ ಬೆಂಬಲವಾಗಿ 'ಪ್ರಾವ್ದ' ಚಳವಳಿ ಹೂಡಿತು.

1917ರ ಜುಲೈನಿಂದ ಅಕ್ಟೋಬರ್‌ವರೆಗೆ ಈ ಪತ್ರಿಕೆಯು ಪ್ರತಿಕ್ರಾಂತಿಕಾರಿ ತಾತ್ಕಾಲಿಕ ಸರಕಾರದ ಹಿಂಸೆಗೆ ಗುರಿಯಾಗಿ ತನ್ನ ಹೆಸರನ್ನು ಅನೇಕ ಬಾರಿ ಬದಲಿಸಿಕೊಳ್ಳಬೇಕಾಯಿತು. ಅಕ್ಟೋಬರ್ ಕ್ರಾಂತಿಯ ವಿಜಯವಾದಂದಿ

ನಿಂದ – ಅಕ್ಟೋಬರ್ 27 (ನವಂಬರ್ 9) 1917ರಿಂದ ಪ್ರಾರಂಭಿಸಿ – ಅದನ್ನು ಅದರ ಮೂಲ ಹೆಸರಿನಿಂದ 'ಪ್ರಾವ್ದ' ಎಂದು ಪ್ರಕಟಿಸಲಾಗುತ್ತಿದೆ. ಪ್ರಸಕ್ತ ಸಮಯ ಇದು ಸೋವಿಯತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಮುಖಪತ್ರ.

ಪುಟ 253.

83 ಎಫ್. ಎಂಗೆಲ್ಸ್, 'ಫ್ರಾನ್ಸಿನಲ್ಲಿ ಅಂತರ್ಯುದ್ಧ' ಎಂಬ ಕೆ. ಮಾರ್ಕ್ಸ್‌ರ ಕೃತಿಗೆ ಮುನ್ನುಡಿ.

ಪುಟ 254.

84 1917ರ ಜೂನ್ 11(24)ರಂದು ನಡೆದ ಸೋವಿಯತ್‌ಗಳ ಪ್ರಥಮ ಅಖಿಲ ರಷ್ಯನ್ ಸಮ್ಮೇಳನದ ಪೆತ್ರೊಗ್ರಾದ್‌ನ ಕಾರ್ಮಿಕ ಮತ್ತು ಸೈನಿಕ ಡೆಪ್ಯೂಟಿ ಗಳ ಸೋವಿಯತ್‌ನ, ಕಾರ್ಯನಿರ್ವಾಹಕ ಸಮಿತಿಯ, ರೈತ ಡೆಪ್ಯೂಟಿಗಳ ಸೋವಿಯತ್‌ನ ಕಾರ್ಯನಿರ್ವಾಹಕ ಮಂಡಳಿಯ ಮತ್ತು ಸಮ್ಮೇಳನದ ಎಲ್ಲ ವೃಂದಗಳ ಬ್ಯೂರೋಗಳ ಜಂಟಿ ಅಧಿವೇಶನದಲ್ಲಿ ಜೂನ್ 10(23)ರಂದು ನಡೆಯಬೇಕಾಗಿದ್ದ ಪೆತ್ರೊಗ್ರಾದ್ ಕಾರ್ಮಿಕರ ಮತ್ತು ಸೈನಿಕರ ಶಾಂತಿಯುತ ಪ್ರದರ್ಶನ ಪ್ರಶ್ನೆಯ ಚರ್ಚೆ ಕಾಲದಲ್ಲಿ ಮೆನ್ಷೆವಿಕರ ಹಂಗಾಮಿ ಸರ್ಕಾರದ ಸಚಿವ ತ್ಸೆರೆತೇಲಿ ಅವರ ಭಾಷಣಕ್ಕೆ ಉಲ್ಲೇಖ. ಈ ಭಾಷಣ ನಿಂದನಾತ್ಮಕ ವಾಗಿತ್ತು, ಪ್ರತಿಕ್ರಾಂತಿಕಾರಿ ಸ್ವರೂಪ ಪಡೆದಿತ್ತು. ಬೋಲ್ಷೆವಿಕರು ಸರ್ಕಾರದ ವಿರುದ್ಧ ಸಂಚು ಹೂಡಿದ್ದಾರೆ ಹಾಗೂ ಪ್ರತಿಕ್ರಾಂತಿಗೆ ನೆರವು ಕೊಡುತ್ತಿದ್ದಾರೆ ಎಂದು ಆಪಾದಿಸಿ ತ್ಸೆರೆತೇಲಿ ಬೋಲ್ಷೆವಿಕರನ್ನು ಹಿಂಬಾಲಿಸುತ್ತಿರುವ ಕಾರ್ಮಿ ಕರನ್ನು ನಿರಾಯುಧಗೊಳಿಸಲು ನಿರ್ಧಾರಕ ಕ್ರಮಗಳನ್ನು ತೆಗೆದುಕೊಳ್ಳುವ ಬೆದರಿಕೆ ಹಾಕಿದರು.

ಪುಟ 255.

85 Los-von-Kirche-Bewegung (ಚರ್ಚಿನಿಂದ ಬೇರ್ಪಡುವುದಕ್ಕೆ ಚಳವಳಿ) ಪ್ರಥಮ ಜಾಗತಿಕ ಯುದ್ಧಕ್ಕೆ ಮುನ್ನ ಜರ್ಮನಿಯಲ್ಲಿ ಇದು ಸಾಮೂಹಿಕ ಲಕ್ಷಣ ಪಡೆಯಿತು. 1914ರ ಜನವರಿಯಲ್ಲಿ *Die Neue Zeit* ಎಂಬ ನಿಯತಕಾಲಿಕದ ಪುಟಗಳಲ್ಲಿ ಪುನರ್‌ಪರಿಶೀಲನಾವಾದಿ ಪಾಲ್ ಹ್ಯೋರೆರವರ *Kirchenaustrittsbewegung und Sozialdemokratie* ('ಚರ್ಚಿನಿಂದ ಹೊರಬರಲು ಚಳವಳಿ ಹಾಗೂ ಸೋಷಲ್ ಡೆಮೊಕ್ರಸಿ') ಎಂಬ ಲೇಖನದೊಂದಿಗೆ ಈ ಚಳವಳಿಗೆ ಸಂಬಂಧಿಸಿ ಜರ್ಮನ್

ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯ ಮನೋಧರ್ಮದ ಕುರಿತ ಪ್ರಶ್ನೆಯ ಚರ್ಚೆ ಪ್ರಾರಂಭವಾಯಿತು. ಈ ಚರ್ಚೆಯ ಕಾಲದಲ್ಲಿ ಜರ್ಮನ್ ಸೋಷಲ್ ಡೆಮೊಕ್ರಸಿಯ ಗಣ್ಯ ಕಾರ್ಯಕರ್ತರು ಹ್ಯೋರೆ ಅವರಿಗೆ ಪ್ರತಿಭಟನೆ ವ್ಯಕ್ತಪಡಿಸಲಿಲ್ಲ. ಪಾರ್ಟಿಯು ಚರ್ಚಿನಿಂದ ಬೇರ್ಪಡುವ ಚಳವಳಿಗೆ ಸಂಬಂಧಿಸಿ ತಟಸ್ಥವಾಗಿರಬೇಕು ಮತ್ತು ಸದಸ್ಯರು ಪಾರ್ಟಿ ಪತಿಯಿಂದ ಧರ್ಮ ವಿರೋಧಿ ಹಾಗೂ ಚರ್ಚ್‌ವಿರೋಧಿ ಪ್ರಚಾರ ನಡೆಸುವುದನ್ನು ನಿಷೇಧಿಸಬೇಕೆಂದು ಹ್ಯೋರೆ ಕರೆ ಕೊಟ್ಟರು.

ಪುಟ 256.

86 ಇರಬಹುದಾಗಿದ್ದ ಈ ಸಂಬಳಗಳ ಮೊಬಲಗುಗಳನ್ನು ಲೆನಿನರು 1917ರ ದ್ವಿತೀಯಾರ್ಧದಲ್ಲಿ ಚಲಾವಣೆಯಲ್ಲಿದ್ದ ಕಾಗದದ ರೂಬಲ್‌ಗಳಲ್ಲಿ ನೀಡಿದ್ದಾರೆ.

ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ರಷ್ಯದಲ್ಲಿನ ಕಾಗದದ ರೂಬಲ್ ಗಣನೀಯವಾಗಿ ಅಪಮೌಲ್ಯಗೊಂಡಿದ್ದಿತು.

ಪುಟ 258.

87 *Der Volksstaat* ('ಜನತಾ ರಾಜ್ಯ') – ಪತ್ರಿಕೆ, ಜರ್ಮನ್ ಸೋಷಲ್ ಡೆಮೊಕ್ರಸಿಯ ಕೇಂದ್ರ ಮುಖವಾಣಿ; 1869ರಿಂದ 1876ರವರೆಗೆ ಲೈಪ್‌ಸಿಗ್‌ನಲ್ಲಿ ವಿ. ಲೀಬ್‌ಕ್ನೆಹ್ತ್‌ರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು. ಕೆ. ಮಾರ್ಕ್ಸ್ ಹಾಗೂ ಎಫ್. ಎಂಗೆಲ್ಸ್ ಈ ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು.

ಪುಟ 261.

88 ಲಸ್ಸಾಲ್‌ವಾದಿಗಳು – ಜರ್ಮನ್ ಪೆಟಿ ಬೂರ್ಷ್ವಾ ಸಮಾಜವಾದಿ ಫೆರ್ಡಿನಾಂಡ್ ಲಸ್ಸಾಲ್‌ರ ಬೆಂಬಲಿಗರು. 1863ರಲ್ಲಿ ಲೈಪ್‌ಸಿಗ್‌ನಲ್ಲಿ ಜರುಗಿದ ಕಾರ್ಮಿಕರ ಸಂಘಟನೆಗಳ ಮಹಾಧಿವೇಶನದಲ್ಲಿ ಸ್ಥಾಪಿತವಾದ ಜರ್ಮನ್ ಕಾರ್ಮಿಕರ ಮಹಾ ಸಂಸ್ಥೆಯ ಸದಸ್ಯರಾಗಿದ್ದರು. ಲಸ್ಸಾಲ್‌ರವರೇ ಅದರ ಮೊದಲ ಅಧ್ಯಕ್ಷರಾಗಿದ್ದರು. ಅವರೇ ಅದರ ಕಾರ್ಯಕ್ರಮವನ್ನೂ ಅದರ ತಂತ್ರಗಳ ಮೂಲಾಂಶಗಳನ್ನೂ ನಿರೂಪಿಸಿಕೊಟ್ಟರು. ಸಂಸ್ಥೆಯ ರಾಜಕೀಯ ಕಾರ್ಯಕ್ರಮವು ಸಾರ್ವತ್ರಿಕ ಮತದಾನಕ್ಕಾಗಿ ಹೋರಾಟ ನಡೆಸಬೇಕೆಂದು ಘೋಷಿಸಿತು; ಅದರ ಆರ್ಥಿಕ ಕಾರ್ಯಕ್ರಮವು ರಾಜ್ಯದ ನೆರವು ಪಡೆದ ಕಾರ್ಮಿಕರ ಉತ್ಪಾದನಾ ಸಂಸ್ಥೆಗಳಿಗಾಗಿ ಹೋರಾಟ ನಡೆಸಬೇಕೆಂದು ಕರೆ ನೀಡಿತು. ತಮ್ಮ ಪ್ರಾಯೋಗಿಕ ಚಟುವಟಿಕೆಗಳಲ್ಲಿ ಲಸ್ಸಾಲ್‌ವಾದಿಗಳು ಬೀಸ್ಮಾರ್ಕ್‌ರ ಬೃಹತ್ ರಾಷ್ಟ್ರ ನೀತಿಗೆ ಬೆಂಬಲ ನೀಡಿದರು. ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಲಸ್ಸಾಲ್‌ವಾದಿಗಳ

ಸಿದ್ಧಾಂತ, ತಂತ್ರ ಹಾಗೂ ಸಂಘಟನಾತ್ಮಕ ಸೂತ್ರಗಳನ್ನು ಜರ್ಮನ್ ಕಾರ್ಮಿಕ ವರ್ಗ ಚಳವಳಿಯಲ್ಲಿನ ಸಂದರ್ಭಸಾಧಕ ಪ್ರವೃತ್ತಿ ಎಂದು ಆಗಾಗ್ಗೆ ಕಟುವಾಗಿ ಟೀಕಿಸಿದರು.

ಪುಟ 261.

89 ನೋಡಿ: ಎಫ್. ಎಂಗೆಲ್ಸ್, "'ಜನತಾ ರಾಜ್ಯ' (*Volksstaat*) (1871-1875) ಪತ್ರಿಕೆಯಿಂದ ತೆಗೆದುಕೊಂಡ 'ಅಂತರರಾಷ್ಟ್ರೀಯ ವಿಷಯಗಳ ಕುರಿತು' ಎಂಬ ಲೇಖನ ಸಂಕಲನಕ್ಕೆ ಬರೆದ ಮುನ್ನುಡಿ."

ಪುಟ 262.

90 1903ರ ಜುಲೈ 17ರಿಂದ ಆಗಸ್ಟ್ 10ರವರೆಗೆ (ಜುಲೈ 30ರಿಂದ ಆಗಸ್ಟ್ 23ರವರೆಗೆ) ನಡೆದ ಆರ್‌ಎಸ್‌ಡಿಎಲ್‌ಪಿಯ ದ್ವಿತೀಯ ಮಹಾಧಿವೇಶನಕ್ಕೆ ಉಲ್ಲೇಖ. ಇದರ ಮೊದಲ ಸಭೆಗಳು ಬ್ರಸ್ಸೆಲ್ಸ್‌ನಲ್ಲಿ ನಡೆದವು. ಆದರೆ ಪೊಲೀಸರ ಕಿರುಕುಳದಿಂದಾಗಿ ಈ ಸಭೆಗಳನ್ನು ಲಂಡನ್ನಿಗೆ ವರ್ಗಾಯಿಸಲಾಯಿತು. ಪಾರ್ಟಿಯ ಕೇಂದ್ರ ಸಂಸ್ಥೆಗಳಿಗೆ ನಡೆದ ಚುನಾವಣೆಗಳಲ್ಲಿ ಲೆನಿನರ ನಾಯಕತ್ವದ ಕ್ರಾಂತಿಕಾರಿ ಸೋಷಲ್ ಡೆಮೊಕ್ರಾಟರು ಬಹುಮತ (ರಷ್ಯನ್ ಭಾಷೆಯಲ್ಲಿ "ಬೊಲ್ಷಿನ್‌ಸ್ಟ್ವೊ") ಪಡೆದರು ಹೀಗೆ ಬೋಲ್ಶೆವಿಕರು ಎಂದು ಕರೆಯಲ್ಪಟ್ಟರು. ಅಲ್ಪಮತ (ರಷ್ಯನ್ ಭಾಷೆಯಲ್ಲಿ "ಮೆನ್ಷಿನ್‌ಸ್ಟ್ವೊ") ಪಡೆದ ಸಂದರ್ಭಸಾಧಕವಾದಿಗಳು ಮೆನ್ಶೆವಿಕರು ಎಂದು ಕರೆಯಲ್ಪಟ್ಟರು.

ಪುಟ 262.

91 ಪ್ರಸಕ್ತ ಸಂಪುಟದ 241-244 ಪುಟಗಳನ್ನು ನೋಡಿ.

ಪುಟ 265.

92 ನೋಡಿ: ಕೆ. ಮಾರ್ಕ್ಸ್, 'ಗೋಥಾ ಕಾರ್ಯಕ್ರಮದ ಟೀಕೆ.'

ಪುಟ 267.

93 ನೋಡಿ: ಕೆ. ಮಾರ್ಕ್ಸ್ ಮತ್ತು ಎಫ್. ಎಂಗೆಲ್ಸ್, 'ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ.' 'II. ಶ್ರಮಜೀವಿಗಳು ಹಾಗೂ ಕಮ್ಯೂನಿಸ್ಟರು.'

ಪುಟ 269.

94 ನೋಡಿ: ಕೆ. ಮಾರ್ಕ್ಸ್, 'ಫ್ರಾನ್ಸ್‌ನಲ್ಲಿ ಅಂತರ್ಯುದ್ಧ. ಅಂತರರಾಷ್ಟ್ರೀಯ ಕಾರ್ಮಿಕರ ಸಂಘದ ಪ್ರಧಾನ ಮಂಡಳಿಯ ಮನವಿ.'

ಪುಟ 270.

95 ನೋಡಿ: 1875ರ ಮಾರ್ಚ್ 18-28ರಲ್ಲಿ ಎಫ್. ಎಂಗೆಲ್ಸ್‌ರು ಎ. ಬೆಬಲ್‌ರಿಗೆ ಬರೆದ ಪತ್ರ.

ಪುಟ 271.

96 ಪ್ರಥಮ ಇಂಟರ್‌ನ್ಯಾಷನಲ್‌ನ ಹೇಗ್ ಮಹಾಧಿವೇಶನವು 1872ರ ಸೆಪ್ಟೆಂಬರ್ 2ರಿಂದ 7ರವರೆಗೆ ನಡೆಯಿತು. ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಇದಕ್ಕೆ ನೇರ ಮಾರ್ಗದರ್ಶನ ನೀಡಿದರು. ಎಲ್ಲ ಬಗೆಯ ಪೆಟಿ ಬೂರ್ಷ್ವಾ ಪಂಥೀಯವಾದದ ವಿರುದ್ಧ ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಮತ್ತವರ ಬೆಂಬಲಿಗರ ಅನೇಕ ವರ್ಷಗಳ ಹೋರಾಟ ಈ ಮಹಾಧಿವೇಶನದಲ್ಲಿ ಅಂತ್ಯಗೊಂಡಿತು. ಅರಾಜಕತಾವಾದಿಗಳ ನಾಯಕರಾದ ಬಕೂನಿನ್, ಗಿಲ್ಲೋಮ್ ಮತ್ತಿತರರನ್ನು ಈ ಮಹಾಧಿವೇಶನದಲ್ಲಿ ಇಂಟರ್‌ನ್ಯಾಷನಲ್‌ನಿಂದ ಹೊರಹಾಕಲಾಯಿತು.

ಹೇಗ್ ಮಹಾಧಿವೇಶನದ ತೀರ್ಮಾನಗಳು ಪೆಟಿ ಬೂರ್ಷ್ವಾ ಮನೋಭಾವದ ಅರಾಜಕತಾವಾದಿಗಳ ಮೇಲೆ ಮಾರ್ಕ್ಸ್‌ವಾದದ ವಿಜಯವಾಗಿದ್ದವು ಮತ್ತು ಭವಿಷ್ಯದಲ್ಲಿ ಕಾರ್ಮಿಕ ವರ್ಗದ ಸ್ವತಂತ್ರ ದೇಶೀಯ ರಾಜಕೀಯ ಪಾರ್ಟಿಗಳ ನಿರ್ಮಾಣಕ್ಕೆ ಅಡಿಪಾಯ ಹಾಕಿಕೊಟ್ಟವು.

ಪುಟ 289.

97 'ಸರ್ಯಾ' ('ಉಷಸ್ಸು') – ಮಾರ್ಕ್ಸ್‌ವಾದಿ ವೈಜ್ಞಾನಿಕ-ರಾಜಕೀಯ ನಿಯತಕಾಲಿಕ; ಇದನ್ನು 'ಇಸ್ಕ್ರ' ಪತ್ರಿಕೆಯ ಸಂಪಾದಕೀಯ ಮಂಡಲಿಯವರು ಷ್ಟುಟ್‌ಗರ್ಟ್‌ನಲ್ಲಿ 1901-1902ರಲ್ಲಿ ಶಾಸನಬದ್ಧವಾಗಿ ಪ್ರಕಟಿಸಿದರು. ಇದರ ಒಟ್ಟು ನಾಲ್ಕು ಸಂಚಿಕೆಗಳು ಪ್ರಕಟವಾದವು.

'ಸರ್ಯಾ' ಪತ್ರಿಕೆಯು ಅಂತರರಾಷ್ಟ್ರೀಯ ಹಾಗೂ ರಷ್ಯನ್ ಪುನರ್‌ಪರಿಶೀಲನಾವಾದವನ್ನು ಟೀಕಿಸಿ ಮಾರ್ಕ್ಸ್‌ವಾದಿ ಸಿದ್ಧಾಂತ ಸೂತ್ರಗಳನ್ನು ಬಲಪಡಿಸಿತು.

ಪುಟ 291.

98 ಇಲ್ಲಿ, 1900ರ ಸೆಪ್ಟೆಂಬರ್ 23-27ರಂದು ಪ್ಯಾರಿಸ್‌ನಲ್ಲಿ ಜರುಗಿದ ದ್ವಿತೀಯ ಇಂಟರ್‌ನ್ಯಾಷನಲ್‌ನ ಐದನೆಯ ಜಾಗತಿಕ ಮಹಾಧಿವೇಶನಕ್ಕೆ ಉಲ್ಲೇಖ. ವಾಲ್ಡೆಕ್-ರೂಸೋ ಪ್ರತಿಕ್ರಾಂತಿಕಾರಿ ಸರಕಾರದಲ್ಲಿ ಎ. ಮಿಲ್ಯೆರಾನ್‌ರವರು ಭಾಗವಹಿಸುತ್ತಿದ್ದುದರಿಂದಾಗಿ ಚರ್ಚೆಗೆ ಬಂದ 'ರಾಜಕೀಯ ಅಧಿಕಾರ ಗಳಿಸುವುದು ಮತ್ತು ಬೂರ್ಷ್ವಾ ಪಾರ್ಟಿಗಳೊಂದಿಗೆ ಮೈತ್ರೀಕೂಟ ಏರ್ಪಡಿಸಿಕೊಳ್ಳುವುದು' ಎಂಬ ಪ್ರಧಾನ ಪ್ರಶ್ನೆಗೆ ಸಂಬಂಧಿಸಿ ಮಹಾಧಿವೇಶನವು ಕೆ. ಕೌತ್ಸ್ಕಿ ಮಂಡಿಸಿದ ನಿರ್ಣಯಕ್ಕೆ ಬಹುಮತ ನೀಡಿತು. "ಕೇವಲ ಒಬ್ಬ ಸಮಾಜವಾದಿಯು

ಬೂರ್ಷ್ವಾ ಸರಕಾರದಲ್ಲಿ ಭಾಗವಹಿಸುವುದು ರಾಜಕೀಯ ಅಧಿಕಾರ ಗೆಲ್ಲುವುದಕ್ಕೆ ಸಹಜವಾದ ಪ್ರಾರಂಭ ಎಂದು ಪರಿಗಣಿಸಲಾಗದು; ಅದು ತುರ್ತು ಪರಿಸ್ಥಿತಿಯಲ್ಲಿ ವಿಧಿ ಇಲ್ಲದೆ ಮಾಡಿಕೊಳ್ಳಲಾದ ಒಂದು ತಾತ್ಕಾಲಿಕ ಹಾಗೂ ಅಸಾಧಾರಣ ಕ್ರಮವಲ್ಲದೆ ಬೇರೇನೂ ಅಲ್ಲ" ಎಂದು ಮುಂತಾದ ಮಾತುಗಳನ್ನು ಆ ನಿರ್ಣಯ ಒಳಗೊಂಡಿದ್ದಿತು. ತರುವಾಯ ಬೂರ್ಷ್ವಾಸೀಯೊಂದಿಗೆ ತಮ್ಮ ಸಹಚರ್ಯೆಯನ್ನು ಸಮರ್ಥಿಸಿಕೊಳ್ಳಲೋಸುಗ ಸಂದರ್ಭಸಾಧಕವಾದಿಗಳು ಆಗಾಗ್ಗೆ ಮೇಲೆ ತಿಳಿಸಿದ ನಿರ್ಣಯದ ಮಾತುಗಳಿಗೆ ಉಲ್ಲೇಖಿಸುತ್ತಿದ್ದರು.

1901ರ ಏಪ್ರಿಲ್‌ನ 'ಸರ್ಯಾ' ನಿಯತಕಾಲಿಕದಲ್ಲಿ ಜಿ. ವಿ. ಪ್ಲೆಹಾನೊವ್‌ರು ಬರೆದ 'ಪ್ಯಾರಿಸ್‌ನ ಅಂತರರಾಷ್ಟ್ರೀಯ ಸೋಷಲಿಸ್ಟ್ ಕಾಂಗ್ರೆಸ್ ಬಗೆಗೆ ಕೆಲವು ಮಾತುಗಳು (ನನಗೆ ಅಧಿಕಾರಪತ್ರ ಕಳುಹಿಸಿದ ಸಂಗಾತಿಗಳಿಗೆ ಬಹಿರಂಗ ಪತ್ರ)' ಲೇಖನ ಪ್ರಕಟವಾಯಿತು. ಇದರಲ್ಲಿ ಕೌತ್‌ಸ್ಕಿಯವರ ಗೊತ್ತುವಳಿಯನ್ನು ತೀವ್ರವಾಗಿ ಟೀಕಿಸಲಾಯಿತು.

ಪುಟ 291.

99 ನೋಡಿ: ಕೆ. ಮಾರ್ಕ್ಸ್‌ 'ಫ್ರಾನ್ಸ್‌ನಲ್ಲಿ ಅಂತರ್ಯುದ್ಧ.' III.

ಪುಟ 292.

100 ನೋಡಿ: ಕೆ. ಮಾರ್ಕ್ಸ್‌ 'ಲೂಯಿ ಬೊನಾಪಾರ್ಟೆಯ ಹದಿನೆಂಟನೆಯ ಬ್ರೂಮೇರ್,' VII.

ಪುಟ 292.

101 ನೋಡಿ: ಕೆ. ಮಾರ್ಕ್ಸ್ ಹಾಗೂ ಎಫ್. ಎಂಗೆಲ್ಸ್, 'ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ'ಯ 'ಜರ್ಮನ್ ಆವೃತ್ತಿಗೆ (1872) ಮುನ್ನುಡಿ.'

ಪುಟ 294.

102 ನೋಡಿ: ಕೆ. ಮಾರ್ಕ್ಸ್, 'ಫ್ರಾನ್ಸ್‌ನಲ್ಲಿ ಅಂತರ್ಯುದ್ಧ. ಅಂತರರಾಷ್ಟ್ರೀಯ ಕಾರ್ಮಿಕರ ಸಂಘದ ಪ್ರಧಾನ ಮಂಡಳಿಯ ಮನವಿ.' III.

ಪುಟ 297.

103 ನೋಡಿ: ಕೆ. ಮಾರ್ಕ್ಸ್ ಹಾಗೂ ಎಫ್. ಎಂಗೆಲ್ಸ್, 'ಕಮ್ಯೂನಿಸ್ಟ್ ಲೀಗ್‌ಗೆ ಪಾರ್ಟಿ ಕೇಂದ್ರ ಸಮಿತಿಯ ಮನವಿ.' 1850ರ ಮಾರ್ಚ್.

ಪುಟ 301.

104 ನೋಡಿ: ಕೆ. ಮಾರ್ಕ್ಸ್, 'ಫ್ರಾನ್ಸ್‌ನಲ್ಲಿ ಅಂತರ್ಯುದ್ಧ. ಅಂತರರಾಷ್ಟ್ರೀಯ ಕಾರ್ಮಿಕರ ಸಂಘದ ಪ್ರಧಾನ ಮಂಡಳಿಯ ಮನವಿ.' III.

ಪುಟ 305.

105 ಸಿಡ್ನಿ ಹಾಗೂ ಬಿಯಾಟ್ರಿಸ್ ವೆಬ್‌ರವರ 'ಇಂಗ್ಲಿಷ್ ಟ್ರೇಡ್ ಯೂನಿಯನ್ ಚಳವಳಿಯ ಸಿದ್ಧಾಂತ ಹಾಗೂ ಅನುಷ್ಠಾನ' ಎಂಬ ಗ್ರಂಥಕ್ಕೆ ಇಲ್ಲಿ ಉಲ್ಲೇಖ.

ಪುಟ 305.

106 ಕೆ. ಮಾರ್ಕ್ಸ್ ಹಾಗೂ ಎಫ್. ಎಂಗೆಲ್ಸ್, 'ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ.' 'II. ಶ್ರಮಜೀವಿಗಳು ಹಾಗೂ ಕಮ್ಯೂನಿಸ್ಟರು.'

ಪುಟ 308.

107 *Sozialistische Monatshefte* ('ಸಮಾಜವಾದಿ ಮಾಸಪತ್ರಿಕೆ') – ಜರ್ಮನ್ ಸಂದರ್ಭಸಾಧಕವಾದಿಗಳ ಪ್ರಧಾನ ಮುಖಪತ್ರ. ಅಂತರರಾಷ್ಟ್ರೀಯ ಪುನರ್‌ಪರಿಶೀಲನಾವಾದದ ಪತ್ರಿಕೆಗಳಲ್ಲೊಂದು. ಇದನ್ನು ಬರ್ಲಿನ್ನಿನಲ್ಲಿ 1897ರಿಂದ 1933ರವರೆಗೆ ಪ್ರಕಟಿಸಲಾಯಿತು. 1914-1918ರ ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಇದು ಸಾಮಾಜಿಕ ಸ್ವದೇಶ ಮೂಢಾಭಿಮಾನದ ನಿಲುವು ತಳೆದಿದ್ದಿತು.

ಪುಟ 309.

108 ಜೊರೇಸ್‌ವಾದಿಗಳು – ಫ್ರೆಂಚ್ ಸಮಾಜವಾದಿ ಚಳವಳಿಯಲ್ಲಿ ಸಂದರ್ಭಸಾಧಕ ಬಲಪಂಥದ ನಾಯಕರಾಗಿದ್ದ ಜೆ. ಜೊರೇಸ್‌ರ ಬೆಂಬಲಿಗರು. "ಟೀಕಾ ಸ್ವಾತಂತ್ರ್ಯ" ಕೇಳುವ ನೆಪದಲ್ಲಿ ಜೊರೇಸ್‌ವಾದಿಗಳು ಮಾರ್ಕ್ಸ್‌ವಾದದ ಮೂಲ ಅಡಿಪಾಯಗಳನ್ನೇ ಪುನರ್‌ಪರಿಶೀಲಿಸ ಯತ್ನಿಸಿದರು ಮತ್ತು ಶ್ರಮಜೀವಿಗಳಿಗೂ ಬೂರ್ಷ್ವಾಸೀಗೂ ಮಧ್ಯೆ ವರ್ಗ ಸಹಕಾರ ಪ್ರತಿಪಾದಿಸಿದರು. 1902ರಲ್ಲಿ ಜೊರೇಸ್‌ವಾದಿಗಳು ಫ್ರೆಂಚ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು. ಇದು ಸುಧಾರಣಾವಾದಿ ನಿಲುವುಗಳ ಮೇಲೆ ಆಧರಿಸಿದ್ದಿತು.

ಪುಟ 309.

109 31ನೇ ಟಿಪ್ಪಣಿ ನೋಡಿ.

ಪುಟ 309.

110 ಬ್ರಿಟನ್‌ನ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ (Independent Labour Party) (ಐಎಲ್‌ಪಿ) – 1893ರಲ್ಲಿ 'ಹೊಸ ಟ್ರೇಡ್ ಯೂನಿಯನ್'ಗಳ ನಾಯಕರು ಸ್ಥಾಪಿಸಿದ ಒಂದು ಸುಧಾರಣಾವಾದಿ ಸಂಘಟನೆ. ಮುಷ್ಕರ ಹೋರಾಟಗಳನ್ನು ಪುನರುಜ್ಜೀವನಗೊಳಿಸಿದ ಸಮಯದಲ್ಲಿ ಮತ್ತು ಕಾರ್ಮಿಕ ವರ್ಗವನ್ನು ಬೂರ್ಷ್ವಾ ಪಾರ್ಟಿಗಳಿಂದ ಸ್ವತಂತ್ರಗೊಳಿಸುವ ಚಳವಳಿಯ ಸಮಯದಲ್ಲಿ ಈ ಪಾರ್ಟಿಯನ್ನು ಸ್ಥಾಪಿಸಲಾಯಿತು. ಆರಂಭದಿಂದಲೂ ಇದು

ಬೂರ್ಷ್ವಾ ಸುಧಾರಣಾವಾದಿ ನಿಲುವು ತಳೆಯಿತು, ಸಂಸದೀಯ ಹೋರಾಟ ವಿಧಾನಗಳ ಮೇಲೆಯೇ ಗಮನ ಕೇಂದ್ರೀಕರಿಸಿತು, ಲಿಬರಲ್ ಪಾರ್ಟಿಯೊಂದಿಗೆ ಸಂಸದೀಯ ಗುಪ್ತ ವ್ಯವಹಾರಗಳಲ್ಲಿ ತೊಡಗಿತು. ಇದು ವಾಸ್ತವವಾಗಿ "ಯಾವತ್ತೂ ಬೂರ್ಷ್ವಾಸೀಯ ಮೇಲೆಯೇ ಅವಲಂಬಿಸಿದ್ದ ಒಂದು ಸಂದರ್ಭ ಸಾಧಕವಾದಿ ಪಾರ್ಟಿಯಾಗಿದ್ದಿತು" ಎಂದು ಲೆನಿನ್ ಹೇಳಿದರು.

ಪ್ರಥಮ ಜಾಗತಿಕ ಯುದ್ಧ ಪ್ರಾರಂಭವಾದಾಗ ಐಎಲ್‌ಪಿಯು ಯುದ್ಧ ವಿರೋಧಿ ಪ್ರಣಾಳಿಕೆಯೊಂದನ್ನು ಹೊರಡಿಸಿತು. ಆದರೆ ಬೇಗನೆಯೇ ಸಾಮಾಜಿಕ-ಸ್ವದೇಶ ಮೂಢಾಭಿಮಾನದ ನಿಲುವುಗಳಿಗೆ ಜಾರಿತು.

ಪುಟ 309.

# ನಾಮಸೂಚಿ

ಅಕ್ಸೆಲ್‌ರೊದ್, ಪಾವೆಲ್ ಬರೀಸವಿಚ್ (1850-1928) – ಮೆನ್ಷೆವಿಸಂನ ನಾಯಕರಲ್ಲಿ ಒಬ್ಬರು. 1883ರಲ್ಲಿ 'ಶ್ರಮಜೀವಿಗಳ ವಿಮೋಚನೆ' ಎಂಬ ತಂಡದ ರಚನೆಯಲ್ಲಿ ಭಾಗವಹಿಸಿದರು. 1900ರಿಂದ 'ಇಸ್ಕ್ರ' ಪತ್ರಿಕೆಯ ಸಂಪಾದಕೀಯ ಮಂಡಲಿಯ ಸದಸ್ಯ. ಆರ್‌ಎಸ್‌ಡಿಎಲ್‌ಪಿಯ ದ್ವಿತೀಯ ಮಹಾಧಿವೇಶನದ (1903) ನಂತರ ಉತ್ಸಾಹಶೀಲ ಮೆನ್ಷೆವಿಕ್. ಪ್ರತಿಗಾಮಿತ್ವದ ಹಾಗೂ ಹೊಸ ಕ್ರಾಂತಿಕಾರಿ ಉತ್ಕರ್ಷದ ವರ್ಷಗಳಲ್ಲಿ (1907-1912) ವಿಸರ್ಜನವಾದಿಗಳ ನಾಯಕರಲ್ಲಿ ಒಬ್ಬರು. ಮೆನ್ಷೆವಿಕ್ ವಿಸರ್ಜನವಾದಿಗಳ 'ಸೋಷಲ್ ಡೆಮೊಕ್ರಾಟ್ ವಾಣಿ' ಎಂಬ ಪತ್ರಿಕೆಯ ಸಂಪಾದಕೀಯ ಮಂಡಲಿಯ ಸದಸ್ಯ. ಜಾಗತಿಕ ಸಾಮ್ರಾಜ್ಯಶಾಹಿ ಯುದ್ಧದ ವರ್ಷಗಳಲ್ಲಿ (1914-1918) ಸಾಮಾಜಿಕ ಸ್ವದೇಶ ಮೂಢಾಭಿಮಾನಿ. – 440.

ಅಗಾಡ್ (Agahd), ಇ. – ಜರ್ಮನ್ ಪೆಟಿ ಬೂರ್ಷ್ವಾ ಅರ್ಥಶಾಸ್ತ್ರಜ್ಞ. – 66, 68, 144.

ಅಗ್ವಿನಾಲ್ಡೋ (Aguinaldo), ಎಮಿಲಿಯೋ (1869-1964) – ಫಿಲಿಪೀನ್ಸ್‌ನ ರಾಜಕಾರಣಿ. 1896ರಲ್ಲಿ ಜಮೀನುದಾರರ ಹಾಗೂ ಬೂರ್ಷ್ವಾಸೀಯ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತ ಸ್ಪೈನ್‌ನ ದಬ್ಬಾಳಿಕೆಯ ವಿರುದ್ಧ ಫಿಲಿಪೀನ್ಸ್ ಜನತೆ ನಡೆಸಿದ ಬಂಡಾಯ ಸೇರಿದರು. 1897ರಲ್ಲಿ ಬಂಡಾಯದ ನಾಯಕ ಎ. ಬನಿಫಾತ್ಸಿಯೊರ ಕೊಲೆಯನ್ನು ವ್ಯವಸ್ಥೆಗೊಳಿಸಿ ಇವರು ಬಂಡಾಯ ಚಳವಳಿಯ ನಾಯಕತ್ವ ವಹಿಸಿದರು. 1899ರಲ್ಲಿ ರೂಪುಗೊಂಡ ಫಿಲಿಪೀನ್ಸ್ ಗಣತಂತ್ರದ ಅಧ್ಯಕ್ಷರಾದರು. ಫಿಲಿಪೀನ್ಸ್‌ನಲ್ಲಿ ಸ್ಪೈನಿನ ಸ್ಥಾನವನ್ನು ಅಮೆರಿಕ ಆಕ್ರಮಿಸಿಕೊಂಡ ನಂತರ ಅಗ್ವಿನಾಲ್ಡೋ ಅಮೆರಿಕನ್ ಆಕ್ರಮಣಕಾರರ ವಿರುದ್ಧ ಫಿಲಿಪೀನ್ಸ್ ಜನರ ಹೋರಾಟದ ನಾಯಕತ್ವ ವಹಿಸಿಕೊಂಡರು. 1901ರಲ್ಲಿ ಇವರು ಅಮೆರಿಕನ್ನರಿಗೆ ಸೆರೆಯಾಳಾದರು. ನಂತರದ ವರ್ಷಗಳಲ್ಲಿ ಇವರು ಫಿಲಿಪೀನ್ಸ್‌ನಲ್ಲಿ ಅಮೆರಿಕನ್ನರ ನೀತಿಯನ್ನು ಕಾರ್ಯರೂಪಕ್ಕೆ ತರತೊಡಗಿದರು. – 143.

ಅರಿಸ್ಟೋಫನೀಸ್ (Aristophanes) (ಕ್ರಿ. ಪೂ. ಸು. 445-ಸು. 385) – ಪುರಾತನ ಗ್ರೀಸಿನ ನಾಟಕಕಾರ, ರಾಜಕೀಯ ವಿಷಯಗಳಿಗೆ ಸಂಬಂಧಿಸಿದ ವಿಡಂಬನಾತ್ಮಕ ಪ್ರಹಸನಗಳ ಕರ್ತೃ. – 84.

ಅವ್‌ಕ್ಸೇಂತ್ಯೆವ್, ನಿಕೊಲಾಯ್ ದ್ಮಿತ್ರಿಯೆವಿಚ್ (1878-1943) – ಸಮಾಜವಾದಿ-ಕ್ರಾಂತಿಕಾರಿಗಳ ಪಾರ್ಟಿಯ ನಾಯಕರಲ್ಲೊಬ್ಬರು. ಪಾರ್ಟಿಯ ಕೇಂದ್ರ ಸಮಿತಿಯ ಸದಸ್ಯರಾಗಿದ್ದರು. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಕಟ್ಟಾ ಸಾಮಾಜಿಕ ಸ್ವದೇಶ ಮೂಢಾಭಿಮಾನಿಯಾಗಿದ್ದರು. 1917ರ ಫೆಬ್ರುವರಿ ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿಯನಂತರ ಅಖಿಲ ರಷ್ಯ ರೈತ ಡೆಪ್ಯೂಟಿಗಳ ಸೋವಿಯತ್ತಿನ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿದ್ದರು. ಕೇರೆನ್‌ಸ್ಕಿಯ ತಾತ್ಕಾಲಿಕ ಸರಕಾರದಲ್ಲಿ ಗೃಹ ವ್ಯವಹಾರಗಳ ಸಚಿವರಾಗಿದ್ದರು; ಅನಂತರ ಪ್ರತಿಕ್ರಾಂತಿಕಾರಿ 'ರಷ್ಯನ್ ಗಣತಂತ್ರದ ತಾತ್ಕಾಲಿಕ ಸೋವಿಯತ್'(ಪ್ರಿಪಾರ್ಲಿಮೆಂಟ್)ನ ಅಧ್ಯಕ್ಷರಾಗಿದ್ದರು. ಅಕ್ಟೋಬರ್ ಸಮಾಜವಾದಿ ಕ್ರಾಂತಿಯನಂತರ ಪ್ರತಿಕ್ರಾಂತಿಕಾರಿ ದಂಗೆಗಳನ್ನು ಸಂಘಟಿಸಿದರು. – 182, 221.

ಆರ್ಮ್‌ಸ್ಟ್ರಾಂಗ್ (Armstrong) – 1937ರವರೆಗೂ ಅಸ್ತಿತ್ವದಲ್ಲಿದ್ದ 'ಆರ್ಮ್‌ಸ್ಟ್ರಾಂಗ್, ವಿಟ್‌ವೆರ್ಸ್ ಅಂಡ್ ಕಂ.' ಎಂಬ ಆಂಗ್ಲ ಮಿಲಿಟರಿ-ಕೈಗಾರಿಕಾ ಕಂಪನಿಯ ಪ್ರತಿನಿಧಿ. – 85.

ಎಡ್ವರ್ಡ್, ಏಳನೆಯ (1841-1910) – ಇಂಗ್ಲೆಂಡ್ ದೊರೆ (1901-1910). – 75.

ಎಷ್ವೆಗೆ (Eschwege), ಲುದ್‌ವಿಗ್ – ಜರ್ಮನ್ ಪೆಟಿ ಬೂರ್ಷ್ವಾ ಅರ್ಥಶಾಸ್ತ್ರಜ್ಞ. *Die Bank* ಎಂಬ ಆರ್ಥಿಕ ನಿಯತಕಾಲಿಕದಲ್ಲಿ ಕೆಲಸ ಮಾಡಿದರು. ಇದರಲ್ಲಿ ಅವರು ಹಣಕಾಸು ಬಂಡವಾಳ ಕುರಿತು ತಮ್ಮ ಲೇಖನಗಳನ್ನು ಪ್ರಕಟಿಸಿದರು. – 36, 73, 76, 140.

ಓವೆನ್ಸ್ (Owens), ಮಿಹಾಯೆಲ್ ಜೋಸೆಫ್ (1859-1923) – ಸೀಸೆ ತಯಾರಿಸುವ ಯಂತ್ರದ ಅಮೆರಿಕನ್ ಆವಿಷ್ಕರಣಕಾರ. ನಂತರ ಸೀಸೆ ತಯಾರಿಸುವ ಕೈಗಾರಿಕೆಯಲ್ಲಿ ಉದ್ಯಮಿ. – 128.

ಕಾರ್ನಿಜಿ (Carnegie), ಆಂಡ್ರ್ಯೂ (1835-1919) – ಅಮೆರಿಕದ ಕೋಟ್ಯಾಧೀಶ, ಸ್ಕಾಟ್ಲೆಂಡ್‌ನಲ್ಲಿ ಜನಿಸಿದ ವ್ಯಕ್ತಿ. 1848ರಲ್ಲಿ ಅಮೆರಿಕಕ್ಕೆ

ವಲಸೆಬಂದರು. ಅಮೆರಿಕದ ಅಂತರ್ಯುದ್ಧದ ಕಾಲದಲ್ಲಿ (1861-1865) ಸಟ್ಟಾ ವ್ಯಾಪಾರದ ಮೂಲಕ ಭಾರಿ ಸಂಪತ್ತನ್ನು ಶೇಖರಿಸಿದರು. 1873ರಲ್ಲಿ ಉಕ್ಕು ಕೈಗಾರಿಕೆಯಲ್ಲಿ ತಮ್ಮ ಬಂಡವಾಳವನ್ನು ತೊಡಗಿಸಿದರು. 1889ರಲ್ಲಿ ಕಾರ್ನಿಜಿ ಉಕ್ಕು ಕಾರ್ಪೊರೇಷನ್ ಸ್ಥಾಪಿಸಿದರು. 1901ರಲ್ಲಿ ತಮ್ಮ ಉದ್ಯಮಗಳನ್ನು ಪಿ. ಮಾರ್ಗನ್‌ರ ಸ್ಟೀಲ್ ಟ್ರಸ್ಟ್‌ನೊಡನೆ ಒಂದುಗೂಡಿಸಿದರು. – 135.

ಕಾಲ್ವೆರ್ (Calwer), ರೀಹರ್ಡ್ (1868-1927) – ಜರ್ಮನಿಯ ಖ್ಯಾತ ಅರ್ಥಶಾಸ್ತ್ರಜ್ಞ; ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯಲ್ಲಿ ಸುಧಾರಣಾವಾದ ಹಾಗೂ ಪುನರ್‌ಪರಿಶೀಲನಾವಾದಗಳ ಪ್ರತಿನಿಧಿ. 1909ರಲ್ಲಿ ಈ ಪಾರ್ಟಿಯಿಂದ ಹೊರಬಂದರು. 1908-1913ರಲ್ಲಿ ಜರ್ಮನಿಯ ಟ್ರೇಡ್ ಯೂನಿಯನ್‌ಗಳ ಮುಖ್ಯ ಆಯೋಗದ ಆರ್ಥಿಕ ಸಮೀಕ್ಷೆಗಳ ಹಾಗೂ ಸುದ್ದಿಗಾರರ ವರದಿಗಳ ಮೇಲ್ವಿಚಾರಕರಾಗಿದ್ದರು. – 123.

ಕಾವೆನ್ಯಾಕ್ (Cavaignac), ಲೂಯಿ ಎಜೇನ್ (1802-1857) – ಫ್ರೆಂಚ್ ಜನರಲ್, ಪ್ರತಿಗಾಮಿ ರಾಜಕಾರಣಿ, 1848ರ ಫೆಬ್ರುವರಿ ಕ್ರಾಂತಿಯನಂತರ ಫ್ರಾನ್ಸ್‌ನ ತಾತ್ಕಾಲಿಕ ಸರ್ಕಾರದಲ್ಲಿ ಮಿಲಿಟರಿ ಸಚಿವ. 1848ರ ಜೂನ್ ತಿಂಗಳಿಂದ ಮಿಲಿಟರಿ ಸರ್ವಾಧಿಕಾರತ್ವದ ನಾಯಕತ್ವ ವಹಿಸಿ, ಪ್ಯಾರಿಸ್ ಕಾರ್ಮಿಕರ ಜೂನ್ ಬಂಡಾಯವನ್ನು ಅತ್ಯಂತ ಕ್ರೌರ್ಯದಿಂದ ಹತ್ತಿಕ್ಕಿದರು. – 255.

ಕೂಗೆಲ್‌ಮನ್ (Kugelmann), ಲುಡ್‌ವಿಗ್ (1830-1902) – ಜರ್ಮನ್ ಸೋಷಲ್ ಡೆಮೊಕ್ರಾಟ್, ವೃತ್ತಿಯಲ್ಲಿ ವೈದ್ಯ. ಜರ್ಮನಿಯಲ್ಲಿ 1848-1849ರ ಕ್ರಾಂತಿಯಲ್ಲಿ ಭಾಗವಹಿಸಿದರು. ಪ್ರಥಮ ಇಂಟರ್‌ನ್ಯಾಷನಲ್‌ನ ಸದಸ್ಯರಾಗಿದ್ದರು ಲಂಡನ್‌ನಲ್ಲಿ ವಾಸಿಸುತ್ತಿದ್ದ ಕೆ. ಮಾರ್ಕ್ಸ್‌ರೊಂದಿಗೆ 1862ರಿಂದ 1874ರವರೆಗೆ ಪತ್ರವ್ಯವಹಾರ ನಡೆಸುತ್ತ ಅವರಿಗೆ ಜರ್ಮನಿಯ ಪರಿಸ್ಥಿತಿಯ ಬಗೆಗೆ ವರದಿ ಮಾಡುತ್ತಿದ್ದರು. – 210, 211.

ಕೂನೊವ್ (Cunow), ಹೈನ್‌ರಿಹ್ (1862-1936) – ಜರ್ಮನ್ ಬಲಪಂಥದ ಸೋಷಲ್ ಡೆಮೊಕ್ರಾಟ್; ಇತಿಹಾಸಕಾರ, ಸಮಾಜಶಾಸ್ತ್ರಜ್ಞ ಹಾಗೂ ಮಾನವಕುಲಶಾಸ್ತ್ರಜ್ಞ: ಪ್ರೊಫೆಸರ್. 1917ರಿಂದ 1923ರವರೆಗೆ ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯ ಮುಖವಾಣಿಯಾದ *Die Neue Zeit* ('ಹೊಸ ಕಾಲ')ನ ಸಂಪಾದಕ. ಮೊದಲು ಮಾರ್ಕ್ಸ್‌ವಾದಿಗಳ ಪರವಾಗಿದ್ದರು, ಆದರೆ ಅನಂತರ ಪುನರ್‌ಪರಿಶೀಲನಾವಾದಿ; ಮಾರ್ಕ್ಸ್‌ವಾದವನ್ನು ವಿಕೃತ

ಗೊಳಿಸಿದರು. ಪ್ರಥಮ ಸಾಮ್ರಾಜ್ಯವಾದಿ ಯುದ್ಧದ ವರ್ಷಗಳಲ್ಲಿ (1914-1918) ಸಾಮಾಜಿಕ-ಸಾಮ್ರಾಜ್ಯವಾದದ ಸಿದ್ಧಾಂತವೇತ್ತರು. – 121.

ಕೆಸ್ಟ್ನೆರ್ (Kestner), ಫ್ರಿತ್ಸ್ – ಜರ್ಮನ್ ಅರ್ಥಶಾಸ್ತ್ರಜ್ಞ. – 33, 34.

ಕೇರೆನ್‌ಸ್ಕಿ, ಅಲೆಕ್ಸಾಂದ್ರ್ ಫ್ಯೋದೊರೊವಿಚ್ (1881-1970) – ಸಮಾಜ ವಾದಿ-ಕ್ರಾಂತಿಕಾರಿ. 1917ರ ಫೆಬ್ರುವರಿ ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿಯ ನಂತರ ನ್ಯಾಯಾಂಗ ಸಚಿವರಾಗಿದ್ದರು, ಯುದ್ಧ ಸಚಿವರಾಗಿದ್ದರು, ನೌಕಾ ಸಚಿವರಾಗಿ ದ್ದರು. ಅನಂತರ ತಾತ್ಕಾಲಿಕ ಸರಕಾರದ ಪ್ರಧಾನ ಮಂತ್ರಿಯಾಗಿ, ಸುಪ್ರೀಮ್ ಕಮಾಂಡರ್-ಇನ್-ಚೀಫ್ ಆದರು. ಅಕ್ಟೋಬರ್ ಸಮಾಜವಾದಿ ಕ್ರಾಂತಿಯನಂತರ ಸೋವಿಯತ್ ಅಧಿಕಾರದ ವಿರುದ್ಧ ಕ್ರಿಯಾಶೀಲವಾಗಿ ಹೋರಾಟ ನಡೆಸಿದರು. 1918ರಲ್ಲಿ ರಷ್ಯವನ್ನು ಬಿಟ್ಟು ಹೊರಹೋದರು. – 181, 253.

ಕೊರ್ನೆಲಿಸ್ಸೆನ್ (Cornelissen), ಕ್ರಿಶ್ಚಿಯನ್ – ಡಚ್ ಅರಾಜಕತಾವಾದಿ ಹಾಗೂ ಪಿ. ಎ. ಕ್ರೊಪೊತ್ಕಿನ್‌ರ ಅನುಯಾಯಿ. ಮಾರ್ಕ್ಸ್‌ವಾದದ ವಿರುದ್ಧ ಹೋರಾಟ ನಡೆಸಿದರು. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಸಾಮಾಜಿಕ ಸ್ವದೇಶ ಮೂಢಾಭಿಮಾನಿಯಾಗಿದ್ದರು. – 282.

ಕೊಲ್ಚಾಕ್, ಅಲೆಕ್ಸಾಂದ್ರ್ ವಸೀಲ್ಯೆವಿಚ್ (1874-1920) – ತ್ಸಾರ್‌ಶಾಹಿ ನೌಕಾಬಲದಲ್ಲಿ ಅಡ್ಮಿರಲ್ ಆಗಿದ್ದರು; ರಾಜಪ್ರಭುತ್ವವಾದಿ. 1918-1919ರಲ್ಲಿ ರಷ್ಯನ್ ಪ್ರತಿಕ್ರಾಂತಿಯ ಪ್ರಧಾನ ನಾಯಕರಲ್ಲೊಬ್ಬರು. ಅಕ್ಟೋಬರ್ ಸಮಾಜ ವಾದಿ ಕ್ರಾಂತಿಯನಂತರ ಅಮೆರಿಕ ಹಾಗೂ ಅಂಟಾಂಟ್ ದೇಶಗಳ ಸಾಮ್ರಾಜ್ಯವಾದಿ ಗಳ ಬೆಂಬಲದಿಂದ ತಮ್ಮನ್ನು ರಷ್ಯದ ಸರ್ವೋಚ್ಚ ಆಳ್ವಿಕೆಗಾರ ಎಂದು ಘೋಷಿಸಿ ಕೊಂಡು ಉರಾಲ್, ಸೈಬೀರಿಯ ಹಾಗೂ ದೂರಪ್ರಾಚ್ಯಗಳಲ್ಲಿ ಬೂರ್ಷ್ವಾ ಭೂಮಾ ಲೀಕ ಸರ್ವಾಧಿಕಾರವನ್ನು ಸ್ಥಾಪಿಸಿದರು. ಕೆಂಪು ಸೇನೆಯ ದಾಳಿಗಳು ಹಾಗೂ ಕ್ರಾಂತಿ ಕಾರಿ-ಗರಿಲ್ಲಾ ಚಳವಳಿ ಕೊಲ್ಚಾಕ್ ದಳಗಳನ್ನು ಧ್ವಂಸ ಮಾಡಿದವು. ಕೊಲ್ಚಾಕ್‌ನನ್ನು ಸೆರೆಹಿಡಿದು 1920ರ ಫೆಬ್ರುವರಿಯಲ್ಲಿ ಇರ್‌ಕೂತ್‌ಸ್ಕ್ ಕ್ರಾಂತಿಕಾರಿ ಮಂಡಳಿಯ ಗೊತ್ತುವಳಿಯ ಪ್ರಕಾರ ಗುಂಡಿಕ್ಕಿ ಕೊಲ್ಲಲಾಯಿತು. – 16.

ಕೊಲ್ಬ್ (Kolb), ವಿಲ್‌ಹೆಲ್ಮ್ (1870-1918) – ಜರ್ಮನ್ ಸೋಷಲ್ ಡೆಮೊಕ್ರಾಟ್, ಸಂದರ್ಭಸಾಧಕವಾದಿ ಹಾಗೂ ಪುನರ್‌ಪರಿಶೀಲನಾವಾದಿ. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ (1914-1918) ಸಾಮಾಜಿಕ ಸ್ವದೇಶ ಮೂಢಾಭಿ ಮಾನಿಯಾಗಿದ್ದರು. – 309.

ಕೌತ್‌ಸ್ಕಿ (Kautsky), ಕಾರ್ಲ್ (1854-1938) – ಜರ್ಮನ್ ಸೋಷಲ್ ಡೆಮೊಕ್ರಾಟರ ಹಾಗೂ ದ್ವಿತೀಯ ಇಂಟರ್‌ನ್ಯಾಷನಲ್‌ನ ನಾಯಕ. ಮೊದಲು ಮಾರ್ಕ್ಸ್‌ವಾದಿಯಾಗಿದ್ದವರು ಅನಂತರ ತತ್ವಭ್ರಷ್ಟರಾದರು. ಮಧ್ಯಮ ಮಾರ್ಗದ (ಕೌತ್‌ಸ್ಕಿವಾದದ) ಸಿದ್ಧಾಂತವೇತ್ತ. ಇದು ಸಂದರ್ಭಸಾಧಕವಾದದ ಒಂದು ವಿಶೇಷ ವಾಗಿ ಅಪಾಯಕಾರಿಯಾದ ಹಾಗೂ ಹಾನಿಕರವಾದ ಪ್ರಕಾರವಾಗಿದ್ದಿತು. ಕೌತ್‌ಸ್ಕಿ ಯವರು ಜರ್ಮನ್ ಸೋಷಲ್ ಡೆಮೊಕ್ರಾಟರ ಸೈದ್ಧಾಂತಿಕ ಪತ್ರಿಕೆ *Die Neue Zeit*('ಹೊಸ ಕಾಲ')ನ ಸಂಪಾದಕರಾಗಿದ್ದರು.

ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಕೌತ್‌ಸ್ಕಿ ಮಧ್ಯಮ ಮಾರ್ಗ ನಿಲುವು ತಳೆದಿದ್ದರು, ತಮ್ಮ ಸಾಮಾಜಿಕ ಸ್ವದೇಶ ಮೂಢಾಭಿಮಾನವನ್ನು ಮರೆ ಮಾಚಲು ಅಂತರರಾಷ್ಟ್ರೀಯತಾವಾದದ ತೆರೆಮರೆಯನ್ನು ಉಪಯೋಗಿಸಿಕೊಂಡರು. "ಅತೀತ-ಸಾಮ್ರಾಜ್ಯವಾದಿ" ಪ್ರತಿಗಾಮಿ ಸಿದ್ಧಾಂತವೊಂದರ ಕರ್ತೃ. ಅಕ್ಟೋಬರ್ ಸಮಾಜವಾದಿ ಕ್ರಾಂತಿಯನಂತರ ಬಹಿರಂಗವಾಗಿಯೇ ಶ್ರಮಜೀವಿ ವರ್ಗ ಕ್ರಾಂತಿ ಯನ್ನು, ಕಾರ್ಮಿಕ ವರ್ಗದ ಸರ್ವಾಧಿಕಾರವನ್ನು ಮತ್ತು ಸೋವಿಯತ್ ಅಧಿಕಾರ ವನ್ನು ವಿರೋಧಿಸಿದರು. – 16, 18, 35, 97, 109, 116, 117, 118-122, 124, 138, 142-148, 150, 151-155, 157, 161, 170, 176, 186, 200, 201, 207, 211, 220, 228, 244, 245, 256, 288, 290, 291, 292-294, 295, 296-299, 300, 301, 302, 303, 304, 305.

ಕ್ರುಪ್ಪ್ (Krupp) – ಜರ್ಮನ್ ಸಾಮ್ರಾಜ್ಯವಾದದ ಮೂಲ ಶಸ್ತ್ರಾಗಾರ ಗಳಲ್ಲೊಂದಾದ ಜರ್ಮನಿಯಲ್ಲಿನ ಮಿಲಿಟರಿ ಲೋಹೋದ್ಯಮದ ನಾಯಕತ್ವ ವಹಿಸಿದ್ದ (1968ರವರೆಗೆ) ಕೈಗಾರಿಕೋದ್ಯಮಿಗಳ ಕುಟುಂಬ. 1811ರಲ್ಲಿ ಫ್ರೆಡ ರಿಕ್ ಕ್ರುಪ್ಪ್ (1787-1826) ಸ್ಥಾಪಿಸಿದ ಪುಟ್ಟ ಕಂಪನಿಯು ಇಂತಹ ಬೃಹತ್ ಉದ್ಯಮವಾಗಿ ಬೆಳೆಯಿತು. ಈ ಉದ್ಯಮದ ನಾಯಕರು ಪ್ರಥಮ (1914-1918) ಹಾಗೂ ದ್ವಿತೀಯ (1939-1945) ಜಾಗತಿಕ ಯುದ್ಧಗಳ ಸಿದ್ಧತೆಯಲ್ಲಿ ಕ್ರಿಯಾ ಶೀಲವಾಗಿ ಭಾಗವಹಿಸಿ ಅಗಾಧ ಪ್ರಮಾಣದಲ್ಲಿ ಲಾಭ ಗಳಿಸಿದರು. 1945ರ ಯಾಲ್ಟ ಹಾಗೂ ಪೋಟ್ಸ್‌ಡಾಂ ನಿರ್ಣಯಗಳ ಪ್ರಕಾರ ಈ ಉದ್ಯಮ ವೃಂದಕ್ಕೆ ಸೇರಿದ ಮಿಲಿಟರಿ ಕಾರ್ಖಾನೆಗಳನ್ನು ನಾಶಮಾಡಬೇಕಿದ್ದಿತು, ಆದರೆ ಪಶ್ಚಿಮ ಜರ್ಮನಿಯಲ್ಲಿ ಈ ನಿರ್ಣಯಗಳನ್ನು ಜಾರಿಗೆ ತರಲಿಲ್ಲ. – 53, 85, 150.

ಕ್ರೊಪೋತ್ಕಿನ್, ಪಿ. ಎ. (1842-1921) – ಅರಾಜಕತಾವಾದದ ಪ್ರಧಾನ ಪ್ರತಿಪಾದಕ ಹಾಗೂ ಸಿದ್ಧಾಂತವೇತ್ತರಲ್ಲೊಬ್ಬರು. ಪ್ರಥಮ ಜಾಗತಿಕ ಯುದ್ಧದ

ಸಮಯದಲ್ಲಿ ಸ್ವದೇಶ ಮೂಢಾಭಿಮಾನಿಯಾಗಿದ್ದರು. ಅನೇಕ ವರ್ಷಗಳವರೆಗೆ ರಾಜಕೀಯ ದೇಶಾಂತರವಾಸಿಯಾಗಿದ್ದು 1917ರಲ್ಲಿ ರಷ್ಯಕ್ಕೆ ಹಿಂದಿರುಗಿದರು. ಹಿಂದಿರುಗಿದನಂತರವೂ ಬೂರ್ಷ್ವಾ ಅಭಿಪ್ರಾಯಗಳನ್ನೇ ಹೊಂದಿದ್ದರೂ 1920ರಲ್ಲಿ ಯೂರೋಪಿಯನ್ ಕಾರ್ಮಿಕರನ್ನುದ್ದೇಶಿಸಿ ಪತ್ರವೊಂದನ್ನು ಪ್ರಕಟಿಸಿದರು. ಅದರಲ್ಲಿ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಚಾರಿತ್ರಿಕ ಮಹತ್ವವನ್ನು ಮನ್ನಿಸಿ, ಸೋವಿಯತ್ ರಷ್ಯದ ವಿರುದ್ಧ ನಡೆಯುತ್ತಿದ್ದ ಸಶಸ್ತ್ರ ಹಸ್ತಕ್ಷೇಪಕ್ಕೆ ಪ್ರತಿಬಂಧ ಏರ್ಪಡಿಸಬೇಕೆಂದು ಕಾರ್ಮಿಕರಿಗೆ ಕರೆ ನೀಡಿದರು. – 282, 306.

ಗೇ, ಅಲೆಕ್ಸಾಂದ್ರ್ ಯೂ. (ಮರಣ 1919ರಲ್ಲಿ) – ರಷ್ಯನ್ ಅರಾಜಕತಾವಾದಿ. ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ನಂತರ ಸೋವಿಯತ್ ಅಧಿಕಾರಕ್ಕೆ ಬೆಂಬಲ ನೀಡಿದರು. – 282.

ಗೆದ್ (Guesde), ಜ್ಯೂಲ್ (1845-1922) – ಫ್ರೆಂಚ್ ಸಮಾಜವಾದಿ ಚಳವಳಿಯ ಮತ್ತು ದ್ವಿತೀಯ ಇಂಟರ್‌ನ್ಯಾಷನಲ್‌ನ ಸಂಘಟಕರಲ್ಲಿ ಸಂಸ್ಥಾಪಕರಲ್ಲಿ ಒಬ್ಬರು. ಗೆದ್‌ರವರು ಫ್ರಾನ್ಸಿನಲ್ಲಿ ಮಾರ್ಕ್ಸ್‌ವಾದಿ ವಿಚಾರಗಳು ಹರಡುವುದಕ್ಕೂ ಸಮಾಜವಾದಿ ಚಳವಳಿ ಬೆಳೆಯುವುದಕ್ಕೂ ತುಂಬ ಕೆಲಸ ಮಾಡಿದರು.

ಆದರೆ ಬಲಪಂಥದ ಸಮಾಜವಾದಿಗಳ ನೀತಿಗಳ ವಿರುದ್ಧ ಹೋರಾಟ ನಡೆಸುತ್ತ ಗೆದ್‌ರವರು ಸೈದ್ಧಾಂತಿಕ ಹಾಗೂ ತಾಂತ್ರಿಕ ಪ್ರಶ್ನೆಗಳಿಗೆ ಸಂಬಂಧಿಸಿ ಪಂಥಾಭಿಮಾನದ ವಿಧಾನಗಳನ್ನು ಅನುಸರಿಸಿ ತಪ್ಪುಗಳನ್ನು ಮಾಡಿದರು. ಪ್ರಥಮ ಜಾಗತಿಕ ಯುದ್ಧ ಪ್ರಾರಂಭವಾದಾಗ ಅವರು ಸಾಮಾಜಿಕ ಸ್ವದೇಶ ಮೂಢಾಭಿಮಾನದ ನಿಲುವು ತಳೆದರು, ಫ್ರೆಂಚ್ ಬೂರ್ಷ್ವಾ ಸರ್ಕಾರದ ಸದಸ್ಯರಾದರು. – 170.

ಗೊಂಪೆರ್ಸ್ (Gompers), ಸಾಮ್ಯುಯೆಲ್ (1850-1924) – ಅಮೆರಿಕನ್ ಟ್ರೇಡ್ ಯೂನಿಯನ್ ಚಳವಳಿಯ ಕಾರ್ಯಕರ್ತ. ಅಮೆರಿಕನ್ ಲೇಬರ್ ಫೆಡರೇಷನ್‌ನ ಸಂಸ್ಥಾಪಕರಲ್ಲಿ ಒಬ್ಬರು; 1895ರಿಂದ ಈ ಫೆಡರೇಷನ್‌ನ ಅಧ್ಯಕ್ಷ. ಬಂಡವಾಳಗಾರರೊಡನೆ ವರ್ಗ ಸಹಕಾರ ನೀತಿಯನ್ನು ಅನುಸರಿಸಿದರು, ಕಾರ್ಮಿಕ ವರ್ಗದ ಕ್ರಾಂತಿಕಾರಿ ಹೋರಾಟದ ವಿರೋಧಿಯಾಗಿದ್ದರು. ಜಾಗತಿಕ ಸಾಮ್ರಾಜ್ಯಶಾಹಿ ಯುದ್ಧ ಕಾಲದಲ್ಲಿ (1914-1918) ಸಾಮಾಜಿಕ-ಸ್ವದೇಶ ಮೂಢಾಭಿಮಾನಿ. ಅಕ್ಟೋಬರ್ ಸಮಾಜವಾದಿ ಕ್ರಾಂತಿ (1917) ಹಾಗೂ ಸೋವಿಯತ್ ರಾಜ್ಯದ ಬಗೆಗೆ ವೈರ ಮನೋಭಾವ ತಳೆದಿದ್ದರು. – 15.

ಗ್ರಾವ್ (Grave), ಜಾನ್ (1854-1939) – ಫ್ರೆಂಚ್ ಪೆಟಿ ಬೂರ್ಷ್ವಾ

ಸಮಾಜವಾದಿ ಹಾಗೂ ಅರಾಜಕತಾವಾದ ಸಿದ್ಧಾಂತವೇತ್ತರಲ್ಲೊಬ್ಬರು. 20ನೆಯ ಶತಮಾನದ ಆರಂಭದಲ್ಲಿ ಅರಾಜಕತಾ-ಸಿಂಡಿಕಲಿಸ್ಟ್ ನಿಲುವು ತಳೆದರು. ಪ್ರಥಮ ಜಾಗತಿಕ ಯುದ್ಧದ (1914-1918) ಸಮಯದಲ್ಲಿ ಸಾಮಾಜಿಕ ಸ್ವದೇಶ ಮೂಢಾಭಿಮಾನಿಯಾಗಿದ್ದರು. – 282.

ಗ್ವಿನ್ನರ್ (Gwinner), ಆರ್ಥುರ್ (1856-1931) – ಜರ್ಮನಿಯ ಭಾರಿ ಬ್ಯಾಂಕರ್. 1894ರಿಂದ 1919ರವರೆಗೆ 'ಜರ್ಮನ್ ಬ್ಯಾಂಕ್'ನ ಡೈರೆಕ್ಟರ್. – 93.

ಚೀರ್‌ಷ್ಕಿ (Tschierschky), ಸಿಗ್‌ಫ್ರಿದ್ (ಜನನ 1872) – ಜರ್ಮನ್ ಬೂರ್ಷ್ವಾ ಅರ್ಥಶಾಸ್ತ್ರಜ್ಞ. ಟ್ರಸ್ಟುಗಳಲ್ಲಿ, ಸಿಂಡಿಕೇಟುಗಳಲ್ಲಿ ಕೆಲಸ ಮಾಡುತ್ತಿದ್ದರು. 'ಕಾರ್ಟೆಲ್ ಹಾಗೂ ಟ್ರಸ್ಟ್' ಎಂಬ ಸಂಶೋಧನಾ ಪ್ರಬಂಧದ ಲೇಖಕ. *Kartell Rundschau* ('ಕಾರ್ಟೆಲ್ ಸಮೀಕ್ಷೆ') ಎಂಬ ನಿಯತಕಾಲಿಕದ ಪ್ರಕಾಶಕ. – 47.

ಚೆರ್ನೋವ್, ವೀಕ್ಟೊರ್ ಮಿಹಾಯ್‌ಲೊವಿಚ್ (1873-1952) – ಸಮಾಜವಾದಿ-ಕ್ರಾಂತಿಕಾರಿ ಪಾರ್ಟಿಯ ನಾಯಕ, ಸಿದ್ಧಾಂತವೇತ್ತ. 1902 ಹಾಗೂ 1905ರ ನಡುವೆ ಆ ಪಾರ್ಟಿಯ ಕೇಂದ್ರ ಮುಖಪತ್ರ 'ರೆವೊಲ್ಯುತ್ಸಿಯೋನ್ನಯ ರೊಸ್ಸೀಯ' ('ಕ್ರಾಂತಿಕಾರಿ ರಷ್ಯ') ಪತ್ರಿಕೆಯನ್ನು ಸಂಪಾದಿಸಿದರು. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಎಡಪಂಥ ನುಡಿಗಟ್ಟುಗಳನ್ನು ಬಳಸಿದರು, ವಾಸ್ತವವಾಗಿ ಸಾಮಾಜಿಕ ಸ್ವದೇಶ ಮೂಢಾಭಿಮಾನಿ ನಿಲುವಿನ ಪರವಾಗಿದ್ದರು. 1917ರಲ್ಲಿ ಬೂರ್ಷ್ವಾ ತಾತ್ಕಾಲಿಕ ಸರಕಾರದಲ್ಲಿ ಕೃಷಿಸಚಿವರಾಗಿದ್ದು ದೊಡ್ಡ ಭೂಮಾಲೀಕರ ಜಹಗೀರುಗಳನ್ನು ವಶಪಡಿಸಿಕೊಂಡಿದ್ದ ರೈತರ ವಿರುದ್ಧ ಕ್ರೂರ ದಬ್ಬಾಳಿಕೆಯ ನೀತಿಯನ್ನು ಅನುಸರಿಸಿದರು. ಅಕ್ಟೋಬರ್ ಸಮಾಜವಾದಿ ಕ್ರಾಂತಿಯನಂತರ ಸೋವಿಯತ್ ವಿರೋಧಿ ದಂಗೆಗಳನ್ನು ಸಂಘಟಿಸಿದರು. 1920ರಲ್ಲಿ ದೇಶಾಂತರ ಹೋಗಿ ಹೊರ ದೇಶಗಳಲ್ಲೂ ಸೋವಿಯತ್ ವಿರೋಧಿ ಚಟುವಟಿಕೆಗಳನ್ನು ಮುಂದುವರಿಸಿದರು. – 169, 182, 183, 221, 260, 282, 308.

ಚೇಂಬರ್ಲಿನ್ (Chamberlain), ಜೊಸೆಫ್ (1836-1914) – ಆಂಗ್ಲ ರಾಜನೀತಿಜ್ಞ. 1895-1903ರಲ್ಲಿ ವಸಾಹತು ವ್ಯವಹಾರಗಳ ಮಂತ್ರಿ; ವಸಾಹತುಗಳನ್ನು ಆಕ್ರಮಿಸಿಕೊಳ್ಳುವ ನೀತಿಯನ್ನು ಕ್ರಿಯಾಶೀಲವಾಗಿ ಕಾರ್ಯರೂಪಕ್ಕೆ ತಂದರು. – 102.

ಛೆಂಕೇಲಿ, ಅಕಾಕಿ ಇವಾನವಿಚ್ (1874-1959) – ಸೋಷಲ್ ಡೆಮೊಕ್ರಾಟ್,

ಮೆನ್ಷೆವಿಕ್, ವೃತ್ತಿಯಲ್ಲಿ ವಕೀಲ. ಜಾಗತಿಕ ಸಾಮ್ರಾಜ್ಯಶಾಹಿ ಯುದ್ಧ ಕಾಲದಲ್ಲಿ (1914-1918) ಸಾಮಾಜಿಕ ಸ್ವದೇಶ ಮೂಢಾಭಿಮಾನಿ. 1918-1921ರಲ್ಲಿ ಜಾರ್ಜಿಯದ ಮೆನ್ಷೆವಿಕ್ ಸರ್ಕಾರದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ. ನಂತರ ಶ್ವೇತ ದೇಶಾಂತರವಾಸಿ. – 140.

ಛೆಯಿಡ್ಸೆ, ನಿಕೊಲಾಯ್ ಸಿಮ್ಯೋನವಿಚ್ (1864-1926) – ಮೆನ್ಷೆವಿಸಂನ ನಾಯಕರಲ್ಲೊಬ್ಬರು. ಮೂರನೆಯ ಹಾಗೂ ನಾಲ್ಕನೆಯ ರಾಜ್ಯ ದೂಮ (ಪಾರ್ಲಿಮೆಂಟ್) ಸದಸ್ಯ. 4ನೆಯ ದೂಮದಲ್ಲಿ ಮೆನ್ಷೆವಿಕ್ ತಂಡದ ನಾಯಕ. ಜಾಗತಿಕ ಸಾಮ್ರಾಜ್ಯಶಾಹಿ ಯುದ್ಧ ಕಾಲದಲ್ಲಿ (1914-1918) ಮಧ್ಯಮ ಮಾರ್ಗ ಹಿಡಿದರು, ಆದರೆ ವಾಸ್ತವವಾಗಿ ರಷ್ಯನ್ ಸಾಮಾಜಿಕ ಸ್ವದೇಶ ಮೂಢಾಭಿಮಾನಿಗಳ ನೀತಿಗೆ ಬೆಂಬಲ ಕೊಡುತ್ತಿದ್ದರು. 1917ರ ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿಯ ಕಾಲದಲ್ಲಿ ರಾಜ್ಯ ದೂಮದ ತಾತ್ಕಾಲಿಕ ಸಮಿತಿಯ ಸದಸ್ಯ, ಅದರ ಸಮರ್ಥಕ, ಪೆತ್ರೊಗ್ರಾದ್ ಕಾರ್ಮಿಕರ ಮತ್ತು ಸೈನಿಕರ ಸೋವಿಯತ್ತಿನ ಅಧ್ಯಕ್ಷ. ಬೂರ್ಷ್ವಾ ತಾತ್ಕಾಲಿಕ ಸರಕಾರಕ್ಕೆ ಕ್ರಿಯಾಶೀಲ ಬೆಂಬಲ ನೀಡುತ್ತಿದ್ದರು. 1917ರ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ನಂತರ ಜಾರ್ಜಿಯ ಪ್ರತಿಕ್ರಾಂತಿಕಾರಿ ಮೆನ್ಷೆವಿಕ್ ಸರ್ಕಾರದ ಸಂವಿಧಾನ ಸಭೆಯ ಅಧ್ಯಕ್ಷ. 1921ರಲ್ಲಿ ಜಾರ್ಜಿಯದಲ್ಲಿ ಸೋವಿಯತ್ ಆಡಳಿತ ಸ್ಥಾಪನೆಗೊಂಡ ನಂತರ ಛೆಯಿಡ್ಸೆ ಫ್ರಾನ್ಸ್‌ಗೆ ವಲಸೆ ಹೋದರು. – 140.

ಜೆನ್ಜೀನೊವ್, ವ್ಲದೀಮಿರ್ ಮಿಹಾಯ್‌ಲೊವಿಚ್ (1880-1953) – ಸಮಾಜವಾದಿ-ಕ್ರಾಂತಿಕಾರಿ ಪಾರ್ಟಿಯ ನಾಯಕರಲ್ಲೊಬ್ಬರು, ಅದರ ಕೇಂದ್ರ ಸಮಿತಿಯ ಸದಸ್ಯ. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ (1914-1918) "ತಾಯ್ನಾಡ ರಕ್ಷಣೆ"ಯ ತಂತ್ರವನ್ನು ಪ್ರತಿಪಾದಿಸಿದರು. 1917ರಲ್ಲಿ ಪೆತ್ರೊಗ್ರಾದ್ ಸೋವಿಯತ್‌ನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಬೂರ್ಷ್ವಾಸೀಯೊಂದಿಗೆ ಒಂದು ಬಣ ಸ್ಥಾಪಿಸುವ ವಿಚಾರವನ್ನು ಮುಂದಿಟ್ಟರು. – 222.

ಜೊರೇಸ್ (Jaurès), ಜಾನ್ (1859-1914) – ಫ್ರೆಂಚ್ ಹಾಗೂ ಅಂತರರಾಷ್ಟ್ರೀಯ ಸಮಾಜವಾದಿ ಚಳವಳಿಯ ಒಬ್ಬ ಪ್ರಮುಖ ಕಾರ್ಯಕರ್ತ. *L'Humanité* ('ಮಾನವಕುಲ') ಪತ್ರಿಕೆಯ ಸಂಸ್ಥಾಪಕ ಮತ್ತು ಸಂಪಾದಕ. ಫ್ರೆಂಚ್ ಸಮಾಜವಾದಿ ಪಾರ್ಟಿಯ ಬಲಪಂಥೀಯ ಸಂದರ್ಭಸಾಧಕವಾದಿ ವಿಭಾಗದ ನಾಯಕ. ಅದೇ ಸಮಯ ಇವರು ಸಮರವಾದದ ವಿರುದ್ಧ ಹೋರಾಟ ನಡೆಸಿದರು. ಪ್ರಥಮ ಜಾಗತಿಕ ಯುದ್ಧಕ್ಕೆ ಮುನ್ನಿನ ಕಾಲದಲ್ಲಿ ಜೊರೇಸ್‌ರವರು ಸ್ವದೇಶ ಮೂಢಾಭಿಮಾನಿಗಳಿಂದ ಕೊಲೆಗೀಡಾದರು. – 291, 309.

ಟೊಮಾ (Thomas), ಆಲ್ಬೆರ್ (1878-1932) – ಫ್ರೆಂಚ್ ರಾಜಕಾರಣಿ, ಸಾಮಾಜಿಕ-ಸುಧಾರಣಾವಾದಿ. 1910ರಿಂದ ಸಮಾಜವಾದಿ ಪಾರ್ಟಿಯ ಪಾರ್ಲಿಮೆಂಟ್ ವೃಂದದ ನಾಯಕರಲ್ಲಿ ಒಬ್ಬರು. ಜಾಗತಿಕ ಸಾಮ್ರಾಜ್ಯಶಾಹಿ ಯುದ್ಧ ಕಾಲದಲ್ಲಿ (1914-1918) ಸಾಮಾಜಿಕ ಸ್ವದೇಶ ಮೂಢಾಭಿಮಾನಿ, ಫ್ರಾನ್ಸ್‌ನ ಬೂರ್ಷ್ವಾ ಸರ್ಕಾರದಲ್ಲಿ ಶಸ್ತ್ರಾಸ್ತ್ರಗಳ ಸಚಿವ. – 15.

ಡಿಸ್ರೇಲಿ (Disraeli), ಬೆಂಜಮಿನ್, ಬೀಕನ್ಸ್‌ಫೀಲ್ಡ್‌ನ ಅರ್ಲ್ (1804-1881) – ಆಂಗ್ಲ ರಾಜಕಾರಣಿ, ಟೋರಿ ನಾಯಕರಲ್ಲೊಬ್ಬರು; ಉದಯೋನ್ಮುಖ ಸಾಮ್ರಾಜ್ಯವಾದಿ ಬೂರ್ಷ್ವಾಸೀಯ ಸಿದ್ಧಾಂತಿಗಳಲ್ಲೊಬ್ಬರು. ಅನೇಕ ಬಾರಿ ಸರ್ಕಾರದ ಸಚಿವರಾಗಿದ್ದರು, ಪ್ರಧಾನ ಮಂತ್ರಿಯೂ ಆಗಿದ್ದರು. – 102.

ಡೆಷಾನೇಲ್ (Deschanel), ಪಾಲ್ (1855-1922) – ಫ್ರೆಂಚ್ ರಾಜಕಾರಣಿ, ಪತ್ರಿಕಾಲೇಖಕ. 1889ರಿಂದ 1919ರವರೆಗೆ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯ, ಅನೇಕ ಬಾರಿ ಅದರ ಅಧ್ಯಕ್ಷ. – 85.

ಡ್ಯೂರಿಂಗ್ (Dühring), ಎವ್ಗೇನಿ (1833-1921) – ಜರ್ಮನ್ ಸಾರಸಂಗ್ರಹ ತತ್ವಜ್ಞಾನಿ ಹಾಗೂ ಪ್ರಾಕೃತಿಕ ಅರ್ಥಶಾಸ್ತ್ರಜ್ಞ. ಇವರ ದಾರ್ಶನಿಕ ಅಭಿಪ್ರಾಯಗಳು ಪಾಸಿಟಿವಿಸಂ, ಆಧ್ಯಾತ್ಮಿಕ ಭೌತಿಕವಾದ ಹಾಗೂ ಭಾವನಾವಾದ ಇವುಗಳ ಸಾರಸಂಗ್ರಹ ಮಿಶ್ರಣವಾಗಿದ್ದವು. – 186, 190.

ಡ್ರಿಯೋ (Driault), ಎಡುವಾರ್ಡ್ – ಫ್ರೆಂಚ್ ಬೂರ್ಷ್ವಾ ಇತಿಹಾಸ ತಜ್ಞ. – 112.

ತುಗಾನ್-ಬರನೋವ್‌ಸ್ಕಿ, ಮಿಹಯಿಲ್ ಇವಾನೊವಿಚ್ (1865-1919) – ರಷ್ಯನ್ ಬೂರ್ಷ್ವಾ ಅರ್ಥಶಾಸ್ತ್ರಜ್ಞ. 1905-1907ರ ಕ್ರಾಂತಿಯ ಸಮಯದಲ್ಲಿ ಸಂವಿಧಾನಾತ್ಮಕ-ಪ್ರಜಾಪ್ರಭುತ್ವವಾದಿ ಪಾರ್ಟಿಯ ಸದಸ್ಯರಾಗಿದ್ದರು. ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ನಂತರ ಉಕ್ರೈನ್‌ನಲ್ಲಿ ಪ್ರತಿಕ್ರಾಂತಿಕಾರಿ ಚಟುವಟಿಕೆಗಳಲ್ಲಿ ತೊಡಗಿದರು. – 277.

ತುರಾತಿ (Turati), ಫಿಲಿಪ್ಪೊ (1857-1932) – ಇಟಲಿಯ ಕಾರ್ಮಿಕ ವರ್ಗ ಚಳವಳಿಯ ಕಾರ್ಯಕರ್ತ. ಇಟಾಲಿಯನ್ ಸೋಷಲಿಸ್ಟ್ ಪಾರ್ಟಿಯ ಸಂಘಟಕ (1892), ಅದರ ಸುಧಾರಣಾವಾದಿ ಬಲಪಂಥದ ನಾಯಕ. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಮಧ್ಯಮ ಮಾರ್ಗೀ ನಿಲುವು ತಳೆದರು. – 309.

ತ್ರೆವೆಸ್ (Treves), ಕ್ಲಾದಿಯೊ (1868-1933) – ಇಟಾಲಿಯನ್ ಸೋಷಲಿಸ್ಟ್ ಪಾರ್ಟಿಯ ಸುಧಾರಣಾವಾದಿ ನಾಯಕ. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಮಧ್ಯಮ ಮಾರ್ಗವಾದಿಯಾಗಿದ್ದರು. ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಬಗೆಗೆ ವೈರದ ಮನೋಭಾವ ತಳೆದರು. ಇಟಾಲಿಯನ್ ಸೋಷಲಿಸ್ಟ್ ಪಾರ್ಟಿಯಲ್ಲಿ ಒಡುಕುಂಟಾದನಂತರ (1922) ಅವರು ಸುಧಾರಣಾವಾದಿ ಯೂನಿಟೇರಿಯನ್ ಸೋಷಲಿಸ್ಟ್ ಪಾರ್ಟಿಯ ನಾಯಕರಲ್ಲೊಬ್ಬರಾದರು. – 309.

ತ್ಸೆರೆತೇಲಿ, ಐ. ಜಿ. (1881-1959) – ಮೆನ್ಷೆವಿಕ್ ನಾಯಕ. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಮಧ್ಯಮ ಮಾರ್ಗವಾದಿ. 1917ರಲ್ಲಿ ಫೆಬ್ರವರಿ ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿಯನಂತರ ಬೂರ್ಷ್ವಾ ತಾತ್ಕಾಲಿಕ ಸರಕಾರದಲ್ಲಿ ಅಂಚೆ ಮತ್ತು ತಂತಿ ಇಲಾಖೆಯ ಸಚಿವರಾದರು. ಜುಲೈ ಘಟನೆಗಳನಂತರ ಗೃಹ ಸಚಿವರಾದರು, ಬೋಲ್ಷೆವಿಕರ ವಿರುದ್ಧ ಹಿಂಸಾ ಕೃತ್ಯಗಳನ್ನು ಸಂಘಟಿಸಿದರು. ಅಕ್ಟೋಬರ್ ಸಮಾಜವಾದಿ ಕ್ರಾಂತಿಯನಂತರ ಜಾರ್ಜಿಯದಲ್ಲಿ ಪ್ರತಿಕ್ರಾಂತಿಕಾರಿ ಮೆನ್ಷೆವಿಕ್ ಸರಕಾರದ ನಾಯಕರಾಗಿದ್ದರು. – 169, 182, 183, 221, 223, 255, 260, 282, 308.

ದವೀದವ್, ಎಲ್. ಎಫ್. – ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಸಾಲ ಇಲಾಖೆಯ ಡೈರೆಕ್ಟರ್, ಬ್ಯಾಂಕಿಂಗ್ ಉದ್ಯಮಿ. – 76.

ದಾವೀದ್ (David), ಎದುವಾರ್ಡ್ (1863-1930) – ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯ ಬಲಪಂಥದ ನಾಯಕ ಮತ್ತು ಪುನರ್ ಪರಿಶೀಲನಾವಾದಿ; ವೃತ್ತಿಯಲ್ಲಿ ಅರ್ಥಶಾಸ್ತ್ರಜ್ಞ. 1903ರಿಂದ ರೈಹ್‌ಸ್ಟಾಕ್‌ನಲ್ಲಿ ಡೆಪ್ಯೂಟಿಯಾಗಿದ್ದರು. ಇವರು ಜರ್ಮನ್ ಸಂದರ್ಭಸಾಧಕರ *Sozialistische Monatshefte*('ಸಮಾಜವಾದಿ ಮಾಸಪತ್ರಿಕೆ')ಯ ಸಂಸ್ಥಾಪಕರಲ್ಲೊಬ್ಬರಾಗಿದ್ದರು. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಸಾಮಾಜಿಕ ಸ್ವದೇಶ ಮೂಢಾಭಿಮಾನಿಯಾಗಿದ್ದರು. – 103, 170, 220, 308, 309.

ದೆನೀಕಿನ್, ಅನ್ತೋನ್ ಇವಾನೊವಿಚ್ (1872-1947) – ತ್ಸಾರ್‌ಶಾಹಿ ಸೈನ್ಯದ ಜನರಲ್; ಅಂತರ್ಯುದ್ಧದ ಸಮಯದಲ್ಲಿ (1918-1920) ಬೂರ್ಷ್ವಾ ಭೂಮಾಲೀಕ ಪ್ರತಿಕ್ರಾಂತಿಯ ನಾಯಕರಾಗಿ ರಷ್ಯದ ದಕ್ಷಿಣ ಭಾಗದಲ್ಲಿ ಸೋವಿಯತ್ ವಿರೋಧಿ ಸಶಸ್ತ್ರ ಬಲಗಳ ಮುಖಂಡರಾಗಿದ್ದರು. 1920ರ ಮಾರ್ಚ್

ತಿಂಗಳಲ್ಲಿ ಕೆಂಪು ಸೇನೆ ಇವರ ಸೈನ್ಯವನ್ನು ಧ್ವಂಸ ಮಾಡಿದ ನಂತರ ಇವರು ವಿದೇಶಕ್ಕೆ ವಲಸೆ ಹೋದರು. – 16.

ನಹಿಮ್ಸನ್, ಮಿರೋನ್ ಇಸಾಕೊವಿಚ್ (ಸ್ಪೆಕ್ಟೇಟರ್) (1880-1938) – ಅರ್ಥಶಾಸ್ತ್ರಜ್ಞ ಹಾಗೂ ಪತ್ರಿಕಾಲೇಖಕ. 1899ರಿಂದ 1921ರವರೆಗೆ ಬುಂದ್ (ಲಿತುವೇನಿಯ, ಪೋಲೆಂಡ್ ಹಾಗೂ ರಷ್ಯಗಳಲ್ಲಿನ ಯಹೂದಿ ಕಾರ್ಮಿಕ ಕೂಟ)ನ ಸದಸ್ಯ. ಜಾಗತಿಕ ಸಾಮ್ರಾಜ್ಯಶಾಹಿ ಯುದ್ಧದ ಕಾಲದಲ್ಲಿ (1914-1918) ಮಧ್ಯಮ ಮಾರ್ಗವಾದಿ. ವಿಶ್ವ ಆರ್ಥಿಕತೆಯ ಪ್ರಶ್ನೆಗಳ ಬಗೆಗೆ ಅನೇಕ ಲೇಖನಗಳ ಕರ್ತೃ. – 145, 147, 150.

ನೆಪೋಲಿಯನ್ I (ಬೊನಾಪಾರ್ಟ್) (Napoleon I Bonaparte) (1769-1821) – 1804ರಿಂದ 1814ರವರೆಗೆ ಮತ್ತು 1815ರಲ್ಲಿ ಫ್ರಾನ್ಸಿನ ಚಕ್ರವರ್ತಿ. – 181, 199, 256.

ನೆಪೋಲಿಯನ್ III (ಬೊನಾಪಾರ್ಟ್, ಲೂಯಿ; ಲೂಯಿ ನೆಪೋಲಿಯನ್) (Napoleon) (1808-1873) – 1852ರಿಂದ 1870ರವರೆಗೆ ಫ್ರಾನ್ಸಿನ ಚಕ್ರವರ್ತಿ. ನೆಪೋಲಿಯನ್ Iನ ಸೋದರ ಸಂಬಂಧಿ, 1848ರಲ್ಲಿ ಕ್ರಾಂತಿಯ ಪರಾಜಯದ ನಂತರ ಫ್ರೆಂಚ್ ಗಣತಂತ್ರದ ಅಧ್ಯಕ್ಷರಾಗಿ ಆಯ್ಕೆಗೊಂಡರು. 1851ರ ಡಿಸೆಂಬರ್ 2ರ ರಾತ್ರಿ ಇವರು ಸೈನಿಕ ಕ್ಷಿಪ್ರಕ್ರಾಂತಿಯನ್ನು ನಡೆಸಿದರು. – 198.

ನೇಯ್‌ಮಾರ್ಕ್ (Neymarck), ಅಲ್‌ಫ್ರೆಡ್ – ಫ್ರೆಂಚ್ ಬೂರ್ಷ್ವಾ ಅರ್ಥಶಾಸ್ತ್ರ-ಸಂಖ್ಯಾಶಾಸ್ತ್ರ ತಜ್ಞ. – 77, 78, 144.

ನೋಸ್ಕೆ (Noske), ಗುಸ್ತಾವ್ (1868-1946) – ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯ ಸಂದರ್ಭಸಾಧಕ ನಾಯಕರಲ್ಲಿ ಒಬ್ಬರು. ಜಾಗತಿಕ ಸಾಮ್ರಾಜ್ಯಶಾಹಿ ಯುದ್ಧಕ್ಕೆ (1914-1918) ಬಹಳ ಮುನ್ನವೇ ಮಿಲಿಟರಿ ಸಂಸ ಪರ ವಾದಿಸಿದರು. ಯುದ್ಧ ಕಾಲದಲ್ಲಿ ಸಾಮಾಜಿಕ ಸ್ವದೇಶ ಮೂಢಾಭಿಮಾನಿ. 1918ರಲ್ಲಿ ಜರ್ಮನಿಯ ನವಂಬರ್ ಕ್ರಾಂತಿ ಕಾಲದಲ್ಲಿ ಕೀಲ್‌ನ ನಾವಿಕರ ಕ್ರಾಂತಿಕಾರಿ ಚಳವಳಿಯನ್ನು ಹತ್ತಿಕ್ಕಿದ ನಾಯಕರಲ್ಲಿ ಒಬ್ಬರು. 1919-1920ರಲ್ಲಿ ಯುದ್ಧ ಸಚಿವರಾಗಿದ್ದರು. ಬರ್ಲಿನ್ ಕಾರ್ಮಿಕರ ಹತ್ಯೆಯ ಮತ್ತು ಕೆ. ಲೀಬ್‌ಕ್ನೆಹ್ತ್ ಹಾಗೂ ಆರ್. ಲುಕ್ಸೆಂಬುರ್ಗ್‌ರ ಕೊಲೆಯ ಸಂಘಟಕ. ಇದರಿಂದಾಗಿ ಇವರನ್ನು "ರಕ್ತಪಿಪಾಸು ನಾಯಿ" ಎಂದು ಕರೆಯಲಾಯಿತು. – 16.

ಪಾನ್ನೆಕೂಕ್ (Panneckoek), ಆಂತೊನಿ (1873-1960) – ಡಚ್ ಸೋಷಲ್ ಡೆಮೊಕ್ರಾಟ್. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಅಂತರ ರಾಷ್ಟ್ರೀಯತಾವಾದಿಯಾಗಿದ್ದರು. 1918ರಿಂದ 1921ರವರೆಗೆ ನೆದರ್‌ಲ್ಯಾಂಡ್ಸ್ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರಾಗಿದ್ದರು, ಕೊಮಿಂಟರ್ನ್‌ನ ಕಾರ್ಯಕಲಾಪಗಳಲ್ಲಿ ಭಾಗವಹಿಸಿದರು. ಅವರು ತೀವ್ರ ಎಡಪಂಥೀಯ ಭಾವನೆಗಳನ್ನು ಹೊಂದಿದ್ದರು. 1921ರಲ್ಲಿ ಕಮ್ಯೂನಿಸ್ಟ್ ಪಾರ್ಟಿಯನ್ನು ಬಿಟ್ಟರು. ಅನಂತರ ಬೇಗನೆಯೇ ರಾಜ ಕೀಯ ಚಟುವಟಿಕೆಯಿಂದ ನಿವೃತ್ತರಾದರು. – 299, 300, 301, 302, 303.

ಪಾಲ್‌ಚಿನ್‌ಸ್ಕಿ, ಪಿ. ಐ. (1875-1929) – ಎಂಜಿನಿಯರ್, 'ಪ್ರಾದೂಗಲ್' ಸಿಂಡಿಕೇಟ್‌ನ ಸಂಸ್ಥಾಪಕ. ಬ್ಯಾಂಕಿಂಗ್ ವರ್ತುಲದೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ಫೆಬ್ರುವರಿ 1917ರ ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿಯ ನಂತರ ಬೂರ್ಷ್ವಾ ತಾತ್ಕಾಲಿಕ ಸರಕಾರದಲ್ಲಿ ವಾಣಿಜ್ಯ ಹಾಗೂ ಕೈಗಾರಿಕೆಯ ಉಪಸಚಿವರಾಗಿದ್ದರು. ವಿಧ್ವಂಸಕ ಕೃತ್ಯ ಮಾಡುವಂತೆ ಕೈಗಾರಿಕೋದ್ಯಮಿಗಳನ್ನು ಸಂಘಟಿಸಿದರು, ಪ್ರಜಾಸತ್ತಾತ್ಮಕ ಸಂಘಟನೆಗಳ ವಿರುದ್ಧ ಹೋರಾಡಿದರು. – 183.

ಪೊತ್ರೇಸೊವ್, ಅಲೆಕ್ಸಾಂದ್ರ್ ನಿಕೊಲಾಯೆವಿಚ್ (1869-1934) – ಮೆನ್ಷೆವಿಕ್ ನಾಯಕರಲ್ಲೊಬ್ಬರು. ಪ್ರತಿಗಾಮಿತನದ (1907-1910) ಹಾಗೂ ಹೊಸ ಕ್ರಾಂತಿಕಾರಿ ಉತ್ಥಾನದ ವರ್ಷಗಳಲ್ಲಿ ವಿಸರ್ಜನವಾದದ ಸಿದ್ಧಾಂತಿ. ಜಾಗತಿಕ ಸಾಮ್ರಾಜ್ಯಶಾಹಿ ಯುದ್ಧದ ಕಾಲದಲ್ಲಿ (1914-1918) ಸಾಮಾಜಿಕ ಸ್ವದೇಶ ಮೂಢಾಭಿಮಾನಿ. ಅಕ್ಟೋಬರ್ ಸಮಾಜವಾದಿ ಕ್ರಾಂತಿಯನಂತರ ದೇಶದಿಂದ ಹೊರಹೋಗಿ ವಾಸಿಸತೊಡಗಿದರು, 'ದ್ನಿ' ('ದಿನಗಳು') ಎಂಬ ವಾರಪತ್ರಿಕೆಯಲ್ಲಿ ಕೆಲಸ ಮಾಡಿದರು, ಸೋವಿಯತ್ ರಷ್ಯವನ್ನು ನಿಂದಿಸುತ್ತಿದ್ದರು. – 103, 140, 169.

ಪೊಮ್ಯಲೋವ್‌ಸ್ಕಿ, ನಿಕೊಲಾಯ್ ಗೆರಾಸಿಮೊವಿಚ್ (1835-1863) – ರಷ್ಯನ್ ಪ್ರಜಾಸತ್ತಾತ್ಮಕ ಲೇಖಕ. ತಮ್ಮ ಕೃತಿಗಳಲ್ಲಿ ಅವರು ರಷ್ಯದ ನಿರಂಕುಶ-ಅಧಿಕಾರಶಾಹಿ ಪದ್ಧತಿಯನ್ನೂ, ಹಿಂಸೆ ಹಾಗೂ ಸ್ವೇಚ್ಛಾಚಾರ ಆಡಳಿತವನ್ನೂ ವಿರೋಧಿಸಿದರು. – 281.

ಪೈಷ್ (Paish), ಜಾರ್ಜ್ (1867-1957) – ಆಂಗ್ಲ ಬೂರ್ಷ್ವಾ ಅರ್ಥಶಾಸ್ತ್ರಜ್ಞ ಹಾಗೂ ಸಂಖ್ಯಾಶಾಸ್ತ್ರಜ್ಞ; ಸಾಂತ್ವನವಾದಿ. ಇಂಗ್ಲೆಂಡ್‌ನ ಕನ್ಸರ್ವೇಟಿವ್ ಪತ್ರಿಕೆ *The Statist*ನ ಸಂಪಾದಕರಲ್ಲೊಬ್ಬರು. ವಿಶ್ವ ಆರ್ಥಿಕತೆ ಹಾಗೂ ರಾಜಕಾರಣ ವಲಯದ ಪ್ರಶ್ನೆಗಳ ಬಗೆಗೆ ಹಲವು ಗ್ರಂಥಗಳನ್ನು ರಚಿಸಿದ್ದಾರೆ. – 87.

ಪ್ರುದೋನ್ (Proudhon), ಪ್ಯೇರ್ ಜೊಸೇಫ್ (1809-1865) – ಫ್ರೆಂಚ್ ಪತ್ರಿಕಾಲೇಖಕ, ಅರ್ಥಶಾಸ್ತ್ರಜ್ಞ ಹಾಗೂ ಸಮಾಜಶಾಸ್ತ್ರಜ್ಞ. ಪೆಟಿ ಬೂರ್ಷ್ವಾಸೀಯ ಸಿದ್ಧಾಂತವೇತ್ತ. ಅರಾಜಕತಾವಾದದ ಸಂಸ್ಥಾಪಕರಲ್ಲೊಬ್ಬರು. – 227, 228, 229, 242, 261, 289, 292, 302.

ಪ್ಲೆಹಾನೊವ್, ಗಿಯೊರ್ಗಿ ವಲೆಂತೀನೊವಿಚ್ (1856-1918) – ರಷ್ಯನ್ ಹಾಗೂ ಅಂತರರಾಷ್ಟ್ರೀಯ ಕಾರ್ಮಿಕ ವರ್ಗ ಚಳವಳಿಯ ಖ್ಯಾತ ಕಾರ್ಯಕರ್ತ, ರಷ್ಯದಲ್ಲಿ ಮಾರ್ಕ್ಸ್‌ವಾದವನ್ನು ಪ್ರಚಾರ ಮಾಡಿದವರಲ್ಲಿ ಮೊದಲಿಗರು. 1883ರಲ್ಲಿ ಪ್ಲೆಹಾನೊವ್ ಮೊದಲ ರಷ್ಯನ್ ಮಾರ್ಕ್ಸ್‌ವಾದಿ ಸಂಘಟನೆ 'ಶ್ರಮ ವಿಮೋಚನಾ ವೃಂದ'ವನ್ನು ಸ್ಥಾಪಿಸಿದರು. ಆರ್‌ಎಸ್‌ಡಿಎಲ್‌ಪಿಯ ದ್ವಿತೀಯ ಮಹಾಧಿವೇಶನದ ನಂತರ ಪ್ಲೆಹಾನೊವ್‌ರು ಸಂದರ್ಭಸಾಧಕವಾದಿ ನಿಲುವು ತಳೆದರು, ಅನಂತರ ಮೆನ್ಷೆವಿಕರನ್ನು ಸೇರಿಕೊಂಡರು. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ (1914-1918) ಸಾಮಾಜಿಕ ಸ್ವದೇಶ ಮೂಢಾಭಿಮಾನ ನಿಲುವುಗಳಿಗೆ ಸರಿದರು. 1917ರ ಫೆಬ್ರುವರಿ ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿಯ ನಂತರ ತಾತ್ಕಾಲಿಕ ಬೂರ್ಷ್ವಾ ಸರ್ಕಾರಕ್ಕೆ ಬೆಂಬಲ ಕೊಟ್ಟರು; ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಬಗೆಗೆ ನಕಾರಾತ್ಮಕ ಮನೋಧರ್ಮ ತಳೆದರು. – 169, 209, 212, 220, 223, 228, 282, 288, 289, 308.

ಫೊಗೆಲ್‌ಷ್ಟೈನ್ (Vogelstein), ತಿಯೋದರ್ – ಜರ್ಮನ್ ಅರ್ಥಶಾಸ್ತ್ರಜ್ಞ. – 27, 31, 96.

ಫೋಲ್ಕೆರ್ (Völker) – ಜರ್ಮನಿಯ ಸರ್ಕಾರಿ ಅಧಿಕಾರಿ, ನಂತರ ಜರ್ಮನಿಯ ಉಕ್ಕು ಕೈಗಾರಿಕಾ ಸಂಘಟನೆಯ ನಾಯಕ. – 76.

ಬಕೂನಿನ್, ಮಿಹಯಿಲ್ ಅಲೆಕ್ಸಾಂದ್ರೊವಿಚ್ (1814-1876) – ಅರಾಜಕತಾವಾದದ ಸಿದ್ಧಾಂತಿ. 1848-1849ರ ಜರ್ಮನ್ ಕ್ರಾಂತಿಯಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದರು. ಪ್ರಥಮ ಇಂಟರ್‌ನ್ಯಾಷನಲ್‌ನ ಸದಸ್ಯ. ಇಂಟರ್‌ನ್ಯಾಷನಲ್‌ನಲ್ಲಿ ಇವರು ಅಂತರರಾಷ್ಟ್ರೀಯ ಕಾರ್ಮಿಕ ಚಳವಳಿಯನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳುವ ಯತ್ನ ಮಾಡುತ್ತ ಮಾರ್ಕ್ಸ್ ಹಾಗೂ ಎಂಗೆಲ್ಸ್‌ರ ವಿರುದ್ಧ ಐಕ್ಯಭಂಜಕ ಚಟುವಟಿಕೆ ನಡೆಸಿದರು. 1872ರಲ್ಲಿ ಇವರನ್ನು ಇಂಟರ್‌ನ್ಯಾಷನಲ್‌ನಿಂದ ಹೊರಹಾಕಲಾಯಿತು. – 228, 229, 289.

ಬಿಸ್ಸೊಲಾತಿ (Bissolati), ಲಿಯೊನೀದ (1857-1920) –

ಇಟಾಲಿಯನ್ ಸೋಷಲಿಸ್ಟ್ ಪಾರ್ಟಿಯ ಸಂಸ್ಥಾಪಕರಲ್ಲೊಬ್ಬರು, ಅದರ ತೀವ್ರ ಬಲ ಸುಧಾರಣಾವಾದಿ ಪಂಥದ ನಾಯಕ. – 220.

ಬುಹಾರಿನ್, ನಿಕೊಲಾಯ್ ಇವಾನೊವಿಚ್ (1888-1938) – ಪತ್ರಿಕಾ ಲೇಖಕ ಹಾಗೂ ಅರ್ಥಶಾಸ್ತ್ರಜ್ಞ, 1906ರಿಂದ ಬೋಲ್ಶೆವಿಕ್ ಪಾರ್ಟಿಯ ಸದಸ್ಯ. 1911ರಲ್ಲಿ ವಿದೇಶಕ್ಕೆ ಓಡಿಹೋದರು. 1915ರಲ್ಲಿ 'ಕಮ್ಯೂನಿಸ್ಟ್' ಎಂಬ ನಿಯತ ಕಾಲಿಕದಲ್ಲಿ ಕೆಲಸ; ರಾಜ್ಯ, ಶ್ರಮಜೀವಿ ವರ್ಗದ ಸರ್ವಾಧಿಕಾರ, ಜನತೆಗಳ ಸ್ವಯಂ ನಿರ್ಣಯಾಧಿಕಾರದ ಹಕ್ಕು ಇವೇ ಮುಂತಾದವುಗಳ ಬಗೆಗೆ ಲೆನಿನ್‌ವಿರೋಧಿ ನಿಲುವು ತಳೆದಿದ್ದರು. ಅಕ್ಟೋಬರ್ ಕ್ರಾಂತಿಯ ನಂತರ ಪಾರ್ಟಿಯ ಕೇಂದ್ರ ಸಮಿತಿಯ ಪಾಲಿಟ್‌ಬ್ಯೂರೋ ಸದಸ್ಯ, 'ಪ್ರಾವ್ದ' ಪತ್ರಿಕೆಯ ಸಂಪಾದಕ; ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್‌ನ ಕಾರ್ಯಕಾರಿ ಸಮಿತಿಯ ಸದಸ್ಯ. – 56.

ಬೀಸ್ಮಾರ್ಕ್ (Bismarck), ಒಟ್ಟೋ ಎಡುವಾರ್ಡ್ ಲಿಯೊಪಾಲ್ಡ್ (1815-1898) – ಪ್ರಷ್ಯ ಹಾಗೂ ಜರ್ಮನಿಯ ರಾಜಕೀಯ ಮುತ್ಸದ್ದಿ ಹಾಗೂ ರಾಜ ತಂತ್ರಜ್ಞ. 1871-1890ರ ವರ್ಷಗಳಲ್ಲಿ ಜರ್ಮನ್ ಸಾಮ್ರಾಜ್ಯದ ರೈಹ್ಸ್ ಕಾಂತ್ಸ್‌ಲೆರ್. – 181.

ಬೆಬಲ್ (Bebel), ಆವ್‌ಗುಸ್ಟ್ (1840-1913) – ಜರ್ಮನ್ ಸೋಷಲ್ ಡೆಮೊಕ್ರಸಿಯ ಹಾಗೂ ದ್ವಿತೀಯ ಇಂಟರ್‌ನ್ಯಾಷನಲ್‌ನ ಸಂಸ್ಥಾಪಕ ಮತ್ತು ಪ್ರಮುಖ ಕಾರ್ಯಕರ್ತರಲ್ಲೊಬ್ಬರು. ವೃತ್ತಿಯಲ್ಲಿ ಟರ್ನರ್. ಜರ್ಮನ್ ಕಾರ್ಮಿಕ ಚಳವಳಿಯಲ್ಲಿ ಸುಧಾರಣಾವಾದ ಹಾಗೂ ಪುನರ್‌ಪರಿಶೀಲನಾವಾದಗಳ ವಿರುದ್ಧ ಹೋರಾಟ ನಡೆಸಿದರು. – 241, 242, 244, 245, 265, 266, 271.

ಬೆರಾರ್ಡ್ (Bérard), ವಿಕ್ಟೊರ್ (1864-1931) – ಫ್ರೆಂಚ್ ಪೆಟಿ ಬೂರ್ಷ್ವಾ ಅರ್ಥಶಾಸ್ತ್ರಜ್ಞ, ಪತ್ರಿಕಾ ಲೇಖಕ ಹಾಗೂ ಸಾಹಿತ್ಯ ಮತ್ತು ಭಾಷಾ ವಿಜ್ಞಾನಿ. – 144.

ಬೆರ್ನ್‌ಷ್ಟೈನ್ (Bernstein), ಎಡುವಾರ್ಡ್ (1850-1932) – ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯ ಹಾಗೂ ದ್ವಿತೀಯ ಇಂಟರ್‌ನ್ಯಾಷನಲ್‌ನ ತೀವ್ರ ಸಂದರ್ಭಸಾಧಕವಾದಿ ಪಂಥದ ನಾಯಕ. ಪುನರ್‌ಪರಿಶೀಲನಾವಾದ ಹಾಗೂ ಸುಧಾರಣಾವಾದಗಳ ಸಿದ್ಧಾಂತವೇತ್ತ. ಬಂಡವಾಳವಾದದಡಿ ಕಾರ್ಮಿಕರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವಂಥ ಸುಧಾರಣೆಗಳಿಗಾಗಿ

ಹೋರಾಟ ನಡೆಸುವುದಷ್ಟೆ ಕಾರ್ಮಿಕ ವರ್ಗ ಚಳವಳಿಯ ಪ್ರಧಾನ ಗುರಿ ಎಂದು ಬೆರ್ನ್‌ಷ್ಟೈನ್ ಪ್ರತಿಪಾದಿಸಿದರು. ಇದಕ್ಕೆ ಸಂಬಂಧಿಸಿ ಅವರು "ಚಳವಳಿಯೇ ಎಲ್ಲ, ಅಂತಿಮ ಗುರಿ ಮುಖ್ಯವಲ್ಲ" ಎಂಬ ಸಂದರ್ಭಸಾಧಕವಾದಿ ಸೂತ್ರವೊಂದನ್ನೂ ಮುಂದಿಟ್ಟರು. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಅವರು ಮಧ್ಯಮ ಮಾರ್ಗದ ನಿಲುವು ತಳೆದಿದ್ದರು, ತಮ್ಮ ಸಾಮಾಜಿಕ ಸ್ವದೇಶ ಮೂಢಾಭಿಮಾನವನ್ನು ಅಂತರರಾಷ್ಟ್ರೀಯತಾವಾದದ ನುಡಿಗುಚ್ಛಗಳಿಂದ ಮರೆಮಾಚಲು ಯತ್ನಿಸಿದರು. ಅನಂತರದ ವರ್ಷಗಳಲ್ಲಿ ಅವರು ಸಾಮ್ರಾಜ್ಯಶಾಹಿ ಬೂರ್ಷ್ವಾಸೀಯ ಬೆಂಬಲಿಗರಾದರು. – 15, 217, 227, 228, 229, 290, 291, 292, 293, 297, 302, 305.

ಬೇರ್ (Beer), ಮಾಕ್ಸ್ (1864-1943) – ಸಮಾಜವಾದದ ಜರ್ಮನ್ ಇತಿಹಾಸಕಾರ. – 102.

ಬೊನಾಪಾರ್ಟ್ – ಒಂದನೆಯ ನೆಪೋಲಿಯನ್ ನೋಡಿ.

ಬೊನಾಪಾರ್ಟ್, ಲೂಯಿ – ತೃತೀಯ ನೆಪೋಲಿಯನ್ ನೋಡಿ.

ಬೌವೆರ್ (Bauer), ಒಟ್ಟೋ (1882-1938) – ಆಸ್ಟ್ರಿಯನ್ ಸೋಷಲ್ ಡೆಮೊಕ್ರಸಿಯ ಹಾಗೂ ದ್ವಿತೀಯ ಇಂಟರ್‌ನ್ಯಾಷನಲ್‌ನ ನಾಯಕರಲ್ಲಿ ಒಬ್ಬರು. ಕ್ರಾಂತಿಕಾರಿ ಮಾರ್ಕ್ಸ್‌ವಾದವನ್ನು, ಶ್ರಮಜೀವಿ ವರ್ಗ ಹೋರಾಟವನ್ನು ಮಾರ್ಕ್ಸ್‌ವಾದಿ ನುಡಿಗಟ್ಟುಗಳಿಂದ ಮರೆಮಾಚಿ ತಿರಸ್ಕರಿಸುತ್ತಿದ್ದ 'ಆಸ್ಟ್ರಿಯನ್ ಮಾರ್ಕ್ಸ್‌ವಾದ' ಎಂಬ ಪ್ರವೃತ್ತಿಯ ಸಿದ್ಧಾಂತಿ. 'ಸಾಂಸ್ಕೃತಿಕ-ರಾಷ್ಟ್ರೀಯ ಸ್ವಾಯತ್ತತೆ' ಎಂಬ ಬೂರ್ಷ್ವಾ ಸ್ವದೇಶ ಮೂಢಾಭಿಮಾನಿ ಸಿದ್ಧಾಂತದ ಪ್ರತಿಪಾದಕರಲ್ಲಿ ಒಬ್ಬರು. ಅಕ್ಟೋಬರ್ ಸಮಾಜವಾದಿ ಕ್ರಾಂತಿಯ (1917) ಬಗೆಗೆ ನಕಾರಾತ್ಮಕ ಮನೋಭಾವ ತಳೆದರು. 1918-1919ರಲ್ಲಿ ಆಸ್ಟ್ರಿಯ ಬೂರ್ಷ್ವಾ ಗಣತಂತ್ರದ ವಿದೇಶಾಂಗ ವ್ಯವಹಾರಗಳ ಸಚಿವರಾಗಿದ್ದರು. 1919, 1927 ಹಾಗೂ 1934ರಲ್ಲಿ ಆಸ್ಟ್ರಿಯದ ಕಾರ್ಮಿಕ ವರ್ಗದ ಕ್ರಾಂತಿಕಾರಿ ಚಳವಳಿಗಳನ್ನು ಅಡಗಿಸುವುದರಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದರು. – 15.

ಬ್ರಾಕೆ (Bracke), ವಿಲ್‌ಹೆಲ್ಮ್ (1842-1880) – ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ಕಾರ್ಮಿಕ ಪಾರ್ಟಿಯ ಸಂಸ್ಥಾಪಕ ಹಾಗೂ ಮುಖಂಡರಲ್ಲೊಬ್ಬರು. ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯಲ್ಲಿನ ಸಂದರ್ಭಸಾಧಕವಾದಿ ಅಂಶಗಳ ವಿರುದ್ಧ (ಸದಾ ಕ್ರಮಬದ್ಧವಲ್ಲವಾಗಿದ್ದರೂ) ಹೋರಾಡುತ್ತಿದ್ದರು. – 242, 264.

24—566

ಬ್ರಾಂಟಿಂಗ್ (Branting), ಕಾರ್ಲ್ ಯಾಲ್‌ಮರ್ (1860-1925) – ಸ್ವೀಡನ್ನಿನ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯ ಹಾಗೂ ದ್ವಿತೀಯ ಇಂಟರ್‌ನ್ಯಾಷನಲ್‌ನ ನಾಯಕರಲ್ಲೊಬ್ಬರು. ಸಂದರ್ಭಸಾಧಕವಾದಿ ನಿಲುವು ತಳೆದಿದ್ದರು. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ (1914-1918) ಸಾಮಾಜಿಕ ಸ್ವದೇಶ ಮೂಢಾಭಿಮಾನಿಯಾಗಿದ್ದರು, ಸೋವಿಯತ್ ರಷ್ಯದ ವಿರುದ್ಧ ಸಶಸ್ತ್ರ ಹಸ್ತಕ್ಷೇಪಕ್ಕೆ ಬೆಂಬಲ ನೀಡಿದರು. – 220, 309.

ಬ್ರೆಷ್ಕೊ-ಬ್ರೆಷ್ಕೋವ್‌ಸ್ಕಯ, ಯೆಕತೆರೀನ ಕೊನ್‌ಸ್ತನ್‌ತೀನೊವ್ನ (1844-1934) – ಸಮಾಜವಾದಿ-ಕ್ರಾಂತಿಕಾರಿ ಪಾರ್ಟಿಯ ಒಬ್ಬ ಸಂಘಟಕಿ ಹಾಗೂ ನಾಯಕಿ. ಆ ಪಾರ್ಟಿಯ ತೀವ್ರ ಬಲಪಂಥಕ್ಕೆ ಸೇರಿದ್ದರು. 1917 ಫೆಬ್ರುವರಿ ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿಯನಂತರ ತಾತ್ಕಾಲಿಕ ಸರಕಾರಕ್ಕೆ ಬೆಂಬಲ ನೀಡಿದರು. ಸಾಮ್ರಾಜ್ಯಶಾಹಿ ಯುದ್ಧವನ್ನು "ವಿಜಯಿಾ ಅಂತ್ಯದವರೆಗೆ" ಮುಂದುವರಿಸುವುದರ ಪರವಾಗಿದ್ದರು. ಅಕ್ಟೋಬರ್ ಸಮಾಜವಾದಿ ಕ್ರಾಂತಿಯನಂತರ ಸೋವಿಯತ್ ಪ್ರಭುತ್ವವನ್ನು ಕ್ರಿಯಾಶೀಲವಾಗಿ ವಿರೋಧಿಸಿದರು. – 169.

ಬ್ಲಾಂಕಿ (Blanqui), ಲೂಯಿ ಒಗ್ಯೂಸ್ತ್ (1805-1881) – ಮಹೋನ್ನತ ಫ್ರೆಂಚ್ ಕ್ರಾಂತಿಕಾರಿ, ಅಸಾಧ್ಯಾದರ್ಶ ಕಮ್ಯೂನಿಸಂನ ಗಣ್ಯ ಪ್ರತಿನಿಧಿ. 1830 ರಿಂದ 1870ರ ತನಕ ಪ್ಯಾರಿಸ್‌ನ ಬಂಡಾಯ ಮತ್ತು ಕ್ರಾಂತಿಗಳಲ್ಲಿ ಭಾಗವಹಿಸಿದರು, ಹಲವು ರಹಸ್ಯ ಕ್ರಾಂತಿಕಾರಿ ಸಂಘಗಳ ನಾಯಕರಾಗಿದ್ದರು. ಅಲ್ಪಸಂಖ್ಯೆಯ ಕ್ರಾಂತಿಕಾರಿ-ಸಂಚುಕಾರರ ವೃಂದದ ಸಹಾಯದಿಂದ ಅಧಿಕಾರ ಕಸಿದುಕೊಂಡುಬಿಡಬಹುದು ಎಂದು ಭಾವಿಸಿದ್ದ ಬ್ಲಾಂಕಿ ಕ್ರಾಂತಿಕಾರಿ ಹೋರಾಟದಲ್ಲಿ ಜನಸಮೂಹಗಳ ನಿರ್ಧಾರಕ ಪಾತ್ರವನ್ನು ಅರ್ಥಮಾಡಿಕೊಂಡಿರಲಿಲ್ಲ. ಬ್ಲಾಂಕಿಯವರ ಕ್ರಾಂತಿಕಾರಿ ಸಾಧನೆಗಳನ್ನು ಉನ್ನತವಾಗಿ ಮೌಲ್ಯೀಕರಿಸಿ ಮಾರ್ಕ್ಸ್ ಹಾಗೂ ಲೆನಿನ್ ಅದೇ ಸಮಯದಲ್ಲಿ ಅವರ ತಪ್ಪುಗಳನ್ನೂ ಒಳಸಂಚು ತಂತ್ರಗಳ ದೋಷಗಳನ್ನೂ ತೀವ್ರವಾಗಿ ಟೀಕಿಸಿದರು. – 235, 291.

ಮಾರಿಸ್ (Morris), ಹೆನ್ರಿ (ಜನನ 1868) – ಅಮೆರಿಕನ್ ಇತಿಹಾಸಕಾರ, ನ್ಯಾಯಶಾಸ್ತ್ರ ಅಭ್ಯಸಿಸಿದ್ದರು. ಇತಿಹಾಸ ಹಾಗೂ ಆರ್ಥಿಕತೆ ಕುರಿತು ಹಲವಾರು ಕೃತಿಗಳನ್ನು ರಚಿಸಿದರು. – 100.

ಮಾರ್ಗನ್ (Morgan), ಜಾನ್ ಪಿರ್‌ಪೊಂಟ್ (1867-1943) – ಅಮೆ

ರಿಕದ ಕೋಟ್ಯಾಧೀಶ. 19ನೆಯ ಶತಮಾನದ ಮಧ್ಯಭಾಗದಲ್ಲಿ ಅಸ್ತಿತ್ವಕ್ಕೆ ಬಂದ ಭಾರಿ ಬ್ಯಾಂಕಿಂಗ್ ಮನೆತನದ ಮುಖ್ಯಸ್ಥ. – 51, 95.

ಮಾರ್ತೊವ್, ಲೆವ್ (ತ್ಸೆದೆರ್‌ಬೌಮ್, ಯೂಲಿ ಓಸಿಪೊವಿಚ್) (1873-1923) – ಮೆನ್ಷೆವಿಸಂನ ನಾಯಕರಲ್ಲೊಬ್ಬರು. ಜಾಗತಿಕ ಸಾಮ್ರಾಜ್ಯಶಾಹಿ ಯುದ್ಧದ ಕಾಲದಲ್ಲಿ (1914-1918) ಮಧ್ಯಮ ಮಾರ್ಗ ತಳೆದರು. 1917ರ ಫೆಬ್ರುವರಿ ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿಯ ನಂತರ ಅಂತರರಾಷ್ಟ್ರೀಯತಾವಾದಿ-ಮೆನ್ಷೆವಿಕರ ತಂಡದ ನಾಯಕ. 1917ರ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ನಂತರ ಸೋವಿಯತ್ ಆಡಳಿತದ ವಿರೋಧಿ. 1920ರಲ್ಲಿ ಜರ್ಮನಿಗೆ ವಲಸೆ ಹೋದರು. – 140, 161.

ಮಾಸ್ಲವ್, ಪ್ಯೋತ್ರ್ ಪಾವ್ಲವಿಚ್ (1867-1946) – ಅರ್ಥಶಾಸ್ತ್ರಜ್ಞ, ಸೋಷಲ್ ಡೆಮೊಕ್ರಾಟ್. ಮಾರ್ಕ್ಸ್‌ವಾದವನ್ನು ಪುನರ್‌ಪರಿಶೀಲಿಸುವ ಯತ್ನಗಳಿಂದ ಕೂಡಿದ ಭೂಸಂಬಂಧ ಪ್ರಶ್ನೆಯ ಕುರಿತು ಹಲವು ಕೃತಿಗಳನ್ನು ರಚಿಸಿದರು. ಆರ್‌ಎಸ್‌ಡಿಎಲ್‌ಪಿಯ ದ್ವಿತೀಯ ಮಹಾಧಿವೇಶನದ (1903) ನಂತರ ಮೆನ್ಷೆವಿಕರೊಂದಿಗೆ ಸೇರಿಕೊಂಡರು. ಭೂಮಿಯನ್ನು ಪೌರಸಭೆ ವಹಿಸಿಕೊಳ್ಳಬೇಕೆಂಬ ಮೆನ್ಷೆವಿಕರ ಕಾರ್ಯಕ್ರಮವನ್ನು ಪ್ರತಿಪಾದಿಸಿದರು. ಪ್ರತಿಗಾಮಿತ್ವದ ಹಾಗೂ ಹೊಸ ಕ್ರಾಂತಿಯ ಉತ್ಕರ್ಷದ ಕಾಲದಲ್ಲಿ (1907-1912) ವಿಸರ್ಜನವಾದಿ. ಜಾಗತಿಕ ಸಾಮ್ರಾಜ್ಯಶಾಹಿ ಯುದ್ಧಕಾಲದಲ್ಲಿ (1914-1918) ಸಾಮಾಜಿಕ ಸ್ವದೇಶ ಮೋಹಾಭಿಮಾನಿ. ಅಕ್ಟೋಬರ್ ಸಮಾಜವಾದಿ ಕ್ರಾಂತಿಯ (1917) ನಂತರ ರಾಜಕೀಯ ಚಟುವಟಿಕೆಯಿಂದ ದೂರ ಸರಿದು ಶಿಕ್ಷಣ ಹಾಗೂ ವೈಜ್ಞಾನಿಕ ಕಾರ್ಯಗಳಲ್ಲಿ ನಿರತರಾದರು. 1929ರಿಂದ ಅಕಾದೆಮಿಷಿಯನ್. – 113, 140.

ಮಿಲ್ಯೆರಾನ್ (Millerand), ಅಲೆಕ್ಸಾಂದರ್ ಎತ್ಯೆನ್ (1859-1943) – ಫ್ರೆಂಚ್ ರಾಜಕಾರಣಿ. 19ನೆಯ ಶತಮಾನದ ಕೊನೆಯ ದಶಕದಲ್ಲಿ ಸಮಾಜವಾದಿಗಳ ಪರ ಇದ್ದರು, ಫ್ರೆಂಚ್ ಸಮಾಜವಾದಿ ಚಳವಳಿಯಲ್ಲಿ ಸಂದರ್ಭಸಾಧಕ ಪ್ರವೃತ್ತಿಯ ನಾಯಕರಾಗಿದ್ದರು. 1899ರಲ್ಲಿ ವಾಲ್ಡೆಕ್-ರೂಸೋ ಪ್ರತಿಗಾಮಿ ಬೂರ್ಷ್ವಾ ಸರಕಾರದ ಸದಸ್ಯರಾದರು, ಪ್ಯಾರಿಸ್ ಕಮ್ಯೂನ್‌ನ ಹಂತಕ ಜನರಲ್ ಗಾಲಿಫೇಯೊಂದಿಗೆ ಸಹಕರಿಸಿದರು. ಮಿಲ್ಯೆರಾನ್‌ವಾದವು ಶ್ರಮಜೀವಿ ವರ್ಗದ ಹಿತಗಳಿಗೆ ದ್ರೋಹವಾಗಿದ್ದಿತು, ಪುನರ್‌ಪರಿಶೀಲನಾವಾದಕ್ಕೆ ಕಾರ್ಯ ರೂಪದ ಅಭಿವ್ಯಕ್ತಿಯಾಗಿದ್ದಿತು. ಅದರ ಸಾಮಾಜಿಕ ಬೇರುಗಳನ್ನು ಬಯಲು ಮಾಡಿತು, ಎಂದು ವಿ. ಐ. ಲೆನಿನ್ ತೋರಿಸಿಕೊಟ್ಟರು. – 15, 291.

24*

ಮಿಹಯ್‌ಲೋವ್‌ಸ್ಕಿ, ನಿಕೊಲಾಯ್ ಕೊನ್‌ಸ್ತನ್‌ತೀನೊವಿಚ್ (1842-1904) – ರಷ್ಯನ್ ಸಮಾಜವಿಜ್ಞಾನಿ, ಪತ್ರಿಕಾಲೇಖಕ, ಸಾಹಿತ್ಯ ವಿಮರ್ಶಕ, ಉದಾರವಾದಿ ನರೋದಿಸಂನ ಪ್ರಮುಖ ಸಿದ್ಧಾಂತವೇತ್ತ; ಮಾರ್ಕ್ಸ್‌ವಾದಿಗಳ ವಿರುದ್ಧ ಉಗ್ರ ಹೋರಾಟ ನಡೆಸಿದರು. – 178.

ಮೇರಿಂಗ್ (Mehring), ಫ್ರಾನ್‌ತ್ಸ್ (1846-1919) – ಜರ್ಮನ್ ಕಾರ್ಮಿಕ ವರ್ಗ ಚಳವಳಿಯ ಪ್ರಮುಖ ಕಾರ್ಯಕರ್ತ. ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯ ಎಡಪಂಥದ ನಾಯಕ, ಸಿದ್ಧಾಂತವೇತ್ತ. ಪಾರ್ಟಿಯ ಸೈದ್ಧಾಂತಿಕ ಮುಖಪತ್ರವಾದ *Die Neue Zeit* ('ಹೊಸ ಕಾಲ') ಪತ್ರಿಕೆಯ ಸಂಪಾದಕರಾಗಿದ್ದರು. ಜರ್ಮನ್ ಕಮ್ಯೂನಿಸ್ಟ್ ಪಾರ್ಟಿಯನ್ನು ಸ್ಥಾಪಿಸುವುದರಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದರು. – 205.

ಮೊಂಟೆಸ್ಕ್ಯೂ (Montesquieu). ಷಾರ್ಲ್ ಲೂಯಿ (1689-1755) – ಪ್ರಸಿದ್ಧ ಫ್ರೆಂಚ್ ಬೂರ್ಷ್ವಾ ಸಮಾಜಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ ಹಾಗೂ ಲೇಖಕ. 18ನೆಯ ಶತಮಾನದ ಬೂರ್ಷ್ವಾ ಜ್ಞಾನೋದಯದ ಪ್ರತಿಪಾದಕ, ಸಂವಿಧಾನಾತ್ಮಕ ರಾಜಪ್ರಭುತ್ವದ ಸಿದ್ಧಾಂತವೇತ್ತ. – 230.

ಮ್ಯಾಕ್‌ಡೊನಾಲ್ಡ್ (MacDonald), ಜೇಮ್ಸ್ ರಾಮ್‌ಸೇ (1866-1937) – ಆಂಗ್ಲ ರಾಜಕಾರಣಿ, ಸ್ವತಂತ್ರ ಕಾರ್ಮಿಕ ಪಾರ್ಟಿ ಹಾಗೂ ಲೇಬರ್ ಪಾರ್ಟಿಗಳ ಸಂಸ್ಥಾಪಕ ನಾಯಕರಲ್ಲಿ ಒಬ್ಬರು. ತೀವ್ರ ಸಂದರ್ಭಸಾಧಕವಾದಿ ನೀತಿ ಅನುಸರಿಸುತ್ತಿದ್ದರು. ವರ್ಗ ಸಹಕಾರ ನಡೆಸಿ ಕ್ರಮೇಣ ಬಂಡವಾಳವಾದವು ಸಮಾಜವಾದವಾಗಿ ಪರಿವರ್ತನೆಗೊಳ್ಳಬೇಕೆಂದು ತಿಳಿಸುವ ಸಿದ್ಧಾಂತವನ್ನು ಪ್ರತಿಪಾದಿಸಿದರು. ಜಾಗತಿಕ ಸಾಮ್ರಾಜ್ಯಶಾಹಿ ಯುದ್ಧದ ಆರಂಭ ಕಾಲದಲ್ಲಿ ಸಾಂತ್ವನವಾದಿ ನಿಲುವು ತಳೆದರು. ನಂತರ ಸಾಮ್ರಾಜ್ಯವಾದಿ ಬೂರ್ಷ್ವಾಸೀಗೆ ಬಹಿರಂಗ ಬೆಂಬಲ ನೀಡುವ ಹಾದಿ ಹಿಡಿದರು. 1918-1920ರಲ್ಲಿ ಸೋವಿಯತ್ ವಿರೋಧಿ ಹಸ್ತಕ್ಷೇಪವನ್ನು ಪ್ರತಿಭಟಿಸಲು ಆಂಗ್ಲ ಕಾರ್ಮಿಕರು ನಡೆಸುತ್ತಿದ್ದ ಹೋರಾಟಕ್ಕೆ ಅಡ್ಡಿ ಮಾಡಲು ಯತ್ನಿಸಿದರು. ಕಾರ್ಮಿಕ ವರ್ಗವನ್ನು ಒಡೆಯುವ ನೀತಿ ಅನುಸರಿಸಿದರು. 1924ರಲ್ಲಿ ಹಾಗೂ 1929-1931ರಲ್ಲಿ ಬ್ರಿಟಿಷ್ ಪ್ರಧಾನಮಂತ್ರಿಯಾಗಿದ್ದರು. – 15.

ಯೆಯ್‌ಡೆಲ್ಸ್ (Jeidels), ಒಟ್ಟೋ – ಜರ್ಮನ್ ಅರ್ಥಶಾಸ್ತ್ರಜ್ಞ. – 36-38, 53, 58, 59, 88, 91.

ರಾಕ್‌ಫೆಲ್ಲರ್ (Rockefeller), ಜಾನ್ ಡೇವಿಸಂ (1839-1937) – ಹಣಕಾಸು ಸಾಮ್ರಾಜ್ಯದ ಸಂಸ್ಥಾಪಕ. ಅಮೆರಿಕದ ತೈಲ ದೊರೆ. 1870ರಲ್ಲಿ 'ಸ್ಟ್ಯಾಂಡರ್ಡ್ ಆಯಿಲ್' ಎಂಬ ಭಾರಿ ತೈಲ ಟ್ರಸ್ಟ್ ಸ್ಥಾಪಿಸಿದರು. ರಾಕ್‌ಫೆಲ್ಲರ್ ಕುಟುಂಬದವರು ಅಮೆರಿಕದ ಭಾರಿ ವಾಣಿಜ್ಯ ಬ್ಯಾಂಕುಗಳ ಮಾಲೀಕರು ಹಾಗೂ ಮುಖ್ಯಸ್ಥರು. – 51, 91, 92, 93.

ರಾದೆಕ್, ಕಾರ್ಲ್ ಬೆರ್ನ್‌ಗಾರ್ಡೊವಿಚ್ (1885-1939) – 19ನೆಯ ಶತಮಾನದ ತಿರುವು ಕಾಲದಿಂದ ಗಲಿಶ್ಯಿಯಾ, ಪೋಲೆಂಡ್ ಹಾಗೂ ಜರ್ಮನಿಯ ಸೋಷಲ್ ಡೆಮೊಕ್ರಾಟಿಕ್ ಚಳವಳಿಯಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದರು. ಪ್ರಥಮ ಜಾಗತಿಕ ಯುದ್ಧದ ವರ್ಷಗಳಲ್ಲಿ (1914-1918) ಅಂತರರಾಷ್ಟ್ರೀಯತಾವಾದಿ ನಿಲುವು ತಳೆದರು, ಆದರೆ ಮಧ್ಯ ಮಾರ್ಗವಾದದತ್ತವೂ ಓಲಾಡುತ್ತಿದ್ದರು. 1917ರಲ್ಲಿ ಬೋಲ್ಷೆವಿಕ್ ಪಾರ್ಟಿ ಸೇರಿದರು. ನಂತರ ಇವರನ್ನು ಪಾರ್ಟಿಯಿಂದ ಉಚ್ಚಾಟಿಸಲಾಯಿತು. – 299.

ರೀಸ್ಸೆರ್ (Riesser), ಯಾಕಬ್ (1853-1932) – ಜರ್ಮನ್ ಅರ್ಥಶಾಸ್ತ್ರಜ್ಞ ಹಾಗೂ ಬ್ಯಾಂಕಿಂಗ್ ಉದ್ಯಮಿ. ಸಾಮ್ರಾಜ್ಯಶಾಹಿ ಹಾಗೂ ಹಣಕಾಸು ಬಂಡವಾಳ ಪ್ರತಿಪಾದಿಸುವ ಹಲವಾರು ಕೃತಿಗಳನ್ನು ರಚಿಸಿದರು. – 28, 32, 41, 42, 44, 50, 60, 155, 160, 162.

ರುಬನೋವಿಚ್, ಇಲ್ಯಾ ಅದೋಲ್ಫೊವಿಚ್ (1860-1920) – ಸಮಾಜವಾದಿ ಕ್ರಾಂತಿಕಾರಿ ನಾಯಕರಲ್ಲೊಬ್ಬರು. ಅಂತರರಾಷ್ಟ್ರೀಯ ಸೋಷಲಿಸ್ಟ್ ಬ್ಯೂರೋ ಸದಸ್ಯ. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ (1914-1918) ಸಾಮಾಜಿಕ ಸ್ವದೇಶ ಮೂಢಾಭಿಮಾನಿಯಾಗಿದ್ದರು. – 169.

ರುಸಾನೊವ್, ನಿಕೊಲಾಯ್ ಸೆರ್ಗೇಯೆವಿಚ್ (1859-1939) – ಸಮಾಜವಾದಿ ಕ್ರಾಂತಿಕಾರಿ; ಹಲವು ಸಮಾಜವಾದಿ ಕ್ರಾಂತಿಕಾರಿ ಪತ್ರಿಕೆಗಳನ್ನು ಸಂಪಾದಿಸಿದರು. – 222.

ರೆನೊದೇಲ್ (Renaudel), ಪಿಯೆರ್ (1871-1935) – ಫ್ರೆಂಚ್ ಸೋಷಲಿಸ್ಟ್ ಪಾರ್ಟಿಯ ಸುಧಾರಣಾವಾದಿ ನಾಯಕ. – 170, 220.

ರೊತ್‌ಷಿಲ್ಡ್ ಕುಟುಂಬದವರು – ಯೂರೋಪಿನ ಅನೇಕ ದೇಶಗಳಲ್ಲಿ ಬ್ಯಾಂಕುಗಳನ್ನೂ ಪಡೆದಿದ್ದ ಹಣಕಾಸು ಉದ್ಯಮಿಗಳ ವಂಶ. – 91.

ರೋಡ್ಸ್ (Rhodes), ಸೆಸಿಲ್ ಜಾನ್ (1853-1902) – ಬ್ರಿಟಿಷ್ ಪ್ರತಿಗಾಮಿ ರಾಜಕಾರಣಿ. ಬ್ರಿಟಿಷ್ ವಸಾಹತುವಾದಿ ನೀತಿಯನ್ನು ಕ್ರಿಯಾಶೀಲವಾಗಿ ಜಾರಿಗೆ ತಂದು ಸಾಮ್ರಾಜ್ಯಶಾಹಿ ವಿಸ್ತರಣೆಯನ್ನು ಪ್ರತಿಪಾದಿಸಿದರು. – 102, 103, 110.

ಲಸ್ಸಾಲ್ (Lassalle), ಫೆರ್ದಿನಾನ್ಡ್ (1825-1864) – ಜರ್ಮನ್ ಪೆಟಿ ಬೂರ್ಷ್ವಾ ಸಮಾಜವಾದಿ. ಜರ್ಮನ್ ಕಾರ್ಮಿಕ ವರ್ಗ ಚಳವಳಿಯಲ್ಲಿ ಸಂದರ್ಭ ಸಾಧಕವಾದದ ಒಂದು ರೂಪವಾದ ಲಸ್ಸಾಲ್‌ವಾದದ ಸಂಸ್ಥಾಪಕ. ಲಸ್ಸಾಲ್ 'ಅಖಿಲ ಜರ್ಮನ್ ಕಾರ್ಮಿಕರ ಸಂಘ'(1863)ದ ಸಂಸ್ಥಾಪಕರಲ್ಲೊಬ್ಬರಾಗಿದ್ದರು. ಈ ಸಂಘವನ್ನು ಸ್ಥಾಪಿಸಿದುದು ಕಾರ್ಮಿಕ ವರ್ಗಕ್ಕೆ ಅತ್ಯಂತ ಪ್ರಾಮುಖ್ಯತೆಯದಾಗಿದ್ದಿತು. ಆದರೆ ಅವರು ಅದನ್ನು ಸಂದರ್ಭಸಾಧಕವಾದದತ್ತ ಕರೆದೊಯ್ದರು. – 266, 275, 276, 277.

ಲಾನ್ಸ್‌ಬುರ್ಗ್ (Lansburgh), ಆಲ್‌ಫ್ರೆಡ್ (1872-1940) – ಜರ್ಮನಿಯ ಬೂರ್ಷ್ವಾ ಅರ್ಥಶಾಸ್ತ್ರಜ್ಞ. *Die Bank* ನಿಯತಕಾಲಿಕದ (1908-1935) ಪ್ರಕಾಶಕ. ಈ ನಿಯತಕಾಲಿಕದಲ್ಲಿ ಹಣಕಾಸು ಬಂಡವಾಳ ಕುರಿತು ತಮ್ಮ ಕೃತಿಗಳನ್ನು ಪ್ರಕಟಿಸಿದರು. – 39, 41, 75, 131, 144, 149, 150.

ಲಿಂಕನ್ (Lincoln), ಅಬ್ರಹಾಂ (1809-1865) – ಅಮೆರಿಕದ ಗಣ್ಯ ರಾಜಕಾರಣಿ, ರಿಪಬ್ಲಿಕನ್ ಪಾರ್ಟಿಯ ನಾಯಕರಲ್ಲೊಬ್ಬರು. ಅಮೆರಿಕದ ಅಧ್ಯಕ್ಷ (1861-1865). ಅಂತರ್ಯುದ್ಧದ ಕಾಲದಲ್ಲಿ (1861-1865) ಜನಸಮೂಹಗಳ ಒತ್ತಾಯಕ್ಕೆ ಮಣಿದು ಹಲವು ಮುಖ್ಯ ಬೂರ್ಷ್ವಾ ಪ್ರಜಾಸತ್ತಾತ್ಮಕ ಸುಧಾರಣೆಗಳನ್ನು ಜಾರಿಗೆ ತಂದರು. ತತ್ಫಲವಾಗಿ ಯುದ್ಧ ಕಲೆಯಲ್ಲಿ ಕ್ರಾಂತಿಕಾರಿ ವಿಧಾನಗಳು ಸಾಧ್ಯವಾದವು. 1865ರ ಏಪ್ರಿಲ್‌ನಲ್ಲಿ ಗುಲಾಮುಒಡೆಯರ ಏಜೆಂಟನಿಂದ ಕೊಲೆಮಾಡಲ್ಪಟ್ಟರು. – 143.

ಲಿತಾಯಿರ್, ಎ. – ನೋಡಿ: ಲಿಸಿಸ್.

ಲಿಸಿಸ್ (Lysis) (ಲಿತಾಯಿರ್ – Letailleur), ಎಜೆನ್ – ಫ್ರೆಂಚ್ ಬೂರ್ಷ್ವಾ ಅರ್ಥಶಾಸ್ತ್ರಜ್ಞ. ಹಣಕಾಸು ಹಾಗೂ ರಾಜಕೀಯ ಪ್ರಶ್ನೆಗಳ ಬಗೆಗೆ ಹಲವು ಕೃತಿಗಳನ್ನು ಬರೆದರು. – 69, 70.

ಲೀಫ್‌ಮನ್ (Liefmann), ರಾಬರ್ಟ್ (1874-1941) – ಜರ್ಮನಿಯ ಬೂರ್ಷ್ವಾ ಅರ್ಥಶಾಸ್ತ್ರಜ್ಞ, ಪ್ರಾಧ್ಯಾಪಕ. ಆರ್ಥಿಕ ಹಾಗೂ ಸಾಮಾಜಿಕ ಪ್ರಶ್ನೆಗಳ ಕುರಿತು ಅನೇಕ ಕೃತಿಗಳ ಕರ್ತೃ. – 28, 29, 37, 41, 59, 60, 61, 96.

ಲೀಬ್‌ಕ್ನೆಹ್ತ್ (Liebknecht), ವಿಲ್‌ಹೆಲ್ಮ್ (1826-1900) – ಜರ್ಮನ್ ಹಾಗೂ ಅಂತರರಾಷ್ಟ್ರೀಯ ಕಾರ್ಮಿಕ ವರ್ಗ ಚಳವಳಿಯ ಪ್ರಮುಖ ನಾಯಕ. ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯ ಹಾಗೂ ದ್ವಿತೀಯ ಇಂಟರ್‌ನ್ಯಾಷನಲ್‌ನ ಸಂಸ್ಥಾಪಕ, ನಾಯಕ. – 244.

ಲುಕ್ಸೆಂಬುರ್ಗ್ (Luxemburg), ರೋಸಾ (1871-1919) – ಜರ್ಮನ್, ಪೋಲಿಷ್ ಹಾಗೂ ಅಂತರರಾಷ್ಟ್ರೀಯ ಕಾರ್ಮಿಕ ಚಳವಳಿಯ ಪ್ರಮುಖ ನಾಯಕಿ. ದ್ವಿತೀಯ ಇಂಟರ್‌ನ್ಯಾಷನಲ್‌ನ ಎಡಪಂಥದ ನಾಯಕರಲ್ಲೊಬ್ಬರು. ಜರ್ಮನ್ ಕಮ್ಯೂನಿಸ್ಟ್ ಪಾರ್ಟಿಯ ಸಂಸ್ಥಾಪಕರಲ್ಲೊಬ್ಬರು. – 299.

ಲೆವಿ (Levy), ಹೆರ್ಮನ್ (ಜನನ 1881) – ಜರ್ಮನಿಯ ಬೂರ್ಷ್ವಾ ಅರ್ಥಶಾಸ್ತ್ರಜ್ಞ. ಹಣಕಾಸು ಬಂಡವಾಳ ಕುರಿತು ಅನೇಕ ಕೃತಿಗಳನ್ನು ರಚಿಸಿದ್ದಾರೆ. – 24.

ಲೇಗೀನ್ (Legien), ಕಾರ್ಲ್ (1861-1920) – ಜರ್ಮನ್ ಟ್ರೇಡ್ ಯೂನಿಯನ್ ಚಳವಳಿಯ ಸಂದರ್ಭಸಾಧಕವಾದಿ ವಿಭಾಗದ ನಾಯಕ. ಪ್ರಥಮ ಜಾಗತಿಕ ಯುದ್ಧದ ವರ್ಷಗಳಲ್ಲಿ (1914-1918) ಸಾಮಾಜಿಕ ಸ್ವದೇಶ ಮೂಢಾಭಿಮಾನಿ ನಿಲುವು ತಳೆದಿದ್ದರು. – 170, 220, 222, 308, 309.

ವಾಂದೆರ್‌ವೆಲ್ಡೆ (Vandervelde), ಎಮಿಲ್ (1866-1938) – ಬೆಲ್ಜಿಯಂನ ಕಾರ್ಮಿಕರ ಪಾರ್ಟಿಯ ಒಬ್ಬ ನಾಯಕ. ದ್ವಿತೀಯ ಇಂಟರ್‌ನ್ಯಾಷನಲ್‌ನ ಅಂತರರಾಷ್ಟ್ರೀಯ ಸಮಾಜವಾದಿ ಮಂಡಳಿಯ ಅಧ್ಯಕ್ಷರು, ಸಂದರ್ಭಸಾಧಕವಾದಿ. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ (1914-1918) ಸಾಮಾಜಿಕ ಸ್ವದೇಶ ಮೂಢಾಭಿಮಾನಿಯಾಗಿದ್ದರು, ಬೆಲ್ಜಿಯಂನ ಬೂರ್ಷ್ವಾ ಸರ್ಕಾರದಲ್ಲಿ ಸಚಿವರಾಗಿದ್ದರು. 1917ರ ಫೆಬ್ರುವರಿ ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿಯ ನಂತರ ಇವರು ಸಾಮ್ರಾಜ್ಯಶಾಹಿ ಯುದ್ಧವನ್ನು ಮುಂದುವರಿಸಬೇಕೆಂದು ಪ್ರಚಾರ ನಡೆಸಲು ರಷ್ಯಕ್ಕೆ ಬಂದರು. – 170, 220, 222, 308, 309.

ವಿಲ್‌ಹೆಲ್ಮ್, ದ್ವಿತೀಯ (ಹೊಗೆನ್‌ತ್ಸೋಲರ್ನ್) (1859-1941) – ಜರ್ಮನ್ ಚಕ್ರವರ್ತಿ ಹಾಗೂ ಪ್ರಷ್ಯದ ದೊರೆ. – 75.

ವೆಬ್ (Webb), ಬಿಯಾಟ್ರಿಸ್ (1858-1943) ಹಾಗೂ ವೆಬ್ (Webb), ಸಿಡ್ನಿ (1859-1947) – ಇಂಗ್ಲೆಂಡ್‌ನ ಗಣ್ಯ ಸಾಮಾಜಿಕ ಕಾರ್ಯಕರ್ತರು, ದಂಪತಿಗಳು. ಸಿಡ್ನಿ ವೆಬ್ ಸುಧಾರಣಾವಾದಿ ಫೇಬಿಯನ್ ಸಮಾಜದ ಸಂಸ್ಥಾಪಕರಲ್ಲೊಬ್ಬರು. ಇವರಿಬ್ಬರೂ ಜೊತೆಗೂಡಿ ಬ್ರಿಟಿಷ್ ಶ್ರಮಜೀವಿ ವರ್ಗ ಚಳವಳಿಯ ಇತಿಹಾಸ ಕುರಿತ ಅನೇಕ ಗ್ರಂಥಗಳನ್ನು ರಚಿಸಿದರು. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ (1914-1918) ಸಾಮಾಜಿಕ ಸ್ವದೇಶ ಮೂಢಾಭಿಮಾನಿಯಾಗಿದ್ದರು. ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ನಂತರ ಸೋವಿಯತ್ ಒಕ್ಕೂಟದ ಬಗೆಗೆ ಸದ್ಭಾವ ತೋರಿದರು. – 305.

ವೆಯ್ಡೆಮೆಯರ್ (Weydemeyer), ಯೋಸೆಫ್ (1818-1866) – ಜರ್ಮನ್ ಹಾಗೂ ಅಮೆರಿಕನ್ ಕಾರ್ಮಿಕ ವರ್ಗ ಚಳವಳಿಗಳ ಒಬ್ಬ ಪ್ರಮುಖ ಕಾರ್ಯಕರ್ತ. ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಮಿತ್ರ ಹಾಗೂ ನಿಕಟ ಸಂಗಾತಿ. 'ಕಮ್ಯೂನಿಸ್ಟ್ ಲೀಗ್'ನ ಸದಸ್ಯರಾಗಿದ್ದರು, 1848-1849ರ ಜರ್ಮನ್ ಕ್ರಾಂತಿಯಲ್ಲಿ ಭಾಗ ವಹಿಸಿದರು. ಈ ಕ್ರಾಂತಿ ಪರಾಜಯಗೊಂಡ ನಂತರ ಅಮೆರಿಕಕ್ಕೆ ವಲಸೆ ಹೋದರು. – 205.

ಷಿಲ್ಡೆರ್ (Schilder) ಸೀಗ್‌ಮುಂಡ್ (ಮರಣ 1932) – ಜರ್ಮನ್ ಅರ್ಥಶಾಸ್ತ್ರಜ್ಞ. – 85, 107, 111, 130.

ಷುಲ್ತ್ಸೆ-ಗೆವೆರ್ನಿತ್ಸ್ (Schulze-Gaevernitz), ಹೆರ್‌ಹಾರ್ಟ್ (1864-1943) – ಜರ್ಮನ್ ಬೂರ್ಷ್ವಾ ಅರ್ಥಶಾಸ್ತ್ರಜ್ಞ, ಫ್ರೈಬುರ್ಗ್ ವಿಶ್ವ ವಿದ್ಯಾನಿಲಯದ ರಾಜಕೀಯ ಅರ್ಥಶಾಸ್ತ್ರದ ಪ್ರಾಧ್ಯಾಪಕ. ಬಂಡವಾಳಶಾಹಿ ಸಮಾಜದಲ್ಲಿ ಎಲ್ಲ ವರ್ಗಗಳ – ಬಂಡವಾಳಗಾರರ, ಕಾರ್ಮಿಕರ ಮತ್ತು ರೈತರ – ಪರಿಸ್ಥಿತಿಯನ್ನು ಉತ್ತಮಗೊಳಿಸಲು ಸಾಮಾಜಿಕ ಶಾಂತಿ, 'ಸಾಮಾಜಿಕ ಸಾಮರಸ್ಯ' ಏರ್ಪಡಿಸುವ ಸಾಧ್ಯತೆಯನ್ನು ಸಮರ್ಥಿಸಲು ಯತ್ನಿಸಿದರು. – 40, 43, 50, 51, 58, 60, 111, 130, 131, 135, 163.

ಷೈದೆಮನ್ (Scheidemann), ಫಿಲಿಪ್ (1865–1939) – ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯ ತೀವ್ರ ಬಲ ಸಂದರ್ಭಸಾಧಕವಾದಿ ಪಂಥದ

ನಾಯಕ. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಸಾಮಾಜಿಕ ಸ್ವದೇಶ ಮೂಢಾಭಿಮಾನಿಯಾಗಿದ್ದರು. ಜರ್ಮನಿಯಲ್ಲಿ 1918ರ ನವಂಬರ್ ಕ್ರಾಂತಿಯ ಸಮಯದಲ್ಲಿ ಜನತಾ ಪ್ರತಿನಿಧಿಗಳ ಕೌನ್ಸಿಲ್ ಎನ್ನುವಂಥ ಪ್ರತಿಕ್ರಾಂತಿಕಾರಿ ಸಮಿತಿಯ ಸದಸ್ಯರಾಗಿದ್ದರು. 1918 ಹಾಗೂ 1921ರ ನಡುವೆ ಜರ್ಮನ್ ಕಾರ್ಮಿಕ ವರ್ಗ ಚಳವಳಿಯನ್ನು ಮೃಗೀಯವಾಗಿ ಹತ್ತಿಕ್ಕುವುದನ್ನು ಸಂಘಟಿಸಿದವರಲ್ಲೊಬ್ಬರಾಗಿದ್ದರು. ಅನಂತರ ರಾಜಕೀಯ ಚಟುವಟಿಕೆಯನ್ನು ಬಿಟ್ಟುಕೊಟ್ಟರು. – 16, 170, 220, 222, 308.

ಷ್ಟಿರ್‌ನೆರ್ (Stirner), ಮಾಕ್ಸ್ (1806-1856) – ಜರ್ಮನ್ ತತ್ವಶಾಸ್ತ್ರಜ್ಞ, ಬೂರ್ಷ್ವಾ ವೈಯಕ್ತಿಕತಾವಾದ ಹಾಗೂ ಅರಾಜಕತಾವಾದಗಳ ಸಿದ್ಧಾಂತವೇತ್ತ. – 289.

ಷ್ಟಾಸ್ (Stauß), ಎಮಿಲ್ ಗಿಯೋರ್ಗ್ (ಜನನ 1877) – ಜರ್ಮನ್ ಧನಾಧಿಪತಿ, ಬ್ಯಾಂಕರ್. – 93.

ಷ್ನೈಡೆರ್ (Schneider) – ಫ್ರಾನ್ಸ್‌ನ ಧನಾಧಿಪತಿಗಳ ಕುಟುಂಬ. – 85.

ಸರ್ಟೋರಿಯಸ್ ಫೋನ್ ವಾಲ್ಟೆರ್ಸ್‌ಹೌಸೆನ್ (Sartorius von Walters hausen), ಔಗುಸ್ಟ್ (ಜನನ 1852) – ಜರ್ಮನ್ ಬೂರ್ಷ್ವಾ ಅರ್ಥಶಾಸ್ತ್ರಜ್ಞ. 1888-1918ರಲ್ಲಿ ಸ್ಟ್ರಾಸ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕ. ಜಾಗತಿಕ ಆರ್ಥಿಕತೆ ಹಾಗೂ ರಾಜಕೀಯ ಶಾಸ್ತ್ರ ಕುರಿತು ಹಲವಾರು ಕೃತಿಗಳ ಕರ್ತೃ. – 111, 130.

ಸುಪಾನ್ (Supan), ಅಲೆಕ್ಸಾಂಡರ್ (1847-1920) – ಜರ್ಮನ್ ಭೂಗೋಳಶಾಸ್ತ್ರಜ್ಞ. – 98, 103.

ಸೆಂಬಾ (Sembat), ಮಾರ್ಸೆಲ್ (1862-1922) – ಫ್ರೆಂಚ್ ಸೋಷಲಿಸ್ಟ್ ಪಾರ್ಟಿಯ ಸುಧಾರಣಾವಾದಿ ನಾಯಕರಲ್ಲೊಬ್ಬರು. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ (1914-1918) ಸಾಮಾಜಿಕ ಸ್ವದೇಶ ಮೂಢಾಭಿಮಾನಿಯಾಗಿದ್ದರು. ಫ್ರಾನ್ಸಿನ ಬೂರ್ಷ್ವಾ ಸರ್ಕಾರದಲ್ಲಿ ಸಚಿವರಾಗಿದ್ದರು. – 220, 222.

ಸೇನ್-ಸಿಮೋನ್ (Saint-Simon), ಹನ್ರಿ ಕ್ಲಾದ್ (1760-1825) – ಫ್ರೆಂಚ್ ಅಸಾಧ್ಯಾದರ್ಶ ಸಮಾಜವಾದಿ. ಬಂಡವಾಳಶಾಹಿ ವ್ಯವಸ್ಥೆಯನ್ನು ಟೀಕಿಸಿದರು. ಅದರ ಸ್ಥಳದಲ್ಲಿ ಸಹಕಾರ ಸೂತ್ರಗಳ ಮೇಲೆ ಆಧರಿಸಿದ ಸಮಾಜವನ್ನು ಸ್ಥಾಪಿಸುವ ಕಾರ್ಯಕ್ರಮವೊಂದನ್ನು ಮುಂದಿಟ್ಟರು. – 164.

ಸೈಮನ್ಸ್ (Siemens), ಗಿಯೋರ್ಗ್ (1839-1901) – ಜರ್ಮನಿಯ ಭಾರಿ ಕೈಗಾರಿಕೋದ್ಯಮಿ ಹಾಗೂ ಹಣಕಾಸು ರಾಜರುಗಳಲ್ಲೊಬ್ಬರು. 1870ರಲ್ಲಿ ಜರ್ಮನ್ ಬ್ಯಾಂಕ್‌ಅನ್ನು ಸ್ಥಾಪಿಸಿದರು, ಅದರ ಡೈರೆಕ್ಟರ್ ಆಗಿದ್ದರು. – 63.

ಸ್ಕೋಬೆಲೆವ್, ಮಿಹಯಿಲ್ ಇವಾನೊವಿಚ್ (1885-1939) – 1903ರಿಂದಲೂ ಸೋಷಲ್ ಡೆಮೊಕ್ರಾಟಿಕ್ ಚಳವಳಿಯಲ್ಲಿ ಮೆನ್ಷೆವಿಕ್‌ರಾಗಿ ಭಾಗವಹಿಸುತ್ತಿದ್ದರು. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಮಧ್ಯಮ ಮಾರ್ಗದ ನಿಲುವು ತಳೆದಿದ್ದರು. 1917ರ ಫೆಬ್ರುವರಿ ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿಯ ನಂತರ ಪೆತ್ರೊಗ್ರಾದ್ ಸೋವಿಯತ್‌ನ ಉಪಾಧ್ಯಕ್ಷರಾದರು, ಮೊದಲ ಬಾರಿಗೆ ಕೂಡಿದ ಸೋವಿಯತ್‌ನ ಕೇಂದ್ರ ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷರಾಗಿದ್ದರು; 1917ರ ಮೇಯಿಂದ ಆಗಸ್ಟ್‌ವರೆಗೆ ಬೂರ್ಷ್ವಾ ತಾತ್ಕಾಲಿಕ ಸರಕಾರದಲ್ಲಿ ಶ್ರಮ ಖಾತೆಯ ಸಚಿವರಾಗಿದ್ದರು. ಅಕ್ಟೋಬರ್ ಸಮಾಜವಾದಿ ಕ್ರಾಂತಿಯನಂತರ ಅವರು ಮೆನ್ಷೆವಿಸಂಅನ್ನು ತಿರಸ್ಕರಿಸಿದರು. ಸಹಕಾರಿ ವ್ಯವಸ್ಥೆಯಲ್ಲಿ ಕೆಲಸ ಮಾಡಿದರು, ಅನಂತರ ವಿದೇಶಾಂಗ ವ್ಯಾಪಾರದ ಜನತಾ ಕಮಿಸ್ಸಾರಿಯಟ್‌ನಲ್ಲಿ ಕೆಲಸ ಮಾಡಿದರು. – 140, 182, 221.

ಸ್ಟೆಡ್ (Stead), ವಿಲಿಯಂ ಥಾಮಸ್ (1849-1912) – ಆಂಗ್ಲ ಪತ್ರಕರ್ತ. – 102.

ಸ್ಟೌನಿಂಗ್ (Stauning), ತೊರ್‌ವಲ್ಡ್ ಆವ್‌ಗುಸ್ಟ್ ಮರಿನುಸ್ (1873-1942) – ಡೇನಿಷ್ ರಾಜನೀತಿಜ್ಞ, ಡೇನಿಷ್ ಸೋಷಲ್ ಡೆಮೊಕ್ರಾಟರ ಹಾಗೂ ದ್ವಿತೀಯ ಇಂಟರ್‌ನ್ಯಾಷನಲ್‌ನ ಬಲಪಂಥದ ನಾಯಕ. ವೃತ್ತಿಯಲ್ಲಿ ಪತ್ರಕರ್ತ. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಸಾಮಾಜಿಕ ಸ್ವದೇಶ ಮೂಢಾಭಿಮಾನದ ನಿಲುವು ತಳೆದರು. 1916ರ ಹಾಗೂ 1920ರ ನಡುವೆ ಡೇನಿಷ್ ಬೂರ್ಷ್ವಾ ಸರಕಾರದಲ್ಲಿ ಸಚಿವರಾಗಿದ್ದರು. – 220, 309.

ಸ್ಟ್ರೂವೆ, ಪ್ಯೋತ್ರ್ ಬೆರ್ನ್ಗಾರ್ಡೊವಿಚ್ (1870-1944) – ರಷ್ಯನ್ ಬೂರ್ಷ್ವಾ ಅರ್ಥಶಾಸ್ತ್ರಜ್ಞ ಹಾಗೂ ಪತ್ರಕರ್ತ. ಕಾಡೆಟ್ಟರ ಪಾರ್ಟಿಯ ನಾಯಕರಲ್ಲೊಬ್ಬರು. 19ನೆಯ ಶತಮಾನದ ಕೊನೆಯ ದಶಕದಲ್ಲಿ "ಶಾಸನಬದ್ಧ ಮಾರ್ಕ್ಸ್‌ವಾದ"(ಬೆರ್ನ್‌ಷ್ಟೈನ್‌ವಾದದ ರಷ್ಯನ್ ಪ್ರಭೇದ)ದ ಪ್ರಮುಖ ಪ್ರತಿಪಾದಕ. ರಷ್ಯನ್ ಸಾಮ್ರಾಜ್ಯಶಾಹಿಯ ಸಿದ್ಧಾಂತಿಗಳಲ್ಲೊಬ್ಬರು. ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ನಂತರ ಸೋವಿಯತ್ ಪ್ರಭುತ್ವದ ವೈರಿಯಾದರು. – 212.

ಸ್ಪೆಕ್ಟೇಟರ್ – ನೋಡಿ: ನಹಿಮ್ಸನ್, ಮಿರೋನ್ ಇಸಾಕೊವಿಚ್.

ಸ್ಪೆನ್ಸರ್ (Spencer), ಹರ್ಬರ್ಟ್ (1820-1903) – ಆಂಗ್ಲ ತತ್ವಶಾಸ್ತ್ರಜ್ಞ, ಮನೋವಿಜ್ಞಾನಿ ಹಾಗೂ ಸಮಾಜಶಾಸ್ತ್ರಜ್ಞ. ಪ್ರಮುಖ ಪಾಸಿಟಿವಿಸ್ಟ್. – 178.

ಸ್ಯೂಡೆಕುಮ್ (Südekum), ಆಲ್ಬೆರ್ಟ್ (1871-1944) – ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯ ಸಂದರ್ಭಸಾಧಕ ನಾಯಕರಲ್ಲೊಬ್ಬರು, ಪುನರ್‌ಪರಿಶೀಲನಾವಾದಿ. ಜಾಗತಿಕ ಸಾಮ್ರಾಜ್ಯಶಾಹಿ ಯುದ್ಧ ಕಾಲದಲ್ಲಿ (1914-1918) ಸಾಮಾಜಿಕ-ಸ್ವದೇಶ ಮೂಢಾಭಿಮಾನಿ. – 103.

ಹಾಬ್ಸನ್ (Hobson), ಜಾನ್ ಅಟ್‌ಕಿನ್‌ಸನ್ (1858-1940) – ಆಂಗ್ಲ ಅರ್ಥಶಾಸ್ತ್ರಜ್ಞ, ಬೂರ್ಷ್ವಾ ಸುಧಾರಣಾವಾದ ಮತ್ತು ಸಾಂತ್ವನವಾದಗಳ ಮಾದರಿ ಪ್ರತಿನಿಧಿ. – 9, 16, 18, 101, 118, 119, 128, 129, 131-135, 137, 141, 143, 144, 151, 152.

ಹಿಲ್ಫೆರ್ಡಿಂಗ್ (Hilferding), ರುಡೋಲ್ಫ್ (1877-1941) – ಜರ್ಮನ್ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿಯ ಹಾಗೂ ದ್ವಿತೀಯ ಇಂಟರ್‌ನ್ಯಾಷನಲ್‌ನ ಸಂದರ್ಭಸಾಧಕ ನಾಯಕರಲ್ಲಿ ಒಬ್ಬರು. 1910ರಲ್ಲಿ ಇವರು 'ಹಣಕಾಸು ಬಂಡವಾಳ' ಎಂಬ ತಮ್ಮ ಪುಸ್ತಕವನ್ನು ಪ್ರಕಟಿಸಿದರು. ಇದು ಏಕಸ್ವಾಮ್ಯ ಬಂಡವಾಳದ ಸಂಶೋಧನೆಯಲ್ಲಿ ನಿರ್ದಿಷ್ಟವಾದ ಧನಾತ್ಮಕ ಪಾತ್ರ ನಿರ್ವಹಿಸಿತು. ಇದೇ ಸಮಯ ಈ ಪುಸ್ತಕದಲ್ಲಿ ಗಂಭೀರ ಸ್ವರೂಪದ ಸೈದ್ಧಾಂತಿಕ ತಪ್ಪುಗಳೂ, ಸಂದರ್ಭಸಾಧಕವಾದಿ ಪ್ರತಿಪಾದನೆಗಳೂ ಇದ್ದವು. ಜಾಗತಿಕ ಸಾಮ್ರಾಜ್ಯಶಾಹಿ ಯುದ್ಧದ ಕಾಲದಲ್ಲಿ (1914-1918) ಮಧ್ಯಮ ಮಾರ್ಗವಾದಿ; ಸಾಮಾಜಿಕ ಸಾಮ್ರಾಜ್ಯವಾದಿಗಳೊಡನೆ ಒಗ್ಗೂಡಬೇಕೆಂದು ಸೂಚಿಸಿದರು. – 16, 18, 22, 59, 60, 68, 69, 72, 110, 128, 145, 156.

ಹಿಲ್ (Hill), ಡೇವಿಡ್ ಜೆಮ್ಸ್ (1850-1932) – ಅಮೆರಿಕನ್ ಇತಿಹಾಸಕಾರ ಮತ್ತು ರಾಜತಂತ್ರಜ್ಞ. – 155.

ಹೀಲ್ಡೆಬ್ರಾಂಡ್ (Hildebrand), ಗೆರ್ಹರ್ಡ್ – ಜರ್ಮನ್ ಅರ್ಥಶಾಸ್ತ್ರಜ್ಞ, ಪತ್ರಿಕಾ ಲೇಖಕ; ಜರ್ಮನಿಯ ಸೋಷಲ್ ಡೆಮೊಕ್ರಾಟಿಕ್ ಪಾರ್ಟಿ ಸದಸ್ಯರಾಗಿದ್ದರು. 1912ರಲ್ಲಿ ಸಂದರ್ಭಸಾಧಕವಾದದ ಆಪಾದನೆಯ ಮೇಲೆ ಇವರನ್ನು ಪಾರ್ಟಿಯಿಂದ ಹೊರಹಾಕಲಾಯಿತು. – 134.

ಹೆಗಲ್ (Hegel), ಗಿಯೋರ್ಗ್ ವಿಲ್‌ಹೆಲ್ಮ್ ಫ್ರೀಡ್ರಿಹ್ (1770-1831) – ಕ್ಲಾಸಿಕಲ್ ಜರ್ಮನ್ ತತ್ವಜ್ಞಾನದ ಗಣ್ಯ ಪ್ರತಿನಿಧಿ, ವಸ್ತುನಿಷ್ಠ ಭಾವನಾವಾದಿ. ಇವರು ಭಾವನಾವಾದಿ ದ್ವಂದ್ವಾತ್ಮಕವಾದವನ್ನು ವಿವರವಾಗಿ ನಿರೂಪಿಸಿದರು. – 173, 187.

ಹೆಂಡೆರ್‌ಸನ್ (Henderson), ಆರ್ಥರ್ (1863-1935) – ಬ್ರಿಟಿಷ್ ಲೇಬರ್ ಪಾರ್ಟಿ ಹಾಗೂ ಟ್ರೇಡ್ ಯೂನಿಯನ್ ಚಳವಳಿಯ ನಾಯಕ. ಪ್ರಥಮ ಜಾಗತಿಕ ಯುದ್ಧದ (1914-1918) ಸಮಯದಲ್ಲಿ ಸಾಮಾಜಿಕ ಸ್ವದೇಶ ಮೂಢಾಭಿಮಾನಿಯಾದರು. 1915ರಿಂದ 1931ರವರೆಗೆ ಹಲವು ಬಾರಿ ಬ್ರಿಟಿಷ್ ಬೂರ್ಷ್ವಾ ಸರಕಾರಗಳ ಸದಸ್ಯರಾಗಿದ್ದರು. – 220.

ಹೆರೊಸ್ಟ್ರಾಟ್ – ಕ್ರಿ.ಪೂ. 356ರಲ್ಲಿ ಹೆಸರುವಾಸಿಯಾಗುವ ಏಕೈಕ ಗುರಿಯಿಂದ ಪುರಾತನ (ಕ್ಲಾಸಿಕಲ್) ಕಲೆಯ ಅಪೂರ್ವ ಕೃತಿಯಾದ ಎಫೆಸ್‌ನ ಅರ್ತೆಮೀಡಸ್ ದೇವಾಲಯವನ್ನು ಸುಟ್ಟುಹಾಕಿದ ಗ್ರೀಕ್ ವ್ಯಕ್ತಿ. – 227, 291.

ಹೈಂಡ್‌ಮನ್ (Hyndmann), ಹೆನ್ರಿ ಮೈಯರ್ಸ್ (1842-1921) – ಬ್ರಿಟಿಷ್ ಸಮಾಜವಾದಿ ಹಾಗೂ ಸುಧಾರಣಾವಾದಿ. 1881ರಲ್ಲಿ ಇವರು ಡೆಮೊಕ್ರಾಟಿಕ್ ಫೆಡರೇಷನ್ ಸ್ಥಾಪಿಸಿದರು. ಇದಕ್ಕೆ ಸೋಷಲ್ ಡೆಮೊಕ್ರಾಟಿಕ್ ಫೆಡರೇಷನ್ 1884ರಲ್ಲಿ ಮನ್ನಣೆ ನೀಡಿತು. 1900 ಹಾಗೂ 1910ರ ನಡುವೆ ಇವರು ಅಂತರರಾಷ್ಟ್ರೀಯ ಸೋಷಲಿಸ್ಟ್ ಬ್ಯೂರೋ ಸದಸ್ಯರಾಗಿದ್ದರು. ಬ್ರಿಟಿಷ್ ಸೋಷಲಿಸ್ಟ್ ಪಾರ್ಟಿಯ ಸದಸ್ಯರಾಗಿದ್ದ ಇವರು ಸಾಮ್ರಾಜ್ಯಶಾಹಿ ಯುದ್ಧದ ಬಗೆಗೆ ಸಾಮಾಜಿಕ ಸ್ವದೇಶ ಮೂಢಾಭಿಮಾನ ಮನೋಭಾವ ತೋರಿದುದಕ್ಕಾಗಿ ಪಾರ್ಟಿಯ ಸೋಲ್‌ಫರ್ಡ್ ಸಮ್ಮೇಳನವು ಇವರನ್ನು ಖಂಡಿಸಿದನಂತರ 1916ರಲ್ಲಿ ಇವರು ಆ ಪಾರ್ಟಿಯಿಂದ ಹೊರಬಂದರು. ಇವರು ಅಕ್ಟೋಬರ್ ಸಮಾಜವಾದಿ ಕ್ರಾಂತಿಗೆ

ವಿರೋಧಿಯಾಗಿದ್ದರು, ಸೋವಿಯತ್ ರಷ್ಯದ ವಿರುದ್ಧ ಸಶಸ್ತ್ರ ಹಸ್ತಕ್ಷೇಪವನ್ನು ಪ್ರತಿಪಾದಿಸಿದರು. – 15, 170.

ಹೈನಿಗ್ (Heinig), ಕುರ್ಟ್ (1886-1956) – ಜರ್ಮನ್ ಸೋಷಲ್ ಡೆಮೊಕ್ರಾಟ್, ಅರ್ಥಶಾಸ್ತ್ರಜ್ಞ ಮತ್ತು ಪತ್ರಿಕಾಲೇಖಕ. – 65, 91.

ಹೈಮನ್ (Heymann), ಹ್ಯಾನ್ಸ್ ಗಿದೆಯಾನ್ – ಜರ್ಮನಿಯ ಬೂರ್ಷ್ವಾ ಅರ್ಥಶಾಸ್ತ್ರಜ್ಞ. – 22, 26.

ಹ್ಯಾವೆಮೇಯರ್ (Havemeyer), ಜಾನ್, ಕೆ. (1833-1922) – ಅಮೆರಿಕದ ಕೈಗಾರಿಕೋದ್ಯಮಿ, ಭಾರಿ ಸಕ್ಕರೆ ಟ್ರಸ್ಟ್‌ನ ಮಾಲೀಕ, ರೈಲ್ವೇ ಮತ್ತಿತರ ಕಂಪನಿಗಳ ಸಹಭಾಗಿ. – 69.

ಹ್ಯುಬ್ನರ್ (Hübner), ಓಟ್ಟೊ – Geographisch statistische Tabellen aller Zänder der Erde ಎಂಬ ಭೌಗೋಳಿಕ ಅಂಕಿಅಂಶ ವಾರ್ಷಿಕ ವರದಿಗಳ ಸಂಕಲನಗಾರ ಮತ್ತು ಪ್ರಕಾಶಕ. – 103.

ಹ್ಯುಯಿಸ್‌ಮನ್ಸ್ (Huysmans), ಕಮಿಲ್ (1871-1968) – ಬೆಲ್ಜಿಯಂ ಕಾರ್ಮಿಕ ಚಳವಳಿಯ ಅತ್ಯಂತ ಹಿರಿಯ ಕಾರ್ಯಕರ್ತರಲ್ಲಿ ಒಬ್ಬರು. ಭಾಷೆ ಹಾಗೂ ಸಾಹಿತ್ಯ ಪ್ರಾಧ್ಯಾಪಕ, ಪತ್ರಕರ್ತ; 1904-1919ರಲ್ಲಿ ದ್ವಿತೀಯ ಇಂಟರ್ ನ್ಯಾಷನಲ್‌ನ ಅಂತರರಾಷ್ಟ್ರೀಯ ಸಮಾಜವಾದಿ ಬ್ಯೂರೋದ ಕಾರ್ಯದರ್ಶಿ. ಮಧ್ಯಮ ಮಾರ್ಗದ ನಿಲುವು ತಳೆದಿದ್ದರು. ಬೆಲ್ಜಿಯಂ ಸರ್ಕಾರದಲ್ಲಿ ಅನೇಕ ಬಾರಿ ಸಚಿವರಾಗಿದ್ದರು. 1946-1947ರಲ್ಲಿ ಬೆಲ್ಜಿಯಂನ ಪ್ರಧಾನ ಮಂತ್ರಿ. ಕೊನೆಯ ವರ್ಷಗಳಲ್ಲಿ ಸಮಾಜವಾದಿ ಪಾರ್ಟಿಗಳು ಸೋವಿಯತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿಯೊಡನೆ ಸಂಪರ್ಕ ಬೆಳೆಸಬೇಕೆಂದೂ, ಅಂತರರಾಷ್ಟ್ರೀಯ ಕಾರ್ಮಿಕ ಚಳವಳಿಯ ಒಗ್ಗಟ್ಟನ್ನು ಪುನರ್‌ಸ್ಥಾಪಿಸಬೇಕೆಂದೂ ಪ್ರತಿಪಾದಿಸಿದರು. – 161.

## ಓದುಗರಲ್ಲಿ ಮನವಿ

ಈ ಪುಸ್ತಕ, ಇದರ ಅನುವಾದ, ವಿನ್ಯಾಸ ಮುದ್ರಣಗಳ ಬಗೆಗೆ, ನಿಮ್ಮ ಅಭಿಪ್ರಾಯಗಳನ್ನೂ ನಿಮ್ಮ ಇತರ ಅಭಿಲಾಷೆಗಳನ್ನೂ ನಮಗೆ ಬರೆದು ತಿಳಿಸಿದಲ್ಲಿ ನಾವು ಉಪಕೃತರು.

ನಮ್ಮ ವಿಳಾಸ:

Progress Publishers,
17, Zubovsky Boulevard,
Moscow, USSR

ನಮ್ಮ ಪ್ರಕಟಣೆಗಳ ಅಧಿಕೃತ
ಮಾರಾಟಗಾರರು:

ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ) ಲಿಮಿಟೆಡ್

‘ಪುಸ್ತಕ’
ಎಂಬೆಸ್ಸಿ ಸೆಂಟರ್
11, ಕ್ರೆಸೆಂಟ್ ರಸ್ತೆ
ಬೆಂಗಳೂರು – 560001

ಬಿ.ಆರ್.ಸಿ. ಕಾಂಪ್ಲೆಕ್ಸ್
ಸುಬೇದಾರ್ ಛತ್ರಂ ರೋಡ್
ಬೆಂಗಳೂರು – 560009

ಕೆಂಪೇಗೌಡ ಸರ್ಕಲ್
ಬೆಂಗಳೂರು – 560009

ಕೆ.ಎಸ್.ಆರ್. ರೋಡ್
ಮಂಗಳೂರು – 575001